# సంపుటం. 6 I

## 1948

పుష్యము సంచిక 5-1-48

సంచికలు 100ఠ23

పుటలు 100ఠ276

ಜೈಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೧ | ಬಳ್ಳಾರಿ ಜನವರಿ ೫ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ

ಸಂಚಿಕೆ ೧ | ಟಿ. ಬಿ. ಕೇಶವರಾವ್.

## ವಿಠೋಬ ದೇವಸ್ಥಾನದಲ್ಲಿ ಅನ್ನ ಸತ್ಯಾಗ್ರಹ

ಪಂಢರಿಪುರದ ವಿಠೋಬ ದೇವಸ್ಥಾನದಲ್ಲಿ ಹರಿಜನರನ್ನು ಬಿಟ್ಟ ಕಾರಣ ಅಲ್ಲಿನ ಪೂಜಾರಿಗಳು ದೇವಸ್ಥಾನವು ಅಪವಿತ್ರವಾಯ್ತೆಂದು ಅನ್ನ ಸತ್ಯಾಗ್ರಹ ಹೂಡಿರುವರು. ಇದನ್ನು ಖಂಡಿಸಿ ಮಹಾತ್ಮಗಾಂಧಿಯವರು, ಇಂಥಾ ಸತ್ಯಾಗ್ರಹಗಳಿಂದ ಅಪವಿತ್ರತೆಯು ಹೆಚ್ಚಾಗುವುದೆಂದಿರುವರು. ಯಾವ ದೇವಸ್ಥಾನದಲ್ಲಿ ಹರಿಜನನ ಪ್ರವೇಶವಿಲ್ಲವೊ ಅದು ನಿರ್ಜೀವ ದೇವಸ್ಥಾನವಾಗುವುದು, ಸರ್ವರಿಗೂ ಮುಕ್ತದ್ವಾರವಿದ್ದಾಗಲೆ ಅಲ್ಲಿ ಪ್ರಾಣ ಪ್ರತಿಷ್ಠೆಯಾಗುವುದು ಎಂದು ಹೇಳಿದ್ದಾರೆ

## ಹೋಟೆಲ ಮಾಲಿಕನಿಗೆ ಶಿಕ್ಷೆ ಹರಿಜನನನ್ನು ಬಿಡದಿದ್ದುದಕ್ಕೆ

ಕ್ಯಾಲಿಕಟ್ಟು ಜಿಲ್ಲಾದ ತಾಮರಸೇರಿ ಎಂಬ ಗ್ರಾಮದ ಪಿ. ಅಪ್ಪು ಎಂಬ ಚಹಾದ ಅಂಗಡಿ ಮಾಲೀಕನು, ಕೆ. ಮಾಧವನ್ ಎಂಬ ಹರಿಜನ ಹಾಸ್ಟಲ್ ವಿದ್ಯಾರ್ಥಿಗೆ ಚಹಾ ಕೊಡಲು ನಿರಾಕರಿಸಿದಕಾರಣ, ಆ ತಾಲೂಕಿಗೆ ಸಂಬಂಧಿಸಿದ ಸಬಮ್ಯಾಜಿಸ್ಟ್ರೇಟರು, ಸದರಿ ಹೋಟೆಲ ಮಾಲೀಕನಿಗೆ ೫೦ ರೂ. ದಂಡ, ದಂಡ ಕೊಡದಿದ್ದರೆ ಎರಡು ತಿಂಗಳ ಶಿಕ್ಷೆವಿಧಿಸಿದರು.

## ಕಾಶ್ಮೀರ

ಕಾಶ್ಮೀರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಅಂಗವಾದ ಭದ್ರತಾಮಂಡಲಕ್ಕೊಪ್ಪಿಸಲು ಭಾರತ ಸರ್ಕಾರವು ನಿರ್ಧರಿಸಿದೆಯೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ, ಸಂಯುಕ್ತರಾಷ್ಟ್ರ ಸಂಘದಲ್ಲಿನ ಭಾರತ ಪ್ರತಿನಿಧಿಗೆ ಈ ಗಾಗಲೆ ಯೋಗ್ಯ ಸೂಚನೆಗಳು ಕೊಡಲಾಗಿವೆಯೆಂದು ಗೊತ್ತಾಗಿದೆ.

ಪಾಕಿಸ್ತಾನಕ್ಕೆ ಕೊಡಬೇಕಾದ ೫೫ ಕೋಟಿ ರೂಪಾಯಿಗಳನ್ನು ಕಾಶ್ಮೀರದ ಪ್ರಶ್ನೆಯು ಬಗೆ ಹರಿವವರೆಗೆ ಭಾರತವು ಕೊಡಲಿಕ್ಕಿಲ್ಲವೆಂದು ಪ್ರಕಟವಾಗಿದೆ.

## ಹೊಳಲಗುಂದಿ

೨೮ ನೆಯ ದಿನಾಂಕ ಶ್ರೀ ಗೌಡ್ರ ಬಸವನಗೌಡ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಸಮಾವೇಶವಾಗಿ, ಆಂಧ್ರಪ್ರಾಂತದಷ್ಟೇ ಕರ್ನಾಟಕದ ಅಗತ್ಯವಿದೆಯೆಂದೂ, ಎರಡೂ ಪ್ರಾಂತಗಳನ್ನು ಏಕಕಾಲಕ್ಕೇ ನಿರ್ಮಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಬೇಕು, ಎಂಬ ನಿರ್ಣಯವು ತೀರ್ಮಾನಿಸಲ್ಪಟ್ಟಿತು. ಅಧ್ಯಕ್ಷರು ವಿದ್ವತ್ಪೂರ್ಣವಾದ ಭಾಷಣ ಮಾಡಿದರು.

THE NAVA BHARAT

ನವಭಾರತ

**11th Year of Publication**

Monday, 5th January 1948

## ವಿನಿಯಂತ್ರಣ
## ಸಂತೋಷ ವಾರ್ತೆಗಳು

ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಸಂತೋಷ ವಾರ್ತೆಗಳು ಬರುತ್ತಲಿವೆ ಜೋಳ-ಸಜ್ಜೆ ನವಣೆ ವಗೈರೆ ಬಡ ಜನತೆಯ ಆಹಾರ ದಾನ್ಯಗಳು ಬಜಾರದ ಅಂಗಡಿಗಳಿಗೆ ಬಂದು ಪೋಟಿಯ ದರಗಳಲ್ಲಿ ಮಾರಲ್ಪಡುತ್ತಿವೆ. ಸೀದಾ ಅಂಗಡಿಗಳಲ್ಲಿ ಗಂಟೆಗಟ್ಟಲೆ ಕಾಯ್ದು ತೊಂದರೆಗಳನ್ನನುಭವಿಸಿದ ಪಟ್ಟಣಿಗರು, ಮತ್ತು ಅನೇಕಸಲ ಆಹಾರ ಧಾನ್ಯಗಳ ಅಭಾವದಿಂದ ಸಂಕಟಕ್ಕೊಳಗಾದ ಹಳ್ಳಿಗರು ಈಗ ಆಪತ್ತಿನಿಂದ ಪಾರಾದವರಂತೆ ಸಂತೋಷಕ್ಕೆ ಒಳಗಾಗಿರುವರು

ಆಗಸ್ಟ ೧೫ ನೆಯ ತಾ. ಗಿಂತಲೂ, ಕಳೆದ ತಿಂಗಳ ೨೮ ನೆಯ ತಾ. ಹಳ್ಳಿಗರಿಗೂ, ಪಟ್ಟಣಿಗರಿಗೂ ಸುಖಕರವಾಗಿ ಪರಿಣಮಿಸಿತು.

ಈಗ ಸುಗ್ಗಿಯ ಕಾಲ, ಧಾನ್ಯಾದಿಗಳು ಬೇಕಾದಂತೆ ಸಂತೆಗೆ ಬರಲು ಅವಕಾಶವುಂಟು. ರೈತರು ಕೂಡ ವಿವೇಕಿಗಳಿರುವದರಿಂದ ತಮಗೆ ಬೇಕಾದುದಷ್ಟನ್ನು ಸಂಗ್ರಹಿಸಿಟ್ಟುಕೊಂಡು, ಹೆಚ್ಚಿನ ಭಾಗವನ್ನೇ ಮಾರುತ್ತಿರುವರೆಂದು ಹೇಳಲಡ್ಡಿಯಿಲ್ಲ. ಇದು ಏನೇ ಆಗಲಿ, ದತ್ತಮಂಡಲದ ಜಿಲ್ಲೆಗಳಲ್ಲಿ ಜನತೆಯ ಆಹಾರವಾದ ಜೋಳ-ನವಣೆಗಳಿಗೆ ಕೊರತೆ ಬರಲಾರದೆಂದು ಧಾರಾಳವಾಗಿ ಹೇಳಬಹುದು.

ಜನ ಸಂಖ್ಯೆಯು ಹೆಚ್ಚಿದೆ. ಬಡ ಜನರ-ಕೂಲಿಕಾರರ ಆದಾಯವೂ ಹೆಚ್ಚಿ ಅವರೂ ಉತ್ತಮ ತರಗತಿಯ ಆಹಾರವನ್ನು ಅಪೇಕ್ಷಿಸುತ್ತಿರುವರು. ನಮ್ಮ ದೇಶದ ಜನ ಸಂಖ್ಯೆಗನುಗುಣವಾಗಿ-ಆಹಾರ ಧಾನ್ಯಗಳು ಉತ್ಪನ್ನವಾಗುತ್ತಿಲ್ಲವೆಂದು ತಿಳಿದವರು ಹೇಳುತ್ತಿರುವರು. ಈ ಕಾರಣ ಕೆಲ ಜಿಲ್ಲೆಗಳ ಒಳ್ಳೆಯ ಪರಿಸ್ಥಿತಿಯಿಂದ ಇಡಿ ದೇಶದ ಆಹಾರ ಪರಿಸ್ಥಿತಿಯೇ ಸುಧಾರಿಸಲಾರದು. ಈ ಕಾರಣ ಜನತಾ ಸರ್ಕಾರವು ಜನರೊಡನೆ ಸಹಕರಿಸಿ-ಹೆಚ್ಚಿಗಿರುವ ಭಾಗಗಳಿಂದ ಆಹಾರ ಧಾನ್ಯಗಳನ್ನು ಸಂಗ್ರಹಿಸಿ-ಕಡಮೆ ಇರುವ ಭಾಗಗಳಿಗೆ ಇನ್ನು ಮುಂದೆ ಒದಗಿಸುವ ಕೆಲಸಮಾಡಿ ಇಡೀ ದೇಶವನ್ನು ಆಹಾರ ಕೊರತೆಯಿಂದ ದೂರವಾಗಿಡಲೆಂದು ಆಶಿಸುತ್ತೇವೆ.

## ಬಳ್ಳಾರಿ ಜಿಲ್ಲಾ
### ಲೇಬರ್ ಶಾಲೋಪಾಧ್ಯಾಯರ ಸಂಘ

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘವನ್ನು ಪ್ರಾಂತೀಯ ಸಂಘಕ್ಕೆ ಸೇರಿಸಬೇಕೆಂದು ಸರ್ಕಾರದವರು ಸೂಚಿಸಿದ್ದಾರೆ ಪ್ರಾಂತೀಯ ಸಂಘವು ಮುಂಜೂರಾತಿ ಪಡೆದಿರುವ (Recognition) ಕಾರಣ-ಜಿಲ್ಲಾ ಸಂಘಕ್ಕೂ ಮನ್ನಣೆ ದೊರೆತಂತಾಯಿತು

## ಸಂಪಿನ ಅವಧಿ ಸಂಬಳ ಇಲ್ಲ

N. G. O. ಅಧಿಕಾರಿಗಳು ತಾವು ಸಂಪು ಮಾಡಿದ ಅವಧಿಯ ಕಾಲದ ಸಂಬಳವನ್ನು ಕಳೆದುಕೊಂಡಂತೆ ಕಾಣುತ್ತದೆ ಸರ್ಕಾರದವರು ಸಂಪಿನ ಅವಧಿ ಸಂಬಳ ಕೊಡಬಾರದೆಂತ ನಿಶ್ಚಯಮಾಡಿದಂತೆ ಗೊತ್ತಾಗಿದೆ.

---

ಬರ್ಮಾ ಮಂತ್ರಿಗಳ ಕೊಲೆಯ ಸಂಬಂಧವಾಗಿ ಹಿಂದಿನ ಮಂತ್ರಿಗಳಾಗಿದ್ದ ಯೂ ಸಾರವರಿಗೂ ಅವರ ಸಂಗಡಿಗರಾದ ೮ ಜನರಿಗೂ ಮರಣದಂಡನೆಯ ಶಿಕ್ಷೆ ವಿಧಿಸಲಾಗಿದೆ.

## ಅಖಿಲ ಭಾರತ ಮಹಿಳಾ ಪರಿಷತ್ತು.

"ಸಾಮಾಜಿಕ ಸಮಾನತೆ ಸ್ಥಾಪನೆಯಾಗದೆ, ಯಾವ ರಾಷ್ಟ್ರವೂ ಪ್ರಗತಿ ಪಡೆಯದು; ಆ ಕಾರ್ಯ ಸಾಧಿಸಲು, ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಸಮಾಜ ಸುಧಾರಕ ಮಂತ್ರಿಸ್ಥಾನಗಳನ್ನು ಕಲ್ಪಿಸಿ, ಮಂತ್ರಿಪಟ್ಟವನ್ನು ಸ್ತ್ರೀಯರಿಗೇ ಕಟ್ಟಬೇಕು" ಎಂಬುದಾಗಿ ಶ್ರೀಮತಿ ಅನಸೂಯಾಬಾಯಿ ಕಾಳೆಯವರು ಮದ್ರಾಸಿನಲ್ಲಿ ಮೊನ್ನೆ ನೆರೆದ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಸಾರಿದ ಸೂಕ್ತವು ವಿಚಾರಾರ್ಹವಾಗಿದೆ. ವಾಗರ್ಥಗಳಂತೆ, ಶಿವಶಿವೆಯರಂತೆ, ಪ್ರಪಂಚ ಪರಮಾರ್ಥಗಳಂತೆ ಗಂಡಹೆಂಡಿರ ಪರಸ್ಪರ ಪೂರಕವಾದ ಮಿಲನವಿಲ್ಲದೆ ಸಂಸಾರವು ನಿಸ್ಸಾರವೇ ಸರಿ. ಹಾಗೆಯೇ, ಅಂತಹ "ಪೂರಕ ಮಿಲನ" ವಿಲ್ಲದೆ ಸಾರ್ವಜನಿಕ ಜೀವನವೂ, ರಾಷ್ಟ್ರವೂ ನಿಸ್ಸತ್ವಗೊಳ್ಳುವುವು. ಆದರೆ, ಈ ಪರಸ್ಪರ ಪೂರಕ ಮಿಶ್ರಣದಲ್ಲಿ ಯಾವ್ಯಾವ ವಸ್ತುವಿನ ಅಂಶ ಯಾವ್ಯಾವ ಪ್ರಮಾಣದಲ್ಲಿರಬೇಕೆಂಬುದನ್ನು ಗೊತ್ತುಪಡಿಸಿಕೊಳ್ಳದೆ, ಪೂರಕತ್ವಕ್ಕೆ ಪಟ್ಟಗಟ್ಟಿದಲ್ಲಿ, ಮಿಶ್ರಣವು ಹಿತಕಾರಕವಾಗದೇ ಅಹಿತಕಾರಕವಾಗುವುದೆಂಬುದನ್ನು ಲಕ್ಷಿಸಬೇಕು. ಸ್ತ್ರೀಯು ಪುರುಷನ ಅರ್ಧಾಂಗಿ; ಪ್ರಪಂಚ ಪರಮಾರ್ಥಗಳ ಸಾಧನೆಯ ಮಾರ್ಗದಲ್ಲಿ ಸಹಯಾತ್ರಿಕಳು, ಸಹಚಾರಿಣಿಯು. ಈ ಮಾತನ್ನು ಗ್ರಹಿಸುವುದರೊಟ್ಟಿಗೆಯೇ, ಸ್ತ್ರೀಯ ಅವನತಿಗೆ ಪುರುಷನ ಅವನತಿಯೇ ಕಾರಣವೆಂಬುದನ್ನೂ ಗ್ರಹಿಸಬೇಕು. ಆದ್ದರಿಂದ ಸ್ತ್ರೀಪುರುಷ ಸಹಕಾರವು ಪರಸ್ಪರ ಅನಸೂಯ (ಹೊಟ್ಟೆಗಿಚ್ಚಿಲ್ಲದೆ) ವರ್ತನದಿಂದ ನಡೆದ ಶ್ರೀಮತಿ ಕಾಳೆಯವರು ಸಾರಿದಂತೆ, "ಅತ್ಯಂತ ಬಲಿಷ್ಠವಾದ ಭವಿಷ್ಯಜನಾಂಗ ನಿರ್ಮಾಣ ಕಾರ್ಯದಲ್ಲಿ" ಪ್ರವೃತ್ತವಾಗಬೇಕು. "ಹೆಣ್ಣಲ್ಲವೇ ನಿಮ್ಮನೆಲ್ಲ ಪಡೆದ ತಾಯಿ, ಹೆಣ್ಣಲ್ಲವೇ ಪೊರೆದವಳು ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು! ಕಣ್ಣು ಕಾಣದ ಗಾವಿಲರು" ಎಂದು ಹಾಡಿದ ಹಿಂದಿನ ಕನ್ನಡ ಕವಯಿತ್ರಿ ಸಂಚಿಯ ಹೊನ್ನಮ್ಮನ ಮಾತಿನ ಮಾಣಿಕ್ಯ, ಸ್ತ್ರೀನಿಂದಕರ ಕಣ್ಣಿನ ಕತ್ತಲೆ ಕಳೆಯಬೇಕು. ನಾರಿಯರು ನೆಮ್ಮದಿಯಿಂದಿರುವ ಮನೆಯಲ್ಲಿ ದೇವರು ನೆಲಸುತ್ತಾನೆ ಎಂದು ಹಿಂದೂ ಧರ್ಮಶಾಸ್ತ್ರಕಾರ ಮನುವು ಹೇಳಿದ ಮಾತನ್ನು ಆಚರಣೆಯಲ್ಲಿ ತರದಿರುವುದು ಗೃಹಸುಖ ನಾಶಕ್ಕೂ, ರಾಷ್ಟ್ರದ ಅಧೋಗತಿಗೂ ಕಾರಣವಾಗಿದೆಂಬುದನ್ನು ಮನುಭಕ್ತರು ಮರೆಯಬಾರದು. ಸ್ತ್ರೀಯರಿಗೂ ಪುರುಷರಂತೆ 'ವಾರಸಾಹಕ್ಕು' ಇರತಕ್ಕದ್ದೆಂಬ ಬಗ್ಗೆ ಈಗಾಗಲೇ ಕೆಲವು ಪ್ರಾಂತಿಕ ಸರಕಾರಗಳು ಕಾಯಿದೆ ಮಾಡಲು ಮುಂಬಂದಿವೆ. ದಾಂಪತ್ಯ ವಿಚ್ಛೇದ, ದ್ವಿಪತ್ನಿತ್ವ ಪ್ರತಿಬಂಧ, ದೇವದಾಸೀ (ಬಸವೀ ಬಿಡುವದು) ಪದ್ಧತಿ ನಿರ್ಮೂಲನ ಮೊದಲಾದ ಕಾಯಿದೆಗಳು ಈಗಾಗಲೇ ಅಸ್ತಿತ್ವಕ್ಕೆ ಬಂದಿವೆ. ಸ್ತ್ರೀ ಕಾರ್ಯಕರ್ತರು ಸ್ವಜಾತಿ, ಸ್ವಸಮಾಜ, ಸ್ವಧರ್ಮ ಎಂಬ ಸಂಕುಚಿತ ಮನೋವೃತ್ತಿಗೆ ಎಡೆಗೊಡದೆ, ಸರ್ವ ಸ್ತ್ರೀಯರೂ ಒಂದೇ ಸಮಾಜ ಎಂಬ ನಿರ್ಮಲ ಪ್ರೇಮ ಭಾವನೆಯುಳ್ಳವರಾಗಿ ಕೆಲಸ ಮಾಡಿದರೆ, ಪುರುಷರೊಳಗೆ ತೋರಿಬರುತ್ತಿರುವ ಸಂಕುಚಿತ ದೃಷ್ಟಿ-ಧ್ಯೇಯಗಳನ್ನು ಮೊಳಕೆಯಲ್ಲಿಯೇ ಮುರಿದಂತಾಗುವುದು. ಸುಶಿಕ್ಷಿತ ಸ್ತ್ರೀಯರು ಸ್ತ್ರೀ ಸಹಜವಾದ ವೇಷಭೂಷಣಗಳಲ್ಲಿ ಲೋಲುಪ್ತರಾಗದೆ, ನಿರಕ್ಷರಿಗಳೂ, ಸಂಘಟನೆ ಇಲ್ಲದವರೂ ಆದ ತಮ್ಮ ಕೋಟ್ಯಂತರ ಭಗಿನಿಯರ ಸೇವೆ ಮಾಡಲು 'ಕಸ್ತೂರಬಾ' ಸೇವಾ ಸಂಸ್ಥೆಗಳಂತಹ ಸಂಸ್ಥೆಗಳು ಹಲವಿರುತ್ತವೆ.

## ಬಡತನ ನಿರ್ಮೂಲಕ್ಕೆ ಶಾಂತಿ ಬೇಕು.

ಭಾರತ ಜನ ಸಾಮಾನ್ಯರ ದಾರಿದ್ರ್ಯವನ್ನು ಪರಿಹರಿಸಲು ಯೋಗ್ಯ ಯೋಜನೆಗಳನ್ನು ಸರ್ಕಾರವು ಜಾರಿಗೆ ತರಬೇಕಾಗಿದ್ದರೆ ಅದಕ್ಕೆ ದೇಶದಲ್ಲಿ ಆಂತರಿಕ ಶಾಂತಿ ಜಾತೀಯ ಸೌಹಾರ್ದ ಬೇಕು ಎಂದು ಸರ್ದಾರ ಪಟೇಲರು ಹೇಳಿದರು.

-: ನವಭಾರತಕ್ಕೆ ಚಂದದಾರರಾಗಿರಿ :-

## ಲಾಭ ಬಡಕರು ದೇಶ ದ್ರೋಹಿಗಳು

ವರ್ತಕರ ಸಂಘದ ಆಶ್ರಯದಲ್ಲಿ ಮಾತಾಡುತ್ತ ಮಹಾತ್ಮರು, ವ್ಯಾಪಾರಿಗಳು ತಮ್ಮ ಉದ್ಯೋಗದಲ್ಲಿ ಪ್ರಾಮಾಣಿಕರಾಗಿರಬೇಕು. ಕೇವಲ ಲಾಭದ ಕಡೆ ದೃಷ್ಟಿ ಇಡಬಾರದು. ವ್ಯಾಪಾರಿಗಳು ಸರಕುಗಳಿಗೆ ಒಂದೇ ರೀತಿಯ ಬೆಲೆ ನಿರ್ಣಯಿಸಬೇಕು. ಎಂಬುದಾಗಿ ಹೇಳಿರುವರು.

ಪ್ರತಿಯೊಬ್ಬ ಮನುಷ್ಯನೂ ಒಂದೊಂದು ವಿಧದಲ್ಲಿ ಸಮಾಜ ಸೇವೆ, ದೇಶಸೇವೆ ಮಾಡಬಹುದು. ಸರಕಾರವು ಈಗ ವಿನಿಯಂತ್ರಣ ಮಾಡಿರುವುದರಿಂದ ವರ್ತಕವೃಂದದ ಮೇಲೆ ಹೆಚ್ಚು ಜವಾಬ್ದಾರಿ ಬಿದ್ದಿದೆ. ಹೆಚ್ಚು ಲಾಭದಾಸೆಗೆ ಬಲಿಬೀಳದೆ ಜನಸಾಮಾನ್ಯರ ಹಿತವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ದೇಶಸೇವೆ ಮಾಡಬೇಕು. ತಮ್ಮ ಮೇಲೆ ತಾವೇ ನಿಯಂತ್ರಣವನ್ನು ಹಾಕಿಕೊಳ್ಳಬೇಕು. ಬೇಕಾದವ, ಬೇಡದವ, ಬಡವ, ಬಲ್ಲಿದ ಎಂಬ ತಾರತಮ್ಯಗಳನ್ನೆಣಿಸದೆ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ, ನಿಷ್ಪಕ್ಷಪಾತದಿಂದ, ಪ್ರಾಮಾಣಿಕತನದಿಂದ ನಡೆದುಕೊಂಡು ದೇಶ ಹಿತವನ್ನು ಸಾಧಿಸಬೇಕು. ಹಾಗೆ ಮಾಡದೆ ಜನಸಾಮಾನ್ಯರಿಗೆ ಬೇಕಾಗುವ ಆಹಾರ ಸಾಮಗ್ರಿ ಮೊದಲಾದ ವಸ್ತುಗಳನ್ನು ಲಾಭದಾಸೆಯಿಂದ ಸಂಗ್ರಹಿಸಿ, ಅಧಿಕ ಲಾಭ ಪಡೆದಲ್ಲಿ ದೇಶದ್ರೋಹ ಎಸಗಿದಂತಾಗುವದು.

ಯುದ್ಧ ಕಾಲದಲ್ಲಿ ನಿಯಂತ್ರಣಗಳು ಜಾರಿಯಲ್ಲಿ ಬಂದಿದ್ದು ವರ್ತಕರು ಹೆಚ್ಚು ಲಾಭದಾಸೆಯಿಂದ ಅನೇಕ ಅನ್ಯಾಯಗಳನ್ನು ಮಾಡಿದ್ದರ ಫಲವಾಗಿ ಎಂದು ನಿಸ್ಸಂದೇಹವಾಗಿ ಹೇಳಬಹುದು. ವ್ಯಾಪಾರಿಗಳಲ್ಲಿ ಪ್ರಾಮಾಣಿಕರೇ ಇಲ್ಲವೆಂದಲ್ಲ. ಆದರೆ ಕೆಲವು ಲಾಭಬಡಕ ವರ್ತಕರು ಮಾಡುವ ಅನ್ಯಾಯ, ಅಕ್ರಮಗಳಿಂದ ಇಡೀ ವರ್ತಕ ವೃಂದಕ್ಕೆ ಕೆಟ್ಟ ಹೆಸರು ಬರುತ್ತದೆ. ಅದರಿಂದ ವರ್ತಕರೇ ಇಂಥವರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕು.

ಇನ್ನು ಕೊಳ್ಳುವವರು ತಮ್ಮದೇ ಆದ ಒಂದೊಂದು ಕೊಳ್ಳುವವರ ಸಂಘಗಳನ್ನೇರ್ಪಡಿಸಿಕೊಂಡು ನೇರವಾಗಿ ಬೆಳೆಯುವ ರೈತನೊಡನೆ ಸಂಬಂಧವನ್ನಿಟ್ಟುಕೊಳ್ಳಬೇಕು. ರೈತನು ಸಹ ಬೆಳೆಯುವವರ ಸಂಸ್ಥೆಗಳನ್ನು ಏರ್ಪಡಿಸಿಕೊಂಡು, ಕೊಳ್ಳುವವರೊಡನೆ ನಿಕಟಸಂಬಂಧವನ್ನಿಟ್ಟುಕೊಂಡಲ್ಲಿ ಲಾಭಬಡಕ ವ್ಯಾಪಾರಸ್ಥರಿಗೆ ಸರಿಯಾದ ಬುದ್ಧಿ ಕಲಿಸಿ, ದೇಶಹಿತ ಮಾಡಿದಂತಾಗುವದು.

ಸರ್ಕಾರದವರು ಲಾಭಬಡಕರನ್ನು ಪತ್ತೆಮಾಡಿ, ದಯಾ-ದಾಕ್ಷಿಣ್ಯವಿಲ್ಲದೆ, ಉಗ್ರ ಶಿಕ್ಷೆವಿಧಿಸಬೇಕು. ಅಲ್ಲದೆ ಪ್ರತಿಯೊಬ್ಬ ವ್ಯಾಪಾರಸ್ಥನು ಒಂದು ವರ್ಷಕ್ಕೆ ನಿರ್ದಿಷ್ಟವಾದ ಹಣಕ್ಕಿಂತ ಹೆಚ್ಚು ಲಾಭ ಪಡೆಯದಂತೆ ಒಂದು ಕಾನೂನನ್ನು ರಚಿಸುವುದು ಉಚಿತ. ಒಂದುವೇಳೆ ಸರ್ಕಾರದ ಕಾನೂನನ್ನುಲ್ಲಂಘಿಸಿದಲ್ಲಿ ಅಪರಾಧ ಮಾಡಿದಂತಾಗುವದು ಇಂಥ ದ್ರೋಹಿಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುವದೆಂದು ಸರ್ಕಾರವು ನಿರ್ದಾಕ್ಷಿಣ್ಯವಾಗಿ ಸ್ಪಷ್ಟಪಡಿಸಬೇಕು.

(ನ ವ ಯು ಗ)

## ಶ್ರೀ ಎ. ಬಿ. ಶೆಟ್ಟಿ, ಕವುತಾಳದ ಆಸ್ಪತ್ರೆ ಪ್ರಾರಂಭೋತ್ಸವ

ಆದವಾನಿ ತಾಲೂಕು ಕವತಾಳದಲ್ಲಿ ಅಂತರ್ ವಿಶನ್ ಸಂಘದವರ ಪರವಾಗಿ ಶ್ರೀ ಎ. ಡಿ ಮಾರ್ಟಿನ್‌ರವರು ಅವಿಶ್ರಾಂತ ಶ್ರಮವಹಿಸಿ ಕಟ್ಟಿಸಿದ ಭವ್ಯವಾದ ಆಸ್ಪತ್ರೆಯ ಪ್ರಾರಂಭ ಮಹೋತ್ಸವವನ್ನು ಮದ್ರಾಸ್ ಸರ್ಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ ಶೆಟ್ಟಿಯವರು 1-1-48 ರ ದಿನ ನೆರವೇರಿಸಿದರು. ಹಳ್ಳಿಯ ಭಾಗದಲ್ಲಿ ಇದರಿಂದ ಮಹೋಪಕಾರ ವಾಗುವುದೆಂಬ ಆಶೆಯನ್ನು ವ್ಯಕ್ತಪಡಿಸಿ ಸರ್ಕಾರವು ಇಂಥಾ ಸಂಸ್ಥೆಗಳಿಗೆ ಸಾಕಷ್ಟು ಸಹಾಯ ಮಾಡುವುದೆಂದು ಆಶ್ವಾಸನವಿತ್ತರು. ಶ್ರೀ ದೇಶಾಯಿ ಭೀಮಸೇನರಾಯರು, ಬಂದ ಅತಿಥಿಗಳಿಗೆಲ್ಲಾ ಭೂರಿ ಭೋಜನದಿಂದ ಸತ್ಕರಿಸಿದರು.

## “ ಹೆಣ್ತಿ ಬಿಟ್ಟನಂತೆ! ”

ಹೆಣ್ಣು ಗೊತ್ತುಮಾಡಿ ಬಂದು,
ತಿಂಗಳಾಯ್ತು ಮೊನ್ನೆಗಂದೆ,
ಅಕ್ಕಿ, ಬೇಳೆ ಎಲ್ಲಮಾಡಿ
ಮದುವೆಗೆಂದು ಹೋದರಂತೆ ! ॥೧॥

‘ಹೆಣ್ಣು ಒಳ್ಳೆ ರೂಪುವಂತೆ’
ಎಂದು ಸುದ್ದಿ ಹಬ್ಬಿತ್ತಂತೆ,
ವರನು ಬಾಳ ರೂಪುವಂತ
ಜೋಡಿಯಾಯ್ತು ಎಂದಿದ್ರಂತೆ ! ॥೨॥

‘ಕನ್ಯದಾನಮಾಡಲೆ’ಂದು
ವರನ ಇದಿರುಗೊಂಡರಂತೆ,
ಅವರ ಮುಖದೊಳೇನೊದ್ವಂದ್ವ
ಕೂಡಿತ್ತೆಂದು ಕಂಡರಂತೆ ! ॥೩॥

ಊಟವಾಯ್ತು, ವೀಳೆಯಾಯ್ತು
‘ಮಜಾ’ ಆಯ್ತು ಮಂದಿಗೆಲ್ಲ,
ತಾಳಿಯೊಂದ ಕಟ್ಟಲೆಂದು
ಗುಂಪುಸೇರಿ ಬಂದರೆಲ್ಲ ! ॥೪॥

“ವರನು ಬಾಳ ಬಡವನಂತೆ,
ಅದಕೆ ಮಾವ ಕೊಡ್ತಾನಂತೆ,
ತುಂಬದುಡ್ಡು, ಮಗಳ ಕೊಟ್ಟು”
ಅಂತ ಜನರು ಬಂದರಂತೆ ॥೫॥

ತಾಳಿಗೀಳಿ ಕಟ್ಟಿಯಾಯ್ತು
ಪತಿಯು ಪತ್ನಿ ನೋಡ್ಬೇಕೆಂದು
ಬಾಳಕಾತ್ರ ಪಟ್ಟಾನಂತೆ
ಅದಕೆ ಪರದೆ ತೆಗೆದರಂತೆ ॥೬॥

‘ಆಗ ಹೆಣ್ಣು ನೋಡಿದ್ದೇನು !
ಈಗ ಇವನು ಕಾಣೋದೇನು !!’
ಅಂತ ಹೆದರಿ ಬಿಟ್ಟನಂತೆ
ಕಲ್ಲಿನ್ಹಾಂಗ ಕುಂತನಂತೆ ॥೭॥

ಒಂದು ಮಾತನಾಡದಂಗೆ
ಹೊರಗೆ ಹೊರಟು ಬಿಟ್ಟನಂತೆ !
“[illegible] ”

“ಕೈಕಾಲು ಎಲ್ಲ ಸೊಟ್ಟ
ಮೂಗುಮಾತ್ರ ನೆಟ್ಟಗಿಲ್ಲ
ಕಣ್ಣೀಇಲ್ಲ ಹಲ್ಲುಬೀರಿ
ಮೊದಲು ಅದನ ನೋಡಿದ್ದಿಲ್ಲ” ॥೯॥

ಅಂತ ಅಂದು ಊರಿಗ್ಬಂದು
‘ಹೆಣ್ತನೊಲ್ಲೆ ಹೊನ್ನನೊಲ್ಲೆ
ಮಾವನಲ್ಲೆ ಹೆಣ್ತಇಲ್ಲ’
ಅಂತ ಪತ್ರ ಬರೆದನಂತೆ ! ॥೧೦॥

‘ ಮ-ಹಿ-ಮ ’

---

## ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಹೊಸಪೇಟೆ

ಮದ್ರಾಸ್ ಸರ್ಕಾರದವರು ಸತ್ಯಾಗ್ರಹಿಗಳಿಗೆ ಭೂದಾನ ಕೊಡುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಆದರೆ ಮದ್ರಾಸ್ ಸರ್ಕಾರದಿಂದ ಈ ವಿಷಯದಲ್ಲಿ ಯಾವುದಕ್ಕೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಪತ್ರ ಬಂದಿರುವದಿಲ್ಲ ನಾವು ಈ ವಿಚಾರದಲ್ಲಿ ಮದ್ರಾಸ್ ಸರ್ಕಾರಕ್ಕೂ, ಜಿಲ್ಲಾ ಕಲೆಕ್ಟರರಿಗೂ, ಬರೆದಿರುತ್ತೇವೆ. ವಿವರಗಳು ಬಂದಕೂಡಲೇ ಅಧೀನ ಕಾಂಗ್ರೆಸ್ ಕಮಿಟಿಗಳ ಮೂಲಕ ಮತ್ತು ಪತ್ರಿಕಾ ಪ್ರಕಟನೆಯ ಮೂಲಕ ತಿಳಿಸಲಾಗುವುದು.

ಹೊಸಪೇಟೆ
28-12-47

ತಮ್ಮ
**ಅಸುಂಡಿ ತಿರುಮಲರಾವು**
ಪ್ರಧಾನ ಕಾರ್ಯದರ್ಶಿ

### ದೊಡ್ಡ ಹರಿವಾಣ.

೨೮ ನೆಯ ದಿನಾಂಕ ಕರ್ನಾಟಕ ಸಂಘದ ಕಛೇರಿಯಲ್ಲಿ ಶ್ರೀ ಲಕ್ಷ್ಮಯ್ಯನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ದಿನಾಚರಣೆಯು ಆಚರಿಸಲಾಯಿತು ಆಂಧ್ರ ಪ್ರಾಂತ ನಿರ್ಮಾಣದ ಜೊತೆಯಲ್ಲೇ ಕರ್ನಾಟಕ ಪ್ರಾಂತವೂ ಪೂರ್ಣ ಬಳ್ಳಾರಿಜಿಲ್ಲೆ ಪೂರ್ವಕರ್ನಾಟಕ ಭಾಗಗಳೊಡನೆ ನಿರ್ಮಿತವಾಗಬೇಕೆಂಬ ತೀರ್ಮಾನ

# ಮುಂಗುರುಳ ಸೊಬಗು !

ಮಹಾ ಕವಿಗಳು (ಸುಂದರಿಯರ) ಅಳಕದ (curls) ವರ್ಣನೆ ಮಾಡದೆ ಬಿಟ್ಟಿಲ್ಲ. 'ಅಲಕಂ ಮಂದಾರ ಶೂನ್ಯಂ' (ಪಂಪ) 'ಹಸ್ತೇ ಲೀಲಾ ಕಮಲಮಲಕೇ ಬಾಲಕುಂದಾನುವಿದ್ಧಂ' (ಕಾಳಿದಾಸ) 'ಕರ್ಲಿ ಹೆಡ್ಡು ಕವೀಶ್ವರಗೆ' (ಪುರುಷ ಸರಸ್ವತಿ) ಎಂಬಿವು ಕೆಲವು ಉದಾಹರಣೆಗಳು. ಮುಂಗುರುಳು ತೀಡಿಕೊಳ್ಳುವುದರ ಬಗ್ಗೆ ಇಂದಿನ ನಾಗರಿಕ ತರುಣಿಯರು ಗಂಟೆಗಟ್ಟಲೆಯಾಗಿ ವೇಳೆಯನ್ನು ಹಾಳುಮಾಡುವುದಂತೂ ಸರ್ವರ ಅನುಭವವಿದೆ. ಅಂದಮೇಲೆ ಮುಖದ ಮೋಹಕತೆಯನ್ನು ಹೆಚ್ಚಿಸುವುದರಲ್ಲಿ ಮುಂಗುರುಳಿನ ಪಾತ್ರ ಎಷ್ಟು ಪ್ರಮುಖವಾದದ್ದು ನೋಡಿ!

ಅಮೇರಿಕದಲ್ಲಿ ಈಗ ಕುರುಳು ತಿದ್ದಲು ಹೊಸದೊಂದು ಶೋಧ ನಡೆದಿದೆ. ಅದಕ್ಕೆ Flash Technique ಸ್ಫುರಣ ತಂತ್ರವೆಂದು ಹೆಸರು. ಒಬ್ಬಾಕೆ ತನ್ನ ಅಂಗಡಿಯಲ್ಲಿ ಈ ಪ್ರಯೋಗವನ್ನು ಪ್ರಾರಂಭಿಸಿದ್ದಾಳಂತೆ. ಮೂರೇ ನಿಮಿಷಗಳಲ್ಲಿ ಮುಂಗುರುಳು ಅಲೆಯಲೆಯಾಗಿ ಬಿಡುವಂತೆ ಮಾಡಲಾಗುತ್ತದೆ. ಒಂದು ಕೊಂಕಿಗೆ ೧೦ ಸೆಕೆಂಡುಗಳು; ಮತ್ತು ಗಿರಾಕಿ ತಲೆಗಿಲೆ ಸುಟ್ಟುಕೊಳ್ಳಬೇಕಾಗಿಲ್ಲ.

ಹಗುರವಾದ ಕುರುಳು ತಿದ್ದುವ ಅಚ್ಚುಗಳಿವೆ. ಅವಕ್ಕೆ ತಂತಿಯಿಲ್ಲ, ತುದಿಯಲ್ಲಿ ಲೋಹದ ಚಿಕ್ಕ ಚಿಕ್ಕ ಮೊನೆಗಳಿವೆ. ಅಂಗಡಿಯವಳು ಪ್ರತಿಯೊಂದನ್ನೂ ತನ್ನ ವೈದ್ಯುತ ಇಕ್ಕಳದಿಂದ ಮುಟ್ಟುತ್ತಾಳೆ. ಕೂಡಲಲ್ಲಿ ಅದು ೩೫೦ ಡಿಗ್ರಿಯ ಉಷ್ಣವನ್ನು ಹುಟ್ಟಿಸುತ್ತದೆ. ೧೦ ಸೆಕೆಂಡುಗಳಲ್ಲಿ ಒಂದು ಸ್ವಯಂಚಲ ಕತ್ತರಿಯು ಅದನ್ನು ಬೇಕಾದಲ್ಲಿ ಕತ್ತರಿಸಿ ಒಗೆಯುತ್ತದೆ. ಮರು ನಿಮಿಷದಲ್ಲಿ ಇಕ್ಕಳ ಮುಂದೆ ಸಾಗುತ್ತದೆ. ಇದರಿಂದ ಕುರುಳು ಯಥಾವತ್ತಾಗಿ ರೂಪಿಸಲ್ಪಡುವುವು. ಇದಕ್ಕೆ ಬೇಕಾದದ್ದಷ್ಟೇ, ಅಥವಾ ಹೆಚ್ಚೆಂದರೆ ಒಂದು ಉಲ್ಲಾಸಕರ ಪರಿಮಳ. Flash wave ಹೊಳೆವ ಕೊಂಕು ಕೊಡುವಾಗ ಅಮೋನಿಯವು ಬಳಸಲ್ಪಡುವುದಿಲ್ಲ. ತಲೆಕೊಟ್ಟ ಕ್ಷಣಾರ್ಧದಲ್ಲಿ 'ಗರ್ದಭಾಪ್ಯಪ್ಸರಾಯತೆ' ಕತ್ತೆ ಕೂಡ ಅಪ್ಸರಿಯಾಗಿ ಪರಿಣಮಿಸುತ್ತದೆ! ಇಂತಹ ಒಂದು ಸಾಧನ ಇಲ್ಲಿಯೂ ಸುಲಭವಾಗಿ ಸಿಕ್ಕಬಾರದೇ ಎಂದು ಈ ವಿಷಯ ತಿಳಿದ ನಿಮಿಷಾರ್ಧದಲ್ಲಿ ತರುಣೀವೃಂದ ತೊಳಲಾಡದೇ?

# ಮುಪ್ಪಿಗೆ ಸಂಜೀವಿನಿ !

ಒಬ್ಬನೇ ವಾಸಿಸುತ್ತಿದ್ದರೆ ಮನುಷ್ಯನಲ್ಲಿ ವೈಯಕ್ತಿಕ ಅಧಃಪಾತ ಉಂಟಾಗುತ್ತದೆಂದು ವಿಜ್ಞಾನಿಗಳ ವ್ಯಾಖ್ಯೆ. ಹಾಗಿದ್ದರೆ ಮಾನವನು ಪ್ರತಿಕ್ಷಣವೂ ಅದರ ವಿರುದ್ಧ ಕಾಳಗ ನಡೆಸುತ್ತಿರಬೇಕಾಗುವುದಂತೆ.

ಏಕಾಕಿ ಜೀವನಕ್ಕೆ ಸ್ವಾಭಾವಿಕವಾದ ಮದ್ದೆಂದರೆ ಸಮಾಜ. ಸಾಮಾಜಿಕ ಮತ್ತು ದೈಹಿಕ ಸಮತೋಲವನ್ನು ಎಷ್ಟೇ ಕಷ್ಟಪಟ್ಟು ಉಳಿಸಿಕೊಂಡರೂ ಏಕಾಕಿಗೆ ಗೆಳೆಯನೊಬ್ಬನ ದರ್ಶನವಾದರೆ ಅವನು ಮೊದಲಿಗಿಂತ ಉತ್ತಮ ರೀತಿಯಿಂದ ನಡೆದುಕೊಳ್ಳುವನೆಂಬುದು ಅನುಭವದ ಮಾತು.

ಇದರ ನೀತಿ ಹೀಗಿದೆ: ನೀನು ತಾರುಣ್ಯ ಭಾವದಲ್ಲಿರಬೇಕಾದರೆ ಆದಷ್ಟು ಮಟ್ಟಿಗೆ ಆದಷ್ಟು ಜನರನ್ನು ನೋಡಬೇಕು, ಗುರುತು ಮಾಡಿಕೊಳ್ಳಬೇಕು, ಆತಿಥ್ಯ ನೀಡಬೇಕು. ನಿನ್ನ ಮನೆಯ ಹೊರಗಣ ಜೀವನವತ್ತ ಗಮನವೀಯುವದಿಲ್ಲವಾದರೆ ಮುಪ್ಪು ನುಸುಳಿಕೊಂಡು ಬರುತ್ತದೆ. ನೀನು ನಿರೀಕ್ಷಿಸುವ ಮೊದಲೇ ಅದು ನಿನ್ನನ್ನು ಕಬಳಿಸಿಬಿಡುತ್ತದೆ. ಶ್ರೀ ಜಿಲೆಟ್ ಬರ್ಗೆಸ್‌ರಿಂದು ಇದನ್ನು ಬಯಲಿಗೆಳೆದಿದ್ದಾರೆ. ಇದರ ಸಾರರೂಪವೆಂಬಂತೆ ನಮ್ಮಲ್ಲಿ "ಸಂತೋಷಂ ಜನಯೇತ್ ಪ್ರಾಜ್ಞಃ" ಎಂದಿದ್ದಾರೆ. ಅನ್ಯರನ್ನು ಸಂತೋಷಗೊಳಿಸುವುದರಿಂದ ತನಗೂ ಸಂತೋಷ ಉಂಟಾಗುವುದೆಂಬುದು ನಾಗರಿಕ ಮಾನವನ ಅನುಭವಕ್ಕೆ ಬರುವುದು ಸಹಜ. ಸಂತೋಷವೇ ಯೌವನ, ಚಿಂತೆಯೇ ಮುಪ್ಪು. ಇದನ್ನರಿತು ಬಾಳುವವನಿಗೆ ಮುಪ್ಪೆಲ್ಲಿಂದ ಬಂತು?

# ಪಾಕಶಾಸ್ತ್ರದಲ್ಲಿ ಹೊಸ ಶೋಧ !

ಮನುಷ್ಯನು ಬದುಕುವುದಕ್ಕಾಗಿ ಉಣ್ಣುತ್ತಾನಲ್ಲದೆ ಉಣ್ಣುವುದಕ್ಕಾಗಿ ಬದುಕುವುದಿಲ್ಲವೆಂದು ಬುದ್ಧಿವಂತರೆಷ್ಟೇ ಬೋಧಿಸಿದರೂ ಬದುಕೆಂದರೇ ಒಂದು ಊಟವೆಂದು ತತ್ವಶಾಸ್ತ್ರಕಾರರೆನ್ನುತ್ತಾರೆ. ಷಟರಣ ಸಹಿತನಾದ ಆತ್ಮನು ಪ್ರಪಂಚದಲ್ಲಿ ವಿವಿಧ ಅನುಭವಗಳನ್ನು ಉಣ್ಣುವದೇ ಜೀವನ. ಆದುದರಿಂದ ಅಲಂಕಾರಿಕ ಭುಕ್ತಿಗೆ ಆಧಾರವಾದ ಮೂಲ ಭೋಗ (ಊಟ) ಜೀವನದಲ್ಲಿ ಸರ್ವಪ್ರಧಾನವೆನ್ನಲಡ್ಡಿಏನು? ಅದರಿಂದಲೇ- ಆಲಯಃ ಪಾಕಶಾಲಾ ಸ್ಯಾತ್। ಕುಕ್ಷಿ ರ್ದೇವಃ ಸನಾತನಃ॥ ತಜೇಲ್ಲಜ್ಜಾ ಖ್ಯ ನಿರ್ಮಾಲ್ಯಂ। ನಿತ್ಯಂಭಕ್ಷ್ಯೇನ ಪೂರಯೇತ್॥ ಅಡಿಗೆಮನೆಯೆಂದರೆ ದೇವಾಲಯ, ಹೊಟ್ಟೆಯೇ ಸನಾತನನಾದ ದೇವರು. ನಾಚಿಕೆಯ ಹಳೆಹೂಗಳನ್ನು ಬಿಸಾಟು ನಿತ್ಯವೂ ತಿಂಡಿತಿನಸುಗಳನ್ನು ತುಂಬಿ ಪೂಜಿಸಬೇಕು ಕಾಣಿರೊ ಎಂದು ಬಕಸೂತ್ರದಲ್ಲಿ ಹೇಳಿದೆ.

ಮಂಗರಸನೆಂಬ ಕನ್ನಡ ಕವಿಪುಂಗವನು ಕನ್ನಡದಲ್ಲಿ ಬರೆದ ಸಮ್ಯಕ್ತ್ವಕೌಮುದಿಯಲ್ಲಿ ಬ್ರಾಹ್ಮಣರ ಭೋಜನವನ್ನು ಬಣ್ಣಿಸುತ್ತ "ವಡೆಯೊಟ್ಟಿಲುಂಡಲಿಗೆಗಳರಾಶಿ" ಎಂಬುದಾಗಿ ನಾನಾವಿಧದ ಭಕ್ಷ್ಯಗಳನ್ನು ಹೆಸರಿಸಿದ್ದಾನೆ. ಇಂಗ್ಲೆಂಡಿನಲ್ಲಿ ಇಟಾಲಿಯನ್ನರು ಮಾಂಸ ಭಕ್ಷ್ಯ ತಯಾರಿಕೆಯಲ್ಲೂ ಹಿಂದೀಯರು ಇದಿತರ ತಿನಿಸುಗಳ ತಯಾರಿಕೆಯಲ್ಲೂ ಇಂಗ್ಲೀಷರ ಮೆಚ್ಚಿಗೆ ಪಡೆದಿದ್ದಾರಂತೆ, ಒಂದು ಸಲ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಕರ್ನಾಟಕದ "ರಸವಿದ್ಯೆ" ಯನ್ನು ಮನಸಾರೆ ಕೊಂಡಾಡಿದರಂತೆ, ಭಾರತದಲ್ಲೂ ಮದ್ರಾಸ್— ದಕ್ಷಿಣ ಕನ್ನಡ— ಉಡುಪಿ ಬ್ರಾಹ್ಮಣರ ತವರುಮನೆ! ಗುಜರಾತಿಗಳಾದರೂ ಸಿಹಿ ತಿಂಡಿಯ ತಯಾರಿಕೆಯಲ್ಲಿ ಯಾರಿಗೂ ಹಿಂದಲ್ಲ !

ಇಂದೀಗ ಶ್ರೀಮತಿ ಸಗುಣಾಬಾಯಿ ಮೋನಸಿಂಗರು ಕೆಲವು ಹೊಸ ತಿನಿಸುಗಳ ತಯಾರಿಕೆಯ ವಿವರಗಳನ್ನು 'ಹಿಂದು' ವಿನಲ್ಲಿ ಹೊರಗೆಡಹಿದ್ದಾರೆ. ಅವುಗಳಲ್ಲೆರಡು ಇಂತಿವೆ.

## ಸಿಹಿಯವಲಕ್ಕಿ

ಅವಲಕ್ಕಿಯನ್ನು ಮೊದಲು ಸೋಸಬೇಕು. ಅನಂತರ ತೊಳೆದು ಒಂದು ಸಿದ್ದೆ ನೀರಿನಲ್ಲಿ ನೆನಸಬೇಕು ಒಂದು ಚಿಟಿಕೆ ಉಪ್ಪು ಹಾಕಿದರೂ ಹಾಕಬಹುದು. ಅರ್ಧಗಂಟೆಯ ನಂತರ ತೆಗೆದು ಅದಕ್ಕೆ ಅರ್ಧಸಿದ್ದೆ ಸಕ್ಕರೆಯನ್ನು ಸೇರಿಸಬೇಕು. ಚೆನ್ನಾಗಿ ಕಲಿಸಿ ತಟ್ಟೆಯಲ್ಲಿಟ್ಟುಬಡಿಸು. ಇದನ್ನು ಮುದುಕರಿಗಿಂತ ಹೆಚ್ಚಾಗಿ ಹುಡುಗರು ಇಷ್ಟಪಡುತ್ತಾರೆ !

## ಅವಲಕ್ಕಿ ಉಪ್ಪಿಟ್ಟು

ವಿಧವಿಧದ ತರಕಾರಿಗಳಲ್ಲಿ ಒಂದು ಮುಷ್ಟಿಯಷ್ಟನ್ನು ತೆಗೆದುಕೋ. ಅದನ್ನು ಸ್ವಲ್ಪ ಉಪ್ಪುಹಾಕಿ ನೀರಿನಲ್ಲಿ ಬೇಯಿಸು. ಬೇಯುವಾಗ ಅದಕ್ಕೆ ಸ್ವಲ್ಪ ಅರಿಸಿನಪುಡಿ, ಹೆಚ್ಚಿದ ನೀರುಳ್ಳಿ ಮತ್ತು ಮೆಣಸಿನಕಾಯಿಗಳನ್ನು ಹಾಕು ಅರ್ಧ ಬೆಂದಬಳಿಕ ಅವಲಕ್ಕಿ ತೊಳೆದು ಅವರಲ್ಲಿ ಹಾಕು. ಬೇಕಾದರೆ ಇನ್ನೊಂದು ಸ್ವಲ್ಪ ನೀರು ಬೆರಸು. ಅನಂತರ ಅದಕ್ಕೆ ತೆಂಗಿನಕಾಯಿಯ ಅಗಪು ಹಾಕಿ ಬೇಯಿಸು ಹತ್ತು ನಿಮಿಷಗಳಲ್ಲಿ ಅದು ಬೆಂದು ತಯಾರಾಗುತ್ತದೆ. ಇದೊಂದು ರುಚಿಯಾದ ಬೆಳಗಿನ ಉಪಾಹಾರ !

'A woman who has mastered the sauces sits on the apex of civilisation—ಮೇಲೋಗರ ಮಾಡಬಲ್ಲಾಕೆ ನಾಗರಿಕತೆಯ ತುಟ್ಟತುದಿಯೇರಿ ಕುಳಿತುಕೊಳ್ಳುತ್ತಾಳೆ' ಎಂಬ ಮಾತನ್ನು ತಿಳಿದು ಇಂದಿನ ವಿದ್ಯಾವತಿಯರು ಮೇಲಿನಂತೆ ಹೊಸ ಹೊಸ ತಿಂಡಿತಿನಸುಗಳನ್ನು ತಯಾರಿಸಿ ಮನೆಮಂದಿಯ ನಾಲಿಗೆ ಮೈ ಮನಸ್ಸುಗಳಿಗೆ ಉಲ್ಲಾಸವನ್ನುಂಟುಮಾಡಿ ಆರೋಗ್ಯ ದೃಢಕಾಯ ಸಮಾಜವನ್ನು ರಚಿಸಲು ಕಂಕಣಬದ್ಧರಾಗುವುದು ಅತ್ಯಗತ್ಯವಲ್ಲವೆ ?

# ಜಗತ್ತಿನಲ್ಲಿ ಶಾಂತಿಯ ಲಕ್ಷಣಗಳಿಲ್ಲ.

ಎರಡನೆಯ ಮಹಾಯುದ್ಧದ ನಂತರ ಜಗತ್ತಿನಲ್ಲಿ ಅಮೆರಿಕಾ-ರಷ್ಯಾ ಈ ಎರಡು ಪ್ರಬಲ ಶಕ್ತಿಗಳು ಳಿದವು. ಅಮೆರಿಕಾದ್ದು ಭಂಡವಲವಾದ, ರಷ್ಯಾದ್ದು ಸಮಾಜವಾದ - ಈ ತಾತ್ವಿಕ ಭೇದವಷ್ಟೇ ಅಲ್ಲದೆ ಪ್ರಪಂಚದ ಪ್ರತಿಯೊಂದು ರಾಷ್ಟ್ರದಲ್ಲಿಯೂ ತನ್ನ ಪ್ರತಿಭೆ ಇರಬೇಕೆಂದು ಒಂದಕ್ಕೊಂದು ಪೋಟಿಯಿಂದ ಯತ್ನಿಸುತ್ತಲಿದೆ. ಸಂಯುಕ್ತ ರಾಷ್ಟ್ರಸಂಘ (unietd Nations organisatfion) ವೆಂಬುದು ಅಮೆರಿಕಾದ ಪ್ರತಿಭೆಗೊಳಗಾಗಿ ಆ ರಾಷ್ಟ್ರದ ಮತ್ತು ಅದರ ಸ್ನೇಹಿತರ ಮತಗಳಿಂದ ಕೂಡಿದೆ. ಆದರೂ ಈ ಸಂಘದಲ್ಲಿ ರಷ್ಯಾವು ತನ್ನ ಮಿತ್ರರಾಷ್ಟ್ರಗಳ ಒಲವಿನಿಂದ ತನಗೆ ವಿರೋಧವಿದ್ದ ಪ್ರತಿಯೊಂದು ಸಮಸ್ಯೆಯ ವಿಷಯಕ್ಕೂ ಹೋರಾಟ ಹೂಡುತ್ತಲಿದೆ.

ಈ ಒಂದೆರಡು ತಿಂಗಳುಗಳಲ್ಲಿ ಜಗತ್ತಿನ ಶಾಂತಿಯನ್ನು ಕಲಕುವ ಮಹತ್ವ ಘಟನೆಗಳು ಸಂಭವಿಸಿವೆ. ಪರ್ಶಿಯಾದೇಶದ ಮುಖ್ಯ ಮಂತ್ರಿಯು ದೇಶಭ್ರಷ್ಟನಾಗಿ ಓಡಿ ಹೋಗಬೇಕಾಯಿತು. ರಷ್ಯಾದೊಡನೆ ಆದ ಎಣ್ಣೆಯ ಒಪ್ಪಂದವನ್ನು ಈಗಿನ ಸರ್ಕಾರವು ರದ್ದುಮಾಡಿದೆ. ಪರ್ಶಿಯಾದೇಶಕ್ಕೆ ೧೯೪೯ ನೆಯ ಮಾರ್ಚ ವರೆಗೂ ಎಲ್ಲಾತರದ ಸೈನ್ಯ ಶಿಕ್ಷಣವನ್ನು ಕೊಡಲು ಅಮೆರಿಕಾ ದೇಶವು ಅಕ್ಟೋಬರ್‌ನಲ್ಲಿ ಮಾಡಿಕೊಂಡ ಒಪ್ಪಂದವು ಈಗ ಪ್ರಸಿದ್ಧವಾಗಿದೆ. ರಷ್ಯಾದ ವಿರುದ್ಧ ತಿರವುಟ್ಟ ದೇಶವಾದ ಪರ್ಶಿಯಾ ತಲೆಎತ್ತಬೇಕಾದರೆ, ಅಮೆರಿಕಾದಪುಷ್ಟಿ ಇಲ್ಲದೆ ಇದು ಸಾಧ್ಯವಲ್ಲೆಂದು ಹಾಡ ಹಗಲಷ್ಟು ನಿಶ್ಚಿತವಾಗಿದೆ. ಈಗಾಗಲೆ ಅಮೆರಿಕಾದ ಸೈನ್ಯ ಶಿಷ್ಟಮಂಡಳವು ಪರ್ಶಿಯಾಕ್ಕೆ ಬಂದಿದೆ.

ಅತ್ತ ಗ್ರೀಸ್ ದೇಶದಲ್ಲಿ ರಷ್ಯಾದ ಪುಷ್ಟಿಯನ್ನು ದೊರಕಿಸಿಕೊಂಡ ಕಮ್ಯೂನಿಷ್ಟರು ಗ್ರೀಸ್ ದೇಶದ ಸದ್ಯದ ಸರ್ಕಾರದ ವಿರುದ್ಧ ಯುದ್ಧ ಹೂಡಿರುವರು. ಈಗಿರುವ ಸರ್ಕಾರವು ಇಂಗ್ಲೆಂಡ್, ಅಮೆರಿಕಾಗಳೊಡನೆ ಸ್ನೇಹದಿಂದಿದೆ

ಜರ್ಮನ್ ದೇಶವು ಸೋತನಂತರ ಜರ್ಮನಿಯಲ್ಲಿನ ಕಾರ್ಖಾನೆಗಳನ್ನೆಲ್ಲಾ ಬಿಚ್ಚಿ ತನ್ನ ದೇಶಕ್ಕೆ ತೆಗೆದುಕೊಂಡುಹೋಗಿ ಜರ್ಮನ್ ಸೈನಿಕರನ್ನು ನಿಶ್ಶಸ್ತ್ರರನ್ನಾಗಿ ಮಾಡುವ ವಿಧಾನವನ್ನು ರಷ್ಯಾ ತನ್ನ ಭಾಗದಲ್ಲಿಟ್ಟುಕೊಂಡಿದೆ ಆದರೆ ಇಂಗ್ಲೆಂಡ್ ಮತ್ತು ಅಮೆರಿಕಾಗಳಾಕ್ರಮಿಸಿರುವ ಜರ್ಮನಿ ದೇಶದಲ್ಲಿ ಈ ವಿಧಾನವಿಲ್ಲ. ಪೂರ್ವದ ತತ್ವದಂತೆ ರಷ್ಯಾವು ತನ್ನ ಮೇಲೆ ಬೀಳಬಾರದಂತೆ ಜರ್ಮನಿಯು ತಡೆಯಾಗಬೇಕೆಂದು (Buffer State) ಇಂಗ್ಲೆಂಡ್-ಫ್ರಾನ್ಸ-ಅಮೆರಿಕಾಗಳು ಕೋರುತ್ತಲಿವೆ ಈ ಕಾರಣದಿಂದ ಜರ್ಮನರನ್ನು ಅವರು ನಿಶ್ಶಸ್ತ್ರರನ್ನಾಗಿ ಮಾಡುತ್ತಲಿಲ್ಲ ಕಾರ್ಖಾನೆಗಳನ್ನು ಬಿಚ್ಚುತ್ತಲಿಲ್ಲ.

ಇತ್ತ ಪಾಕಿಸ್ತಾನ-ಹಿಂದೂಸ್ತಾನಗಳಲ್ಲಿ ಕಾಶ್ಮೀರದ ಬಗ್ಗೆ ತಿಕ್ಕಾಟ ನಡದೇ ಇದೆ. ನೂರಾರು ವರ್ಷ ಇಂಗ್ಲೀಷರು ಸರಹದ್ದಿನಲ್ಲಿಟ್ಟ ಸೈನ್ಯವನ್ನು ಪಾಕಿಸ್ತಾನವು ಹಿಂದೆಗೆದುಕೊಂಡಿದೆ. ಇದರಿಂದ ಸರಹದ್ದಿನಲ್ಲಿರುವ ಗುಡ್ಡಗಾಡಿನ ಸ್ವತಂತ್ರ ಜನರು ಪಾಕಿಸ್ತಾನದಲ್ಲೆಲ್ಲಾ ಶಸ್ತ್ರಸಮೇತ ಓಡಾಡುತ್ತಿರುವರು. ಅಲ್ಲದೆ ಕಾಶ್ಮೀರದ ದಾಳಿಯಲ್ಲಿ ಪಾಕಿಸ್ತಾನದ ಸಹಾಯದಿಂದ ಅವರು ಹೋರಾಡುತ್ತಿರುವುದು ಸ್ಪಷ್ಟವಾಗಿದೆ. ಹಿಂದೂಸ್ತಾನ ಸರಕಾರವು ಈ ವಿಷಯವನ್ನು ಗಂಭೀರವಾಗಿ ಆಲೋಚಿಸುತ್ತಲಿದೆ. ಪಾಕಿಸ್ತಾನವು ಮಿತ್ರರಾಷ್ಟ್ರ. ಅದು ದಾಳಿಗಾರರನ್ನು ತಡೆಹಿಡಿಯಬೇಕು. ಅದು ತಡೆಹಿಡಿಯಲಾಗದಿದ್ದರೆ ಹಿಂದೂಸ್ತಾನ ಸರಕಾರವು ದಾಳಿಗಾರರನ್ನು ಪಾಕಿಸ್ತಾನರಾಷ್ಟ್ರವನ್ನು ಹೊಕ್ಕು ತಡೆಯಬೇಕಾಗುತ್ತದೆ. ಇನ್ನು ಕೆಲದಿನಗಳಲ್ಲಿ ಯಾವುದೇ ಆಗಲಿ ಗೊತ್ತಾಗುವುದು.

ಹೀಗೆ ಜಗತ್ತಿನಲ್ಲಿ ಶಾಂತಿ ಲಕ್ಷಣಗಳಿಲ್ಲ. ಎರಡನೆಯ ಮಹಾಯುದ್ಧವು ಮುಗಿದು ಜಗತ್ತಿನ ಸಣ್ಣ ಪುಟ್ಟ ದೇಶಗಳು ಇನ್ನೂ ಚೇತರಿಸಿಕೊಳ್ಳುತ್ತಿರಬೇಕಾದರೆ ಮೂರನೇ ಮಹಾಯುದ್ಧದ ಲಕ್ಷಣಗಳು ತಲೆದೋರುತ್ತಿರುವುದು ದುರ್ದೈವವಾಗಿದೆ. ಭಗವಂತನ ಆಶೋತ್ತರಗಳೇನಿರುವುವೋ, ಭವಿಷ್ಯ ಗರ್ಭದಲ್ಲೇನಿರುವುದೋ ಮಾನವನಿಗೆ ಹೇಳುವುದು ಅಸಾಧ್ಯ.

## ಬಳ್ಳಾರಿ ಜಿಲ್ಲಾ ರಾಜಕೀಯ ಕಾರ್ಯಕರ್ತರ ಸಮ್ಮೇಳನ

**Political workers Conf:- Bellary.**

ಆಗಸ್ಟ್ 15 ರ ನಂತರ ಜಿಲ್ಲೆಯ ಎಲ್ಲ ರಾಜಕೀಯ ಕಾರ್ಯಕರ್ತರು ಒಂದೆಡೆ ಸೇರಿ ಸದ್ಯದ ಪರಿಸ್ಥಿತಿಗಳನ್ನು ಸಮಾಲೋಚನೆ ಮಾಡಿ ವಿವರವಾಗಿ ಚರ್ಚಿಸಿ ಇನ್ನು ಮುಂದೆ ಎಲ್ಲರೂ ಕೂಡಿಕೊಂಡು ಸಮನ್ವಯವಾಗಿ ಜಿಲ್ಲೆಯಲ್ಲಿ ಕೆಲಸಮಾಡಲು ನಿರ್ದಿಷ್ಟ ಕಾರ್ಯಕ್ರಮಗಳನ್ನು ಗೊತ್ತುಮಾಡಿಕೊಳ್ಳುವ ಅವಶ್ಯಕತೆಯು ನಮಗೆ ಹೆಚ್ಚಾಗಿ ಕಂಡುಬಂದಿದೆ ಕಾರಣ ಅಂತಹ ಕಾರ್ಯಕರ್ತರ ಸಮ್ಮೇಳನವೊಂದನ್ನು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ ಜನವರಿ 3 ನೇ ವಾರದ ಅಂತ್ಯದಲ್ಲಿ ಜರುಗಲಿರುವ ರೈತ ಮತ್ತು ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನಗಳೊಂದಿಗೆ ಜರುಗಿಸಬೇಕೆಂದು ನಾವು ನಿಶ್ಚಯಿಸಿರುತ್ತೇವೆ. ಜನವರಿ 10-48 ರೊಳಗಾಗಿ ಸ್ನೇಹಿತರೂ, ಕಾರ್ಯಕರ್ತರೂ ತಮ್ಮ ಸೂಚನೆ ಸಲಹೆಗಳನ್ನು ಶ್ರೀ ಆರ್. ವಿ. ದೇಸಾಯಿ, ಅಗಳಿ ಕಂಪೌಂಡ್ ಹೊಸಪೇಟೆ ( ಬಳ್ಳಾರಿ ಜಿಲ್ಲಾ ) ಯವರಿಗೆ ಕಳಿಸಬೇಕಾಗಿಯೂ, ಪತ್ರ ವ್ಯವಹಾರ ಮಾಡಬೇಕಾಗಿಯೂ ವಿನಂತಿ. ಮುಂದಿನ ಕಾರ್ಯಕ್ರಮ ವಿವರಗಳ ಬಗ್ಗೆ ಆಗಿಂದಾಗ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ವಿಷಯದಲ್ಲಿ ಎಲ್ಲರೂ ಸಹಾಯ ಸಹಕಾರಗಳನ್ನೀಯುವಿರೆಂದು ನಂಬಿದ್ದೇವೆ.

ತಮ್ಮ

**ಆರ್. ವಿ. ದೇಸಾಯಿ,**

**ಐ. ಬಸವರಾಜ,**

## ಬಳ್ಳಾರಿಯಲ್ಲಿ ಪೋಲೀಸರ ಅವ್ಯವಹಾರ

೨೮ ನೆಯ ತಾ|| ನಿಂದ ಅಕ್ಕಿಯ ಹೊರತಾದ ಆಹಾರ ಧಾನ್ಯಗಳ ನಿಯಂತ್ರಣ ಹೋದನಂತರ ಒಬ್ಬ ಹಳ್ಳಿಗನು ಬಳ್ಳಾರಿಗೆ ಜೋಳವನ್ನು ಮಾರಲು ತಂದಾಗ ಪೋಲೀಸರು ಅವರನ್ನು ಹಿಡಿದು ಬೆಳಗಿನವರೆಗೆ ಲಾಕಪ್ಪಿನಲ್ಲಿಟ್ಟಿದ್ದರೆಂದೂ ರೇಷನ್ ಆಫೀಸರು ಬಂದು ಹೇಳುವವರೆಗೆ ಅವನ ಬಿಡುಗಡೆಯಾಗಲಿಲ್ಲವೆಂದೂ ಗೊತ್ತಾಗಿದೆ. ಸರ್ಕಾರದ ವಿನಿಯಂತ್ರಣದ ಆಜ್ಞೆಯ ವಿಷಯ ಪೋಲೀಸಿನವರಿಗೆ ಗೊತ್ತಿದ್ದಿಲ್ಲವೆಂಬ ವಿಚಿತ್ರವಾದಕ್ಕೇ ನನ್ನಬೇಕು ? ಇಲ್ಲವೇ ಉದ್ದೇಶ ಪೂರ್ವಕವಾಗಿ ಹೀಗೆ ಮಾಡಿರುವರೇ ? ಪೋಲೀಸ್ ಸೂಪರಿಂಟರು ಇದನ್ನು ವಿಚಾರಿಸಬೇಕು.

## ಬಳ್ಳಾರಿ ಸೀದಾ ಅಂಗಡಿಗಳಲ್ಲಿ ನೆಲ್ಲು

ಈ ವಾರ ಬಳ್ಳಾರಿ ಸೀದಾ ಅಂಗಡಿಗಳಲ್ಲಿ ನೆಲ್ಲು ಕೊಟ್ಟರು ನಿತ್ಯ ನಿತ್ಯ ಕೂಲಿ ಹೋಗಿ ಮನೆಗೆ ಬಂದವರು, ಈ ನೆಲ್ಲನ್ನು ಯಾವಾಗ ಅಕ್ಕಿಮಾಡಿಕೊಳ್ಳಬೇಕು ? ಮಧ್ಯಾನ್ಹ ಒಂದು ಗಂಟೆಯವರೆಗೂ ವಿದ್ಯುತ್ಶಕ್ತಿ ಬರುವುದಿಲ್ಲ, ಗಿರಣಿಗಳು ನಡೆಯುವುದಿಲ್ಲ ಕಲೆಕ್ಟರವರು ಅಕ್ಕಿಯನ್ನು ಕೊಡಲು ಆಜ್ಞೆಮಾಡಿದರೂ, ಕೋಆಪರೇಟಿವ್ ಅಧಿಕಾರಿಗಳು ಒಂದೆರಡು ದಿನ ಧಿಕ್ಕರಿಸಿದುದು ನಿದರ್ಶನಕ್ಕೆ ಬಂದಿದೆ.

## ಸಕ್ಕರೆ - ಜೋಳ

ಈ ವಾರ ಬಳ್ಳಾರಿ ಪೇಟೆಯಲ್ಲಿ ರೂಪಾಯಿಗೆ ಮೂರು ಸೇರು ಜೋಳ ಮಾರಿದುದು ಗೊತ್ತಾಗಿದೆ. ಸಕ್ಕರೆ ವೀಸಕ್ಕೆ 1-8-0 ನಿಶ್ಚಯಿಸಲಾಗಿದ್ದರೂ ಈ ಧಾರಣೆಗೆ ದೊರಕುತ್ತಿಲ್ಲ. ಒಂದೆರಡು ಸ್ಥಳಗಳಲ್ಲಿ ಹೆಚ್ಚಿನ ಧಾರಣೆಗೆ ಮಾರಿದರೆಂದು ವರದಿಯಾಗಿದೆ.

ಕಬ್ಬಿಣ ಶಿಮೆಂಟಿಗಳ ಧಾರಣೆ ಹೆಚ್ಚಿತು 1-1-1948 ರಿಂದ ರೈಲ್ವೆ ಟಿಕೆಟ್‌ಗಳ ದರವೂ ಹೆಚ್ಚಿತು.

## ಕರ್ನಾಟಕ ಪ್ರಾಂತ ರಚನೆ

### ಶ್ರೀ ಉರವಕೊಂಡ ಜಗದ್ಗುರುಗಳ ಸಂದೇಶ

ಕರ್ನಾಟಕ ಪ್ರಾಂತವು ಅಸ್ತಿತ್ವದಲ್ಲಿ ಬರಲು ವಿಘ್ನಗಳಿವೆಯೆಂಬ ಭಾರತ ಮಂತ್ರಿಗಳ ಹೇಳಿಕೆ ಇಂದ ದಬ್ಬಾಳಿಕೆಯಲ್ಲಿ ನಿರತರಾದ ಆಂಧ್ರರಿಗೆಮಾರ್ಗದರ್ಶನಮಾಡಿದಂತಾಯಿತು. ಇದುವರಿವಿಗೆ ಕನ್ನಡಿಗರ ಉದಾರ ಹೃದಯ, ತಾಳ್ಮೆಯ ದುರ್ಲಾಭವನ್ನು ಅನೇಕರು ಯಥೇಚ್ಛವಾಗಿ ಪಡೆದಿದ್ದು, ಮುಂದೆಯೂ ಪಡೆಯಲು ಬಯಸುತ್ತಿರುವರು. ಕರ್ನಾಟಕದ ಬಗ್ಗೆ ಅನೇಕ ಮುಖಂಡರಿಗಿರುವ ತಪ್ಪು ಕಲ್ಪನೆಗಳನ್ನು ನಾವು ನಿವಾರಿಸಬೇಕು. ಆಂಧ್ರರು ಪೂರ್ವ ಕರ್ನಾಟಕದ ಭಾಗಗಳನ್ನು ಕಬಳಿಸಲು ಹೊಂಚು ಹಾಕಿದ್ದಾರೆ ಇದನ್ನು ನಾವು ವಿರೋಧಿಸಲಿಕ್ಕೇ ಬೇಕು

ಸ್ವತಂತ್ರ ಭಾರತದ ನಾಗರೀಕರಾದ ನಾವು ನಮ್ಮ ನ್ಯಾಯವಾದ ಹಕ್ಕುಗಳನ್ನು ಹೊಂದಬೇಕು ಪಂಡಿತ ನೆಹರೂರ ಅದ್ವಿತೀಯ ಹಾಗು ಆದರ್ಶಗುಣಗಳಿಗೆ ಮಾರುಹೋಗಿರುವ ನಾವು ಅವರು ಭಾವಾವೇಶಪೂರಿತರಾಗಿ ತಪ್ಪುಗ್ರಹಿಕೆ ಮಾಡಿಕೊಂಡಿದ್ದರೆ ಅವುಗಳನ್ನು ವಿಮರ್ಶಿಸದೆ-ವಿರೋಧಿಸದೆ ಸುಮ್ಮನೆ ಕೂಡುವುದು ತರವಲ್ಲ. ಇದರಿಂದ ಅವರ ಪಾವಿತ್ರ್ಯಕ್ಕೆ ಭಂಗ ಬರಲಾರದು.

ಆಂಧ್ರದೊಡನೆಯೇ ಕರ್ನಾಟಕ ಪ್ರಾಂತರಚನೆಯೂ ಆಗದಿದ್ದರೆ ನಾಡಿನ ಭವಿಷ್ಯವು ದುರಂತಕ್ಕೊಳಗಾಗುವುದು. ಏಕೀಕರಣ ಕ್ರಿಯಾಸಮಿತಿ-ಕಾಂಗ್ರೆಸ್ ಸಮಿತಿಗಳು ಮುಂದೆ ಕೈಕೊಳ್ಳಬೇಕಾದ ಧೋರಣೆಯನ್ನು ಕೂಡಲೇ ನಿಶ್ಚಯಿಸಬೇಕು. ಕಾಂಗ್ರೆಸ್ ಮಂತ್ರಿವರ್ಗಗಳು ಅಸ್ತಿತ್ವದಲ್ಲಿರುವ ಕಾರಣ-ಕಾಂಗ್ರೆಸ್ ನಿರ್ಣಯಗಳು ಬಂಧನಕಾರಿಯಾಗಬಲ್ಲವು. ಕಾಂಗ್ರೆಸ್ ಸಮಿತಿಯವರು ತಮ್ಮ ಮಂತ್ರಿವರ್ಗಗಳನ್ನು ಉಗ್ರವಾಗಿ-ನಿರ್ಭಯವಾಗಿ ಟೀಕಿಸಲು ಹಿಂಜರಿಯಬಹುದೆಂಬ ಭಯವಿದೆ. ಹಾಗಾದರೆ ನಮ್ಮ ದುರ್ದೈವವೇಸರಿ ಕನ್ನಡಿಗಳ ಏಳಿಗೆಗಾಗಿ ಪ್ರಚಂಡ ಕ್ರಾಂತಿಯನ್ನೇ ಹೂಡಬೇಕಾಗಬಹುದು. ಪೂರ್ವ ಕರ್ನಾಟಕವನ್ನು ಆಂಧ್ರರಿಂದ ರಕ್ಷಿಸುವ ಸಮಸ್ಯೆಯೇ ಬಹಳಮಹತ್ವದ್ದಿದ್ದು ಎಲ್ಲರೂ ಈ ಕಡೆ ತಮ್ಮ ದೃಷ್ಟಿಯನ್ನು ಹಾಕಬೇಕು.

## ಕರ್ನಾಟಕ ಏಕೀಕರಣ ಕ್ರಿಯಾ ಸಮಿತಿಯ ನಿರ್ಣಯ

೨೯ ನೆಯ ರಾತ್ರಿ ಈ ಸಭೆಯು ಕಾಸರಗೋಡಿನಲ್ಲಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಕರ್ನಾಟಕ ಪ್ರಾಂತೀಕರಣದ ಬಗ್ಗೆ ಭಾರತ ಸರ್ಕಾರವು ತಳೆದ ಧೋರಣೆಗೆ ಅಸಮ್ಮತಿ ಸೂಚಿಸಲು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ಎ. ಐ ಸಿ ಸಿ ಬೊಂಬಾಯಿ, ಮದ್ರಾಸ್, ಹಾಗು ಹಿಂದುಸ್ತಾನ ಕಾಯ್ದೆ ಮಂಡಲಗಳಲ್ಲಿನ ತನ್ನ ಪ್ರತಿನಿಧಿಗಳನ್ನು ಹಿಂದೆಗೆದುಕೊಳ್ಳುವಂತೆ ಒತ್ತಾಯಪಡಿಸಬೇಕೆಂದು ನಿರ್ಣಯಿಸಿತು. ಹೊಸಘಟನೆ ಅಸ್ತಿತ್ವದಲ್ಲಿ ಬರುವದರೊಳಗಾಗಿ ಕರ್ನಾಟಕ ಏಕೀಕರಣವಾಗಬೇಕೆಂಬ ಉದ್ದೇಶ ಸಾಧನೆಗೆ ಈ ಉಪಾಯ ಅವಶ್ಯವೆಂದು ಗೊತ್ತುವಳಿಯಲ್ಲಿ ಹೇಳಲಾಗಿದೆ

ಕರ್ನಾಟಕ ಸಾಹಿತ್ಯ ಪರಿಷತ್ತಿಗಾಗಿ (ಶ್ರೀ ತಿರುಮಲೆ ತಾತಾಚಾರ್ಯಶರ್ಮ, ಅಧ್ಯಕ್ಷರು) ಕರ್ನಾಟಕದ ವಿವಿಧ ಭಾಗಗಳಿಂದ ಹತ್ತು ಸಾವಿರ ಜನರು ಹೋಗಿದ್ದರು. ಮೈಸೂರು ಮಂತ್ರಿಗಳಾದ ಶ್ರೀ ಸಿದ್ದಯ್ಯನವರು ಉದ್ಘಾಟನೆ ಮಾಡಿದರು.

ಅಖಿಲ ಭಾರತ ಮಹಿಳಾ ಪರಿಷತ್ತು ಮದ್ರಾಸಿನಲ್ಲಿ ಶ್ರೀಮತಿ ಅನಸೂಯಾಬಾಯಿ ಕಾಳೆಯವರ ಅಧ್ಯಕ್ಷತೆಯಲ್ಲಿ ಡಿಶಂಬರ ಕೊನೆಯವಾರ ನೆರವೇರಿತು ಮಹಾತ್ಮಗಾಂಧಿ, ನೆಹರು, ರಾಜಾಜಿಯವರು ರ ಬ ಸಂದೇಶಗಳನ್ನು ಕಳುಹಿಸಿದ್ದರು

---

**ವಿದ್ಯುತ್ಪೂರೈಕೆ:—** ಜೋಗ ಜಲಪಾತದಿಂದ ಒಂದು ತಿಂಗಳೊಳಗಾಗಿ ಭದ್ರಾವತಿಗೆ ವಿದ್ಯುತ್ಪೂರೈಕೆಯಾಗುವುದು ಇನ್ನು ಕೆಲತಿಂಗಳುಗಳಲ್ಲಿ ಹೊಸಪೇಟೆ ತುಂಗಭದ್ರಾಯೋಜನೆಗೂ ವಿದ್ಯುತ್ಪೂರೈಕೆಯಾಗುವುದು.

## ಪಾಕಿಸ್ತಾನದ ಪ್ರತಿಕ್ರಿಯೆ

"ಪಾಕಿಸ್ತಾನದ ಸೈನ್ಯಗಳನ್ನು ನಾವು ಕಾಶ್ಮೀರದಲ್ಲಿ ಉಪಯೋಗಿಸಿಲ್ಲ ಭಾರತ ಸರ್ಕಾರವು ತಾನು ಮಾಡಿದ ತಪ್ಪುಗಳನ್ನು ಮುಚ್ಚಿಕೊಳ್ಳುವ ಈ ಹೂಲಿ ಎಬ್ಬಿಸಿದೆ. ಪಾಕಿಸ್ತಾನ, ಹಿಂದೂಸ್ತಾನಕ್ಕೆ ಸಂಬಂಧಿಸಿದ ವಾದಗ್ರಸ್ತ ಎಲ್ಲಾ ವಿಷಯಗಳನ್ನು ಸಂಯುಕ್ತ ರಾಷ್ಟ್ರ ಮಂಡಳವು ಬಗೆಹರಿಸಬೇಕು. ನಮ್ಮ ಸೈನ್ಯವು ಎಂಥ ಅಪಾಯ ಸನ್ನಿವೇಶವನ್ನಾದರು ಎದುರಿಸಲು ಸಿದ್ಧವಿದೆ." ಎಂದು ಪಾಕಿಸ್ತಾನ ಸರ್ಕಾರದ ಪ್ರತಿಕ್ರಿಯೆ ಇದ್ದಂತೆ ಕಾಣುತ್ತದೆ, ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು, ಪ್ರೆಸ್‌ಕಾನ್ಫರೆನ್ಸ್‌ದಲ್ಲಿ ಹೀಗೆ ಹೇಳಿರುತ್ತಾರೆ.

## ೧೭ ನೆಯ ಪ್ರಾಂತೀಯ
### ಎಲ್. ಐ. ಎಂ. ರ ಮಹಾಸಭೆ.

ಮದ್ರಾಸ್ ಪ್ರಾಂತದ ೧೭ ನೆಯ L. I. M. ಕಾನ್ಫರೆನ್ಸ್ ಬಳ್ಳಾರಿ ನಗರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಡಾ. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜನವರಿ ೨-೩ ತಾ|| ನೆರವೇರಿತು. ಮದ್ರಾಸ್ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ ಶೆಟ್ಟರು ಸಭೆಯ ಪ್ರಾರಂಭ ಮಾಡುತ್ತಾ ಅದಕ್ಕೆ ಯಶಸ್ಸನ್ನು ಕೋರಿದರು'—ವಿಜ್ಞಾನ-ಶಾಖೆ ಪ್ರದರ್ಶನಗಳ ಏರ್ಪಾಟಿದೆ ಪ್ರದರ್ಶನವನ್ನು ಕಲೆಕ್ಟರ್ ಅನಂತರಾಮನ್‌ರವರು ಪ್ರಾರಂಭಿಸುವರು ವಿಜ್ಞಾನ-ಶಾಖೆಗೆ ದ್ವಾರಕನಾಥರು ಅಧ್ಯಕ್ಷರು ಶ್ರೀ ಮುಖರ್ಜಿಯವರು ಬರಲಿಲ್ಲ. ಮೊದಲನೆಯದಿನ ಎರಡನೆಯ ದಿನದ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು.

## ಶ್ರೀದರಷಷ್ಟಿ

**ದತ್ತ ಜಯಂತಿ:-** ಡಿಶಂಬರು ೨೭ ನೆಯ ತಾ. ಆಂಧ್ರ ನಾಯಕ ಶ್ರೀ ಕಾಳೇಶ್ವರರಾಯರು ಆಶ್ರಮಕ್ಕೆ ಆಗಮಿಸಿ-ಆ ರಾತ್ರೆ ಬಹಿರಂಗ ಸಭೆಯಲ್ಲಿ ಮದ್ಯನಿಷೇಧ-ಖಾದಿ-ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮ ಕುರಿತು ಮಾತಾಡಿದರು. ಶತಚಂಡಿ ಯಜ್ಞವಾಯಿತು. ೨೪ ನೆಯ ತಾ|| ೨೫ ನೆಯ ತಾ|| ಶ್ರೀ ಗೋವಿಂದದಾಸ್ (ಎಂ. ಎಲ್. ಎ.) ವೆಂಕಟೇಶ್ವರರಾವು ಸೋಮಯಾಜುಲು ಟಿ ಜಿ. ತಿಮ್ಮಯ್ಯ ಇವರು ರಾಜಕೀಯ ವಿಷಯಗಳ ಮೇಲೆ ಭಾಷಣ ಕೊಟ್ಟರು. ಹಿಂದೂ ಸನಾತನ ಸಭೆಯು ಶ್ರೀ ರಾ. ವೆಂಕಟರಾಮಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಸಂಜೀವರಾವು, ಶರ್ಮ, ಸಂಜೀವಮೂರ್ತಿರಾವ್—ಶಿವದೀಕ್ಷಿತ, ಶಂಕರಭಟ್ಟ ಗದಗ ಬಿ. ಕೆ. ಗುರುರಾಜರಾಯರು ಮಾತಾಡಿದರು. ಶ್ರೀದತ್ತಗುರುಸ್ವಾಮಿಗಳ ಆಶೀರ್ವಾದ ಫಲ ಮಂತ್ರಾಕ್ಷತೆಗಳಿಂದ ಸಮಾವೇಶ ದಂತವಾಯಿತು.

## ಕರ್ನಾಟಕ ಪ್ರಾಂತ ಕಾಂಗ್ರೆಸ ಸಮಿತಿ

ಪಂಡಿತ ನೆಹರೂರವರು ಕರ್ನಾಟಕ ಪ್ರಾಂತದ ಬಗ್ಗೆ ಕೊಟ್ಟ ಹೇಳಿಕೆಯಿಂದ ಕನ್ನಡ ಜನತೆಯಲ್ಲಾದ ನಿರಾಶೆ, ಆಂಧ್ರಪ್ರಾಂತದ ರಚನೆ ಇದನ್ನು ವಿಮರ್ಶಿಸಿ ನಿರ್ದಿಷ್ಟ ಧೋರಣೆಯನ್ನು ಕೈಗೊಳ್ಳಲು ಕರ್ನಾಟಕ ಪ್ರಾಂತ ಜನರಲ್ ಬಾಡಿ ಸಭೆಯನ್ನು ಕರೆಯಲು ನಿಶ್ಚಯವಾಯಿತು. ಮತ್ತೊಂದು ಗೊತ್ತುವಳಿಯಿಂದ ದಕ್ಷಿಣೀ ಸಂಸ್ಥಾನಗಳು ಜಮಖಂಡೀರಾಜರ ಉದಾಹರಣೆಯಂತೆ, ಬೊಂಬಾಯಿ ಪ್ರಾಂತದಲ್ಲಿ ವಿಲೀನೀಕರಣ ಹೊಂದಬೇಕೆಂದೂ ಠೀವರ್ಮಾನಿಸಲಾಯಿತು.

---

ಕಾಶ್ಮೀರದಲ್ಲಿ ೩ ಸಾವಿರ ದಾಳಿಗಾರರು ಚಕೋರಿ ಮತ್ತು ಮಕವಾಲಗಳ ಮಧ್ಯೆ ಇರುವ ೧೨ ಮೈಲಿ ಪ್ರದೇಶವನ್ನು ಮುತ್ತಿ ಆ ಹಳ್ಳಿಗಳನ್ನು ಸುಟ್ಟರು ಭಾರತ ಸೈನಿಕರು ಅಲ್ಲಿ ನುಗ್ಗಿದಕೂಡಲೆ, ದಾಳಿಗಾರರು ಪಲಾಯನಮಾಡಿದರು. ಸಾವಿರಾರು ನಿರಾಶ್ರಿತರು ಜಮ್ಮುವಿಗೆ ಬಂದಿದ್ದಾರೆ.

ನಿಜಾಂ ಸಂಸ್ಥಾನದಲ್ಲಿ ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಬಹಿಷ್ಕಾರಹಾಕಿ ಸಂಸ್ಥಾನ ಕಾಂಗ್ರೆಸಿನ ಬೇಡಿಕೆಯನ್ನು ಮನ್ನಿಸುವವರೆಗೂ ತಮ್ಮ ನಿರ್ಧಾರವನ್ನು ಬದಲಿಸುವುದಿಲ್ಲವಾಗಿ ವ್ಯಕ್ತಪಡಿಸಿರುವರು.

# The Rayalaseema Bank Ltd., H. O. Bellary.

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,

ಸ್ಥಾಪಿತ : 19

ಮುಖ್ಯ ಕಾರ್ಯಾಲಯ — **ಬಳ್ಳಾರಿ.**

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ**
**ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

**ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಜನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ** ಬಿ. ಎ, ಬಿ. ಎಲ್.,
ಛೇರ್ಮನ್ - ಬೋರ್ಡ್ ಆಫ್ ಡೈರೆಕ್ಟರ್ಸ್.

**ಬಿ. ವಿ ಶೇಷಗಿರಿರಾವು** ಬಿ. ಕಾಂ,
ಕಾರ್ಯದರ್ಶಿ.


---


NAVA BHARAT, BELLARY. Reg. No. M. 4746

**ನವಭಾರತ ಬಳ್ಳಾರಿ.**
**(Nationalist Weekly)**


| ಚಂದಾದರಗಳು. | | Subscription Rates | |
|---|---|---|---|
| ವರ್ಷಕ್ಕೆ | 5-0-0 | One Year | 5 -0—0 |
| 6 ತಿಂಗಳಿಗೆ | 3-0-0 | Six months | 3—0—0 |
| ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | | Subscription will not be accepted for less than 6 months. | |

*To*
SRI........................................
..............................................
..............................................


Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVA RAO

ಜೈಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೧ | ಬಳ್ಳಾರಿ ಜನವರಿ ೧೨ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ

ಸಂಚಿಕೆ ೨ | ಟಿ. ಬಿ. ಕೇಶವರಾವ್.

# 1948 1948

| 31 | 29 | 31 | 30 | 31 | 30 | | | | | | 31 | 31 | 30 | 31 | 30 | 31 |
|---|---|---|---|---|---|---|---|---|---|---|---|---|---|---|---|---|
| ಜನವರಿ | ಫೆಬ್ರವರಿ | ಮಾರ್ಚಿ | ಏಪ್ರಿಲ್ | ಮೇ | ಜೂನ್ | ನ ವ ಭಾ ರ ತ<br>1948 ಕ್ಯಾಲೆಂಡರು | | | | | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ |
| ಗು | ಆ | ಸೋ | ಗು | ಶ | ಮಂ | 1 | 8 | 15 | 22 | 29 | ಗು | ಆ | ಬು | ಶು | ಸೋ | ಬು |
| ಶು | ಸೋ | ಮಂ | ಶು | ಆ | ಬು | 2 | 9 | 16 | 23 | 30 | ಶು | ಸೋ | ಗು | ಶ | ಮ | ಗು |
| [illegible] | ಮಂ | ಬು | ಶ | ಸೋ | ಗು | 3 | 10 | 17 | 24 | 31 | ಶ | ಮಂ | ಶು | ಆ | ಬು | ಶು |
| ಆ | ಬು | ಗು | ಆ | ಮಂ | ಶು | 4 | 11 | 18 | 25 | .... | ಆ | ಬು | ಶ | ಸೋ | ಗು | ಶ |
| ಸೋ | ಗು | ಶು | ಸೋ | ಬು | ಶ | 5 | 12 | 19 | 26 | .... | ಸೋ | ಗು | ಆ | ಮಂ | ಶು | ಆ |
| ಮಂ | ಶು | ಶ | ಮ | ಗು | ಆ | 6 | 13 | 20 | 27 | .... | ಮಂ | ಶು | ಸೋ | ಬು | ಶ | ಸೋ |
| ಬು | ಶ | ಆ | ಬು | ಶು | ಸೋ | 7 | 14 | 21 | 28 | .... | ಬು | ಶ | ಮ | ಗು | ಆ | ಮ |

## ಪಾಕಿಸ್ತಾನದ ಶತೃಗಳು ಒಳಗೇ ಇದ್ದಾರೆ

**[ಸರ್ದಾರ ವಲ್ಲಭಭಾಯಿ ಪಟೇಲರ ಭಾಷಣ]**

ಹಿಂದುಸ್ತಾನವು ಪಾಕಿಸ್ತಾನವನ್ನು ನಾಶಮಾಡಲಿದೆಯೆಂದು ಪಾಕಿಸ್ತಾನದ ಮುಖ್ಯಮಂತ್ರಿಗಳು ಮತ್ತು ಇತರ ಅಧಿಕಾರಿಗಳು ಸಾರಿದ್ದಾರೆ. ಇದು ಬಹಳ ಅಸತ್ಯವಾದುದು. ಪಾಕಿಸ್ತಾನವು ತನ್ನಲ್ಲಿನ ಅಂತಃಕಲಹಗಳಿಂದ ಆರ್ಥಿಕಪರಿಸ್ಥಿತಿಯಿಂದ ಕುಸಿದು ಬೀಳುವುದು. ಅದರ ಶತ್ರುಗಳು ಹಿಂದೂಸ್ತಾನದಲ್ಲಿಲ್ಲ, ಪಾಕಿಸ್ತಾನದಲ್ಲಿಯೇ ಇದ್ದಾರೆ.

ಹಿಂದುಸ್ತಾನದ ಮುಸಲ್ಮಾನರು ಬರೀ ಬಾಯಿ ಮಾತಿನಿಂದ ಭಾರತ ಒಕ್ಕೂಟಕ್ಕೆ ನಿಷ್ಠರಿರುವರೆಂದು ಹೇಳಿದರೆ ಸಾಲದು. ತಮ್ಮ ಕೃತಿಯಲ್ಲಿ ಸಾರಬೇಕು. ಲಕ್ನೋದಲ್ಲಿ ಮುಸಲ್ಮಾನರ ಸಭೆಯು ಕೂಡಿದಾಗ ಕಾಶ್ಮೀರದ ದಾಳಿಗಾರರ ಕೃತಿಯನ್ನು ಖಂಡಿಸುವ ಒಂದು ನಿರ್ಣಯವೂ ಬರಲಿಲ್ಲ. ಕಾಶ್ಮೀರ ಪ್ರಶ್ನೆಯನ್ನೇ ಯಾರೂ ಎತ್ತಲಿಲ್ಲ. ಎರಡು ಕುದುರೆಗಳನ್ನು ಒಂದೇ ಸಲ ಸವಾರಿ ಮಾಡುವುದು ಅಸಾಧ್ಯ ನಿಮಗೆ ಯಾವುದು ಸುಖವೋ ಅದನ್ನಾರಿಸಿಕೊಳ್ಳಿರಿ ನಾನೇನು ಮುಸಲ್ಮಾನರ ಶತೃವಲ್ಲ. ಮುಸಲ್ಮಾನರ ಹಿತದೃಷ್ಟಿಯಿಂದಲೇ ಹೀಗೆ ಹೇಳುತ್ತಿರುವೆನು.

## ಹೈದರಾಬಾದ ಸಮಸ್ಯೆ

ಭಾರತ ಸರ್ಕಾರದ ಪರವಾಗಿ ಹೈದರಾಬಾದದಲ್ಲಿ ನಿಯಾಮಕ ಹೊಂದಿದ ಶ್ರೀ ಕೆ. ಎಂ ಮುನ್ಶಿಯವರಿಗೆ ಇದುವರೆಗೆ ಭಾರತ ಸರ್ಕಾರಕ್ಕೆ ಸೇರಿದ್ದ ರೆಸಿಡೆನ್ಸಿ ಕಟ್ಟಡವನ್ನು ಕೊಡಲು ನಿಜಾಮರು ನಿರಾಕರಿಸಿದ್ದಾರೆ. ೧೫ ದಿನಗಳೊಳಗಾಗಿ ಅದನ್ನು ಖಾಲಿಮಾಡಬೇಕೆಂದು ಸೂಚಿಸಿದ್ದಾರೆ ಪ್ರಾರಂಭದಲ್ಲಿಯೇ ಇತ್ತೆಹಾದುಲ್ ಮುಸ್ಲಿಮೀನರ ಪ್ರೋದ್ಬಲದಿಂದ ಹೀಗೆ ಮಾಡುತ್ತಿರುವರು.

ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದತೀರ್ಥರವರು ಒಂದು ಹೇಳಿಕೆ ಹೊರಡಿಸಿ ಹೈದರಾಬಾದಿನಲ್ಲಿ ಕರನಿರಾಕರಣೆ ಚಳವಳಿಯು ನಡೆಯುವುದೆಂದು ಸೂಚಿಸಿದ್ದಾರೆ.

ಹೈದರಾಬಾದ ಗಡಿಪ್ರದೇಶಗಳ ಹಳ್ಳಿಗಳಲ್ಲಿ ಕೊಲೆ, ಸುಲಿಗೆ ಅತ್ಯಾಚಾರಗಳು ಅವ್ಯಾಹತವಾಗಿ ನಡೆಯುತ್ತಿರುವ ವರದಿಗಳು ಪ್ರತಿನಿತ್ಯವೂ ಬರುತ್ತಲಿವೆ. ಬೆಜವಾಡ ಭಾಗದ ಹಳ್ಳಿಯ ಇಬ್ಬರು ಯುವಕರನ್ನು ಹೈದರಾಬಾದ ಪೋಲೀಸರು ಗುಂಡಿಕ್ಕಿ ಕೊಂದಿರುವರು. ಈ ಬಗ್ಗೆ ಮದ್ರಾಸ್ ಸರ್ಕಾರವು ಹೈದರಾಬಾದ್ ಸರ್ಕಾರಕ್ಕೆ ನಿಷೇಧ ಪತ್ರವನ್ನು ಕಳುಹಿಸಿದೆ.

## ಮೋಟಾರ ಕೆಲಸಗಾರರು

ಬಳ್ಳಾರಿಜಿಲ್ಲಾ ಮೋಟಾರ ಕೆಲಸಗಾರರು 1ರಿಂದ 8ನೆ ತಾ ವರಗೆ ಫೆಡರೇಷನ ವಾರವನ್ನು ಆಚರಿಸಿದರು. 8 ನೆಯ ತಾ ಶ್ರೀ ರಮೇಶರ ಅಧ್ಯಕ್ಷತೆಯಲ್ಲಿ ಶ್ರೀ ಕ. ಸುಬ್ಬರಾಯರು ಮೋಟಾರ ಕೆಲಸಗಾರರ ಕರ್ತವ್ಯಕರ್ಮಗಳನ್ನು ಸೂಚಿಸಿ ಹೇಳಿದರು ಶ್ರೀ ಬಿ ಭೀಮಸೇನಾಚಾರ್ಯರು ನಿರ್ಣಯಗಳನ್ನು ಓದಿ ಹೇಳಿದ ನಂತರ ಅವು ಸರ್ವಾನುಮತದಿಂದ ಸ್ವೀಕೃತವಾದವು. ಅಧ್ಯಕ್ಷರು ಒಳ್ಳೇ ಆವೇಶಯುಕ್ತವಾಗಿ ಮಾತನಾಡಿ ಮಾನದಿಂದ ಜೀವಿಸಲು ಸುಸಂಘಟಿತರಾಗಿ ಮಾಲೀಕರೊಡನೆ ಹೋರಾಟ ಹೂಡತಕ್ಕದ್ದೆಂದು ಹೇಳಿದರು.

### ಸಿ ರು ಗು ಪ್ಪೆ

ಅಸಿಸ್ಟೆಂಟ ತಹಶೀಲ್ದಾರ್ ಶ್ರೀ ಆದಿರಾಜುರವರ ಧರ್ಮಪತ್ನಿ ಶ್ರೀಮತಿ ಸುದರ್ಶನಮ್ಮನವರು ದಿವಂಗತರಾದುದಕ್ಕೆ—ಸರ್ಕಾರಿ ನೌಕರರು ಸಮಾವೇಶವಾಗಿ ದುಃಖ ಸೂಚಕ ನಿರ್ಣಯಮಾಡಿ ಅವರ ಆತ್ಮಶಾಂತಿ ಕೋರಿದರು.

### ಬೆಂಕಿಯ ಅನಾಹುತ

ಎಣ್ಣಿಬಸಾಪುರ ಗ್ರಾಮದ ಹರಿಜನ ಕೇರಿಯಲ್ಲಿ ನೀಲಪ್ಪನ ಗುಡಿಸಲು ಸುಟ್ಟು ಬಹಳ ನಷ್ಟವಾಗಿದೆ ಗ್ರಾಮದ ಸಜ್ಜನರು ಪೀಡಿತ ಕುಟುಂಬಕ್ಕೆ ಸಹಾಯದ ಭರವಸೆ ಇತ್ತಿರುವರೆಂದು ಶ್ರೀ ಚಂ. ಗೌಡರು ತಿಳಿಸುತ್ತಾರೆ.

THE NAVA BHARAT
ನವಭಾರತ

**11th Year of Publication**
Monday, 12th January 1948.

# ಆಹಾರ ಧಾನ್ಯಸಂಗ್ರಹ (ಲೆವಿ) ಸರ್ಕಾರವು ಈಗಲೇ ಕೈಹಾಕಬಾರದು

ಆಹಾರ ಧಾನ್ಯಗಳ ಅಭಾವವಿರುವ ಪ್ರದೇಶಗಳಿಗೆ ಒದಗಿಸಬೇಕೆಂಬ ಉದ್ದೇಶದಿಂದ ಹೆಚ್ಚು ಬೆಳೆದ ರೈತರಿಂದ 'ಲೆವಿ' ಮೂಲಕ ಧಾನ್ಯ ಸಂಗ್ರಹ ಮಾಡುವ ಅಧಿಕಾರವನ್ನು ಸರ್ಕಾರದವರಿಟ್ಟುಕೊಂಡಿದ್ದಾರೆ. ಸರ್ಕಾರದವರು ಖುಲ್ಲಾ ಬಜಾರದಲ್ಲಿ ಬಂದು (open market) ಕೊಳ್ಳಬೇಕಾಗಲಿ, ಗ್ರಾಮಗಳಿಗೆ ಹೋಗಿ ಎಕರೆಗೆ ಇಂತಿಷ್ಟು ಧಾನ್ಯವನ್ನು ಕೊಡಬೇಕೆಂದು ಕೇಳುವ ಪದ್ಧತಿ ಹೋಗಬೇಕು. ಇದರಿಂದ ಬಹಳ ಅಪಾಯವಿದೆ. ಗ್ರಾಮಸ್ಥರು ಸಾಕಷ್ಟು ವಿದ್ವಾಂಸರಲ್ಲ. ಸರಕಾರದ ನಿತ್ಯಬದಲಾವಣೆ ಹೊಂದುತ್ತಿರುವ ನೀತಿ ನಿಯಮಗಳಿಗೆ ಅಪರಿಚಯಸ್ಥರಿರುವರು. ಈ ಕಾರಣ ಜನತೆಗೆ ಬೇಕಾದ ಆಹಾರ ಧಾನ್ಯವೇ ಮಾಯವಾಗಬಹುದು. ಏಪ್ರಿಲ್ ತಿಂಗಳಿಂದ ಭಯಂಕರ ಪರಿಸ್ಥಿತಿಯನ್ನೆದುರಿಸಬೇಕಾದೀತು. ದೊಡ್ಡರೈತನಿದ್ದ ಮಾತ್ರಕ್ಕೆ ಅವನಲ್ಲಿ ಕಾಳಿನ ಹೆಚ್ಚು ಸಂಗ್ರಹವಿದೆಯೆಂದು ಭಾವಿಸುವುದು ತಪ್ಪು. ಅಲ್ಲದೆ ಸರ್ಕಾರಕ್ಕೆ ಅಂಕೆಸಂಖೆಗಳನ್ನೊದಗಿಸುವ ಗ್ರಾಮೋದ್ಯೋಗಿಗಳ ಲೆಕ್ಕಗಳು ಸರಿಯಾಗಿರುವುದಿಲ್ಲ.

ಸರ್ಕಾರದವರು ಈಗಿನ ಪರಿಸ್ಥಿತಿಯಲ್ಲಿ ಮತ್ತೆ 'ಲೆವಿ' ಪ್ರಾರಂಭಿಸಿದರೆ ಅನೇಕ ತಪ್ಪು ಅಭಿಪ್ರಾಯಗಳಿಗೆ ಕಾರಣವಾದೀತು. ಈ ಕಾರಣ ಒಳ್ಳೆಯವಾತಾವರಣವನ್ನು ಮತ್ತೆ ಕಲುಷಿತ ಮಾಡಬಾರದು. ಶಿವಿಲ್ ಸಪ್ಲೇಸ್ ಉದ್ಯೋಗಸ್ಥರಿಗೆ ಸರ್ಕಾರದವರು ಬೇರೆ ನೌಕರಿಗಳನ್ನೊದಗಿಸಬೇಕು.

---

# ರಾಯಲಸೀಮೆ ಮಹಾಸಭೆ

## ಆಂಧ್ರಪ್ರಾಂತೀಕರಣ ಈಗಲೇ ಬೇಡ

ಶ್ರೀ ಹೆಚ್. ಲಿಂಗಾರೆಡ್ಡಿ, ಶ್ರೀ ಎನ್. ಎಂ. ಶಾಸ್ತ್ರಿಗಳು ಕ್ರಿಸ್‌ಮಸ್ ರಜಾದಲ್ಲಿ ದತ್ತಮಂಡಳದಲ್ಲಿನ ಮುಖ್ಯಪ್ರದೇಶಗಳನ್ನು ಸಂಚರಿಸಿ ರಾಯಲಸೀಮೆಯ ಆರ್ಥಿಕಾಭಿವೃದ್ಧಿಯ ಮುಂಚೆ ಆಂಧ್ರಪ್ರಾಂತದ ವಿಭಜನೆಯಾಗಬಾರದೆಂದು ಪ್ರಚಾರಮಾಡಿದರು. ಚಿತ್ತೂರಿನ ರಾಯಲಸೀಮಾ ಬ್ಯಾಂಕಿನಲ್ಲಾದ ಸಭೆಯಲ್ಲಿ ಶಾಸ್ತ್ರಿ ಮತ್ತು ಲಿಂಗಾರೆಡ್ಡಿಯವರು ತಮ್ಮ ಖಂಡಿತಾಭಿಪ್ರಾಯಗಳನ್ನು ತಿಳಿಸಿದರು.

### ರಷ್ಯಾದ ಸರ್ವಾಧಿಕಾರಿ ಸ್ಟ್ಯಾಲಿನ್

ಇವರು ನಿಧನರಾದರೆಂದು 'ಬರ್ನ್' ಪತ್ರಿಕೆಯೊಂದು ಸಾರಿದೆ. ಇದುವರೆಗೆ ಒಂದೆರಡುಸಲ ಈ ವಾರ್ತೆಗಳು ಹುಟ್ಟಿದಾಗ ರಷ್ಯಾದ ಪ್ರಕಟನ ಶಾಖಾಧಿಕಾರಿಗಳು ಆ ಸುದ್ದಿಯು ಸುಳ್ಳೆಂದು ಸಾರಿದ್ದವು. ಈಗ ಅಧಿಕಾರಿಗಳು ಸುಮ್ಮನಿದ್ದಾರೆಂದು ಸದರಿ ಪತ್ರಿಕೆಯು ಪ್ರಕಟಿಸಿದೆ. ಅವರಿಗೆ ಅರ್ಧಾಂಗವಾಯು ಬಂದು ಬಲಪಾರ್ಶ್ವವೆಲ್ಲಾ ನಿಶ್ಚೇತನವಾಗಿರುವುದೆಂದು ಕೆಲಪತ್ರಿಕೆಗಳು ಈಗಾಗಲೇ ಪ್ರಕಟಿಸಿದ್ದವು.

---

ಕರಾಚಿಯಲ್ಲಿ ಮುಸಲ್ಮಾನರು ಕಳೆದ ಮಂಗಳವಾರ ಪಾಕಿಸ್ತಾನ ಕಚೇರಿಯ ಹತ್ತಿರವಿರುವ ಗುರುದ್ವಾರದ ಮೇಲೇರಿಹೋಗಿ 72 ಶಿಖ್ಖರನ್ನು ಕೊಂದರು ನಗರದ ಹಿಂದೂಗಳ ಅಂಗಡಿಗಳು ಲೂಟಿಮಾಡಲ್ಪಟ್ಟು ಸುಡಲಾದವು.

## ಬಳ್ಳಾರಿ ಜಿಲ್ಲಾ ಆಂಧ್ರರಾಜಕೀಯ ಸಭೆಯ ತೀರ್ಮಾನಗಳು.

೧) ಆಂಧ್ರಪ್ರಾಂತ ನಿರ್ಮಾಣೋದ್ದೇಶದಿಂದ ಸರ್ಕಾರು ಜಿಲ್ಲೆಗಳ ಮತ್ತು ರಾಯಲಸೀಮಾ ಜಿಲ್ಲೆಗಳವರ ಸಮಾವೇಶನಡೆಸಿ ಆರ್ಥಿಕಾಭಿವೃದ್ಧಿಗೆ ಕಾರಣವಾದ ಭೈರವನತಿಪ್ಪ, ಕುಮುದ್ವತಿ, ಪೆನ್ನಾರು, ಗಂಡಿಕೋಟೆ, ಸಂಗಮೇಶ್ವರ, ತುಂಗಭದ್ರ ಹೈಲೆವೆಲ್ ಛಾನಲ್ ನಿರ್ಮಾಣಕ್ಕೆ ಪ್ರಯತ್ನಿಸಬೇಕು.

೨) ರಾಯಲಸೀಮೆ ಜಿಲ್ಲೆಗಳಿಗೆ ಪ್ರತ್ಯೇಕ ಕಾಂಗ್ರೆಸ್ ಸಂಘವಿರಬೇಕು.

೩) ಬಳ್ಳಾರಿಜಿಲ್ಲೆಯ ಸರಹದ್ದು ನಿರ್ಣಯದಲ್ಲಿ ಕೇಳ್ಕರ ಅವಾರ್ಡನ್ನು ತಪ್ಪದೆ ಮಾನ್ಯ ಮಾಡಬೇಕು.

೪) ಈಗಿನ ಮಂತ್ರಿವರ್ಗದವರು ಕಾಂಗ್ರೆಸ್ ಸಂಸ್ಥೆಗಳವರನ್ನು ದುರ್ಲಕ್ಷಿಸುತ್ತಿರುವುದು ಗಮನಕ್ಕೆ ಬಂದಿರುವ ಕಾರಣ ಇನ್ನುಮೇಲೆ ಹಾಗೆ ಮಾಡಬಾರದೆಂದು ಮಂತ್ರಿವರ್ಗಕ್ಕೆ ಸೂಚಿಸಲಾಯಿತು.

ದೀನಜನ ಸೇವಾಸಂಘದ ವಾರ್ಷಿಕೋತ್ಸವವು ನಡೆದು ತಾಲೂಕಿಗೆ ಸಂಬಂಧಿಸಿದ ಕೆಲತೀರ್ಮಾನಗಳಾದವು

### ದ್ವಿತೀಯ ಕಾಂಗ್ರೆಸ್ ವಿದ್ಯಾರ್ಥಿ ಸಮ್ಮೇಳನ

ಕೊಪ್ಪಳಗಿಯಲ್ಲಿ ಪ್ಲೇಗಿನಕಾರಣ ದ್ವಿತೀಯ ಕಾಂಗ್ರೆಸ್ ವಿದ್ಯಾರ್ಥಿ ಸಮ್ಮೇಳನ ರೈತರ ಮತ್ತು ರಾಜಕೀಯ ಪರಿಷತ್ತನ್ನು ಅನಿಯಮಿತ ಕಾಲದವರೆಗೆ ಮುಂದೂಡಲಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

**ಕಾಶ್ಮೀರ :**—ಹೈದರಾಬಾದ ಸಮಸ್ಯೆಗಳ ಕಡೆ ಹೊರಳಿ ಕಾಶ್ಮೀರ ಸಮಸ್ಯೆಯು ನಿರೀಕ್ಷಿಸಿದ್ದಕ್ಕಿಂತ ಬೇಗನೆ ಬಿಡಿಸಲ್ಪಡಬಹುದೆಂದೂ ಹೈದರಾಬಾದು ತನ್ನ ಸರಹದ್ದಿನಲ್ಲಿ ವಿಷಯುಕ್ತ ವಾತಾವರಣವನ್ನು ಕಲ್ಪಿಸಿದರೆ ಅದರ ದುಷ್ಪರಿಣಾಮವು ಹಿಂದುಸ್ಥಾನದಲ್ಲಿನ 4½ ಕೋಟಿ ಮುಸಲ್ಮಾನರ ಮೇಲೆ ಆಗದಿರದು ಎಂದು ಸರ್ದಾರಪಟೇಲರು ಹೇಳಿದರು.

## ಸರ್ದಾರರ ಭಾಷಣ

ಆಸಾಮಿಗಳು ತಮ್ಮ ಮತಭೇದಗಳನ್ನೆಲ್ಲ ಮರೆತು ಸಾಮ್ಯವಾದ, ಸಮಾಜವಾದ ಎಂಬ ವಾದ ವಿವಾದಗಳಲ್ಲಿ ಬೀಳದೆ ತಮ್ಮ ಪ್ರಾಂತದ ಉತ್ಕರ್ಷಕ್ಕಾಗಿ ತಮ್ಮಲ್ಲಿಯ ಸರ್ವವಿಧದ ಸಂಪತ್ತನ್ನು ಉಪಯೋಗಿಸುವಲ್ಲಿ ಮಗ್ನರಾಗಬೇಕು. ನಮಗೆ ದೊರೆತ ಸ್ವಾತಂತ್ರ್ಯವನ್ನು ಎಲ್ಲರೂ ಐಕ್ಯದಿಂದ ಕಾಪಾಡಬೇಕು. ಎಂದು ಸರ್ದಾರ ಪಟೇಲರು ಆಸಾಮಿನ ಶಿಲಾಂಗದಲ್ಲಿ ಭಾಷಣ ಮಾಡಿದರು

## ಕಾಶ್ಮೀರ ಪ್ರಶ್ನೆ

ಅಮೆರಿಕಾದ ಭದ್ರತಾ ಮಂಡಲದಲ್ಲಿ ಕಾಶ್ಮೀರದಲ್ಲಿ ಪಾಕಿಸ್ತಾನವು ತನ್ನ ಕೈವಾಡವನ್ನು ತೋರಿಸಿ ಸೈನಿಕರನ್ನು ಪ್ರಯೋಗಿಸುವದನ್ನು ತಪ್ಪಿಸಬೇಕೆಂದು ಹಿಂದೂಸ್ತಾನ ಸರ್ಕಾರಪರವಾಗಿ ವಾದಿಸಲು ಸರ್-ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಇವರು ಕಾಶ್ಮೀರದಲ್ಲಿ ೫ ವರ್ಷ ದಿವಾನರಾಗಿದ್ದರು.] ಇವರ ಅಧ್ಯಕ್ಷತೆಯಲ್ಲಿ ಶಿಷ್ಟಮಂಡಳವೊಂದು ಹೊರಟಿದೆ. ಪಾಕಿಸ್ತಾನದ ಪರವಾಗಿ ವಿದೇಶ ಮಂತ್ರಿಗಳಾದ ಸರ್ ಜಫರುಲ್ಲಾಖಾನರು ಹೋಗಲಿರುವರು. ಭದ್ರತಾ ಮಂಡಲವು ಈ ತಿಂಗಳ ೧೫ ನೆಯ ತಾ. ವರೆಗೆ ಅವಧಿಯನ್ನು ಕೊಟ್ಟಿದೆ. ಭದ್ರತಾ ಮಂಡಳದ ಕಾರ್ಯವನ್ನು ಕೆಡಿಸುವ ಯಾವ ಅಚಾತುರ್ಯ ಕಾರ್ಯವನ್ನೂ ಮಾಡಬಾರದೆಂದು ಭದ್ರತಾ ಮಂಡಲದ ಅಧ್ಯಕ್ಷರು ಪಾಕಿಸ್ತಾನ ಭಾರತಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

**ಕಾಶ್ಮೀರದ ಹೋರಾಟ :**—ಈ ವಾರ ನಾಲ್ಕು ಸಾವಿರ ದಾಳಿಗಾರರು ಸಮವಸ್ತ್ರಗಳೊಂದಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ನವಶೇರಾ ಬಳಿಯಲ್ಲಿ ದಾಳಿಮಾಡಿದರು. ಭಾರತ ಸೈನಿಕರು ಅವರನ್ನೋಡಿಸಿದರು. ಹಗಲು ಹೊತ್ತಿನಲ್ಲಾದ ದಾಳಿಯೆಂದರೆ ಇದೇ ಪ್ರಥಮವಾಗಿದೆ.

ನವಭಾರತಕ್ಕೆ ಚಂದಾದಾರರಾಗಿರಿ

# ಉಪ್ಪರಿಗೆ ಬೀದಿ

ಬ್ರಿಟಿಶ ಸಂಸ್ಥೆಗೆ ಮಾಡಲಾದ ಸೂಚನೆಗಳನ್ನು ಕಾರ್ಯ ರೂಪಕ್ಕೆ ತಂದರೆ ಇಂಗ್ಲೆಂಡಿನಲ್ಲಿ ಉಪ್ಪರಿಗೆಯಿಂದ ಉಪ್ಪರಿಗೆಗೆ ಹರಿವ ರಸ್ತೆಗಳು ತಯಾರಾಗಬಹುದೆಂದು ಹೇಳಲಾಗಿದೆ. ಈ ರಸ್ತೆಯು ನೂರಡಿ ಎತ್ತರದ ಅಂಗಡಿ ಮನೆಗಳ ಮೇಲೆ ರಚಿಸಲ್ಪಡಬಹುದು. ಅಷ್ಟ ರಸ್ತೆ ಬರುವಲ್ಲಿ ಸೇತುಕಟ್ಟಬಹುದು.

ಇದರಿಂದ ಬಹಳ ಅನುಕೂಲವಿದೆ. ಇದೆಂದೂ ಭೂಗತವಾದ ಉಪಮಾರ್ಗ, ಜಲಮಾರ್ಗ, ವಾಯುನಾಳ, ಕಾಲುವೆ ಮುಂತಾದವುಗಳಿಗೆ ಯಾವ ಬಾಧಕವನ್ನೂ ಉಂಟುಮಾಡದು; ಟೆಲಿಫೋನ್ ಮುಂತಾದುದರ ವೈದ್ಯುತ ತಂತಿಗಳಿಗೂ ಇದರಿಂದ ತೊಂದರೆ ಸಂಭವಿಸದು. ಈ Roof Top Roadways ಮನೆಮೇಲಿನ ದಾರಿಗಳ ರಚನೆಯಿಂದ ಭೂಮಿಯ ಮೇಲೆ ಎತ್ತರಿಸಿದ ರಸ್ತೆ ಮುಂತಾದವನ್ನು ರಚಿಸುವ ಅಗತ್ಯ ತಪ್ಪುತ್ತದೆ. ದೊಡ್ಡ ದೊಡ್ಡ ವ್ಯಾಪಾರ ಗೃಹಗಳಿಗೆ ವಾಹನಾದಿಗಳಿಂದ ಅವಘಡ ಉಂಟಾಗಿ ಆಗಾಗ ಆಗುವ ಸಾಮಾನು ಮುಂತಾದ್ದರ ನಷ್ಟ ಉಂಟಾಗುವುದು ಇಲ್ಲವಾಗುತ್ತದೆ.

ಜೀವನ ಸೌಕರ್ಯ ಹೆಚ್ಚಿಸಲು ವಿಜ್ಞಾನವಿಂದು ಬಹಳ ದುಡಿದಿದೆ. (ಅದರ ನಾಶಕ್ಕೂ ಹಾಗೇ ದಾರಿ ಹಾಕಿಕೊಟ್ಟಿದೆ.) ಮಹಡಿಯಿಂದ ಮಹಡಿಗೆ ದಾಟಿಕೊಂಡು "ಕಿಂಗ್ ಕಾಂಗ್" ಇಲ್ಲವೆ ಕರಿಮೊಗದ ಮಂಗ (ಮುಶ್ಯ) ತಿರುಗಾಡಿದಂತೆ ಮನುಷ್ಯರು ತಿರುಗಾಡಲು ಅನುಕೂಲಮಾಡಿಕೊಳ್ಳುವುದೊಂದು ಸೋಜಿಗವಲ್ಲವೇ? ಒಂದು ಸುಖವೆನಿಸಿದರೆ, ಅದಕ್ಕಿಂತ ಮುಂದಿನ ಹೆಚ್ಚಿನ ಸುಖಯಾವುದು? ಎಂದು ಮನುಷ್ಯ ಹುಡುಕುತ್ತಾನೆ. ಇದು ಅದಕ್ಕೊಂದು ಉದಾಹರಣೆ.

# ಹಣ ಎಣಿಸುವ ಯಂತ್ರ

ನಿನ್ನದೇ ಆದರೆ ಎಲ್ಲ ಹಣ, ಬಹಳ ಬಹಳ ರೊಕ್ಕ ಎಣಿಸುತ್ತ ಕೂತುಕೊಳ್ಳುವುದೆಂದರೆ ಸ್ವರ್ಗಕ್ಕೆ ಮೂಬೆರಳು ಮಾತ್ರ ಕಡಿಮೆಯೆನಿಸುವುದು ಸಹಜ, ಆದರೆ ಒಂದು ಬ್ಯಾಂಕಿನಲ್ಲಿ ಕುಳಿತು ಇನ್ನೊಬ್ಬರ ರೊಕ್ಕ ಎಣಿಸುತ್ತ ಕುಳಿತುಕೊಳ್ಳುವುದೆಂದರೆ ಯಾರಿಗೂ ಬೇಡ ಎನಿಸುವುದಿಲ್ಲವೇ?

ಈ ಬೇಜಾರದ ಕೆಲಸವನ್ನು ಸುಲಭ ಮಾಡಲು ವಾಷಿಂಗ್‌ಟನ್ನಿನಲ್ಲಿಯ ಥಾಮಸ್ ಈ ಹೇಸ್ ಎಂಬುವನು ನೋಟುಗಳನ್ನು ಪ್ರತ್ಯೇಕಿಸುವ ಮತ್ತು ಎಣಿಸುವ ಒಂದು ಯಂತ್ರವನ್ನು ಕಂಡು ಹಿಡಿದಿದ್ದಾನೆ. ಅದನ್ನು ಅವನು ೨೪.೨೫,೩೧೮ ನೆಯ ನಂಬರಿನಲ್ಲಿ "ಪೇಟೆಂಟ್" ಮಾಡಿಸಿದ್ದಾನೆ.

ಈ ಯಂತ್ರಕ್ಕೆ ಐದು ಭಾಗಗಳಿವೆ. ಅವು ೧, ೨, ೫, ೧೦ ಮತ್ತು ೨೦ ಡಾಲರ್ ನೋಟುಗಳನ್ನು ಕ್ರಮವಾಗಿ ಎಣಿಸುತ್ತವೆ. ಪ್ರತಿಯೊಂದು ಭಾಗದ ಮೇಲೂ ಒಂದು ಜೊತೆ ಉರುಳುಗೋಲು ಇರುತ್ತದೆ. ಅವುಗಳ ನಡುವೆ ಯಂತ್ರವು ಮಿಶ್ರ ನೋಟುಗಳನ್ನು ಒಳಸೆಳೆದುಕೊಳ್ಳುತ್ತದೆ. ಅನಂತರ ಯಂತ್ರವು ತನ್ನ ವಿಭಾಗದ ಮೇಲಿರುವ ರಿಜಿಷ್ಟರಿನ ಮೇಲೆ ತಾನೇತಾನಾಗಿ ಎಣಿಸಿ ಒಗೆಯುತ್ತದೆ. ಅದೇಕಾಲದಲ್ಲಿ ಯಂತ್ರದ ತುದಿಯಲ್ಲಿರುವ ಕೂಡಿಸುವ ವಿಭಾಗವು ಅವುಗಳ ಬೆಲೆಯನ್ನು ಕೂಡಿಸಿ ತೋರುತ್ತದೆ.

ಕೊನೆಯಲ್ಲಿ ಎಲ್ಲ ಬಿಲ್ಲು (ನೋಟು ಇತ್ಯಾದಿ) ಗಳೂ ಗಣಿಸಲ್ಪಟ್ಟು ಒಟ್ಟು ಒಂದು ಮೊತ್ತವಾಗಿ ತೋರಿಸಲಾಗುತ್ತದೆ.

[ಕರ್ಮವೀರ]

# ಹಣವಾಳು ರೈತರ ಸಭೆ

ಕುರುಗೋಡು ಶ್ರೀ ಚಂದ್ರಶೇಖರಾಚಾರ್ಯರ ಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಈ ಗ್ರಾಮದಲ್ಲಿಯು ಮಾಸೂಲು ಕೇವಲ ೪ ತಿಂಗಳಿಗೆ ಬಂದಿರುವಕಾರಣ ಕಾಳನ್ನು ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇರಬೇಕೆಂದಾಯಿತು. ಕುರುಗೋಡು ಜಿಲ್ಲಾ ಪರಿಷತ್ತಿನ ನಿರ್ಣಯಗಳನ್ನು ಸಂಪೂರ್ಣವಾಗಿ ಇದು ಅಮೋದಿಸುತ್ತದೆ.

# ಉತ್ಪಾದನೆ ಹೆಚ್ಚಿಸಬೇಕು

## ಕರ್ನಾಟಕ ವೆಜಿಟೆಬಲ್ ಆಯಿಲ್ ಅಂಡ್ ರಿಫಾಯನರೀಸ್ ಲಿ., ಹೊಸಪೇಟೆ.

**[ದ್ವಿತೀಯ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ವೈ. ಮಹಾಬಲೇಶ್ವರಪ್ಪನವರ ಭಾಷಣ]**

[ಕರ್ನಾಟಕ ವೆಜಿಟಬಲ್ ಆಯಿಲ್ಸ್ ಅಂಡ್ ರಿಫಾಯನರೀಸ್ ಲಿಮಿಟೆಡ್, ಹೊಸಪೇಟೆ ಕಂಪನಿಯ ಚೇರ್‌ಮನ್‌ರಾದ ರಾವಬಹದ್ದೂರ ಶ್ರೀ ವಾಯ. ಮಹಾಬಲೇಶ್ವರಪ್ಪನವರು ೩೧ ನೆಯ ಡಿಸೆಂಬರ್ ೧೯೪೭ ಕ್ಕೆ ಜರುಗಿದ ಎರಡನೆಯ ವಾರ್ಷಿಕ ಸಾಧಾರಣ ಸಭೆಯಲ್ಲಿ ಮಾಡಿದ ಭಾಷಣವು]

### ಎಲ್ಲ ರೀತಿಯಲ್ಲೂ ಉತ್ಪಾದನೆ ಹೆಚ್ಚಬೇಕು

ಮಹನೀಯರೇ, ವಾರ್ಷಿಕ ಸಾಧಾರಣ ಸಭೆಯ ಪ್ರಾರಂಭದಲ್ಲಿ ಕಂಪನಿಯ ಚೇರಮನ್ನರು ಪ್ರಾಸ್ತಾವಿಕ ಭಾಷಣ ಮಾಡುವ ರೂಢಿಯಂತೆ ನಾನು ನಾಲ್ಕು ಮಾತುಗಳನ್ನು ಹೇಳ ಬಯಸುತ್ತೇನೆ. ಇಂದಿನದು ನಮ್ಮ ಕಂಪನಿಯ ಎರಡನೆಯ ವಾರ್ಷಿಕ ಸಭೆ. ಹೋದಸಲದ ವಾರ್ಷಿಕ ಸಭೆಯಿಂದ ಇಂದಿನವರೆಗೆ ಪ್ರಪಂಚದಲ್ಲಿ ನಾನಾ ತರಹದ ಮಿಂಚಿನ ಘಟನೆಗಳಾಗಿವೆ. ಅವುಗಳಲ್ಲಿ ಮಹತ್ವದ್ದೆಂದರೆ ಕಳೆದ ಅಗಷ್ಟ ೧೫ ನೇ ತಾರೀಕಿನಿಂದ ನಮ್ಮ ದೇಶವು ಸ್ವಾತಂತ್ರ್ಯ ಸಂಪಾದಿಸಿದುದು.

ಕಳೆದ ಮಹಾ ಯುದ್ಧದ ಕಾಲದಿಂದ ಮತ್ತು ಅನಂತರ ಮನುಷ್ಯ ಜೀವನದ ಎಲ್ಲ ವ್ಯವಹಾರಗಳಲ್ಲಿ ಸರ್ಕಾರವು ಕೈಹಾಕಿದ್ದಲ್ಲದೆ ನಿಯಂತ್ರಣ ಮಾಡಿದ್ದರಿಂದ ಕಾರಣವಿಲ್ಲದ ಅಡಚಣಿಗಳು, ಕಳ್ಳಬಜಾರ, ಲಂಚಬಡಕತನ ಹೆಚ್ಚಾಗಿ ಸಾಮಾನ್ಯ ಜನರ ನೀತಿಯ ಮಟ್ಟಲು ಕೆಳಗೆ ಬಂದಿವೆ. ನಿಯಂತ್ರಣಗಳಲ್ಲಿಯ ಲೋಪದೋಷಗಳನ್ನು ನಮ್ಮ ಹಿರಿಯ ಮುತ್ಸದ್ದಿಗಳು ಒಪ್ಪಿ, ಅವುಗಳನ್ನು ತೆಗೆದುಹಾಕಲು ಪ್ರಾರಂಭಿಸಿರುವದು ಸಂತೋಷದ ಸಂಗತಿಯಾಗಿದೆ ಸ್ವತಂತ್ರತೆ ನಮಗೆ ದೊರೆತಿದ್ದರೂ ಅದರ ಫಲ ಸಿಗಬೇಕಾದರೆ ಸಾಕಷ್ಟು ಕ್ರಮವೂ ಮತ್ತು ವೇಳೆಯೂ ಬೇಕು. ಎಲ್ಲ ರೀತಿಯಿಂದಲೂ ಉತ್ಪಾದನೆಯನ್ನು ಹೆಚ್ಚಿಸಿ ಸಾಮಾನ್ಯ ಜನರ ಜೀವನದ ತರಗತಿಯನ್ನು ಹೆಚ್ಚಿಸಬೇಕಾಗಿದೆ. ಜನರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ತಿಳಿಸಿ ಹೇಳಿ ಕಾರ್ಯ ಮಾಡಿ ತೋರಿಸುವ ನಾಯಕರು ಬೇಕಾಗಿದ್ದಾರೆ. ನಾವು ಸ್ವಾತಂತ್ರ್ಯಕ್ಕೆ ಯೋಗ್ಯರೆಂಬ ಬಗ್ಗೆ ಮತ್ತು ಸ್ವತಂತ್ರತೆಯಿಂದ ದೇಶದಲ್ಲಿ ಎಲ್ಲ ರೀತಿಯಿಂದ ಸಮೃದ್ಧಿ ಮಾಡುವ ಶಕ್ತಿಯುಳ್ಳವರೆಂಬ ಬಗ್ಗೆ ಇಡೀ ಜಗತ್ತಿಗೆ ತೋರಿಸಿಕೊಡಬೇಕಾಗಿದೆ.

### ಕನ್ನಡನಾಡು ಸ್ವತಂತ್ರವಾಗಬೇಕು.

ರಾಜಕೀಯ ವಿಷಯಗಳನ್ನು ನಾವು ಚರ್ಚಿಸಲು ಇಲ್ಲಿ ಕಲೆಯದಿದ್ದರೂ ಕೈಗಾರಿಕೆ ಉದ್ಯೋಗ ಮತ್ತು ವ್ಯವಹಾರಗಳ ಬೆಳವಣಿಗೆಗೆ ಭದ್ರವಾದ ಸರಕಾರ, ಮತ್ತು ಸರ್ಕಾರದ ನಿಯೋಜಿತ ಧೋರಣೆಗೆ ಇವುಗಳು ಅವಶ್ಯ ಬೇಕು. ಕಳೆದ ಎರಡು ಮೂರು ವರ್ಷಗಳಲ್ಲಿ ನಮ್ಮ ಮತ್ತು ನೆರೆಹೊರೆಯ ಪ್ರಾಂತ್ಯಗಳಲ್ಲಿಯ ಮತ್ತು ಸಂಸ್ಥಾನಗಳಲ್ಲಿಯ ರಾಜಕೀಯ ವಾತಾವರಣವನ್ನು ನೋಡಿದರೆ, ನಮ್ಮ ದೇಶದಲ್ಲಿ ಭಾಷಾವಾರ ಪ್ರಾಂತ ಆದ ಹೊರತು ಸೌಹಾರ್ದತೆಯುಳ್ಳ ಸರ್ಕಾರವು ಭದ್ರವಾಗಿ ಕಾರ್ಯನಿರ್ವಹಿಸಲಾರದೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಭಾಷಾವಾರ ಪ್ರಾಂತಗಳಾಗಬೇಕಾಗಿದೆ. ಅದರಲ್ಲಿಯ ತುಂಡುತುಂಡಾದ ನಮ್ಮ ಕನ್ನಡನಾಡಿಗೆ ಸ್ವತಂತ್ರ

### ಈ ಗೊಂದಲದಲ್ಲಿ

# ಬಡ ಉಪಾಧ್ಯಾಯರನ್ನಾರು ಕೇಳಬೇಕು ?

ಆಗಸ್ಟ 15 ರ ನಂತರ ಬಂದ ಸ್ವಾತಂತ್ರ್ಯದಿಂದ ಗೊಂದಲವೇ ಉಂಟಾಗಿದೆ ಉತ್ತರ ಹಿಂದೂಸ್ತಾನದಲ್ಲಿ ಜಾತೀಯ ಜಗಳದಿಂದ ಹಿಂದೂ ಮುಸಲ್ಮಾನ ಶಿಖ್ ರಕ್ತವು ಹರಿಯುತ್ತಿದೆ. ಸಂಸ್ಥಾನದರಸರು ತಮ್ಮ ನಿರಾಂಕುಶಾಧಿಕಾರವನ್ನುಳಿಸಿಕೊಳ್ಳಲು ಪ್ರಜೆಗಳ ಆಂದೋಳನಗಳನ್ನು ಅತಿಕ್ರೂರವಾಗಿ ಬಗ್ಗುಬಡೆಯುತ್ತಿರುವರು. ಪಾಕಿಸ್ತಾನದಿಂದ ಹಿಂದೂಸ್ಥಾನಕ್ಕೆ ಬಂದ 50 ಲಕ್ಷ ಹಿಂದೂಗಳ ನಿವೇಶನ ಜೀವಿತಕ್ಕೆ ಭಾರತ ಸರ್ಕಾರವು ಏರ್ಪಡಿಸಬೇಕಾಗಿದೆ. ಹೀಗಾಗಿ ಭಾರತ ಸರ್ಕಾರವು ಹಳ್ಳಿಗಳ ಪ್ರಗತಿಗೆ ಸದ್ಯ ನೋಡುವಂತೆಯೇ ಇಲ್ಲ.

ಮದ್ರಾಸ್ ಪ್ರಾಂತದಲ್ಲಿ ಸರ್ಕಾರವು ಪೂರ್ವಾಲೋಚನೆಯಿಲ್ಲದೆ ಮದ್ಯನಿಷೇಧವನ್ನು ಅತಿ ದೊಡ್ಡ ಕ್ಷೇತ್ರದಲ್ಲಿ ಆರಂಭಿಸಿತು. ಈಗ 16 ಜಿಲ್ಲೆಗಳಲ್ಲಿ ಶಾಸನವು ಜಾರಿಯಲ್ಲಿದೆ ಈ ಕಾರಣ ಮದ್ರಾಸ್ ಸರ್ಕಾರವು 18 ಕೋಟಿ ರೂ ಕಳೆದುಕೊಳ್ಳಲಿದೆ. ಈ ಸರ್ಕಾರವು ರಾಜ್ಯಾಡಳಿತ ಸೂತ್ರಗಳನ್ನು ವಹಿಸಿದಮೇಲೆ ಎಲ್ಲಾ ತರದ ಸರ್ಕಾರಿನವಕರರಿಗೂ ಸಂಬಳ ಅಲೋಯನ್ಸ್ ಹೆಚ್ಚಿಸಿತು. ಹೆಚ್ಚುತ್ತಿರುವ ಜೀವನಸಮಟ್ಟದಲ್ಲಿ ತಮಗೆ ಹೊಟ್ಟೆತುಂಬುವದಿಲ್ಲೆಂದು ಸರ್ಕಾರಿ ನವಕರರೂ ಕೂಡ ಸಂಪ್ರಮಾಡಿದರು ಹೀಗಾಗಿ ಎಲ್ಲರ ಸಂಬಳ ಅಲೋಯನ್ಸ್‌ಗಳೂ ಹೆಚ್ಚಿದವು. ಉಪಾಧ್ಯಾಯರ ಸಂಬಳ-ಅಲೋಯನ್ಸ್‌ಗಳನ್ನು ಹೆಚ್ಚಿಸಿದೆವೆಂದು ಸರ್ಕಾರದವರು ಪ್ರಕಟಿಸಿದರು.

ಒಂದನೆಯುದೆಂದರೆ- ಇತರ ನವಕರರಂತೆ ಇವರಿಗೆ ಸಂಬಳ ಅಲೋಯನ್ಸ್‌ಗಳು ಹೆಚ್ಚಿಸಲಾಗಲಿಲ್ಲ. ಪ್ರಾಥಮಿಕ ಶಾಲೋಪಾಧ್ಯಾಯರ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಇವರು ಲೇಬರ್—ಮುನಿಸಿಪಾಲಿಟಿ ಮಿಶನ್ ಬೋರ್ಡ ವ್ಯವಸ್ಥಾಪಕರಲ್ಲಿ ಹರಿದು ಹಂಚಿಹೋಗಿರುವರು. ಒಂದೊಂದು ಮ್ಯಾನೇಜಮೆಂಟಿನವರು ಈ ಉಪಾಧ್ಯಾಯರನ್ನು ಒಂದೊಂದು ರೀತಿಯಲ್ಲಿ ನಡೆಸಿಕೊಳ್ಳುತ್ತಿರುವರು. ಗ್ರಾಂಟ್ ಶಾಲೆಗಳವರದಂತೂ ಯಾವ ವಿಷಯದಲ್ಲೂ ಸುಧಾರಿಸಿಲ್ಲ. ಸರ್ಕಾರದವರು ಸೂಚಿಸಿದಂತೆ ಪ್ರೈವೇಟ್ ಮ್ಯಾನೇಜುಮೆಂಟುಗಳವರು ಅನೇಕ ಕಡೆಗಳಲ್ಲಿ ಸಂಬಳ—ಅಲೋಯರ್ನ್ಸ್ ಹೆಚ್ಚಿಸಿಲ್ಲ. ಈ ಹೊಸ ಹೆಚ್ಚಳದ ಮಾತು ಹಾಗಿರಲಿ. ಅನೇಕ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಹಿಂದಿನ ಇಂಕ್ರಿಮೆಂಟ್‌ಗಳನ್ನೇ ಕೊಡದೆ ನಿಲ್ಲಿಸಿರುತ್ತಾರೆ. ಕೇಳಿದರೆ ಯಾವುದೋ ಕುಂಟ ನೆಪವನ್ನು ಹೇಳುತ್ತಾರೆ. ಎಷ್ಟೋ ಬೇಡಿಕೆಯ ಪತ್ರಗಳನ್ನು ಕಳುಹಿಸಿ ಆಫೀಸುಗಳ ಮುಂದೆಬಂದು ಶಂಖಬಜಾಯಿಸಿದರೂ ಕಿವಿಕೇಳದ ಕಿವುಡರಂತಿದ್ದಾರೆ.

ಹೀಗಾದಲ್ಲಿ ದೇಶದ ಎಲ್ಲಾ ಪ್ರಗತಿಗೂ ಕಾರಣವಾದ ವಿದ್ಯಾಭ್ಯಾಸದುದ್ದೇಶವು ಹೇಗೆ ಪ್ರತಿಫಲಿಸಬೇಕು ಉಪಾಧ್ಯಾಯರ ಹೊಟ್ಟೆಯೇ ತುಂಬದೆ ಅವರನ್ನೆ ಹೀನ ಸ್ಥಿತಿಯಲ್ಲಿಟ್ಟರೆ ಶಾಲೆಗಳು ಮುಂದಕ್ಕೆ ಹೇಗೆ ಬರಬೇಕು.? ಸ್ವಾತಂತ್ರ್ಯ ಸಂಪಾದಿಸಿದ ದೇಶಗಳು ಪ್ರಥಮದಲ್ಲಿ ವಿದ್ಯಾಭ್ಯಾಸಕ್ಕೆ ಗಮನಕೊಟ್ಟು ನಿರಕ್ಷರತೆಯನ್ನು ಹೋಗಲಾಡಿಸಲು ಕೋಟಿಗಟ್ಟಲೆ ರೂ.ಗಳನ್ನು ಕಾದಿರಿಸಿದವು. ನಮ್ಮ ಸರ್ಕಾರದವರು ಇತರ ಎಲ್ಲಾ ವಿಷಯಗಳ ಕಡೆ ಗಮನಕೊಟ್ಟು, ವಿದ್ಯಾಭ್ಯಾಸದ ಕಡೆಗೇ ನಿರ್ಲಕ್ಷ್ಯದಿಂದಿದ್ದಾರೆ. ಇದು ಪ್ರಜಾ ಸರ್ಕಾರಕ್ಕೆ ತಕ್ಕುದಲ್ಲ. ಈ ಕಾರಣ ಉಪಾಧ್ಯಾಯರ ಸಂಬಳ ಅಲೋಯರ್ನ್ಸ್ ಈಗಿನ ಮಟ್ಟಕ್ಕನುಗುಣವಾಗಿ ಹೆಚ್ಚಿಸಬೇಕು. ಅಲ್ಲದೆ ಸರ್ಕಾರದವರು ತಾವು ಮಾಡಿದ ಆಜ್ಞೆಯನ್ನು ಜಾರಿಗೆ ತಂದರೇ ಇಲ್ಲವೇಎಂಬುದನ್ನು ವ್ಯವಸ್ಥಿತವಾಗಿ ನೋಡಬೇಕು. ಲೋಪದೋಷಗಳನ್ನು ಶಿಕ್ಷಿಸಬೇಕು. ಇಲ್ಲವಾದರೆ ನಮ್ಮ ನಾಡಿಗೆ ಭವಿಷ್ಯವೇ ಇಲ್ಲ.

# NOTICE.

It is hereby notified to the general public that the general power of attorney executed by me ***Tulasamma Widow of late Somasamudram Rama Rao,*** in favour of ***Somasamudram Hanumanthappa*** by means of a Registered Deed dated 29—7—1947 is hereby cancelled and the agency of the said ***Hanumanthappa*** is terminated Any amount payable to me either by way of rent, lease amounts, debts or an account of any other transaction should be paid to me direct and not to the said ***Somasamudram Hanumanthappa or his son Hampaiah.*** If in spite of this notice, any body pays any amount due to me to the said ***Hanumanthappa*** or his agent will be deemed to have paid at his own risk to him and not to me or on my behalf.

**TULASAMMA,**
Widow of late Somasamudram
Rama Rao.

BELLARY
8—1—48

---

# ಪ್ರ ಕ ಟ ನೆ.

ಈ ಪ್ರಕಟನೆಯ ಮೂಲಕ ಸಕಲರಿಗೂ ತಿಳಿಯಪಡಿಸುವದೇನಂದರೆ:—

ಲೇಟ್ ಸೋಮಸಮುದ್ರದ ರಾಮರಾಯರ ಹೆಂಡತಿ ತುಳಸಮ್ಮನಾದ ನಾನು ಸೋಮಸಮುದ್ರದ ಹನುಮಂತಪ್ಪಗೆ ೨೯-೭-'೪೭ ನೆಯ ತೇದಿ ರಿಜಿಸ್ಟರ್‌ಮಾಡಿದ ಜನರಲ್ ಪವರ್ ಆಫ್ ಅಟಾರ್ನಿಯನ್ನು ಈಗ ರದ್ದುಪಡಿಸಿರುತ್ತೇನೆ. ಇನ್ನುಮುಂದೆ ನನಗೆ ಬರತಕ್ಕ ಯಾವ ವಿಧವಾದ ಹಣವಾಗಲಿ ಭೂಮಿ ಗುತ್ತಿಗೆಗಳಾಗಲಿ, ಸಾಲಗಳಾಗಲಿ ಸದರಿ ಹನುಮಂತಪ್ಪಗೆ ಅಥವಾ ಆತನ ಮಗ ಹಂಪಯ್ಯಗಾಗಲಿ ಯಾರು ಕೊಡಕೂಡದು. ಯಾರಾದರೂ ಹಾಗೆ ಕೊಟ್ಟಪಕ್ಷದಲ್ಲಿ ಅವು ಅವರ ಜವಾಬ್ದಾರಿ ಮೇಲೆ ಸದರಿ ಹನುಮಂತಪ್ಪಗೆ ಕೊಟ್ಟಂತೆ ಭಾವಿಸಲ್ಪಡುವುದಾಗಲಿ ನನಗೆ ಕೊಟ್ಟಂತಾಗುವುದಿಲ್ಲ. ನನ್ನ ಪರವಾಗಿ ಸಂಗ್ರಹಿಸಿದಂತಾಗುವುದಿಲ್ಲ.

ಬಳ್ಳಾರಿ,
8—1—1948.

**ತು ಳ ಸ ಮ್ಮ,**
**ಲೇಟ್ ಸೋಮಸಮುದ್ರದ ರಾಮರಾಯರ ಹೆಂಡತಿ**

ಪ್ರಾಂತವಾಗುವದು ಅತ್ಯವಶ್ಯವಿದೆ. ಎಷ್ಟೇ ಎಡರು ತೊಡರುಗಳು ಬಂದರೂ ಕನ್ನಡ ನಾಡು ಅತಿ ತ್ವರೆಯಿಂದ ಸ್ವತಂತ್ರ ಪ್ರಾಂತವಾಗುವದೆಂಬ ಬಗ್ಗೆ ನನಗೆ ಭರವಸೆಯಿದೆ. ಅದರಂತೆಯೇ ಭರದಿಂದ ಈಗಾಗಲೆ ಕಾರ್ಯ ನಡೆದಿದೆ. ಭಾವೀ ಕನ್ನಡ ಪ್ರಾಂತದಲ್ಲಿಯೇ ನಮ್ಮ ಕಂಪನಿಯು ಪರಿಶುದ್ಧವಾದ ಎಣ್ಣೆ ಮತ್ತು ವನಸ್ಪತಿ ತುಪ್ಪ ಮುಂತಾದವುಗಳನ್ನು ಉತ್ಪಾದನೆ ಮಾಡುವದರಲ್ಲಿ ಹಿರಿಯದೂ ಮತ್ತು ಮುಂದುವರೆದದ್ದೂ ಇರುತ್ತದೆ. ಔದ್ಯೋಗಿಕ ಬೆಳವಣಿಗೆಯು ನಮ್ಮ ದೇಶಕ್ಕೆ ಅದರಲ್ಲಿಯೂ ನಮ್ಮ ಕನ್ನಡನಾಡಿಗೆ ಅತಿ ಅಗತ್ಯವಾಗಿದೆ. ಹಿಂದಕ್ಕೆ ನಮ್ಮ ದೇಶದಲ್ಲಿ ಅತಿ ಉನ್ನತ ಸ್ಥಾನ ಪಡೆದ ನಮ್ಮ ಜಿಲ್ಹೆಗೆ ಈಗ ಪುನಃ ಅಭಿವೃದ್ಧಿ ಹೊಂದುವ ಸುಯೋಗ ಬಂದಿದೆಯೆಂದು ನಾನು ತಿಳಿಯುತ್ತೇನೆ.

## ಅಡಚಣೆಯಿದ್ದರೂ ಸಾಕಷ್ಟು ಪ್ರಗತಿಯಾಗಿದೆ

ಯಂತ್ರಗಳು ಯಂತ್ರದ ಸಾಮಾನುಗಳು, ಕಬ್ಬಿಣ, ಉಕ್ಕು ಇಮಾರತಿಯ ಕಟ್ಟಡಗಳೂ ವುರುವಲ ಇವುಗಳ ತುಟಾಗ್ರತೆ ಮತ್ತು ನಿಯಂತ್ರಣಗಳ ಮೂಲಕ ಸಕಾಲಕ್ಕೆ ದೊರೆಯದಿರುವಿಕೆ ಮೇಲಿಂದ ಮೇಲೆ ಬೆಲೆ ಏರುವಿಕೆ, ಇವುಗಳಲ್ಲದೆ ಹಾರಿಗೆಯ ಅನಾನುಕೂಲತೆ ಮತ್ತು ಕೆಲಸಗಾರರು ಸಿಗದಿರುವಿಕೆ, ಇವೆಲ್ಲ ಅಡಚಣಿಗಳನ್ನು ತಿಳಿದು ವಿಚಾರಿಸಿದರೆ, ಕಂಪನಿಯವರು ಇಂದಿನವರೆಗೆ ನೆರವೇರಿಸಿದ ಕಾರ್ಯವು ಹೆಮ್ಮೆ ಪಡತಕ್ಕ ಮಾತಾಗಿದೆಯೆಂದು ತಾವು ಒಪ್ಪುವಿರೆಂದು ನಾನು ತಿಳಿಯುತ್ತೇನೆ.

## ಹಿಂಡಿಯಮೇಲಿನ ನಿಯಂತ್ರಣ ಹೋಗಬೇಕು

ಕಳೆದ ವರ್ಷದಿಂದ ಸೇಂಗಾ ಮತ್ತು ಎಣ್ಣೆಯ ವ್ಯಾಪಾರವನ್ನು ಪರಿಶೀಲಿಸಿ ನೋಡಿದರೆ ಬೀಜ ಮತ್ತು ಎಂಣೆಯ ಧಾರಣೆಗಳಲ್ಲಿ ವ್ಯವಹಾರಿಕ ಸಂಬಂಧವೇ ಕಂಡುಬರುವದಿಲ್ಲ. ಹಿಂಡಿಯ ಮೇಲೆ ಸರ್ಕಾರದವರು ನಿಯಂತ್ರಣಮಾಡಿ ಬೆಲೆ ಕಡಿಮೆ ಮಾಡಿರುವದರಿಂದ ಮತ್ತು ತಾವೇ ಎಲ್ಲ ಹಿಂಡಿಯನ್ನು ಕೊಂಡುಕೊಳ್ಳುವದರಿಂದ ಕಡಿಮೆ ಬೆಲೆ ಬರುವದಲ್ಲದೆ ಹೆಚ್ಚಿನ ಅನಾನುಕೂಲತೆಗಳಾಗಿವೆ. ಎಲ್ಲ ನಿಯಂತ್ರಣಗಳಂತೆ ಹಿಂಡಿಯ ಮೇಲಿನ ನಿಯಂತ್ರಣ ಸಹಿತ ತೆಗೆದುಹಾಕಬೇಕೆಂದು ನಮ್ಮ ಪ್ರಾಂತಿಕ ಸರ್ಕಾರದವರಿಗೆ ಈಗಾಗಲೆ ಸಂಸ್ಥೆಗಳ ವತಿಯಿಂದ ಮನವಿಯನ್ನು ಕಳಿಸಲಾಗಿದೆ. ಈ ಮನವಿಗೆ ಸರ್ಕಾರದವರು ಅತಿತ್ವರೆಯಿಂದ ಮಾನ್ಯತೆ ಕೊಡುವರೆಂದು ನಾನು ತಿಳಿಯುತ್ತೇನೆ. ಇಂಥಾ ಪರಿಸ್ಥಿತಿಯಲ್ಲಿ ಕೇವಲ ಎಂಣೆಯನ್ನು ಮಾತ್ರ ತಯಾರಿಸುವ ಕಾರಖಾನೆಗಳಿಗೆ ಸರಿಯಾದ ಲಾಭವಾಗಲು ಶಕ್ಯವಿಲ್ಲ. ಕೂಡ್ರಿಸಿದ ಎಕ್ಸಪೆಲರುಗಳನ್ನು ಕಾರ್ಯ ಮಾಡಿಸದಿರಬಾರದೆಂದು ಕಂಪನಿಯವರು ಕಳೆದ ವರ್ಷದಲ್ಲಿ ಪ್ರಯೋಗ ರೀತಿಯಿಂದ ಅವುಗಳನ್ನು ಚಾಲು ಮಾಡಿ ಎಂಣೆಯನ್ನು ತೆಗೆದು ಮಾರಾಟಮಾಡಿದ್ದಾರೆ. ಮ್ಯಾನೇಜಿಂಗ ಏಜಂಟ್ಸರವರು ಮುಂಜಾಗ್ರತೆಯಿಂದ ಯೋಗ್ಯ ಧಾರಣೆಯ ಸೇಂಗಾ ಬೀಜಗಳನ್ನು ಕೊಂಡಿಟ್ಟಿದ್ದರಿಂದ ತಕ್ಕಮಟ್ಟಿಗಾದರೂ ಲಾಭ ತೋರಿಸಲು ಕಂಪನಿಗೆ ಸಾಧ್ಯವಾಗಿದೆ. ಈ ಬಗ್ಗೆ ಅಂಕೆ ಸಂಖ್ಯೆಗಳು ತಮಗೆ ಈಗಾಗಲೇ ಕೈಸೇರಿವೆ. ನಮ್ಮ ಕಾರ್ಯಕ್ಷೇತ್ರವು ಕೇವಲ ಎಣ್ಣೆಯನ್ನು ತಯಾರಿಸುವುದು ಇರದೆ, ಪರಿಶುದ್ಧ ಎಣ್ಣೆ ಮತ್ತು ವನಸ್ಪತಿ ತುಪ್ಪವನ್ನು ತಯಾರಿಸುವದು ಇರುವದೆಂಬುದು ತಮಗೆ ಗೊತ್ತಿದೆ. ಈ ಸಂಬಂಧದ ಯಂತ್ರಸಾಮುಗ್ರಿಗಳ ಬಹುಭಾಗವು ಕಂಪನಿಯ ಕೈಸೇರಿದಬಗ್ಗೆ ಮತ್ತು ಅವುಗಳನ್ನು ಕೂಡ್ರಿಸುವ ಯೋಜನೆಯನ್ನು ಕೈಕೊಂಡಬಗ್ಗೆ ಡಾಯರೆಕ್ಟರರ ವರದಿಯಲ್ಲಿ ತಮಗೆ ತಿಳಿಸಿದೆ.

## ವ್ಯವಹಾರ ದೃಷ್ಟಿಯಿಂದ ಷೇರಿನ ಪ್ರತಿಫಲ ಕೊಡಲಿಲ್ಲ

ಧಾರಣೆಗಳ ಏರಿಕೆಯ ಮೂಲಕ ನಮ್ಮ ಸದ್ಯದ ಬಂಡವಾಳ ನಮಗೆ ಸಾಕಾಗುವದಿಲ್ಲ, ಕಾರ್ಯನಿರ್ವಾ

ಹಕ ಬಂಡವಾಳಕ್ಕಾಗಿ ನಾವು ಸಾಲ ತೆಗೆದ ವಿವರಗಳನ್ನು ಅಥಾವೆ ಪತ್ರಿಕೆಯಲ್ಲಿ ಕೊಡಲಾಗಿದೆ. ಮತ್ತೆ ಕೆಲವು ಶೇರುಗಳನ್ನು ಮಾರಾಟಮಾಡಿ, ಮತ್ತು ಡಿಬೆಂಚರುಗಳನ್ನು ಮಾರಾಟಮಾಡಿ ಈ ಕೊರತೆಯನ್ನು ಪೂರೈಸಿಕೊಳ್ಳುವ ಯೋಜನೆಯನ್ನು ನಮ್ಮ ಡಾಯರೆಕ್ಟರರು ಕೈಕೊಂಡಿದ್ದಾರೆ. ಈ ಕೆಲಸಕ್ಕೆ ತಮ್ಮೆಲ್ಲರ ಸಹಕಾರ ಅವಶ್ಯ ಬೇಕಾಗಿದೆ. ತಮ್ಮ ಶೇರ ಹಣಕ್ಕೆ ಪ್ರತಿಫಲ ಕೊಡಲು ಇದೇ ವರ್ಷ ಸಾಧ್ಯವಿತ್ತೆಂದೂ ಆದರೆ ತಜ್ಞರ ಅಭಿಪ್ರಾಯದಂತೆ ಹಾಗೆ ಮಾಡಲಿಲ್ಲವೆಂದೂ ತಮಗೆ ಡಾಯರೆಕ್ಟರರ ರಿಪೋರ್ಟಿನಿಂದ ತಿಳಿಸಲಾಗಿದೆ. ಹೀಗೆ ಮಾಡಿರುವದು, ಎಲ್ಲರ ಹಿತಕ್ಕಾಗಿಯೇ ಆಗಿದೆಯೆಂದು ನಾನು ಹೇಳಬಯಸುತ್ತೇನೆ. ಯಾಕಂದರೆ ಸಂಸ್ಥೆಯನ್ನು ಮೊದಲು ಸರಿಯಾಗಿ ಭದ್ರತೆಯಿಂದ ಕಟ್ಟಿ ಬೆಳೆಯಗೊಟ್ಟು ನಂತರ ಪ್ರತಿಫಲವನ್ನು ಅಪೇಕ್ಷಿಸುವದು, ವ್ಯವಹಾರ ಮಾರ್ಗವಾಗಿದೆ. ಈ ಕಂಪನಿಗೆ ಮುಂದೆಸಹ ತಮ್ಮೆಲ್ಲರ ಸಹಕಾರ ಸಹಾನುಭೂತಿ ಹೆಚ್ಚಿಗೆ ದೊರೆತು ಇದು ದೊಡ್ಡದಾಗಿ ಬೆಳೆದು ಇಲ್ಲಿ ಒಂದು ದೊಡ್ಡ ಕೈಗಾರಿಕೆಯ ಕೇಂದ್ರವಾಗುವದೆಂದು ನಾನು ತಿಳಿಯುತ್ತೇನೆ. ತಮ್ಮಲ್ಲಿ ಯಾರಿಗಾದರೂ ವಾರ್ಷಿಕ ಲೆಕ್ಕದಲ್ಲಿಯ ಹೆಚ್ಚಿನ ವಿವರಗಳು ಬೇಕಾದಲ್ಲಿ ತಿಳಿಸಿದರೆ, ಸಾಧ್ಯವಿದ್ದಷ್ಟು ತಿಳಿಸಿ ಹೇಳುತ್ತೇನೆ

---

## ಬಳ್ಳಾರಿಯಲ್ಲಿ ಆರ್ಯ ವೈಶ್ಯ ಸಭೆಗಳು

ಬಳ್ಳಾರಿ ಆರ್ಯ ವೈಶ್ಯಯುವಜನ ಸಂಘದ 16 ನೇ ವಾರ್ಷಿಕೋತ್ಸವ, ಬಳ್ಳಾರಿ ಜಿಲ್ಲಾ ಆರ್ಯ ವೈಶ್ಯ ವಿದ್ಯಾನಿಧಿಯ ಪ್ರಥಮ ವಾರ್ಷಿಕೋತ್ಸವವು 4 ನೆಯ ತಾ॥ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಪಿ. ಸುಬ್ಬರಾಯುಡು ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಡಿ. ಯಲ್. ಗಂಗಾಧರಶೆಟ್ಟಿ, ಡಿ.ಎಲ್ ಶೆಟ್ಟರು ತಮ್ಮ ವರದಿಗಳನ್ನರ್ಪಿಸಿದರು. ದೇಶದ ರಚನಾತ್ಮಕ ಕಾರ್ಯಗಳಲ್ಲಿ ವೈಶ್ಯರು ತಮ್ಮ ಧನವ್ಯಯಮಾಡಿ ಜಾತಿಯತೆಯನ್ನು ಮರೆತು ಪ್ರಜಾರಾಜ್ಯಕ್ಕೆ ಸಹಾಯಮಾಡಬೇಕೆಂದರು. ಶ್ರೀಮತಿ ಕನಕವಲ್ಲಿ ತಾಯಾರಮ್ಮನವರು ಪುರುಷರ ಕಾರ್ಯದಲ್ಲಿ ಸ್ತ್ರೀಯು ಸಹಕರಿಸಬೇಕೆಂದರು. ಅಧ್ಯಕ್ಷರು ಬಡವಿದ್ಯಾರ್ಥಿಗಳಿಗೆ ಮಾತ್ರ ಸಹಾಯ ಮಾಡಬೇಕಲ್ಲದೆ ಬೇರೆಯವರಿಗೆಲ್ಲಾ ಸಹಾಯ ಕೊಡಬಾರದೆಂದರು ಡಿ. ಯಲ್. ಲಕ್ಷ್ಮೀಕಾಂತಂ (8 ವರ್ಷದ ಬಾಲೆ) ಮಾತಾಡಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಾಯಮಾಡಬೇಕೆಂದಳು.

ಪ್ರಾಂತೀಯ ವೈಶ್ಯ ವಿದ್ಯಾನಿಧಿಯ ಸಭೆಯು ಶ್ರೀ ಎನ್. ಎಸ್. ಗುಪ್ತರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಡಿ. ಯಲ್. ಶೆಟ್ಟರು ಟ್ರೆಜರರ್ ಆದರು ಶ್ರೀ ಟಿ. ಜಿ. ಸತ್ಯನಾರಾಯಣ ಶ್ರೀ ಪಿ. ಶೇಷಣ್ಣಶೆಟ್ಟಿ ವಗೈರೆಯವರು ಸದಸ್ಯರಾದರು.

ಪ್ರಾಂತೀಯ ವೈಶ್ಯಪುರ ಸಭಾ ಸದಸ್ಯರ ಸಭೆಯು ಶ್ರೀ ಪಿ. ಶೇಷನ್ನಗುಪ್ತರಧ್ಯಕ್ಷತೆಯಲ್ಲಿ ಸಮಾವೇಶವಾಗಿತ್ತು, ರಾಷ್ಟ್ರಧ್ವಜಾರೋಹಣವು ಶ್ರೀಮತಿ ತಾಯಾರಮ್ಮನವರಿಂದ ಆಯಿತು, ಸ್ವಾಗತ ಸಮಿತಿ ಅಧ್ಯಕ್ಷರು ವಿದ್ಯಾಭ್ಯಾಸವನ್ನು ಉಚಿತವಾಗಿಯೂ ಒತ್ತಾಯದ್ದಾಗಿಯೂ ಮಾಡಬೇಕೆಂದರು 'ಭಾರತೀಯ ವೈಶ್ಯ' ದ ಸಂಪಾದಕರು ತಮ್ಮ ಭಾಷಣದಲ್ಲಿ ಕಾಂಗ್ರೆಸ್‌ನ್ನು ಬಲಪಡಿಸಲು ಸಹಾಯಕೋರಿದರು. ಅಧ್ಯಕ್ಷರು ಸಾಮಾನ್ಯರ ಮತದಿಂದಾರಿಸಲ್ಪಡಬೇಕು. ಕಮೀಶನರ್-ಎಂಜಿನೀರ್-ಛೇರ್ಮನ್ನರ ಆಡಳಿತಕ್ಕೆ ಒಳಪಡಬೇಕು. ಎಲ್ಲೆಡೆಯಲ್ಲೂ ಒತ್ತಾಯದ ಉಚಿತ ವಿದ್ಯಾಭ್ಯಾಸವು ಜಾರಿಯಲ್ಲ ಬರಬೇಕೆಂಬ ನಿರ್ಣಯಗಳಾದವು. ಶ್ರೀ ಪದ್ಮನಾಭನ್‌ರ ವಂದನಾರ್ಪಣೆಯ ನಂತರ ಪ್ರತಿನಿಧಿಗಳಿಗೆಲ್ಲಾ ಭೋಜನ ಸಮಾರಂಭವಾಯಿತು.

**ಕೊಟ್ಟೂರು:**- ೬ ನೆಯ ದಿನ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ಚನ್ನಬಸಪ್ಪನವರು (ಬಳ್ಳಾರಿ) ಕರ್ನಾಟಕ ಪ್ರತ್ಯೇಕ ಪ್ರಾಂತದ ಆವಶ್ಯಕತೆಯ ಮೇಲೆ ಸ್ಫೂರ್ತಿದಾಯಕ ಭಾಷಣಮಾಡಿದರು

# ೩೧ ನೆಯ ಸಾಹಿತ್ಯ ಸಮ್ಮೇಳನ, ಕಾಸರಗೋಡು.

## ಮೆರವಣಿಗೆ

ಸಮ್ಮೇಲನಾಧ್ಯಕ್ಷ ಶ್ರೀ ತಾತಾಚಾರ್ಯ ಶರ್ಮರ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಪ್ರೊ. ಜಾಗಿರದಾರರ ಮತ್ತು ಸಮ್ಮೇಲನದ ಉದ್ಘಾಟಕರಾದ ನ್ಯಾಯಮೂರ್ತಿ ಜಾಗಿರದಾರರ ಮೆರವಣಿಗೆ ತಾ. ೨೭--೧೨—೪೭ ರ ಸಂಜೆ ೭ ಕ್ಕೆ ಕಾಸರಗೋಡ ಸ್ಟೇಶನ್ನಿನಿಂದ ಹೊರಟು ಊರಲ್ಲೆಲ್ಲ ಸುತ್ತಿತು. ಬಂಡಿಯು ಸೊಗಸಾಗಿ ಸಿಂಗರಿಸಲ್ಪಟ್ಟಿತ್ತು ಬಂಡಿಗೆ ೩೦ ಎತ್ತುಗಳನ್ನು ಹೂಡಲಾಗಿತ್ತು. ೪—೫ ಸಾವಿರ ಜನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಹೆಜ್ಜೆಹೆಜ್ಜೆಗೆ ಜಯಧ್ವನಿಯಿಂದ ಕಿವಿಗಡಚಿಕ್ಕುವಂತಿತ್ತು. ೧ ಮೈಲುದ್ದದ ಮೆರವಣಿಗೆ ಸಭಾಸ್ಥಾನಕ್ಕೆ ಬರಲು ೨ ತಾಸು ತಗಲಿತು. ಪರಿಷತ್ತಿಗಾಗಿ ಏರ್ಪಟ್ಟ ಸ್ಥಳಕ್ಕೆ ಮುದ್ದಣ ನ ಗ ರ ವೆಂ ದು ನಾಮಕರಣ ಮಾಡಲಾಗಿತ್ತು. ಸಭಾಸ್ಥಾನಕ್ಕೆ ಮೆರವಣಿಗೆ ಬರಲು ಮೂವರನ್ನೂ ವೇದಿಕೆಯಮೇಲೆ ಕುಳ್ಳಿರಿಸಿ ಪುಷ್ಪಹಾರದಿಂದ ಸನ್ಮಾನಿಸಲಾಯಿತು. ಈ ಸ್ವಾಗತಕ್ಕೆ ಅಭಿನಂದನೆ ವ್ಯ ಕ್ತ ಪ ಡಿ ಸು ತ್ತ ಅಧ್ಯಕ್ಷ ಶರ್ಮರು ಸಮ್ಮೇಲನಕ್ಕೆ ಗೆಲವು ತಂದುಕೊಡಲು ನೆರೆದವರಿಗೆ ಬೇಡಿ ಸಮಯೋಚಿತ ಭಾಷಣ ಮಾಡಿದರು.

## ಧ್ವ ಜ ವಂ ದ ನೆ

ತಾ. ೨೮ ರಂದು ಮುಂಜಾನೆ ೯-೩೦ ಕ್ಕೆ ೩೧ ನೆಯ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರಾದ ಶ್ರೀ ಮಂಜಯ್ಯ ಹೆಗ್ಗಡೆ ಹಿಂದುಸ್ತಾನ ಧ್ವಜವನ್ನೂ ಸಮ್ಮೇಲನಾಧ್ಯಕ್ಷ ಶ್ರೀ ತಾತಾಚಾರ್ಯಶರ್ಮರು ಕನ್ನಡ ಬಾವುಟವನ್ನೂ ಪ್ರಚಂಡ ಕರತಾಡನದ ಮಧ್ಯದಲ್ಲಿ ಹಾರಿಸಿದರು.

## ಪ್ರ ದ ರ್ಶ ನ

ಆ ಮೇಲೆ ಎಡನೀರು ಮಠದ ಶ್ರೀ ಈಶ್ವರಾನಂದ ಭಾರತಿ ಸ್ವಾಮಿಗಳು ಪ್ರದರ್ಶನ ಉದ್ಘಾಟನ ಮಾಡಿ ತಮ್ಮ ಚಿಕ್ಕ ಭಾಷಣದಲ್ಲಿ ಕರ್ನಾಟಕವು ಏಕತಂತ್ರ ಪ್ರಾಂತವಾಗಲೆಂದು ಹಾರೈಸಿದರು. ಪ್ರದರ್ಶನದಲ್ಲಿ ಕೈ ಕೆಲಸದ ಬಗೆಬಗೆಯ ವಸ್ತುಗಳು ಅ ಂ ದ ವಾ ಗಿ ಮಂಡಿಸಲ್ಪಟ್ಟಿದ್ದವು.

## ಮು ದ್ದ ಣ ನ ಗ ರ

ಪರಿಷತ್ತಿಗಾಗಿ ಗೊತ್ತು ಮಾಡಿದ ಸ್ಥಳಕ್ಕೆ ಮುದ್ದಣನಗರವೆಂದು ಹೆಸರು. ಮುದ್ದಣನಗರವನ್ನು ಬಿದಿರು ತೆಂಗಿನಗಿಡ, ಅಡಿಕೆಗರಿ ಮೊದಲಾದವುಗಳಿಂದ ಅಲಂಕರಿಸಿದ್ದರು ಸಮುದ್ರದ ಮಳಲಿನ ಹಾಸಿಗೆಯಮೇಲೆಯೆ ಸದಸ್ಯರಿಗೆ ಕೂ ಡ ಲು ಅನುಕೂಲಮಾಡಲಾಗಿತ್ತು. ವೇದಿಕೆಯನ್ನು ಸಹ ಉಸುಕಿನಿಂದಲೆ ರಚಿಸಿ ಹಿಂದೀ ಪದ್ಧತಿಯಂತೆ ಪೀಠಗಳನ್ನು ಮಂಡಿಸಲಾಗಿತ್ತು. ಗಣ್ಯ ವ್ಯಕ್ತಿಗಳು ವೇದಿಕೆಯ ಮೇಲೆ ವಿರಾಜಮಾನರಾಗಿದ್ದರು.

## ಸಮ್ಮೇಲನದ ಪ್ರಾರಂಭ

ಸರಿಯಾಗಿ ೯-೪೦ ಕ್ಕೆ ಸಮ್ಮೇಲನವು ಹಿಂದುಸ್ತಾನ ಹಮಾರಾ, ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸ್ವಾಗತಗೀತ ಮೊದಲಾದವುಗಳಿಂದ ಅಧಿವೇಶನ ಮೊದಲಿಸಿತು. ಆ ಮೇಲೆ ಶ್ರೀ ಮಂಜಯ್ಯ ಹೆಗ್ಗಡೆಯವರು ತಮ್ಮ ಸ್ವಾಗತ ಭಾಷಣ ಓದಿದರು.

ತರುವಾಯ ಶ್ರೀ ಜಿನರಾಜ ಹೆಗ್ಗಡೆಯವರು ನ್ಯಾಯಮೂರ್ತಿ ಜಾಗಿರದಾರರ ಪರಿಚಯಮಾಡಿಕೊಟ್ಟು ಅವರಿಗೆ ಸಮ್ಮೇಲನದ ಉದ್ಘಾಟನೆಗಾಗಿ ಬಿನ್ನವಿಸಲು ಪ್ರಚಂಡ ಕರತಾಡನವಾಯಿತು.

ನ್ಯಾಯಮೂರ್ತಿ ಜಾಗೀರದಾರರು ಸಮ್ಮೇಲನ ಪ್ರಾರಂಭಮಾಡುತ್ತ ತಮ್ಮ ಭಾಷಣ ಓದಿದರು.

ಶ್ರೀ ಎಚ್. ಶ್ರೀಕಂಠಯ್ಯನವರು ಆಮೇಲೆ ಸಮ್ಮೇಲನಾಧ್ಯಕ್ಷ ಶ್ರೀ ತಾತಾಚಾರ್ಯ ಶರ್ಮಾರ ಪರಿಚಯ ಮಾಡಿಕೊಟ್ಟರು ತಮ್ಮ ಭಾಷಣದಲ್ಲಿ ಶ್ರೀ ಶರ್ಮರು ಪತ್ರಿಕೋದ್ಯಮದಲ್ಲಿ ಬಹಳ ದುಡಿದಿರು ವರೆಂದು ಹೇಳಿ ಬರುವ ವರ್ಷ ವಿಶ್ವಕರ್ನಾಟಕ ನಿರ್ಮಾಣವಾಗಲಿದ್ದು ಅಂಥ ಸಮಯದಲ್ಲಿ ವಿಶ್ವಕರ್ನಾಟಕದ ನಿರ್ಮಾಪಕರಾದ ಇವರು ಸಮ್ಮೇಲನಾಧ್ಯಕ್ಷರಾದುದು ಉಚಿತವೆಂದು ನುಡಿದರು.

ಸೌ ರಾಜಮ್ಮನವರು ಪತಿಯ ಕಾರ್ಯಗಳಲ್ಲೆಲ್ಲ ಬಲಗೈಯಾಗಿ ಕೆಲಸ ಮಾಡುತ್ತ ಬಂದ ಮಾತೆಶ್ರೀ ಶರ್ಮಾರ ಧ್ಯೇಯ ಸಾಧನೆಗೆ ಇವರ ಧರ್ಮಪತ್ನಿ ಬಹು ಮಟ್ಟಿಗೆ ಕಾರಣರೆಂದು ಉದ್ಗಾರ ತೆಗೆದರು ಆ ಮೇಲೆ ಸ್ವಾಗತಾಧ್ಯಕ್ಷರು ಶರ್ಮರಿಗೆ ಹೂ ಮಾಲೆಗಳಿಂದ ಸತ್ಕರಿಸಲು ಶ್ರೀ ಜಿನರಾಜ ಹೆಗ್ಗಡೆಯವರು ಶರ್ಮರ ಕೈ ಹಿಡಿದು ಭಾಷಣಕ್ಕಾಗಿ ಕರೆತಂದರು. ಇವರು ಬರೆದ ಭಾಷಣ ದೀರ್ಘವಿದ್ದುದರಿಂದ ಅಲ್ಲಲ್ಲಿ ಓದಿದರೂ ೨ ತಾಸು ಬೇಕಾಯ್ತು. ಭಾಷಣದ ನಂತರ ಅನೇಕ ಪ್ರಮುಖ ಜನರಿಂದ ಬಂದ ಸಂದೇಶ ಓದಿ ಹೇಳಲಾಯ್ತು. ಪುತ್ತಿಗೆ ಮಠದ ಶ್ರೀಗಳವರು ಕರ್ನಾಟಕ ಬೇಗ ಸ್ವತಂತ್ರ ಪ್ರಾಂತವಾಗಲೆಂದು ಆಶೀರ್ವದಿಸಿದರು. ಉಡುಪಿಕೊಂಡ ಮಹಾಸ್ವಾಮಿಗಳು ಶುಭ ಕೋರಿದ್ದರು.

## ಪುಸ್ತಕ ಪ್ರಕಾಶನ

ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತಿಗಳು ಈ ಸಂದರ್ಭಕ್ಕಾಗಿಯೇ ತೆಂಕನಾಡು ಎಂಬ ಪುಸ್ತಕ ಪ್ರಸಿದ್ಧಿಸಿದ್ದನ್ನು ಅಧ್ಯಕ್ಷರು ಸ್ವೀಕರಿಸಿ ಪ್ರಕಾಶನ ಪಡಿಸಿದರು. ಇದೇರೀತಿ ಸಾಹಿತ್ಯ ಪರಿಷತ್ತಿನವರು ಸಿದ್ಧಪಡಿಸಿದ ಶ್ರೀ ಕನ್ನಡನುಡಿಯ ವಿಶೇಷ ಅಂಕವನ್ನೂ ಅಧ್ಯಕ್ಷರು ಪ್ರಕಾಶಿಸಿದರು.

ಆಮೇಲೆ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ವಿಷಯ ನಿರ್ಧಾರಕ ಸಮಿತಿಯ ಆಯ್ಕೆಯ ನಿಯಮಗಳನ್ನು ತಿಳಿಸಿದರು. ಈ ವಿಷಯ ನಿರ್ಧಾರಕ ಸಮಿತಿಯ ರಚನೆಯಾಗಿ ತಾ೨೮ರ ಮುಂಜಾವಿನ ಅಧಿವೇಶನ ಮುಕ್ತಾಯವಾಯಿತು.

## ಸಾಹಿತ್ಯ ಗೋಷ್ಠಿ

ಸಮ್ಮೇಲನದ ಅಂಗವಾಗಿ ಏರ್ಪಟ್ಟ ಸಾಹಿತ್ಯ ಗೋಷ್ಠಿಯ ಅಧಿವೇಶನವು ತಾ೨೮ ರ ಮಧ್ಯಾಹ್ನದ ೩-೩೦ ಪ್ರೊ. ಜಾಗಿರದಾರರ ಅಧ್ಯಕ್ಷತೆಯಲ್ಲಿ ಕೂಡಿತು ಸ್ವಾಗತ ಗೀತೆಯ ನಂತರ ಶ್ರೀ ಪಂಡೂರ ಲಕ್ಷ್ಮಿನಾರಾಯಣ ಪುಣಂಚಿತ್ತಾಯರು ಒಳ್ಳೇ ವಿನೋದ ಪ್ರಚುರ ಹಾಗು ಸ್ಫೂರ್ತಿ ಪ್ರದ ಭಾಷಣ ಮಾಡಿ ಎಲ್ಲರನ್ನೂ ಸ್ವಾಗತಿಸಿದರು. ಬಳಿಕ ಅಧ್ಯಕ್ಷರು ಭಾಷಣ ಪ್ರಾರಂಭಿಸಿ ಅಚ್ಚಾದ ತಮ್ಮ ಭಾಷಣದಲ್ಲಿಯ ಅಭಿಪ್ರಾಯಗಳನ್ನು ಮಂಡಿಸಿದರು. ಆಮೇಲೆ ಕೆಲವು ಕವನ ಪ್ರಬಂಧವಾಚನ ಮೊದಲಾದವು ಆಗಿ ಗೋಷ್ಠಿಯು ಮುಂದರಿಯಿತು

ಸಮ್ಮೇಲನದ ವಿಷಯ ನಿರ್ಧಾರಕ ಸಮಿತಿಯ ಸಭೆಯು ೫-೩೦ ಕ್ಕೆ ಸೇರಿ ಕೆಲವು ನಿರ್ಣಯಗಳನ್ನು ಸ್ವೀಕರಿಸಿತು. ಮೈಸೂರಿನ ಮುಖ್ಯ ಪ್ರಧಾನರು ಶುಭ ಸಂದೇಶ ಕಳಿಸಿ ಕರ್ನಾಟಕ ಏಕೀಕರಣವು ಬೇಗನೆ ಕೈಗೂಡಲೆಂದು ಹಾರೈಸಿದ್ದರು.

ತಾ. ೨೯ ರಂದು ಮುಂಜಾನೆ ವಿಜ್ಞಾನ ಗೋಷ್ಠಿ, ಮಧ್ಯಾಹ್ನ ಏಕೀಕರಣ ಸಮ್ಮೇಲನ ಕೂಡಿದವು ವಿಜ್ಞಾನ ಗೋಷ್ಠಿಗೆ ಮೈಸೂರ ವಿಶ್ವವಿದ್ಯಾಲಯದ ಡಾ, ನಾರಾಯಣ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಅನೇಕರು. ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಸಭೆ ೧೨ ಗಂಟೆಗೆ ಮುಗಿಯಿತು.

## ಉಪಾಧ್ಯಕ್ಷ ಬೇಡ

ಶ್ರೀ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ತಾ. ೨೯ ಮುಂಜಾನೆ ಸೇರಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರ ವಿಶೇಷ ಸಭೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷನಿರಕೂಡದೆಂದೂ ಸಮ್ಮೇಳನದ ಅಧ್ಯಕ್ಷನಿಗೆ ಆ ವರ್ಷದ ಮಟ್ಟಿಗೆ ಸಂಪೂರ್ಣ ಅಧಿಕಾರಿಗಳಿರತಕ್ಕದೆಂದೂ ಅಗತ್ಯವೆನಿಸಿದರೆ ಕಾರ್ಯಕಾರೀ

ಮಂಡಳವು ಒಬ್ಬ ಕಾರ್ಯಾಧ್ಯಕ್ಷನನ್ನು ಆರಿಸಿಕೊಳ್ಳಬೇಕೆಂದೂ ಒಂದು ಹೊಸ ಗೊತ್ತುವಳಿ ಸ್ವೀಕೃತವಾಯ್ತು. ೧೨೫ ಸದಸ್ಯರು ಸಭೆಗೆ ಬಂದಿದ್ದರು.

ಪರಿಷತ್ತಿಗೆ ಒಂದು ರೂ. ವಾರ್ಷಿಕ ಚಂದಾ ಕೊಡುವ ಸದಸ್ಯರನ್ನೂ ಮಾಡಿಕೊಳ್ಳಬೇಕು. ಇವರಿಗೆ ಮತಾಧಿಕಾರವಿರಬೇಕು ಎಂಬ ಇನ್ನೊಂದು ಗೊತ್ತುವಳಿ ಅಂಗೀಕೃತವಾಯ್ತು. ಈ ಮೇಲಿನ ಬದಲಾವಣೆಗಳನ್ನನುಲಕ್ಷಿಸಿ ಪರಿಷತ್ತಿನ ಘಟನೆಯಲ್ಲಿ ತಿದ್ದುಪಡಿ ಮಾಡಲು ಒಂದು ಉಪಸಮಿತಿ ನೇಮಿಸಲಾಯಿತು. ಇನ್ನೂ ಕೆಲ ಗೊತ್ತುವಳಿಗಳನ್ನು ಸ್ವೀಕರಿಸಿ ಈ ಸಭೆ ಮಧ್ಯಾಹ್ನ ೧೨ ಕ್ಕೆ ಮುಕ್ತಾಯಗೊಂಡಿತು.

## ೧೧ ನೆಯ ಏಕೀಕರಣ ಸಮ್ಮೇಳನ

ಮದ್ರಾಸ ಮಂತ್ರಿ ಶ್ರೀ ಆತ್ತಾವರ ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ॥ ೨೯ ರ ಮಧ್ಯಾಹ್ನ ಸೇರಬೇಕಾಗಿದ್ದ ೧೧ನೆಯ ಅ. ಕ. ಏಕೀಕರಣ ಸಮ್ಮೇಳನವು ಅಧ್ಯಕ್ಷರು ಬರದಿದ್ದರಿಂದ ಶ್ರೀ ರಂಗರಾವ ದಿವಾಕರರ ಅಧ್ಯಕ್ಷತೆಯಲ್ಲಿ ಸೇರಿತು

ಏಕೀಕರಣ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಕೆ ಆರ್. ಕಾರಂತರು, ಕರ್ನಾಟಕ ಏಕೀಕರಣಕ್ಕಾಗಿ ದ. ಕನ್ನಡ ಜಿಲ್ಲೆಯು ೩. ತಿಂಗಳಲ್ಲಿ ೧೦ ಸಾವಿರ ರೂ. ಕೂಡಿಸಿ ಕೊಡುವದೆಂದು ಸಾರಿ ಶ್ರೀ ರಂಗರಾಯರನ್ನು ಅಧ್ಯಕ್ಷಸ್ಥಾನ ಅಲಂಕರಿಸಬೇಕೆಂದು ಬಿನ್ನವಿಸಿದರು ಹಾಗೂ ಮೈಸೂರು ಮಂತ್ರಿ ಶ್ರೀ ಸಿದ್ದಯ್ಯನವರ ಈ ಪರಿಷತ್ತನ್ನು ಉದ್ಘಾಟಿಸಬೇಕೆಂದು ಕೇಳಿಕೊಂಡರು. ಉದ್ಘಾಟನೆಯಾಗಿ, ಅಧ್ಯಕ್ಷರ ಭಾಷಣವಾಯಿತು. ಅಧ್ಯಕ್ಷರಾದ ಶ್ರೀ ದಿವಾಕರರು ಭಾರತದ ಘಟನೆ ಸಿದ್ಧವಾಗುವದರೊಳಗಾಗಿ ಕರ್ನಾಟಕವು ಪ್ರತ್ಯೇಕಪ್ರಾಂತವಾದುದನ್ನು ಎಲ್ಲರೂ ಕಾಣಲಿ ಎಂದು ಹಾರೈಸಿದರು.

## ಹೋರಾಟದ ಗೊತ್ತುವಳಿ

ಏಕೀಕರಣ ಕ್ರಿಯಾ ಸಮಿತಿಯ ಸಭೆ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ, ಕರ್ನಾಟಕ ಪ್ರಾಂತೀಕರಣದ ಬಗ್ಗೆ ಹಿಂದುಸ್ತಾನ ಸರ್ಕಾರ ತಳೆದ ಧೋರಣ ಖಂಡಿಸಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಎ. ಐ. ಸಿ. ಸಿ., ಮುಂಬಯಿ, ಮದ್ರಾಸು ಹಾಗೂ ಹಿಂದುಸ್ತಾನಗಳ ಕಾಯದೆ ಮಂಡಲಗಳಲ್ಲಿರುವ ತನ್ನ ಪ್ರತಿನಿಧಿಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯ ಮಾಡಬೇಕೆಂದು ನಿರ್ಧರಿಸಿತ್ತು. ಹೊಸ ಘಟನೆಯು ಅಸ್ತಿತ್ವದಲ್ಲಿ ಬರುವದರೊಳಗಾಗಿ ಏಕೀಕರಣವಾಗಬೇಕಾದರೆ ಈ ಉಪಾಯ ಅವಶ್ಯವೆಂದು ಗೊತ್ತುವಳಿಯಲ್ಲಿ ಹೇಳಲಾಗಿದೆ.

ತಾ. ೩೦ ರಂದು ಸಾಹಿತ್ಯಗೋಷ್ಠಿಯಲ್ಲಿ ಗೋಷ್ಠಿಯ ಅಧ್ಯಕ್ಷ ಪ್ರೊ. ಜಾಗೀರದಾರರು ಭಾಷಣದ ಬಗ್ಗೆ ವಿಚಾರ ಸಂಕಿರಣ ನಡೆಯಿತು. ಪ್ರೊ. ಜಾಗೀರದಾರರು ಸಮಾರೋಪದ ಮಾತನಾಡುತ್ತ ತಮ್ಮ ಭಾಷಣಕ್ಕೆ ಯಾರೂ ಆಕ್ಷೇಪವೆತ್ತದಿದ್ದುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಮಧ್ಯಾಹ್ನದ ೨ ಗಂಟೆಗೆ ಶ್ರೀ ಎಂ. ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ಮಹಿಳಾಗೋಷ್ಠಿ ನಡೆಯಿತು. ಅನೇಕ ಸ್ತ್ರೀಯರು ಪ್ರಬಂಧ ಓದಿದರು. ಬಾಲಿಕೆಯರ ಕಾವ್ಯಗಾನವೂ ಆಯಿತು.

ಸಾಹಿತ್ಯ ಸಮ್ಮೇಲನದ ಬಹಿರಂಗ ಅಧಿವೇಶನವು ತಾ ೩೦ ರ ಸಂಜೆ ೫ ಕ್ಕೆ ಮತ್ತೆ ಸೇರಿ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ, ತುಂಗಭದ್ರಾ ಆಣೆಕಟ್ಟಿನ ಯೋಜನೆ ಮೊದಲಾದ ಗೊತ್ತುವಳಿಗಳನ್ನು ಅಂಗೀಕರಿಸಿ ರಾತ್ರಿ ೮-೧೫ ಕ್ಕೆ ಮುಕ್ತಾಯವಾಯಿತು

ಈ ಬಹಿರಂಗ ಅಧಿವೇಶನದಲ್ಲಿ ಪರಿಷತ್ತಿಗೆ ಸಹಾಯ ನೀಡಿದ್ದಕ್ಕಾಗಿ ಮೈಸೂರು ಮಹಾರಾಜರನ್ನು ಅಭಿನಂದಿಸುವ ಗೊತ್ತುವಳಿಯನ್ನು ಅಧ್ಯಕ್ಷರು ಮಂಡಿಸಿದರು. ಆದರೆ ಸಭಿಕರ ಆಗ್ರಹದ ಮೂಲಕ ಅದನ್ನು ಹಿಂತೆಗೆದುಕೊಳ್ಳಬೇಕಾಯ್ತು

ಬರುವ ವರ್ಷ ಸಾಹಿತ್ಯ ಸಮ್ಮೇಲನವು ತಮ್ಮಲ್ಲಿ ನೆರೆಯಲಿ ಎಂದು ಬಾಗಲಕೋಟೆಯವರೂ ಮುಂಬಯಿಯವರೂ ಔತಣವಿತ್ತಿದ್ದಾರೆ.

---

# The Rayalaseema Bank Ltd., H. O. Bellary.

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,

ಸ್ಥಾಪಿತ : 1939

ಮುಖ್ಯ ಕಾರ್ಯಾಲಯ — **ಬಳ್ಳಾರಿ.**

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ**
**ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು } **ಮ ದ್ರಾ ಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

**ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% ——— ಎರಡು ವರ್ಷ 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ** ಬಿ. ಎ., ಬಿ. ಎಲ್.,
ಛೇರ್ಮನ್ - ಬೋರ್ಡ್ ಆಫ್ ಡೈರೆಕ್ಟರ್ಸ್.

**ಬಿ. ವಿ. ಶೇಷಗಿರಿರಾವು** ಬಿ. ಕಾಂ.,
ಕಾರ್ಯದರ್ಶಿ.


---


**NAVA BHARAT, BELLARY.** Reg. No. M. 4746

**ನವಭಾರತ ಬಳ್ಳಾರಿ.**
**(Nationalist Weekly)**

ಚಂದಾದರಗಳು. **Subscription Rates**

| | | | |
|---|---|---|---|
| ವರ್ಷಕ್ಕೆ | 5-0-0 | One Year | 5—0—0 |
| 6 ತಿಂಗಳಿಗೆ | 3-0-0 | Six months | 3—0—0 |

ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months.

*To*
SRI...... . ...... . .................... ..
......... .................... .........
.... ....................

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVA RAO

ಜೈಹಿಂದ್

# ನವಭಾರತ

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೧ ಸಂಚಿಕೆ ೩ | ಬಳ್ಳಾರಿ ಜನವರಿ ೧೯ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## ಮಹಾತ್ಮ ಗಾಂಧಿ

ಯುವಕ

೧೩-೧-೧೯೪೮ ಮಂಗಳವಾರ ಪ್ರಾತಃಕಾಲ ೧೧ ಘಂಟೆಗೆ ಹಿಂದೂ ಮುಸಲ್ಮಾನರ ಐಕ್ಯಕ್ಕಾಗಿ ಅನಿಶ್ಚಿತ ಅವಧಿಯವರೆಗೆ ಉಪವಾಸ ಪ್ರಾರಂಭಿಸಿದರು. ಇದು ಅವರ ೧೫ ನೆಯ ಉಪವಾಸ. ದೇಶದ ಎಲ್ಲಾ ಕಡೆಗಳಲ್ಲೂ ಕಳವಳವಾಗಿ ಶಾಂತತೆಗಾಗಿ ಪ್ರಯತ್ನ ನಡೆದಿದೆ.

೨೯



## ಮಹಾತ್ಮರ ಉಪವಾಸ.

ಮಹಾತ್ಮ ಗಾಂಧಿಯವರು ತಮ್ಮ ೭೩ ನೆಯ ಇಳಿವಯಸ್ಸಿನಲ್ಲಿ ಹಿಂದೂ ಮುಸಲ್ಮಾನ ಐಕಮತ್ಯಕ್ಕಾಗಿ ಅನಿಶ್ಚಿತ ಅವಧಿಯವರಿಗೆ ಉಪವಾಸ ಕೈಕೊಂಡಿರುವ ಸುದ್ದಿಯಿಂದ ಹಿಂದೂಸ್ಥಾನದಲ್ಲೆಲ್ಲಾ ಕಳವಳವುಂಟಾಗಿದೆ. ಭಾರತದಲ್ಲಿ ಉಳಿದಿರುವ ಮುಸಲ್ಮಾನರ ವಿತ್ತ ಜೀವಿತಗಳು ಗಾಂಧೀಜೀಯ ಪ್ರಭಾವದಿಂದಲೇ ಕ್ಷೇಮವಿರುವವೆಂದೂ ಅವರ ದೀರ್ಘಾಯುರಾರೋಗ್ಯಕ್ಕಾಗಿ ಮುಸಲ್ಮಾನರೆಲ್ಲಾ 'ಅಲ್ಲಾ' ನನ್ನು ಪ್ರಾರ್ಥಿಸಬೇಕೆಂದೂ ಇಸ್ಮಾಯಿಲ್ ಖಾನ್ ಮುಂತಾದ ಮುಖಂಡರು ಕೋರಿದ್ದಾರೆ. ಕಾಶ್ಮೀರ ಪ್ರಶ್ನೆಯನ್ನು ಭದ್ರತಾ ಮಂಡಲಕ್ಕೊಪ್ಪಿಸಿರುವುದು ಮಹಾತ್ಮ ಗಾಂಧಿಯವರಿಗೆ ಸರಿದೋರಿಲ್ಲವೆಂದೂ ಭಾರತ ಪಾಕಿಸ್ತಾನಗಳು ತಮ್ಮ ತಮ್ಮೊಳಗೆ ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸಿ ಕೊಳ್ಳಬೇಕಾಗಿತ್ತೆಂದೂ ಗಾಂಧೀಜಿಯವರು ಅಭಿಪ್ರಾಯಪಟ್ಟಂತೆ ಡೆಲ್ಲಿಯ ಮತ್ತೊಬ್ಬ ಸುದ್ದಿಗಾರನು ತಿಳಿಸುತ್ತಾನೆ. ಈಗ ಭದ್ರತಾಮಂಡಳಕ್ಕೊಪ್ಪಿಸಿರುವ ಕಾರಣ ಎರಡೂ ವಸಾಹತುಗಳಲ್ಲಿ ಯುದ್ಧವು ಅನಿವಾರ್ಯವೆಂದು ಅವರ ಊಹೆಯಂತೆ.

ದೇಶದ ಎಲ್ಲಾ ಕಡೆಗಳಿಂದಲೂ ಶಾಂತಿಯ ಭರವಸೆ ಸೂಚಿಸಿ ಉಪವಾಸವನ್ನು ನಿಲ್ಲಿಸಲು ಗಾಂಧೀಜೀಯವರಿಗೆ ವಿನಂತಿ ಪತ್ರಗಳು ತಾರುಗಳು ಬರುತ್ತಲಿವೆ. ಕಾಂಗ್ರೆಸ್ ವರಿಷ್ಠರು ಮಹಾತ್ಮರ ಪ್ರಾಣ ಉಳಿಸಲು ವಿಶ್ವಪ್ರಯತ್ನ ಮಾಡುತ್ತಲಿದ್ದಾರೆ. ಕೊನೆಯಪಕ್ಷ ಡೆಲ್ಲಿಯಲ್ಲಾದರೂ ಶಾಂತಿಯು ನೆಲಸಬೇಕೆಂದು ಗಾಂಧೀಜಿಯವರು ಉಪವಾಸ ಪ್ರಾರಂಭಿಸಬೇಕಾದಾಗ ಹೇಳಿರುವ ಕಾರಣ ಡೆಲ್ಲಿಯಲ್ಲಿನ 'ಶಿಖ್' ರೆಲ್ಲಾ ಸಭೆ ಸೇರಿ ಮಹಾತ್ಮರ ಪ್ರಾಣ ಉಳಿಸಲು ಶಾಂತಿ ಹಾಗೂ ಐಕ್ಯಗಳನ್ನು ಕಾಪಾಡಿಕೊಂಡು ಬರುವ ಆಶ್ವಾಸನ ಕೊಟ್ಟಿರುವರು.

ಈಗಿನ ಗೊಂದಲದ ಪರಿಸ್ಥಿತಿಯನ್ನವಲೋಕಿಸಿದರೆ ಗಾಂಧೀಜೀಯವರ ಅಹಿಂಸಾ ತತ್ವದ ಪೂರ್ಣ ನಾಶವಾದಂತೆ ಭಾಸವಾಗುತ್ತಲಿದೆ. ಹಿಂಸಾಕೃತ್ಯಗಳು, ಅತ್ಯಾಚಾರವೂ ದಿನದಿನಕ್ಕೆ ಅಧಿಕವಾಗುತ್ತಾ ನಡೆದಿವೆ. ಎಲ್ಲಾ ಪಾರ್ಟಿಗಳವರ ವಿಶ್ವಾಸಕ್ಕೆ ಪಾತ್ರರಾಗಿ ಪೂಜ್ಯ ವ್ಯಕ್ತಿಗಳೆಂದು ಗಣಿಸಲ್ಪಡುತ್ತಿರುವ ಗಾಂಧೀಜೀಯ ಪ್ರಾಣವು ಇಡೀದೇಶದ ಸೊತ್ತಾಗಿದೆ. ಇಂಥಾ ಅಮೂಲ್ಯ ಪ್ರಾಣವನ್ನು ಉಳಿಸಬೇಕಾದರೆ ಕಾಯಾ, ವಾಚಾ, ಮನಸಾ, ಶಾಂತತೆಯನ್ನು ಕಾಪಾಡಿಕೊಂಡು ಬರುವ ಕಾರ್ಯಗಳಾಗಬೇಕು.

## — ಎನ್. ಜಿ. ಒ. ರ ಸಾಧಾರಣ ಸಭೆ —

ಬಳ್ಳಾರಿ ಎನ್. ಜಿ. ಒ ರ ಸಾಧಾರಣ ಸಭೆಯಲ್ಲಿ 15 ನೆಯ ತಾ. ಶ್ರೀ ಕೆ. ಹೊನ್ನೂರಪ್ಪನವರ ಅಧ್ಯಕ್ಷತೆಯಲ್ಲಿ ಈ ಕೆಳಗೆ ಕಾಣಿಸಿದ ತೀರ್ಮಾನಗಳಾದವು

1) ಮಹಾತ್ಮ ಗಾಂಧಿಯವರ ಉಪವಾಸದ ಬಗ್ಗೆ ಕಳವಳವು ವ್ಯಕ್ತವಾಗಿ ಅವರು ಕೂಡಲೇ ಉಪವಾಸವನ್ನು ಬಿಡಬೇಕೆಂದೂ ನಾನ್ ಗೆಜೆಟೆಡ್ ಅಧಿಕಾರಿಗಳು ಜಾತೀಯ ಸೌಹಾರ್ದಕ್ಕೆ ಕೆಲಸಮಾಡುವುದಾಗಿಯೂ ಆಶ್ವಾಸನವಿತ್ತರು.

2) ಕೇಂದ್ರಸಭೆಯ ಮುಖಂಡತ್ವಕ್ಕೆ ಪೂರ್ಣ ವಿಶ್ವಾಸವು ವ್ಯಕ್ತಪಡಿಸಲ್ಪಟ್ಟಿತು

3) ಸರಕಾರದಿಂದ ಕಷ್ಟಕ್ಕೊಳಗಾದ, ಒಳಗಾಗಲಿರುವ ಅಧಿಕಾರಿಗಳ ವಿಷಯಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತ [illegible] ಸಾಮೂಹಿಕ ಸಂಪು ಈಗಿನ ಪರಿಸ್ಥಿತಿಯಲ್ಲಿ ಅನಪೇಕ್ಷಿತವೆಂದು ಈ ಸಭೆಯಭಿಪ್ರಾಯ. ಆದರೆ ಸಂಘದ ಅಧಿಕಾರಿ ವರ್ಗದವರು ಮತ್ತು ಸದಸ್ಯರು ಕೇಂದ್ರದವರ ಆಜ್ಞೆಯಾದಾಗ ಸರಕಾರದ ಆಜ್ಞೆಗಳ ಪ್ರತಿಭಟನೆಗಾಗಿ ವ್ಯಕ್ತಿ ಸತ್ಯಾಗ್ರಹ ಮಾಡುವುದನ್ನು ಈ ಸಭೆಯು ಪುಷ್ಟೀಕರಿಸುತ್ತದೆ ಸರಕಾರದ ತೊಂದರೆಗೀಡುಮಾಡುವ ನೀತಿಯ ವಿರೋಧವಾಗಿ ಕೇಂದ್ರದವರು ತೆಗೆದುಕೊಳ್ಳುವ ಯಾವ ಚರ್ಯೆಗಾಗಲಿ ಈ ಸಂಘವು ಸದಾಸಿದ್ಧವಿದ್ದು ಭವಿಷ್ಯದ ಹೋರಾಟಕ್ಕಾಗಿ ಸದಸ್ಯರು ಮತ್ತು ಧನಸಂಗ್ರಹದ ಮೂಲಕ ತನ್ನ ಶಕ್ತಿ [illegible]

# N. G. O's Plight

**[Srimathi Kamaladevi's statement]**

"The recent N. G. Os' strike is an unusual event that has attracted considerable attention The public is bound to regard this as a regrettable incident, for any action that leads to the upsetting of the adminstrative machinery is undesirable

No body is happy that such a situation should have arisen. But a careful perusal of the N G. Os' case convinces one that they had a very genuine grievance. T h e y also seem to have tried and exhausted every other means before resorting to what one must admit as the last and desperate resort when all other means have proved futile. Over decades and centuries peaceful non-co-operation has become the recognised weapon of those who are bereft of any other aid. That the N. G. Os, including such responsible officers as Tahsildars and Sub-Magistrates should have been driven to this desperation speaks volumes for the seriousness of the situation That it should have been allowed to deteriorate to this state is most regrettable and the Government even as the public must equally bear

Therefore regrettable as this incident is, it is equally important that the basic cause that led to such a situation is completely removed and no occasion left for their recrudescence. That this is in a way being realised is obvious from one change in the Government's attitude from its original unbending one. Unfortunately it is not a clean change of heart. For it is accompanied by a policy of victimisation which will mean that whatever relief is given through the concessions is embittered by the severe penalties that are being inflicted on certain categories. Instead, the Government were to show a high statesman-ship and completely close this chapter by drawing a curtain over this incident and make a fresh start so that no thorns from the past are left to rankle in the hearts of this vast army of workers, who form the heart throb of our Governmental machinery. I t h e r e f o r e appeal to the Government to drop this policy of victimisation taking into consideration the depth of their grievances and justice of their cause.

Hospet, **Sd. Kamaladevi Chattopadhyaya.**
14-1-48

---

ಶ್ರೀ ರಾಜೇಂದ್ರಪ್ರಸಾದರ ಬದಲಾಗಿ ಭಾರತದ ಆಹಾರ ಮಂತ್ರಿಗಳಾಗಿ ಬಿಹಾರಿನ ಗವರ್ನರರಾಗಿದ್ದ ಶ್ರೀ ಜಯರಾಮದಾಸ ದೌಲತರಾಮರು ನಿಯುಕ್ತರಾದರು. ಶ್ರೀ ಎಂ. ಎಸ್. ಅಣೆಯವರು ಬಿಹಾರಿನ ಗವರ್ನರರಾದರು.

ಪಶ್ಚಿಮ ಬಂಗಾಲದ ಮಂತ್ರಿಮಂಡಳವು ಡಾ. ಬಿಧನಚಂದ್ರರಾಯರ ಅಧ್ಯಕ್ಷತೆಯಲ್ಲಿ ಪುನರ್ಘಟಿತವಾಗುವದೆಂದು ತಿಳಿದುಬಂದಿದೆ.

## ಕುಮಾರೀ ಮಾತೆ

ಹೆಂಗಸರು ಮತದಾನದ ಹಕ್ಕನ್ನು ಪಡೆಯಲು ಇಂಗ್ಲೆಂಡಿನಲ್ಲೊಮ್ಮೆ ತೀವ್ರ ಹೋರಾಟ ನಡೆಸಿ ಜಯಶೀಲರಾದರು. ೨೧ ನೆಯ ವರ್ಷ ಮುಟ್ಟಿದ ಎಲ್ಲ ತರುಣಿಯರಿಗೂ ಮತದಾನದ ಹಕ್ಕು ಲಭಿಸಿತು. ಆದರೆ ಅವರಿಗೆ ೨೧ ವರ್ಷ ವಯಸ್ಸು ಎಂದು ಹೇಳಿಕೊಳ್ಳಲು ನಾಚಿಕೆ, ಅವಮಾನ! ಈ ಕಾರಣದಿಂದ ಚುನಾವಣೆಯಲ್ಲಿ ಎಷ್ಟೋ ಹುಡುಗಿಯರು ಮತದಾನಕ್ಕೆ ಹೋಗಲಿಲ್ಲ. ಇದ್ದ ವಯಸ್ಸಿಗಿಂತ ನಂಬಬಹುದಾದಷ್ಟು ವರ್ಷಗಳನ್ನು ಕಡಿಮೆ ಹೇಳುವುದು ಇಂದು ನಮ್ಮಲ್ಲಿ ಅನೇಕರು ಒಂದು ಬುದ್ಧಿವಂತಿಕೆ, ಚೆನ್ನು ಎಂದೇ ತಿಳಿದುಕೊಂಡಿದ್ದಾರೆ. ಯಾವಾಗಲೂ ಮಿಸ್-ಕುಮಾರಿ ಎನ್ನಿಸಿಕೊಳ್ಳಬೇಕೆಂಬ ಚಪಲಕ್ಕಿಂದು ವಿಜ್ಞಾನಿಗಳು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ.

ದ್ರೋಣಾಚಾರ್ಯರ ಹೆಂಡತಿ ಮಕ್ಕಳಾಗಬೇಕೆಂದು ಪರಮೇಶ್ವರನಿಂದ ಬೇಡಿ ಪಡೆದ ಪ್ರಸಾದ ದ್ರವ್ಯವನ್ನು ಒಂದು ಕುದುರೆ ತಿಂದು ಅಶ್ವತ್ಥಾಮ ಹುಟ್ಟಿದನಂತೆ! ಹನುಮಂತನು ಲಂಕೆ ಸುಟ್ಟನಂತರ ಬಾಲದ ತುದಿಯನ್ನು ಸಮುದ್ರದಲ್ಲಿ ಅದ್ದಿದಾಗ ಅವನ ಬೆವರ ಹನಿಯೊಂದು ಅಲ್ಲಿ ಉದುರಿತು. ಅದನ್ನು ತಿಂದ ಹೆಣ್ಣುಮೀನೊಂದು ಪಾತಾಳ ಲೋಕದಲ್ಲಿ ಮತ್ಸ್ಯಹನುಮನೆಂಬ ವಜ್ರಕಾಯ ಕಪೀಶ್ವರನನ್ನು ಹಡೆಯಿತಂತೆ! ಅರ್ಥಾತ್ ತಂದೆಯು ನೇರವಾದ ಸಂಬಂಧವಿಲ್ಲದೆ ಕುಮಾರೀ ಮಾತೆಯಿಂದ ಹುಟ್ಟುವ ಮಕ್ಕಳಿಗಿಂದು Test-Tube Babies ಕುಮಾರೀಜಾತರೆನ್ನುತ್ತಾರೆ. ಈಗ ಅಮೇರಿಕಾದಲ್ಲಿ ಇಂತಹ ೧೦ ಸಾವಿರ ಮನುಷ್ಯರಿದ್ದಾರಂತೆ.

ನ್ಯಾಯವಾದ ಕುಟುಂಬದಲ್ಲಿ ಹುಟ್ಟಿದ ಮಕ್ಕಳಿಗಿರುವ ಸಾಮಾಜಿಕ ಹಕ್ಕುಬಾಧ್ಯತೆಗಳು ತಮಗೂ ಇರಬೇಕು ಎಂದು ಆ ಕುಮಾರೀ ಜಾತರಿಂದು ಅಮೇರಿಕಾದಲ್ಲಿ ಆಂದೋಲನವನ್ನೆಬ್ಬಿಸಿದ್ದಾರೆ. ಈ ಆಂದೋಲನದ ಮುಖಂಡರಾದ ಚಿಕಾಗೋದ ಡಾ. ಸ್ಟುಬಿಟ್ ವಿಚಿಲರು ಅದೊಂದು ಆಧುನಿಕ ಕ್ರಮವಾದುದರಿಂದ ಸಮಾಜವು ಅದರ ವಿಷಯವಾಗಿ ಆಧುನಿಕ ಮನೋಭಾವವನ್ನು ತಾಳಬೇಕೆಂದು ಸಾಧಿಸುತ್ತಾರೆ. ಅವರ ಜನನಕ್ಕೆ ಸಮಾಜವೇ ಕಾರಣವಾದುದರಿಂದ ಅವರವಾದ ತಪ್ಪೆಂದು ಹೇಳಲು ಬರದು. ವಿಚಿತ್ರವನ್ನು ಕಾಣಹೋದ ಮಾನವನ ಬುದ್ಧಿ ಆ ವಿಚಿತ್ರದ ಫಲವನ್ನು ಭೋಗಿಸದಿದ್ದರಾದೀತೆ? [ಕರ್ಮವೀರ]

### ಜನವರಿ ೨೬ ಸ್ವಾತಂತ್ರ್ಯ ದಿನಾಚರಣೆ

"ಈ ವರ್ಷ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ಆವಶ್ಯಕತೆ ಉಳಿದಿರುವದಿಲ್ಲ. ಆದರೆ ಸ್ವರಾಜ್ಯ ಸಾಧನೆಗಾಗಿ ಪ್ರಾಣನೀಡಿದವರ ಸ್ಮರಣೆಗಾಗಿ ಇನ್ನುಮೇಲೆ ಈ ದಿನವನ್ನು ಆಚರಿಸುತ್ತ ಬರಬೇಕು" ಎಂದು ಕಾಂಗ್ರೆಸ್ ಅಧ್ಯಕ್ಷರಾದ ರಾಜೇಂದ್ರ ಪ್ರಸಾದರು ಹೇಳಿಕೆ ಕೊಟ್ಟಿದ್ದಾರೆ.

## ಹೊಸಪೇಟೆ ಜಿಲ್ಲಾ ಮುನ್ಸೀಫರವರ ಕೋರ್ಟಿನಲ್ಲಿ

**O S 299/47**

ಭಿಕ್ಷಾವತಿ ಮಠದ ಸೋಲಭಯ್ಯ — ವಾದಿ

Vs

೧. ದೇಶಾಯಿ ಚಿಂತಾಮಣಿ
೨. ಮೈನರ್ ಸತ್ಯಪ್ಪ ಬೈ ಗಾರ್ಡಿಯನ್ ಮದರ್ ಹನುಮವ್ವ
೩. ಭಿಕ್ಷಾವತಿ ಫಕೀರಯ್ಯ
} ಪ್ರತಿವಾದಿಗಳು

ಮೊದಲನೆಯ ಪ್ರತಿವಾದಿಯು ಹಾಜರಾಗಲು ಈ ವ್ಯಾಜ್ಯವನ್ನು 26-1-'48 ದಿನಾಂಕಕ್ಕೆ ನಿಶ್ಚಿತಗೊಳಿಸಲಾಗಿದೆ. ಆದಿನ ಹಾಜರಾಗದಿದ್ದರೆ ಆತನು ಎಕ್ಸ್‌ಪಾರ್ಟಿಯಾಗಿ ಗಣಿಸಲ್ಪಡುವನೆಂದು ಈ ಮೂಲಕ ತಿಳಿಸಲಾಗಿದೆ.

13-1-48, ಹೊಸಪೇಟೆ

ಎಂ. ರಂಗನಾಥಾಚಾರ್,

## ವಿಜಾತಿಜಾತರು

ರಕ್ತ ಮಿಶ್ರವಾಗಬಾರದು, ಕುಲಶುದ್ಧಿಯನ್ನು ಕಾಯ್ದುಕೊಳ್ಳಬೇಕು ಎನ್ನುವುದು ನಾಜೀವಾದ. ಮಿಶ್ರಕುಲೋತ್ಪನ್ನರು ವ್ರಾತ್ಯರೆನಿಸಿ ರೂಪಶೀಲಾ ಗುಣಗಳಲ್ಲಿ ವಿಲಕ್ಷಣರಾಗಿ ಕುಲಕ್ಕೆ ತಕ್ಕವರೆನಿಸುವುದಿಲ್ಲವೆಂಬುದೇ ಈ ವಾದದ ಸಾರಾಂಶ ಆದರಿಂದ ವಿಜ್ಞಾನಿಗಳು ವಿಜಾತಿಜಾತರೇ ಹೆಚ್ಚು, ಆರೋಗ್ಯದೃಢಕಾಯರೂ, ಹೃಷ್ಟಪುಷ್ಟರೂ ಆಗಿರುವರೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದ್ದಾರೆ. ನಮ್ಮ ನಾಡಿನಲ್ಲಿ ಈ ಕಾರಣದಿಂದಲೆ ಹಿಂದಿನಿಂದಲೂ ಸಗೋತ್ರ ವಿವಾಹವನ್ನು ನಿಷೇಧಿಸಿದ್ದಾರೆ. ವಿಗೋತ್ರಜರು ಸಂತತಿಯ ಚಿರಂತನತೆಗೆ ಕಾರಣರಲ್ಲದೆ ಸಗೋತ್ರಜರಲ್ಲ.

ಮೇಲಿನ ಪ್ರಯೋಗವನ್ನು ಬನಕರು, ಪಶುಪಕ್ಷಿ, ಹಣ್ಣುಹೂವು, ನರವಾನರ ಈ ಎಲ್ಲ ಸಸ್ಯ ಪ್ರಾಣಿಗಳಲ್ಲಿ ನಡೆಸಿದ್ದಲ್ಲದೆ ತರಕಾರಿಗಳಲ್ಲೂ ಅಮೇರಿಕನ್ನರು ನಡೆಸಿಬಿಟ್ಟಿದ್ದಾರೆ. ಈ ಗುಟ್ಟನ್ನರಿತುಕೊಂಡು ತಮ್ಮ ಧಾನ್ಯಾದಿ ಉತ್ಪನ್ನವನ್ನು ಹೆಚ್ಚಿಸಿಕೊಂಡಿದ್ದಾರೆ. ಇದರಿಂದ ಅವರು ಹೆಚ್ಚಿನ Vitamin ಜೀವ ಸತ್ವವುಳ್ಳ ಟೊಮ್ಯಾಟೋ (ಚಪ್ಪರಬದನೆ) ಬೆಳೆಯಲಾರಂಭಿಸಿದ್ದಾರೆ. ಫ್ಲೋರಿಡದಲ್ಲಿ ಆಗಲೆ ಮೂಲಭೂತವಾದ ೪೦ ಸಾವಿರ ಸಸ್ಯಗಳನ್ನು ವರ್ಗೀಕರಿಸಿ ತಯಾರಿಸಿಟ್ಟಿದ್ದಾರೆ ಆಧುನಿಕ ವಿಜ್ಞಾನದ ಪ್ರಕಾರ ಅವುಗಳ ವಿಲಕ್ಷಣ ಸಂಯೋಗದಿಂದ ನಾನಾವಿಧವಾಗಿ ಉತ್ಪಾದನೆಯ ಪರಿಮಾಣ ಮತ್ತು ಗುಣವನ್ನು ಹೆಚ್ಚಿಸಲನುಕೂಲ ಉಂಟಾಗಿದೆ. ಭಾರತವು ಮುಖ್ಯವಾಗಿ ಒಕ್ಕಲುತನದ ದೇಶ ಇಲ್ಲಿ ಹೂ, ಹಣ್ಣು, ತರಕಾರಿಧಾನ್ಯ ಮುಂತಾದುವುಗಳ ಗುಣಪರಿಮಾಣಗಳನ್ನು ವರ್ಧಿಸಲು ಅಗತ್ಯವಾದ ವೈಜ್ಞಾನಿಕ ಸಂಶೋಧನ, ತಯಾರಿಕೆ ನಡೆಯಬೇಕಾದುದು ಅತ್ಯಗತ್ಯ. ಹೀಗಿರುವಲ್ಲಿ ನಮ್ಮ ತರುಣ ವಿಜ್ಞಾನಿಗಳೂ ಬಂಡವಾಲಿಗರ ಸರಕಾರಗಳೂ ಸಹಕರಿಸಿ ಈ ವಿಜಾತಿ ಸಂಯೋಗಕ್ರಮವನ್ನು ಬಳಕೆಗೆ ತರಲು ಆಧುನಿಕ ವಿಜ್ಞಾನದ ಸಹಾಯವನ್ನು ತೆಗೆದುಕೊಳ್ಳುವುದು ಪ್ರಗತಿಮಾರ್ಗದ ಪ್ರಥಮ ಹೆಜ್ಜೆಯಲ್ಲವೆ? ನಮ್ಮ ದನಕರುಗಳಾದರೂ ದೈಹಿಕ ಬೆಳವಣಿಗೆ ಮತ್ತು ಹಾಲು ಹೈನಗಳಲ್ಲಿ ಬಹಳಹೀನಸ್ಥಿತಿಯಲ್ಲಿವೆ. ಅವುಗಳ ಸಂವರ್ಧನಕ್ಕೂ ಮೇಲೆ ಹೇಳಿದ ವಿಜಾತಿ ಸಂಸರ್ಗ ಪದ್ಧತಿಯನ್ನು ರೂಢಿಯಲ್ಲಿ ತರುವುದು ಶ್ರೇಯಸ್ಕರವಲ್ಲವೆ? ಇತ್ತಕಡೆಗೆ ಸರಕಾರದ ಒಕ್ಕಲುತನ ಶಾಖೆ ಗಮನವೀಯುವುದೆ?

## ನೇತಾಜಿ ಸುಭಾಸಬೋಸರು ಜೀವಂತ ಇದ್ದಾರೆ!

ನೇತಾಜೀ ಸುಭಾಸಬೋಸರ ಬಗ್ಗೆ ಅವರ ಹಿರಿಯ ಅಣ್ಣಂದಿರು 'ನ್ಯಾಶನಲ್ ಪ್ರೆಸ್' ಪ್ರತಿನಿಧಿಗೆ ತಮ್ಮ ಹೇಳಿಕೆಯನ್ನು ಕೊಡುತ್ತ, ಕೆಳಗಿನಂತೆ ಹೇಳಿದರು.

ನೇತಾಜಿಯವರು ನಿಶ್ಚಯವಾಗಿ ಜೀವಂತರಿರುವರೆಂದು ನನ್ನ ದೃಢನಂಬಿಕೆ ಇದೆ. ಅವರು ಸೋವಿಯೇಟ್ ರಶಿಯಾದೊಳಗಿನ ಯಾವದೋ ಒಂದು ಪ್ರಾಂತದಲ್ಲಿ ಪ್ರಚ್ಛನ್ನ ರೂಪದಿಂದ ಇರಹತ್ತಿದ್ದಾರೆ. ಸದ್ಯದ ರಷ್ಯಾದ ಪತ್ರಿಕೆಗಳಲ್ಲಿ ಹಿಂದೂಸ್ಥಾನದ ಒಳ್ಳೇ ರಾಜನೀತಿಜ್ಞರ ಹೊರತು ಯಾರಿಗೂ ತಿಳಿಯಲಶಕ್ಯವಾಗದಂಥ ಭರತಖಂಡದ ಸಂಬಂಧವಾದ ರಾಜನೀತಿಯ ವಿವರಣೆಗಳು ಪ್ರಕಟವಾಗಿರುತ್ತವೆ. ಇದಲ್ಲದೆ ನೇತಾಜಿಯವರ ವಾಣಿಯ ಪ್ರಭಾವವನ್ನು ಸೂಚಿಸುವ ಕಾರ್ಯಕ್ರಮವನ್ನು 'ಬಂಗಾಲಿ ಭಾಷೆ'ಯಲ್ಲಿ ಮಾಸ್ಕೋ ರೇಡಿಯೋವು ಪ್ರಾರಂಭಿಸಿದೆ. ಅಲ್ಲದೇ ನೇತಾಜಿಯವರ ನಂಬಿಗಸ್ಥ ಸೈನಿಕನೂ, ಆತ್ಮೀಯ ವ್ಯಕ್ತಿಯೂ ಆದ ಕರ್ನಲ್ ಹಬೀಬುರ್ ರಹಿಮಾನರು ಎಷ್ಟೇ ಪೀಡಿಸಿ, ಹಿಂಸಿಸಿ ಕೇಳಿದಾಗ್ಯೂ ನೇತಾಜಿಯವರಿಗೆ ಕೊಟ್ಟವಚನದ ಪ್ರಕಾರ ಅವರ ಬಗ್ಗೆ ಒಂದೇ ಒಂದು ಹೇಳಿಕೆಯನ್ನು ಬಿಟ್ಟು ಬೇರೆ ಯಾವ ವಿಷಯವನ್ನೂ ಹೇಳಲಿಕ್ಕೆ ಅಸಮರ್ಥರಾಗಿದ್ದಾರೆ.

ನವಭಾರತಕ್ಕೆ ಚಂದಾದಾರರಾಗಿರಿ

# ಬಳ್ಳಾರಿಯಲ್ಲಿ ಕರ್ನಾಟಕ ಏಕೀಕರಣ ಪ್ರಚಾರ

## ಶ್ರೀ ಶಿದ್ದಪ್ಪ ಕಂಬಳಿ – ಕೊಳ್ಳಿವಕೀಲರು

೧೧ ನೆಯ ದಿನಾಂಕ ಬಳ್ಳಾರಿಜಿಲ್ಲೆಯ ಪೂರ್ವ ತಾಲೂಕುಗಳಲ್ಲಿ ಏಕೀಕರಣ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಬಂದ ಶ್ರೀ ಶಿದ್ದಪ್ಪಕಂಬಳಿ, ಶ್ರೀ ದೇವರೆಡ್ಡಿ ಕೊಳ್ಳಿವಕೀಲರು ಕಾರ್ಯಕರ್ತರೊಡನೆ ವಿಚಾರ ವಿನಿಮಯಮಾಡಿ ಆ ದಿನ ಸಾಯಂಕಾಲ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ತಿರುಮಲರಾಯರ ಅಧ್ಯಕ್ಷತೆಯಲ್ಲಿ ಪ್ರಚಂಡ ಜನ ಸಮೂಹದಲ್ಲಿ ಭಾಷಣ ಮಾಡಿದರು. ಧ್ವನಿವಾಹಕ ಯಂತ್ರದ ವ್ಯವಸ್ಥೆಮಾಡಲಾಗಿತ್ತು ಶ್ರೀ ಕಂಬಳಿಯವರ ಪರಿಚಯವನ್ನು ಶ್ರೀ ಚಂದ್ರಶೇಖರಶಾಸ್ತ್ರಿಗಳು ಮಾಡಿದರು.

**ಶ್ರೀ ಕಂಬಳಿಯವರು:** ಕರ್ನಟಕ ಪ್ರಾಂತದ ರಚನೆಯ ಸಮಗ್ರ ಇತಿಹಾಸವನ್ನು ಹೇಳಿ ಈಗಿನ ಪರಿಸ್ಥಿತಿಯಲ್ಲಿ ಹಿಂದೀ ಒಕ್ಕೂಟಕ್ಕೆ ಸೇರಿದ ಸುಮಾರು ೭೦ ಲಕ್ಷ ಜನಸಂಖೆಯ ಪ್ರದೇಶವನ್ನುಮಾತ್ರ ಸಮಾವೇಶಗೊಳಿಸಿ ಕರ್ನಾಟಕ ಪ್ರಾಂತರಚನೆಮಾಡುವುದು ವಿಹಿತವೆಂದರು. ಕನ್ನಡ ಸಂಸ್ಥಾನಗಳ ಗೊಂದಲ ಬಹಳವಿದೆ. ಅಲ್ಲದೆ ನಿಜವಾದ ಜವಾಬ್ದಾರಿ ಸರಕಾರ ಸ್ಥಾಪಿತವಾಗಿಲ್ಲ. ನಾವು ಸಂಸ್ಥಾನಗಳನ್ನು ಈಗಲೇ ನಮ್ಮ ಪ್ರಾಂತದಲ್ಲಿ ಸೇರಿಸಬೇಕೆಂದರೆ ಪ್ರಾಂತೀಕರಣವಾಗುವುದೇ ಕಷ್ಟವಾದೀತು ಎಂದರು. ಗಡಿಭಾಗಗಳಲ್ಲಿ ಯಾವಾಗಲೂ ಕ್ಲಿಷ್ಟಪರಿಸ್ಥಿತಿಯುಂಟು. ಅದಕ್ಕೆ ನಾವು ಬೆದರಬೇಕಿಲ್ಲ. ಈಗಲೇ ಪ್ರಾಂತ ನಿರ್ಮಾಣವಾಗದಿದ್ದರೆ ನಾವು ಸತ್ಯಾಗ್ರಹವನ್ನಾದರೂ ಮಾಡಬೇಕಾದೀತು ಎಂದು ಹೇಳಿ ಮುಗಿಸಿದರು.

**ಶ್ರೀ ಕೊಳ್ಳಿವಕೀಲರು:** ಶ್ರೀ ಕಂಬಳಿಯಂಥ ಪ್ರತಿಭಾಶಾಲಿ ವ್ಯಕ್ತಿಗಳು ಪ್ರಾಂತರಚನೆಯ ಕಾರ್ಯಕ್ಕೆ ಮುಂದೆ ಬಂದದ್ದು ಪ್ರಶಂಸನೀಯ. ನಾವು ಛಿಪ್ರರಾಗಿದ್ದ ಕಾರಣ ನಮಗೆ ಅನ್ಯಾಯಗಳಾಗಿವೆ ಅನೇಕ ವಿಭಿನ್ನ ಚಳವಳಿಗಳು ಒಡಮೂಡಿವೆ. ಆದರೂ ಘಟನಾ ಸಮಿತಿಯ ಕಾರ್ಯವು ಮುಗಿಯುವುದರೊಳಗಾಗಿಯೇ ನಮ್ಮ ಭವಿಷ್ಯವನ್ನು ನಿರ್ಣಯಿಸಿಕೊಳ್ಳಲು ಶಾಂತಯುತ ಮಾರ್ಗಗಳಿಂದ ನಾವು ಒಕ್ಕಟ್ಟಿನಿಂದ ಯತ್ನಿಸೋಣ ಎಂದರು. ಶ್ರೀ ಕೊ. ಚನ್ನಬಸಪ್ಪನವರು, ಶ್ರೀ ಷಡಕ್ಷರ ಶಾಸ್ತ್ರಿಗಳು ತಂದ ಎರಡು ನಿರ್ಣಯಗಳೂ ಸ್ವೀಕೃತವಾದವು. ಆಂಧ್ರರೊಡನೆ ಕರ್ನಾಟಕ ಪ್ರಾಂತದ ನಿರ್ಮಾಣವಾಗಬೇಕು. ಪಂಡಿತ ನೆಹರೂರ ಹೇಳಿಕೆಯಿಂದ ಕ್ಷೋಭೆಗೆ ಕಾರಣವಾಗಿದೆ. ಪ್ರಾಂತ ನಿರ್ಮಾಣಕ್ಕೊಪ್ಪದಿದ್ದರೆ ಘಟನಾಸಮಿತಿ ಎ.ಐ ಸಿ.ಸಿ. ಶಾಸನ ಸಭ್ಯರನ್ನು ಹಿಂದಕ್ಕೆ ಕರೆಸಿ ವಿಧ್ವಂಸಕ ಮಾರ್ಗಗಳಿಲ್ಲದ ಸತ್ಯಾಗ್ರಹ ಹೂಡಬೇಕು ಎಂಬುದೇ ನಿರ್ಣಯಗಳ ಸಾರಾಂಶ. ಶ್ರೀ ಬಸವರಾಜ ಮರುಳ ಸಿದ್ದಯ್ಯ, ಅಧ್ಯಕ್ಷರ ಅಂತ್ಯಭಾಷಣದನಂತರ ಸಭೆಯು ಮುಗಿಯಿತು.

# ಇದು ಯುಕ್ತವೆ ?

ಭಾರತದ ಉದಾರ ತೀರವನ್ನು ಬಿಟ್ಟುಹೋಗುವ ಮುಂಚೆ ರೆವರೆಂಡ ಡಾ. ಜಾನ್ ಹೇನ್ಸ್ ಹೋಮ್ಸರು ಒಂದು ಸುದೀರ್ಘವಾದ ಪತ್ರದಲ್ಲಿ ಹೀಗೆ ಬರೆಯುತ್ತಾರೆ.

"ನೀವೇನೋ ವ್ಯಥಿತರಾಗಿದ್ದೀರಿ. ಇತ್ತೀಚಿನ ದುರಂತಗಳಿಂದ ಬಹಳ ಕುಗ್ಗಿಹೋಗಿದ್ದೀರಿ, ಆದರೆ ಇದರಿಂದ ನಿಮ್ಮ ಜೀವನದ ಧ್ಯೇಯಸಾಧನೆಯು ಕುಂಠಿತವಾಗುವುದೆಂದು ಭಾವಿಸಬಾರದು. ಮಾನವ ಪ್ರಕೃತಿ ಬಹಳ ಸಹಿಸಲಾರದು. ಅದು ಅತಿಭಾರದಿಂದ ನುಚ್ಚುನೂರಾಗಿ ಹೋಗುತ್ತದೆ ಈ ಸಂದರ್ಭದಲ್ಲಿ ಒದಗಿದ ಸೋಲು ಎಷ್ಟು ಆಕಸ್ಮಿಕವೋ ಅಷ್ಟು ಭಯಂಕರವಾಗಿತ್ತು. ಆದರೆ ನಿಮ್ಮ ಬೋಧೆ ಮತ್ತು ನೇತೃತ್ವಗಳು ಎಂದಿನಂತೆ ಸತ್ಯವೂ, ಯುಕ್ತವೂ ಆಗಿ ಉಳಿದಿವೆ ಏಕಾಕಿಯಾಗಿ ನೀವು ಪರಿಸ್ಥಿತಿಯನ್ನು ಉಳಿಸಿದಿರಿ ಮತ್ತು ತಾತ್ಕಾಲಿಕವಾಗಿ ಸೋಲೆಂದು ತೋರಿದ್ದ ಪರಿಸ್ಥಿತಿಯಿಂದ ನೀವು ಗೆಲುವನ್ನು ಸಂಪಾದಿಸಿದಿರಿ. ಕಳೆದ

ಈ ತಿಂಗಳುಗಳು ನಿಮ್ಮ ಅಸದೃಶವಾದ ಜೀವನದಲ್ಲಿ ಅತ್ಯುತ್ತುಂಗ ಕಾಲವೆಂದು ನಾನು ಎಣಿಸುತ್ತೇನೆ. ಈ ಕಾರಾಗಾರದಲ್ಲಲ್ಲದೆ ನೀವೆಂದೂ ಇಷ್ಟು ಮಹಾತ್ಮರಾಗಿದ್ದಿಲ್ಲ.

ಮೇಲಿನ ಸಾಧನೆ ಸರಿಯಾದುದೆಂದು ಹೇಳಲು ತಕ್ಕ ಪ್ರಮಾಣವಿದೆಯೆಂಬುದು ಸಂಧಿಗ್ಧವೆಂದೇ ನನ್ನ ಎಣಿಕೆ. ಡಾ. ಹೋಮ್ಸರು ಹೇಳಿದ್ದಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿ ಅಹಿಂಸೆಯ ಬಗೆಗೆ ಪ್ರಮಾಣೀಕರಿಸಬಹುದು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ನನ್ನ ಕಷ್ಟವು ಮೂಲಭೂತವಾದುದು. ಅಹಿಂಸೆಯ ಗುಣಗಳನ್ನು ಪ್ರದರ್ಶಿಸಲು ಅಗತ್ಯವಿರುವ ಅರ್ಹತೆಯನ್ನು ನಾನು ಎಷ್ಟೇ ಅಪೂರ್ಣವಾಗಿಯಾಗಲಿ ಸಂಪಾದಿಸಿರುವೆನೆ? ಇದು ಸಂದಿಗ್ಧ. ಆದುದರಿಂದ ನಿಸ್ಸಂದೇಹವಾಗಿ ಸಿದ್ಧಪಡಿಸಿ ತೋರಿಸಲಾರದ ಸಾಧನೆಗಳನ್ನು ಮುಂಚಾಚುವಲ್ಲಿ ಅತ್ಯಂತ ಎಚ್ಚರಿಕೆ ತೆಗೆದುಕೊಳ್ಳಬೇಕೆಂಬುದಕ್ಕೆ ಅನೇಕ ಕಾರಣಗಳಿವೆಯೆಂದು ನನಗೆನಿಸುತ್ತದೆ

ಹೊಸದಿಲ್ಲಿ, ಮೋ. ಕ. ಗಾಂಧಿ
೩-೧-೧೯೪೮.

---

## ವಿದ್ಯಾರ್ಥಿ ನಿಲಯ ಮತ್ತು ಹರಿಜನರು

ಮಂದಿರಗಳು, ಭಾವಿಗಳು, ಧರ್ಮಶಾಲೆಗಳು, ಶಾಲೆಗಳು, ಭೋಜನಾಲಯ ಮುಂತಾದವುಗಳು ಹರಿಜನರಿಗೆ ಮುಕ್ತದ್ವಾರ ಮಾಡಲ್ಪಟ್ಟವೆಂದು ಮುಂಬಯಿ ಸರಕಾರದವರು ಶಾಸನವನ್ನು ಮಾಡಿರುವರಷ್ಟೆ. ಈ ಶಾಸನಾನುಸಾರ ವಿದ್ಯಾರ್ಥಿನಿಲಯಗಳು, ಶಾಲೆ ಕಾಲೇಜುಗಳಲ್ಲಿಯ ವಿದ್ಯಾರ್ಥಿನಿಲಯಗಳು ಹರಿಜನರಿಗೆ ಮುಕ್ತದ್ವಾರ ಮಾಡಲ್ಪಟ್ಟವೆಂಬುದು ಸಿದ್ಧವಾಗುತ್ತಿದ್ದರೂ ಆಚರಣೆಯಲ್ಲಿ ಮಾತ್ರ ಇದೆಲ್ಲ ಇನ್ನೂ ಸಾಧ್ಯವಾಗಿಲ್ಲ ಎಂದು ಶ್ರೀ ಪರೀಕ್ಷಿತಲಾಲರು ಬರೆಯುತ್ತಾರೆ. ಶಾಲೆ ಕಾಲೇಜುಗಳಲ್ಲಿಯ ಅಧಿಕಾರಿಗಳು ಕಾಲಕ್ಕೆ ತಕ್ಕಂತೆ ನಡೆಯುವುದನ್ನು ವಿದ್ಯಾರ್ಥಿಗಳಷ್ಟು ಇನ್ನೂ ಅಳವಡಿಸಿಕೊಂಡಿಲ್ಲೆಂಬುದು ತಮ್ಮ ಅನುಭವಕ್ಕೆ ಬಂದಿದೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ಈ ವರುಷ ಮುಗಿದು ಹೊಸವರುಷಕ್ಕಾಗಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳಲಾಗುವದು. ಆಗ ಅಧಿಕಾರಿಗಳು ಹರಿಜನ ವಿದ್ಯಾರ್ಥಿಗಳಿಗೆ ಅವಶ್ಯಕ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದೂ ಅವರು ತಮ್ಮ ಹಕ್ಕುಗಳಿಗಾಗಿ ಕಾಯದೆಯ ಮೊರೆಹೋಗದಂತೆ ನೋಡಿಕೊಳ್ಳಬೇಕೆಂದೂ ಅವರು ಸಲಹೆ ಇತ್ತಿದ್ದಾರೆ. ಭಾವನಗರ ಮತ್ತು ಕಾಠೇವಾಡದಲ್ಲಿಯ ಉಳಿದ ಸ್ಥಳಗಳಲ್ಲಿಯ ವಿದ್ಯಾರ್ಥಿನಿಲಯಗಳೆಲ್ಲ ಹರಿಜನ ವಿದ್ಯಾರ್ಥಿಗಳಿಗೆ ಮುಕ್ತದ್ವಾರವಾಗುವಂತೆ ಶಿಫಾರಸ ಮಾಡಬೇಕೆಂದು ಅವರು ನನಗೆ ಸೂಚಿಸಿದ್ದಾರೆ.

ಅವರ ಸೂಚನೆಯನ್ನು ನಾನು ಅಮೋದಿಸುತ್ತೇನೆ. ಅಲ್ಲದೆ ವಿದ್ಯಾರ್ಥಿನಿಲಯಗಳಲ್ಲಿಯ ವಿದ್ಯಾರ್ಥಿಗಳು ನಿಷ್ಠರಾಗಿದ್ದರೆ ಈ ವಿಷಯದಲ್ಲಿ ಅವರು ಯಶಸ್ವಿಗಳಾಗುವದು ನಿಶ್ಚಿತವೆಂದು ನಾನು ಅಭಿಪ್ರಾಯಪಡಬಯಸುತ್ತೇನೆ. ಸದ್ಯದ ಯುಗದಲ್ಲಿ ವ್ಯವಸ್ಥಾಪಕ ಮಂಡಳದ ಸ್ವೇಚ್ಛಾಪ್ರವೃತ್ತಿಯು ಕಾರ್ಯಕಾರಿಯಾಗಲಾರದು. ವಿಶೇಷತಃ ಇಂಥ ಸಂದರ್ಭಗಳಲ್ಲಿ ಅವರು ತಪ್ಪಿನಲ್ಲಿ ಮತ್ತು ವಿದ್ಯಾರ್ಥಿಗಳ ಸಪಥದಲ್ಲಿ ಇರುವಾಗ ಅವರು ಸ್ವೇಚ್ಛಾಪ್ರವೃತ್ತಿ ಎಂದಿಗೂ ಫಲಿಸದು. ಅದೇನೇ ಇದ್ದರೂ ಯಾವದೇ ಬಗೆಯ ಅಡ್ಡಿ ಆತಂಕಗಳಿಲ್ಲದೆ ಹರಿಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಸಿಕ್ಕಲಿಕ್ಕೇಬೇಕು.

ಹೊಸದಿಲ್ಲಿ, ಮೋ. ಕ. ಗಾಂಧಿ.
೬-೧-೪೮

---

ಕಾಶ್ಮೀರದ ದಾಳಿಗಾರರ ಮುಖಂಡನಾದ ಸರ್ದಾರ ಮಹಮ್ಮದಖಾನರು ಕೂಡ ನ್ಯೂಯಾರ್ಕಿಗೆ ಪ್ರಯಾಣಮಾಡಿದರು. ಅಂತರಾಷ್ಟ್ರೀಯ ಸಂಸ್ಥೆಯ ಮುಂದೆ ಕಾಶ್ಮೀರ ಸ್ವತಂತ್ರ ಸರಕಾರದ ವಾದವನ್ನು ಮಂಡಿಸುವದೇ ಅವರ ಉದ್ದೇಶವಂತೆ

# ಪಾಕಿಸ್ತಾನದ ನುಂಗಾರಿತನ

ನಮ್ಮಲ್ಲಿ "ಅತಿಯಾನೆ ಗತಿಗೆಡಿಸುವುದು" ಎಂಬ ಒಂದು ಗಾದೆಯ ಮಾತುಂಟು. ಶಕ್ತಿಮೀರಿ ತಿಂದರೆ ಅಜೀರ್ಣವಾಗುವ ಹೆದರಿಕೆಯುಂಟು. ಯಾವುದೋ ಒಂದು ವ್ಯಕ್ತಿಯಾಗಲಿ, ಒಂದು ದೇಶವಾಗಲಿ, ಅತಿ ಆಸೆಯಿಂದ ಪ್ರೇರಿತವಾಗಿ, ಸಿಕ್ಕದ್ದನ್ನು ಹಿಂದುಮುಂದೆ ನೋಡದೆ ನುಂಗಾರಿತನ ಮಾಡಿ ನುಂಗ ತೊಡಗಿದರೆ, ಅಜೀರ್ಣವಾಗಿ, ಹೊಸದಾಗಿ ನುಂಗಿದ್ದನ್ನು ಅರಗಿಸಿಕೊಳ್ಳಲಾರದೆ ಹೊರಹಾಕುವ ಪ್ರಸಂಗವು ಒದಗುವುದಲ್ಲದೆ ಅದರೊಡನೆ ಮೊದಲು ಹೊಟ್ಟೆಯೊಳಗಿದ್ದುದೂ ಹೊರಬರುವುದುಂಟು. ಈ ಮಾತು ನಿಸರ್ಗ ಸತ್ಯವಾದದ್ದು. ಇತ್ತೀಚಿನ ಮೂರು ನಾಲ್ಕು ತಿಂಗಳುಗಳಲ್ಲಿ ಪಾಕಿಸ್ತಾನವು ನಡೆಸಿದ ಕಾರಭಾರವನ್ನು ನೋಡಿದರೆ ಈ ಮಾತಿನ ಸತ್ಯತೆಯು ಕಂಡುಬರದೆ ಇರದು. ಅದೂ ತನಗೆ ಬೇಕು, ಇದೂ ತನಗೆ ಬೇಕು, ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಕ್ಕೆ ಭಾರತದಲ್ಲಿ ರಹದಾರಿ ಬೇಕು. ಮುಸಲ್ಮಾನ ಅರಸನಿರುವ ಸಂಸ್ಥಾನಗಳೆಲ್ಲವೂ ತನಗೇ ಬೇಕು. ಈ ರೀತಿಯಾಗಿ ಈ 'ಬೇಕು' ಗಳ ದೊಡ್ಡದೊಂದು ಸಂತೆಯನ್ನೇ ನೆರವಿಕೊಂಡು, ಕೈಲಾಗದುದು ಮೈಯೆಲ್ಲ ಪರಕೊಂಡಿತೆಂಬಂತೆ ಆಚರಣೆಯನ್ನು ಮಾಡುತ್ತಿರುವ ಪಾಕಿಸ್ತಾನವನ್ನು ನೋಡಿದರೆ ಯಾವ ತಳಹದಿಯ ಮೇಲೆ ಈ 'ಸ್ತಾನ'ವನ್ನು ಕಟ್ಟಿದ್ದಾಗಿದೆಯೋ ತಿಳಿಯುವಂತೆಯೇ ಇಲ್ಲ ಅಥವಾ ಬಹುಶಃ 'ನುಂಗಾರಿತನ' ವೇ ಅದರ ಧ್ಯೇಯವಾಗಿರಬಹುದೇ ಎಂಬ ಶಂಕೆ ಬರುತ್ತದೆ.

ಆದರೆ ಈ ನುಂಗಾರಿತನವು ಬರಿ ಭಾರತ ಮಾತ್ರವಷ್ಟಕ್ಕೇ ಸಂಬಂಧಿಸಿದಂತೆ ತೋರುತ್ತದೆ. ಏಕೆಂದರೆ ಬರಿ ಜಾತೀಯತೆಯ ತಳಹದಿಯ ಮೇಲೆ ಈ 'ಸ್ತಾನ' ಕಟ್ಟಿದ್ದಾಗಿದೆ ಎನ್ನಬೇಕೇ ಸುಮಾರು ಪಾಕಿಸ್ತಾನದಲ್ಲಿರುವ ಸರಿಸಮ ಸಂಖ್ಯೆಯಷ್ಟು ಮುಸಲ್ಮಾನರು ಭಾರತದಲ್ಲಿದ್ದಾರೆ. ಅವರ ಗತಿಸ್ಥಿತಿಗಳ ಬಗ್ಗೆ ಬಾಯಿ ಬಿಡದೆ ತಣ್ಣಗೆ ಕೂತ ಪಾಕಿಸ್ತಾನವನ್ನು ಜಾತೀಯತೆಯ ತಳಹದಿಯ ಮೇಲೆ ಕಟ್ಟಿದ್ದೆಂದು ಎನ್ನಲು ಬರುವಂತಿಲ್ಲ. ಹಾಗಾದರೆ ಪಾಕಿಸ್ತಾನವನ್ನು ಜಾತೀಯ ತಳಹದಿಯ ಮೇಲೆ ಕಟ್ಟಿಲ್ಲವಲ್ಲದೇ ಜುನಾಗಡ, ಕಾಶ್ಮೀರ ಮೊದಲಾದ ಮುಸಲ್ಮಾನ ಅರಸರಿರುವ ಮುಸಲ್ಮಾನ ಬಹುಸಂಖ್ಯಾಕರಿರುವ ಸಂಸ್ಥಾನಗಳನ್ನು ಗಳಂಕೃತ ಮಾಡಲು ಹಾತೊರೆಯುತ್ತಲಿದೆ. ಮಾಡಬಹುದಾದ, ಮಾಡಬಾರದಾದ ಎಲ್ಲ ಉಪಾಯಗಳನ್ನು ಕೈಕೊಂಡು ಅವನ್ನು ತನ್ನೆಡೆಗೆ ಎಳೆದುಕೊಳ್ಳಲು ಹವಣಿಸುತ್ತದೆ. ಇತ್ತ ಮುಸಲ್ಮಾನ ಅರಸನಿರುವ ಹೈದರಾಬಾದಂಥ ದೊಡ್ಡ ಸಂಸ್ಥಾನದಲ್ಲಿ ತನ್ನ ಕೈ ಚಾಚಿ ಸಂಸ್ಥಾನವೆಲ್ಲಾ ಘನಘೋರ ಅಶಾಂತಿಯ ತಾಂಡವ ನಡೆಯುವಂತೆ ಮಾಡಿದೆ. ಹೈದರಾಬಾದಿನಲ್ಲಿರುವ ಇತ್ತೆಹಾದ ಮುಸ್ಲಿಂ ಸಂಸ್ಥೆಯವರು ಈ ಪಾಕಿಸ್ತಾನೀ ಆಮಿಷಕ್ಕೆ ಬಲಿಬಿದ್ದು, ಜಾತಿದ್ವೇಷದ ಬೀಜವನ್ನು ಸಂಸ್ಥಾನದ ತುಂಬ ಬಿತ್ತುತ್ತಿರುವರಲ್ಲದೆ ಅನೇಕ ಅಮಾನುಷವಾದ ಅನಸ್ವಿತ ಕೃತ್ಯಗಳನ್ನು ಸಂಸ್ಥಾನದ ತುಂಬ ನಡೆಸಿರುವುದು ವರ್ತಮಾನ ಪತ್ರ ಓದುವವರಿಗೆ ತಿಳಿದ ಮಾತೇ ಆಗಿದೆ. ಈ ಎಲ್ಲ ಘಟನೆಗಳ ಮೂಲದಲ್ಲಿ ಪಾಕಿಸ್ತಾನೀ ನುಂಗಾರಿತನವಿದ್ದದ್ದು ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಿದಲ್ಲಿ ತಿಳಿದು ಬರುವಂತಿದೆ.

ಮೊನ್ನೆ ಮೊನ್ನೆ ಪಾಕಿಸ್ತಾನದ ಪರದೇಶ ಮಂತ್ರಿಗಳಾದ, ಸರ್ ಜಾಫರ ಉಲ್ಲಾ ಖಾನ ಕರಾಚಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಮುಂದೆ ಹೇಳಿಕೆ ಕೊಡುವಾಗ ತೆಗೆದ ಉದ್ಗಾರಗಳಂತೂ ಈ ನುಂಗಾರಿತನದ ಪ್ರತ್ಯಕ್ಷ ನಿದರ್ಶನಗಳಾಗಿವೆ. ಅವರು "ಇತ್ತೀಚೆಗೆ ಹಿಂದೂ

ಸ್ಥಾನಗಳ ನಡುವೆ ಆದ ಆರ್ಥಿಕ ಒಪ್ಪಂದದ ಪ್ರಕಾರ ನಡೆಯಲಿಕ್ಕೆ ಆಗದೆಂದು ಹಿಂದುಸ್ಥಾನ ಸರಕಾರವು ಸಾರಿಬಿಟ್ಟಿದೆ. ಈ ಒಪ್ಪಂದದಂತೆ ಪಾಕಿಸ್ಥಾನಕ್ಕೆ ಬರಬೇಕಾದ ೫೫ ಕೋಟಿ ರೂಪಾಯಿ ನಗದು ಹಣವನ್ನು ಕೊಡಲು ನಿರಾಕರಿಸುವದಲ್ಲದೆ, ಪಾಕಿಸ್ಥಾನದ ಹೆಸರಿನಲ್ಲಿ ಹಿಂದುಸ್ಥಾನದಲ್ಲಿಡಲಾದ, ಯುದ್ಧ ಸಾಮಗ್ರಿ ಸೈನ್ಯಖಾತೆಯ ಇತರ ವಸ್ತುಗಳಿಗೆ ಪಾಕಿಸ್ಥಾನವು ಕೈಕೂಡ ಹಚ್ಚಬಾರದೆಂದು ಹೇಳಿದೆ. ಈ ವಿಷಯವಾಗಿ ಹಿಂದುಸ್ಥಾನ ಸರಕಾರವು ಪರಸ್ಪರ ಸೌಹಾರ್ದ ಭಾವನೆಯಿಂದ ನಡೆದುಕೊಳ್ಳುವ ಉದ್ದೇಶದಿಂದ ಈ ಒಪ್ಪಂದವು ಮಾಡಿಕೊಳ್ಳಲಾಗಿದೆಯೆಂದು ಹೇಳುತ್ತದೆ. ಆದರೆ ನಿಜವಾಗಿ ಈ ಒಪ್ಪಂದಕ್ಕೆ ಈ ಬಗೆಯ ಯಾವ ನಿರ್ಬಂಧಗಳೂ ಇದ್ದಿಲ್ಲವೆಂದು ನಾನು ಹೇಳುತ್ತೇನೆ. ಪಾಕಿಸ್ಥಾನ ಸ್ಥಾಪನೆಯ ಬಗ್ಗೆ ಹಟ ಹಿಡಿದು ಕಾರ್ಯ ಸಾಧಿಸಿದ ಮುಸಲ್ಮಾನರನ್ನು ದಂಡಿಸಿ ಸೇಡು ತೀರಿಸಿಕೊಳ್ಳುವ ಭಾವನೆಯಿಂದ ಹಿಂದುಸ್ಥಾನ ಸರಕಾರವು ವರ್ತಿಸತೊಡಗಿದೆ ಪಾಕಿಸ್ಥಾನವನ್ನು ಆಕ್ರಮಿಸಿ ಅದು ಪುನಃ ಹಿಂದುಸ್ಥಾನಕ್ಕೇ ಸೇರುವಂತೆ ಅದನ್ನು ಒತ್ತಾಯಪಡಿಸಲು ಈ ಮಾರ್ಗವನ್ನು ಕೈಕೊಳ್ಳಲಾಗಿದೆ. ಕಾಶ್ಮೀರದ ದಾಳಿಯಲ್ಲಿ ನಮ್ಮ ಯಾವ ಅಂಗವೂ ಇಲ್ಲ ಆದರೆ ಹಿಂದುಸ್ಥಾನ ಸೈನ್ಯಕ್ಕೆ ಪಾಕಿಸ್ಥಾನದಲ್ಲಿ ನಿಂತು ದಾಳಿಗಾರರನ್ನು ಎದುರಿಸಲು ನಾವು ಒಪ್ಪಿಗೆ ಕೊಡಲಾರೆವು" ಎಂದು ಇನ್ನೂ ಅನೇಕ ತರಹದ ಈ ಬಗೆಯ ಅಪ್ರಾಮಾಣಿಕ, ಅಸಂಬದ್ಧ, ಒಂದಕ್ಕೊಂದು ವಿರುದ್ಧ, ಹೇಳಿಕೆಗಳನ್ನು ಕೊಟ್ಟಿದ್ದಾರೆ.

ಸರ್ ಜಾಫರ್ ಉಲ್ಲಾರ ಉಕ್ತಿಗಳನ್ನು ಕೇಳಿದರೆ ಕನಿಕರದ ನಗೆ ಬರುವಂತಿದೆ. ಬಾಯಿಂದ ಆಶೀರ್ವಾದ ಮಾಡುತ್ತಲೇ ಕೈಯಿಂದ ಕತ್ತು ಹಿಚುಕುವ ಕಾರ್ಯವನ್ನು ಅವರು ಮಾಡುತ್ತಿದ್ದಾರೆಂದು ಹೇಳಬಹುದು. ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಮಂಡಲಕ್ಕೆ ಒಪ್ಪಿಸಲು ತಮ್ಮ ಒಪ್ಪಿಗೆಯಿದೆಯಂತೆ ಆದರೆ ಭದ್ರತಾಮಂಡಲದವರು ಪಾಕಿಸ್ಥಾನಕ್ಕೆ ಕಾಶ್ಮೀರವನ್ನು ಕೊಡಿಸದಿದ್ದರೆ ಆ ನಿರ್ಣಯವನ್ನು ತಾವು ಒಪ್ಪುವುದಿಲ್ಲವಂತೆ. ಇದೇ ಬಗೆಯ ಅನೇಕ ಮಾತುಗಳು ಪಾಕಿಸ್ಥಾನೀ ರಾಜಕಾರಣಗಳಿಂದ ಆಗಾಗ ಹೊರಡುತ್ತಿರುವುದನ್ನು ಕೇಳುವುದು ವಾಡಿಕೆಯಾಗಿಬಿಟ್ಟದ್ದರಿಂದ ಅದರಿಂದ ಆಶ್ಚರ್ಯವಾಗುವಂತಹದೇನೂ ಇಲ್ಲ. ಜಿನ್ನಾ, ಲಿಯಾಖತ, ಜಾಫರುಲ್ಲಾ ತ್ರಿಮೂರ್ತಿಗಳು ಬರಿ ತಮ್ಮ ಕಾರ್ಯ ಸಾಧನೆಗಾಗಿ ಬೇಕಾದಾಗ ಬೇಕಾದಂತಹ ಮಾತುಗಳನ್ನು ಆಡುತ್ತಿರುವದು ರಾಜಕಾರಣಕ್ಕೆ ಸಹಜವೆಂದು ಅವರ ಮತವಿದ್ದರೂ, ಅದರಿಂದ ಪಾಕಿಸ್ಥಾನದ ಸುಂಗಾರಿತನವು ಮಾತ್ರ ವ್ಯಕ್ತವಾಗದೆ ಇರದು.

ಈ ರೀತಿ ಮಾತುಕತೆ ಆಡುವುದೂ ಅದರಂತೆ ನಡೆಯುವುದೂ ಯಾವ ರೀತಿಯಿಂದಲೂ ಸ್ವಪರ ಹಿತಕರವಾದ ಮಾತಲ್ಲವೆಂದು ಅನುಭವಿಗಳು ಆಗಾಗ್ಗೆ ಹೇಳುತ್ತಿರುವುದು ಸತ್ಯವಾದ ಮಾತು. ಈ ಸುಂಗಾರಿತನದಿಂದ ಪಾಕಿಸ್ಥಾನಕ್ಕೆ ಹಿತವಾಗದು. ಯಾವದಕ್ಕಾದರೂ ಮಿತಿಯಿರುವುದು. ಮಿತಿ ಮೀರಿದರೆ ಅದರಿಂದ ಕೇಡು ತಪ್ಪದು.

## ದೊಡ್ಡ ಹರಿವಾಣ

ಬಿಜಾಪುರ ಪ್ರಾಂತದ ಶ್ರೀ ಪ್ರಹ್ಲಾದಾಚಾರ್ಯ ಸಾಥೀಪುರ ಇವರು ಇಲ್ಲಿಗೆ ಆಗಮಿಸಿದ ಅನುಕೂಲ್ಯವನ್ನು ಸದುಪಯೋಗಪಡಿಸಿಕೊಂಡು ಅವರಧ್ಯಕ್ಷತೆಯಲ್ಲಿ ೧೨ ನೆಯ ದಿನಾಂಕ ಕರ್ನಾಟಕ ಸಂಘದ ಕಛೇರಿಯಲ್ಲಿ ಕನ್ನಡಿಗರ ಸಭೆಯು ಸಮಾವೇಶವಾಗಿದ್ದಿತು. ಕರಣಂ ಭೀಮಸೇನರಾಯರು ಮತ್ತು ಅಧ್ಯಕ್ಷರು ಪ್ರಾಂತ ಮತ್ತು ಭಾಷೆಯ ಏಳಿಗೆಯ ಬಗ್ಗೆ ಸೂಚನೆಗಳನ್ನು ಕೊಟ್ಟು ಈ ಕ್ಲಿಷ್ಟಪರಿಸ್ಥಿತಿಯಲ್ಲೇನು ಮಾಡಬೇಕೆಂಬುದನ್ನು ವಿವರವಾಗಿ ತಿಳಿಸಿದರು. ಕ. ಪ್ರಾಂ. ಕಾಂಗ್ರೆಸ್ ಸಮಿತಿ, ಅಖಿಲ ಕರ್ನಾಟಕ ಮಹಾಸಮಿತಿಯ ಕ್ರಿಯಾ ಸಮಿತಿ, ಸಾಹಿತ್ಯ ಸಮ್ಮೇಳನ, ಏಕೀಕರಣ ಸಮಿತಿಯವರ ತೀರ್ಮಾನಗಳಿಗೆ ಬೆಂಬಲ ಕೊಡುವ ಹೈದರಾಬಾದಿನಲ್ಲಿ ನಡೆಯುತ್ತಿರುವ ದಬ್ಬಾಳಿಕೆಯನ್ನು ಖಂಡಿಸುವ ತೀರ್ಮಾನಗಳಾದವು.

## ಕರ್ನಾಟಕ ಪ್ರಾಂತರಚನೆ
### ವಿಶೇಷ ಮಾತು ಕ್ರಿಯಾಶೀಲತೆಯ ಲಕ್ಷಣವಲ್ಲ
**[ಪ್ರಾಂತೀಯ ಕಾಂಗ್ರೆಸ್ ಸಭೆಯಲ್ಲಿ ಶ್ರೀ ಟಿ. ಆರ್. ನೆಸ್ವಿಯವರ ಭಾಷಣ]**

"ರಾಜೀನಾಮೆಯನ್ನು ಕೊಡುವುದು ಸುಲಭ ಮಾತಾಗಿದೆ. ಯಾರು ಕಳೆದ ಆಂದೋಲನದಲ್ಲಿ ಬೇಕಷ್ಟು ತ್ಯಾಗ ಮಾಡಿ ಸಂಕಷ್ಟಗಳನ್ನು ಅನುಭವಿಸಿರುವರೋ ಅವರಿಗೆ ರಾಜೀನಾಮೆ ಕೊಡುವುದು ಕಠಿಣದ ಮಾತೇನಲ್ಲ. ನಮ್ಮಗಳ ವಿಷಯದಲ್ಲಿ ನಮ್ಮ ಇತಿಹಾಸವೇ ಸಾಕ್ಷಿಯಾಗಿದೆ. ಆದರೆ ಇತಿಹಾಸವಿಲ್ಲದವರೇ ಸಾಕಷ್ಟು ಸಿದ್ಧರಿರುವರೋ ಇಲ್ಲವೋ ಎಂಬುದು ಹೇಳಬರುವಂತಿಲ್ಲ. ಏಕೆಂದರೆ ಏಕೀಕರಣಕ್ಕಾಗಿ ಲಕ್ಷಗಟ್ಟಲೆ ಹಣ ಕೂಡಿಸಬೇಕೆಂದು ಈ ವರೆಗೆ ಪ್ರಯತ್ನ ಮಾಡಿದರು ಕೇವಲ ಆರೇಳು ಸಾವಿರ ರೂಪಾಯಿ ಮಾತ್ರ ಕೂಡಿವೆ

ಕೇವಲ ಮಾತು ಪ್ರಕಟನೆಗಳ ಮೇಲಿಂದ ಮಾನವನ ನಿಜಕ್ರಿಯಾ ಶಕ್ತಿಯು ವ್ಯಕ್ತವಾಗುವುದಿಲ್ಲ ವಿಶೇಷ ಮಾತು ಕ್ರಿಯಾ ಶೀಲತೆಯ ಲಕ್ಷಣವಲ್ಲ ಅಲ್ಲದೆ ವಿಶೇಷ ಮಾತು ಸಂದಿಗ್ಧತೆಯ ಚಿಹ್ನೆಯೂ ಆಗಿದೆ ಯಾರಿಗೆ ಗುರಿಯನ್ನು ಸಾಧಿಸುವೆನೆಂಬ ಸ್ಪಷ್ಟತೆ ಹಾಗೂ ಸಾಮರ್ಥ್ಯವಿದೆಯೋ ಅವರು ಹೆಚ್ಚಾಗಿ ಮಾತನಾಡುವುದಿಲ್ಲ ವೇಳೆ ಬಂದಾಗ ಕಾರ್ಯಮಾಡಿ ತೋರಿಸುವರು. ಮತ್ತು ಹಾಕಿಕೊಟ್ಟ ಕಾರ್ಯಕ್ರಮವನ್ನು ಒಮ್ಮನಸ್ಸಿನಿಂದ ಅಚಲ ನಿಷ್ಠೆಯಿಂದ ಸಾಧಿಸಲು ಸಿದ್ಧರಿರುವರು

ಆದ್ದರಿಂದ ಈ ಪ್ರಸಂಗದಲ್ಲಿ ನಿಷ್ಠೆಯಿಂದ ಮುಖಂಡರು ಕೊಡುವ ಕಾರ್ಯಕ್ರಮದ ಕಡೆ ಲಕ್ಷ್ಯವಿಟ್ಟು ಶಾಂತಿಯಿಂದ ಕಾರ್ಯ ನಡೆಸಬೇಕು ಮೊನ್ನಿನ ಮೈಸೂರು ಆಂದೋಲನದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಜೇಲಿಗೆ ಹೋಗುವದಿಲ್ಲವೆಂದು ಅನ್ನುತ್ತಿದ್ದರು ಆ ಕಾಲದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಹೊರಗಿರುವುದು ಅವಶ್ಯಕವಿದ್ದಿತು. ಈ ಬಗ್ಗೆ ವಿನಂತಿಯನ್ನು ಮಾಡಿಕೊಂಡೆವು. ಆದರೂ ಅವರು ತಡೆಯದೆ ಕಾರಾಗೃಹಕ್ಕೆ ಧಾವಿಸಿದರು. ಹೀಗೆ ಪ್ರಸಂಗ ಒಂದಾಗ ಕಾರ್ಯಮಾಡುವ ಸಾಮರ್ಥ್ಯವುಳ್ಳವರ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸುವುದು ಸರಿಯಲ್ಲ. ಆದರೆ ಕಾರ್ಯಮಾಡುವಲ್ಲಿ ಗೌರವ ಶಿಸ್ತು, ಘನತೆ ಇಂದಿನ ಪರಿಸ್ಥಿತಿ ಇವೆಲ್ಲವನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಯೂನಿಯನ್ ಸರ್ಕಾರದ ನಮ್ಮ ಮಾನ್ಯ ಮಂತ್ರಿಗಳಾದರೂ ನಮ್ಮ ಕಾರ್ಯಕ್ಕೆ ವಿರುದ್ಧವಿಲ್ಲ. ಅವರಲ್ಲಿ ನಮ್ಮ ವಿಶ್ವಾಸ ಹೋಗಿಲ್ಲ ಅವರಿಗೆ ಕರ್ನಾಟಕವನ್ನು ಬಿಟ್ಟು ಆಂಧ್ರ ಪ್ರಾಂತ್ಯವನ್ನು ನಿರ್ಮಾಣ ಮಾಡುವುದಾದರೆ ಕನ್ನಡಿಗರಿಗೆ ಹೇಗೆ ಹಾನಿಯಾಗುವುದೆಂಬುದನ್ನು ಸಂಪೂರ್ಣವಾಗಿ ತಿಳಿಸಿ ಹೇಳಿದರೆ ಅವರು ಒಪ್ಪುವರೆಂದು ಭರವಸೆ ಇದೆ ಒಪ್ಪದಿದ್ದಲ್ಲಿ ಅಂದೇ ನಮ್ಮಗಳ ರಾಜೀನಾಮೆ ಏಕೆ ಎಲ್ಲ ಸಂಸ್ಥೆಗಳ ಸದಸ್ಯರ ರಾಜೀನಾಮೆಗಳನ್ನು ಕೊಡಿಸಬೇಕಾಗುವುದು. ಇಷ್ಟೇ ಅಲ್ಲ ಕರ್ನಾಟಕ ಹಾಗೂ ಕನ್ನಡಿಗ ಅಧಿಕಾರಿಗಳೆಲ್ಲರೂ ರಾಜೀನಾಮೆ ಕೊಡಿಸಿ ಅಸಹಕಾರವನ್ನು ಹೂಡುವ ವಿಚಾರದಲ್ಲಿ ಇದ್ದೇವೆ. ಈ ರೀತಿಯು ಎಲ್ಲ ಆಶಯಗಳನ್ನೊಳಗೊಂಡ ಈ ಗೊತ್ತುವಳಿಯನ್ನು ಅನುಮೋದಿಸಿದೆ."

### — ಗಾಂಧೀಜಿ ಉಪವಾಸದ ಪ್ರಥಮಫಲ —
### ಪಾಕಿಸ್ತಾನಕ್ಕೆ ೫೫ ಕೋಟಿ ರೂ

ಹಿಂದೂ ಮುಸಲ್ಮಾನರಲ್ಲಿ ಸ್ನೇಹ ಸೌಹಾರ್ದಗಳು ಬೆಳೆಯಬೇಕೆಂದರೆ ಅದಕ್ಕೆ ಪ್ರತಿಬಂಧಕವಾದ ಅಂಶಗಳ ನಿವಾರಣೆಯಾಗಬೇಕು ಎಂಬ ಮಹಾತ್ಮಾ ಗಾಂಧಿಯವರ ಉಪವಾಸದ ಆಶಯವನ್ನರಿತು ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಒಪ್ಪಂದದ ಪ್ರಕಾರಕ್ಕೆ ೫೫ ಕೋಟಿ ರೂಗಳನ್ನು ಕೊಡಲು ನಿಶ್ಚಯಿಸಿರುತ್ತಾರೆ. ಪಂಡಿತ ಜವಹರಲಾಲರು ಒಂದು ಹೇಳಿಕೆಯನ್ನು ಕೊಟ್ಟು ಗಾಂಧೀಜಿ ಆಶಯವನ್ನು ಪಾಲಿಸುವುದೇ ತಮ್ಮ ಧ್ಯೇಯವೆಂದು ಹೇಳಿದ್ದಾರೆ.

**The Rayalaseema Bank Ltd., H. O. Bellary.**

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ : 1939.

ಮುಖ್ಯ ಕಾರ್ಯಾಲಯ — **ಬಳ್ಳಾರಿ.**

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

**ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3 ¼% —— ಎರಡು ವರ್ಷ 3½%

ಸೀಸನ್ ಡಿಪಾಜಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.

ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.

ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ** ಬಿ. ಎ., ಬಿ. ಎಲ್.,
ಛೇರ್ಮನ್ಸ್ - ಬೋರ್ಡ್ ಆಫ್ ಡೈರೆಕ್ಟರ್ಸ್.

**ಬಿ. ವಿ. ಶೇಷಗಿರಿರಾವು** ಬಿ. ಕಾಂ.,
ಕಾರ್ಯದರ್ಶಿ.

---

## ವಿಂಧ್ಯರಾಣಿ ಕಥಾಸಾರಾಂಶ.

ದುರ್ಜಯನು ಅಣ್ಣನಾದ ಜಯವೀರ ಸಾರ್ವಭೌಮನನ್ನು ಕೊಲ್ಲಿಸಿ ವಿಂಧ್ಯರಾಜನಾದನು. ಜಯವೀರನ ಮಗನಾದ ಶಿವಶ್ರೀ ವಿಂಧ್ಯರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಶತಮಿತ್ರನಿಂದ ರಹಸ್ಯವಾಗಿ ಸಾಕಲ್ಪಟ್ಟು ಯುಕ್ತವಯಸ್ಸಿಗೆ ಬಂದಾಗ ಪ್ರತಿಜ್ಞೆಯನ್ನು ಸ್ವೀಕರಿಸಿ, ಪಿತೃಋಣವನ್ನು ತೀರಿಸಲು ವಿಂಧ್ಯರಾಜನ ಆಶ್ರಯದಲ್ಲೇ ಕೆಲಸಕ್ಕೆ ಸೇರಿದನು.

ಅವಂತಿಯು ಸಾಮಂತ ರಾಜನ ಮಗಳು ವಿಂಧ್ಯರಾಜನು ಆಕೆಯನ್ನು ವರಿಸಿ ಪಟ್ಟದರಾಣಿಯನ್ನಾಗಿ ಮಾಡುವೆನೆಂದು ಕಳಿತಂದು ವಿಂಧ್ಯರಾಣಿಯೆಂಬುದಾಗಿ ಸಾರಿದನು ಈ ರಹಸ್ಯವು ಶಿವಶ್ರೀಗೆ ತಿಳಿಯಿತು. ಈ ವಂಚನೆಯಿಂದ ಅವಂತಿಯನ್ನು ರಕ್ಷಿಸಲು ಶಿವಶ್ರೀಯು ಯತ್ನಿಸಿದನು. ಅವಂತಿಯು ಕೂಡ ಶಿವಶ್ರೀಯನ್ನು ಗೌರವಿಸಿ ಅವನಿಗೆ ತಿಳಿಯದಲೇ ಅವನನ್ನು ಪ್ರೇಮಿಸಲಿಕ್ಕೆ ಯತ್ನಿಸಿದಳು. ಉಭಯರು ಕೊನೆಯಲ್ಲಿ ಪ್ರೇಮಪಾಶದಲ್ಲಿ ಸಿಕ್ಕಿಬಿದ್ದರು. ಆ ಸಮಯದಲ್ಲೇ ವಿಂಧ್ಯರಾಜನನ್ನು ಕೊಲ್ಲಲು ಶತಮಿತ್ರನು ಶಿವಶ್ರೀಗೆ ಸಂಕೇತವನ್ನು ಕಳುಹಿಸಿದನು. ಪ್ರೇಮ ಮಹಾತ್ಮ್ಯೆಯಿಂದ ಶಿವಶ್ರೀಯಲ್ಲಿ ಉತ್ತಮ ಕ್ಷಾತ್ರತೇಜವು ಪ್ರಕಾಶಿಸಿ ಹತ್ಯೆಯು ನೀಚವೆಂದು ಹೊಳೆಯಿತು. ಆದರೆ ಹಗೆಯನ್ನು ಸಾಧಿಸಬೇಕಲ್ಲವೇ ? ಈ ಪ್ರತಿಜ್ಞಾಪಾಲನೆಗೆ ಅವಂತಿಯು ಅಡ್ಡ ಬರಬಹುದೆಂದು ತನ್ನನ್ನು ಮರೆತು ಹೋಗಬೇಕೆಂದು ತಿಳಿಸಿ ಶಿವಶ್ರೀಯು ಪ್ರತಿಜ್ಞಾಪಾಲನೆಗೆ ಹೊರಟನು. ತನ್ನ ಪ್ರೇಮಮಾರ್ಗದಲ್ಲಿ ವಿಂಧ್ಯರಾಜನು ಅಡ್ಡನಿರುವನೆಂದು ಆ ರಾತ್ರಿ ಅವಂತಿಯು ವಿಂಧ್ಯರಾಜನನ್ನು ಕೊಂದು ಶಿವಶ್ರೀಯನ್ನು ಪಡೆಯಬೇಕೆಂದು ನಿಶ್ಚಯಿಸಿಕೊಂಡಳು. ಆ ರಾತ್ರಿ ಶಿವಶ್ರೀಯು ವಿಂಧ್ಯರಾಜನನ್ನು ಹೊಡೆದೆಬ್ಬಿಸಿ ತನ್ನಜನ್ಮವನ್ನು ಪ್ರಕಟಿಸಿಕೊಂಡು ಹಗೆ ತೀರಿಸಲು ಬಂದೆನೆಂದು ಅಟ್ಟಹಾಸ ಮಾಡಿ ವಿಲಾಪಮಾಡುತ್ತಿದ್ದ ವಿಂಧ್ಯರಾಜನನ್ನು ಕರುಣಿಸಿ ಹೊರಟು ಹೋದನು ಪಶ್ಚಾತ್ತಾಪದಿಂದ ದಿಗ್ಭ್ರಾಂತಿಯಲ್ಲಿದ್ದ ವಿಂಧ್ಯರಾಜನನು ತಿವಿದು ಅವಂತಿಯು ಓಡಿಹೋದಳು. ಗಾಯಹೊಂದಿದ ವಿಂಧ್ಯರಾಜ ಭಯದಿಂದ ರಹಸ್ಯಮಾರ್ಗವಾಗಿ ಪಾತಾಳಕೂಪವನ್ನು ತೆರೆದು ಅಂತರ್ಧಾನವಾದನು. ಅವಂತಿಯು ವಿಂಧ್ಯರಾಜನನ್ನು ಹತ್ಯಮಾಡಿದ್ದಕ್ಕೆ ಅಸಹ್ಯದಿಂದ ಶಿವಶ್ರೀಯು ಆಕೆಯನ್ನು ಪರಿತ್ಯಜಿಸಿದನು. ಆಕೆಯು ಎದುರುಬಿದ್ದು ಹಂತಕನು ಶಿವಶ್ರೀಯೇ ಎಂದು ಅವನನ್ನು ರಾಜಭಟರಿಗೆ ಒಪ್ಪಿಸಿದಳು. ಶಿವಶ್ರೀಗೆ ಮರಣಶಿಕ್ಷೆಯು ವಿಧಿಸಲಾಗಿ ರಹಸ್ಯವನ್ನು ಬಯಲಿಗಿಡದೆ ಅವನು ಮರಣಕ್ಕೆ ತಯಾರಾದಾಗ ಅವಂತಿಗೆ ಆಂದೋಳನವಾಗಿ ಜೈಲಿಗೆ ಹೋಗಿ ಬಿಡಿಸಲೆತ್ನಿಸಿದಳು. ಒಬ್ಬರಿಗಾಗಿ ಒಬ್ಬರು ಆತ್ಮಹತ್ಯ ಮಾಡಿಕೊಳ್ಳಲೆತ್ನಿಸಿದಾಗ ವಿಂಧ್ಯರಾಜನು ಪ್ರತ್ಯಕ್ಷವಾಗಿ ರಾಜ್ಯವನ್ನು ಶಿವಶ್ರೀಗೆ ಒಪ್ಪಿಸಿ ಶಿವಶ್ರೀ ಅವಂತಿಯರಿಗೆ ವಿವಾಹಮಾಡಿದನು. ಎಲ್ಲವೂ ಮಂಗಳಪ್ರದವಾಗಿ ನೆರವೇರಿತು.

38

**Prabhat Talkies**

# Vindhya Rani

[ in TELUGU ]

***First Week From 14-1-'48***

"ಪ್ರಭಾತ್" ನಲ್ಲಿ ತೆಲುಗು ಚಲಚಿತ್ರ

# ವಿಂಧ್ಯರಾಣಿ

**ಮೊದಲನೆಯ ವಾರ [ 14-1 48 ರಿಂದ ]**

ವೈಜಯಂತಿ ಫಿಲ್ಮಿಸ್ :— ಡಿ. ವಿ. ಸುಬ್ಬರಾವು

ಪುಷ್ಪವಲ್ಲಿ ನಟಿಸಿದ್ದಾರೆ

ಕಥಾಸಾರಾಂಶ ಒಳಗೆ ನೋಡಿರಿ.




---


**NAVA BHARAT, BELLARY** Reg. No. M 4745

ನವಭಾರತ ಬಳ್ಳಾರಿ.

**(Nationalist Weekly)**

| ಚಂದಾದರಗಳು. | | Subscription Rates |
|---|---|---|
| ವರ್ಷಕ್ಕೆ | 5-0-0 | One Year 5-0-0 |
| 6 ತಿಂಗಳಿಗೆ | 3-0-0 | Six months 3-0-0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | | Subscription will not be accepted for less than 6 months. |

*To*

SRI..............................

Printed at Krishna Press Bellary [illegible]

Edited & Published by [illegible]

ಜೈ ಹಿಂದ್.

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0-2-0

F ೧೧
ಚಿಕೆ ೪

ಬಳ್ಳಾರಿ ಜನವರಿ ೨೬ ಸೋಮವಾರ ೧೯೪೮

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ ಕೇಶವರಾವ್.

# ಗಾಂಧೀಜೀ ಉಪವಾಸದ ಅಂತ್ಯ

## ಹಿಂದೂ-ಮುಸಲ್ಮಾನ ಮುಖಂಡರೊಪ್ಪಿದ ಶರ್ತುಗಳು

**ಡೆಲ್ಲಿಯಲ್ಲಿ ಹಿಂದೂ-ಮುಸ್ಲಿಂ-ಸೀಖ ಮುಖಂಡರಿಂದ ಕೂಡಿದ ೧೦೦ ಜನರಿಗಿಂತಲೂ ಹೆಚ್ಚಿನ ಶಾಂತತಾ ಸಮಿತಿಯವರು ಗಾಂಧೀಜೀಯವರಿಗೆ ಪ್ರತಿಜ್ಞಾ ಪತ್ರವನ್ನು ಬರೆದುಕೊಟ್ಟ ನಂತರ ಮಹಾತ್ಮರು ಉಪವಾಸ ಮುರಿದು ಹಣ್ಣಿನ ರಸವನ್ನು ಮೌಲಾನ ಆಜಾದರಿಂದ ಸೇವಿಸಿದರು.**

ಶಾಂತತಾ ಸಮಿತಿಯವರು ಮಹಾತ್ಮರಿಗೆ ಬರೆದು ಕೊಟ್ಟ ಪ್ರತಿಜ್ಞಾ ಪತ್ರವಿಂತಿದೆ:—ದಿಲ್ಲಿಯಲ್ಲಿ ಹಿಂದೂ-ಮುಸ್ಲಿಂ-ಸಿಖರು ನೆಮ್ಮದಿಯಿಂದ ಬಾಳಬೇಕೆಂಬುದು ನಮ್ಮ ಹಾರ್ದಿಕ ಇಚ್ಛೆಯಾಗಿದೆ. ಮುಸ್ಲಿಂರ ವಿತ್ತ ಜೀವಿತಗಳ ರಕ್ಷಣೆ ಮಾಡುವೆವೆಂದು ಪ್ರತಿಜ್ಞೆ ಮಾಡುತ್ತೇವೆ, ಮತ್ತು ದಿಲ್ಲಿಯಲ್ಲಿ ಈ ಮೊದಲು ಸಂಭವಿಸಿದಂಥ ಘಟನೆಗಳು ಇನ್ನು ಮುಂದೆ ಸಂಭವಿಸಲಾರವೆಂದೂ ಹೊಣೆ ಹೊರುತ್ತೇವೆ ಇಲ್ಲದೆ [೧] ಖ್ವಾಜಾ ಕುತುಬುದ್ದೀನ ಉರುಸು ಎಂದಿನಂತೆ ಈ ವರ್ಷವೂ ನಡೆಯುವದು. [೨] ಸಬಜಿಮಂಡಿ, ಪಹಾಡಗಂಜ, ಕರೋಲಬಾಗ ಮತ್ತಿತರ ಪೇಟೆಗಳಲ್ಲಿ ಮುಸ್ಲಿಂರು [illegible] ನಿರ್ಭೀತಿಯಿಂದ ತಿರುಗಾಡಬಲ್ಲರು. (೩) ಮುಸ್ಲಿಂರು ಬಿಟ್ಟು ಹೋದ ಆದರೆ ಈಗ ಹಿಂದುಗಳ ವಶದಲ್ಲಿರುವ ಮಸೀದಿಗಳನ್ನು ಮುಸ್ಲಿಂರಿಗೆ ತಿರುಗಿ ಕೊಡಲಾಗುವದು ಮತ್ತು ಅವರಿಗೆಂದು ಕಾಯ್ದಿಟ್ಟ ಸ್ಥಳವನ್ನು ಬಲತ್ಕಾರದಿಂದ ಆಕ್ರಮಿಸಲಾಗುವದಿಲ್ಲ. (೪) ದಿಲ್ಲಿಯಿಂದ ಹೊರಟು ಹೋದ ಮುಸ್ಲಿಂರು ತಿರುಗಿ ಇಲ್ಲಿಗೆ ಬರಲಿಚ್ಛಿಸಿದರೆ ನಮ್ಮ ಆಕ್ಷೇಪವಿಲ್ಲ. ಅವರು ಇಲ್ಲಿ ಎಂದಿನಂತೆ ಸುಗಮವಾಗಿ ಜೀವನ ನಡೆಸಬಹುದು. ಈ ಎಲ್ಲ ಸಂಗತಿಗಳನ್ನು ನಾವು ಪೋಲೀಸರ ಸಹಾಯವಿಲ್ಲದೆ ಸಾಧಿಸುತ್ತೇವೆಂದು ನಾವು ಆಶ್ವಾಸನ ಕೊಡುತ್ತೇವೆ. ಮಹಾತ್ಮರು ತಮ್ಮ ಉಪವಾಸ ನಿಲ್ಲಿಸಿ ಎಂದಿನಂತೆ ನಮಗೆ ದಾರಿತೋರಬೇಕೆಂದೂ ಕೇಳಿಕೊಳ್ಳುತ್ತೇವೆ

# ನೇತಾಜಿ ಜಯಂತಿ

— ):0:( —

## 23-1-1848.

## ಸುಬಾಷರ ಪುಣ್ಯಸ್ಮರಣೆ

---

**೫೨ ವರ್ಷಗಳ ಕೆಳಗ ಭಾರತಮಾತೆಯ ಪುತ್ರನು ಜನ್ಮಿಸಿದನು. ಇಂದು ಆತನು ಜೀವಿಸಿರುವನೋ ಇಲ್ಲವೋ ಎಂಬುದು ಊಹಾಪೋಹೆಗಳಿಗೆ ಕಾರಣವಾಗಿದೆ.**

---

ಹದಿನಾರು ವರ್ಷದವರಿದ್ದಾಗಲೇ ಅವರ ಸ್ವಾಭಿಮಾನ ಮತ್ತು ಸ್ವಾತಂತ್ರ್ಯ ಪ್ರೇಮ ಕಂಡು ಬಂದಿತು. ೧೯೧೬ನೇ ಇಸವಿಯಲ್ಲಿ ಸಂಭವಿಸಿದ ಘಟನೆಯದು. ಸುಭಾಷರು ವಿಶ್ವವಿದ್ಯಾಲಯಲದಲ್ಲಿದೆ ಕಾನೆ ಕಾಲಿಟ್ಟಿದ್ದರು, ಒಂದು ದಿನ ಯುರೋಪಿಯನ್ ಪ್ರಾಧ್ಯಾಪಕನೊಬ್ಬನು ನಿರರ್ಥಕನಾಗಿ ಹಿಂದುಸ್ಥಾನವನ್ನೂ ಹಿಂದಿ ಜನಾಂಗವನ್ನೂ ಬಹಳ ಟೀಕಿಸಿದನು. ದೂಷಿಸಿದನು, ತೆಗಳಿದನು, ಇದನ್ನು ಕಂಡು ಕೋಪಗೊಂಡ ಹದಿನಾರು ವರ್ಷದ ತರುಣ ಸುಭಾಷನು ಆ ಪ್ರಾಧ್ಯಾಪಕನನ್ನು ವಿಶ್ವವಿದ್ಯಾಲಯದಲ್ಲಿಯೇ ಉಳಿದ ತನ್ನ ಮಿತ್ರರೆದುರು ಚೆನ್ನಾಗ ಥಳಿಸಿದನು ಇದಕ್ಕಾಗಿ ಸುಭಾಷನನ್ನು ವಿಶ್ವವಿದ್ಯಾಲಯಾಧಿಕಾರಿಗಳು ಹೊರಗೆ ಹಾಕಿದರು. ಒಂದು ವರ್ಷದವರೆಗೆ ಪರೀಕ್ಷಗೆ ಪ್ರವೇಶ ಸಿಗಲಾರದೆಂದು ಅಪ್ಪಣೆ ಹೊರಟಿತು. ಆಗ ಶಿಕ್ಷಣಕ್ಕೆ ಶರಣು ಹೊಡೆದು ಸುಭಾಷರು ಒಂದು ವರ್ಷ ಹಿಮಾಲಯ ಸೇರಿದರು. ಮುಂದೆ ತಂದೆ ತಾಯಿಗಳ ಮತ್ತು ಬಂಧು ಬಳಗದವರ ಒತ್ತಾಯದ ಮೇರೆಗೆ ಪುನಃ ವಿಶ್ವವಿದ್ಯಾಲಯ ಪ್ರವೇಶಿದರು.

೧೯೨೧ ರಿಂದ ಅವರು ಹನ್ನೊಂದು ಸಾರೆ ಕಾರಾಗೃಹ ಕಂಡರು. ದ್ವಿತೀಯ ಜಾಗತಿಕ ಯುದ್ಧಾರಂಭವಾಗುವ ನಿಶ್ಚಿತ ಲಕ್ಷಣಗಳನ್ನು ಕಂಡು ಹಿಡಿದು ಅಂಥ ಪ್ರಸಂಗದಲ್ಲಿ ಹಿಂದೀಯರು ಸ್ವಾತಂತ್ರ್ಯ ಹೋರಾಟವನ್ನು ಮನರಾರಂಭಿಸಿ ಬ್ರಿಟಿಶರನ್ನು ಒತ್ತಾಯಪಡಿಸಬೇಕೆಂದು ನುಡಿದರು ಮತ್ತು ಪ್ರಚಾರ ಕಾರ್ಯಾರಂಭದ ಎರಡು ಮೂರು ತಿಂಗಳಲ್ಲಿಯೇ ಯುದ್ಧಾರಂಭವಾಯಿತು ಅನಂತರ ಅವರ ಬಂಧನ, ಸೆರೆಮನೆಯಲ್ಲಿರುವಾ ಅವರಿಗೊದಗಿದ ಅಸ್ವಾಸ್ಥ್ಯ ಅಸ್ವಾಸ್ಥ್ಯದ ಮೂಲಕ ಅವರ ಬಂಧವಿಮೋಚನೆ ಮುಂದೆ ೧೯೪೧ರ ಪ್ರಾರಂಭದಲ್ಲಿ ಅವರ ಕಣ್ಮರೆ, ವೇಷಾಂತರಗೊಂಡು ಯುರೋಪದಲ್ಲಿ ಸಂಚಾರ, ಜಲಾಂತರ್ಗಾಮಿಯ ಸಹಾಯದಿಂದ ಅತೀಪೂರ್ವಕ್ಕೆ ಪ್ರಯಾಣ, ೧೯೪೩ ರಲ್ಲಿ ಸಿಂಗಾಪುರಕ್ಕೆ ಆಗಮನ, ಅಲ್ಲಿಂದ ಹಿಂದ ಸರಕಾರದ ಸ್ಥಾಪನೆ,

11ನೇ ಪುಟವನ್ನು ನೋಡಿರಿ

# ಹರಿಜನರ ಏಳಿಗೆ.

## ಸರ್ಕಾರಕ್ಕೆ ಪ್ರಾಂತೀಯ ಸಮಿತಿಯ ಸಲಹೆಗಳು.

| | | | |
|---|---|---|---|
| 1) | ಮದ್ರಾಸ್ ಪ್ರಾಂತದ 24 ಜಿಲ್ಲೆಗಳಲ್ಲಿ 1 ಲಕ್ಷ ಮನೆಗಳ ಜಾಗಾಗಳನ್ನು ಕೊಳ್ಳಲು | 50 | ಲಕ್ಷ ರೂ. |
| 2) | ,, 3 ಸಾವಿರ ಮನೆಗಳನ್ನು ಕಟ್ಟಲು | 15 | ,, |
| 3) | ,, 10 ಸಾವಿರ ಭಾವಿ ತೆಗೆಸಲು | 10 | ,, |
| 4) | ,, 400 ಗೃಹೋದ್ಯೋಗ ಸಹಕಾರ ಸಂಸ್ಥೆಗಳಿಗಾಗಿ | 10 | ,, |
| 5) | ,, ಆರೋಗ್ಯ, ಶುಚಿತ್ವ, ಚಲನ ಪುಸ್ತಕ ಭಂಡಾರ ಮತ್ತು ಪ್ರಚಾರ ವಾಹನಗಳಿಗಾಗಿ | 5 | ,, |
| 6) | ,, ವೈದ್ಯಕೀಯ ಸಹಾಯ, 10 ಕೇಂದ್ರಗಳಲ್ಲಿ ಪ್ರಚಾರ ವಾಹನಗಳಿಗಾಗಿ | 10 | |
| | | 100 | ಲಕ್ಷ ರೂ |

ಮದ್ರಾಸ್ ಸರ್ಕಾರದವರು ಹರಿಜನರ ಏಳಿಗೆಗಾಗಿ ಮೀಸಲಾಗಿಟ್ಟ ಒಂದು ಕೋಟಿ ರೂ. ಧನವನ್ನು ಈ ಕೆಳಕಂಡ ರೀತಿಯಾಗಿ ವಿನಿಯೋಗಿಸಬೇಕೆಂದು ತಮ್ಮ ಸಲಹೆಗಳೊಂದಿಗೆ ಸರ್ಕಾರದಿಂದ ನಿಯುಕ್ತರಾದ ಸಮಿತಿಯವರು ಶಿಫಾರ್ಸುಮಾಡಿರುತ್ತಾರೆ.

ಈ ಒಂದು ಕೋಟಿ ರೂಪಾಯಿ ದ್ರವ್ಯವನ್ನು ಉಕ್ತ ಉದ್ದೇಶಗಳಿಗಾಗಿ ಐದು ವರ್ಷಗಳಲ್ಲಿ ವಿನಿಯೋಗಿಸತಕ್ಕದ್ದು. ಲೇಬರ್ ಶಾಖೆಯಿಂದ ಹರಿಜನೋದ್ಧಾರವನ್ನು ಬೇರ್ಪಡಿಸಿ ಹರಿಜನೋದ್ಧಾರಕ್ಕೆ ಸಂಬಂಧಿಸಿದ ಮಂತ್ರಿಗಳ ಅಧೀನದಲ್ಲಿ ಪ್ರತ್ಯೇಕವಾದ ಶಾಖೆಯನ್ನು ಏರ್ಪಡಿಸಿ ಪ್ರಾಂತೀಯ ಅಧಿಕಾರಿಯನ್ನು "ಪ್ರೊವಿನ್ಶಿಯಲ್ ಡೈರೆಕ್ಟರ್ ಆಫ್ ಹರಿಜನ್ ವೆಲ್‌ಫೇರ್" ಎಂಬ ಹೆಸರಿನಿಂದ ನಿಯಮಿಸತಕ್ಕದ್ದು. ಅಧಿಕಾರ ಅನಧಿಕಾರ ಸದಸ್ಯರನ್ನುಳ್ಳ ಒಂದು ಸಲಹಾ ಸಮಿತಿಯು ಇರಬೇಕು. ಪ್ರತಿಯೊಂದು ಜಿಲ್ಲೆಗೆ ಒಬ್ಬ ಗೆಜೆಟೆಡ್ ಅಧಿಕಾರಿಯು ಈ ಕಾರ್ಯವನ್ನು ನೋಡಿಕೊಳ್ಳಲು ಇರಬೇಕು. ಹರಿಜನರಿಗಾಗಿ ಇತ್ತೀಚೆಗೆ ಜಾರಿಯಲ್ಲಿ ಬಂದಿರುವ ಸಾಮಾಜಿಕ ಹಕ್ಕುಗಳನ್ನು ಪ್ರಸ್ಥಾಪಿಸಲು ಸದರಿ ಜಿಲ್ಲಾಧಿಕಾರಿಗಳಿಗೆ ನ್ಯಾಯಾಧೀಶರ ಅಧಿಕಾರಗಳಿರಬೇಕು. ಮೇಲ್ಕಾಣಿಸಿದ ಅನೇಕ ಯೋಜನೆಗಳನ್ನು ಜಾರಿಯಲ್ಲಿ ತರಲು ಸಂಬಂಧಿಸಿದ ತಜ್ಞರು ಅವರಿಗೆ ಸಹಾಯ ಮಾಡುವರು. ಈಗಿರುವ ಪ್ರತ್ಯೇಕ ಶಾಲೆಗಳೇ ಮುಂದೆ ಸಾಗಬೇಕು. ಒಳ್ಳೆಯ ಕಟ್ಟಡ, ವಿಶಾಲವಾದ ಆಟದ ಮೈದಾನದ ಸೌಕರ್ಯವಿರಬೇಕಲ್ಲದೆ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಸರಿಪಡಿಸಬೇಕು (ಸಮಿತಿಯ ಸದಸ್ಯರಲ್ಲೊಬ್ಬರಾದ ಬಳ್ಳಾರಿಯ ಶ್ರೀ ಟಿ ಸುಬ್ರಹ್ಮಣ್ಯಂರವರು ಪ್ರತ್ಯೇಕ ಶಾಲೆಗಳು 5 ವರ್ಷಗಳಲ್ಲಿ ನಿರ್ಮೂಲವಾಗಬೇಕೆಂದು ಸೂಚಿಸಿರುವರು] ಶಾಲೆಗಳಲ್ಲೋದುತ್ತಿರುವ ಹರಿಜನ ಬಾಲಬಾಲೆಯರಿಗೆ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ಬಾಲಿಕೆಯರಿಗೆ ವಿಶೇಷ ಪ್ರಾಶಸ್ತ್ಯ ಕೊಡಬೇಕು. ಸರ್ಕಾರದವರು ನಡೆಸುತ್ತಿರುವ ಹಾಸ್ಟಲ್‌ಗಳು ಮೇಲ್ಕಾಣಿಸಿದ ಶಾಖೆಯು ನಡೆಯುವವರೆಗೆ ಮುಂದುವರಿಯತಕ್ಕದ್ದು. ಹೆಚ್ಚಿನ ಗ್ರಾಂಟು ಕೊಡಬೇಕಾದರೆ ಬಾಲಿಕಾನಿಲಯಗಳಿಗೆ ವ್ಯವಸ್ಥಾಪಕರಿರಬೇಕು [ವಾರ್ಡನ್) ವ್ಯಕ್ತಿಗಳು ನಡೆಸುವ ಸಂಸ್ಥೆಗಳಿಗೆ ಉತ್ತೇಜನವಿರಬಾರದು. ವಿದ್ಯಾಭ್ಯಾಸ ಸಂಬಂಧವಿಲ್ಲದ ಚಟುವಟಿಕೆಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು.

### ಸಾಮಾಜಿಕ ಹಕ್ಕುಗಳು.

ಹರಿಜನರಿಗೆ ಸಾಮಾಜಿಕ ಸಮಾನ ಹಕ್ಕುಗಳನ್ನು ಕೊಡಿಸುವ ಉದ್ದೇಶದಿಂದ ಸಮಿತಿಯವರು ಈ ಕೆಳ ಶಿಫಾರ್ಸುಗಳನ್ನು ಮಾಡಿರುವರು.

೧) ಹರಿಜನ ಮತ್ತು ಸವರ್ಣೀಯರಲ್ಲಿ ಈ ಶಾಸನದ ಬಗ್ಗೆ ಹೆಚ್ಚು ಪ್ರಚಾರವಾಗಬೇಕು. ಅವರಲ್ಲೂ ಸರ್ಕಾರಿ ನೌಕರರು ಹೆಚ್ಚು ಶ್ರದ್ಧೆ ವಹಿಸಬೇಕು.

೨) ಕಾಫಿ ಹೋಟೆಲ್, ಊಟದ ಮನೆಗಳು, ಕ್ಷೌರ ಗೃಹಗಳು ವಗೈರೆಗಳ ಮುಂದೆ ''ಎಲ್ಲಾ ಜಾತಿಗಳವರಿಗಾಗಿ'' ಎಂಬ ಬೋರ್ಡು ಇರಬೇಕು.

೩) ಹಳ್ಳಿಗಳಲ್ಲಿ ಮಾಡುವ ಯಾವ ಸಾಮಾನ್ಯ ಏಳಿಗೆಯ ಕೆಲಸಕ್ಕಾಗಲಿ ಎಲ್ಲಾ ಜಾತಿಯವರ ಏಳಿಗೆಯ ದೃಷ್ಟಿಯಿಂದ ಮಾಡಲಾಗುವುದೆಂದೂ, ಹರಿಜನರನ್ನು ಸಮಾನವಾಗಿ ನೋಡಿಕೊಳ್ಳಬೇಕೆಂದೂ ತಿಳಿಸಿ ಆ ಕೆಲಸದ ಆರಂಭವಾಗಬೇಕು.

೪) ದೇವಸ್ಥಾನ ಪ್ರವೇಶಕ್ಕಾಗಿ ಹಿಂದೂ ರಿಲಿಜಿಯಸ್ ಎಂಡೋಮೆಂಟದವರು ಸಾಕಷ್ಟು ಪ್ರಚಾರಮಾಡಿ ಹರಿಜನರಲ್ಲಿ ಧಾರ್ಮಿಕ ತತ್ವಗಳ ಪ್ರಚಾರಕ್ಕೆ ಸಹಾಯ ಮಾಡಬೇಕು. ಜಿಲ್ಲಾ ಅಧಿಕಾರಿಗಳು ಕೇರಿಗಳ ಹತ್ತಿರ ಡೇರಾ ಹೊಡೆಯಬೇಕು. ಗ್ರಾಮಾಧಿಕಾರಿಗಳೂ, ಪೋಲೀಸರೂ ಅಸ್ಪೃಶ್ಯತಾನಿವಾರಣೆಯ ಕಾರ್ಯವನ್ನು ಕುರಿತು ವರದಿಗಳನ್ನು ಕಳುಹಿಸಬೇಕು.

೫) ಜಿಲ್ಲಾ ಹರಿಜನ ಅಧಿಕಾರಿಗಳಿಗೆ ಮಾಜಿಸ್ಟ್ರೇಟರ ಅಧಿಕಾರಕೊಟ್ಟು ಶಾಸನೋಲ್ಲಂಘನ ಮಾಡುವವರನ್ನು ಶಿಕ್ಷಿಸಲು ಅವಕಾಶವನ್ನು ಕಲ್ಪಿಸಬೇಕು.

೬) ಗ್ರಾಮದಲ್ಲಿ ಈ ವಿಷಯಕ್ಕೆ ವಿಜಿಲೆನ್ಸ ಕಮಿಟಿ ಏರ್ಪಾಟು ಮಾಡಬೇಕು.

೭) ಸಾಮಾಜಿಕ ಹಕ್ಕುಗಳನ್ನು ಪ್ರಸ್ಥಾಪಿಸಲು ಏರ್ಪಟ್ಟಿರುವ ಶಾಸನದಲ್ಲಿ ಪರಿವರ್ತನೆಮಾಡಿ ಹರಿಜನರಲ್ಲಿನ ಎಲ್ಲಾ ಒಳಪಂಗಡಗಳಿಗೂ ಅದು ಅನ್ವಯಿಸುವಂತೆ ಮಾಡಬೇಕು.

೮) ಹರಿಜನರಲ್ಲಿ ವಿವಿಧ ಪಂಗಡಗಳವರಿಗಾಗಿ ಬಾವಿಗಳನ್ನು ಎಂದಿಗೂ ಕಟ್ಟಬಾರದು.

ಈ ಕೆಳಗೆ ಕಾಣಿಸಿದ ಹಿಂದುಳಿದ ಜಾತಿಯವರಿಗಾಗಿ ಗುಡ್ಡಗಾಡ ಜನರಿಗಾಗಿ ಮದ್ರಾಸು ಸರ್ಕಾರವು ತನ್ನ ವಾರ್ಷಿಕ ಆಯ-ವ್ಯಯ ಪಟ್ಟಿಯಲ್ಲಿ ೨ ಲಕ್ಷ ರೂ. ತೆಗೆದಿಟ್ಟು ಆ ಕಾರ್ಯವೂ ಈ ಶಾಖೆಗೆ ಒಪ್ಪಿಸಲ್ಪಡಬೇಕು.

ದಕ್ಷಿಣ ಮಲಬಾರದ ಪನಾನ ಜನರು, ಉತ್ತರ ಮಲಬಾರದ ಮಲಯಾ ಜನರು, ಕೊಯಿಂಬತೂರು ಮಲಬಾರದ ಇಲವರು, ಅಣ್ಣಾಮಲೆಯ ವೇಡರು ವಿಲ್ಲಿಯಾನ್, ವೆಟ್ಟಕಾರನ್, ವೆಟ್ಟಕಾರ ವಿಲ್ಲಿಯಾರ್, ಮಲಬಾರಿನ ಪೆರುವಣ್ಣಾನ್, ಅಣ್ಣಾಮಲೆಯ ಮಲಿಯಾಳಿ ಮಾಲ್ಕೆ ವೆಲ್ಲಾಳ, ಪೋಲಗರ ಮೇದಾ ಮಹೇಂದ್ರುಲು, ಮೇದಾರುಲು, ಮೇದಾರಿ, ಮೇದಕರನ್, ವೆಂಕುಲ ಬಲಿಜ, ಯೇನಾಡಿ-ಯೆರುಕುಲ, ವೇಯನ್, ಪುಲ್ಲುವಾನ್, ಕುಂಬಾರನ್

## ಗಾಂಧೀಜೀ ಮೇಲೆ ಬಾಂಬು

ಮಂಗಳವಾರ ಬಿರ್ಲಾ ಭವನದ ಆವರಣದಲ್ಲಿ ಪ್ರಾರ್ಥನೆಯು ನಡೆಯಬೇಕಾದರೆ ಬಾಂಬು ಒಗೆಯಲಾಯಿತು. ಒಗೆದವನು ಮದನಲಾಲ್ ಎಂತಲೂ ಪಶ್ಚಿಮ ಪಂಜಾಬದಿಂದ ಬಂದ ಶರಣಾರ್ಥಿಯೆಂತಲೂ ಹೇಳಲಾಗಿದೆ. ಅವನ ಜೊತೆಯಲ್ಲಿ ಬಂದ ಮೂವರ ಪತ್ತೆಯಾಗಿಲ್ಲ. ಪೋಲೀಸ್ ವಿಚಾರಣೆ ನಡೆಯುತ್ತಿದೆ. ಗಾಂಧೀಜಿಯು ಮುಸಲ್ಮಾನರಿಗಾಗಿ ಮಾಡುತ್ತಿರುವ ಕಾರ್ಯವು ಸರ್ವಸ್ವನ್ನೂ ಕಳಕೊಂಡ ಈ ಹಿಂದೂಗಳಿಗೆ ಸರಿಬೀಳಲಿಲ್ಲವಂತೆ.

## ಬಟ್ಟೆ ಕಂಟ್ರೋಲ್ ಹೋಯಿತು.

ಕೇಂದ್ರ ಸರಕಾರದವರು ಬಟ್ಟೆಗಳ ಮೇಲೆ ಇದ್ದ ಬೆಲೆ, ಸಾಗಾಟ ಕೊಳ್ಳಬೇಕಾದ ಮಿತಿಯನ್ನು ಈ ತಿಂಗಳ 20ನೆಯ ದಿನಾಂಕದಿಂದ ತೆಗೆದು ಹಾಕಿರುವರು.

## ಕಾಂಗ್ರೆಸ ಪ್ರಮುಖರಲ್ಲಿ ಕರ್ನಾಟಕದ ಶಿಷ್ಟಮಂಡಳ

ಆಂಧ್ರ ಪ್ರಾಂತರಚನೆಯೊಂದಿಗೆ ಕರ್ನಾಟಕವನ್ನೂ ರಚಿಸುವ ಅಗತ್ಯವನ್ನು ಕಾಂಗ್ರೆಸ್ ವರಿಷ್ಠರಿಗೆ ಸೂಚಿಸಿ ಅವರ ಮನವೊಲಿಸಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನವರಿಂದ ನಿಯಾಮಕವಾದ ಶಿಷ್ಟಮಂಡಳದ ಸದಸ್ಯರು ಈ ತಿಂಗಳು 24ನೆಯ ತಾ॥ ದಿಲ್ಲಿಯಲ್ಲಿರಬೇಕೆಂದು ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಸೂಚಿಸಿದ್ದಾರೆ. ಈ ಶಿಷ್ಟಮಂಡಳವು ನೆಹರೂ-ಪಟೇಲ ಗಾಂಧೀ ವಗೈರೆ ನಾಯಕರನ್ನು ನೋಡಲಿದೆ.


## ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಾ ರಾಷ್ಟ್ರಭಾಷಾ ಪ್ರವೇಶಿಕ ವಿಶಾರದ ವಿದ್ವಾನ್ ವಗೈರೆ ಪರೀಕ್ಷೆಗಳಿಗೆ ಕೂಡಲು ತಕ್ಕ ಸಲಹೆ ಕೊಡುತ್ತೇವೆ. ಪರಸ್ಥಳದವರು ಮಾಹಿತಿಗಾಗಿ ಸ್ಟಾಂಪಿಟ್ಟು ಬರೆಯಿರಿ.

ಟಿ. ಬಿ. ಕೇಶವರಾವ್

ಜಿಲ್ಲಾ ಹಿಂದೀ ಪ್ರೇಮೀಮಂಡಲ ಬಳ್ಳಾರಿ.

# ಕುಮಾರಪಿತ!

ಕುಮಾರಪಿತ [ಮದುವೆಯಾಗದ ತಂದೆ] ಎಂದ ಕೂಡಲೆ ಯಾರೂ ಗಾಬರಿಯಾಗುವ ಕಾರಣವಿಲ್ಲ. ಜಗತ್ತಿನಲ್ಲಿ ಅವರದೂ ಒಂದು ಅಲ್ಪ ಸಂಖ್ಯಾಕ ಜನತೆ ಇದೆ. ಲೋಕದಲ್ಲಿ ಏನು ತಿಳಿದುಕೊಂಡಿದ್ದಾರೆಂದರೆ— ಒಬ್ಬ ಹುಡುಗನಿಂದ ಒಬ್ಬಳು ಪ್ರಾಪ್ತಗರ್ಭಳಾದರೆ ಹುಡುಗನೇ ಪಾಪಿ, ಚಂಡಾಲ, ಅಧಮಾಧಮ—ಎಂದು. ಕಾರಣವೇನೆಂದರೆ, ಅವನು ಅನೇಕ ವೇಳೆ ಸಿಕ್ಕಿಬೀಳದೆ [ಸಾಕ್ಷಿ ಇಲ್ಲದೆ] ತಪ್ಪಿಸಿಕೊಂಡಿರಬಹುದು; ಆದರೆ ಇವಳು (ಕೊಲೆಗಡಿಕಿಯಾಕಿ ಗರ್ಭ=ಶಿಶುಹತ್ಯೆ ಮಾಡದಿದ್ದರೆ] ಶಿಶುಸಮೇತಳಾಗಿ ಜಗತ್ತಿಗೆ ಮುಖ ತೋರಿಸಬೇಕಾಗಿ ಬರುವುದರಿಂದ ಮತ್ತು ಸಾಮಾನ್ಯವಾಗಿ ಸ್ತ್ರೀಯೊಬ್ಬಳ (ಅದರಲ್ಲೂ ಸ್ವಲ್ಪ ಕರುಣಾಜನಕ ಸ್ಥಿತಿಯಲ್ಲಿದ್ದ ಸುಂದರಿಯಿದ್ದರೆ ಅವಳ) ಬಗ್ಗೆ ಗಂಡಸರಲ್ಲಿ ಸುಭಗರೆನಿಸಿಕೊಳ್ಳಬೇಕೆಂಬ ಸ್ಪರ್ಧಾಲುತ್ವದಿಂದ ಪಕ್ಷಪಾತವೇ ಹೆಚ್ಚು-ಅಪರಾಧಿಯಾದ ಗಂಡನ್ನು ಕಡಿದು ಚೆಲ್ಲುವವರೆಗೂ ಸರದಿ!

ಎರಡನೆಯದಾಗಿ ಪಾಶ್ಚಾತ್ಯದಲ್ಲಿ ಹುಡುಗಿ ಎಷ್ಟೋ ಸಲ ಹುಡುಗನಿಗಿಂತ ಹಿರಿಯಳಿದ್ದರೂ - ಜಗತ್ತಿನಲ್ಲಿ ಬಹುಪಕ್ಷ ಹುಡುಗಿ ಕಿರಿಯಳಿರುತ್ತಾಳೆ ಹಾಗಲ್ಲದಿದ್ದರೂ ಅವಳು Innocent— ಏನೂ ಅರಿಯದವಳು, ಆದ್ದರಿಂದ ಅವಳ ತಲೆಕೆಡಿಸಿದನಿವ....ಎಂಬ ಆರೋಪಕ್ಕೆ [ಸಾಮಾನ್ಯವಾಗಿ ಪ್ರಕಟವಾಗಿ ಜಗತ್ತಿನ ವ್ಯವಹಾರದಲ್ಲಿ ಪ್ರತಿದಿನವೂ ನುಗ್ಗುತ್ತಿದ್ದ ತಪ್ಪಿಗಾಗಿ(?) ] ಗಂಡು ಗುರಿಯಾಗುತ್ತಾನೆ.

ಆದರೆ ಸಾನ್‌ಫ್ರಾನ್ಸಿಸ್ಕೋದ ಪ್ರಸಿದ್ಧ ಮನೋವಿಜ್ಞಾನಿಗಳಾದ ಡಾ॥ ನಾರ್ಮನ್ ರೀಡರರನ್ನು ಕೇಳಿದರೆ ಬೇರೆಯೆ ಕತೆಯೇ ಕಂಡುಬರುತ್ತದೆ. ತಾತ್ಕಾಲಿಕವಾಗಿ ಕಾಯದೆ ಕಣ್ಣಿಗೆ ಧೂಳೆರಚಿ ಗಂಡು ಗೆದ್ದಂತೆಯೂ ಹೆಣ್ಣು ಸಮಾಜದ ಅವಹೇಲನಕ್ಕೆ ಗುರಿಯಾಗಿ ಸೋತಂತೆಯೂ ತೋರಿದರೂ ತಪ್ಪನ್ನು ಗಂಡಿನಮೇಲೆ ಹೊರಿಸಿ ಹೆಣ್ಣು ಒಂದು ಸಮಾಧಾನವನ್ನು [ಆತ್ಮವಂಚನೆಯಿಂದಾದರೂ] ತಂದುಕೊಳ್ಳಬಲ್ಲಳು. ಕ್ರಮೇಣ ಪಶ್ಚಾತ್ತಾಪ ಹುಟ್ಟಿ ಗಂಡು ತಂದೆ ಎಂದು ಪ್ರಕಟವಾಗಿ ಹೇಳಿಕೊಳ್ಳಲಾರದೆ, ಪ್ರಿಯತಮೆಯನ್ನು ಬಿಟ್ಟ ತಪ್ಪಿಗೆ ನೊಂದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಬಹುದು, ಇಲ್ಲವೆ ಹುಚ್ಚನಾಗಿ ಹೋಗುವುದ? ಉಂಟು ಒಂದು ವೇಳೆ ಅವರಿಬ್ಬರ ಮನಸ್ಸೂ ಅವರ ಹಿರಿಯರ ಮನಸ್ಸೂ ಒಂದಾಗಿ ಮದುವೆಯಾದರೂ ಕೆಲ ಸಲ ನಿರ್ವಾಹವಿಲ್ಲದೆ ಮದುವೆಯಾದನೆಂದರೂ ಅವಳು ಅವನನ್ನು ತಾತ್ಸಾರದಿಂದ ನೋಡುವಂತೆಯೂ ಅವನು ಇವಳ ಮತ್ತು ಸಮಾಜದ ಕೈಯಲ್ಲಿ ಸಿಕ್ಕಿ ಬಿದ್ದೆನೆಂದು ಕ್ರೋಧದಿಂದಲೂ ಅಸುಖಿಗಳಾಗಿ ಬಾಳಬೇಕಾಗುತ್ತದೆ.

ಇದಕ್ಕೆಲ್ಲ ಕೆಳಗಿನ ಪರಿಸ್ಥಿತಿಗಳೇ ಕಾರಣ:

(೧) ಖರ್ಚಿಗೆ ಕಡಿಮೆಯಾಗಿದ್ದು ವಿದ್ಯೆ ಮುಂಬರಿಸಬೇಕಾಗಿರುವ ಪ್ರಾಯದ ಕಾಲೇಜು ಹುಡುಗ ಹುಡುಗಿಯವರು.

(೨) ಕಡಿಮೆ ಸಂಬಳ ಪಡೆಯುತ್ತಿದ್ದು ಮದುವೆಯಾದರೆ ಸಂಸಾರ ಭಾರ ಹೊರಲಾರೆವೆಂಬ ಅಧೈರ್ಯವುಳ್ಳವರು.

(೩) ಆಕಸ್ಮಾತ್ ಸಂದರ್ಭಗಳು.

ಆಕಸ್ಮಾತ್ತಿಗೊಂದು ಉದಾಹರಣೆ: ಒಮ್ಮೆ ಒಬ್ಬಾಕೆ ತನ್ನವರ ಮನೆಗೆ ಹೋಗಲು ರಸ್ತೆಯಲ್ಲಿದ್ದ ಒಬ್ಬನ ಹತ್ತಿರ ಮಾರ್ಗದರ್ಶನ ಮಾಡಿಕೊಡ ಹೇಳಿದಳು ಕಾಮದೇವನ ಕೃಪೆ ಅರ್ಕ್ಷಣಾರ್ಧದಲ್ಲಿ ಅವರಿಗುಂಟಾಗಿ ಅವರಿಬ್ಬರೂ ಜಗತ್ತೂ ಆಶ್ಚರ್ಯಪಡುವಂತಾಯಿತು.

ಇಂಥ ಸನ್ನಿವೇಶಗಳಿಗೆ ಗುರಿಪಡಿಸುವ ಕಾಯದೆ ಮಾಡುವುದಕ್ಕಿಂತ ಪ್ರತಿಬಂಧಕೋಪಾಯವಾಗಿ ತರುಣತರುಣಿಯರಿಗೆ ಲಿಂಗವಿಜ್ಞಾನವನ್ನು ಸೂಕ್ತ ಕಾಲದಲ್ಲಿ, ಸೂಕ್ತ ರೀತಿಯಲ್ಲಿ ಸೂಕ್ತ ವ್ಯಕ್ತಿಗಳು ಉಪದೇಶಿಸುವುದೇ ಮುಖ್ಯವೆಂದು ಮನಃಶಾಸ್ತ್ರಜ್ಞರ ಮತ ಇದರಿಂದ ಇಂತಹ ಸಂದರ್ಭಗಳು ಕಡಿಮೆಯಾಗುವುದಷ್ಟೇ ಅಲ್ಲ; ವೈಜ್ಞಾನಿಕವಾಗಿ ಅವಶ್ಯಜ್ಞಾನವನ್ನು ಯುಕ್ತವಾಗಿ ಕೊಡುವುದರಿಂದ ಅರ್ಧ ನಾಗರಿಕ-ಅನಾಗರಿಕ ಪದ್ಧತಿಗಳಿಂದ ಅನೇಕ ಹಿಂದೀಯರು ಸ್ವಪರ ದುಃಖಕಾರಣರಾಗಿ ಬಾಳುವುದನ್ನು ತಪ್ಪಿಸಿ ವಿವಾಹ ಜೀವನವನ್ನು ಆರೋಗ್ಯ ಪ್ರೇಮ ಪ್ರೀತಿಬಂಧ ಪೂರ್ಣವಾದುದನ್ನಾಗಿ ಮಾಡಬಹುದು. ಅಜ್ಞಾನ, ಅರ್ಧಜ್ಞಾನ, ಕುಜ್ಞಾನಗಳಿಂದ ಹಾಳಾದಷ್ಟು ಯುವಯುವತಿಯರು (ಪರಸ್ಪರ ಸಂಬಂಧದಲ್ಲಿ) ಮತ್ತಾವುದರಿಂದಲೂ ಹಾಳಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಕುಮಾರ ಪಿತತ್ವ ಕುಮಾರೀ ಮಾತೃತ್ವ ಸಂಭವಿಸದಂತೆಯೂ ಹುಡುಗ ಹುಡುಗಿಯರು ನಾಗರಿಕ ಜೀವನ ನಡೆಸಲು ಅನುವಾಗುವಂತೆಯೂ ಅವರಿಗೂ ಇಂದಿನ ಚಿಕ್ಕಮಕ್ಕಳ ತಂದೆ ತಾಯಿಯರಿಗೂ ಯುಕ್ತೋಪದೇಶದ ವ್ಯವಸ್ಥೆ ಮಾಡುವುದು ಅಗತ್ಯವಲ್ಲವೆ? (ಕರ್ಮವೀರ)

# ಕಾಂಗ್ರೆಸಿನಲ್ಲಿ ಕೊಳೆ

—— ):0:( ——

## ಕಾಂಗ್ರೆಸ್ ಶಾಸನ ಸಭ್ಯರ ಲಂಚದ ಕಾರ್ಯ.

(ಮಹಾತ್ಮಾ ಗಾಂಧಿಯವರಿಗೆ ಆಂಧ್ರ ಪ್ರಾಂತದ ವೃದ್ಧ ಪಿತಾಮಹರಾದ ಶ್ರೀ ಕೊಂಡಾ ವೆಂಕಟಪ್ಪಯ್ಯನವರು ಒಂದು ಪತ್ರಬರೆದಿರುವರು. ಅವರು ಅದನ್ನು ಪ್ರಕಟಿಸಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವರು.)

### ಕೊಂಡಾ ವೆಂಕಟಪ್ಪಯ್ಯನವರ ಪತ್ರದಲ್ಲಿಯ ಅಂಶಗಳು

"ಹಿಂದೂಸ್ಥಾನವು ತೊಡಕಿನ ಅನೇಕ ರಾಜಕೀಯ ಸಮಸ್ಯೆಗಳನ್ನು ಈಗ ಎದುರಿಸಬೇಕಾಗಿ ಬಂದಿರುವಾಗ ಅತಿ ಮಹತ್ವದ ಹೆಚ್ಚಿನ ಸಮಸ್ಯೆ ಎಂದರೆ ಕಾಂಗ್ರೆಸ ಜನರು ನೈತಿಕ ಅಧೋಗತಿಗೆ ಇಳಿದದ್ದು ಒಂದಾಗಿದೆ. ಉಳಿದ ಪ್ರಾಂತಗಳ ಬಗ್ಗೆ ನಾನು ಹೆಚ್ಚಿಗೆ ಹೇಳಲಾರೆ. ಆದರೆ ನಮ್ಮ ಪ್ರಾಂತದಲ್ಲಿ ಪರಿಸ್ಥಿತಿ ತೀರ ಶೋಚನೀಯ ಮಟ್ಟಕ್ಕೆ ಇಳಿದಿದೆ. ರಾಜಕೀಯ ಅಧಿಕಾರ ಕೈಗೆ ಬಂದುದರಿಂದ ಕಾಂಗ್ರೆಸಿಗರ ಬುದ್ಧಿಭ್ರಂಶವಾಗಿದೆ. ಎಷ್ಟೋ ಎಂ ಎಲ್. ಎ. ಗಳೂ ಎಂ ಎಲ್. ಸಿ. ಗಳೂ ಗಾಳಿ ಬಂದಾಗ ತೂರಿಕೋ ಎಂಬ ಧೋರಣವನ್ನು ಅನುಸರಿಸಹತ್ತಿದ್ದಾರೆ. ಈ ಜನರು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ನಡೆದ ನ್ಯಾಯದಾನದ ಕೆಲಸದಲ್ಲಿ ತಮ್ಮ ವರ್ಚಸ್ಸು ಉಪಯೋಗಿಸಿ ಹಣ ಸಂಪಾದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ತಮ್ಮ ಕೈವಾರಿಗಳಾದ ಜನರ ಪಕ್ಷಕಟ್ಟಿ ಈ ಎಂ. ಎಲ್. ಎ ಹಾಗೂ ಎಂ. ಎಲ್. ಸಿ.ಗಳು ಆದ ಜನರು ಕಲೆಕ್ಟರ ಹಾಗೂ ಇತರ ಮುಲ್ಕೀ ಅಧಿಕಾರಿಗಳ ಕಾರ್ಯದಲ್ಲಿ ಕೈಹಾಕುತ್ತಿರುವದರಿಂದ ಅವರಿಗೂ ಯಾವದೇ ಸ್ವಾತಂತ್ರ್ಯವಿಲ್ಲದಂತಾಗಿವೆ. ಪ್ರಾಮಾಣಿಕನಾದ ಹಾಗೂ ಇತರರ ವರ್ಚಸ್ಸಿಗೆ ಬಲಿಬೀಳದ ಅಧಿಕಾರಿಯು ತನ್ನ ಅಧಿಕಾರದಲ್ಲಿ ಉಳಿಯಲಾರ. ಯಾಕೆಂದರೆ ಈ ದುರ್ನೀತ ಮತ್ತು ಸ್ವಾರ್ಥಸಾಧಕರಾದ ಎಂ.ಎಲ್ ಸಿ. ಗಳು ಅಂಥ ಅಧಿಕಾರಿಯು ಇರುವವರೆಗೆ ತಮ್ಮ ಬೇಳೆ ಬೇಯುವದಿಲ್ಲವೆಂಬ ಕಾರಣದಿಂದ ಮಂತ್ರಿಗಳ ಮುಂದೆ ನಾನಾ ತರದ ಸುಳ್ಳು ಸಂಗತಿಗಳನ್ನು ಇಂಥ ಅಧಿಕಾರಿಯ ವಿರುದ್ಧ ಹೇಳುವರು. ಮಂತ್ರಿಗಳಾದವರು ಈ ಸ್ವಾರ್ಥಿಗಳ ಮಾತಿಗೆ ಕಿವಿಕೊಡುತ್ತಿರುವರು.

ಸ್ವರಾಜ್ಯ ಪ್ರಾಪ್ತಿಯ ಅಭಿಲಾಷೆಯಿಂದ ದೇಶದ ಸ್ತ್ರೀ ಪುರುಷ ಬಾಲಕರೆಲ್ಲರೂ ನಿಮ್ಮ ಧುರೀಣತ್ವದಲ್ಲಿ ತ್ಯಾಗಮಾಡಿದರು. ಈಗ ಸ್ವರಾಜ್ಯ ಪ್ರಾಪ್ತಿಯಾಗಿದೆ. ಈಗ ಆಗಿದ್ದ ನೈತಿಕ ನಿರ್ಬಂಧಗಳೆಲ್ಲ ಹರಿದಂತಾಗಿವೆ. ರಾಷ್ಟ್ರೀಯ ಚಳವಳಿಯ ಕಡು ವೈರಿಗಳಾಗಿದ್ದವರೂ ಇಂದು ತಮ್ಮ ಸ್ವಾರ್ಥಸಾಧನೆಗೆ ಕಾಂಗ್ರೆಸಿನ ಸದಸ್ಯರಾಗುತ್ತಿರುವರು. ಇಂಥ ಜನರೊಡನೆಯೂ ಮೊದಲು ಸ್ವಾತಂತ್ರ್ಯವೀರರಾದ ಕಾಂಗ್ರೆಸಿಗರು ಒಳ್ಳೆಯ ಸ್ನೇಹದಿಂದ ಅವರ ಸಹಕಾರ ಪಡೆದು ಅಧಿಕಾರ ವಹಿಸುತ್ತಿರುವರು ಇತ್ತೀಚೆಗೆ ಪರಿಸ್ಥಿತಿ ಅಸಹನೀಯವಾಗಹತ್ತಿದೆ. ಕಾಂಗ್ರೆಸಿಗರೂ ಕಾಂಗ್ರೆಸ ಸರಕಾರವೂ ಅಪಕೀರ್ತಿಗೆ ಒಳಗಾಗಿದ್ದಾರೆ. ಇತ್ತೀಚೆಗೆ ಆಂಧ್ರದಲ್ಲಿ ನಡೆದ ನಗರ ಸಭೆಯ ಚುನಾವಣೆಗಳಿಂದ ಕಾಂಗ್ರೆಸು ಅದೆಷ್ಟು ಅಪ್ರಿಯವಾಗಹತ್ತಿದೆ ಎಂಬದು ತಿಳಿದುಬರುವಂತಿದೆ.

ಗುಂಟೂರಲ್ಲಿ ನಗರ ಸಭೆಯ ಚುನಾವಣೆಯ ಸಿದ್ಧತೆಗಳೆಲ್ಲ ಭರದಿಂದ ನಡೆದು ಚುನಾವಣೆ ಆಗುವ ಸಂದರ್ಭದಲ್ಲಿ ಸ್ಥಾನಿಕ ಸ್ವರಾಜ್ಯ ಮಂತ್ರಿಯು ಅವಸರದ ತಂತಿ ಕಳಿಸಿ ಚುನಾವಣೆ ನಿಲ್ಲಿಸಿ ಬಿಡಲು ಆಜ್ಞಾಪಿಸಿದನು. ಕಳೆದ ೧೦ ವರ್ಷಗಳಿಂದಲೂ ಈ ನಗರ ಸಭೆಯ ಆಡಳಿತವು ಸರಕಾರಿ ನಿಯುಕ್ತ ಜನರ ಮಂಡಲದವರ ಕಡೆಗೆ ಇತ್ತು. ಕಳೆದ ಒಂದು ವರ್ಷದಿಂದ ಮಾತ್ರ ಈ ಮಂಡಲ ವಿಸರ್ಜಿಸಿ ನಗರ ಸಭೆಯ ಆಡಳಿತವನ್ನು ಸರಕಾರ ನಿಯುಕ್ತಮಂಡಲದವರ ವಶಕ್ಕೆ ಕೊಡುವ ಬಗ್ಗೆ ಮಾತುಕತೆ ನಡೆದಿವೆ. ಈಗ ನಾನು ವಯೋವೃದ್ಧನಾಗಿದ್ದು ಒಂದು ಕಾಲು ಕಳೆದುಕೊಂಡು ಬಗಲು ಕಟ್ಟಿಗೆಯ ಆಧಾರದಿಂದ ನನ್ನ ಮನೆಯಲ್ಲಿ ನಾಲ್ಕು ಹೆಜ್ಜೆ ಅಡ್ಡಾಡುವೆ ನನಗೆ ಯಾವ ಪುರುಷಾರ್ಥ ಸಾಧಿಸಿಕೊಳ್ಳುವ ಭಾವನೆಯೂ ಇಲ್ಲ. ಇಲ್ಲಿಯ ಜಿಲ್ಲಾ ಕಾಂ. ಸಮಿತಿಯಲ್ಲಿ ಎರಡು ಬಣಗಳಾಗಿವೆ. ಎರಡೂ ಬಣಗಳಲ್ಲಿ ಕೆಲವು ಪ್ರಮುಖ ಕಾಂಗ್ರೆಸಿಗರು ಸೇರಿಕೊಂಡಿದ್ದಾರೆ.

ತಿನ್ನುವ ಕಾರ್ಯದಲ್ಲಿ ನಿರತರಾದದ್ದು. ಮಂತ್ರಿಗಳು ನಿರ್ಬಲರಾಗಿರುವದನ್ನು ಕಂಡು ಜನತೆಯಲ್ಲಿ ಕಾಂಗ್ರೆಸಿನ ವಿರುದ್ಧ ಪ್ರಬಲವಾದ ತಿರಸ್ಕಾರ ಬೆಳೆಯಹತ್ತಿದೆ. ಬ್ರಿಟಿಶ ಸರಕಾರವು ಕಾಂಗ್ರೆಸ ಸರಕಾರಕ್ಕಿಂತ ಸಾವಿರ ಪಾಲಿಗೆ ನೆಟ್ಟಗಿತ್ತೆಂದು ಜನರು ಹೇಳಹತ್ತಿದ್ದಾರೆ. ಜನರು ಕಾಂಗ್ರೆಸಿಗೆ ದೋಷಕೊಡುವದು ಹೆಚ್ಚಾಗಿದೆ."

ಹಿಂದೂಸ್ಥಾನದ ಸ್ವಾರ್ಥ ತ್ಯಾಗಿಯಾದ ಸೇವಕನು ಹೇಳುವ ಮೇಲಿನ ಶಬ್ದಗಳನ್ನು ಆಂಧ್ರಪ್ರಾಂತದ ಜನರೂ, ಹಿಂದೂಸ್ಥಾನದ ಎಲ್ಲ ಭಾಗದ ಜನರು ಬೆಲೆ ಕಟ್ಟಲು ಅವನು ವರ್ಣಿಸುವ, ಕಾಂಗ್ರೆಸಿಗರ ನೈತಿಕ ಅಧಃಪತನ, ಲಂಚ ಬಡಕತನವನ್ನು ಆಂಧ್ರವೇ ಗುತ್ತಿಗೆ ಹೊತ್ತಿಲ್ಲ. ಉಳಿದ ಪ್ರಾಂತಗಳ ಬಗ್ಗೆ ಅವನಿಗೆ ಪ್ರತ್ಯಕ್ಷ ಜ್ಞಾನವಿಲ್ಲದ್ದರಿಂದ ಅವನು ಬರೆದಿಲ್ಲ ಇಷ್ಟೇ ಇದರಿಂದ ಎಲ್ಲರೂ ಜಾಗೃತರಾಗಿರಬೇಕು.

ಭಾವಲಪುರದ ನನ್ನ ಗೆಳೆಯರು ಸ್ವಲ್ಪ ತಾಳ್ಮೆ ವಹಿಸಬೇಕು. ಸರದಾರ ಸಾಹೇಬರು ನನಗೆ ಇಂದು ಮಧ್ಯಾನ್ಹ ಭೆಟ್ಟಿಯಾಗಿದ್ದರು. ಇಂದು ನನ್ನ ಮೌನ ದಿನವಾದ್ದರಿಂದಲೂ ನಾನು ಬೇರೆ ವಿಷಯದ ಬಗ್ಗೆ ದೀರ್ಘ ವಿಚಾರ ನಡೆಸಿದ್ದರಿಂದಲೂ ನಾನು ಸರದಾರರಿಗೆ ನಿಮ್ಮ ವಿಷಯ ಬರೆದು ತಿಳಿಸಲಿಲ್ಲ. ಆದುದರಿಂದ ನೀವು ಸ್ವಲ್ಪ ತಾಳ್ಮೆ ವಹಿಸಬೇಕಾಗಿ ನನ್ನ ಬಿನ್ನಹ".

## ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಪುಣ್ಯ ತಿಥಿ.

**ಸಕಲ ವೀರಶೈವ ಬಾಂಧವರಲ್ಲಿ ವಿನಂತಿ:-**

ಬಳ್ಳಾರಿ ಜಿಲ್ಲಾ ಉಜ್ಜನಿ ಪೀಠದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾಗಿ ಇದೇ ಸರ್ವಜಿತು ಸಂ॥ ಪುಷ್ಯ ಬಹುಳ [29-1-1943] ಗುರುವಾರಕ್ಕೆ ಹನ್ನೆರಡು ವರ್ಷಗಳು ಪೂರ್ಣವಾಗುತ್ತವೆ. ಈ ಮಹಾನುಭಾವರು ಜಗತ್ಪ್ರಸಿದ್ಧರಾಗಿ ಸಮಾಜೋದ್ಧಾರಕರಾಗಿದ್ದರೆಂಬುದು ಎಲ್ಲರಿಗೂ ವೇದ್ಯವಿದೆ. ಈ ಕಾರಣ ಸರ್ವರೂ ಭಕ್ತಿಯಿಂದ ಆ ಸದ್ಗುರುಗಳ ಪುಣ್ಯತಿಥಿಯ ಸಮಾರಂಭವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕೆಂದು ಬಯಸುತ್ತೇವೆ.

ಪಿ. ಎಂ. ವಿರುಪಾಕ್ಷಶಾಸ್ತ್ರಿ, ಹಿರೇಹಡಗಲಿ

## ಆಂಧ್ರಪ್ರಾಂತ ರಚನೆ.

### ಕರ್ನಾಟಕವೇಕೆ ಇಲ್ಲ?

ಕೇಂದ್ರ ಸರಕಾರದವರು ಆಂಧ್ರಪ್ರಾಂತವನ್ನು ರಚಿಸಲು ನಿಶ್ಚಯಿಸಿ ಒಂದೆರಡು ತಿಂಗಳಲ್ಲಿ ಆಜ್ಞೆಮಾಡ (Order in Council) ಲಿರುವರೆಂದು ಗೊತ್ತಾಗಿದೆ. ಆಂಧ್ರಪ್ರಾಂತವು ಏಪ್ರಿಲದಲ್ಲಿ ರಚಿತವಾಗಲಿದೆಯೆಂದು ಶ್ರೀ ಪ್ರಕಾಶರು ಮೇಲಿಂದ ಮೇಲೆ ಹೇಳಿಕೆ ಕೊಟ್ಟಿರುವರು. ಸರ್ದಾರ ವಲ್ಲಭಭಾಯಿ ಪಟೇಲರು ಬೊಂಬಾಯಿಯ ವೃತ್ತ ಪತ್ರಿಕಾ ಪರಿಷತ್ತಿನಲ್ಲಿ ಇದನ್ನು ಸಮರ್ಥಿಸಿರುವರು ಆಂಧ್ರಪ್ರಾಂತ ನಿರ್ಮಾಣ ಮಾಡುವ ಪ್ರಶ್ನೆಯಲ್ಲಿ ತಮ್ಮ ಕೈವಾಡವೂ ಇದ್ದಿತೆಂದೂ, ಇದಕ್ಕಾಗಿ ಆಂಧ್ರರನ್ನು ಅಭಿನಂದಿಸಬೇಕಾಗಿದೆಯೆಂದೂ, ಆಂಧ್ರರು ಖಂಡರಲ್ಲಿದ ಭೇದಗಳು ಮಾಯವಾಗಬೇಕೆಂದೂ ಹೈದರಾಬಾದಿನಲ್ಲಿ ಈಗ ಏಜಂಟ ಜನರಲ್‌ರಾಗಿರುವ ಶ್ರೀ ಮುನ್ಸಿಯವರು ಬೆಜವಾಡದಲ್ಲಿ ಹೇಳಿದರು.

ಒಳ್ಳೆಯದು! ಆಂಧ್ರಪ್ರಾಂತರಚನೆಯಾದುದಕ್ಕಾಗಿ ಕನ್ನಡಿಗರಾದ ನಾವೂ ಆಂಧ್ರಸೋದರರ ಯಶಸ್ವೀ ಪ್ರಯತ್ನಗಳಿಗಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸದಿರಲಾರೆವು. ಭಾಷಾವಾರ ವಿಭಜನೆಯ ತತ್ವವನ್ನು ಒಪ್ಪಿಕೊಂಡ ಕಾಂಗ್ರೆಸ್ ಸಂಸ್ಥೆಯು ಆಂಧ್ರಪ್ರಾಂತಕ್ಕೆ ಮಾತ್ರವೇ ಇಷ್ಟೊಂದು ಪ್ರಾಶಸ್ತ್ಯವನ್ನು ಏಕೆ ಕೊಟ್ಟಿತೋ ಊಹಿಸುವುದೂ ಕಷ್ಟವಾಗಿದೆ. ಪಂಡಿತ ನೆಹರೂರ ಹೇಳಿಕೆಯಿಂದ ಕರ್ನಾಟಕ ಜನತೆಯಲ್ಲಿ ವಿವಂಚನೆ ಉದ್ಯೋಗಗಳು ಆರಂಭವಾಗಿವೆ. ಸ್ವಾತಂತ್ರ್ಯೋದ್ಯಮದಲ್ಲಿ ಬೀಸಾರಿಗೆ ಎರಡನೆಯದಾಗಿ ಕರ್ನಾಟಕವು ಬಲಿಬಾಸಗ್ಗೆದಿವೆ. ಗಾಂಧಿ-ಪಟೇಲ-ನೆಹರೂರವರಿಗೆ ಕರ್ನಾಟಕ ಪ್ರಾಂತ ನಿರ್ಮಾಣದ ಆವಶ್ಯಕತೆಯನ್ನು ಅನೇಕಸಲ ಸೂಚಿಸಲಾಗಿದೆ. ಅವರಿಗೂ ಗೊತ್ತುಂಟು. ಆರ್ಥಿಕ ಅಡಚಣೆಗಳನ್ನು ಮುಂದೆ ಮಾಡುತ್ತಿರುವರು. ತಜ್ಞರು ಈ ಪ್ರಶ್ನೆಗಳನ್ನು ಬಿಡಿಸಲಿದ್ದಾರೆ. ಕರ್ನಾಟಕಸ್ಥರೂ ರಾಷ್ಟ್ರಭಕ್ತರಾಗಿ ಇಡೀ ಭಾರತದ ಕಲ್ಯಾಣಕ್ಕೆ ದುಡಿಯಬೇಕೆಂದಿದ್ದರೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವು ಅತ್ಯಂತಾವಶ್ಯಕ. ಈ ಕಾರಣ ಆಂಧ್ರದೊಂದಿಗೇ ಕರ್ನಾಟಕ ಪ್ರಾಂತವನ್ನೂ ನಿರ್ಮಿಸಬೇಕೆಂದು ನಾವು ಕೋರುತ್ತೇವೆ

## ಬಳ್ಳಾರಿ.

೨೦ನೆಯ ತಾ॥ ಬಳ್ಳಾರಿಜಿಲ್ಲೆ, ಗಡಿನಾಡಿಗೆ ಹೊಂದಿಕೊಂಡ ರಾಯಚೂರು, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪೋಲೀಸ್ ಸೂಪರೆಂಟರ ಪರಿಷತ್ತು D. I. G. ಪಾರ್ಥಸಾರಥಿಯವರ ಅಧ್ಯಕ್ಷತೆಯಲ್ಲಿ ನೆಗವೇರಿ ಶಾಂತಿಯನ್ನು ಕಾಪಾಡಿಕೊಂಡು ಬರುವ ಸೂಚನೆಗಳ ವಿಚಾರ ವಿನಿಮಯವಾಯಿತು.

ಶ್ರೀ ಟಿ ಸುಬ್ರಹ್ಮಣ್ಯಯವರ ಅಧ್ಯಕ್ಷತೆಯಲ್ಲಿ ಗೃಹಸೇವಕದಳದವರನ್ನು (Home guards) ಸಂಘಟಿಸುವಬಗ್ಗೆ ವೀರಶೈವ ಕಾಲೇಜಿನಲ್ಲಿ ೨೦ನೆಯ ತಾ॥ ಸಭೆಯಾಯಿತು. ಕಲೆಕ್ಟರ್ ಶ್ರೀ ಅನಂತರಾಮನ್‌ರವರು ಭಾಷಣಮಾಡಿದರು. ೨೦ ವರ್ಷ ವಯಸ್ಸಿನವರಿಂದ ೪೦ರ ವರೆಗೆ ಈ ದಳಕ್ಕೆ ಸೇರಬಹುದಾಗಿವೆ. ವಿದ್ಯಾರ್ಥಿಗಳೆಲ್ಲಾ ಉತ್ಸಾಹದಿಂದ ಇದನ್ನ ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದರು,

ಮಲ್ಲಿಕಜ್ಜನ ವ್ಯಾಯಾಮ ಶಾಲೆಯಲ್ಲಿ ಬ್ಯಾಸ್ಕೆಟ್ ಬ್ಯಾಡ್‌ಮಿಂಟನ್, ವಾಲಿಬಾಲಿನ ವಾರ್ಷಿಕ ಪಂದ್ಯಾಟಗಳು ಜರಗಿ ಶ್ರೀ ಡಿ. ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಪಾರಿತೋಷಕಗಳು ಹಂಚಲಾದವು. ಬ್ಯಾಡ್‌ಮಿಂಟ್ನನಲ್ಲಿ ವ್ಯಾಯಾಮಶಾಲೆಯ ಸ್ವಯಂಸೇವಕರು ಎರಡನೇಸಲ ಗೆದ್ದರು.

## ಜೋಳದರಾಶಿ.

ಇಲ್ಲಿಯ ಪ್ರಾಥಮಿಕ ಪಾಠಶಾಲೆಯ ಸಹಾಯಾರ್ಥವಾಗಿ ಜೋಳದರಾಶಿ ನಾಟ್ಯಕಲೋಪಾಸಕ ಮಂಡಲಿಯವರು ಶ್ರೀ ಕೆ. ದೊಡ್ಡನಗೌಡರಿಂದ ರಚಿತವಾದ ಕ್ರಾಂತಿಕಾರಿ ಬಸವಣ್ಣ ಎಂಬ ನಾಟಕವನ್ನು ಮನೋರಂಜಕವಾಗಿ ಅಭಿನಯಿಸಿದರು. ಈ ನಾಟಕವನ್ನು ಜಯಕರ್ನಾಟಕದ ಸಂಪಾದಕರಾದ ಶ್ರೀ ಬಸವನಾಳರು ಉದ್ಘಾಟನೆ ಮಾಡಿದರು. ಕಲೆಕ್ಟರವರು ಮಾತನಾಡುತ್ತ - ನಿರಕ್ಷರತಾನಿರ್ಮೂಲನಕ್ಕೆ ಎಷ್ಟು ಸಹಾಯ ಮಾಡಿದರೂ ಅಲ್ಪವೇ ಎಂದರು.

## ಹೊಸಪೇಟೆ.

ಶ್ರೀ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ರೇಡಿಯೋ ಮೈದಾನದಲ್ಲಿ ಸಭೆ ಸೇರಿ ಮಹಾತ್ಮ ಗಾಂಧಿಯವರ ಉಪವಾಸವು ಯಶಸ್ವಿಯಾಗಿ ಕೊನೆಗೊಳ್ಳುದಕ್ಕಾಗಿ ಪ್ರಾರ್ಥನೆಯಾಯಿತು ಅಧ್ಯಕ್ಷರು ನೌಖಾಲಿ ದುರಂತದಿಂದ ಡಿಲ್ಲಿಯ ಗಲಭೆವರಿವಿಗೆ ಆದ ಘಟನೆಗಳ ಸಾದ್ಯಂತ ವಿವರ ತಿಳಿಸಿ ಗಾಂಧೀಜಿ ಪ್ರಯತ್ನಗಳನ್ನು ಪ್ರಶಂಸಿಸಿದರು, ಶ್ರೀಗಳಾದ ಮೈದೂರು ತಿರುಮಲಾಚಾರ್ಯ ಚನ್ನಬಸಪ್ಪ ಆಸುಂಡಿ ತಿರುಮಲರಾಯರೂ ಮಾತಾಡಿದರು.

## ಹರಪನಹಳ್ಳಿ.

ಇಲ್ಲಿಯ ಪ್ರಮುಖ ವ್ಯಾಪಾರಿಗಳಾದ ಶ್ರೀಮುದ್ಗಲ್ ಹನುಮಂತಪ್ಪನವರು ನಿಧನವಾದಕಾರಣ ದುಃಖ ದರ್ಶನಾರ್ಥವಾಗಿ ೯ನೇಯ ದಿನಾಂಕ ಅಂಗಡಿಗಳು ಮುಚ್ಚಲಾಗಿದ್ದವು.

---

## ಅಖಿಲ ಕರ್ನಾಟಕ ಸೋಷಿಯಲಿಸ್ಟ್ ಪಾರ್ಟಿ

ಈ ಕಾರ್ಯಕರ್ತರ ಸಮ್ಮೇಳನವು ಹೊಸಪೇಟೆಯಲ್ಲಿ ಕಳೆದವಾರ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಾಂತೀಯ ಕಾರ್ಯದರ್ಶಿ ಶ್ರೀ ಗೋಖಲೆಯವರು ಮಂಗಳೂರಿನ ಸಭೆಯಿಂದ ಇಲ್ಲಿಯವರಿಗಾದ ಸಮಸ್ತ ಚಟುವಟಿಕೆಗಳನ್ನು ಓದಿ ಹೇಳಿದರು ಮೈಸೂರು ಸಂಸ್ಥಾನದ ನಾಗಭೂಷಣ, ಧಾರವಾಡದ ಗುಂಡು ನರಿಬೋಳಿ, ಬೆಳಗಾವಿಯ ಅಣ್ಣಾದೇಶಪಾಂಡೆ, ಮಂಗಳೂರಿನ ಗೋವಿಂದನ್, ಬಳ್ಳಾರಿ ರಾಮಪ್ಪ ದೇಸಾಯಿ ಇವರು ತಮ್ಮ ತಮ್ಮ ಭಾಗದ ಚಟುವಟಿಕೆಗಳನ್ನರುಹಿದರು. ಪಕ್ಷದ ಘೋಷಣೆ N. G. O. ಸಂಘ ಕುರಿತು ಠೀವಮಾನಗಳು ಸ್ವೀಕೃತವಾದವು ಶ್ರೀ ಗೋಖಲೆಯವರು ವಂದನಾರ್ಪಣೆ ಮಾಡಿದನಂತರ ಸಭೆಯಂತವಾಯಿತು. ಪಕ್ಷದ ಆಂತರಂಗಿಕ ವಿಷಯಗಳ ಮೇಲೆ ವಿವಿಧ ಉಪಸಮಿತಿಗಳು ಪೂರಸೆಯಿನ ತಮ್ಮ ಕಾರ್ಯನೆರವೇರಿಸಿದವು.

ಶ್ರೀ ಹು. ಗೋವಿಂದಾಚಾರ್ಯರದಧ್ಯಕ್ಷತೆಯಲ್ಲಿ 14 ನೆಯ ದಿನಾಂಕ ಶ್ರೀಮತಿ ಕಮಲಾದೇವಿಯವರು ಕಾಶ್ಮೀರ-ಹೈದರಾಬಾದುಗಳನ್ನು ಕುರಿತು ತಮ್ಮ ಸ್ವಂತ ಅನುಭವಗಳನ್ನು ಹೇಳಿದರು ಶ್ರೀ ಗೋಖಲೆ ರಾಜಕೀಯ ಪರಿಸ್ಥಿತಿ ಸಮಾಜವಾದಿ ಪಕ್ಷದಮೋರಣೆ ಕುರಿತು ಮಾತಾಡಿದರು.

# ರಾಜಕೀಯ ಕೈದಿಗಳಾಗಿದ್ದವರಿಗೆ ಮದ್ರಾಸ್ ಸರ್ಕಾರದ ಭೂದಾನ

1921 ರಿಂದ 1945ರ ವರೆಗೆ ನಡೆದ ಭಾರತದ ಸ್ವಾತಂತ್ರ್ಯೋದ್ಯಮಗಳಲ್ಲಿ ಜೈಲುವಾಸ ಅನುಭೋಗಿಸಿದವರಿಗೆ ಮಾತ್ರ 5 ಎಕರೆ ತರಿಭೂಮಿ ಇಲ್ಲವೇ 10 ಎಕರೆ ಖುಷ್ಕಿ ಕೊಡಲಾಗುವುದು. ಈ ವಿಷಯವಾಗಿ ಅನೇಕ ಸಲ ಪ್ರಕಟವಾಗಿದೆ. ಈ ವಿವರಗಳನ್ನು ಕೊಡುತ್ತಾ ಕಲೆಕ್ಟರವರಿಗೆ ಅರ್ಜಿ ಇಟ್ಟುಕೊಳ್ಳುವ ಅವಧಿ ಜನವರಿ ಕೊನೆಯವರೆಗೆ ಇದ್ದುದನ್ನು ಫಿಬ್ರವರಿ ಕೊನೆಯವರೆಗೆ ಬೆಳೆಸಿರುತ್ತಾರೆ. ಈಗಾಗಲೇ 10 ಎಕರೆಗಳಿಗಿಂತಲೂ ಹೆಚ್ಚಿನ ಭೂಮಿಯನ್ನು ಹೊಂದಿರುವ ಹಿಂದಿನ ರಾಜಕೀಯ ಕೈದಿಗಳು ಕಲೆಕ್ಟರವರಿಗೆ ಅರ್ಜಿ ಇಟ್ಟುಕೊಳ್ಳಬೇಕಾಗಿಲ್ಲ. ತೀರ ಬಡವರಾದ ಸ್ವಾತಂತ್ರ್ಯ ಯೋಧರಿಗೆ ಮಾತ್ರ ಸರಕಾರವು ಸಹಾಯ ಮಾಡಲಿದೆಯಂತೆ.

ಈ ವಿಷಯವನ್ನು ಕಾಂಗ್ರೆಸ್ ಸಮಿತಿಗಳಿಗೇನೂ ತಿಳಿಸಿಲ್ಲವೆಂದು ಬಳ್ಳಾರಿ, ಕೊಟ್ಟೂರು ಕಾಂ. ಸಮಿತಿಯವರೂ ಜಿ. ಕಾ. ಶ್ರೀ ತಿರುಮಲರಾಯರೂ ತಿಳಿಸುತ್ತಾರೆ. ಇದರಲ್ಲೇನೂ ಆಶ್ಚರ್ಯವಿಲ್ಲ. ಸರಕಾರವು ಕಾಂಗ್ರೆಸಿನದಾದರೂ, ಆಡಳಿತಕ್ಕೂ, ಕಾಂಗ್ರೆಸ್ ಸಮಿತಿಗಳಿಗೂ ಸಂಬಂಧವೇನೂ ಉಳಿದಿಲ್ಲ.

"ನಿಮಗಾವ ಭಾಗದಲ್ಲಿ ಯಾವ ಸರ್ವೆ ನಂಬರ ಭೂಮಿ ಬೇಕು?" ಎಂದು ಬಳ್ಳಾರಿ ಕಲೆಕ್ಟರವರು ಮಾಜಿ ರಾಜಕೀಯ ಕೈದಿಗಳಿಗೆಲ್ಲಾ (ಅರ್ಜಿ ಇಟ್ಟವರಿಗೆ) ಬರೆದಿರುತ್ತಾರೆ. ಈ ಕಾರಣ ಅವರೇ ಜಿಲ್ಲಾ ಎಲ್ಲಾ ಸಂಚಾರಮಾ

ಯಾವಭಾಗದಲ್ಲಿ ಯಾರೂ ಆಕ್ರಮಿಸದ ಭೂಮಿ ಉಂಟೇ ಎಂಬುದನ್ನು ಕಂಡುಹಿಡಿಯಬೇಕು

---

# ಸರ್ಕಾರಿ ನವಕರರಿಗೆ ಹೆಚ್ಚಿನ ಅಲೋಯರ್ನ್ಸ್

ಸರ್ಕಾರಿ ನವಕರರಿಗೆ 1948ನೆಯ ಜನವರಿಯಿಂದ ಈ ಕೆಳಗೆ ಕಾಣಿಸಿದ ಹೆಚ್ಚಿನ ಮಾಸಿಕ ಅಲೋಯರ್ನ್ಸ್ ಕೊಡಲಾಗುವದೆಂದು ಸರ್ಕಾರಿ ಪ್ರಕಟನೆಯೊಂದು ಹೊರಟಿದೆ.

| | | |
|---|---|---|
| 20ರ ವರೆಗಿನ ನವಕರರಿಗೆ | 2 ರೂ. | ಅಲೋಯರ್ನ್ಸ್ |
| 20 ರಿಂದ 40ರ ,, | 3 ,, | ,, |
| 40 ರಿಂದ 60 ,, | 4 ,, | ,, |
| 60 ರಿಂದ 100 ,, | 6 ,, | ,, |
| 100 ರಿಂದ 200 ,, | 8 ,, | ,, |
| 200 ರಿಂದ 300 ,, | 6 ,, | ,, |

ಕೆಳ ದರ್ಜೆಯನವಕರರಿಗೆ 16 ರೂ ಮತ್ತು 20 ರಿಂದ 100 ರೂ. ವರೆಗಿನ ನವಕರರಿಗೆ ಮಾಸಿಕವಾಗಿ 18 ರು. ಅಲೋಯರ್ನ್ಸ್ 100ಕ್ಕಿಂತ ಹೆಚ್ಚಿನವರಿಗೆ 17½ ಶೇಕಡ ಕೊಡಲಾಗುತ್ತಿತ್ತು. ಇನ್ನು ಮೇಲೆ 1000 ರೂ. ಗಿಂತ ಹೆಚ್ಚಿನವರಿಗೆ ಅಲೋಯನ್ಸ್ ಕೊಡಲಾಗುವುದಿಲ್ಲ. ಮುನಿಸಿಪಾಲಿಟಿ, ಜಿಲ್ಲಾ ಬೋರ್ಡುಗಳಲ್ಲಿರುವ ಅಧಿಕಾರಿಗಳಿಗೂ ಇದು ಅನ್ವಯಿಸಲಾಗಿದೆ.

---

## ಸುಭಾಷ ಜಯಂತಿ.

ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯ 23ನೆಯ ತಾ|| ಶ್ರೀ ಜಿ. ಯನ್. ಸತ್ಯನಾರಾಯಣರಧ್ಯಕ್ಷತೆಯಲ್ಲಿ ಸುಭಾಸ ಜಯಂತಿಯು ಆಚರಿಸಲ್ಪಟ್ಟಿತು. ಶ್ರೀ ಕೆ. ಸುಬ್ಬರಾವ್, ಕೆ. ಚನ್ನಬಸಪ್ಪನವರು ಸುಭಾಸರ ಜೀವಿತಾಂಶಗಳನ್ನು ಕುರಿತು ಭಾಷಣ ಕೊಟ್ಟರು.

**ಕಾಶ್ಮೀರ**:— ಈವಾರ ಭಾರತ ದಳಗಳು ದಾಳಿಗಾರರ ಗುಡ್ಡಗಾಡು ಭಾಗವನ್ನಾಕ್ರಮಿಸಿ ಅವರನ್ನೋಡಿಸಿದರು. 89 ಜನ ದಾಳಿಗಾರರು ಸತ್ತರು. 12 ಜನರನ್ನು ಸೆರೆ ಹಿಡಿಯಲಾಯಿತು. ಬಂದೂಕ, ರೈಫಲ್, ಮಾರ್ಟರ್ ದೊರೆತವು.

.. ಆಂಧ್ರಪ್ರಾಂತ ನಿರ್ಮಾಣಕ್ಕಾಗಿ ಶ್ರೀ ಪ್ರಕಾಶಂರವರಿಗೆ ಭಾರತದ ಪ್ರಧಾನ ಮಂತ್ರಿಗಳಾದ ನೆಹರೂರವರು ಆಶ್ವಾಸನ ಕೊಟ್ಟಿದ್ದು ನಿಜವಿರುವದಿಲ್ಲೆಂದು ಶ್ರೀ ದಿವಾಕರರಿಗೆ ಗೊತ್ತಿದ್ದ ವರ್ಗದವರು ತಮ್ಮ 'ಸಂಯುಕ್ತ ಕರ್ನಾಟಕ' ಕ್ಕೆ ತಾರಿನ ಮೂಲಕ ತಿಳಿಸಿದ್ದಾರೆ.

— ನೂಲನ್ನು ಹಂಚುವ ಪದ್ಧತಿಯನ್ನು ಹಾಗೆಯೇ ಉಳಿಸಲಾಗಿದೆ. ಜನವರಿ 20 ರಿಂದ ಗಿರಣಿಗಳಲ್ಲಿನ ಮಾಲಿಗೆ ಹೊಸ ಮುದ್ರೆಯೊತ್ತಲಾಗುವುದು.

.... ಜತ್ತ ಮತ್ತು ಜಮಖಂಡಿ ಸಂಸ್ಥಾನಗಳು ಯೂನಿಯನ್ ಭಾಗದಲ್ಲಿ ಶೀಘ್ರದಲ್ಲಿಯೇ ಲೀನವಾಗಲಿವೆ.

## ಜಿಲ್ಲಾ ಆಹಾರ ಸಮಿತಿಯ ಕಾರ್ಯಕಲಾಪಗಳು.

ಕಳೆದವಾರ ಕಲೆಕ್ಟರ್ ಅಧ್ಯಕ್ಷತೆಯಲ್ಲಿ ಕೂಡಿದ ಈ ಸಭೆಯಲ್ಲಿ ಹಳ್ಳಿಗಳಸೀದಾ ಪದ್ಧತಿ ತೆಗೆದ ಮೇಲೆ ಸಂಭವಿಸಿದ ಪರಿಸ್ಥಿತಿಯನ್ನು ವಿವೇಚಿಸಿ ನೆಲ್ಲು ಮತ್ತು ಇತರ ಧಾನ್ಯಗಳನ್ನು ಹೆಚ್ಚಿಗೆ ಬೆಳೆದವರಿಂದ ಅಲ್ಪವಾಗಿ ಸಂಗ್ರಹಿಸುವ ಸರ್ಕಾರದ ಪದ್ಧತಿಯನ್ನು ವಿವರಿಸಿದರು. ಸದ್ಯಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಆಹಾರ ಧಾನ್ಯಗಳಿಗೆ ಕೊರತೆ ಇಲ್ಲ. ಲೆವಿಪದ್ಧತಿ ಜಾರಿಯಲ್ಲಿ ತರಬಾರದು. ರಾಯಲಸೀಮೆ ಜಿಲ್ಲೆಗಳಲ್ಲಿ ಜಿಲ್ಲೆ ಜಿಲ್ಲೆಗೂ ಧಾನ್ಯಾದಿಗಳನ್ನೊಯ್ಯುವ ಅಪ್ಪಣೆಗಾಗಿ ಸರ್ಕಾರಕ್ಕೆ ಕೇಳಬೇಕೆಂಬರ್ಥದ ನಿರ್ಣಯವು ಶ್ರೀ ಲಿಂಗಾರೆಡ್ಡಿಯವರಿಂದ ಮಂಡಿಸಲ್ಪಟ್ಟು ಶ್ರೀ ಗೋವಿಂದದಾಸರಿಂದ ಸಮರ್ಥಿಸಲ್ಪಟ್ಟಿತು. ಸುಗ್ಗಿ ಮುಗಿದಮೇಲೆ ಕಡಮೆಬೀಳುವ ಪ್ರದೇಶಗಳಿಗೆ ಧಾನ್ಯಗಳನ್ನು ಹೇಗೆ ಒದಗಿಸಬೇಕೆಂಬುದು ಕೊಟ್ರಗೌಡರಿಂದ ಪ್ರಶ್ನಿಸಲಾಯಿತು. ಮುಂಗಾರಿ ಬೆಳೆಯು ಸಾಧಾರಣವಾಗಿ ಜಿಲ್ಲೆಯಲ್ಲೆಲ್ಲಾ ಚನ್ನಾಗಿದ್ದು ಹಿಂಗಾರಿ ಬೆಳೆಯೂ ಕೆಟ್ಟಿಲ್ಲವಾದಕಾರಣ ಅಂಥ ಭಯವಿಲ್ಲೆಂದು ಹೇಳಿದರು. ತೀರ್ಮಾನವು ಸ್ವೀಕೃತವಾಯಿತು.

ಸರಕಾರದವರು ಲೆವಿ ತೆಗೆದುಹಾಕಲೊಪ್ಪದಿದ್ದರೆ ನೀರಾವರಿ ೨ ಎಕರೆ ಎರೆನೆಲ ೫ ಎಕರೆ ಒಣ ಭೂಮಿ ೧೦ ಎಕರೆ ಇರುವವರಿಂದ ಕಾಳು ಸಂಗ್ರಹಿಸಬಾರದೆಂದು ನಿಶ್ಚಿತವಾಯಿತು. ತುಂಗಭದ್ರಾ ಕಾಲುವೆ ಭೂಮಿಗಳಿಂದ ಎಕರೆಗೆ ೨೭೨ ಸೇರು, ಕೆರೆ ಮತ್ತು ಬುಗ್ಗೆ ಕಾಲುವೆಗಳ ಭೂಮಿಯಿಂದ ಎಕರೆಗೆ ೧೩೬ ಸೇರು ನೆಲ್ಲನ್ನು, ಮತ್ತು ಎರೆಭೂಮಿಯಿಂದ ಎಕರೆಗೆ ೨೦ ಸೇರು, ಕೆಂಪು ಭೂಮಿಯಿಂದ ಎಕರೆಗೆ ೧೦ ಸೇರು ಸಂಗ್ರಹಿಸಲು ಒಪ್ಪಿದರು. ವರ್ತಕರು ಈ ಸಂಗ್ರಹಕ್ಕೊಪ್ಪದಿದ್ದರೆ ಶೆಂಟ್ರಲ್ ಸ್ಟೋರ್ಸ್ ಅಧ್ಯಕ್ಷರು ಸಂಗ್ರಹಿಸಲು ಒಪ್ಪಿದರು. ವತ್ತಾಯವಿಲ್ಲದೆ ಇಷ್ಟನ್ನು ಸಂಗ್ರಹ ಮಾಡುವುದೂ ಕಷ್ಟವೆಂದು ಸಭೆಯಲ್ಲಿ ಹೇಳಿದರು. ರೈತರಲ್ಲದ ಪಟ್ಟಣಿಗರು ಹಳ್ಳಿಗಳಿಂದ ಮೂರುತಿಂಗಳ ಭತ್ಯವನ್ನು ಕೊಳ್ಳಬಹುದೆಂದು ಸರ್ಕಾರಕ್ಕೆ ಶಿಫಾರ್ಸ ಮಾಡಲಾಯಿತು. ಗೋಧಿ ಮತ್ತು ಗೋಧಿವಸ್ತುಗಳ ನಿಯಂತ್ರಣವಾಗಬೇಕೆಂದು ಸರ್ಕಾರಕ್ಕೆ ಕೇಳಲಾಯಿತು. ಹುಲ್ಲು ಮೇವಿಗಾಗಿ ಈಗಿನ ಪರಿಸ್ಥಿತಿಯಲ್ಲಿ ಪ್ರತ್ಯೇಕ ಶಾಖೆಯು ಅನವಶ್ಯಕವೆಂದು ಗೊತ್ತಾಯಿತು. ಚಿಪ್ಪಿ ಎಣ್ಣೆಯ ಬೆಲೆ ರೂಪಾಯಿಗೆ ೧ ಪೈ ಹೆಚ್ಚಿಸಲು ನಿಶ್ಚಯವಾಯಿತು, ಈಗಿರುವ ಕಟ್ಟಿಗೆ ಸ್ಟಾಕು ಮುಗಿದೊಡನೆ ಅದರ ಮೇಲಿನ ನಿಯಂತ್ರಣ ತೆಗೆಯಬೇಕೆಂದಾಯಿತು.

## ಮಾಗಳದಲ್ಲಿ ನಡೆದ ದರೋಡೆ.

ಹಡಗಲಿ ತಾಲೂಕು ಮಾಗಳದಲ್ಲಿ ಜನವರಿ 14 ನೆಯ ತಾರೀಖು ಸಾಯಂಕಾಲ 7 ಗಂಟೆಗೆ ಭಯಂಕರ ದರೋಡೆಯು ನಡೆಯಿತು. ಸುಮಾರು 40 ಜನ ಸಮವಸ್ತ್ರಗಳನ್ನು ಧರಿಸಿದ ಜನರು ಪಿಸ್ತೂಲು ಕೈಬಾಂಬುಗಳ ಸಮೇತರಾಗಿ ಬಂದು ಊರಿನ ಹಾದಿಗಳನ್ನೆಲ್ಲಾ ಮುಚ್ಚಿ ಗಾಳಿಯಲ್ಲಿ ಒಂದೆರಡುಸಲ ಗುಂಡು ಹಾರಿಸಿದನಂತರ ಇಲ್ಲಿಯ ಶ್ರೀಮಂತರಾದ ಭೋಜಪ್ಪನವರ ಮನೆಗೆ ಹೋಗಿ ಸುಮಾರು ಒಂದು ಲಕ್ಷ ಬೆಲೆಬಾಳುವ ಭಂಗಾರ ಮತ್ತು ಬೆಳ್ಳಿಯ ಮಾಲನ್ನು ದರೋಡೆ ಮಾಡಿಕೊಂಡು ಹೋದರೆಂದು ಗೊತ್ತಾಗಿದೆ, ಪೋಲೀಸಿನವರ ವಿಚಾರಣೆ ನಡೆದಿದೆ.

## ಶ್ರೀ ಕೆ. ಯಂ. ಮುನ್ಷಿ.

ಹೈದರಾಬಾದಿನಲ್ಲಿ ಹಿಂದುಸ್ಥಾನದ ಏಜಂಟ ಜನರಲ್‌ರಾದ ಮುನ್ಷಿಯವರು ಬೆಜವಾಡದಲ್ಲಿ ಮದ್ರಾಸದ ಅಧಿಕಾರಿಗಳೊಡನೆ ಚರ್ಚಿಸಿ ಹೈದರಾಬಾದ್ ಗಡಿಯಲ್ಲಿ ನಡೆದ ನಡೆಯುತ್ತಿರುವ ಘಟನೆಗಳ ಸಂಬಂಧವಾಗಿ ತಕ್ಕ ಸೂಚನೆಗಳನ್ನು ಪಡೆದರು.

## ಭದ್ರತಾ ಸಮಿತಿ

ಭದ್ರತಾ ಮಂಡಳದ ಪರವಾಗಿ ಕಾಶ್ಮೀರಕ್ಕೆ ಮೂವರ ಸಮಿತಿಯೊಂದನ್ನು ಕಳಿಸಲು ಭಾರತ ಪಾಕಿಸ್ಥಾನಗಳು ಒಪ್ಪಬಹುದೆಂದು ಪ್ರಕಟವಾಗಿದೆ. ಪಾಕಿಸ್ಥಾನ-ಭಾರತಗಳು ಆರಿಸುವ ಪ್ರತಿನಿಧಿಗಳೊಬ್ಬರು ಭದ್ರತಾ ಮಂಡಳದವರೊಬ್ಬರು ಹೀಗೆ ಮೂವರು ಕಾಶ್ಮೀರ ಸಮಸ್ಯೆಯ ಸಮಸ್ತ ವಿವರಗಳನ್ನೂ ನಿರೀಕ್ಷಿಸಬಹುದೆಂದು ಊಹಿಸಲಾಗಿದೆ.

ಭದ್ರತಾಮಂಡಳವು—ಕಾಶ್ಮೀರ ಸಮಸ್ಯೆಯನ್ನು ಮೂವರ ಶಿಷ್ಟ ಮಂಡಳಕೊಪ್ಪಿಸಿದೆ. ಭಾರತ-ಪಾಕಿಸ್ಥಾನವಳಲ್ಲಿ ಮಾತುಕತೆಗಳು ನಡೆದಿವೆ.

# Tha Rayalaseema Confectionery Works, Bellary.

## ದಿ ರಾಯಲಸೀಮ ಕನ್ಫೆಕ್ಶನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | | |
|---|---|---|
| First Quality | .... .... | Rs, 32.0-0 |
| Second | .... .... | Rs, 28 0 0 |
| Without essence | .... | Rs, 26-0-0 |

Per Tin of 28 lbs Ex, Factory, Sales Tax Extra.

None to beat us in quality. Try and be convinced. Encourage the industries of these most backward tracts,

**ಇಳಿಸಿದ ಬೆಲೆ ಪೆಪ್ಪರಮಿಂಟು**

| | | |
|---|---|---|
| ಪ್ರಥಮ ವರ್ಗದ್ದು | .... | ರೂ 32—0—0 |
| ದ್ವಿತೀಯ ,, | .... | 28—0—0 |
| ಎಸ್ಸೆನ್ಸ ಇಲ್ಲದ್ದು | .... | 26—0—0 |

28 ಪೌಂಡಿನ ಟನ್ನಿನ ಫ್ಯಾಕ್ಟರಿ ಹೊರಗಿನ ಬೆಲೆ ಸೇಲ್ಸಟ್ಯಾಕ್ಸ ಬೇರೆ. ಗುಣದಲ್ಲಿ ತಯಾರಿಕೆಯಲ್ಲಿ ನಾವು ಯಾರಿಗೂ ಕಡಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಯಾವಾಗಲೂ ನಮ್ಮಲ್ಲೇ ಬರುವಿರಿ. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪೋಷಿಸಿರಿ.


2ನೇ ಪುಟದಿಂದ ಬಂದದ್ದು

ಸುಭಾಷ ಸೇನೆಯ ಸಂಘಟನೆ, ಬ್ರಿಟಿಶರೊಡನೆ ೧೯೪೪ರಲ್ಲಿ ಆಸ್ಸಾಮ ಗಡಿಯಲ್ಲಿ ಸಂಘರ್ಷಣೆ ಮೊದಲಾದ ಘಟನೆಗಳು ಮಿಂಚಿನ ವೇಗದಿಂದ ನಡೆದವು. ಅವೆಲ್ಲವುಗಳು ಸುಭಾಷರ ಜನ್ಮದಿನವಾದ ಇಂದಿನ ಪ್ರಸಂಗದಲ್ಲಿ ಭಾರತೀಯರ ಕಣ್ಣೆದುರು ಚಲಚಿತ್ರ ಪಟದಂತೆ ಬರದಿರಲಾರವು.

• ಸಿಪಾಯರ ಬಂಡವೆನಿಸಿದ ನಮ್ಮ ಮೊದಲನೆ ಸ್ವಾತಂತ್ರ್ಯ ಸಮರದ ತರುವಾಯ ಬ್ರಹ್ಮಾವರ್ತದ, ನಾನಾಸಾಹೇಬರು ಮರಣ ದಂಡನೆ ಹೊಂದಿದ ೧೮೬೧ ರಿಂದ ಲಾಹೋರದಲ್ಲಿ ೧೯೩೧ ರಲ್ಲಿ ಗಲ್ಲಿಗೇರಿಸಲ್ಪಟ್ಟ ಭಗತ್ ಸಿಂಗನ ವರೆಗಿನ ೭೦ ವರ್ಷಗಳಲ್ಲಿ ಹಿಂದೂಸ್ಥಾನವು ಅನೇಕ ಕ್ರಾಂತಿಕಾರರನ್ನು ಕಂಡಿತು. ಅವರೆಲ್ಲರಲ್ಲಿ ನೇತಾಜಿಯವರ ಸ್ಥಾನವು ವೈಶಿಷ್ಟ್ಯ ಪೂರ್ಣವು ಬ್ರಿಟಿಶರು ನಮ್ಮನ್ನಾಳ್ಳುತ್ತಿರುವಾಗ ಯಾರಿಂದಲೂ ಅಸಾಧ್ಯವಾದ ಸ್ವತಂತ್ರ ಸರಕಾರವನ್ನೂ, ಸುಸಂಘಟಿತ ಸೇನೆಯನ್ನೂ ನಿರ್ಮಿಸಿದ ಶ್ರೇಯಸ್ಸು ಹಿಂದೂಸ್ಥಾನದ ಸ್ವಾತಂತ್ರ್ಯ ಇತಿಹಾಸದಲ್ಲಿ ಸುಭಾಷರ ಹೊರತು ಇನ್ನೊಬ್ಬರಿಗೆ ಇಲ್ಲ. ಇಂದು ಅವರು ಜೀವಿಸಿರಲಿ, ಜೀವಿಸದಿರಲಿ, ಭಾರತದ ರಾಜಕೀಯ ಕ್ಷಿತಿಜದಲ್ಲಿ ಅವರು ಧ್ರುವ ನಕ್ಷತ್ರದಂತೆ ಅಚಲ ಸ್ಥಾನಪಡೆದಿರುವರೆಂಬುದು ನಿರ್ವಿವಾದಮಾತು.

ದಿಲ್ಲಿಯ ಕೆಂಪುಕೋಟೆಯ ಮೇಲೆ ಹಿಂದೂಸ್ಥಾನದ ತ್ರಿವರ್ಣ ರಾಷ್ಟ್ರಧ್ವಜವು ಹಾರಾಡಲು ಪ್ರಾರಂಭಿಸುವವರೆಗೆ ಸುಭಾಷರು ಅಜ್ಞಾತರಾಗಿ ಉಳಿಯುವರೆಂದು ಅವರ ಸೇನಾಧಿಕಾರಿಗಳಲ್ಲೊಬ್ಬರಾದ ವಲೀ ಮುಹಮ್ಮದರು ೧೯೪೬ರ ಪ್ರಾರಂಭದಲ್ಲಿ ಹೇಳಿದ್ದರು. ಈಗ ಹಿಂದೂಸ್ಥಾನವು ಸ್ವತಂತ್ರವಾಗಿದೆ. ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜವು ಹಾರಾಡುತ್ತಿದೆ, ಆದರೆ ಇನ್ನು ಸುಭಾಷರು ಪ್ರಕಟವಾಗಿರುವುದಿಲ್ಲ. ತಾನು ಅಪೇಕ್ಷಿಸಿದ ಭಾರತ ಸ್ವಾತಂತ್ರ್ಯವು ಅಖಂಡ ಹಿಂದೂಸ್ಥಾನದ್ದೇ ಹೊರತು ವಿಚ್ಛೇದಿಸಲ್ಪಟ್ಟ ಭಾರತ ಮಾತೆಯದಲ್ಲ. ಆದ್ದರಿಂದ ತನ್ನ ಸ್ವಾತಂತ್ರ್ಯದ ಕನಸು ಸಂಪೂರ್ಣ ಕೈಗೂಡಿಲ್ಲವೆಂದೂ, ಇಬ್ಭಾಗಿಸಲ್ಪಟ್ಟ ಹಿಂದುಸ್ಥಾನವು ಪುನಃ ಒಂದಾಗುವ ವರೆಗೆ ತಾನು ಪ್ರಕಟನಾಗಲಾರಿರೆಂದೂ, ಪಣ ತೊಟ್ಟಿರಬಹುದೇ?

---

## ಕನ್ನಡ ನೀತಿಶತಕ

ಬೆಲೆ 0—4—0 ದೊರೆಯುವಸ್ಥಳ—**ಸರಸ್ವತೀಭಂಡಾರ ಹೂವಿನಬಜಾರ ಬಳ್ಳಾರಿ** ಗ್ರಂಥಕರ್ತರಾದ **ಶ್ರೀ ಜಾಳಿಬಂಡೆ ಸುಬ್ಬಣ್ಣನವರನ್ನು** ಅರಿಯದವರಿಲ್ಲ. ಅವರ ಶೈಲಿಯು ಎಷ್ಟು ಮನೋಹರವಿದೆಯೋ ಅಷ್ಟೇ ಸುಲಭವಿದೆ ಭರ್ತೃಹರಿ ಸುಭಾಷಿತೆಯೊಳಗಿನ ಈ ನೀತಿಶತಕವನ್ನು ಎಲ್ಲಾ ಪ್ರಾಥಮಿಕ ಶಾಲೆಗಳವರೂ ತರಿಸಿ ಪಠ್ಯ ಪುಸ್ತಕವಾಗಿ ಉಪಯೋಗಿಸಬೇಕೆಂದು ನಾವು ಕೋರುತ್ತೇವೆ.

# The Rayalaseema Bank Ltd., H. O. Bellary.

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
| **ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

ಸ್ಥಾಯಿ **ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ $3\frac{1}{4}\%$ — ಎರಡು ವರ್ಷ $3\frac{1}{2}\%$

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ,** ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

**ಬಿ. ವಿ. ಶೇಷಗಿರಿರಾವ್,** ಬಿ. ಕಾಂ.,
ಕಾರ್ಯದರ್ಶಿ.



# NAVA BHARAT BELLARY.

Reg. No. M. 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates |
| --- | --- |
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To

Sri............................................

............................................

............................................

Printed at Vittal Press, Q H No B-24 For (Q H No B-5)
Edited & Published by T. R. Keshava Rao.

ಜೈ ಹಿಂದ್

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

[illegible]

ಬಳ್ಳಾರಿ ಫಿಬ್ರವರಿ ೨ ಸೋಮವಾರ ೧೯೪೮

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

## ★ ಭಾರತ ಭಾಗ್ಯ ವಿಧಾತನ ಕಣ್ಮರೆ ★

### ... ಮಹಾತ್ಮ ಗಾಂಧಿ ...

| ಜನನ | ವಯಸ್ಸು | ಸ್ವರ್ಗಸ್ಥ |
|---|---|---|
| 2-10-1869. | 79 | 30-1-1948. |

ಇಂಡಿಯಾ ರಾಜಧಾನಿ ಡೆಲ್ಲಿಯಲ್ಲಿ ೩೦-೧-೧೯೪೮ನೆಯ ದಿನ ಸಾಯಂಕಾಲ ೫॥ ಗಂಟೆಗೆ ಮಹಾತ್ಮ ಗಾಂಧಿಯವರು ಪ್ರಾರ್ಥನೆಗೆ ಹೋಗುವಾಗ ಯಾರೋ ದುರಾತ್ಮರು (ಹಿಂದು) ಪಿಸ್ತೂಲಿಂದ ನಾಲ್ಕುಸಲ ಗುಂಡು ಹಾರಿಸಿದರು. ಎದೆಗೂ ಹೊಟ್ಟೆಗೂ ತಗಲಿ ಅಲ್ಲಿಯೇ ಬಿದ್ದರು. ರಕ್ತಪ್ರವಾಹವಾಯಿತು. ಬಿರ್ಲಾ ಭವನಕ್ಕೊಯ್ಯಲಾಯಿತು. ಸಲ್ಪ ಹೊತ್ತಿನಲ್ಲಿ ಪ್ರಾಣಪಕ್ಷಿಯು ಹಾರಿಹೋಯಿತು. ಮಾರನೆಯ ದಿನ ಸಾಯಂಕಾಲ ಅಂತ್ಯೇಷ್ಟಿಯು ಯಮುನಾತೀರದಲ್ಲಿ ನಡೆಯಿತು

ಗಾಂಧೀಜಿ ನಿಧನದ ದುಃಖ ಸೂಚಕವಾಗಿ ನವಭಾರತ 9—2—48 ಹೊರಡುವುದಿಲ್ಲ. 16—2—48 ಎಲ್ಲಾ ವಿವರಗಳೊಂದಿಗೆ ಹೊರಡುವುದು.

# ಹೈದರಾಬಾದ ಆಂದೋಲನದ ಮುನ್ನಡೆ.

ಶ್ರೀ ಕೃಷ್ಣಾಚಾರ್ಯ ಜೋಶಿ ಬಿ. ಎ. ಎಲ್. ಎಲ್. ಬಿ.

ಹೈದರಾಬಾದಿನ ರಾಜಕೀಯ ಆಂದೋಲನ ದಿನ ದಿನಕ್ಕೆ ಬೆಳೆಯುತ್ತಲಿದೆ. ಅಲ್ಲಿಯ ನಿರಂಕುಶ ಮತ್ತು ಫಾಸಿಸ್ಟ ಮಾದರಿಯ ಪ್ರಭುತ್ವದ ದಬ್ಬಾಳಿಕೆ ಹೆಚ್ಚಿದಂತೆ ಹೋರಾಟ ಹಬ್ಬುತ್ತ ನಡೆದಿದೆ. ಜನತೆಯ ಸಾರ್ವಭೌಮ ಸಂಕಲ್ಪವನ್ನು ಒತ್ತಿಡಬೇಕೆಂಬುದೆ ಪ್ರಭುತ್ವದವರ ಪ್ರಯತ್ನ ಅದಕ್ಕಾಗಿ ಎಲ್ಲ ಬಗೆಯ ಉಪಾಯವನ್ನು ಅವರು ಕೈಕೊಂಡಿದ್ದಾರೆ. ಅಧಿಕಾರ ಮದದಿಂದ ಕೊಬ್ಬಿದ ಪೋಲೀಸ ದಳದವರು ಜನತೆಯ ಮೇಲೆ ಅತ್ಯಾಚಾರಗಳನ್ನೂ ನಡೆಸಿದ್ದಾರೆ ಮಹಾಜನರನ್ನು ಬೆದರಿಸುವದು, ಕಾರಣವಿಲ್ಲದೆ ಬಡಿಯುವದು ಅವರನ್ನು ಸೆರೆ ಹಿಡಿಯುವದು, ಲಂಚ ತೆಗೆದುಕೊಳ್ಳುವುದು ಹೆಂಗಸರನ್ನು ಕೆಡಿಸುವದು, ನಾನಾ ಬಗೆಯ ಹಿಂಸೆ ಪಡಿಸುವದು. ಅವರ ನಿತ್ಯಕ್ರಮವಾಗಿಬಿಟ್ಟಿದೆ. ಮುಸ್ಲಿಂ ಗುಂಡರು ಈ ಕೆಲಸದಲ್ಲಿ ಅವರಿಗೆ ನೆರವಾಗಿದ್ದಾರೆ ಸುಲಿಗೆ ಮಾಡುವದು ಮನೆಗಳನ್ನೂ ಸುಡುವದು ಇವೆ ಮುಂತಾದ ಬಾಧೆಗಳನ್ನು ನಡಿಸುವದೇ ಅವರ ಉದ್ಯೋಗ ಉಭಯರ ಈ ಹಾವಳಿ ಮತ್ತು ಸಶಸ್ತ್ರ ಆಕ್ರಮಣದಿಂದ ಅನೇಕ ಜನರು ತಮ್ಮ ಗ್ರಾಮಗಳನ್ನು ಬಿಟ್ಟು ಹಿಂದೀ ಸಂಘ ರಾಜ್ಯದಲ್ಲಿ ಆಶ್ರಯಕ್ಕಾಗಿ ಗುಳೆ ಹೋಗಿದ್ದಾರೆ. ಜನತೆಯಲ್ಲಿ ಭಯ ಹುಟ್ಟಿಸಬೇಕೆಂಬುದೆ ಪ್ರಭುತ್ವದ ಉದ್ದೇಶ. ಅಸಹ್ಯವಾದ ಅನ್ಯಾಯ ಅತ್ಯಾಚಾರಗಳಿಂದ ಜನತೆಯಲ್ಲಿ ಪ್ರಭುತ್ವದ ಬಗ್ಗೆ ತಿರಸ್ಕಾರ ಹೆಚ್ಚುತ್ತಾ ನಡೆದಿದೆ. ಜನತೆಯಲ್ಲಿ ಅಶಾಂತತೆ ಬೆಳೆದಂತೆ ಪ್ರಭುತ್ವದ ಅಳಿಗಾಲ ಸಮೀಪಿಸುವದು ಒಟ್ಟಿನ ಮೇಲೆ ಹೈದರಾಬಾದಿನ ರಾಜಕೀಯ ಚಳವಳಿ ಉಗ್ರ ಸ್ವರೂಪವನ್ನು ತಾಳುತ್ತಲಿದೆ

ಹೈದರಾಬಾದಿನ ಸ್ಟೇಟ ಕಾಂಗ್ರೆಸ್ ಕಳೆದ ಆರು ತಿಂಗಳಗಳಿಂದ ಜನತೆಯ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ ಹೈದರಾಬಾದ ಸಂಸ್ಥಾನದ ಆಂಧ್ರ ಮಹಾರಾಷ್ಟ್ರ, ಕರ್ನಾಟಕ ಪ್ರಾಂತಗಳಿಂದೊಳಗೊಂಡಿದೆ ಆ ಪ್ರಾಂತಗಳಲ್ಲಿ ವಾಸಿಸುವ ಜನರು ಮತ್ತು ಅವುಗಳ ಸುತ್ತಮುತ್ತಿನ ಹಿಂದೀ ಸಂಘ ರಾಜ್ಯದ ಪ್ರಾಂತದೊಳಗಿನ ಜನರು ಒಂದೇ ವಂಶದವರು ಅವರ ನಡೆನುಡಿಗಳ ಒಂದೇ. ಅವರ ಸಂಸ್ಕೃತಿ ಒಂದೆ. ಐತಿಹಾಸಿಕ ಘಟನೆಗಳಿಂದ ಅವರು ಹರಿದು ಹಂಚಿ ಹೋಗಿದ್ದಾರೆ ಆದರೇ ಈಗ ಸಂಘರಾಜ್ಯದೊಳಗಿನ ಜನರು ಸ್ವತಂತ್ರರಾ. ಮೇಲೆ ಸಂಸ್ಥಾನದೊಳಗಿನ ಜನರು ಇನ್ನು ಮುಂದೆ

11ನೇ ಪುಟವನ್ನು ನೋಡಿರಿ

## ಬಳ್ಳಾರಿ ಜಿಲ್ಲಾ ಕೋರ್ಟಿನಲ್ಲಿ.

O. P. 31/48

**ಪೋತಿ ಅನಂತಾಚಾರು ನಿಟ್ಟೆ ಪುರುಷ್**

**ಉಡಿಪಿ ಅನಂತಾಚಾರು,**

ಇವರ ಬಾಕಿ ವಿಷಯದಲ್ಲಿ

ಇವರ ಮೂಲಕ ಸಕಲ ಜನರಿಗೆ ತಿಳಿಯಪಡಿಸುವದೇನಂದರೆ ಮೇಲ್ಕಂಡ **ಪೋತಿ** ಉಡಿಪಿ ಅನಂತಾಚಾರ್ ಬಳ್ಳಾರಿಯಲ್ಲಿ ಕಾಪುರ ಮಾಡುತ್ತಾ ಇದ್ದು 10-12 47 ಬಳ್ಳಾರಿ ತಾಲೂಕು ಭಟ್ರಹಳ್ಳಿ ಗ್ರಾಮದಲ್ಲಿ ಮೃತಪಟ್ಟು ದಹನ ಮಾಡಲ್ಪಟ್ಟಿರುತ್ತಾರೆ.

ನಮ್ಮ ಕಕ್ಷಿದಾರನಾದ ದಾಮೋದರ ಉಪಾಧ್ಯಾಯ ಸದ್ರಿ ಮೃತಪಟ್ಟ ಉಡಿಪಿ ಅನಂತಾಚಾರ್ಯರಿಗೆ ತಮ್ಮನೆಂತಲು ಪೋತಿಗೆ ಬರಬೇಕಾದ ಬಾಕಿ ವಸೂಲು ಮಾಡಿಕೊಳ್ಳುವದಕ್ಕೆ ಬಾಧ್ಯತೆ ಇರುವದೆಂತಲು 1889 ನೇ ಇಸ್ವಿ 7ನೇ ಆಕ್ಟು ಪ್ರಕಾರ ಸರ್ಟಿಫಿಕೇಟು ಕೊಡಬೇಕೆಂದು ಕೊಟ್ಟ ಅರ್ಜಿ 10-2-1948ಕ್ಕೆ ವಾಯಿದಾ ಇರುತ್ತದೆ,

ಈ ವಿಷಯದಲ್ಲಿ ಆಕ್ಷೇಪಣೆ ಉಳ್ಳಂಥವರು 10–2-48ಲ್ಲು ಖುದ್ದಾಗಲಿ ಕೋರ್ಟು ವಕೀಲ ದ್ವಾರಾಗಲಿ ಈ ಕೋರ್ಟಿನಲ್ಲಿ ಹಾಜರಾಗಿ ಅವರವರ ಆಕ್ಷೇಪಣೆಯನ್ನು ತಿಳಿಯಪಡಿಸಿಕೊಳ್ಳಬೇಕು.

ಬಳ್ಳಾರಿ,
30-1-48

ಯಸ್. ಶ್ರೀನಿವಾಸ ಅಯ್ಯರ್,
ಯಸ್. ಇ. ಟಾಗೆಟ್,
ಅಡ್ವೋಕೇಟರು.

ಪತ್ರವ್ಯವಹಾರ:—

# ಆಂಧ್ರಪ್ರಾಂತ ಮತ್ತು ರಾಯಲಸೀಮೆ

ಶ್ರೀ ಎನ್. ಮೃತ್ಯುಂಜಯಶಾಸ್ತ್ರಿಗಳು ಹೀಗೆ ಬರೆಯುತ್ತಾರೆ—

"ರಾಜಕೀಯ ವಿಜ್ಞಾನ ಮತ್ತು ಧಾರ್ಮಿಕ ದೃಷ್ಟಿಗಳಿಂದ ಭಾಷಾವಾರ ಪ್ರಾಂತರಚನೆಯು ಅನಾವಶ್ಯಕವಾಗಿದ್ದು ರಾಷ್ಟ್ರದ ಐಕಮತ್ಯಕ್ಕೆ ವಿಘಾತವಾಗಿದೆ. ಆಂಧ್ರರು ಇದನ್ನು ಪ್ರಾರಂಭಿಸಿ ತಮಿಳರ ವಿರೋಧದಿಂದ ಬೆಳೆಸಿದರು. ಈಗ ತಮ್ಮ ಆರ್ಥಿಕ ಮತ್ತು ರಾಜಕೀಯ ಹಿಡಿತವನ್ನು ರಾಯಲಸೀಮದ ಮೇಲೆ ಸಾಗಿಸಲಿದ್ದಾರೆ. ಹಿಂದೀ ಭಾಷೆಗೆ ಪ್ರಥಮಸ್ಥಾನ ಕೊಟ್ಟು ಪ್ರಾಂತೀಯ ಭಾಷೆಗಳಿಗೆ ದ್ವಿತೀಯ ಸ್ಥಾನ ಕೊಡಬೇಕು ಶಾಸನಸಭೆಗಳ ಕೋರ್ಟು ಕಛೇರಿಗಳ ವ್ಯವಹಾರವು ಹಿಂದಿಯಲ್ಲಿ ನಡೆಯಬೇಕು. ರಾಜಕೀಯ ವಿಭಾಗವನ್ನು ಭಾಷಾವಾರ ದೃಷ್ಟಿಯಿಂದ ಮಾಡುವುದು ಆತ್ಮಹತ್ಯವಾದಂತೆ ಈ ದೃಷ್ಟಿಯಿಂದ ರಾಯಲಸೀಮೆಯು ಆಂಧ್ರ ಪ್ರಾಂತಕ್ಕೆ ಸೇರಬಾರದು.

ಹಿಂದೂಸ್ತಾನದ ಬಿಕ್ಕಟ್ಟಿನ ಸಮಯದಲ್ಲಿ ವಿಜಯನಗರದರಸರು ಆಂಧ್ರ-ಕನ್ನಡ-ತಮಿಳರ ಸಹಾಯದಿಂದ ದಕ್ಷಿಣ ಸಂಸ್ಕೃತಿಯನ್ನು ನಾಶವಾಗದಂತೆ ಉದ್ಧರಿಸಿದರು. ಮೂರು ಶತಮಾನಗಳ ವಿಜಯನಗರದ ಘನತೆಯಿಂದ ಆಂಧ್ರ-ಕರ್ನಾಟಕಗಳ ಪ್ರಾಂತೀಯವಾದವು ನಮಗೆ ರುಚಿಸುವುದಿಲ್ಲ.

ಆಂಧ್ರಪ್ರಾಂತೀಯ ಕಾಂಗ್ರೆಸ್ ಅಧೀನದಲ್ಲಿ ಸಾರ್ವಜನಿಕ ಜೀವನ ಮುಖಂಡತ್ವವು ಅವರ ನಕಲನ್ನೇ ಮಾಡುತ್ತಿದೆ. ನಮ್ಮ ಪ್ರತಿನಿಧಿಗಳಿಗೆ ಪ್ರಾಂತೀಯ ಶಾಸನಸಭೆಗಳಲ್ಲಿ ಅಷ್ಟು ಸ್ವಾತಂತ್ರ್ಯವಿಲ್ಲದೆ ಆಂಧ್ರ ಪ್ರಾಂತ ವಿರೋಧವು ವ್ಯಕ್ತವಾಗಲಿಲ್ಲ. ಈ ಕಾರಣ ಶಾಸನಸಭಾನಿರ್ಣಯವು ನಮಗೆ ಬಂಧನಕಾರಿಯಲ್ಲ ಆಂಧ್ರ ವಿಶ್ವವಿದ್ಯಾಲಯಕ್ಕೆ ನಾವು ಸೇರಬಾರದೆಂದು ನಿರ್ಣಯಿಸಿದ್ದೇವೆ. ನಮಗೆ ಮುಖ್ಯವಾಗಿ ಬೇಕಾಗಿರುವುದು ಆರ್ಥಿಕಾಭಿವೃದ್ಧಿ.

ರಾಯಲಸೀಮ ಪ್ರತ್ಯೇಕ ಪ್ರಾಂತವು ಬಳ್ಳಾರಿ-ಅನಂತಪುರ-ಕರ್ನೂಲು-ಚಿತ್ತೂರು-ನೆಲ್ಲೂರುಗಳೊಳಗೊಂಡು ಮದ್ರಾಸು ಮುಖ್ಯಪಟ್ಟಣವಾಗಿ ಸ್ಥಾಪಿತವಾಗಬೇಕು. ಇಲ್ಲವಾದರೆ ಇದರ ಪ್ರತ್ಯೇಕತೆಯು ಹೋಗಿ ಅಲ್ಪ ಸಂಖ್ಯಾಕರ ಸಮಸ್ಯೆಯೇಳುವುದು.

ಈ ನಮ್ಮ ಜಿಲ್ಲೆಗಳನ್ನು ಆಂಧ್ರಕ್ಕೆ ಸೇರಿಸುವ ಮೊದಲು ಜನಾಭಿಪ್ರಾಯ ದೊರಕಿಸಬೇಕು. ಎಲ್ಲ ಸಂಘ ಸಂಸ್ಥೆಗಳು ಇದಕ್ಕಾಗಿ ದುಡಿಯಬೇಕು ಅವರು ಜನಾಭಿಪ್ರಾಯವನ್ನು ಸಭೆ ತೀರ್ಮಾನಗಳ ಮೂಲಕ ಪ್ರಾಂತೀಯ ಕೇಂದ್ರ ಸರ್ಕಾರಗಳಿಗೆ ತಿಳಿಸಬೇಕು. ಇಲ್ಲವಾದರೆ ಸರ್ಕಾರ ಆಂಧ್ರರ ಬಲೆಗೆ ಬಿದ್ದು ನಾವು ನಾಶವಾಗುತ್ತೇವೆ. ಏಪ್ರಿಲದೊಳಗಾಗಿ ನಮ್ಮ ಪ್ರಯತ್ನಗಳ ಫಲಿತಾಂಶವು ತಿಳುಹಿಸಲ್ಪಡಬೇಕು.

---

## ಶ್ರೀ ಶಾಸ್ತ್ರಿಯವರ ವಿಚಿತ್ರವಾದ

ಶ್ರೀ ಎನ್. ಮೃತ್ಯುಂಜಯ ಶಾಸ್ತ್ರಿಯವರು The Andhra Province and Rayalaseema ಎಂದು ಆಂಗ್ಲಭಾಷೆಯಲ್ಲಿ ಪ್ರಕಟಿಸಿದ ಕರಪತ್ರವನ್ನೋದಿ ನೋಡಿದ್ದೇನೆ. ಅದರಲ್ಲಿ ಅವರ ವಾದಸರಣಿಯು ವಿಚಿತ್ರವಾಗಿದೆ. ರಾಯಲಸೀಮೆಯಲ್ಲಿ ಕನ್ನಡ-ತೆಲುಗು ಹಿಂದೂಸ್ತಾನಿ ಭಾಷೆಗಳು ವಾಡಿಕೆಯಲ್ಲಿವೆ. ಇವರೇಕೆ ಆಂಗ್ಲಭಾಷೆಯಲ್ಲಿ ತಮ್ಮ ಪ್ರಚಾರಕಾರ್ಯವನ್ನು ಸಾಗಿಸಿರುವರು? ಹಿಂದೀ ಭಾಷೆಗೆ ಪ್ರಥಮ ಸ್ಥಾನವನ್ನು ಕೊಡಬೇಕೆಂದು ಹೇಳುವವರು ತಮ್ಮ ಕರಪತ್ರವನ್ನು ಹಿಂದಿಯಲ್ಲಿ ಪ್ರಕಟಿಸಿದ್ದರೆ ಸೂಕ್ತವಾಗುತ್ತಿತ್ತು.

ಭಾಷಾವಾರ ಪ್ರಾಂತವಿಭಜನೆಯು ರಾಷ್ಟ್ರೀಯ ಐಕ್ಯತೆಗೆ ಭಂಗತರುವುದೆಂದು ಹೇಳಿದ್ದಾರೆ. ಅದು ಹೇಗೋ ಅರ್ಥವಾಗುವಂತಿಲ್ಲ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಸಂಸ್ಥೆಯು ಭಾಷಾವಾರ ಪ್ರಾಂತವಿಭಜನೆಯನ್ನು ಸ್ವೀಕರಿಸಿದೆ. ಒಂದು ಭಾಷೆಯನ್ನಾಡುವವರು ತಮಗಾಗಿ ಒಂದು ಪ್ರಾಂತಬೇಕೆಂದು ಕೇಳುವುದು ಸ್ವಾಭಾವಿಕವಾಗಿದೆ. ಆಂಧ್ರರು ಈ ಚಳವಳಿಯನ್ನು ಪ್ರಥಮವಾಗಿ ಪ್ರಾರಂಭಮಾಡಿದ್ದರೂ ಈ ತತ್ವವನ್ನು ಎಲ್ಲರೂ ಒಪ್ಪಬೇಕಾಗಿದೆ.

ಮದ್ರಾಸ್ ಶಾಸನ ಸಭೆಯಲ್ಲಿ ಪ್ರಾಂತಭಾಷೆಗಳಿಗೆ ಸ್ಥಾನವೇ ಇಲ್ಲ. ಇಂಗ್ಲೀಷ್ ಬಂದ ಕೆಲ ಪ್ರತಿಭಾವ್ಯಕ್ತಿಗಳು ಮಾತ್ರ ಅಲ್ಲಿನ ಕಾರ್ಯಕಲಾಪಗಳನ್ನು ನಡೆಸುವರು. ಪ್ರಾಂತಭಾಷೆಗೆ ಮೊದಲಸ್ಥಾನ, ರಾಷ್ಟ್ರಭಾಷೆಗೆ ಎರಡನೆಯಸ್ಥಾನವೆಂದು ಗಾಂಧೀಜಿ-ನೆಹರು ಮತ್ತು ವಿದ್ಯಾಶಾಖೆಯ ಮಂತ್ರಿಗಳಾದ ಮೌಲಾನಾ ಆಜಾದರವರು ಹೇಳುತ್ತಿರುವರು ಮತ್ತು ಕಾಂಗ್ರೆಸ್ ವರ್ಗಗಳವರು ಪ್ರಾಥಮಿಕ ವಿದ್ಯಾವಿಧಾನದಲ್ಲಿ ಅದನ್ನು ಜಾರಿಗೆ ತರುತ್ತಿರುವರು. ಶಾಸ್ತ್ರಿಗಳಿಗೆ ರಾಷ್ಟ್ರಭಾಷೆಗೆ ಪ್ರಥಮಸ್ಥಾನ ಕೊಡಬೇಕೆಂಬ ಹುಚ್ಚು ಏಕೆ ಉತ್ಪನ್ನವಾಯಿತೋ ಹೇಳಬರುವಂತಿಲ್ಲ. ಯಾವ ದೇಶದಲ್ಲೂ ಇದನ್ನು ಕಾರ್ಯತಃ ಆಚರಣೆಗೆ ತಂದಿಲ್ಲ. ತರುವುದು ಸಾಧ್ಯವೇ ಇಲ್ಲ. ಇಂಥ ಒಂದು ದೇಶದ ಉದಾಹರಣೆಯನ್ನು ಶಾಸ್ತ್ರಿಗಳು ಕೊಡಲಿ

ವಿಜಯನಗರದ ಮಾತು ಬೇರೆಯಾಯಿತು. ರಾಜರು-ಚಕ್ರವರ್ತಿಗಳು ತಮ್ಮ ಬಲ-ಪರಾಕ್ರಮಗಳಿಂದ ರಾಜ್ಯ ವಿಸ್ತಾರಮಾಡಿದರು. ಅದು ಪ್ರಜಾರಾಜ್ಯಭಾರದ (Democracy) ಕಾಲವಲ್ಲ. ಈಗಿನ ಕಾಲದಲ್ಲಿ ಈ ಮಾತುಗಳನ್ನಾಡುವುದು ಶೋಭಿಸುವುದಿಲ್ಲ. ಪ್ರಜೆಗಳ ಅಭೀಷ್ಟಗಳನ್ನು ಲಕ್ಷಿಸದ ರಾಜತ್ವವು (Monarchy) ಶಾಸ್ತ್ರಿಗಳಿಗೆ ಬೇಕೆಂದು ಕಾಣಿಸುತ್ತದೆ. ಹಾಗಾದರೆ ಅದನ್ನು ಈಗಯಾರೂ ಒಪ್ಪುವುದಿಲ್ಲ ಬೇರೆ ಭಾಷೆಗಳ ಬೇರೆ ಜನರ ಸಂಸ್ಕೃತಿಯು ಸಂಸ್ಕೃತಿಯಲ್ಲ

ಪ್ರಾಂತವಿಭಜನೆಯಿಂದ ರಾಷ್ಟ್ರೀಯತ್ವಕ್ಕೆ ಎಂದಿಗೂ ಕುಂದುಬರುವುದಿಲ್ಲ. ಇದು ಶಾಸ್ತ್ರಿಗಳ ಭ್ರಮೆ ಪ್ರಾಂತವಿಭಜನೆಯಿಲ್ಲದೆ ಆರ್ಥಿಕ ಏಳಿಗೆಯಾಗಿಲ್ಲ ಇದು ನಾಮನೆ ಹುಚ್ಚಿನ ಕಥೆಯಿದ್ದಂತಿದೆ, ಆರ್ಥಿಕಾಭಿವೃದ್ಧಿಯ ತಳಹದಿಯಿಲ್ಲದೆ ಪ್ರಾಂತವು ಮುಂದಿನ ಹೆಜ್ಜೆ ಇಡುವುದೆಂದರೆ ಅದು ಮರಳಲ್ಲಿ ಮನೆ ಕಟ್ಟಿದಂತೆಯೇ ಸರಿ ಎಂಬುದು ಎಲ್ಲರಿಗೂ ಗೊತ್ತಿದೆ

ಶಾಸ್ತ್ರಿಗಳ ಕನಸಿನ ರಾಯಲಸೀಮೆಯು ವ್ಯರ್ಥ ಕನಸೆಂಬುದು ಶಾಸ್ತ್ರಿಗಳ ಅಂತರಂಗಕ್ಕೇ ಗೊತ್ತು. ಅದು ಎಂದಿಗೂ ಸ್ಥಾಪಿತವಾಗುವ ಸಂಭವೇ ಇಲ್ಲ. ಪ್ರಾಂತವಿಭಜನೆಯನ್ನು ಹೇಗಾದರೂ ಮಾಡಿ ತಡೆಹಿಡಿಯಲು ಈ ಹಂಚಿಕೆ ಹೂಡಿದ್ದಾರೆ. ಶಾಸ್ತ್ರಿಗಳು ಇಂಥಾ ಪ್ರಚಾರವನ್ನು ಬಿಟ್ಟರೆ ಅವರಿಗೂ ಒಳ್ಳೆಯದು, ಅವರ ಪ್ರೇಮದ ರಾಯಲಸೀಮೆಗೂ ಶ್ರೇಯಸ್ಕರ. M. B. Gowd

## ಸ್ವೀಕಾರ.

**ವಿಶ್ವಪ್ರೇಮಿ: --**

ಬಳ್ಳಾರಿ ನಗರದಲ್ಲಿ ಈ ತೆಲುಗು ವಾರ ಪತ್ರಿಕೆಯು ಸ್ವಾತಂತ್ರ್ಯ ಶುಭದಿನ ಜನವರಿ 26ನೆಯ ದಿನಾಂಕ ಹೊರಟಿದೆ. ಈ ಪತ್ರಿಕೆಯ ಧ್ಯೇಯ ನೀತಿ ಮತ್ತು ಪ್ರೋತ್ಸಾಹಕರಲ್ಲಿ ಅತಿವಾದಿಗಳಿರುವ ಕಾರಣ ಜನತೆಯ ಲ್ಲಿನ ನಿಕೃಷ್ಟವರ್ಗದವರೆಂದು ಗಣಿಸಲ್ಪಟ್ಟಿರುವವರ ಹಕ್ಕು ಹಿತಸಂರಕ್ಷಣೆಗಳಿಗಾಗಿ ಇದು ಹೋರಾಡಬಹುದೆಂದು ನಂಬಲಾಗಿದೆ, ಸಮತಾವಾದಿ ರಾಜ್ಯಭಾರ ಸ್ಥಾಪನೆಗಾಗಿ (Socialist Republic) ಇದು ಹೆಣಗಲಿದೆ. ಜಾತೀಯ ಭೂತವನ್ನು ದೂರ ಓಡಿಸಿ ಪ್ರಾಂತವಿಭಜನೆ ಭಾಷೆಗಳ ಏಳಿಗೆಗೆ ಕುಂದುಬರದಂತೆ ಸ್ಥಾನಿಕ ರಾಜಕೀಯದಿಂದ ಅಲಿಪ್ತವಿದ್ದು ಈ ವೃತ್ತಪತ್ರಿಕೆಯು ಉದಾತ್ತ ಧ್ಯೇಯಗಳಿಂದ ರಾಷ್ಟ್ರದ ಸಮಸ್ಯೆಯನ್ನು ಬಗೆಹರಿಸಲು ಸಹಾಯಕವಾಗಲೆಂದು ಕೋರುತ್ತೇವೆ.

## ಬಳ್ಳಾರಿ ನಗರಕ್ಕೆ ಉರವಕೊಂಡ ಜಗದ್ಗುರುಗಳ ಆಗಮನ

ಉರವಕೊಂಡ ಸಂಸ್ಥಾನದ ಶ್ರೀ ಗವಿಸಿದ್ಧೇಶ್ವರ ಮಠದ ಶ್ರೀ ಜಗದ್ಗುರು ಕರಿಬಸವರಾಜೇಂದ್ರ ಸ್ವಾಮಿಗಳು ಬಳ್ಳಾರಿ ನಗರಕ್ಕೆ ಫೆಬ್ರವರಿ ಎರಡನೆಯ ವಾರದಲ್ಲಿ ಆಗಮಿಸಲಿರುವರೆಂದು ವಿಶ್ವಸನೀಯವಾಗಿ ತಿಳಿದುಬಂದಿದೆ. ಈ ಸ್ವಾಮಿಗಳು ಕರ್ನಾಟಕದ ಶ್ರೇಷ್ಠಮಾರ್ಗದರ್ಶಿಗಳಾಗಿ, ಸಮಾಜಸುಧಾರಕರಾಗಿ ಸರ್ವಧರ್ಮ ಸಮತ್ವ ದೃಷ್ಟಿಯಿಂದ ಎಲ್ಲರ ಪ್ರೇಮವಿಶ್ವಾಸಗಳಿಗೆ ಪಾತ್ರರಾದ ವಿದ್ವಾಂಸರಿರುವರು. ಇವರ ಶಿಷ್ಯವರ್ಗದಲ್ಲಿ ಜಾತಿ-ಮತಗಳ ಪರಿವೆಯಿಲ್ಲದೆ ಮುಸಲ್ಮಾನರೊಳಗೊಂಡ ಎಲ್ಲಾ ಧರ್ಮದವರಿರುವರು. ಈ ಕಾರಣ ಸ್ವಾಮಿಗಳು ಬಳ್ಳಾರಿಗೆ ಬಂದಾಗ ಸ್ವಾಗತ ಸಮಿತಿಯು ಎಲ್ಲಾ ಜನರಿಂದಲೂ ಕೂಡಿರಬೇಕೆಂದು ಒಂದು ನಮ್ರ ಸಲಹೆ.

ಒಬ್ಬ ಭಕ್ತ.

### ಪೂರ್ವ ಬಂಗಾಲದ

# ನವಖಾಲಿಯ ಹೃದಯದ್ರಾವಕ ದೃಶ್ಯ

## ಹಿಂದೂ ಸ್ತ್ರೀಯರ ಕರುಣಾಜನಕ ಪರಿಸ್ಥಿತಿ

## ರಾಮನಾಮದ ಮಹಿಮೆ.

(ಈ ವಾರದ 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರ ಕಾರ್ಯದರ್ಶಿಗಳಾದ ಶ್ರೀ ಪ್ಯಾರೇಲಾಲರು 'ಪವಿತ್ರ ನಿಮಿಷಗಳು' ಎಂಬ ಲೇಖನವನ್ನು ಬರೆದಿರುವರು. ತಾವು ನವಖಾಲಿಯ ಪೀಡಿತರ ಮಧ್ಯದಲ್ಲಿ ಕಂಡ ದೃಶ್ಯಗಳನ್ನು ಮಾಡಿದ ಸಹಾಯವನ್ನು ಸವಿಸ್ತಾರವಾಗಿ ವರ್ಣಿಸಿರುವರು. ಕರ್ಮವೀರ ಕೃಪೆಯಿಂದ ನಮ್ಮ ವಾಚಕರ ಅವಗಾಹನೆಗಾಗಿ ಅದನ್ನು ಪುನಃ ಪ್ರಕಟಿಸುತ್ತಿದ್ದೇವೆ.)

ನವಖಾಲಿಯಲ್ಲಿ ಇಳಿದೊಡನೆ ನಮಗೆ ಕಾಣಿಸಿದ ಅತ್ಯಂತ ದಾರುಣವಾದ ದೃಶ್ಯವೆಂದರೆ ಬಲಾತ್ಕಾರ ಧರ್ಮಾಂತರ ಮಾಡುವಾಗ ಪುಂಡರು ಹೆಂಗಸರ ಶುಭ ಚಿಹ್ನೆಗಳಾದ ಬಳೆ ವಸ್ತ್ರ ಕುಂಕುಮಗಳನ್ನು ತೆಗೆದು ಹಾಕಿದ್ದರಿಂದ ಅವರು ಬರಿಗೈ ಬರಿಹಣೆಗಳಿಂದ ಇದ್ದುದು ಕೆಲವೆಡೆ ಅವರೇ ಸ್ವತಃ ಅಂಜಿಕೆಗೊಳಗಾಗಿ ತೆಗೆದುಹಾಕಿದ್ದರು. ಅವರ ಮುಖಗಳು ಅಪ್ರಸನ್ನವೂ ಮ್ಲಾನವೂ ಆಗಿದ್ದವಲ್ಲದೆ, ಬೇಟೆಯಲ್ಲಿ ಭಯಭ್ರಾಂತಿ ಓಡುವ ಜಿಂಕೆಗಳಂತಹ ಅವರ ಬೆದರುಗಣ್ಣುಗಳು ಮರ್ಮಭೇದಕವಾಗಿದ್ದವು. ಸಾಮಾನ್ಯವಾಗಿ ಅವರು ಹೊರಗೆ ನಿನ್ನೊಡನೆ ಮಾತಾಡುವದೇ ಇಲ್ಲ; ತುಟಿ ತೆರೆಯುವದಾದರೆ ನಿನ್ನನ್ನು ತಮ್ಮ ಖಾಸಾಗಿ ಕೋಣೆಗಳಿಗೆ ಕರೆದುಕೊಂಡು ಹೋದ ಮೇಲೆ ಅಲ್ಲಿ ನಿನಗೆ ತಮ್ಮ ದುರಂತ ವೃತ್ತಾಂತಗಳನ್ನು ಧಾರೆಧಾರೆಯಾಗಿ ಹೃದಯದಿಂದ ಸುರಿವ ಧೈರ್ಯಮಾಡುವರು. ಈ ಜೀವನ್ಮೃತ ಸ್ಥಿತಿಯಿಂದ ಅವರನ್ನು ಉದ್ಧರಿಸಿದ್ದೆಂದರೆ ರಾಮನಾಮವೇ. ಅವರಿಗೆ ನಾನು ಇನ್ನೇನನ್ನೂ ಕೊಡಲಾರದಾದೆ.

ಮೊಟ್ಟಮೊದಲು ನಾನು ಅವರನ್ನು ಶಪಪುರದ ಒಂದು ಜೀರ್ಣಮಂದಿರದಲ್ಲಿ ಕೂಡಿಸಿ ರಾಮನಾಮವನ್ನು ಹೇಳುವಂತೆ ಮಾಡಿದೆ. ಆ ಅನುಭವವನ್ನು ನಾನೆಂದೂ ಮರೆಯಲಾರೆ. ಅವರೆಲ್ಲರೂ ದರಿದ್ರರು—ದಟ್ಟದರಿದ್ರರು—ಮಡಿವಾಳಮಾಲಿ, ಚೌಕೀದಾರರ ವರ್ಗದವರು. ಅವರ ಯಜಮಾನರು ಮನೆಮಾರುಗಳನ್ನು ನೋಡಿಕೊಳ್ಳುವದನ್ನು ಅವರಿಗೆ ಬಿಟ್ಟು ಪಲಾಯನ ಮಾಡಿಬಿಟ್ಟಿದ್ದರು. ನಾವು ಹೋದೊಡನೆ ಬಾಲಕರ ಒಂದು ಚಿಕ್ಕಗುಂಪು ಅಪರಿಚಿತರಾದ ನಮ್ಮನ್ನು ಕಂಡಂಜಿ ಓಡಿಹೋಯಿತು. ಅವುಗಳ ತಂದೆತಾಯಿಯರೆಂದರು: "ಸ್ವಲ್ಪ ಹೊತ್ತಿಗೆ ಮುಂಚೆ ನಾವೆಲ್ಲರೂ ಮುಸಲ್ಮಾನರ ಉಡುಪನ್ನು ಧರಿಸಿಕೊಳ್ಳುತ್ತಿದ್ದೆವು." ಅವರಿಗೆ ನಮಾಜು ಮಾಡುವದನ್ನು ಕಲಿಸಲು ಒಬ್ಬ ಮೌಲ್ವಿಯು ಬರುತ್ತಿದ್ದನು. ಅವರು ಒಂದು ಭಯದ ಮುಸುಕಿನಲ್ಲಿ ಬದುಕಿದ್ದರು.

"ನಮಗೆ ಭೂಮಿಯಲ್ಲಿ ಯಾರೂ ಕಾವರಿಲ್ಲ; ನಾವು ಅಸಹಾಯರು," ಅವರೆಂದರು

"ನೀವೆಂದಾದರೂ ರಾಮನಾಮ ಸ್ಮರಣೆಮಾಡಿದ್ದೀರಾ?" ನಾನು ಕೇಳಿದೆ

"ನಮಗೆ ಹಾಗೆ ಮಾಡುವ ಧೈರ್ಯವಿಲ್ಲ."

"ನಿಮ್ಮ ಮನೆಗಳಲ್ಲಿ ಕೂಡ?"

"ಹೌದು, ನಮ್ಮ ಮನೆಗಳಲ್ಲಿ ಕೂಡ; ನಾವು ಎಂತಹ ಅಗ್ನಿಪರೀಕ್ಷೆಗಳಲ್ಲಿ ಹೊಕ್ಕು ಬಂದಿರುವೆವೆಂಬುದು ನಿಮಗರಿಯದು."

"ಹಾಗಾದರೆ ಇಂದಿನಿಂದ ಹಾಗೆ ರಾಮನಾಮ ಸ್ಮರಣವನ್ನಾರಂಭಿಸಿರಿ—ಈಗಲೇ ನನ್ನೊಡನೆ"

ಅವರೊಪ್ಪಿದರು. ಅವರ ನಾಮಸಂಕೀರ್ತನೆ ವೃದ್ಧಿಯಾದಂತೆ ಅವರು ಬಾಹ್ಯ ಪ್ರಪಂಚವನ್ನು ಮರೆತರು. ಹೊಸದೊಂದು ಜ್ಯೋತಿ ಅವರ ಮುಖದಲ್ಲಿ ಮೂಡಿತು. ಅವರು "ಅಸಹಾಯರ ಸಹಾಯ"ವನ್ನು ಕಂಡುಕೊಂಡರು.

ಎರಡನೆಯ ಹೆಜ್ಜೆಯೆಂದರೆ, ಈ ಹಳ್ಳಿಗಳಿಂದ ಅವರೆಲ್ಲರನ್ನೂ ಒಂದೆಡೆ ಕೂಡಿಸಿ ಒಂದು ಹರಿಕೀರ್ತನ ಕೂಟವನ್ನೇರ್ಪಡಿಸಿದುದು. ಅದು ಬಹಳ ಯಶಸ್ವಿಯಾಗಿ ಪರಿಣಮಿಸಿತು. ದಂಗೆಗಾಲವಾದ ಬಳಿಕ ಮೊದಲ ಬಾರಿಗೆ ಶಹಪುರ ಪೇಟೆಯಲ್ಲಿ ಶಂಖುಘೋಷ ಕೇಳಿಸಿತು. ಅದರಿಂದ ವಿಚಿತ್ರ ಪರಿಣಾಮಗಳುಂಟಾದವು.

ಕಾರತಖಿಲ್ ಹಳ್ಳಿಯಲ್ಲಿ ಪುನರ್ನಿವೇಶನ ಕಾರ್‍ಯವು ಬಹಳ ತಡವಾಗಿ ಪ್ರಾರಂಭವಾಗಿತ್ತು. ಕಳೆದ ಏಪ್ರಿಲಿನ ಕೊನೆಯಲ್ಲಿ ಅವರ ಸ್ಮಾರಕವಾಗಿ ಒಂದು ಅಂತರ್ಜಾತೀಯ ಭೋಜನ ಸಮಾರಂಭವನ್ನೇರ್ಪಡಿಸಲಾಗಿತ್ತು. ಶಹಪುರಪೇಟೆಯಿಂದ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಲ್ಲಿ ಅಲ್ಲಾಹೋ ಅಕ್ಬರ್ ಎಂದು ಕೂಗುತ್ತ ಹೋಗುತ್ತಿದ್ದ ಮುಸಲ್ಮಾನರ ಮೆರವಣಿಗೆಯೊಂದು ಆ ಇಡೀ ಸಭೆಯನ್ನೇ ಅಲ್ಲೋಲ ಕಲ್ಲೋಲ ಮಾಡಿತು. ಮೆರವಣಿಗೆಯಲ್ಲಿಂದ ಒಬ್ಬನು ಮಾಲಿಯೊಬ್ಬನು ಮನೆಗೆ ನುಗ್ಗಿ ಅಲ್ಲಿ ಒಬ್ಬನೇ ಇದ್ದ ಅವನ ಚಿಕ್ಕ ಹುಡುಗನನ್ನು ಹೊಡೆದನೆಂದು ಸುದ್ದಿ ಹಬ್ಬಿತು. ಅಪರಾಧಿಯಾರೆಂದು ಪತ್ತೆ ಹಿಡಿಯಲಾಗಲಿಲ್ಲ. ನಾನು ಸೋಮವಾರ ಪೇಟೆಯವರೆಗೆ ಮೆರವಣಿಗೆಯ ಬೆನ್ನು ಹಿಡಿದು ಹೋದೆ. ಅವರಲ್ಲಿ ಅನೇಕರೊಡನೆ ನಾನು ಗೆಳೆತನ ಮಾಡಿಕೊಂಡೆ. ಮತ್ತು ಅವರು ಯಾವ ತೊಂದರೆಯನ್ನೂ ಕೊಡುವ ಇಷ್ಟವುಳ್ಳವರಾಗಿದ್ದಂತೆ ಕಾಣಲಿಲ್ಲ. ನಾನು ಮರಳಿದಾಗ, ಭೋಜನ ನಡೆದೇ ಇತ್ತು. ಯಾರೂ ಆ ಗದ್ದಲ ಮುಂತಾದ್ದರಿಂದ ಭಯಕಂಪಿತರಾಗಲಿಲ್ಲವೆಂಬ ವಸ್ತು ಕೈಯೆತ್ತಿ ಸೂಚಿಸುವಂತೆ ಅವರಿಗೆ ಹೇಳಿದೆ. [illegible]ವಾಗಿ ಗಂಡಸರಲ್ಲಿ ಐವರೂ ಹೆಂಗಸರಲ್ಲಿ ಕೇವಲ ಮೂವರು ಮುಂದಿಯೂ ಕೈಯೆತ್ತಿದರು.

ಮರುದಿನ ಬೆಳಗ್ಗೆ ನಿದ್ರೆಯಿಲ್ಲದ ರಾತ್ರಿಯನ್ನು ಕಳೆದ ನಂತರ, ಒಟ್ಟಾಗಿ ಅವರೆಲ್ಲರೂ ರಾಮನಾಮ ಹೇಳುವಂತೆ ಮಾಡಿದೆ. ಮೊಟ್ಟಮೊದಲು ಒಂದೆರಡು [illegible] ಪ್ರತಿಯೊಂದು ವಾಡಿಯ ಜನರೆಲ್ಲರೂ ಸೇರುಸಂಜೆ ಮಾಡಿ ರಾಮನಾಮದ ಅಂತರಾರ್ಥ ಮತ್ತು ಪ್ರಾಮುಖ್ಯವನ್ನು ವಿಶದಪಡಿಸುತ್ತಿದ್ದೆ. ಅನಂತರ ಎಲ್ಲ ವಾಡಿಗಳಿಂದಲೂ ಅವರು ತಮ್ಮ ಬಾಳುದೇಗುಲದ ಮುಂದೆ ಬಂದು ಸೇರತೊಡಗಿದರು. ಹತ್ತಾರು ಮಾತುಕತೆಗಳಲ್ಲಿ ನಾನು ಹೇಳಿದ ಸಾರಾಂಶವೆಂದರೆ ದೇವರಲ್ಲಿ ಜೀವಂತ ಶ್ರದ್ಧೆ ಅವರಿಗಿದ್ದು, ಯಾವಾಗಲೂ ಅವನಿಗಂಜಿ ತಿರುಗಾಡಿದರೆ ಅವರಿಗೆ ಮತ್ತಾವ ಭಯವೂ ಇರದು—ಎಂದು. ಮರಣ ಭಯವು ಮನುಷ್ಯರನ್ನು ಹೇಡಿಗಳನ್ನಾಗಿ ಮಾಡಿತು. ಅಷ್ಟಾದರೂ ಹುಟ್ಟಿದ ಮನುಷ್ಯನು ಎಂದಾದರೂ ಸಾವಿನಿಂದ ತಪ್ಪಿಸಿಕೊಳ್ಳಬಲ್ಲನೇ? ತದ್ವಿರುದ್ಧವಾಗಿ, ಎರಡು ಸಲ ಸಾವು ಬರುವಂಥ ಯಾವನಾದರೊಬ್ಬನಿರುವನೆ? ಯಾವುದು ಗ್ರಾಹ್ಯ—ತನ್ನ ಮಾನ ಮತ್ತು ಧರ್ಮಗಳನ್ನು ಕಾಯ್ದುಕೊಳ್ಳಲು ಹಾಸಿಯ ಬಿದ್ದುಕ್ಕೆದುರಾಗಿ ಗಂಡಸುತನದಿಂದ ನಿಲ್ಲುವುದೋ ಇಲ್ಲವೆ ಕಾಹಿಲೆಯಿಂದ, ವಯೋವೃದ್ಧಿಯಿಂದ ಸಾವನ್ನು ಅಂತ್ಯದಲ್ಲಿ ಕಾಣುವಂಥ ಸದ್ಯದ ಜೀವದಾನವನ್ನು ಪಡೆಯುವುದೋ? ಅವರು ದೇವನನ್ನು ನಿಜವಾಗಿಯೂ ತಂದೆಯೆಂದು ತಿಳಿದರಾದರೆ ಅವನ ಕರೆಗೆ ಉತ್ತರವಾಗಿ ಅವನನ್ನು ಕಾಣುವ ಭವಿಷ್ಯದ ಬಗ್ಗೆ ಅಂಜುವುದೇಕೆ? ಅತನ ಇಚ್ಛೆಯಿಲ್ಲದೆ ಒಂದು ಗುಬ್ಬಿಕೂಡ ಸತ್ತುಬೀಳವೆಂದು ನಂಬುವದಿಲ್ಲವೆ? ಇದನ್ನು ವಿಮರ್ಶಿಸಲು ನಾನು ದಿವಂಗತ ಮೌಲಾನ ಶೌಕತ ಅಲ್ಲಿಯವರು ಅನೇಕ ಸಲ ಹೇಳುತ್ತಿದ್ದ ಯರವಾಡ ಜೈಲಿನಲ್ಲಿ ಮರಣಶಿಕ್ಷೆಗೆ ಗುರಿಯಾಗಿದ್ದ ಕೈದಿಯೊಬ್ಬನ ಕಥೆಯನ್ನು ತೆಗೆದುಕೊಂಡೆನು. ಅವನು ಹೇಗೆ ತನ್ನ ಕೋಣೆಯಲ್ಲಿ ಹೆಂಡತಿಯನ್ನು ಕೊಂದದಕ್ಕಾಗಿ ಶಿಲೆವಂಡ ತೆರುವ ಮುಂಚಿನ ರಾತ್ರಿ ಕುಣಿಯುತ್ತ ಈ ಕೆಳಗಿನ ಹಾಡನ್ನು ಹಾಡಿದನೆಂಬುದನ್ನು ಅವರ ನಿದರ್ಶನಕ್ಕೆ ತಂದೆ:

"ಸಿಂಗರಿಸಿಕೊಳ್ಳಲಿ ಜನ್ಮನೆ!
ಚತುರಮುಗ್ಧೆ, ಮನೋಹರೆ —
ಪ್ರಿಯತಮನ ಮಂದಿರಕೆ ತೆರಳಲು
ಸಿದ್ಧಳಾಗು ಸುಧಾಕರ!"

ದೇವರೇ ತಮ್ಮ ಗೆಳೆಯ ಮತ್ತು ರಾಕ್ಷಸನೆಂದು ಸಂಬಿನ್ನತೆ ಅವನನ್ನು ನೋಡಲು ಸಂತೋಷ ಪಡುತ್ತಾರೆ. ಅಂಥ ಜೀವಂತ ಶ್ರದ್ಧೆಯು ಅವರಲ್ಲಿಯ ಅತ್ಯಂತ ದುರ್ಬಲನನ್ನೂ ದೇಹದಾರ್ಢ್ಯದಲ್ಲಿ ಅತಿ ಪ್ರಬಲನೆನಿಸಿದ ವಧೆಗೆ ಸರಸಮವೆನಿಸಿ ಬಿಡಬಲ್ಲದು. ಆ ಯುದ್ಧಗಳ ಮರಣವನ್ನು ಮತ್ತೇನೂ ಬೆಚ್ಚಿನವನನ್ನಾಗಿ ಮಾಡಲಾರ

ವಾದುದರಿಂದ ಅವು ಅವರ ಮೇಲೆ ಯಾವ ತರಹದ ಭಯಕಾರಕ ಪರಿಣಾಮಗಳನ್ನೂ ಉಂಟುಮಾಡಲಾರವು. ರಾಮನಾಮ ಸಂಕೀರ್ತನ ಕಾಲದಲ್ಲಿ ಒಂದುವೇಳೆ ಒಂದು ಪುಂಡರು ಬದಲು ಇಲ್ಲದೆ ಅವರನ್ನು ಕಂಡು ದಿಕ್ಕಾಪಾಲು ಪಲಾಯನಮಾಡಹೋಗುವವನ್ನು ಬಿಟ್ಟು, ತಮ್ಮ ಗಾನದಲ್ಲೇ ವಿಲೀನರಾಗಿ ಅವರ ಬರವನ್ನೇ ಲಕ್ಷ್ಯಕ್ಕೆ ತರದಿದ್ದರೆ ಪುಂಡರು ಕಂಗೆಡದಿರರು. ನಿರಾಯುಧರಾದ ಹೆಂಗಸರ ಮುಕ್ಕಳಲ್ಲಿ ತಮ್ಮಲ್ಲಿಲ್ಲದ ಆಯುಧಕ್ಕೂ ಬಲಪತ್ತರಾದ, ಏನೋ ಒಂದು, ಮರಣವೆದುರಿಸಿದಾಗಲೂ ಕಂಗೆಡದೆ ನಿಲ್ಲುವ ಒಂದು ಶಕ್ತಿ ಇದೆಯೆಂಬು ಪುಂಡರಿಗೆ ಅರಿವಾಗುತ್ತದೆ. ಅದಕ್ಕೆ ಒಂದು ಕರಾರಿದೆ. ಅದೇನೆಂದರೆ ಭಕ್ತರ ಎಂದಿಗೂ ವಿವರ್ಣರೂ ಕಂಪಿತರೂ ಆಗಕೂಡದು ಅಥವಾ ಹೃದಯದಲ್ಲಿ ವಿರೋಧಭಾವ ಇಲ್ಲವೆ ಪ್ರತೀಕಾರವನ್ನು ಇಟ್ಟುಕೊಂಡಿರಬಾರದು. ಹೆಂಗಸು ತಾನು ಅಬಲೆಯೆಂದು ತನ್ನನ್ನು (ಅವಳನ್ನು ಹಾಗೆಂದು ಇತರರು ತಿಳಿದರು) ತಿಳಿದುಕೊಂಡಿದ್ದಳು. ಆಯುಧ ಹಿಡಿಯುವ ಪ್ರಸಂಗದಲ್ಲಿ ಬಹುಶಃ ಅದು ಸತ್ಯವೆನಿಸಬಹುದು. ಆದರೆ ಸತ್ಯಾಗ್ರಹ ಯುಗದ ಪ್ರಾರಂಭದಿಂದ ಪರಿಸ್ಥಿತಿಯು ತಲೆಕೆಳಗಾಗಿದೆ. ಸತ್ಯಾಗ್ರಹದ ಹೋರಾಟದಲ್ಲಿ ಹೆಂಗಸರು ಗಂಡಸರೊಡನೆ ಸರಿಸಮ ಭಾಗವಹಿಸಬಹುದಲ್ಲದೆ ಅವರೇ ಸ್ವತಃ ಗಂಡಸರನ್ನು ಮುಂದೆ ಕೊಂಡೊಯ್ಯುವ ನಾಯಕಿಯರಾಗಬಹುದು. ಅವರಿಗೆ ಮೌನದಿಂದ ಕಷ್ಟವನ್ನು ಸಹಿಸುವ ಒಂದು ಅಕ್ಷಯ ಶಕ್ತಿಯಿದೆ. ಅವರ ಮನೆಗಳಲ್ಲಿ ಕಾಲದಾದಿಯಿಂದ—ಬಹುಶಃ ಅರಿವಿಲ್ಲದೆ—ಸತ್ಯಾಗ್ರಹವೆಂಬ ಆಯುಧವನ್ನು ಅವರು ಬಳಸುತ್ತಿದ್ದಾರೆ. ತಮ್ಮ ಬಲಸ್ಥೈರ್ಯ ಬಲದಿಂದ ತಮ್ಮನ್ನು ತಾವು ಕಾಯ್ದುಕೊಳ್ಳಬಲ್ಲೆವೆಂದು ಗಂಡಸರು ಆತ್ಮವಂಚನೆ ಮಾಡಿಕೊಳ್ಳಬಹುದು. ನಿಜ, ಪ್ರಯೋಗದಿಂದ ಅದು ವ್ಯರ್ಥವೆಂಬುದನ್ನು ಅವರು ಕಂಡಿದ್ದಾರೆ. ಆದರೆ ಹೆಂಗಸರಿಗೆ ಸೇವೆ ಮತ್ತು ಸತ್ಯಾಗ್ರಹಗಳಲ್ಲದೆ ಅನ್ಯಥಾ ಶರಣವೇ ಇಲ್ಲ. ಆದುದರಿಂದ ರಾಮನಾಮವು ಅವರಿಗೆ ಸರ್ವಾರ್ಥ ಸಾಧಕವೆನಿಸಬೇಕು. ಅದು ಕೇವಲ ಅವರ ತುಟಿಯಿಂದ ಹೊರಹೊಮ್ಮದೆ ಹೃದಯದಿಂದ ಹೊರಹೊರಟರೆ ಅದೊಂದು ಜೀವಂತ ಶಕ್ತಿಯಾಗಿ ಪರಿಣಮಿಸಿ, ಇನ್ನು ಮುಂದೆ ಪುಂಡರೆದುರು ಹೆದರುವವರು ಅವರಲ್ಲ. ಅವರಿಗೇ ಪುಂಡರು ಹೆದರಿ ನಡುಗಬೇಕಾಗುತ್ತದೆ.

ಕೊನೆಯ ಮಾತುಗಳು ನನ್ನ ಹೃದಯದ ಆಳದಿಂದ ಆವೇಶವಾಗಿ ಹೊರಹೊಮ್ಮಿದವು. ನನಗೆ ವಿಚಾರವಾಡಿ ಸರಿಪಡಿಸಿಕೊಳ್ಳಲು ಸಮಯವಿದ್ದಿದ್ದರೆ ಈ ಶಬ್ದಗಳನ್ನು ಹೇಳುವಲ್ಲಿ ನಡುಗಿಹೋಗುತ್ತಿದ್ದನೆಂಬುದನ್ನು ನಾನು ಒಪ್ಪಲೇಬೇಕಾಗಿದೆ. ತಾಳಕ್ಕೆ ಸರಿಯಾಗಿ ಗಂಡಸರೆದುರು ಸಾಲಾಗಿನಿಂತು ಗಟ್ಟಿಯಾಗಿ ರಾಮನಾಮವನ್ನು ನಿರ್ಭಯವಾಗಿ ಹಾಡಿರೆಂದು ಹೇಳಿದೆ. ಮೊದಲು ಹೆಂಗಸರನ್ನು ಅವರ ಪ್ರತ್ಯೇಕ ವಾಸಸ್ಥಳಗಳಿಂದ ಕರೆಯುವುದು ಸಣ್ಣ ಕೆಲಸವಾಗಲಿಲ್ಲ. ಆದರೆ ಕ್ರಮೇಣ ಅವರಿಗದು ರೂಢಿಯಾಗಿ ಹೋಯಿತು. ಮೊದಲು ಗಂಡಸರು ಹೇಳಿದ್ದನ್ನು ಹೆಂಗಸರು ಅನುಕರಿಸಿ ಹೇಳುತ್ತಿದ್ದರು. ಆದರೆ ಕೆಲಕಾಲದ ನಂತರ ಕ್ರಮ ವಿಪರೀತವಾಯಿತು. ಹೆಂಗಸರು ಹೇಳಿದ್ದನ್ನು ಗಂಡಸರು ಅನುಕರಿಸಿ ಹೇಳತೊಡಗಿದರು.

ಭಾಗ್ಯಪುರದ ಎಲ್ಲ ಓಣಿಯಲ್ಲಿ ಪ್ರತಿದಿನ ಬೆಳಿಗ್ಗೆ ನಾವು ರಾಮನಾಮ ಸಂಕೀರ್ತನ ಮಾಡುತ್ತಿದ್ದೆವು. ಅದಕ್ಕೆ ಜಾಗಟೆಯ ತಾಳವಿತ್ತು. ನಮ್ಮಲ್ಲಿಯ ಕೆಲವರು ಪಕ್ಕದಹಳ್ಳಿಗೆ ಹೋದೆವು. ಅಲ್ಲಿಯೂ ಇದೇ ಪ್ರಕಾರ ರಾಮನಾಮ ಕೀರ್ತನ ಪ್ರಾರಂಭವಾಯಿತು. ದಾರಿಯುದ್ದಕ್ಕೂ ನಾವು ಹೋದಾಗ ತಾಳಕ್ಕೆ ಸರಿಯಾಗಿ ರಾಮನಾಮ ಕೀರ್ತನ ಮಾಡುತ್ತಲೇ ಸಾಗಿದೆವು. ಅಲ್ಲಿಗೆ ಹೋದೊಡನೆ ಜಾಗಟೆ ಬಾರಿಸುತ್ತಿದ್ದೆವು. ಅದು ನಾವು ಅನಂತರ ಹೆಚ್ಚು ಜನರೊಡನೆ ಭೆಟ್ಟಿಯಾಗುವ ಮುಂದಿನ ಹಳ್ಳಿಯ ನಮ್ಮ ಕಾರ್ಯಕ್ರಮವನ್ನು ಸೂಚಿಸುತ್ತಿತ್ತು. ತಿರವಾಗಿ ನಾವು ಚಿಕ್ಕ ಬಾಲಬಾಲಿಕೆಯರಿಗೆ ಕೆಲವು ಹಾಡುಗಳನ್ನೂ ಮಂತ್ರಗಳನ್ನೂ ಕಲಿಸಿದೆವು. ಅವನ್ನು ಅವರು ಈಗಲೂ ಪ್ರಾರ್ಥನೆಯಲ್ಲಿ ಹೇಳುತ್ತಾರೆ. ರಾಮನಾಮ ಸಂಕೀರ್ತನದ ನಂತರ ಅವರೆಲ್ಲ ಚದುರಿ ತಂತಮ್ಮ ಮನೆ ಎದುರಿನ ಕಸಗುಡಿಸುವುದು ಮುಂತಾದ ನಿರ್ಮಲೀಕರಣದ ಕೆಲಸಕ್ಕೆ ನಡೆವರು. ಈ ಸ್ವಚ್ಛಮಾಡುವ ಕೆಲಸವೂ ನಮ್ಮ ಕಾರ್ಯಕ್ರಮದ

ಮುಖ್ಯಾಂಗವಾಗಿತ್ತು. ನನ್ನ ಸಹೋದ್ಯೋಗಿಗಳಾದ ವೈದ್ಯರೊಡನೆ ನಾನು ಅನಂತರ ರೋಗಗ್ರಸ್ತರಾಗಿ ನರಳುವವರನ್ನು ಭೆಟ್ಟಿಯಾಗುತ್ತಿದ್ದೆ. ಇದರ ನಡುವೆ ಇದು ನಮ್ಮೊಡನಿದ್ದ ಹುಡುಗಹುಡುಗಿಯರಿಗೆ ರೋಗಿಗಳಾಗಿ ಉಪಚಾರಮಾಡುವುದು, ಅವರನ್ನು ನಡೆಸಿಕೊಳ್ಳುವುದು ಮತ್ತು ಆರೋಗ್ಯ ಶಾಸ್ತ್ರದ ಮೂಲಭೂತ ನಿಯಮಾವಳಿಗೂ ಇವನ್ನು ಕಲಿಸಲು ಅನುಮಾಡಿಕೊಟ್ಟಿತು. ಮಧ್ಯಾಹ್ನ ನಾವೆಲ್ಲರೂ ಒಂದೆಡೆ ಸೇರಿ ಸಂಪೂರ್ಣ ಮೌನದಿಂದ ನಮ್ಮ "ಕವಿರು ಪೂಜೆ" ಯನ್ನು ನೆರವೇರಿಸಿದೆವು.

ಕೆಲ ಚಿಕ್ಕ ಚಿಕ್ಕ ಸಂದರ್ಭಗಳು ಅಭ್ಯಾಸ ಪರೀಕ್ಷೆ ಮಾಡಲೂ ಶ್ರದ್ಧಾ ನಿರೀಕ್ಷಣ ಮಾಡಿಕೊಳ್ಳಲೂ ಅವಕಾಶವನ್ನೊದಗಿಸಿಕೊಟ್ಟವು. ಹೆಂಗಸರು ಮತ್ತು ನನ್ನ ಚಿಕ್ಕ ಹುಡುಗ ಹುಡುಗಿಯರು ಕೂಡ ದೀಪವಿಲ್ಲದೆ ಎಲ್ಲಿಗೆಂದರಲ್ಲಿಗೆ ಹೆದರದೆ ಕತ್ತಲಲ್ಲಿ ಹೋಗುವುದಾಗಿ ಪ್ರತಿಜ್ಞೆ ಮಾಡಿದರು. ನಾನು ನನ್ನ ಹತ್ತಿರದ ಹಳ್ಳಿಗೆ ಇಬ್ಬರು ಚಿಕ್ಕ ಹುಡುಗಿಯರನ್ನು ಕಳುಹಿದೆ. ಅವರಿಗೊಂದು ವಿದ್ಯುದ್ದೀಪ ಕೊಟ್ಟಿತ್ತು. ನಿಜವಾಗಿ ಹೆದರಿಕೆಯಾದಾಗ ಮಾತ್ರ ಅವರು ಅದನ್ನು ಬಳಸಬೇಕೆಂದು ಹೇಳಲಾಗಿತ್ತು. ಅವರಿಗೆ ತಿಳಿಯದಂತೆ ಅವರನ್ನು ಕಾಯಲು ನಾನು ನನ್ನೊಬ್ಬ ಗೆಳೆಯನನ್ನು ಕಳುಹಿದ್ದೆನೆನ್ನಿರಿ. ದಾರಿಯು ಒಂದು ದಟ್ಟವಾದ ಅಡಿಕೆ ತೋಟದಲ್ಲಿ ಹೋಗಿತ್ತು. ಹಗಲಲ್ಲಿ ಕೂಡ ಅಲ್ಲಿ ಸೂರ್ಯಕಿರಣಗಳು ಪ್ರವೇಶಿಸುತ್ತಿದ್ದಿಲ್ಲ. ಹಿಂದಿನ ದಿನ ಆ ಹಳ್ಳಿಯ ಒಬ್ಬ ಹೆಂಗಸು ಒಂದು ಮುಸಲ್ಮಾನರ ಮೆರವಣಿಗೆಯ ಕೂಗನ್ನು ಕೇಳಿ ಬಹಳವಾಗಿ ಹೆದರಿ ಪಕ್ಕದ ಮನೆಗೆ ಓಡಿ ತಲೆ ಮರೆಸಿಕೊಂಡಾಗ ರಾತ್ರಿ ಅವಳಿಗೆ ಭಯದಿಂದ ಜ್ವರ ಬಂದು ಬಿಟ್ಟಿತ್ತು. ಹುಡುಗಿಯರು ಅವಳನ್ನು ಕಂಡು ಅವಳಿಗೆ ಧೈರ್ಯ ಹೇಳಿದರು ಅನಂತರ ಅವಳು ಅವರೊಡನೆ 10 ಗಂಟೆ ರಾತ್ರಿಯಲ್ಲಿ ನನ್ನಲ್ಲಿಗೆ ಬಂದು ತಾನೂ ಅವರಂತೆಯೇ ಹೆದರುವುದಿಲ್ಲವೆಂದು ಪ್ರತಿಜ್ಞೆ ತೆಗೆದುಕೊಂಡದ್ದುಂಟೆಂದೂ ತಾನು ಇನ್ನೆಂದೂ ಹಾಗೆ ಹೆದರುವುದಿಲ್ಲೆಂದೂ ನನಗೆ ಹೇಳಿದಳು. ತಾನೊಬ್ಬಳೇ ದೀಪವೆನದೆ ಯಾರ ಸಹಾಯವೂ ಇಲ್ಲದೆ ತನ್ನ ಮನೆಗೆ ಹೋಗುವುದಾಗಿ ಅವಳು ಹಟ ಹಿಡಿದು ನಾನು ಕಳುಹಬೇಕೆಂದಿದ್ದ ಹುಡುಗಿಯರ ಸಹಾಯ ಕೂಡ ಇಲ್ಲದೆ ಒಬ್ಬಳೇ ಹೋದಳು. ನಮ್ಮ ಓಣಿಯ ಒಬ್ಬ ಹಿರಿಯ ವಿಧವೆಯಾದ ಥಾಕೂರಮಾ ಎಂಬವಳು ಅತ್ಯಂತ ಅಪಾಯಕರವೆಂದು ಗಣಿಸಲಾಗಿದ್ದ ಕಾಫ್ಲಾತೋಲಿಗೆ ಹೋಗಿ ಮುಸಲ್ಮಾನರಿಗೆ ಕೂಡ ಆಶ್ಚರ್ಯವನ್ನುಂಟು ಮಾಡಿದಳು. "ಆದರೇನು, ಅವಳು ಭಾಟಿಯಾಪುರದವಳು ಅದೇ ಹೇಳುತ್ತದೆ—ಅವಳೆಂಥವಳೆಂಬುದನ್ನು! "ಎನ್ನುತ್ತಿದ್ದರು ಕರ್ಪರ ಹಳ್ಳಿಯಲ್ಲಿ ಅವಳು ಹೋಗುತ್ತಿದ್ದಾಗ ಹೀಗಾಯಿತು ಕರ್ಪರ ಹಳ್ಳಿಯೆಂದರೆ ತಿಂಗಳ ಹಿಂದೆ ರಾಯಸಾಹೇಬ ರಾಜೇಂದ್ರಲಾಲ ಚೌಧರಿಯವರ ಕುಟುಂಬದ ದಾರುಣ ಕತೆಯಿಂದ ವಿಖ್ಯಾತವಾದದ್ದು "ಅಲ್ಲ, ಅಲ್ಲ....ಅವಳೊಬ್ಬ ನೇಪಾಳಿ ಇರಬೇಕು." ಎಂದರು ಕೆಲವರು, ಏಕಂದರೆ ಅವಳು ಸ್ವಲ್ಪ ಹಾಗೇ ಕಾಣುತ್ತಿದ್ದಳು. "ನಮ್ಮ ಒಣೆಯಲ್ಲಿ ಬಂದು ಒಂದು ಹದಿನೈದು ದಿನ ಇದ್ದರೆ ನೀವೆಲ್ಲರೂ ನೇಪಾಳಿಗಳೇ ಆಗುವಿರಿ" ಎಂದು ಅವಳು ಮಾರುತ್ತರವಿತ್ತಳು. ಅಂದಿನಿಂದ ಅವಳನ್ನು ನಾವೆಲ್ಲರೂ "ನೇಪಾಳೀಮಾ" ಎಂದು ಕರೆಯಲಾರಂಭಿಸಿದೆವು. ಎರಡು ತಿಂಗಳ ನಂತರ ನಡುರಾತ್ರಿಯಲ್ಲಿ ಕೆಲವರು ಬಂದು ನನ್ನನ್ನೆಬ್ಬಿಸಿ ಗೋಪೀರಬಾಗಿಗೆ ಬರಬೇಕೆಂದರು. ಅಲ್ಲಿ ಒಬ್ಬ ಮಾಲಿಯ ಮನೆಗೆ ಒಂದು ಗಂಟೆಯೊಳಗೆ ಬೆಂಕಿ ಹಚ್ಚುವುದಾಗಿ ಕೆಲವು ದುಷ್ಟರು ಬೆದರಿಕೆ ಹಾಕಿದರು. ನನ್ನೊಡನೆ ನಾನು ಥಾಕೂರಮಾ ಮತ್ತು ಇಬ್ಬರು ಹುಡುಗಿಯರಲ್ಲಿ ಒಬ್ಬಳನ್ನು ಕರೆದುಕೊಂಡು ಹೊರಟೆ ಅದೇ ಹೊತ್ತಿಗೆ ಒಂದು ದಿನ ಸಿಂಧೂಪುರವೆಂಬ ಹಳ್ಳಿಯಲ್ಲಿ ಮುಂಚಿನ ದಿನ ದರೋಡೆಯೊಂದು ನಡೆದುದಾಗಿ ಕೆಲವರು ಬಂದು ವರದಿ ಮಾಡಿದರು. ಕತ್ತಲಾದ್ದರಿಂದ ತಮ್ಮ ಹಳ್ಳಿಗೆ ಯಾರ ಬೆಂಗಾವಲೂ ಇಲ್ಲದೆ ಮರಳಲು ಅವರು ಅಂಜಿದರು. ಇಬ್ಬರು ಹುಡುಗಿಯರು ಅವರ ಹಿಂದೆ ಹೋಗುವುದಾಗಿ ಹೇಳಿದರು ಆದರ ಮೇಲೆ ಅವರು ಬೆಂಗಾವಲುಬೇಕೆಂದು ಕೇಳದೆ ತಾವೇ ಮರಳಿದರು.

(ಮುಂದುವರಿಯುವುದು).

## ಬಳ್ಳಾರಿ ನಗರ.

**ಸ್ವಾತಂತ್ರ್ಯ ದಿನೋತ್ಸವ:**—26ನೆಯ ದಿನಾಂಕ ಪ್ರಾತಃಕಾಲ ಪ್ರಭಾತ ಫೇರಿ ಧ್ವಜವಂದನೆಯ ನಂತರ ಶ್ರೀ ಎ. ವೀರಾಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀ ರಮಣಮೂರ್ತಿ ಕಪ್ಪಗಂತಲ ಸುಬ್ಬರಾವು, ಟಿ. ಬಿ. ಕೇಶವರಾಯರು ಸ್ವಾತಂತ್ರ್ಯದ ಮಹತ್ವವನ್ನರುಹಿ ಈಗ ಹೋಗಿರುವ ಪ್ರಜಾಪ್ರತಿನಿಧಿಗಳು, ನಿರ್ಮಿತವಾಗಿರುವ ಕಾಂಗ್ರೆಸ್ ಮಂತ್ರಿವರ್ಗವು ಪ್ರಜಾಭಿಪ್ರಾಯವನ್ನು ಲೆಕ್ಕಿಸುವಂತಿಲ್ಲವಾದುದು ದುಃಖದಾಯಕವಾಗಿದೆ ಯೆಂದರು. ಮುಂದಾದರೂ ನಿಜವಾದ ಪ್ರಜಾರಾಜ್ಯಭಾರ ಸ್ಥಾಪಿಸಲು ಯತ್ನಿಸಬೇಕೆಂದರು

**ಪುರಸಭೆ:**—ನಗರದಲ್ಲಿ ನೀರಿನ ತೊಂದರೆಯು ಹೆಚ್ಚಾಗಿರುವ ಕಾರಣ ಹೊಸಯೋಜನೆಯನ್ನು ಜಾರಿಯಲ್ಲಿ ತಂದು ಕುಡಿಯುವ ನೀರಿನ ಸೌಕರ್ಯವನ್ನು ಹೆಚ್ಚಿಸಲು ಪುರಸಭೆಯ ಶಿಷ್ಟಮಂಡಲವು (ಶ್ರೀ ಮುಂಡ್ಲೂರು ಗಂಗಪ್ಪ ಅಧ್ಯಕ್ಷರು ಡಿ. ಯಸ್. ಹನುಮಂತರಾವು ಮತ್ತು ಅಬ್ದುಲ್ ರಜಾಕ್ ಸಾಹೇಬರು) ಮದ್ರಾಸಿಗೆ ಹೋಗಿ ಸಂಬಂಧಿಸಿದ ಅಧಿಕಾರಿಗಳನ್ನು ಕಾಣಬೇಕೆಂದು ನಿಶ್ಚಯವಾಯಿತು,

## ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘ
### ಕಾರ್ಯಕಾರೀ ಸಮಿತಿಯ ತೀರ್ಮಾನಗಳು.

ಆಲೂರಿನ ಶ್ರೀ ಬ. ರಂಗನಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶವಾದ ಕಾರ್ಯಕಾರೀ ಸಮಿತಿಯಲ್ಲಿ ಬಳ್ಳಾರಿಯ ಆದವಾನಿ ಆಲೂರು, ರಾಯದುರ್ಗ ತಾಲೂಕುಗಳು ಕೇಳ್ಕರ ಅವಾರ್ಡದಿಂದ ಹಾನಿಗೊಳಗಾಗಿರುವದನ್ನು ಸೂಚಿಸಲಾಗಿ ಕೇಳ್ಕರ ಅವಾರ್ಡು ಖಂಡನೀಯವೆಂದು ಸವಿಸ್ತಾರ ವಿವರಣೆಯಾಯಿತು. ಅಂಕೆ ಸಂಖ್ಯೆಗಳನ್ನು ದೊರಕಿಸಬೇಕೆಂಬ, ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪತ್ರಿಕೆಯು ಬಳ್ಳಾರಿ ಭಾಗದಲ್ಲಿ ಕನ್ನಡ ಸುದ್ದಿಗಾರರನ್ನೇರ್ಪಡಿಸಬೇಕೆಂಬ ತೀರ್ಮಾನವಾಯಿತು ಆಲೂರಲ್ಲಿ ಕರ್ನಾಟಕ ಏಕೀಕರಣ ಸಂಘದ ಶಾಖೆಯೇರ್ಪಟ್ಟು ಶ್ರೀ ರಾಜಾನಾರಾಯಣಶೆಟ್ಟರು ಅಧ್ಯಕ್ಷರು ಡಾ. ಸೇತುರಾವ್, ಬಳ್ಳಾರಿ ಮುದ್ದಣ್ಣ ಇವರು ಕಾರ್ಯದರ್ಶಿಗಳಾದರು. ಸಮಿತಿಯಲ್ಲಿ 7 ಸದಸ್ಯರಿದ್ದಾರೆ.

## ಶ್ರೀಧರಘಟ್ಟ
(ಒಬ್ಬ ಸುದ್ದಿಗಾರರಿಂದ)

ಕಳೆದ ತಿಂಗಳು 18ನೆಯ ತಾ॥ ರಾತ್ರಿ ಕಾಳಿನಿಂದ ಕೂಡಿದ ಒಂದು ದೊಡ್ಡ ಬಣವೆಯು ಅಗ್ನಿಗಾಹುತಿಯಾಗಿ ಸುಮಾರು ರು. 800 ನಷ್ಟವಾಗಿದೆ. ಪ್ರತಿವರ್ಷವೂ ಹೀಗೆ ಒಂದೆರಡು ಅಗ್ನಿಗೆ ಅನಾಹುತವಾಗುವುದು ಸರ್ವಸಾಧಾರಣವಾಗಿದೆ.

| | | ರೂ. | |
|---|---|---|---|
| 1937ರಲ್ಲಿ | ರಾಜಾಪುರ ಬೊಮ್ಮಕ್ಕ ಜೋಳದ ಬಣವೆ | 1000 | ನಷ್ಟ |
| 1938ರಲ್ಲಿ | ,, | 1500 | .... |
| 1939ರಲ್ಲಿ | ತಿಮ್ಮಾರೆಡ್ಡಿ ಸೊಪ್ಪೆ ಬಣವೆ | 2000 | .... |
| ,, | ಬಳಗಾನೂರು ಮಲ್ಲೇಶಪ್ಪ | 300 | .... |
| ,, | ನಾಲ್ಕು ಚಿಲ್ಲರ ಬಣವೆಗಳು | 800 | .... |
| 1944ರಲ್ಲಿ | ರಾಜಾಪುರ ಬೊಮ್ಮರೆಡ್ಡಿ (ನವಣೆ ಬಣವೆ) | 1500 | .... |
| 1945ರಲ್ಲಿ | ಈಡಿಗ ತಿಪ್ಪಯ್ಯ (ನೆಲಗಡ್ಲೆ) | 500 | .... |
| 1946ರಲ್ಲಿ | ಬೊಮ್ಮರೆಡ್ಡಿ ಅಳಿಯ ಗಿಡ್ಡಪ್ಪ | 1000 | .... |
| 1947ರಲ್ಲಿ | ಕಶಿರೆಡ್ಡಿ ಹನುಮಂತಪ್ಪ ಸೊಪ್ಪೆ ಬಣವೆ) | 600 | .... |

ಪೋಲೀಸಿನವರ ಹಿಂದಿನ ವಿಚಾರಣೆಗಳಿಂದ ಏನೂ ಫಲಿತವಾಗಲಿಲ್ಲ. ಈಗಲಾದರೂ ಸರಿಯಾಗಿ ವಿಚಾರಿಸಿ ತಪ್ಪಿತಸ್ಥರ್ಯಾರಾದರೂ ಇದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲು ಕೋರುತ್ತೇವೆ.

(We draw the attention of the Police authorities to this matter and hope they will do the needful)

Editor, Nava Bharat

## ಆಲೂರು ತಾಲೂಕು
## ಹಿಂದೂಸ್ತಾನಿ ಪ್ರೇಮೀ ಮಂಡಲಿ.

ಇವರ 4ನೆಯ ವಾರ್ಷಿಕ ವರದಿಯು ಹಸ್ತಗತವಾಗಿದೆ. ಶ್ರೀ ಕೆ. ಹೆಚ್. ಸತ್ಯನಾರಾಯಣರಾಯರ ನೇತೃತ್ವದಲ್ಲಿ ಈ ಸಂಸ್ಥೆಯು ಅಮೋಘ ಕಾರ್ಯವನ್ನು ಮಾಡಿದೆ. ನೂರಾರು ದ. ಭಾ ಹಿ. ಸಭೆಯ ಪರೀಕ್ಷೆ

ಗಳಲ್ಲಿ ಉತ್ತೀರ್ಣರಾಗಿರುವರು. ಸಂಸ್ಥೆಗಾಗಿ ಕಟ್ಟಡವೂ ತಯಾರಾಗುತ್ತಲಿದೆ. ಭಾರತದ ರಾಷ್ಟ್ರಭಾಷಾ ಪ್ರಚಾರೋದ್ಯಮದಲ್ಲಿ ಇವರಿಗೆ ಹೆಚ್ಚಿನ ಪ್ರೋತ್ಸಾಹವು ದೊರಕಲೆಂದು ನಮ್ಮ ಆಶೆ.

## ಹೊಸಪೇಟೆ.

### ಪಠಾಣರ ಹಾವಳಿ ದರೋಡೆ.

ತಾರೀಕು 25-1-48 ಆದಿತ್ಯವಾರ ಸಾಯಂಕಾಲ ಹೈದರಾಬಾದ್ ಪ್ರಾಂತದಿಂದ ನಾಲ್ಕೈದು ಪಠಾಣರು ಇಂಡಿಯಾ ಭಾಗದಲ್ಲಿ ಬಂದು ಕಮಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಹೊಸಪೇಟೆಗೆ ನಾಲ್ಕು ಮೈಲು ದೂರದಲ್ಲಿ ಗಾಳಿದುರುಗಮ್ಮನ ಗುಡಿಯ ಹತ್ತಿರ ಹೊಸಪೇಟೆಯಿಂದ ಸಂತೆ ಮಾಡಿಕೊಂಡು ಹೋಗುತ್ತಿದ್ದ ಗೌಳೇರು ಸಾಂತಪ್ಪನೆಂಬುವನನ್ನು ಚೂರಿ, ಕತ್ತಿ ತೋರಿಸಿ ಒಂದು ನೂರು ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ಆಪಾದನೆಯಾಗಿದೆ. ಅದೇ ದಾರಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಇದೇ ರೀತಿ ಕಮಲಾಪುರದ ನರಸಿಂಗರಾವ್, ಬಸಮ್ಮ, ಪೆನ್ನಯ್ಯ ಎಂಬುವರಿಂದ ರು.33-8-0 ಯನ್ನು ತೆಗೆದುಕೊಂಡಿರುತ್ತಾರೆಂದು ತಿಳಿದುಬಂದಿದೆ. ಈ ಸಮಾಚಾರ ತಿಳಿದ ಕೂಡಲೇ ಇಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರರು ಪೋಲೀಸರು ಮತ್ತು ಸಶಸ್ತ್ರ ಪೋಲೀಸರೊಂದಿಗೆ ಕಮಲಾಪುರದವರೆಗೂ, ಹೊಸಪೇಟೆಯಲ್ಲಿಯೂ ಪಠಾಣರನ್ನು ಹಿಡಿಯಲು ಸುತ್ತಿದರು. ತಾರೀಖು 26-1-48 ರೈಲ್ವೆ ಸ್ಟೇಷನ್ನಿನಲ್ಲಿ ಪಲ್ವಾಖಾನ್ ಗುಲ್‌ಮಹಮ್ಮದ್‌ಖಾನ್ ಎಂಬ ಇಬ್ಬರು ಪಠಾಣರನ್ನು ಬಂಧಿಸಿದರು. ಮಾಲು ಕಳಕೊಂಡವರು ಇವರನ್ನು ಗುರ್ತಿಸಿದರು. 26-1-48 ಸಾಯಂಕಾಲ ತುಂಗಭದ್ರಾ ನದಿ ಬ್ರಿಡ್ಜ್ ಕಾಯುತ್ತಿರುವ ಸಶಸ್ತ್ರ ಪೋಲೀಸರು ನದಿಯಲ್ಲಿ ಈಸಿಹೋಗುತ್ತಿದ್ದ ಪಠಾಣನೋರ್ವನನ್ನು ಹಿಡಿದುಕೊಂಡು ಬಂದಿದ್ದಾರೆ. ಪೋಲೀಸಿನವರು ಮುಂದಿನ ವಿಚಾರಣೆಯನ್ನು ನಡೆಸಿದ್ದಾರೆ.

ಮೊದಲೆ ಹೊಸಪೇಟೆ, ಚಿತ್ತವಾಡ್ಗಿಗಳಲ್ಲಿ ನಡೆಯುತ್ತಿರುವ ಕಳ್ಳತನಗಳು, ಬಾಗಿಲು ಒಡೆಯುವದು ಕಲ್ಲು ಒಗೆಯುವದು ಮುಂತಾದವುಗಳಿಂದಲೂ, ಹೈದರಾಬಾದ್ ಗಡಿಯಲ್ಲಿ ಜರುಗುತ್ತಿರುವ ಅನ್ಯಾಯ ಕೃತ್ಯಗಳಿಂದಲೂ ಭಯಭೀತರಾಗಿದ್ದ ಜನರು, ಮೇಲಿನ ದರೋಡೆಯಿಂದ ಮತ್ತಷ್ಟು ಗಾಬರಿಯಾಗಿದ್ದಾರೆ. ಸರ್ಕಾರದ ಅಧಿಕಾರಿಗಳು ತಕ್ಕಚರ್ಯೆಗಳನ್ನು ಬೇಗನೇ ಕೈಕೊಳ್ಳದಿದ್ದಲ್ಲಿ ಜನರ ಅಂಜಿಕೆಯು ಕಾಯಂ ಆಗಿ ಉಳಿಯುವದಲ್ಲದೆ ಇದಕ್ಕಿಂತಲೂ ಭಯಂಕರವಾದ ಕಳ್ಳತನ ಕೊಲೆ ಸುಲಿಗೆಗಳಾಗುವ ಸಂಭವವಿದೆಯೆಂದು ಎಲ್ಲರೂ ಭಯಭ್ರಾಂತರಾಗಿದ್ದಾರೆ.

### ಸುಭಾಸರ ಜನ್ಮದಿನಾಚರಣೆ

ತಾರೀಖು 23-1-48 ತುಂಗಭದ್ರಾ ಪ್ರಾಜೆಕ್ಟಿನಲ್ಲಿರುವ I.N.A. ಜನರು ನೇತಾಜಿಯ ಜನ್ಮದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಿಸಿದರು. ಪ್ರಾತಃಕಾಲ I.N.A. ಕವಾತು, ಧ್ವಜವಂದನೆ ಜರುಗಿ ಸಾಯಂಕಾಲ 5 ಗಂಟೆಯಿಂದ ಅಲಂಕೃತವಾದ ಮಂಟಪದಲ್ಲಿ ಸುಭಾಸಬೋಸರ ಭಾವಚಿತ್ರ ವಿ. ವೆಂಕಟರಾಮನ್ ಸೂಪರಿಂಟೆಂಡಿಂಗ್ ಇಂಜನಿಯರ್, ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಶ್ರೀಗಳಾದ ರಂಗನಾಥನ್, ವೆಂಕಟಸುಬ್ಬಯ್ಯ, ಸೋಮಶೇಖರ, ವೀರಾಸ್ವಾಮಿ, ಆಸುಂಡಿ ತಿರುಮಲರಾವ್, ಇವರು ನೇತಾಜಿ ಜೀವನಚರಿತ್ರೆಯ ಮೇಲೆ ಮಾತನಾಡಿದರು. ನಂತರ ಅಲ್ಪೋಪಹಾರ ಜರುಗಿತು ಶ್ರೀ ಕ್ಯಾಪ್ಟನ್ ಕೃಷ್ಣಮೂರ್ತಿಯವರು ಆಭಾರ ಮನ್ನಿಸಿದನಂತರ ವಂದೇಮಾತರಂ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು. ಶಾಲೆಯ ವಿದ್ಯಾರ್ಥಿ, ಆಸುಂಡಿ ತಿರುಮಲರಾವು ಇವರುಗಳು ನೇತಾಜಿಯವರ ಜೀವನದ ಅನೇಕ ಸನ್ನಿವೇಶ, ದೃಷ್ಟಾಂತ ಮೊದಲಾದವುಗಳ ವರ್ಣನೆ ಸಹಿತ ಭಾಷಣಮಾಡಿದರು. ವಂದೇ ಮಾತರಂ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು

### ಸ್ವಾತಂತ್ರ್ಯದಿನೋತ್ಸವ

### ಹುತಾತ್ಮರ ದಿನಾಚರಣೆ.

ಕಾಂಗ್ರೆಸ್ ಅಧ್ಯಕ್ಷರ ಆಶ್ವಾಸನದಂತೆ ಸ್ಥಳೀಯ ಕಾಂಗ್ರೆಸ್ ಸಮಿತಿಯು ಏರ್ಪಡಿಸಿದ ಸಭೆಯಲ್ಲಿ ಶ್ರೀ ಹ. ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ತಿರುಮಲಾಚಾರ್ಯ, ಕೊಟ್ರಯ್ಯ, ಆ. ತಿರುಮಲರಾಯರು ಭಾಷಣಕೊಟ್ಟರು. ಕೊನೆಯವರು ಪ್ರಾತಃಕಾಲದ ಪ್ರಭಾತಫೇರಿಯನಂತರ ಧ್ವಜಾರೋಹಣ ಮಾಡಿದರು. ಹುತಾತ್ಮರ ಸ್ಮರಣೆಗಾಗಿ ಮೌನ ಪ್ರಾರ್ಥನೆಯಾಯಿತು.

# Tha Rayalaseema Confectionery Works, Bellary.

ದಿ ರಾಯಲಸೀಮ ಕನ್ಫೆಕ್ಷನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | | |
|---|---|---|
| First Quality | .... .... | Rs. 32-0-0 |
| Second | .... ... | Rs. 28 0 0 |
| Without essence | .... | Rs. 26 0-0 |

Per Tin of 28 lbs Ex. Factory.
Sales Tax Extra.

None to beat us in quality. Try and be convinced - Encourage the industries of these most backward tracts.

**ಇಳಿಸಿದ ಬೆಲೆ** **ಪೆಪ್ಪರಮಿಂಟು**

| | | |
|---|---|---|
| ಪ್ರಥಮ ವರ್ಗದ್ದು | .... | ರೂ 32—0—0 |
| ದ್ವಿತೀಯ ,, | .... | 28—0—0 |
| ಎಸ್ಸೆನ್ಸ ಇಲ್ಲದ್ದು | .... | 26—0—0 |

28 ಪೌಂಡಿನ ಟಿನ್ನಿನ ಫ್ಯಾಕ್ಟರಿ ಹೊರಗಿನ **ಬೆಲೆ** ಸೇಲ್ಸ್ ಟ್ಯಾಕ್ಸು ಬೇರೆ ಗುಣದಲ್ಲಿ ತಯಾರಿಕೆಯಲ್ಲಿ **ನಾವು** ಯಾರಿಗೂ ಕಡಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಮನವರಿಕೆ ನಿಮ್ಮಲ್ಲೇ ಬರುವದು. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪೋಷಿಸಿರಿ.


2ನೇ **ಪುಟ**ದಿಂದ ಬಂದದ್ದು

ಸ್ವಾತಂತ್ರ್ಯದಲ್ಲಿ ಇರಲಾರರು. ಆದುದರಿಂದ ೧೬೪ ಲಕ್ಷ ಜನರ ಪ್ರತಿನಿಧಿಯಾದ ಹೈದರಾಬಾದ ಸ್ಟೇಟ ಕಾಂಗ್ರೆಸ ಎರಡು ಬೇಡಿಕೆಗಳನ್ನು ಮುಂಡಿಸಿತು.

೧ ಹೈದರಾಬಾದ ಸ್ಟೇಟ ಹಿಂದುಸ್ಥಾನದ **ಅವಿ**ಭಾಜ್ಯ ಅಂಗವಿದ್ದ ಕಾರಣ ಹಿಂದೀ **ಸಂಘ** ರಾಜ್ಯದಲ್ಲಿ ಸೇರಬೇಕು.

೨ ಇಂದಿನ ನಿರಂಕುಶ ಪ್ರಭುತ್ವದ ಬದಲಾಗಿ ಅಲ್ಲಿ ಹೊಣೆಗಾರ ಪ್ರಭುತ್ವ ಸ್ಥಾಪಿತವಾಗಬೇಕು. ಸ್ಟೇಟ ಕಾಂಗ್ರೆಸಿನ ಈ ಎರಡು ಬೇಡಿಕೆಗಳು ನ್ಯಾಯಬದ್ಧವಾಗಿವೆ ಮತ್ತು ಈ ಬೇಡಿಕೆಗಳು ಪೂರ್ಣವಾಗುವವರೆಗೆ ಹೋರಾಟವನ್ನು ಸಾಗಿಸಬೇಕೆಂದು ಹೈದರಾಬಾದ ಸ್ಟೇಟ ಕಾಂಗ್ರೆಸು ದೃಢನಿಶ್ಚಯ ಮಾಡಿದೆ. ಹೈದರಾಬಾದಿನ ಪ್ರಭುತ್ವ ಇಂದಿನ ನಿಜ ಪರಿಸ್ಥಿತಿಯನ್ನು ಅರಿತು ಸ್ಟೇಟ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು. ಇಲ್ಲವಾದರೆ ಹೈದರಾಬಾದದೊಳಗಿನ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಪ್ರಾಂತಗಳು ತಮ್ಮ ಮಗ್ಗುಲ ಪ್ರಾಂತಗಳಲ್ಲಿ ಸೇರುವದಕ್ಕೆ ಉದ್ಯುಕ್ತವಾಗಬಹುದೆಂದು ಸ್ಟೇಟ ಕಾಂಗ್ರೆಸಿನ ಅಧ್ಯಕ್ಷ ಸ್ವಾಮೀ ರಮಾನಂದ ತೀರ್ಥರು ಹೈದರಾಬಾದ ಪ್ರಭುತ್ವಕ್ಕೆ ಎಚ್ಚರಿಕೆಯನ್ನಿತ್ತಿರುವರು. ಭವಿಷ್ಯಕಾಲದ ಗರ್ಭದಲ್ಲಿ ಏನು ಅಡಗಿದೆಯೋ ನೋಡಬೇಕು.

ಹೈದರಾಬಾದ ಆಂದೋಲನದ **ಉತ್ತ**ರಾರ್ಧ **ಈ**ಗ ಆರಂಭವಾಗಲಿದೆ. ಸ್ಟೇಟ ಕಾಂಗ್ರೆಸಿನ ಅಧ್ಯಕ್ಷರಾದ ಸ್ವಾಮೀ ರಮಾನಂದ ತೀರ್ಥರು ಅಹಿಂಸಾತ್ಮಕ ಹೋರಾಟವನ್ನು ಮುಂದೆ ಸಾಗಿಸಲು ಈಗಾಗಲೆ ಹೈದರಾಬಾದಕ್ಕೆ ತೆರಳಿದ್ದಾರೆ. ಇದರಿಂದ ಅಲ್ಲಿಯ ಆಂದೋಲನದಲ್ಲಿ ಹೊಸ ಚೈತನ್ಯ ಉಂಟಾಗುವದು. ಸಾರ್ವಜನಿಕ ಅಸಹಕಾರಿತೆ ಆಚರಣೆಯಲ್ಲಿ ಬರುವದೆಂದು ಆಶಿಸಲಾಗಿದೆ. ಪ್ರಭುತ್ವಕ್ಕೆ ಸಂಬಂಧಪಟ್ಟ ಎಲ್ಲ ಜನರು ತಮ್ಮ ಸಹಕಾರವನ್ನು ನಿರಾಕರಿಸಬಹುದು. ಶಾಸನ ಸಭೆಯ ಸದಸ್ಯರು, ಸರಕಾರಿ ನೌಕರರು, ವಕೀಲರು, ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಕಾಂಗ್ರೆಸಿನ ಹೋರಾಟದಲ್ಲಿ ಭಾಗವಹಿಸಬೇಕೆಂದು ಸ್ವಾಮಿಜಿಯವರು ಕೇಳಿಕೊಂಡಿರುವರು. ಇದಲ್ಲದೆ ಒಕ್ಕಲಿಗರು, ತೆರಿಗೆ ಮತ್ತು ಲೆವ್ಹಿ ಇವುಗಳನ್ನು ಕೊಡಲು ನಿರಾಕರಿಸಬಹುದು. ಕೂಲಿಕಾರರು ರೇಲ್ವೆ ಮತ್ತು ಕಾರಖಾನೆಗಳಲ್ಲಿ ಕೆಲಸಕ್ಕೆ ಹೋಗದೆ ಅಸಹಕಾರ ಹೂಡಬಹುದು. ಸಾರಾಂಶ ಹೈದ್ರಾಬಾದಿನ ಇಂದಿನ ನಿರಂಕುಶ ಪ್ರಭುತ್ವದ ಯಂತ್ರವನ್ನು ಶಿಥಿಲಮಾಡುವದೆ ಸ್ಟೇಟ ಕಾಂಗ್ರೆಸಿನ ಉದ್ದೇಶ. ಹೈದರಾಬಾದಿನಲ್ಲಿ ಪ್ರಜಾರಾಜ್ಯ ಸ್ಥಾಪಿಸುವದೆ ಅದರ ಗುರಿ. ಈ ಧ್ಯೇಯ ಸಾಧನೆಗಾಗಿ ಹೈದರಾಬಾದಿನ ಜನತೆ ವೀರಾವೇಶದಿಂದ ಮುನ್ನುಗ್ಗುತ್ತಿದೆ.

# The Rayalaseema Bank Ltd., H. O. Bellary.

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು |
**ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

**ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ,
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ**, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.



# NAVA BHARAT BELLARY.

Reg. No. M, 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates |
| --- | --- |
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..............................................
..............................................
..............................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್.

# ಗಾಂಧೀಜಿ ಸ್ಮಾರಕ ಸಂಚಿಕೆ.


ಬಳ್ಳಾರಿ
ಉಜ್ವಲ ರಾಷ್ಟ್ರೀಯ
ವಾರಪತ್ರಿಕೆ.

THE NAVA BHARAT
ನವ ಭಾರತ
ಸಂಪಾದಕ-ಟಿ. ಬಿ. ಕೇಶವರಾವ್

ಉತ್ತಿಷ್ಠತ!
ಜಾಗ್ರತ!
ಪ್ರಾಪ್ಯವರಾನ್ನಿಬೋಧತ.

ವರ್ಷ ೧೨ | ಬಳ್ಳಾರಿ ಫೆಬ್ರವರಿ ೧೬ ಸೋಮವಾರ ೧೯೪೮ | ಸಂಚಿಕೆ ೬.


ಜನನ.
೨—೧೦—೧೮೬೯

ಮರಣ
೩೦—೧—೧೯೪೮

ನಿಮ್ಮ
ಹತ್ತು ದಿನಗಳ
ಆದಾಯ
ಕೊಡಿರಿ.

ಗಾಂಧೀಜಿಯವರ
ವಿಧಾಯಕ ಕಾರ್ಯಕ್ರಮದ
ಅನುಕರಣೆಯೇ
ಗಾಂಧೀಜಿ ಪೂಜೆ.

## ಗಾಂಧಿ ಕೇಂದ್ರ ಸ್ಮಾರಕ ಸಂಘ.

ಅಧ್ಯಕ್ಷ- ಬಾಬು ರಾಜೇಂದ್ರ ಪ್ರಸಾದ
ಸದಸ್ಯರು — ಪಂಡಿತ ಜವಹರಲಾಲ ನೆಹರು. ಸರ್ದಾರ ವಲ್ಲಭಭಾಯಿ ಪಟೇಲ, ಮೌಲಾನಾ ಆಜಾದ್, ರಾಜಗೋಪಾಲಾಚಾರಿ, ಅಮೃತಕೌರ್, ದೌಲತರಾಂ, ಜಗಜೀವನರಾಂ

64

# ನವ ಭಾರತ

ಫೆಬ್ರವರಿ 16 ಸೋಮವಾರ 1948.

## ಗಾಂಧೀಜಿ

ಮಹಾತ್ಮ ಗಾಂಧಿ ಭೌತಿಕ ದೇಹದ ಅಂತವಾಗಿ ಅವರ ಅಮೃತವಾಣಿಯ ಉಪದೇಶವನ್ನು ಸವಿಸುವ ಭಾಗ್ಯವು ಭಾರತೀಯರಿಗಿಲ್ಲದಾಯಿತು. ಭರತ ಖಂಡ ಮತ್ತು ವಿದೇಶಗಳಿಂದ ಅಗಣಿತ ಮಾನ್ಯವ್ಯಕ್ತಿಗಳು ಸಂಸ್ಥೆಗಳು ಸರಕಾರೀ ಪ್ರತಿನಿಧಿಗಳು ಅವರ ಜನತಾ ಸೇವೆಯನ್ನು ಶ್ಲಾಘಿಸಿ ಗಾಂಧೀಜಿಯವರ ಮರಣದಿಂದ ಜಗತ್ತಿನ ಹಾನಿಯಾಗಿರುವುದೆಂದು ಉಲ್ಲೇಖಿಸಿರುವರು.

ಭಾರತದ ಸ್ವಾತಂತ್ರ್ಯ ಪ್ರದಾನವಾಡಿಸಿ ಅಪಳಿತ ಯಂತ್ರವನ್ನು ಬಲಿಗೊಳಿಸುವ ಅಪ್ರತಿಮ ಶಕ್ತಿಯು ಅದೃಶ್ಯವಾದುದು, ದೇಶದ ದುರ್ದೈವವೆನ್ನಬೇಕು. ಗಾಂಧೀಜಿಯ ರಾಜಕೀಯ ಉತ್ತರಾಧಿಕಾರಿ ಜವಹರಲಾಲ ನೆಹರೂರವರ ಮಂತ್ರಿಮಂಡಲಕ್ಕೆ ಸಾಕಷ್ಟು ಧೈರ್ಯಸ್ಥೈರ್ಯಗಳು ಲಭಿಸಲೆಂದು ಪ್ರಾರ್ಥಿಸುತ್ತೇವೆ. ಗಾಂಧೀಜೀಯವರ ಬಹುಮುಖೀ ದೇಶಸೇವೆಯ ರಚನಾತ್ಮಕ ಕಾರ್ಯದ ತತ್ವಗಳಲ್ಲಿ ಕೆಲವನ್ನಾದರೂ ಜನತೆಯು ಪಾಲಿಸಿದಲ್ಲಿ ದೇಶಕಲ್ಯಾಣವಾದೀತು. ಅಂಥಾ ಸುಬುದ್ಧಿ ವಿವೇಕಗಳನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

---

## ಮಹಾತ್ಮ ಗಾಂಧಿ ೭೮ ಅಡಿಪುತ್ಥಳಿ.

ಬೊಂಬಾಯಿ ಹೊರಭಾಗದ ಚಂಡಿವಾಲಿ ಪ್ರದೇಶದಲ್ಲಿ ಗಾಂಧೀಜೀಯ 78 ಅಡಿ ಮೂರ್ತಿಯನ್ನು ಪರ್ವತದ ಎತ್ತರದ ಪ್ರದೇಶದಲ್ಲಿ ಸ್ಥಾಪಿಸಲು ನಿಶ್ಚಯವಾಗಿದೆ ಈ ಪರ್ವತಶ್ರೇಣಿಗೆ ಗಾಂಧೀಜಿಯ ನಾಮಾಂಕಿತವಾಗುವುದಲ್ಲದೆ 78 ಸ್ತೂಪಗಳೂ, ಪ್ರತಿಯೊಂದರ ಮೇಲೆ ಗಾಂಧೀ ಜೀವಿತದ ಮುಖ್ಯಾಂಶಗಳೂ ಕೆತ್ತಲ್ಪಡುವುವು. ಜನ್ಮಭೂಮಿ ಪತ್ರಿಕೆಯವರು ಇದಕ್ಕಾಗಿ ಮೊದಲು ಒಂದು ಲಕ್ಷ ರೂ ಕೊಡಲಿದ್ದಾರೆ. ಇನ್ನು ಬೇಕಾದಾಗ ಕೊಡುವರು. ಇದಕ್ಕೆ ಶ್ರೀ ಮಂಗಳದಾಸ ಪಕ್ವಾಸ (ಶಿ. ಪಿ. ಗವರ್ನರ್)ರ ಅಧ್ಯಕ್ಷತೆಯಲ್ಲಿ ಪ್ರಮುಖ ಧರ್ಮಕರ್ತರ ಸಮಿತಿಯೇರ್ಪಟ್ಟಿದೆ.

— ಮಹಾತ್ಮ ಗಾಂಧಿಯವರ ತಿಥಿಯ ನಿಮಿತ್ತ ಪಾಕಿಸ್ಥಾನದ ಸರ್ಕಾರೀ ಸಂಸ್ಥೆಗಳೆಲ್ಲಾ ಮುಚ್ಚಿವೆ, ಕರಾಚಿಯಲ್ಲಿ ನೂರಾರು ಜನರು ಪ್ರಾರ್ಥನೆ ಉಪವಾಸಗಳನ್ನು ನಡೆಸಿದರು.

## ಅವಿನಾಶಿ ಮಹಾತ್ಮ

**ಅಳಬೇಡ ಅಳಬೇಡ ಎಲೆ ಭಾರತದಜೀವಿ ॥ಪ॥**
**ಅಕಳಂಕ ಗುರುಗಾಂಧಿ ಎಮ್ಮನಗಲಿದ ನೆಂದು ॥ಅ॥**

। ೧ ।

ಉನ್ಮಾದ ಜಡನೊಬ್ಬ ।
ಚಾಂಡಾಲ ಕೃತಿಯಿಂದೆ !
ದೇಹದಿಂದಾತ್ಮನನು ।
ಭೇದಿಸಿ ದೊಡೇನಹುದು ? ।
ಅಗಲುವನೆ ಎಮ್ಮೊಳಗೆ ।
ಬೆರೆತಿರುವ – ಮಹಾತ್ಮ ॥

। ೨ ।

ನೋಟದಲಿ ರೂಪಿರಲು ।
ಮಾನಸದಿ ನೆನಪಿರಲು ।
ಕಿವಿಯೊಳಗೆ ಸುಳಿವಮೃತ ।
ವಾಕ್ಯಗಳ ದನಿಯಿರಲು ।
ಅಗಲುವನು ಎಂತಯ್ಯ ? ॥
ಅವಿನಾಶಿ - ಮಹಾತ್ಮ ॥

। ೩ ।

ಈ ಸುದಿನ ಹೊರಗಿದ್ದು ।
ಎಮ್ಮೊಳಗೆ ನೋಡಿದನು ।
ಇಂದೊಮ್ಮೆ ಒಳಡಗಿದ್ದು ।
ವಿಶ್ವಶಾಂತಿಯ ನೋಡೆ ।
ರಾಮೇಶನಲಿ ಕೂಡಿ ।
ನಗುತಿಹನು - ಮಹಾತ್ಮ ॥

ಜೋಳದರಾಶಿ ದೊಡ್ಡಣ್ಣನ ಸೇ(ವೆ)

## IN THE COURT OF THE DISTRICT MUNSIF OF HOSPET.

### O. S No. 146/47: I. A. No. 880/47.

| | | |
|---|---|---|
| Mudlapuram Srinivasa Gowd alias Adivi Rao adopted son of Byrana Gowd aged 31, Brahmin. Reddy in Office, Hospet. | ... | Petitioner. (Plaintiff) |
| AND | | |
| Mudlapuram Ranga and others. .... .... | .... | Respondents. |

### Notice to 5th Respondent.

Mudlapuram Venkoba Rao, son of Narayana Rao aged 20, Brahmin, Land-lord Bellary 5th Respondent. The Petitioner has filed the above petition to add you as the fifth defendant in the suit, and the same is posted to 17-2-1948. If you fail to appear that day in person or through pleader and file your objections if any, you will be held exparte.

Hospet. }
9-2-48 }

T. H. M. Panchaksharaiah, B. A., B. L.,
Pleader for Petitioner.

---

## ಮಾ॥ ರಾ॥ ಶ್ರೀ ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

### O. S 28?/46. E. P. 171/47.

| | | |
|---|---|---|
| ಬಣಕಾರ ಪಟೇಲ ಮಲ್ಲಪ್ಪ (ಗುಡ್ಡಪ್ಪನವರ ಮಗ) ವಯಸ್ಸು 40, ಹಿಂದು, ನಾಮೇನಹಳ್ಳಿ, ಹರಿಹರ ತಾಲೂಕ. ಚಿತ್ರದುರ್ಗ ಜಿಲ್ಲಾ. | .... | ಅರ್ಜದಾರ ಡಿಕ್ರಿ ಹೋಲ್ಡರ್ Petitioner Decree-holder. |
| ಮತ್ತು | | |
| 1. ಮಡಿವಾಳರ ಚಿಕ್ಕಪ್ಪ (ಬಸಪ್ಪನಮಗ) ವಯಸ್ಸು 50 | .... | ಜಡ್ಜಮೆಂಟ್ ಡೆಟರ್ಸ್ ರೆಸ್ಪಾಂಡೆಂಟ್ಸ್ Judgment Debtors. |
| 2. ,, ದೊಡ್ಡಬಸಪ್ಪ (ಹೊಳಿಯಪ್ಪನಮಗ) 45. | | |
| 3. ,, ಸಣ್ಣಬಸಪ್ಪ ( ,, 40 | | |

ಎಲ್ಲರೂ ಹಿಂದುಗಳು, ಜಿರಾಯ್ತಿ ವೃತ್ತಿ, ವಾಸನ, ಹರಿಹರ ತಾ॥ ಚಿತ್ರದುರ್ಗ ಜಿಲ್ಲ. Respondents.

### ನೋಟೀಸು.

ಈ ಸೂಟಿಗೆ ಸಂಬಂಧವಿರುವ ಭೂಮಿಯ ಹಕ್ಕು ಸ್ವಾಧೀನಾನುಭವವನ್ನು ದೊರಕಿಸಲು ಕ್ರಮಬದ್ಧವಾದ ಕ್ರಯಪತ್ರವನ್ನು ನೀವು ಬರೆದುಕೊಡಬೇಕೆಂದು ಪೇಲ್ಯಾಣಿಸಿದ ಅರ್ಜಯನ್ನು ಅರ್ಜದಾರನು ದಾಖಲು ಮಾಡಿರುತ್ತಾನೆ. ಈ ವಿಷಯದ ವಾಯ್ದೆಯು 28—2—1948ಕ್ಕೆ ಹಾಕಲಾಗಿದೆ. ನೀವಾಗಲಿ ನಿಮ್ಮ ಪರವಾದ ವಕೀಲರಾಗಲಿ ಆ ದಿನ ಹಾಜರಾಗಿ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಸೂಚಿಸತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸಪಾರ್ಟ ಮಾಡಲಾಗುವುದು

ಹೊಸಪೇಟೆ, |
9 2—47 |

ಟಿ. ಹೆಚ್. ಎಂ. ಪಂಚಾಕ್ಷರಯ್ಯ, ಬಿ ಎ., ಬಿ, ಎಲ್.,
ಅರ್ಜದಾರರ ವಕೀಲ.

## ಬಳ್ಳಾರಿ ಜಿಲ್ಲೆಯಲ್ಲಿ
## .... ಸಂತಾಪ ಸಭೆಗಳು. ....

ಬಳ್ಳಾರಿ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಗಾಂಧೀಜಿ ನಿಧನದ ನಿಮಿತ್ತ ಹರತಾಳ ಮತ್ತು ದುಃಖ ಸೂಚಕ ಸಭೆ ತೀರ್ಮಾನಗಳು ತಲುಪುತ್ತಲಿವೆ.

### ಬಳ್ಳಾರಿ

ಗಾಂಧೀಜಿ ನಿಧನದ ವಾರ್ತೆಯನ್ನು ಕೇಳಿದೊಡನೆಯೇ ವಾರ್ತೆಯು ನಗರದಲ್ಲೆಲ್ಲಾ ಹಬ್ಬಿ ಎಲ್ಲಾ ಅಂಗಡಿಗಳೂ ಮುಚ್ಚಿದವು. ರಾತ್ರಿ ಸಾಂಬಮೂರ್ತಿ ಮೈದಾನದಲ್ಲಿ 10 ಸಾವಿರ ಪುರಜನರ ಸಭೆಯು ಸೇರಿದ್ದಿತು. ಜಿ. ಕಾ. ಅಧ್ಯಕ್ಷ ಟಿ. ಸುಬ್ರಹ್ಮಣ್ಯಂ, ತಾ. ಕಾ. ಅಧ್ಯಕ್ಷ ಶ್ರೀ ವೀರಸ್ವಾಮಿ ಮತ್ತು ಕಲೆಕ್ಟರ್ ಅನಂತರಾಮನ್‌ರವರು ದುಃಖಪ್ರದರ್ಶನ ಮಾಡುತ್ತ, ಗಾಂಧೀಜಿ ಜೀವಿತ ಧ್ಯೇಯಗಳನ್ನು ಪಾಲಿಸಬೇಕೆಂದರು. ಆ ದಿನದ ರಾತ್ರಿಯೆಲ್ಲಾ ಮತ್ತು ಮಾರನೆಯ ದಿನ ಹರಿಜನ ಮತ್ತು ಇತರ ಭಜನಮಂದಿರಗಳಲ್ಲಿ ಪ್ರಾರ್ಥನೆ ನಡೆಯಿತು. ಶನಿವಾರ ಸಿನಿಮಾ ಜಟ್ಕಾಗಳ ಸಮೇತವಾಗಿ ನಗರದಲ್ಲಿ ಸಂಪೂರ್ಣ ಹರತಾಳವಾಯಿತು. ಕೌಲ್-ಬಜಾರದಲ್ಲಿ ಮುಸಲ್ಮಾನರ ಮತ್ತು ಹಿಂದೂಗಳ ಮೌನ ಮೆರವಣಿಗೆಯಾಯಿತು. ಪುರಸಭೆಯ ಪ್ರತ್ಯೇಕಾಧಿವೇಶನದಲ್ಲಿ ದುಃಖ ಸೂಚಕ ತೀರ್ಮಾನವಾಗಿ ರಾಯಲ ಸಿನಿಮಾದ ಬಳಿ ಇರುವ ಸ್ಥಳದಲ್ಲಿ ಗಾಂಧೀಜೀಯ ಪೂರ್ಣ ಪುತ್ಥಳಿಯನ್ನಿಡಲು 5 ಸಾವಿರ ರೂ. ಕೊಡಬೇಕೆಂಬ ತೀರ್ಮಾನ ಮಾಡಿ ದೇವದಾಸ ಗಾಂಧಿಯವರಿಗೆ ಕಳುಹಿಸಿದರು.

### ಹೊಸಪೇಟೆ

0ನೆಯ ತಾ|| ಶುಕ್ರವಾರ ಸಾಯಂಕಾಲ ನಿಧನ ವಾರ್ತೆಯು ರೇಡಿಯೋ ಮೂಲಕ ತಿಳಿದ ಕೂಡಲೇ ಇಡೀ ನಗರದ ಎಲ್ಲಾ ಚಟುವಟಿಕೆಗಳು ಸ್ತಬ್ಧವಾಗಿ ಪೂರ್ಣವಾದ ಹರತಾಳವು 31ನೆಯ ತಾ|| ಕೂಡ ಆಚರಿಸಲಾಯಿತು, ಸಂಘ-ಸಂಸ್ಥೆಗಳ-ಕಛೇರಿಗಳ ಮೇಲಿನ ರಾಷ್ಟ್ರಧ್ವಜವು ಅರ್ಧಕ್ಕಿಳಿಸಲಾಯಿತು. ಶನಿವಾರ ಮಸೀದಿ-ಚರ್ಚುಗಳಲ್ಲಿ ಪ್ರಾರ್ಥನೆ ನಡೆಯಿತು, ನಗರದ ವಿವಿಧ ಭಾಗಗಳಲ್ಲಿ ಭಜನೆಗಳೇರ್ಪಟ್ಟವು. ಉಪವಾಸ ವ್ರತವು ಅನೇಕ ಭಕ್ತರಿಂದಾಚರಿಸಲ್ಪಟ್ಟು ರಾತ್ರಿಗೆ ಪಾರಣೆಯಾಯಿತು. ವಾಲ್ಮೀಕಿ ತರುಣ ಸಂಘದವರ ಸಭೆಸೇರಿ ದುಃಖವ್ಯಕ್ತಮಾಡಿ ಶಾಂತಿ ಕೋರಿದರು. ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಪರವಾಗಿ ಶ್ರೀ ತಿರುಮಲರಾಯರು ಇಂಡಿಯಾದ ಮುಖ್ಯಮಂತ್ರಿಗಳಿಗೂ, ದೇವದಾಸ ಗಾಂಧಿಯವರಿಗೂ ಸಂತಾಪವನ್ನು ಸೂಚಿಸುವ ಗೌರವವನ್ನು ವ್ಯಕ್ತಪಡಿಸುವ ತೀರ್ಮಾನವನ್ನು ತಾರಿನಿಂದ ಕಳುಹಿಸಿದರು. ನಗರ ಸಭೆಯು ಶ್ರೀ ಪ. ಗುರುನಾಥಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ದುಃಖಸೂಚಕ ತೀರ್ಮಾ

---

## ಹೊಸಪೇಟೆ
## ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
### O. P. 1/48.

(ನೀರ್ಲಿಗಿ ತಾಯಪ್ಪನವರಿಗೆ ಸಲ್ಲಬೇಕಾದ ಜೀವವಿಮಾ ಹಣದ ವಸೂಲಿಯ ಬಗ್ಗೆ)

ಅರ್ಜಿದಾರರು:—

1) ನೀರ್ಲಿಗಿ ಭೀಮಪ್ಪ ವರ್ಷ 10 } ತಂದೆ ನೀರ್ಲಿಗಿ
2) ,, ಚನ್ನಪ್ಪ .. 6 } ತಾಯಪ್ಪ ಮೈನರು

ಗಳು ನಿಗೇವಾನಿ ತಾಯಿ ಗಂಗಮ್ಮ ವಾಲ್ಮೀಕಿ ಮತ, ಜಿರಾಯ್ತಿ ಸಾ|| ಹೊಸಪೇಟೆ, ತಾ|| ಹೊಸಪೇಟೆ.

ಮೇಲಿನ ನಂಬರಿನಲ್ಲಿ ಅರ್ಜಿದಾರರ ತಂದೆ ಲೇಟು ತಾಯಪ್ಪನು ಕ್ಯಾನರ ಮ್ಯೂಚುಯಲ್ ಅಶೂರೆನ್ಸ್ ಕಂಪೆನಿ ಲಿಮಿಟೆಡ್ ಉಡಿಪಿ The Canara Mutual Assurance Company Ltd Udupi ಯಲ್ಲಿ ಪಾಲಿಸಿ ನಂಬರು 2863ರಲ್ಲಿ 1000 ರೂಪಾಯಿಗಳಿಗೆ ಇನ್‌ಶೂರ್ ಮಾಡಿದ ಮೊತ್ತಕ್ಕೆ ರೂ 961-5-0 ಬರಮಾಡಿಕೊಳ್ಳುವ ಸಲುವಾಗಿ ಮೈನರು ಅರ್ಜಿದಾರರ ಪರವಾಗಿ ಅವರ ತಾಯಿ ಗಂಗಮ್ಮ ಎಂಬುವರು ವಾರಸು ಸರ್ಟಿಫಿಕೇಟಿಗಾಗಿ (Succession Certificate) ಮನವಿಮಾಡಿಕೊಂಡಿದ್ದಾರೆ. ವಾಯಿದೆಯು 27-2-48 ಕ್ಕೆ ಹಾಕಲಾಗಿದೆ, ಯಾರಿಗಾದರು ತಕರಾರು ಇದ್ದಲ್ಲಿ ಸದರಿ ವಾಯಿದೆಗೆ ಹಾಜರಾಗಿ ತಕರಾರು ಕೊಡಬೇಕು. ಕೊಡದೆ ತಪ್ಪಿದಲ್ಲಿ ಎಕ್ಸಪಾರ್ಟಿ ಮೇಲೆ ಸರ್ಟಿಫಿಕೇಟ್ ಕೊಡೋಣಾಗುತ್ತದೆ.

ಹೊಸಪೇಟೆ
9-2-48

ಟಿ. ಹೆಚ್. ಎಂ. ಶಿದ್ದಯ್ಯ
ಅರ್ಜಿದಾರರ ವಕೀಲರು.

ನಮಾಡಿ ಮುಖ್ಯಮಂತ್ರಿ ಮತ್ತು ದೇವದಾಸರಿಗೆ ತಿಳಿಸ ಲಾಯಿತು. 2ನೆಯ ತಾ|| ಮುನಿಸಿಪಲ್ ಸಂಸ್ಥೆಗಳೆಲ್ಲಾ ಮುಚ್ಚಲಾಗಿದ್ದವು. ಸಮಾಜವಾದಿ ಪಕ್ಷದ ಕಾರ್ಯ ಕರ್ತರು ವಿದ್ಯಾರ್ಥಿ ಕಾಂಗ್ರೆಸ್‌ನವರು ಸಭೆಸೇರಿ, ಮೌನ ಪ್ರಾರ್ಥನೆ ಮಾಡಿ ದುಃಖಸೂಚಕ ಠರಾವನ್ನು ಮಾಡಿದರು.

ಇಲ್ಲಿಯ R. S. S ಹುಡುಗರು ಹೈಸ್ಕೂಲು ಮತ್ತು ವಡಕರಾಯನ ಗುಡಿಯಲ್ಲಿ ದುಷ್ಪ್ರವರ್ತನೆ ನಡೆ ಸಿದುದೂ ಇವರಲ್ಲಿ ನಾಲ್ವರ ಮನೆ ಝಡ್ತಿ ಮಾಡಿದುದೂ ತಿಳಿದು ಬಂದಿದೆ.

### ಎಮ್ಮಿಗನೂರು.

ಬೋರ್ಡು ಕನ್ನಡ ಹಿಂದೂ ಬಾಲಕರ ಶಾಲೆಯ ಲ್ಲಿ ಉಪಾಧ್ಯಾಯರೆಲ್ಲಾ ವಿದ್ಯಾರ್ಥಿಗಳೊಂದಿಗೆ ಸಭೆಕೂಡಿ ಗಾಂಧೀಜಿ ನಿಧನಕ್ಕೆ ದುಃಖಾಶ್ರುಗಳನ್ನರ್ಪಿಸಿ ಇದು ತುಂಬಲಾರದ ನಷ್ಟವೆಂದರು.

### ಬದನೆಹಾಳು

ಶ್ರೀ ಮರಿಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಗಾಂಧೀ ಜಿ ಭಾವಚಿತ್ರದ ಮುಂದೆ ಸಭೆಗೂಡಿ ಶ್ರೀ ರಂಗನಗೌಡ ರು ಗಾಂಧೀಜಿಯ ಆದ್ಯಂತ ಚರಿತ್ರೆಯನ್ನು ವಿವರಿಸಿ ಹೇಳಿದರು. ಶ್ರೀ ವಿರುಪಾಕ್ಷಯ್ಯ, ರಾಜಶೇಖರಯ್ಯನವ ರು ಮಾತಾಡಿ ಮಹಾತ್ಮರ ಗುಣಗಾನಮಾಡಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ಠರಾವನ್ನು ಒಪ್ಪಿಸಿದರು.

### ಮೊದೆಹಾಳು

ಇಲ್ಲಿ ಗಾಂಧೀಜಿ ಸ್ವರ್ಗಸ್ಥರಾದ ಬಗ್ಗೆ ಊರಿನ ಸ್ತ್ರೀ-ಪುರುಷರೆಲ್ಲಾ ದುಃಖಿತರಾಗಿ ಮೌನಮೆರವಣಿಗೆ ಹೊರಡಿಸಿದಾಗ ಗಾಂಧೀಜಿ ಭಾವಚಿತ್ರವನ್ನು ಪ್ರತಿ ಮನೆ ಯ ಮುಂದೆ ಪೂಜಿಸಿದರು. ಓಬಳದಾಸ್, ರಂಗಯ್ಯ, ಕೆಂಚಪ್ಪ, ಹನುಮಂತಪ್ಪ ಮತ್ತು ಬಳ್ಳಾರಿ ದುರುಗಪ್ಪ ಮೀಟಿಂಗ್ ಮಾಡಿ ಗಾಂಧಿ ತತ್ವ ಬೋಧಿಸಿದರು.

### ಯಂ. ಬಿ. ಅಯ್ಯನಹಳ್ಳಿ

1ನೆಯ ದಿನಾಂಕ ಭಾರತ ಭಾಗ್ಯವಿಧಾತ ಮಹಾತ್ಮ ಗಾಂಧಿ ಮರಣದ ನಿಮಿತ್ತ ಶ್ರೀ ಕೊಟ್ರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶನ ಸಭೆಯು ನೆರೆದು ಗಾಂಧಿ ತತ್ವಗಳ ಕುರಿತು ಭಾಷಣಗಳಾದವು. ಉದಯ ಗಾಂಧೀಜಿ ಭಾವಚಿತ್ರದೊಂದಿಗೆ 'ಕರುಣಾಳು ಬಾ ಬೆಳಕೆ' ಎಂಬ ಗೀತವನ್ನು ಹಾಡುತ್ತಾ ದುಃಖಿತರ ಮೆರವಣಿಗೆ ಯು ಊರ ಬೀದಿಗಳಲ್ಲಿ ಹಾದು ಹೋಯಿತು. ಮೌನ ಪ್ರಾರ್ಥನೆಯಾಯಿತು. ಗಾಂಧಿ ಸ್ಮಾರಕ ಮಂದಿರದ ಸ್ಥಾಪನೆಗಾಗಿ 500 ರೂ. ವಾಗ್ದಾನವಾಯಿತು. 80 ವರ್ಷದ ವೃದ್ಧ ವಾಲ್ಮೀಕಿ ಓಬಣ್ಣನವರು 150 ರೂ. ಬೆಲೆ ಬಾಳುವ ಜಮೀನನ್ನು ರಾಜಾಸಾಹೇಬರು 50 ರೂ. ಬೆಲೆ ಬಾಳುವ ಭೂಮಿ ಅರ್ಪಿಸಿದುತ್ತಾರೆ.

(ನೆಹರು ತರುಣ ಸಂಘ.)


ಭಾರತ ಎಲೆಕ್ಟ್ರಿಕ್ ಕಾಫಿವರ್ಕ್ಸ್,
ಬೆಂಗಳೂರು ರೋಡು, ಬಳ್ಳಾರಿ
—)0(—
ವಿದ್ಯುಚ್ಛಕ್ತಿಯ ಸಹಾಯದಿಂದ ಹುರಿದುಪುಡಿಮಾಡುವ ಪ್ರಶಸ್ತವಾದ ಕಾಫೀಪುಡಿಯು ಸುವಾಸನೆಯಾಗಿಯೂ ರುಚಿಕರವಾಗಿಯೂ ಇರುವುದು. ಕಾಫಿ ಬೀಜವನ್ನು ಪುಡಿಮಾಡಿ ಕೊಡುತ್ತೇವೆ.



ಅಂಬಾ ಭವನ (ರಿಜಿಸ್ಟರ್ಡ್)
ಬೆಂಗಳೂರು ರೋಡ್, ಬಳ್ಳಾರಿ.

ರುಚಿಕರ! ಶುಚಿಕರ!! ಹಿತಕರ! ಆನಂದಕರ!!

- ಬಗೆಬಗೆಯ ಸಿಹಿ ಭಕ್ಷ್ಯಕಾರಗಳು
- ಬಿಸಿಲಿಂದ ಬಂದವರಿಗೆ ತಂಪಾದ ಪಾನೀಯಗಳು
- ಹಸಿದು ಬಂದವರಿಗೆ ಬಿಸಿಬಿಸಿ ತಿಂಡಿಗಳು
- ನಮ್ಮ ಕಾಫಿ, ಟೀ, ಪಾನೀಯಗಳ ವೈಶಿಷ್ಟ್ಯ ಬೇರೆ.

ಟಿಫನ್ ಬೇಕಾದರೆ ಎಲ್ಲಿಗೆ ಹೋಗಲಿ?

ಇನ್ನೆಲ್ಲಿಗೆ ಹೋಗುವೆ? ಅಂಬಾ ಭವನಕ್ಕೆ ನಡೆ

# ಮಹಾತ್ಮರ ★ ★ ಅಂತ್ಯವಿಧಿ

ಬಿರ್ಲಾಭವನದಿಂದ ಯಮುನಾ ನದಿಯ ದಂಡೆಯಲ್ಲಿರುವ ರಾಜಘಾಟಕ್ಕೆ ಮಹಾತ್ಮ ಗಾಂಧಿಯವರ ದೇಹವನ್ನು ಮೆರವಣಿಗೆಯಲ್ಲಿ ಒಯ್ದಾಗ ಆ ಐದೂವರೆ ಮೈಲುಗಳ ಉದ್ದಕ್ಕೆ ಹತ್ತು ಲಕ್ಷಕ್ಕಿಂತಲೂ ಅಧಿಕ ಹಿಂದೀಯರು ಭಾಗವಹಿಸಿದ್ದರು. ದಿಲ್ಲಿ ಹಾಗೂ ಇನ್ನಿತರ ಕಡೆಗಳಿಂದ ಹಿಂದೂ, ಮುಸ್ಲಿಂ, ಶೀಖ ಎಂಬ ಜಾತಿಭೇಧವಿಲ್ಲದೆ ಆಬಾಲ ಸ್ತ್ರೀಯರು ಮಹಾತ್ಮರ ದರ್ಶನಾಪೇಕ್ಷೆಯಿಂದ ಇರುವೆಗಳ ಸಾಲುಗಳಂತೆ ರಾತ್ರಿಯಿಂದಲೇ ಬಿರ್ಲಾ ಬವನ ಹಾಗೂ ಮೆರವಣಿಗೆಯ ರಸ್ತೆಯ ಅಕ್ಕಪಕ್ಕಗಳಲ್ಲಿ ಬಂದು ಕೂಡುತ್ತಿದ್ದರು. ಮಹಾತ್ಮರ ಮೆರವಣಿಗೆ ಬಂದ ಕೂಡಲೇ ಮಹಾತ್ಮ ಗಾಂಧೀಕಿ ಜೈ ಎಂದು ಜನ ಘೋಷಿಸುತ್ತಿದ್ದರು.

ಮಹಾತ್ಮರ ದೇಹವನ್ನು ಶುಭ್ರ ಖಾದಿಯಿಂದ ಹೊದದಿಸಿದ್ದರು. ಕಣ್ಣುಗಳು ಮುಚ್ಚಿದ್ದವು. ಅವರ ಮೊಗದಾವರೆಯಲ್ಲಿ ಪ್ರಾರ್ಥನೆಯ ಕಳೆ. ಕೊರಳಿಗೆ ಕೈನೂಲಿನ ಹಾರ ತೊಡಿಸಿದ್ದರು, ನೆಲವು ಗುಲಾಬಿ ಹೂಗಳ ರಾಶಿಯಿಂದ ಮುಚ್ಚಿಹೋಗಿತ್ತು. ಲಕ್ಷಗಟ್ಟಲೆ ಜನರ ಹೂಗಳ ಮಳೆಸುರಿಸುತಿದ್ದರು, ಮುಂಜಾನೆ 11-45 ಗಂಟೆಗೆ ಬಿರ್ಲಾಭವನದಿಂದ ಮಹಾತ್ಮರ ದೇಹವನ್ನು ಹೊರಗೆ ತಂದರು. ಮೋಟಾರು ಟ್ರಕ್ಕಿನ ಮೇಲೆ ಮಹಾತ್ಮರ ದೇಹವನ್ನಿಟ್ಟಿದ್ದರು. ಅದೇ ಮೋಟಾರಿನಲ್ಲಿ ನೆಹರು, ಪಟೇಲ, ಸರದಾರ ಬಲದೇವಸಿಂಗ, ಕೃಪಲಾನಿ ಮೊದಲಾದವರಿದ್ದರು. ಗಾಂಧೀಜಿಯ ಪುತ್ರ ರಾಮದಾಸ ಗಾಂಧಿಯೂ ಕುಳಿತಿದ್ದರು. ನಾಲ್ಕು ಸಾವಿರ ಸೈನಿಕರು, ಒಂದು ಸಾವಿರ ವೈಮಾನಿಕರು, ಒಂದು ಪೋಲೀಸರು, ನೂರು ನಾವಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮುಂದೆ ಅಶ್ವದಳ, ಟ್ಯಾಂಕುದಳಗಳೂ ಚಲಿಸುತಿದ್ದವು. ಜಮಿಯತ್ ಅಲ್-ಉಲೇಮಾದ ಸ್ವಯಂಸೇವಕರು, ಬಾಲವೀರದಳ, ಮೊದಲಾದವರೂ ಹಿಂಬಾಲಿಸಿದ್ದರು.

ಮೆರವಣಿಗೆಯು ಯಮುನಾ ನದಿ ತಟಾಕದ ಐದೂವರೆ ಮೈಲು ಸ್ಥಳವನ್ನು ಸುತ್ತಿ ರಾಜಘಾಟಕ್ಕೆ ಸಂಜೆ 4-20 ಗಂಟೆಗೆ ಬಂದಿತು. 3 ಫೂಟಿನ ಎತ್ತರ ಚೌಕಟ್ಟಿನ ಮೇಲೆ ಚೌಕಟ್ಟಿನ ಚಿತೆಯನ್ನು ರಚಿಸಿದ್ದರು 15 ಮಣ ಗಂಧದ ಕಟ್ಟಿಗೆ, 4 ಮಣ ತುಪ್ಪ, 2 ಮಣ ಧೂಪ, 1 ಮಣ ತೆಂಗಿನಕಾಯಿ, 15 ಸೇರು ಕರ್ಪೂರಗಳು ಚಿತೆಗಾಗಿದ್ದವು. ಆಶ್ರಮವಾಸಿಗಳು ಮಹಾತ್ಮರ ದೇಹವನ್ನು ಚಿತೆಯಲ್ಲಿ 4 30 ಗಂಟೆಗೆ ತೆಗೆದಿಟ್ಟರು. ಅಸಂಖ್ಯ ಹೂ, ಹಾರಗಳನ್ನು ಅವರಿಗೆ ಅರ್ಪಿಸಲಾಯಿತು. ಚೀನಿ ರಾಯಭಾರಿ ಮೊದಲು ಪುಷ್ಪಾಂಜಲಿಯನ್ನು ಅರ್ಪಿಸಿದರು. ಮಂತ್ರ ಪಠಣೆ ಮೊದಲಾದವುಗಳಾದ ಮೇಲೆ ಮಹಾತ್ಮರ ಮೂರನೇ ಪುತ್ರ ರಾಮದಾಸ ಗಾಂಧಿಯವರು 4-55 ಗಂಟೆಗೆ ಚಿತೆಗೆ ಅಗ್ನಿ ಕೊಟ್ಟರು. ಡಾ॥ ರಾಜೇಂದ್ರ ಪ್ರಸಾದ, ಪಂಡಿತ ಪಂತ ಮೊದಲಾದವರು ರೋಧಿಸ ತೊಡಗಿದರು. ಅವರೊಂದಿಗೆ ಲಕ್ಷಗಟ್ಟಲೆ ಜನರು ಕಣ್ಣೀರು ಸುರಿಸಿದರು. ಕಣ್ಣೀರಿನ ನದಿಯೇ ಯಮುನೆಯೊಡನೆ ಸಂಗಮವಾಯ್ತು.

ಚಿತೆಯ ಸುತ್ತಲೂ ಸೈನಿಕರನ್ನಿಡಲಾಗಿತ್ತು. ಆದರೆ ದರ್ಶನಾಪೇಕ್ಷಿಗಳಾದ ಜನರ ನೂಕ-ನುಗ್ಗಾಟ ಬಹಳವಾದುದರಿಂದ ಅವರನ್ನು ತಡೆಯುವುದೇ ಕಷ್ಟವಾಯಿತು, ಸೈನ್ಯ ಕೋಟೆಯನ್ನು ಮುರಿದು ಜನ ಒಳಗೆ ನುಗ್ಗಿದರು. ಅನೇಕ ಸ್ತ್ರೀಯರೂ, ಮಕ್ಕಳದ ಮೂರ್ಛೆ ಹೋದರು. ಅಂಥ ಮಕ್ಕಳನ್ನು ನೆಹರು, ಪಟೇಲ, ಪತಿ ಮೌಂಟಬ್ಯಾಟನ್ ಮೊದಲಾದವರೆಲ್ಲ ಹೊತ್ತು ತಂದರು. ಕೊನೆಗೆ ಮೌಂಡಬಾಟನ್ನರು ಸೈನ್ಯಕ್ಕೆ ಆಜ್ಞಾಪಿಸಿ ಜನರನ್ನು ತಡೆವಂತೆ ಮಾಡಿದರು. ಸಂಜೆಯ ಹೊತ್ತಿಗೆ ಪಶ್ಚಿಮ ದಿಗಂತವು ಕೆಂಬಣ್ಣವೆಂದ ಪ್ರಜ್ವಲಿಸುತ್ತಿರಲು, ಮಹಾತ್ಮರ ಚಿತೆಯ ಅಗ್ನಿಜ್ವಾಲೆ ಪ್ರಜ್ವಲಿಸಿತು "ಮಹಾತ್ಮರು ಅಮರರಾದರು" ಎಂಬ ಜನನಿನಾದವು ದಶದಿಕ್ಕುಗಳನ್ನು ವ್ಯಾಪಿಸಿತು. ಸಂಜೆ ಆರು ಗಂಟೆಗೆ ಅವರ ಪಾರ್ಥಿವ ಶರೀರ ಭಸ್ಮೀಭೂತವಾಯಿತು. ಇನ್ನಿದ್ದು ಫಲವಿಲ್ಲವೆಂದು ಸೂರ್ಯನೂ ಅಸ್ತಂಗತನಾದನು.

——)0(——

# ಕಾಂಗ್ರೆಸ್ಸಿನ ಘಟನೆ

## ಮಹಾತ್ಮರ ಕೊನೆಯ ಸೂಚನೆ

ಮಹಾತ್ಮ ಗಾಂಧೀಜಿಯವರು "ಹರಿಜನ" ದಲ್ಲಿ ಬರೆದ ಕೊನೆಯ "ಅಗ್ರಲೇಖ" ದಲ್ಲಿ ಅವರು "ಕಾಂಗ್ರೆಸ್ಸಿನ ಸ್ಥಾನ" ಎಂಬ ವಿಚಾರವನ್ನು ಚರ್ಚಿಸಿ ಹೀಗೆ ಬರೆದಿದ್ದಾರೆ:—

"ಅ. ಭಾ. ರಾಷ್ಟ್ರೀಯ ಕಾಂಗ್ರೆಸ್ಸು ದೇಶದಲ್ಲಿ ಅತಿ ಹಳೆಯ ರಾಷ್ಟ್ರೀಯ ರಾಜಕೀಯ ಸಂಸ್ಥೆ. ಅಹಿಂಸಾತ್ಮಕವಾದ ಅನೇಕಾನೇಕ ಹೋರಾಟಗಳಿಂದ ದೇಶದ ಸ್ವಾತಂತ್ರ್ಯವನ್ನು ಸಾಧಿಸಿದ ಈ ಸಂಸ್ಥೆಯು ಅಳಿಯಬಾರದು. ಅದು ಕೇವಲ ದೇಶದೊಂದಿಗೇ ಸಾಯಬಲ್ಲದು. ಜೀವಿಸುವದೆಲ್ಲ ಬೆಳೆಯುವದು ಇಲ್ಲವೆ ಸಾಯುವದು. ಕಾಂಗ್ರೆಸ್ಸು ರಾಜಕೀಯ ಸ್ವಾತಂತ್ರ್ಯವನ್ನು ದೊರಕಿಸಿದೆ. ಆದರೆ ಅದಿನ್ನೂ ಆರ್ಥಿಕ, ಸಾಮಾಜಿಕ, ಹಾಗೂ ನೈತಿಕ ಸ್ವಾತಂತ್ರ್ಯವನ್ನು ದೊರಕಿಸಬೇಕಾಗಿದೆ. ಇವು ರಾಜಕೀಯ ಸ್ವಾತಂತ್ರ್ಯ ಸಾಧನೆಗಿಂತಲೂ ಕಠಿನ ಸಿದ್ಧಿಗಳು. ಏಕೆಂದರೆ ಇವು ರಚನಾತ್ಮಕ ಕಾರ್ಯಗಳಾಗಿದ್ದು ರಾಜಕೀಯ ವಿಚಾರದಷ್ಟು ಭಾವನಾಪೂರ್ಣವಾದುದಲ್ಲ. ಸರ್ವಾಂಗ ಪೂರ್ಣವಾದ ರಚನಾತ್ಮಕ ಕಾರ್ಯಕ್ಕೆ ಲಕ್ಷಾಂತರ ಜನರ ಶಕ್ತಿ ಸಂಚಯ ವಿನಿಯೋಗವಾಗಬೇಕಾಗುವದು. ಪ್ರಥಮ ಹಾಗೂ ಅವಶ್ಯಕವಾದ ಸ್ವಾತಂತ್ರ್ಯ ಭಾಗವನ್ನು ಕಾಂಗ್ರೆಸ್ಸು ಸಾಧಿಸಿದೆ. ಕಠಿಣ ಕಾರ್ಯವಿನ್ನೂ ಉಳಿದಿದೆ. ಪ್ರಜಾಪ್ರಭುತ್ವದ ಕಠಿಣ ಸಾಧನೆಯ ಮಾರ್ಗಕ್ರಮಣದಲ್ಲಿ ಅದು ಸ್ವಾರ್ಥಮಯವಾದ, ನಾಮ ಮಾತ್ರ ಪ್ರಜಾಪ್ರಭುತ್ವ ತತ್ವಾಚರಣೆಯ ಸಂಘ-ವ್ಯಕ್ತಿಗಳ ಅಸ್ತಿತ್ವಕ್ಕೆ ಅವಕಾಶವನ್ನುಂಟು ಮಾಡಿಕೊಟ್ಟಿದೆ. ಈ ಹೊಲಸಿನಿಂದ ಹೊರಕ್ಕೆ ಬರುವದು ಹೇಗೆ? ಒಂದು ಕೋಟಿಗಿಂತಲೂ ಹೆಚ್ಚಿಗೆ ಸದಸ್ಯರನ್ನು ಸೇರಿಸಿಕೊಳ್ಳುವ ತನ್ನ ಯಾದಿಯನ್ನು ಕಾಂಗ್ರೆಸ್ಸು ಇನ್ನು ವರ್ಜಿಸಬೇಕು. ದೇಶದ ಮತದಾರರಾದ ಎಲ್ಲ ಸ್ತ್ರೀ-ಪುರುಷರನ್ನೊಳಗೊಂಡ ಯಾದಿಯನ್ನದು ಇಟ್ಟುಕೊಳ್ಳಬೇಕು. ಸುಳ್ಳು ಹೆಸರಿನ ಸೇರ್ಪಡೆ ಅಥವಾ ನ್ಯಾಯವಾದ ಹೆಸರಿನ ಬಾರದಿರುವಿಕೆ ಇವು ಸಂಭವಿಸದಂತೆ ಕಾಂಗ್ರೆಸ್ಸು ನೋಡಿಕೊಳ್ಳಬೇಕು. ತನ್ನ ವೈಯಕ್ತಿಕ ಯಾದಿಯಲ್ಲಿ ಅದು ರಾಷ್ಟ್ರದ ಸೇವಕರ ಹೆಸರುಗಳನ್ನಿಟ್ಟುಕೊಳ್ಳಬೇಕು. ಈಗ ಇಂಥವರು ಕೇವಲ ಪಟ್ಟಣಗಳಿಂದ ಬರುವವರಾಗಿದ್ದಾರೆ. ಹಳ್ಳಿ-ಹಳ್ಳಿಗಳಿಂದ ಇಂಥ ಜನರು ದೊರೆಯುವಂತಾಗಬೇಕು. ಈ ಸೇವಕರು ಕಾಯದೆ ಬದ್ಧವಾದ ಮತದಾರರ ಸೇವೆಮಾಡಬೇಕು. ತಂತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಬೇಕು. ಮತದಾರರಲ್ಲಿ ಅನೇಕ ಪಕ್ಷಗಳು, ವ್ಯಕ್ತಿಗಳು ಪ್ರಚಾರ ಮಾಡುವರು. ಯೋಗ್ಯರಾದವರು, ಶ್ರೇಷ್ಠರು ವಿಜಯಶಾಲಿಗಳಾಗುವರು. ಇಂಥ ಯೋಗ್ಯತೆಯ ಸಂಪಾದನೆಯಿಂದ ಮಾತ್ರವೇ ಕಾಂಗ್ರೆಸ್ಸು ತಾನೀಗ ಕಳೆದುಕೊಳ್ಳುತ್ತಿರುವ ವರ್ಚಸ್ಸು, ಸ್ಥಾನಗಳನ್ನು ಪುನಃ ದೊರಕಿಸಿಕೊಳ್ಳಬಲ್ಲದು. ನಿನ್ನೆ ಮೊನ್ನೆಯವರೆಗೂ ಕಾಂಗ್ರೆಸ್ಸು ರಾಷ ಪ.. ದೇವರ ಸೇವಕನಾಗಿದ್ದಿತು. ಈಗ ಅದು ತಾನು ಕೇವಲ ದೇವರ ಸೇವಕ, ಇನ್ನೇನೂ ಅಲ್ಲ ಎಂಬುದನ್ನು ಜಗತ್ತಿಗೆ ಸಾರಲಿ; ತನ್ನಲ್ಲಿ ನಂಬಿಗೆಯನ್ನುಂಟು ಮಾಡಿಕೊಳ್ಳಲಿ. ರಾಜಕೀಯ ಪ್ರಭುತ್ವ ಸಂಪಾದನೆಯ ಹೋರಾಟದಲ್ಲಿ ಅದು ತನ್ನನ್ನು ತೊಡಗಿಸಿಕೊಂಡಿದ್ದಾದರೆ. ಒಂದು ದಿನ ಅದು ತನಗೆ ಅಸ್ತಿತ್ವವೇ ಇಲ್ಲವೆಂಬುದನ್ನು ಕಂಡುಕೊಳ್ಳುವದು. ಆ ಕ್ಷೇತ್ರದಲ್ಲಿ ಈಗ ಇದಕ್ಕೊಂದಕ್ಕೆ ಸ್ಥಾನವಿಲ್ಲದಿರುವದು ಪರಮಾತ್ಮನ ಕೃಪೆಯೇ ಸರಿ. ಭವಿಷ್ಯತ್ತಿನ ಚಿತ್ರದ ಅಸ್ಪಷ್ಟ ಕಲ್ಪನೆಯನ್ನು ನಾನೀಗ ರೂಪಿಸಲೆತ್ನಿಸಿದ್ದೇನೆ. ನನಗೆ ಆರೋಗ್ಯ . .ಅವಕಾಶಗಳು ದೊರೆತವಾದರೆ ನಾನೀ ಪತ್ರಿಕೆಯಲ್ಲಿ ರಾಷ್ಟ್ರಸೇವಕರು ಜನತೆಯ ದೃಷ್ಟಿಯಲ್ಲಿ ತಮ್ಮ ಅಂತಸ್ತನ್ನು ಹೇಗೆ ಬೆಳೆಸಿ ಕಾಪಾಡಿಕೊಳ್ಳ ಬಲ್ಲರೆಂಬುದನ್ನು ಚರ್ಚಿಸ ಬಯಸುತ್ತಿದ್ದೇನೆ'

ಗಾಂಧೀಜಿ ಕೊಲೆಗಡಕನ ಗುಂಡಿಗೆ ಆಹುತಿಯಾಗುವ ಕೆಲ ತಾಸುಗಳ ಮುಂಚೆ ಕಾಂಗ್ರೆಸ ಸಂಸ್ಥೆಗೆ ಅವರಿತ್ತ ಕೊನೆಯ ಉಪದೇಶವನ್ನು 'ರೆಕಾರ್ಡು' ಮಾಡಿಕೊಳ್ಳಲಾಯಿತು. ಕಾವಿಚ್ಛಿಸುವ ಮಾದರಿ ಕಾಂಗ್ರೆಸ ಸಂಸ್ಥೆಯ ಅಸ್ತಿತ್ವದ ವಿಚಾರದಲ್ಲಿ ಅವರು ಎರಡು ಪುಟ

ದ ಸೂಚನೆಗಳನ್ನು ಸ್ವತಃ ಬರೆದರು. ಈ ವಿಚಾರವು ಕಾಂಗ್ರೆಸ್ ಅಧ್ಯಕ್ಷರು ಹಾಗೂ ಕಾಂಗ್ರೆಸ್ಸಿನ ಘಟನಾ ಉಪಸಮಿತಿಯ ಸದಿಸ್ಯರಲ್ಲಿ ನಡೆದ ಚರ್ಚೆಯಲ್ಲಿ ಗಮನಕ್ಕೆ ಬಂದಿದ್ದಿತು. ಕಾಂಗ್ರೆಸ್ಸಿನ ಘಟನೆಯ ಮೂಲ ತತ್ವಗಳ ಬಗ್ಗೆ ಈ ವಿಚಾರಗಳೇ ಗಾಂಧೀಜಿಯ ಅಭಿಪ್ರಾಯವೆಂದು ಹೇಳಲಾಗಿದೆ. ಈ ಅಭಿಪ್ರಾಯ ಪತ್ರಿಕೆಯು ಈಗ ಓರ್ವ ಕಾಂಗ್ರೆಸ ದುರೀಣರ ಕೈಲಿದೆ. ಕಾಂಗ್ರೆಸ್ಸು ಜನ ಸೇವಕರಾದವರ ಒಂದು ಸಂಘವಾಗಬೇಕು. ಅದು ಅಹಿಂಸಾ ತತ್ವಬದ್ಧವಾಗಿದ್ದಿರದ ಅರ್ಧ ಸೈನಿಕ ಸಂಸ್ಥೆಯಂತಿರಬೇಕು, ಈಗಿನ ಕಾಂಗ್ರೆಸ್ಸು ವಿಸರ್ಜಿಸಲ್ಪಟ್ಟು ಆರ್ಥಿಕ, ಸಾಮಾಜಿಕ, ನೈತಿಕ ಸ್ವಾತಂತ್ರ್ಯವನ್ನು ದೊರಕಿಸಲು ಜನತೆಗೆ ಸಹಾಯಮಾಡುವ ಜನತಾಸೇವಕರ ಹೊಸ ಸಂಸ್ಥೆಯು ಹುಟ್ಟಿಕೊಂಡರೂ ಅಡ್ಡಿಯಿಲ್ಲ. ಕಾಂಗ್ರೆಸ್ಸು ತಂತಮ್ಮ ನಾಯಕರನ್ನಾರಿಸಿಕೊಳ್ಳುವ ಕಾರ್ಯಕರ್ತರಿಂದ ಕೂಡಿರಬೇಕು, ಇಂಥ ನಾಯಕರು ಅ. ಭಾ. ನಾಯಕನೊಬ್ಬನನ್ನು ಆರಿಸಿಕೊಂಡು ಅವನ ಆಜ್ಞಾನುವರ್ತಿಗಳಾಗಬೇಕು. ನಿಜವಾದ ಸೇವಕನು ಯಾವಾಗಲೂ ನಿರ್ವ್ಯಸನಿ, ಖಾದಿಧಾರಿ, ಸರ್ವಮತಸಹಿಷ್ಣುತೆಯುಳ್ಳವ, ಜಾತಿ ಮತ ಬೇಧವಿಲ್ಲದವನಾಗಿರಬೇಕೆಂದು ಯಾವಾಗಲೂ ನನ್ನ ಮತ. ಕಾರ್ಯಕರ್ತರು ಹಳ್ಳಿಗಳ ಉದ್ಧಾರಕ್ಕಾಗಿ, ನಿರಕ್ಷರತಾ ನಿವಾರಣೆಗಾಗಿ ಆರೋಗ್ಯವರ್ಧನೆಗಾಗಿ ದುಡಿಯಬೇಕು. ಈಗ ಸ್ವಯಂಪ್ರೇರಣೆಯಿಂದ ಇಂಥ ಕಾರ್ಯರಂಗದಲ್ಲಿ ದುಡಿಯುತ್ತಿರುವ ಅ. ಭಾ, ಚರಕಾ ಸಂಘ, ಗ್ರಾಮೋದ್ಯೋಗ ಸಂಘ, ಮೊದಲಾದವುಗಳೆಲ್ಲವೂ ಕಾಂಗ್ರೆಸ್ಸಿನಲ್ಲಿ ಸೇರ್ಪಡೆಯಾಗಬೇಕು", ಎಂದು ಗಾಂಧೀಜಿ ಬರೆದಿರುವ ಪತ್ರಿಕೆಯ ಅಭಿಪ್ರಾಯವಿದೆ.

**ಗಾಂಧಿ-ಕಸ್ತೂರಬಾ**

**೧೯೧೪ ರಲ್ಲಿ ದಕ್ಷಿಣ ಆಫ್ರಿಕದಿಂದ ಬೀಳ್ಕೊಡುವ ಸಮಾರಂಭ**

# ಗಾಂಧೀಜಿ ಮರಣ ನಿರೀಕ್ಷಿಸಿದ್ದರೆ? ★

## ಪಾದಧೂಳಿ ಸಂಗ್ರಹಿಸಿದ ಕೊಲೆಗಡಕ

### ಕುಮಾರಿ ಮನು ಗಾಂಧಿಯ ಹೇಳಿಕೆ.

ಗಾಂಧೀಜಿಯವರ ಮರಣ ಸಮಯದಲ್ಲಿ ಅವರ ಬಳಿ ಇದ್ದ ಅವರ ಮೊಮ್ಮಗಳಾದ ಕುಮಾರಿ ಮನು ಗಾಂಧಿಯವರು "ಯು ಪಿ ಐ" ನ ವಿಶೇಷ ಪ್ರತಿನಿಧಿಯೊಡನೆ, ನಡೆದ ಘಟನೆಗಳನ್ನು ಕುರಿತು ಈ ರೀತಿ ಹೇಳಿದರು—

"ಗಾಂಧೀಜಿ ಪ್ರಾರ್ಥನಾ ವೇದಿಕೆಯ ಮೆಟ್ಟಲನ್ನು ಹತ್ತುತ್ತಿದ್ದಾಗ ಕೊಲೆಗಡಕನು ವೇದಿಕೆಯ ರಸ್ತೆಯ ಮಗ್ಗುಲಲ್ಲಿ ಸಾಲಾಗಿ ನಿಂತಿದ್ದ ಜನರ ಮಧ್ಯದಿಂದ ಹಾಯ್ದು ಬಂದು ಗಾಂಧೀಜಿಯ ಮುಂದೆ ಮಣಿದು ನಿಂತನು. ಆತ ಗಾಂಧೀಜಿಯ ಪಾದದೂಳಿಯನ್ನು ಸಂಗ್ರಹಿಸಲೆತ್ನಿಸುತ್ತಿದ್ದನು. ನಾನಾತನಿಗೆ ಹಾಗೆ ಮಾಡದಿರಲು ಹೇಳಿದೆ, ನಾನಾತನ ಎಡಗೈಯನ್ನು ಹಿಡಿದೆ ಆತ ನನ್ನನ್ನು ಬದಿಗೆ ಸರಿಸಿ ಗುಂಡು ಹಾರಿಸಲಾರಂಭಿಸಿದನು. ಮೊದಲನೆಯ ಏಟಿಗೆ ಗಾಂಧೀಜಿ "ಹಾ ರಾಮ! ಹಾರಾಮ!" ಎಂದು ಅಂದರು. ಮತ್ತೆರಡು ಗುಂಡಿನೇಟುಗಳು ಅವರಿಗೆ ಬಡಿದು ಅವರು ನೆಲಕ್ಕುರುಳಿದರು. ಗಾಂಧೀಜಿಯ ಕನ್ನಡಕ, ಕಾಲ್ಜೋಡುಗಳು ಸಿಡಿದು ಬಿದ್ದವು. ಹೊಟ್ಟೆಯ ಗಾಯದಿಂದ ರಕ್ತವು ಧಾರಾಕಾರವಾಗಿ ಹರಿಯಿತು. ಗಾಂಧೀಜಿಯನ್ನು ಅವರ ಕೋಣೆಗೆ ಒಯ್ಯಲಾಯಿತು. ಅಷ್ಟರಲ್ಲಿ ಅವರು ಸಂಪೂರ್ಣವಾಗಿ ಎಚ್ಚರದಪ್ಪಿದ್ದರು. 20 ಮಿನಿಟುಗಳ ನಂತರ ಅವರ ಪ್ರಾಣಶಕ್ತಿ ಹಾರಿಹೋಯಿತು

ನಿನ್ನೆ ರಾತ್ರಿ ಗಾಂಧೀಜಿಗೆ ತಮ್ಮ ಈ ಅಂತ್ಯದ ಕಲ್ಪನೆ ಉಂಟಾದಂತೆ ಕಂಡುಬಂದಿತು. ಮಲಗುವ ಮುಂಚೆ ಅವರು ತಮ್ಮ ಮೊಮ್ಮಕ್ಕಳೆದುರು "ಇದು ವಿಚಿತ್ರವಾದ ಜಗತ್ತು ನಾನೀ ನಾಟಕವನ್ನು ಎಷ್ಟು ಕಾಲ ಅಭಿನಯಿಸಬೇಕ.?" ಎಂಬರ್ಥದ ಗುಜರಾಥಿ ಹಾಡೊಂದು ಹಾಡಿದರು,

ಬೆಳಗಿನ ಝಾವ 3-30 ಘಂಟೆಗೆ ಪ್ರಾರ್ಥನಾನಂತರ ಗಾಂಧೀಜಿ ತಮ್ಮ ಸಹವರ್ತಿಯಾದ ಶ್ರೀ ಭಿರ್ಷರವರಿಗೆ "ಎಲ್ಲ ಮಹತ್ವದ ಪತ್ರಗಳನ್ನು ಕೊಟ್ಟುಬಿಡು" ಅವುಗಳನ್ನೆಲ್ಲ ಇಂದೇ ನೋಡಿ ಮುಗಿಸುತ್ತೇನೆ" ಎಂದಿದ್ದರು. —(0)—

**ಕಾಶ್ಮೀರ;—**

ಈ ಸಮಸ್ಯೆಯಲ್ಲಿ ಬ್ರಿಟಿಷ್ ಪ್ರತಿನಿಧಿಗಳು ಮತ್ತು ಭದ್ರತಾಮಂಡಲದ ಅಧ್ಯಕ್ಷರು ಪಾಕಿಸ್ಥಾನದ ಧ್ಯೇಯವನ್ನು ಸಮರ್ಥಿಸುವಂತೆ ಕಾಣಿಸುತ್ತದೆ. ಭಾರತ ಪ್ರತಿನಿಧಿಗಳು ಶಾಂತಿಯ ಪ್ರಸ್ತಾಪಿತವಾಗದೆ. ಜನಗಣನೆಯ ಅಸಾಧ್ಯವೆಂದಿದ್ದಾರೆ ಪಾಕಿಸ್ತಾನವು ಮೊದಲು ಜನಗಣನೆ ನಡೆಯಬೇಕೆಂದು ಸೂಚಿಸಿದ್ದಾರೆ. ಪರಸ್ಪರ ಹೇಳಿಕೆಗಳನ್ನು ಸದಸ್ಯರು ಅಭ್ಯಸಿಸಲು ಕಾಲಾವಕಾಶವನ್ನು ಕೊಡಲಾಗಿದೆ.

ಕಾಶ್ಮೀರದಲ್ಲಿ ಗುಡ್ಡಗಾಡು ಜನರ ಚಟುವಟಿಕೆ ವಿಶೇಷವಾಗಿದೆ. ಭಾರತ ಸೈನಿಕರು ಇವರನ್ನೆದುರಿಸಿದರು.

ಅಪಹೃತಸ್ತ್ರೀಯರು ಹಿಂದೂಸ್ತಾನದಲ್ಲೇ ಇರಲಿ ಪಾಕಿಸ್ತಾನದಲ್ಲೇ ಇರಲಿ ಅವರನ್ನು ಬಿಡುಗಡೆ ಮಾಡಿ ಸಂಬಂಧಿಸಿದ ಕುಟುಂಬಗಳವರಿಗೆ ಒಪ್ಪಿಸಬೇಕೆಂದು ಎರಡೂ ಸ್ವತಂತ್ರ ರಾಷ್ಟ್ರಗಳ ಪ್ರಮುಖ ಸ್ತ್ರೀಯರು ಮನವಿ ಮಾಡಿದ್ದಾರೆ.


## ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಾ ರಾಷ್ಟ್ರಭಾಷೆ ಪ್ರವೇಶಿಕ ವಿಶಾರದ ವಿದ್ವಾನ್ ವಗೈರೆ ಪರೀಕ್ಷೆಗಳಿಗೆ ಕೂಡಲು ತಕ್ಕ ಸಲಹೆ ಕೊಡುತ್ತೇವೆ ಪರ್ಕ್ಷಳನವರು ಮಾಹಿತಿಗಾಗಿ ಸ್ಟಾಂಪಿಟ್ಟು ಬರೆಯಿರಿ.

**ಟಿ. ಬಿ. ಕೇಶವರಾವ್**

ಜಿಲ್ಲಾ ಹಿಂದೀ ಪ್ರೇಮೀಮಂಡಲ ಬಳ್ಳಾರಿ.

# ದೊಡ್ಡ ವ್ಯಾಪಾರಿಗಳ ಹೊಸ ಜಾಲ....ಉತ್ಪಾದನೆಯ ಹೊಂಚು

## ಚಾಣಕ್ಯ ನೀತಿ— ವಿಜ್ಞಾನದ ದುರುಪಯೋಗ.

'ಉತ್ಪಾದನೆಯನ್ನು ಹೆಚ್ಚಿಸಬೇಕು ಮತ್ತು ಸಾಮಾನ್ಯ ಜನತೆಯ ಜೀವನ ಮಟ್ಟವನ್ನು ಏರಿಸಬೇಕು' ಎಂಬ ಮಾತುಗಳು ಬಹಳ ಕೇಳಬರುತ್ತವೆ. ಬೇಕಾದಾಗೆಲ್ಲ ಈ ಎರಡು ಮಾತುಗಳನ್ನು ಎಲ್ಲರೂ ಪರಸ್ಪರ ಆಡಿಕೊಳ್ಳುತ್ತಾರೆ. ಆದರೆ ಈ ಮಾತುಗಳ ಅರ್ಥವೇನೆಂಬುದನ್ನು ಯಾರೂ ಸರಿಯಾಗಿ ನಿರ್ದೇಶಿಸಿಲ್ಲ. ಆಲಸರೂ ಅವಿಚಾರಿಗಳೂ ಆದ ಸಾರ್ವಜನಿಕರಿಗೆ ಸಮಾಧಾನ ಮಾಡಲು ಇವು ತಕ್ಕ ಕೂಗುಗಳು. ಅವರು ಸಾಮಾನ್ಯವಾಗಿ ಬಹಳ ಮಾತಾಡಿ ಬಿಟ್ಟರೆ ಅದೇ ನಿಜವೆಂದು ನಂಬಿ ಬಿಡುತ್ತಾರೆ.

ಜನರೆಲ್ಲ ಹಸಿವಿನಿಂದ ಬಾಯಿ ಬಾಯಿ ಬಿಡುತ್ತಿರುವ ಮತ್ತು ಬಟ್ಟೆಯಿಲ್ಲದೆ ನರಳುತ್ತಿರುವ ನಾಡಾದ ಭಾರತದಲ್ಲಿ ಈ ಮಾತುಗಳಿಗೆ ಕಡೆಯ ಪಕ್ಷ ಜೀವನಕ್ಕೆ ಅನಿವಾರ್ಯವೆನಿಸುವ ವಸ್ತುಗಳೆನಿಸಿದ ಅನ್ನ ವಸ್ತ್ರಗಳನ್ನಾದರೂ ಒದಗಿಸಬೇಕು ಎಂದು ಅರ್ಥವಾಗುತ್ತದೆ. ಒಂದು ಊಟ ಸಹ ಸಿಗದ ಈ ಕಾಲದಲ್ಲಿ ದಿನಕ್ಕೆ 2 ಊಟಗಳನ್ನು ಒದಗಿಸುವುದರತ್ತ ನಮ್ಮ ಪ್ರಯತ್ನ ಸಾಗಬೇಕು. ಮತ್ತು ನಮ್ಮ ಜನರ ಸೌಂದರ್ಯ ದೃಷ್ಟಿಯನ್ನು ತೃಪ್ತಿಪಡಿಸಲಾಗದಿದ್ದರೂ ಅವರಿಗೆ ಹವೆಯಿಂದ ರಕ್ಷಿಸಿಕೊಳ್ಳುವಷ್ಟರ ಮಟ್ಟಿಗಾದರೂ ಬಟ್ಟೆಯನ್ನು ಒದಗಿಸಲು ನಾವು ಪ್ರಯತ್ನಿಸಬೇಕು.

### ಸ್ವಾರ್ಥಿಗಳಾದ ಉದ್ಯಮದಾರರು

ಜನರ ಅವಶ್ಯಕತೆಯನ್ನು ಪೂರಯಿಸುವುದಕ್ಕಿಂತ ತಮ್ಮ ಉದ್ಯಮಗಳನ್ನು ಬೆಳೆಸುವುದರಲ್ಲಿಯೇ ಉದ್ಯಮದಾರರು ಇಂದು ಆಸಕ್ತರಾಗಿರುವಂತೆ ತೋರುತ್ತದೆ. ಏಕೆಂದರೆ, ಚಿರಸ್ಥಾಯಿಯಾಗಿ ಭಾರತವು ತನ್ನ ಉದ್ಯಮಗಳನ್ನು ನೆಲೆನಿಲ್ಲಿಸಬೇಕಾದರೆ ಒಳನಾಡಿನಲ್ಲಿ ಕೆಲಕಾಲ ಬಹಳ ತೊಂದರೆಯಾದರೂ ಅದನ್ನು ಸಹಿಸಿಕೊಂಡು ಹೊರನಾಡಿಗೆ ನಿರ್ಯಾತವನ್ನು ಪ್ರಾರಂಭಿಸಬೇಕೆಂದು ಹೇಳುತ್ತಾರೆ. ಅಲ್ಲದೆ, ಭಾರತೀಯ ಕೈಗಾರಿಕೆ ಮತ್ತು ಉದ್ಯಮಗಳ ಉತ್ಪಾದನೆಯನ್ನು ಹೊರಗೆ ಕಳುಹಿಸದ ಹೊರತು ಇಲ್ಲಿಯ ಔದ್ಯೋಗಿಕ ಬೆಳವಣಿಗೆಯನ್ನು ದೃಢವಾಗಿ ನೆಲೆಗೊಳಿಸಲು ಸಾಧ್ಯವಿಲ್ಲವೆಂದು ತಮ್ಮ ಖಚಿತಾಭಿಪ್ರಾಯವಿದೆಯೆನ್ನುತ್ತಾರೆ. ಹೀಗೆ ಸರಕಾರವು ನಿರ್ಯಾತ ಧೋರಣ ವಹಿಸಬೇಕೆಂದು ಸಾರುತ್ತಾರೆ.

'ದೋಸೆಯು ನೀನು ತಿಂದಷ್ಟೂ ದೊಡ್ಡದಾಗುತ್ತದೆ' ಎಂಬ ಲಾರ್ಡ್ ಕೆನೀಸ ಉತ್ಪಾದನ ಧೋರಣದ ತತ್ವಗಳ ಆಧಾರದ ಮೇಲೆ ಸರಕಾರವು ತನ್ನ ಔದ್ಯೋಗಿಕ ಯೋಜನೆಯನ್ನು ನಿಲ್ಲಿಸಬೇಕೆಂದು ಉದ್ಯಮದಾರರು ಸಲಹೆ ಮಾಡುತ್ತಾರೆ. ಹಣಕಾಸಿನ ಮಂತ್ರಿಯು ಸಾಮಾಜಿಕ ಉದ್ದೇಶಗಳು ಅಂಥ ಧೋರಣದಿಂದ ಮಾತ್ರ ಸಫಲವಾಗುವುವೆಂದು ಅವರು ನಂಬಿರುವದಾಗಿ ಹೇಳುತ್ತಾರೆ. ಸಾಮಾನ್ಯ ಮನುಷ್ಯರ ಬುದ್ಧಿಗೆ 'ತಿಂದಷ್ಟು ದೋಸೆ ದೊಡ್ಡದಾಗುತ್ತದೆ' ಎಂಬುದು ಎಷ್ಟು ಹಾಸ್ಯಾಸ್ಪದವಾಗಿ ತೋರಿದರೂ ಈ ದೋಸೆಗಳನ್ನು ತಿನ್ನುವ (ಆದರೆ ತನ್ನದಲ್ಲ, ಇನ್ನೊಬ್ಬರದು) ದೇವಮಾನವರು ಅದನ್ನು ನಿಜ ಮಾಡಿ ಕೊಡಬಲ್ಲರು. ಈ ತೋರಿಕೆಯ ಪವಾಡದ ಗುಟ್ಟು ಇಲ್ಲಿದೆ. ಅವರು ಕೇವಲ ಇನ್ನೊಬ್ಬರ ದೋಸೆಯನ್ನೇ ತಿಂದರೆ ಅವರದು ಹಾಗೇ ಉಳಿಯಬೇಕೆನ್ನಿರಿ. ಆದರೆ ಇದನ್ನು ಮಾಡುವ ಕ್ರಮವೆಂದರೆ, ಸಾಮಾನ್ಯವಾಗಿ ನೀನು ತಿನ್ನುವುದಕ್ಕಿಂತ ದೊಡ್ಡ ತುಂಡನ್ನು ಇನ್ನೊಬ್ಬರ ದೋಸೆಯಿಂದ ಕಚ್ಚಿ ತೆಗೆಯುವುದು. ಅದು ಅವರ (ಉದ್ಯಮದಾರರ) ದೋಸೆ ದೊಡ್ಡದಾಗಿ ಬೆಳೆಯುವಂತೆ ಮಾಡುತ್ತದೆ)

### ವಿಜ್ಞಾನದ ದುರುಪಯೋಗ

ಇಂದಿನ ನಾಡಿನ ದೊಡ್ಡ ಪ್ರಮಾಣದ ಉದ್ಯಮಗಳಲ್ಲಿ ಕೈಕೊಂಡ ಕ್ರಮವು ಎಲ್ಲ ರೀತಿಯಿಂದಲೂ ಯೋಗ್ಯವಿದೆ, ಆದರೆ ಪ್ರಗತಿಕವಾಗಿ ಮಾತ್ರ ಇಲ್ಲ. ಅವರು (ಉದ್ಯಮದಾರರು) ವಿಜ್ಞಾನವನ್ನು ವಿನಾಶಕ್ಕಾಗಿ ಬಳಸುತ್ತಿರುವರಲ್ಲದೆ ರಚನೆಗಾಗಿ ಅಲ್ಲ. ಅದು ಹೀಗಿರುವಾಗ, ಉತ್ಪಾದನೆಯನ್ನು ಹೇಗೆ ಹೆಚ್ಚಿಸಬೇಕೆಂ

ಪ್ರಶ್ನೆಯನ್ನು ಪರಿಶೀಲಿಸುವುದು ಯುಕ್ತವಾಗಿದೆ. ಅಕ್ಕಿಯ ಗಿರಣಿಗಳಿಂದ ನಾವು ಅಹಿತಕರವಾದ ಬೆಳ್ಳಕ್ಕಿ (Polished Rice) ಯನ್ನು ಉತ್ಪಾದಿಸುತ್ತಿರುವಾಗ ಅದನ್ನು ಉತ್ಪಾದನವೆಂದು ಕರೆಯಲಾದೀತೆ? ಅದು ಒಕ್ಕಲಿಗ ಬೆಳೆದ ಭತ್ತದ ಹುಟ್ಟುವಳಿಯ ನಾಶವಲ್ಲವೇನು? ಇದೇ ಪ್ರಕಾರ ಸಕ್ಕರೆ ಕಾರಖಾನೆಗಳು ಬಿಳಿಯ ಸಕ್ಕರೆಯನ್ನು ಕಬ್ಬಿನ ಹಾಲಿನಿಂದ ತಯಾರಿಸುತ್ತಿರುವಾಗ, ಆ ಮೂಲಕ ನ್ಯೂನಪೌಷ್ಟಿಕ ಪದಾರ್ಥವನ್ನು ಉತ್ಪಾದಿಸುತ್ತಿರುವಾಗ ಮತ್ತು ಹಾಗೆ ಪುಷ್ಟಿಕರವಾದ ಕಬ್ಬಿನ ಹಾಲನ್ನು ನಿಃಸತ್ವಗೊಳಿಸುತ್ತಿರುವಾಗ ನಾವು ಉತ್ಪಾದನೆಯನ್ನು ಹೆಚ್ಚುಮಾಡುವುದೆಂಬ ಮಾತನ್ನು ಹೇಗೆ ಸರಿಯಾಗಿ ಬಳಸುತ್ತಿರುವೆವು? ಇದು ಕೂಡ ಪ್ರಕೃತಿ ಮಾತೆ ಕೊಟ್ಟವರವನ್ನು ದುರುಪಯೋಗಪಡಿಸಿಕೊಳ್ಳುವದೇ ಅಲ್ಲವೇ? ಕೇವಲ ಪರಿಮಾಣತಃ ಅಲ್ಲದೆ ಯೋಗ್ಯತೆಯ ಪ್ರಕಾರವೂ ಮನುಷ್ಯ ಪ್ರಯತ್ನವು ಉತ್ಪಾದನೆಯನ್ನು ಹೆಚ್ಚು ಮಾಡಿದರೆ ಮಾತ್ರ ಪ್ರಾಕೃತಿಕ ವಸ್ತುಗಳಲ್ಲಿ ನಿಜವಾದ ಉತ್ಪಾದನ ವೃದ್ಧಿಯುಂಟಾದೀತು. ತನ್ನ ಸ್ವಪ್ರಯತ್ನದಿಂದ ಒಕ್ಕಲಿಗನು ಒಂದು ಬೀಜ ಬಿತ್ತಿ ನೂರನ್ನು ಬೆಳೆದರೆ ಆಗ ಅವನು ಹುಟ್ಟುವಳಿ ಹೆಚ್ಚಿಸಿದನೆಂದು ನಾವು ಹೇಳಿದರೆ ಸಮರ್ಥನೀಯವಾದೀತು. ಆದರೆ ಗಿರಣಿ ಒಡೆಯರ ಪ್ರಯತ್ನಗಳನ್ನು ಅವಲೋಕಿಸಿ ಅವರ ಉತ್ಪಾದನೆಯನ್ನು ಅಳೆದು ವರಗಳೊಡನೆ ಹೋಲಿಸಿ ನೋಡಿದರೆ ಯಂತ್ರಗಳನ್ನು ಮಾನವನು ಉತ್ಪಾದನೆ ಹೆಚ್ಚಿಸುವುದಕ್ಕಿಂತ ಹೆಚ್ಚಾಗಿ ಉತ್ಪನ್ನವನ್ನು ಹಾಳುಮಾಡಲು ಬಳಸಿದ್ದಾನೆ ಎಂದೇ ಹೇಳಬೇಕಾಗುತ್ತದೆ.

### ಬೆಳೆಗಳ ಬೇರ್ಪಾಟು

ಬಿಹಾರ ಮತ್ತು ಸಂಯುಕ್ತ ಪ್ರಾಂತಗಳ ಬಹುಭಾಗಗಳಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕಬ್ಬಿನ ಬೆಳೆಗಾಗಿ ಬಳಸಲಾಗಿವೆ. ಮೊದಲು ಇವು ಬಂಜೆ ಭೂಮಿಗಳಾಗಿರಲಿಲ್ಲ. ಸಾಮಾನ್ಯ ಬೆಳೆಗೆ ಕಬ್ಬಿನದು ಪೂರಕವಾಗಿತ್ತು. ಹಾಗಿದ್ದರೆ ಮಾತ್ರ ನಾವು ಅದನ್ನು ಹುಟ್ಟುವಳಿಯ ಉತ್ಕರ್ಷ ಎನ್ನಬಹುದು.

ಕಬ್ಬಿನ ಸಾಗುವಳಿ ಪ್ರಾರಂಭವಾಗುವ ಮೊದಲು ಬಿಹಾರಿಗಳು ತಮ್ಮ ಭೂಮಿಯನ್ನು ಭತ್ತದ ಬೆಳೆಗಾಗಿ ಉಪಯೋಗಿಸುತ್ತಿದ್ದರು. ಆದರೆ ಧಾನ್ಯಗಳೀಗ ಬೇರ್ಪಟ್ಟಿವೆ. ಆದರ ಫಲವಾಗಿ ಅವರು ಕಬ್ಬನ್ನು ಬೆಳೆದು ಅಕ್ಕಿಗೆ ಬ್ರಹ್ಮದೇಶವನ್ನವಲಂಬಿಸಿದ್ದಾರೆ. ಮತ್ತು ಬ್ರಹ್ಮೀ ಅಕ್ಕಿಯು ಹಳ್ಳಕ್ಕಿಯಾಗಿ ಬರುತ್ತದೆ. ಅಂದರೆ ನಿಃಸತ್ವವಾಗಿ, ಶುದ್ಧ ಗಂಜಿ ಸತ್ವವುಳ್ಳದ್ದಾಗಿ ಬರುತ್ತದೆ. ಕಾರಖಾನೆದಾರರ ಬ್ಯಾಂಕಿನ ಧನ ಸಂಗ್ರಹವನ್ನು, ಕಬ್ಬಿನ ಬೆಳೆ ಎಷ್ಟೇ ಹೆಚ್ಚಿಸಿರಲಿ, ನಾವು ನಮ್ಮ ಕಲ್ಪನೆಯನ್ನು ಎಷ್ಟೇ ಹಿಗ್ಗಿಸಿದರೂ ಕೋಟ್ಯವಧಿ ಜನತೆಗೆ ತಾವೇ ಬೆಳೆದ ಪೌಷ್ಟಿಕ ಅಕ್ಕಿ ಸಿಗದಂತೆಯೂ ಹೊರಗಿನಿಂದ ತರಿಸಿದ ಬೆಳ್ಳಕ್ಕಿಗೆ ಅವರು ಕೈಯೊಡ್ಡುವಂತೆಯೂ ಮಾಡುತ್ತಿರುವಾಗ ನಾವು ಹೇಗೆ ಹುಟ್ಟುವಳಿ ಹೆಚ್ಚಿಸಿದ್ದೇವೆಂದು ಸಾಧಿಸಲಾಯಿತು?

ಆಹಾರ ಧಾನ್ಯದ ಬೆಳೆ ಬೆಳೆಯುವುದನ್ನು ಬಿಟ್ಟು ಗಿರಣಿಗೆ ಬೇಕಾದ ಕಚ್ಚಾ ಮಾಲುಗಳ ತಯಾರಿಕೆಗೆ ಕೈಹಾಕಿರುವುದು ದೇಶಕ್ಕೊಂದು ಕೇಡು ಬಗೆದಂತಲ್ಲದೆ ಜನರ ಆರೋಗ್ಯಕ್ಕೂ ಹಾನಿಕರವಾಗಿದೆ. ಆಹಾರ ಧಾನ್ಯ ಬೆಳೆಯುವದನ್ನು ಬಿಟ್ಟು ಹತ್ತಿಯನ್ನು ಬೆಳೆದು ಗಿರಣಿಗಳಿಗೆ ಕೊಟ್ಟರೆ ಮತ್ತು ಹೊಗೆಸೊಪ್ಪು ನೆಲಗಡಲೆಗಳನ್ನು ನಿರ್ಯಾತಕ್ಕಾಗಿ ಬೆಳೆದು ಕೊಟ್ಟರೆ ಅದು ಹುಟ್ಟುವಳಿಯನ್ನು ಹೆಚ್ಚಿಸಿದಂತಾಗದು. ಹೆಚ್ಚೆಂದರೆ ಅದು ಸಣ್ಣ ಕಳ್ಳತನವೆನಿಸೀತಲ್ಲದೆ ಉತ್ಪಾದನವೆನ್ನಲಾರದು.

### ಅಧಿಕೋತ್ಪಾದನೆ

ಮೇಲಿನಂತೆ ಮಲಬಾರಿನಲ್ಲೂ ಬತ್ತದ ಗದ್ದೆಗಳಲ್ಲಿ ತೆಂಗನ್ನು ಬೆಳೆಸಲಾಗುತ್ತದೆ. ಆ ತೆಂಗಿನ ಕಾಯಿಗಳಾದರೂ ಮನುಷ್ಯರ ಬಳಕೆಗಾಗಿ ಅಲ್ಲ. ಗಿರಣಿಗಳಲ್ಲಿ ಎಣ್ಣೆ ತಯಾರಿಸಿ ಸಾಬೂನು ಮಾಡುವುಕ್ಕಾಗಿ. ಎಷ್ಟೇ ಪರಿಮಳದ ಸಾಬೂನುಗಳನ್ನು ತಯಾರಿಸಿದರೂ ಜನರ ಹೊಟ್ಟೆಯ ಮೇಲೆ ಹೊಡೆದು ಮಾಡುವ ಈ ಕೆಲಸದಿಂದ ಹುಟ್ಟುವಳಿ ಹೆಚ್ಚಿಸಿದಂತಾದೀತೆ? ಅವರಿಗಿಂದು ಬ್ರೆಜಿಲ್ಲಿನ ಹುಲ್ಲಕ್ಕಿಯನ್ನು ತರಿಸಿಕೊಡಲಾಗುತ್ತಿದೆ. ಇದು ಗಿರಣಿಒಡೆಯರ ಪ್ರಯತ್ನದ ಸಾಫಲ್ಯ!

### ಕ್ಷಾಮಗಳ ನಿಜವಾದ ಕಾರಣ

ಈ ಪ್ರಕಾರ ಆಹಾರ ಧಾನ್ಯಗಳನ್ನು ಬೆಳೆಯುವ ಕೆಲಸವನ್ನು ಮೂಲೆಗೊತ್ತಿ ಪೋಕೇ ಮಾಲುಗಳ ತಯಾರಿಕೆಗೆ ಬೇಕಾದ ಕಚ್ಚಾ ಸಾಮಾನುಗಳನ್ನು ಬೆಳೆಯ

ಹೋದರೆ ನಾಡಿಗೆ ಮೇಲಿಂದ ಮೇಲೆ ಕ್ಷಾಮವುಂಟಾಗುವುದರಲ್ಲಿ ಆಶ್ಚರ್ಯವೇನು? ನಾವು ನಿಜವಾಗಿ ಉತ್ಪಾದನೆಯನ್ನು ಹೆಚ್ಚಿಸಬೇಕೆಂದಿದ್ದರೆ ಪ್ರಾಥಮಿಕ ಆವಶ್ಯಕತೆಗಳನ್ನು ಜನರಿಗೆ ಇಷ್ಟರೊಳಗೇ ಪೂರೈಸಿಕೊಟ್ಟಿರಬೇಕಾಗಿತ್ತು. ಭಾರತದಂಥ ಒಕ್ಕಲುತನದ ನಾಡು ಅನ್ನಾನ್ನಗತಿಕವಾದುದು ಹೀಗೆ ನಾವು ತಪ್ಪು ಮಾರ್ಗದಲ್ಲಿ ಹೆಜ್ಜೆಯಿಟ್ಟುದರಿಂದಲೇ ಅಲ್ಲವೆ?

### ಜೀವನಮಟ್ಟ

ನಿರುದ್ಯೋಗ, ಅರ್ಧೋದ್ಯೋಗದ ಪಿಡುಗು ಹಿಡಿದ ನಮ್ಮ ನಾಡಿನಲ್ಲಿ ಉತ್ಪಾದನ ಕ್ರಮವು ಅದರ ನಿವಾರಣೆಗಾಗಿಯೂ ನೆರವಾಗಬೇಕು. ಈವರೆಗೆ ಉತ್ಪಾದನ ಹೆಚ್ಚಿಸಲು ನಾವು ತೆಗೆದುಕೊಂಡ ಕ್ರಮಗಳಿಂದ ನಿರುದ್ಯೋಗ ಹೆಚ್ಚುವಂತೆ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ Labour saving devices ಶ್ರಮ ಉಳಿತಾಯದ ಯೋಜನೆಗಳು ಎಂದು ಹೇಳುವುದು ನಿಜವಾಗಿ ನೋಡಿದರೆ ಕೆಲಸಗಾರರಿಗೆ ಕೆಲಸ ಸಿಗದಂತೆ ಮಾಡುವ ಮತ್ತು ನಿರುದ್ಯೋಗ ಹೆಚ್ಚಿಸುವ ಯೋಜನೆಗಳೇ ಆಗಿವೆ. ಹೀಗೆ ಬಹು ಪರಿಮಾಣದ ಉತ್ಪಾದನೆ ಮಾಡುವಲ್ಲಿ ಗಿರಣಿದಾರರು ಸಾಮಾನ್ಯರ ಜೀವನಮಟ್ಟವನ್ನು ಅಧೋಗತಿಗಿಳಿಸಿ ಬಿಟ್ಟಿದ್ದಾರೆ.

### ಯೋಗಕ್ಷೇಮ ಗುರಿಯಾಗಲಿ

ಸಾಮಾನ್ಯರ ಉದ್ಧಾರಕ್ಕಾಗಿ, ದೇಶದ ಪ್ರಗತಿಗಾಗಿ ದುಡಿವವರೊಡನೆ ನಮ್ಮ ಸಂಪೂರ್ಣ ಸಹಕಾರವಿದೆ. ಆದರೆ ಅದನ್ನು ಸಾಕಷ್ಟು ಮಾಡಬೇಕೆಂಬುದೇ ನಮ್ಮ ಸಲಹೆ. ವೈಜ್ಞಾನಿಕ ಯಂತ್ರೋಪಕರಣಗಳಿಂದ ಕೇವಲ ಕೆಲವೇ ಜನರು ಕುಬೇರರಾಗುವಂತೆ ಔದ್ಯೋಗಿಕರಣ ನಡೆಯುತ್ತಿದ್ದರೆ ಜನಜೀವನ ಸುಧಾರಿಸದು. ಸ್ವರಾಜ್ಯ ಉದಯವಾದ ಈ ಕಾಲದಲ್ಲಿ ಸಾಮಾನ್ಯರ ಜೀವನದ ಸುಖಶಾಂತಿಗಾಗಿ ನಾವು ಪ್ರಯತ್ನಿಸಬೇಕಲ್ಲವೆ ಬರಿದೆ ಏನಾದರೂ ಒಂದಿಷ್ಟನ್ನು ಹೆಚ್ಚಾಗಿ ತಯಾರಿಸಿ ಬಿಟ್ಟರಾಗಲಿಲ್ಲ. ಈ ಮಾತನ್ನು ಜನ ಸೇವಕರೆಂದು ಬೊಬ್ಬೆ ಹೊಡೆಯುವವರು ಮನಸ್ಸಿಗೆ ತಂದುಕೊಳ್ಳುವರೇ? ಕೇಂದ್ರೀಕರಣ ಪದ್ಧತಿಗಳಿಂದ ಅವರು ಕೇಳುವಂತೆ ಸರ್ವಹಿತ ಸಾಧಿಸುವುದೇ? ಈ ವರೆಗೆ ಅಂಥ ಪದ್ಧತಿಗಳಿಂದ ನಮ್ಮ ಜನರಿಗೆ ಸಂಭವಿಸಿದ ದುಃಖ ದುರಂತಗಳೆಷ್ಟೆಂಬುದನ್ನು ಅವರು ಗಮನಿಸಿದರೆ ಮೇಲಿನ ಮಾತಿನಲ್ಲಿಯ ಸತ್ಯತೆ ತಾನಾಗಿ ಹೊಳೆಯುತ್ತದೆ. ಇದನ್ನು ಗಮನದಲ್ಲಿ ತಂದುಕೊಂಡು ರಾಷ್ಟ್ರ ಸೇವಾಸಕ್ತರು ಉದ್ಯೋಗ, ಧಂಧೆಗಳನ್ನು ಉತ್ಪಾದನೆ ಹೆಚ್ಚಿಸುವ ಗುರಿಯಿಂದ ಸುಧಾರಿಸುವರೆ?

(ಕರ್ಮವೀರ)

## "ಅಪ್ಪಾ ನಮ್ಮಪ್ಪ ನಿನ್ನಮುಖವೆರವಾಯ್ತು!"

ಭಾ.ಪ. ಅಕಟಕ! ಭರತಾಂಬೆ ಪ್ರಿಯಸುತ!
ಸಕಲಸದ್ಗುಣ ಭರಿತ! ದೀನರ
ನಿಕಟಬಾಂಧವ! ಹರಿಜನರಪಿತ! ಶಾಂತಿಸಂಪನ್ನ!
ಸಕಲಜನನುತ ಚರಣ! ದೇಶವ
ನಖಿಳದುಃಖಾಬ್ಧಿಯಲಿ ಕೆಡಹುತ
ಮುಕುತಿಯನು ಪೊಂದಿದನು! ಗತಿಯಿನ್ನೇನು
ಭಾರತವ?

ಕಂ. ಭಾರತಮಾತೆಯ ಕರೆದಳೊ
ನಾರಾಯಣನೊಡನೆ ನಿನ್ನ ದೇಶದ ಸ್ಥಿತಿಯಂ
ಸಾರಲು ಪೋದೆಯೊ? ಅಪ್ಪಾ
ಬಾರೈ! ನಡುಜಲದಿ ಕರವ ಬಿಡುವುದು ಹಿತವೇ

ಭಾ.ಪ. 'ಬಂದೆ ನಿಲ್ಲಿರಿ ಬಾಪೂಜೀಯನು
ಒಂದು ಮಾತನು ಕೇಳಿ ಬರುವೆನು"
ಎಂದುಓಡುತ ಬರುವ ಜವಹಿರನಾಲಿಸಲು ಕಿವಿಯನು
ಇಂದು ಕೇಳಲು ಪೋಪೆ? ಅಯ್ಯೋ
ತಂದೆ! ನಮ್ಮನು ಬಿಟ್ಟು ಪೋದೆಯಾ?
ಗಾಂಧಿದೇವ! ದುರ್ಭರವು! ದುಃಖಾಗ್ನಿ
ದುರ್ಭರವು!

ಕಂ. ಅಪ್ಪಾಗಾಂಧೀ! ದೇಶವು
ಕಪ್ಪಾಯಿತು! ನಿನ್ನ ಸುತನೆ ತಪ್ಪನಗೈದಂ!
ತಪ್ಪಿಗೆ ಮುನಿಯದೆ ಮನ್ನಿಸು
ಅಪ್ಪಾ! ನಮ್ಮಪ್ಪ ನಿನ್ನ ಮುಖವೆರವಾಯ್ತು!!

ಭಾ.ಪ. ಶಾಂತಿ! ಶಾಂತಿಯು! ಶಾಂತಿಯೆನ್ನುತ
ಶಾಂತಿ ಮಂತ್ರವ ಜಪಿಸಿ, ಶಾಶ್ವತ
ಶಾಂತಿಯು ನೀನಿಂದು ಪೊಂದಿದಿ ಶಾಂತಿಧಾಮದಲಿ
ಶಾಂತಿದಾತನೆ! ನೀನುಸುಸ್ಥಿರ
ಶಾಂತಿಯನು ಪಡೆಯುತ್ತ, ಸ್ವರ್ಗದಿ
ನಿಂತು, ದೇಶದಿಕ್ರಾಂತಿ ಹುಟ್ಟದಿತೆರದಿ ಹರೆಸಯ್ಯಾ!

(ಕೆ. ಹೇ. ಸತ್ಯನಾರಾಯಣರಾವ್, ಆಲೂರು.)

# ಮ॥ ಗಾಂಧಿಯವರ ಕೊನೆಯ ಲೇಖನ

## ಹಿಂದೂ-ದೇವಾಲಯಗಳಲ್ಲೆಲ್ಲಾ ಹರಿಜನರ ಪ್ರವೇಶವಾಗಬೇಕು.

'ಧರ್ಮದರ್ಶಿಗಳು ದೇವಾಲಯಗಳ ಮಾಲೀಕರಲ್ಲ. ನಿಜವಾದ ಮಾಲಿಕರಿಗೂ ದೇವಾಲಯಗಳ ಮೇಲಿನ ಸ್ವಾಮಿತ್ವವಿಂದು ಹೋಗಿದೆ. ಏಕೆಂದರೆ ದೇವಾಲಯಗಳು ಸಾರ್ವಜನಿಕ ಸ್ಥಳಗಳೆಂದು ಭಾವಿಸಿದ ಮೇಲೆ ಈ ಸ್ವಾಮಿತ್ವವು ಉಳಿವುದಿಲ್ಲ' ಎಂಬುದಾಗಿ ಮಹಾತ್ಮರು 1ನೆಯ ತಾ॥ 'ಹರಿಜನ' ಪತ್ರಿಕೆಯಲ್ಲಿ (ಹರಿಜನ ಮತ್ತು ದೇವಾಲಯ ಪ್ರವೇಶ) ಎಂಬ ತಲೆಕಟ್ಟಿನಲ್ಲಿ ಕೊನೆಯ ಲೇಖನವಾಗಿ ಬರೆದಿರುವರು. ಈ ಲೇಖನದ ಅನುವಾದವಿಂತಿದೆ.

"ಮಾಧವಾನದ ಸ್ನೇಹಿತನೊಬ್ಬನು ನನಗೆ ಒಂದು ಪತ್ರ ಬರೆದಿರುವನು. ಆ ಪತ್ರದಲ್ಲಿ 'ಹರಿಜನ ದೇವಾಲಯ ಪ್ರವೇಶದ ವರದಿಗಳು ನಿಮಗೆ ದಿನ ವಹಿ ಬರುತ್ತಿರಬಹುದು. ಧರ್ಮದರ್ಶಿಗಳ ಒಪ್ಪಿಗೆ ಇರಲಿ, ಇಲ್ಲದಿರಲಿ ದೇವಾಲಯಗಳಿಗೆ ಹರಿಜನರ ಪ್ರವೇಶವಾಗುತ್ತಿದೆ. ರಾಮಮಂದಿರಗಳಿಗೆ ಮತ್ತು ಕೃಷ್ಣ ದೇವಾಲಯಗಳಿಗೆ ಹರಿಜನರ ಪ್ರವೇಶಕ್ಕೆ ಒತ್ತಾಯ ಪಡಿಸುವುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಅವರಿಗೆ ನಂಬಿಕೆ ಹುಟ್ಟದಿರುವ ಸ್ವಾಮಿನಾರಾಯಣ ದೇವಾಲಯಕ್ಕಾಗಲೀ ಅಥವಾ ಜೈನದೇವಾಲಯಕ್ಕಾಗಲಿ ಪ್ರವೇಶ ಕೊಡಬೇಕೆಂಬುದರಲ್ಲಿ ಅರ್ಥವೇನಿದೆ.' ಎಂದು ಪ್ರಶ್ನಿಸಿರುವನು.

ಇನ್ನೊಂದು ಸಹಿಯಿಲ್ಲದ ಪತ್ರ ಅಹಮದಾಬಾದಿನಿಂದ ಬಂದಿದೆ. ಈ ಪತ್ರದಲ್ಲಿ ಅಧಃಪತಿತ ಎಂದಿದೆ. ಬರಹದಿಂದಾಗಲಿ ಶೈಲಿಯಿಂದಾಗಲಿ ಇದು ಹರಿಜನರು ಬರೆದ ಪತ್ರವಲ್ಲವೆಂದು ಗೊತ್ತಾಗುವದು. ಈ ಪತ್ರದ ಮುಖ್ಯ ಮಾತುಗಳಿಂತಿವೆ.

"ಕಳೆದ ಮಕರಸಂಕ್ರಾಂತಿಯ ದಿನ ಹರಿಜನರು ದೇವಾಲಯ ಪ್ರವೇಶಿಸಲು ಪ್ರಯತ್ನಿಸಿದರು. ಸ್ವಾಮಿನಾರಾಯಣನ ಮಂದಿರದ ಹತ್ತಿರಕ್ಕೆ ಎಂಟು ಗಂಟೆಯ ಹೊತ್ತಿಗೆ ಈ ಹರಿಜನ ಗುಂಪು ಭಜನ ಮಂಡಲಿಯೊಂದಿಗೆ ಹೋಯಿತು. ಅಷ್ಟು ಹೊತ್ತಿಗೆ ಮಂದಿರದ ಬಾಗಿಲುಗಳು ಮುಚ್ಚಿದ್ದವು. ಬೀಗ ಮುದ್ರೆಗಳಾಗಿದ್ದವು. ಹರಿಜನರು ಅಲ್ಲಿಂದ ಕದಲದೆ ಅಲ್ಲಿಯೇ ಸತ್ಯಾಗ್ರಹ ಮಾಡಹತ್ತಿದರು.

ಅವರು ಹಿಂದಿರುಗಲು ಒಪ್ಪಲಿಲ್ಲ. ಸ್ಥಳೀಯ ಕಾಂಗ್ರೆಸ್ಸು ಇವರ ವರ್ತನೆಯನ್ನು ಟೀಕಿಸಿತು. ಇದೆಂತಹ ಆಶ್ಚರ್ಯ? ಸ್ವಾತಂತ್ರ್ಯ ದೊರಕಿಸಿದ ಮೇಲೂ ಅವರವರ ಹಕ್ಕು ಬಾಧ್ಯತೆಗಳು ಅವರವರಿಗೆ ದಕ್ಕಿದ ಮೇಲೆ ದಕ್ಕುವುದಾವಾಗ! ಸ್ಥಳೀಯ ಕಾಂಗ್ರೆಸಿನ ಕಾರ್ಯಕರ್ತರು ಕೆಲವು ನಿಮಿಷ ನಿಂತು ಹಿಂದಕ್ಕೆ ಹೋಗಿ ಬಿಟ್ಟರು. ಯಾರೂ ಈ ಆಶಯದಲ್ಲಿ ತೀವ್ರ ಶಕ್ತಿಯನ್ನು ತೋರಿಸುತ್ತಿಲ್ಲ. ಬಡ ಹರಿಜನರನ್ನು ಅವರ ಪಾಡಿಗೇ ಬಿಟ್ಟು, ಕೊರೆಯುವ ಛಳಿಯಲ್ಲಿ ದೇವರ ನಾಮಗಳನ್ನು ಹಾಡುತ್ತ ಅಲ್ಲೇ ಕುಳಿತಿರುವ ಹರಿಜನರನ್ನು ವಿಚಾರಿಸುವರೇ ಇಲ್ಲ. ಇಲ್ಲಿ ವೈಯಕ್ತಿ ವರ್ಚಸ್ಸಿನ ಅಥವಾ ನೈತಿಕ ಶಕ್ತಿಯ ಕಾಂಗ್ರೆಸ್ ಕಾರ್ಯಕರ್ತನೊಬ್ಬನೂ ಇಲ್ಲ. ಆಕ್ಲೂರಿನಲ್ಲಿ ರವಿಶಂಕರ ಮಹಾರಾಜರ ಪ್ರತಿಭಾನ್ವಿತ ವ್ಯಕ್ತಿತ್ವವು ಹರಿಜನರ ದೇವಾಲಯ ಪ್ರವೇಶಕ್ಕೆ ಎಡೆಗೊಟ್ಟಿತು. ಆದರೆ ಇಲ್ಲಿ ಅಂತಹ ವ್ಯಕ್ತಿಗಳೇ ಇಲ್ಲ ಏನು ಯಾವತ್ತಿಗೂ ಹರಿಜನರು ತಮ್ಮ ಸಹಜ ಹಕ್ಕಿನಿಂದ ವಂಚಿತರಾಗಿರಬೇಕು. ಇಂದು ಮೂರನೆಯ ದಿನ, ಸಾವಿರಾರು ಸತ್ಯಾಗ್ರಹಿಗಳಿಂದು ಮಂದಿರದ ದ್ವಾರದಲ್ಲಿ ಕುಳಿತಿರುವರು ಈ ಮಂದಿರದ ಧರ್ಮದರ್ಶಿಗಳು ಎಷ್ಟೆ ಕರಗುವಂತಿಲ್ಲ. ದೇವಾಲಯದ ಬಾಗಿಲು ತೆರೆಯದ ತಮ್ಮನ್ನು ಒಳಗೆ ಬಿಡದೆ ಹರಿಜನರು ಮೇಲೇಳುವಂತಿಲ್ಲ. ಇದರ ಪರಿಣಾಮವೇನು, ಇದೆಂದು ಕೊನೆಗೊಳ್ಳಬೇಕು ಇದಕ್ಕೆ ತಕ್ಕ ದಾರಿಯನ್ನು ಗೊತ್ತು ಹಚ್ಚಿ ಕೊಡುವಿರಾ" ಎಂದು ಕೇಳಿರುವರು.

ಮೊದಲ ಪತ್ರದಲ್ಲಿ ದೇವಾಲಯದ ಬಗ್ಗೆ ಕೆಲವು ಸಂಗಡಗಳನ್ನು ಹೇಳುವುದು ನನಗೊಪ್ಪುವುದಿಲ್ಲ. ಈ

ಭೇದ ಅರ್ಥವಿಲ್ಲದುದು. ಹರಿಜನರು ಸ್ವಾಮಿ ನಾರಾಯಣ ಮಂದಿರಕ್ಕೆ ಜೈನ ದೇವಾಲಯಕ್ಕೆ ಹೋಗಲು ಅರ್ಹತೆ ಪಡೆದಿರುವರು. ಇವರನ್ನೂ ಬಿಡಲೇ ಬೇಕು.

ದೇವಾಲಯಗಳಿಗೆ ಹೋಗಲು ಬ್ರಾಹ್ಮಣರಿಗಿರುವಷ್ಟೇ ಅಧಿಕಾರ ಹರಿಜನರಿಗೂ ಬೇಕೆಂದು ಹಲವರುಷಗಳಿಂದ ಚಳುವಳಿ ಹೂಡಲಾಗಿದೆ. ಈ ಚಳುವಳಿಗೆ ಅಮೋಘ ವಿಜಯ ಸಿಕ್ಕಿದೆ. ಇತ್ತೀಚಿಗೆ ಮುಂಬೈ ಸರ್ಕಾರವು ಹರಿಜನ ದೇವಾಲಯ ಪ್ರವೇಶಕ್ಕೆ ಅನುಮತಿಸುವ ಕಾಯಿದೆಯನ್ನು ಹೊರಡಿಸಿದೆ. ಇದರ ಮೇಲೆ ಸತ್ಯಾಗ್ರಹ ಮಾಡಬೇಕಾಗಿಯೇ ಇಲ್ಲ. ಕಾಯಿದೆಯು ಜನಮತವನ್ನು ಪ್ರತಿಬಿಂಬಿಸುವಾಗ ಅದಕ್ಕೆ ಸಾರ್ವಜನಿಕ ಬೆಂಬಲ ಸಿಕ್ಕಲೇಬೇಕು. ಹೃದಯ ಪೂರ್ಣ ಒಪ್ಪಿಗೆ ಇಲ್ಲದ ಬರಿಯ ಬಾಯಿ ಮಾತಿನ ಒಪ್ಪಿಗೆಯಿದ್ದರೆ ಕಾಯಿದೆಯನ್ನು ವಿರೋಧಿಸುವುದು ಸಹಜವಿದೆ. ಪ್ರಜಾಸತ್ತೆಯಲ್ಲಿ ಕಾಯಿದೆಯನ್ನು ಬಲವಂತವಾಗಿ ಜನತೆಯ ಮೇಲೆ ಹೋರಿಸಬೇಕಾಗಿಲ್ಲ. ಜನ ನಾಡಿಯನ್ನು ನೋಡಿ ಬುದ್ಧಿವಂತ ಕ್ರಾಂತಿವಾದಿಯು ಜನತೆಯ ನಾಡಿಯನ್ನು ಹಿಡಿದು ನೋಡಿ ಕ್ರಾಂತಿಯ ಬಿತ್ತಿಹತ್ತುವನು. ಅವಸರಪಡುವುದರಿಂದ ತಾಳ್ಮೆ ತಪ್ಪುವುದರಿಂದ, ಉದ್ದಿಶ್ಯ ಸಾಧನೆಯಲ್ಲಿ ಸೋಲಾಗುವುದು.

ಧರ್ಮದರ್ಶಿಗಳು ದೇವಾಲಯಗಳ ಒಡೆಯರಲ್ಲ. ನಿಜವಾದ ಒಡೆಯನಿಗೂ ದೇವಾಲಯದ ಸ್ವಾಮಿತ್ವವಿರುವುದಿಲ್ಲ. ದೇವಾಲಯಗಳು ಸಾರ್ವಜನಿಕರಿಗಾಗಿರುವವು. ದೇವನನ್ನೂ ಆರಾಧಿಸುವ ಭಾವ ಶುದ್ಧ ಹೃದಯಗಳೇ ದೇವಾಲಯದ ನಿಜವಾದ ಮಾಲೀಕರು. ಈ ದೃಷ್ಟಿಯಲ್ಲಿ ಎಲ್ಲಿ ಜೈನ ದೇವಾಲಯಗಳೂ, ನಾರಾಯಣ ದೇವಾಲಯಗಳೂ, ಹಿಂದೂ ದೇವಾಲಯಗಳೆಂದುಯಿತು. ನಾನೂ ಕೂಡ ಈ ದೇವಾಲಯಗಳಿಗೆ ಹೋಗಿರುವೆನು.

ಯಾರೂ ನನ್ನ ಜಾತಿ ಯಾವುದೆಂದು ಪ್ರಶ್ನಿಸುವ ಗೋಜಿಗೆ ಹೋಗಿರಲಿಲ್ಲ, ನಾನು ಹಿಂದುವಿನಂತೆ ಕಾಣುತ್ತಿದ್ದುದೇ ಸಾಕಾಗಿತ್ತು. ಇದೇ ಸಾವಿರಾರು ಜನರಿಗೂ ಅನ್ವಯಿಸುವುದು. ಹಿಂದುಗಳಿಗೆ ಪ್ರವೇಶವಿರುವ ಎಲ್ಲಾ ದೇವಾಲಯಗಳಲ್ಲೂ ಹರಿಜನರಿಗೂ ಪ್ರವೇಶವಿರಬೇಕು. ಜಾಗ್ರತ ಜನತೆಯಿಂದ ಹರಿಜನರನ್ನು ಅಸ್ಪೃಶ್ಯ ಜಾತಿಯೆಂದು ಬಗೆದಿಲ್ಲ. ನಾಲ್ಕು ಪಂಗಡದ ಹದಿನೆಂಟು ವರ್ಣಗಳಲ್ಲಿ ಹರಿಜನರೂ ಸೇರಿರುವರು ಎಂದು ಗ್ರಹಿಸಿರುವರು. ಭಕ್ತನ ಭಾವನಾಸ್ಫೂರ್ತಿಯ ಪಡಿನೆರಳೇ ದೇವಾಲಯದಲ್ಲಿರುವ ದೇವರು. ಭಕ್ತರ ಭಕ್ತಿಯೇ ದೇವಾಲಯಗಳನ್ನು ಜೀವಂತವಾಗಿರಿಸಲು ಪವಿತ್ರವೆಂದೆನಿಸಲು ಕಾರಣೀಭೂತವಾಗಿದೆ. ಇನ್ನು ಎರಡನೆಯ ಪತ್ರದ ವಿಚಾರವಾಗಿ ದೇವಾಲಯ ಮುಂದೆ ಸಂಪು ಹೂಡುತ್ತಿರುವರಿಗೆ ನಿಜವಾದ ಭಕ್ತಿಯಿಲ್ಲ ಅವರಿಗೆ ಅವರ ಹಕ್ಕಿನ ಮೋಹವಿದೆಯೇ ಹೊರತೂ ಭಕ್ತಿಯ ಭಾವನೆ ಇಲ್ಲ, ಅವರಿಗೆ ದೇವದರ್ಶನ ಬೇಕಾಗಿಲ್ಲ. ಆದ್ದರಿಂದ ಇವರು ತಮ್ಮ ತತ್ವವನ್ನು ಅಡ್ಡ ದಾರಿಗೆಳೆದಿರುವರು, ಸಹಿಯಿಲ್ಲದ ಪತ್ರವನ್ನು ಬರೆಯುವುದಾಗಲಿ, ಅಥವಾ ತಮಗಾಗಿ ಇನ್ನೊಬ್ಬರಿಂದ ಬರೆಸುವುದಾಗಲೀ ಭಕ್ತನ ಲಕ್ಷಣವಲ್ಲ. ನಿಜವಾದ ಭಕ್ತನು ಭಕ್ತನಂದನಾರನ ಮಾರ್ಗವನ್ನು ಅನುಸರಿಸುವನು. ಭಕ್ತನಂದನಾರು ದೇವರ ಸಹಾಯವನ್ನಲ್ಲದೆ ಇನ್ನಾರ ಸಹಾಯವನ್ನು ಕೋರಲಿಲ್ಲ. ಈಗ ದೊಡ್ಡ ಜಾತಿಯೆಂದು ಭಾವಿಸಿಕೊಂಡಿರುವ ಬ್ರಾಹ್ಮಣನೂ ಕೂಡ ಈ ನಂದನಾರ ಭಕ್ತರಿಗೆ ತಲೆ ಬಾಗುತ್ತಿರುವನು.

ಹರಿಜನರ ಮಧ್ಯೆ ಭಕ್ತ ನಂದನಾರು ಪುನರುದಿಸಲಿ, ಎಂದು ಬಯಸುವೆನು. ಹರಿಜನರಿಗೆ ಹಿಂದುಗಳು ಗೌರವಯುತವಾಗಿ ದೇವಾಲಯ ಪ್ರವೇಶಕೊಡಲಿ. ಇವರು ಬರೆದಿದ್ದಾರೆ. ಹರಿಜನರು ತಮ್ಮ ಮನೆಯಲ್ಲಿಯೇ ಗಂಗೋದಕದಿಂದ ಶುದ್ಧ ಮಾಡಿಕೊಂಡು ತಮ್ಮ ಭಕ್ತಿಯನ್ನು ದೇವನಿಗೆ ಅರ್ಪಿಸಲಿ. ದೇವಾಲಯದ ಮುಂದೆ ಸಂಪು ಹೂಡುವುದು ಸತ್ಯಾಚಾರವಲ್ಲ ಮತ್ತು ಪಾಪಕರ''

---

## ಕರ್ನಾಟಕ ಶಿಷ್ಟಮಂಡಲ

ಕರ್ನಾಟಕ ಪ್ರಾಂತೀಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ದಿವಾಕರ, ಶ್ರೀ ಅಂದಾನಪ್ಪ, ಶ್ರೀ ಅನಂತಾಚಾರಿಯವರಿಂದೊಡಗೂಡಿದ ಶಿಷ್ಟಮಂಡಲವು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನೂ ಮಹಾತ್ಮ ಗಾಂಧಿಯವರನ್ನೂ ಕಂಡು ಕರ್ನಾಟಕ ಪ್ರಾಂತನಿರ್ಮಾಣದ ಆವಶ್ಯಕತೆಯನ್ನು ನಿವೇದಿಸಿದರು,

# ಮುಖಂಡರ ಕೊಲೆಯ ಕಾರಾಸ್ಥಾನ!

## ಕಟಕದಲ್ಲಿನ ವಿಚಿತ್ರ ಶೋಧ.

—)0(—

ಮಹಾತ್ಮ ಗಾಂಧಿಯವರ ಕೊಲೆಗೆ, ಉಗ್ರಜಾತೀಯ ಸಂಸ್ಥೆಯ ಆಳವಾದ, ಕಾರಾಸ್ಥಾನವಿದೆಯೆಂದು ಅನುಮಾನ ಬಂದಿರುವುದರಿಂದ ಮುಂಬೈ ಪ. ಬಂಗಾಲ ಪೂರ್ವ ಪಂಜಾಬದ ಪೋಲೀಸರೆಲ್ಲರೂ ಜಾಗೃತರಾಗಿ ತಪಾಸಣೆಗೆ ತೊಡಗಿರುವರು. ಮಹಾತ್ಮರ ಕೊಲೆಗಡುಕ ಘೋಡಸೆಯವರ ಸ್ಥಳ, ಪುಣೆಯ ಮತ್ತು ಮುಂಬೈಯಿನ ವಾತಾವರಣದಿಂದ ಕಾರಾಸ್ಥಾನ ರೂಪವು ಹೊರಬೀಳುತ್ತಿದೆ.

ಮುಂಬೈಯಿಂದ, ಕೊಲೆಯ ಕಾರಾಸ್ಥಾನವನ್ನು ಪತ್ತೆ ಹಚ್ಚಲು ವಿಶೇಷ ಸಿ. ಐ. ಡಿ. ಗಳು ಪ್ರಯಾಣ ಮಾಡಿರುವರು. ನಾಲ್ಕು ಪ್ರಾಂತ್ಯಗಳಲ್ಲಿಯೂ ವಿಚಾರಣೆ ನಡೆಯುಹತ್ತಿದೆ. ಇವುಗಳಿಂದ, ಈ ಕಾರಾಸ್ಥಾನವು ದೇಶದಾದ್ಯಂತ ಹರಡಿಕೊಂಡಿದೆ ಎಂದು ತಿಳಿದು ಬಂದಿದೆ ಕಾರಾಸ್ಥಾನದವರ ವಶದಲ್ಲಿ ಶಸ್ತ್ರಾಸ್ತ್ರಗಳು ಮದ್ದುಗುಂಡು ಸಂಗ್ರಹಗಳವಿರುವುವೆಂದು ಪೋಲೀಸನವರು ಅನುಮಾನವಶರಾಗಿದ್ದಾರೆ. ಶನಿವಾರ ಮಧ್ಯರಾತ್ರಿ ಒಳಸಂಚಿಗೆ ಸಂಬಂಧಿಸಿದ ಇಪ್ಪತ್ತು ಜನರ ಬಂಧನವಾಗಿದ್ದು ಪ್ರಹ್ಲಾದದತ್ತ ಎಂಬ ಪಂಜಾಬಿನ ನಿರಾಶ್ರಿತನೊಬ್ಬನು ಗಂಡಾಂತರಕ್ಕೆ ಸಿಕ್ಕುಬಿದ್ದಿದ್ದನು. ಅವನನ್ನು ಪೋಲೀಸರು ರಕ್ಷಿಸಿ ವಶಪಡಿಸಿಕೊಂಡಿರುವರು. ಮಹಾತ್ಮರ ಮೇಲೆ ಬಾಂಬು ಒಗೆದ ನಂತರ....ಮುಂಬೈಯಲ್ಲಿ ಪೋಲೀಸರ ಅನುಮಾನ ಬಲವಾಯಿತು. ಪುಣೆ ಮತ್ತು ಅಹಮದ ನಗರದಲ್ಲೂ ಈ ಬಗ್ಗೆ ಎಂಟು ಜನರ ಬಂಧನವಾಗಿದೆ, ಘೋಡಸೆಯವರ ತಮ್ಮನನ್ನು ಬಂಧಿಸಲಾಗಿದೆ

---

## ಮಹಾತ್ಮರಿಗೆ ಗುಂಡು ಹೊಡೆತವನ್ನು ಚಿತ್ರಿಸಿರುವ ಚಿತ್ರ!

ಪೋಲೀಸರು ಕಟಕದಲ್ಲಿಯ ಆರ್. ಎಸ್. ಎಸ್. ಕಚೇರಿಗಳನ್ನು ಶೋಧಿಸಿದಾಗ ಕೆಲವು ಹಸ್ತಪತ್ರಿಕೆಗಳು ಕೆಲವು ಲೇಖನಗಳು ದೊರೆತಿವೆ ಮಹಾತ್ಮರ ಒಂದು ಭಾವಚಿತ್ರದಲ್ಲಿ. ಎದೆಯ ಮೇಲೆ ಗುಂಡಿನೇಟಿನಿಂದ ಗಾಯ ಹೊಂದಿರುವ, ಹಾಗೂ, ಆ ಭಾಗದಲ್ಲಿ ರಿವಾಲ್ವಾರನ್ನು ಹಿಡಿದುಕೊಂಡಿರುವ ಒಂದು ಕೈಯನ್ನು ತೋರಿಸಲಾಗಿದೆ ಅಲ್ಲಿ ದೊರೆತಿರುವ ಹಸ್ತಪತ್ರಿಕೆಗಳು ಹಾಗೂ ಲೇಖನಗಳಲ್ಲಿ ಮಹಾತ್ಮ ಗಾಂಧಿ, ಪಂಡಿತ ನೆಹರೂ, ಸರದಾರ ಪಟೇಲ ಇವರ ಮೇಲೆ ಆರೋಪ ಹೊರಿಸುವ, ಹಾಗೂ ಕೆಟ್ಟ ಕೆಟ್ಟ ಮಾತುಗಳನ್ನುಪಯೋಗಿಸಿ, ಬರೆದಿರುವ ಲೇಖನಗಳು ದೊರೆತಿವೆ. ಈ ಸಂಬಂಧದಲ್ಲಿ ಇಬ್ಬರು ಪಂಜಾಬಿಗಳನ್ನು ಒಬ್ಬ ಮಹಾರಾಷ್ಟ್ರದವನನ್ನು ಬಂಧಿಸಲಾಗಿದೆ.

—(0)—

## ಹೈದರಾಬಾದು;—

ಹೈದರಾಬಾದ ಪ್ರಶ್ನೆಯಬಗ್ಗೆ ಡಿಲ್ಲಿಯಲ್ಲಿ ಉಭಯ ಸರಕಾರಗಳ ಮಧ್ಯೆ ಮಾತುಕತೆ ನಡೆಯುಲಿದೆ ಶ್ರೀ ಮುನ್ಷಿಯವರೂ ಭಾಗವಹಿಸಬಹುದು. ಗುಲ್ಬರ್ಗಾ ಜೈಲಿನಲ್ಲಿ ಶ್ರೀ ಆರ್. ಜಿ. ಜೋಶಿಯವರು ಮರುಣಾಂತಿಕ ಉಪವಾಸವನ್ನಾರಂಭಿಸಿರುವರು. ಸಹಾನುಭೂತಿಪರವಾಗಿ 800 ರಾಜಕೀಯ ಕೈದಿಗಳು ಉಪವಾಸವಾರಂಭಿಸಿದ್ದಾರೆ ಪ್ರೋಗ್ರೆಸಿವ್ ಪಾರ್ಟಿಯ ಆರು ಮುಖಂಡರು ಹರಿಜನರ ಮುಖಂಡನೊಬ್ಬನು ಹೈದರಾಬಾದ ಸರ್ಕಾರಕ್ಕೆ ಮನವಿ ಕಳುಹಿಸಿ ತಾತ್ಕಾಲಿಕ ಸರಕಾರವನ್ನು ರದ್ದುಮಾಡಿ ಇತ್ತೆಹಾದುಲ್ ಪಾರ್ಟಿಯ ಸ್ವಯಂಸೇವಕ ಸಂಘವನ್ನು ಬೇಕಾಯ್ದೆಶೀರ ಮಾಡಲು ಕೇಳಿದ್ದಾರೆ ಅವರ ಅಭಿಪ್ರಾಯದಲ್ಲಿ ಹೈದರಾಬಾದ ಹಳ್ಳಿ ಪ್ರದೇಶಗಳಲ್ಲಿ ನಡೆದ ಕೊಲೆ ಸುಲಿಗೆ ಸ್ತ್ರೀಯರ ಮೇಲೆ ನಡೆದ ಅತ್ಯಾಚಾರಕ್ಕೆ ಈ ಸ್ವಯಂಸೇವಕರೇ ಕಾರಣರೆಂದು ಹೇಳಲಾಗಿದೆ.

## ಜಯಸಲ್ಮೀರದ ಮೇಲೆ ದಾಳಿ.

ಪಠಾಣ ಪುಂಡರು ರಾಜಪುತಾನ ಸಂಸ್ಥಾನವಾದ ಜಯಸಲ್ಮೀರದ ಹಳ್ಳಿಗಳ ಮೇಲೆ ದಾಳಿಮಾಡಿ ಕೊಲೆ ಸುಲಿಗೆ ಅತ್ಯಾಚಾರಗಳನ್ನು ನಡೆಸಿ ಸಂಸ್ಥಾನೀ ಸೈನ್ಯವು ಬಂದಕೂಡಲೇ ಓಡಿಹೋಗಿರುತ್ತಾರೆ ಇಂಡಿಯಾ ಸರ್ಕಾರದ ಪರವಾಗಿ ರಕ್ಷಣಾಮಂತ್ರಿಗಳಾದ ಸರ್ದಾರ ಬಲದೇವಸಿಂಹರು ಪಾಕಿಸ್ತಾನಕ್ಕೆ ನಿಷೇಧಸೂಚನೆ ನೀಡಿದರು

# ಕನ್ನಡ ನಾಡಿನ ಮೇಲೆ ಬಾಪೂಜಿಯವರ ಮಹೋಪಕಾರ.

—)O(—

ಲೇ:- ಶ್ರೀ ಮಂಗಳವೇಡು ಶ್ರೀನಿವಾಸರಾಯರು.
ಗೌ. ಕಾರ್ಯದರ್ಶಿ ಕರ್ನಾಟಕ ಏಕೀಕರಣ ಮಹಾಸಮಿತಿ ಹುಬ್ಬಳ್ಳಿ.

ಬಾಪೂಜಿಯವರ ನಿಧನ ಜಗತ್ತಿನ ಹಾನಿ; ಆದರೆ ಅವರ ಅಗಲುವಿಕೆಗಾಗಿ ಮರುಗಲು ಕರ್ನಾಟಕಕ್ಕೆ ವಿಶೇಷ ಆತ್ಮೀಯ ಕಾರಣಗಳಿವೆ. ಕನ್ನಡಿಗರು ಸರಳ ಸ್ವಭಾವಿಗಳು, ಅವರು ಗಾಂಧೀಜಿಯವರನ್ನು ತಂದೆಯೆಂದು, ಅದೇಕೆ ದೇವರ ಅವತಾರವೆಂದು ಕಾಣುತ್ತಿದ್ದರು. ಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯದ ಆಂದೋಲನಗಳಲ್ಲಿ ಕರ್ನಾಟಕ ಒಂದೂ ಅಪಸ್ವರವಿಲ್ಲದೆ ಧುಮಿಕಿತು. ಗಾಂಧೀಜಿಯವರ ಮಂಗಲ ಪ್ರಭಾವದ ಪರಿಣಾಮವಾಗಿಯೆ ಕರ್ನಾಟಕದ ಹೆಸರು ಭಾರತೀಯ ರಾಜಕೀಯ ಪ್ರಪಂಚದಲ್ಲಿ ಮೊಳಗಲು ಮೊದಲಾಯಿತು.

ಭಾಷಾನ್ವಯ ಪ್ರಾಂತಗಳ ಆಂದೋಲನವು ಕಳೆದ ಶತಮಾನದ ಕೊನೆಯ ದಶಕದ ಸುಮಾರಿಗೇ ಪ್ರಾರಂಭವಾಗಿದ್ದರೂ, ಕಾಂಗ್ರೆಸ ಆಡಳಿತವನ್ನು 1920 ರಲ್ಲಿ ಭಾಷಾನ್ವಯ ತತ್ವದ ಮೇಲೆ ರಚಿಸಿ, ಆಂದೋಲನಕ್ಕೆ ರಾಜಕಾರಣದಲ್ಲಿ ಮೂರ್ತ ಸ್ವರೂಪ ಕೊಟ್ಟವರು ಗಾಂಧೀಜಿಯವರೇ. ಇದರಿಂದಲೇ ರಾಜಕಾರ್ಯ ಧುರಂಧರರು ಕರ್ನಾಟಕ-ಆಂಧ್ರ-ಮಹಾರಾಷ್ಟ್ರವೆಂದು ತಮ್ಮ ತಮ್ಮ ಭಾಷಾಘಟಕಗಳ ದೃಷ್ಟಿಯಿಂದ ನಡೆ-ನುಡಿಯ ತೊಡಗಿದರು. ಕರ್ನಾಟಕದ ಬಗ್ಗೆ ಬಾಪೂಜಿಯವರದು ಅಸೀಮ ಮಮತೆಯಿತ್ತು. ಅದು ತಮ್ಮ ಪ್ರಾಂತವೆಂದು ಅಭಿಮಾನದಿಂದ ಭಾವಿಸಿದ್ದರು. ಆ ವಿಶ್ವಾಸಕ್ಕೆ ಸರಿಯಾಗಿಯೆ ಕರ್ನಾಟಕವಾದರೂ ಸ್ವಾತಂತ್ರ್ಯಾಂದೋಲನದಲ್ಲಿ ನಡೆದುಕೊಂಡಿತು. ಈಚೆಗೆ ಗಾಂಧೀಜಿಯವರು ಕರ್ನಾಟಕದ ಹಿರಿಯ ಮುಂದಾಳುಗಳಾದ ಗಂಗಾಧರರಾವಜಿ ದೇಶಪಾಂಡೆಯವರಿಗೆ ಬರೆದ ಪತ್ರದಲ್ಲಿ "ಕರ್ನಾಟಕ ಏಕೀಕರಣಕ್ಕೆ ನನ್ನ ಒಪ್ಪಿಗೆ ಎಂದೆಂದಿಗೂ ಇದೆ ಮಾತ್ರವಲ್ಲ, ಅದು ನನಗೆ ಪ್ರಿಯವಾದ ಮಾತು" ಎಂಬ ಉದ್ಗಾರಗಳನ್ನು ತೆಗೆದಿರುವರು. ಭಾಷಾನ್ವಯ ಪ್ರಾಂತರಚನೆಗೆ ಇವರು ಹೃತ್ಪೂರ್ವಕವಾಗಿ ಬೆಂಬಲವಿತ್ತಿದ್ದರೂ, ಗಡಿಗಳ ಪ್ರಶ್ನೆಯನ್ನು ಪ್ರಾಂತಗಳವರು ಸರಕಾರದವರು ಹೇರುವ ಗಡಿ ಸಮಿತಿಯ ಕಡೆಯಿಂದ ತೀರ್ಮಾನಿಸಿಕೊಳ್ಳದೆ ತಮ್ಮ ತಮ್ಮೊಳಗೆ ವಿಚಾರ ವಿನಿಮಯದಿಂದ ಬಗೆಹರಿಸಿಕೊಳ್ಳಬೇಕೆಂದು ತೀವ್ರವಾಗಿ ಪ್ರತಿಪಾದಿಸುತ್ತಿದ್ದರು. ಅವರ ಈ ಮನೋದಯವನ್ನರಿತುಕೊಂಡು ಕರ್ನಾಟಕ ಏಕೀಕರಣ ಮಹಾಸಮಿತಿಯು ಮಹಾರಾಷ್ಟ್ರ-ಆಂಧ್ರ-ತಮಿಳುನಾಡು-ಕೇರಳ-ಕರ್ನಾಟಕಗಳ ಪಂಚಪ್ರಾಂತಾಧ್ಯಕ್ಷರಿಗೆ ಪತ್ರ ಬರೆದು, ಅವರು ತಮ್ಮ ಕಾರ್ಯದರ್ಶಿಗಳು ಹಾಗೂ ಭಾಷಾನ್ವಯ ಪ್ರಾಂತ ಚಳವಳಿಯ ಮುಖಂಡರೊಡನೆ ಪ್ರಚಾರಕ ಸಭೆಯೊಂದನ್ನು ಕೂಡಿಸಬೇಕೆಂದೂ, ಗಡಿನಿರ್ಣಯಗಳ ಸಂಬಂಧದಲ್ಲಿ ಕೆಲವು ತಾತ್ಪೂರ್ತಿಕ ನಿರ್ಣಯಗಳಿಗೆ ಬರಬೇಕೆಂದೂ, ಆ ನಿರ್ಣಯಗಳನ್ನು ಶಾಂತಿಯುತವಾಗಿ ಕಾರ್ಯರೂಪದಲ್ಲಿ ತರಲು ವರ್ಚಸ್ವೀ ಕಾಂಗ್ರೆಸ ಮುಖಂಡರ ಸಮಿತಿಯೊಂದನ್ನು ನಿಯಮಿಸಬೇಕೆಂದೂ ಪ್ರಸ್ತಾಪಿಸಿದೆ. ಇದಿಷ್ಟು ಸಾಧಿಸಿದರೆ, ಭಾರತೀಯ ಐಕ್ಯಕ್ಕಾಗಿ, ಪ್ರಾಂತೀಯ ಸಂಸ್ಕೃತಿಗಳ ಹಿತಕಾರಕ ವಿಕಾಸಕ್ಕಾಗಿ 'ಎದೆಯ ರಕುತ' ಸುರಿಸಿದ ಬಾಪೂಜಿಯವರಿಗೆ ಸಮುಚಿತ ಸ್ಮಾರಕವನ್ನೆ ಕಟ್ಟಿದಂತಾಗುವುದು ಕನ್ನಡನಾಡು.

## ಹೊಸಪೇಟೆ
## ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

O. S. 284/47.

**ಅಳ್ಳಳ್ಳಿ ರುದ್ರಪ್ಪ** .... .... ವಾದಿ

**ಬಸಪ್ಪನಮಗ ಅನುವಾಲ ಮಹಂತಪ್ಪ** | ಪ್ರತಿ
ಸಾ|| ತೆಕ್ಕಲಕೋಟ | ವಾದಿ

ಮೇಲ್ಕಂಡ ನಂಬರಿನಲ್ಲಿ ವಾದಿಯು ಮೇಲೆ ಪ್ರಾಮಿಸರಿನೋಟಿನ ಬಾಕಿಗಾಗಿ ರೂ. 349—8—0 ಗಳಿಗೆ ಕೋರ್ಟು ಖರ್ಚು ಮುಂದಿನ ಬಡ್ಡಿಗಾಗಿ ದಾವಾ ಮಾಡಿದ್ದಾನೆ. ಸದರಿ ದಾವೆ 17-2-48ಕ್ಕೆ ವಾಯಿದೆ ಇರುತ್ತದೆ. ಸದರಿ ವಾಯಿದೆಗೆ ಹಾಜರಾಗದಿದ್ದರೆ ನಿಮ್ಮ ಪರೋಕ್ಷವಾಗಿ ವಿಚಾರಿಸಲ್ಪಡುತ್ತದೆ

ಹೊಸಪೇಟೆ. 9-2-48 | **ಎಂ. ನಟೇಶಮೊದಲಿಯಾರ್,** ವಾದಿ ವಕೀಲರು.

# NIGHT QUEEN HAIR OIL.

ನೈಟ್ ಕ್ವೀನ್ ಹೇರ್ ಆಯಿಲ್.

—— )0( ——

ಕೂದಲಿನ ಸೌಂದರ್ಯ, ಮೃದುತ್ವ, ಕಾಪಾಡಿ ಕೂದಲು ಬೆಳವಣಿಗೆಗೆ ಆಹಾರದಂತಿದೆ, ಕೇಶತೈಲಗಳಿಗೆಲ್ಲಾ ರಾಣಿಯಂತಿದೆ. ಒಂದು ಸಲ ಉಪಯೋಗಿಸಿದಲ್ಲಿ ಯಾವಾಗಲೂ ಬಿಡುವುದಿಲ್ಲ.

## CASHMERE ARUK.

ಕಾಶ್ಮೀರ ಅರಕ್ [ಮನೆಯ ವೈದ್ಯ]

ಎಲ್ಲರ ಮನೆಯಲ್ಲೂ ಇರಬೇಕಾದ ಅವಶ್ಯಕ ಔಷಧ.

ಅಂಗಾಂಗಗಳ ನೋವುಗಳಿಗೆಲ್ಲಾ ರಾಮಬಾಣ, ತಲೆಶೂಲಿ, ಕೆಮ್ಮು, ನೆಗಡಿ, ಉಬ್ಬಸ, ಅಜೀರ್ಣ, ಶೀತಭೇಧಿ, ಕ್ರಿಮಿಕೀಟಗಳ ಕಡಿತಕ್ಕೆ ಶೀಘ್ರ ಗುಣಕಾರಿ, ಹೊರಗೂ ಹಚ್ಚಬಹುದು ಮತ್ತು ಒಳಗೂ ತೆಗೆದುಕೊಳ್ಳಬಹುದು ಅನುಪಾನ ಔಷಧದ ಜೊತೆಯಲ್ಲಿ ಇರುವುದು.

ಎಲ್ಲಾ ಷಾಪುಗಳಲ್ಲೂ ದೊರೆಯುತ್ತದೆ.

## H. S. & SONS, BELLARY.

ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.


## — ಬಾಷ್ಪಾಂಜಲಿ. —

(ಧಾಟಿ-ಮಗನ ತಾಗಿರೋ । ಭಕ್ತರು— ಎಂಬಂತೆ)

(ರಾಗ । ಜೀವನಪುರಿ । ರೂಪಕ ತಾಳ)

ಗಾಂಧಿ ಮಹಾತ್ಮಾ । ಖ್ಯಾತ ।। ಇಂದು ನಮ್ಮನಗಲಿ ಪೋದೆಯಾ । ಹಿಂದುಸ್ಥಾನ ಜೀವನಜ್ಯೋತಿ । ಪ।।

ಭಾರತಾಂಬೆಯ । ವೀರಪುತ್ರನೆ । ಪರಮಶಾಂತಿ ಸತ್ಯಾಹಿಂಸೆಯ । ಸಾರತತ್ವ ಜನರಿಗರುಹುತ । ಚಾರು ಕೀರ್ತಿ ಪಡೆದ ತಾತಾ ।। ೧ ।।

ವಂದೇ ಮಾತರಂ ಎಂಬ ವಾಕ್ಯವ । ಚಂದದಿಂದ ಬೋಧಿಸುತ್ತಲಿ । ಹಿಂದು ಮುಸಲ್ಮಾನರೆಲ್ಲರ । ನೊಂದುಗೂಡಿದ ಕಾರ್ಯವೆಸಗಿದಿ ।। ೨ ।।

ಶಾಂತಿಯುದ್ಧವಗೈದು ಭಾರತ । ಸ್ವತಂತ್ರವನು ಗಳಿಸಿ ತ್ರಿವಿಧ । ಶಾಂತಧ್ವಜವನೆಲಿಸಿ ಲೋಕದಿ । ಶಾಂತಿಸಾಗ ನೆನಿಸಿ ಮೆರೆದೈ ।। ೩ ।।

ಜ್ಞಾನಯೋಗಿಯೆ । ನಾನಾವಿಧದಲಿ । ಮಾನಹಾನಿಗಳನು ಸಹಿಸುತೆ । ಕ್ಷೋಣಿಜನರ ಹಿತವಗೈದಿ । ದೀನಪಾಲ ಲೋಕಮಾನ್ಯ ।। ೪ ।।

ನಿನ್ನ ಗುಣಗಳ ಗಾನಮಾಡುತ । ನಿನ್ನ ರೂಪವನೆನೆದು ಜನರು । ಕಣ್ಣೀರುಗಳ ಸುರಿಸುತಿಹರು । ಪನ್ನ ತಾಂಗ ತೋರು ಮುಖವಾ ।। ೫ ।।

ಲೇಖಕ—ಪಿ. ಎಂ. ವಿರೂಪಾಕ್ಷಶಾಸ್ತ್ರಿ,



# S. V. Setty & Bros, Bellary.

## ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್,



ಬೆಂಗಳೂರು ರೋಡ್, ಬಳ್ಳಾರಿ.

ಬೆಳ್ಳಿ ಭಂಗಾರದ ಅತ್ಯಂತಾಧುನಿಕ ವಸ್ತುಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲಿದ್ದು ಮಾಡಿದ **ಕೂಲಿ ವೇಸ್ಟೇಜ್ ಕೊಟ್ಟರೆ ಹಳೆಯ ವಸ್ತುಗಳನ್ನು ಬದಲಿ ಮಾಡುತ್ತೇವೆ. ವಾಚುಗಳು, ಟೈಂಪೀಸ್, ಮತ್ತು** ದೊಡ್ಡ ಗಡಿಯಾರಗಳು ದೊರೆಯುತ್ತವೆ. **ಒಂದುಸಲ ಬಂದರೆ ನೀವು ಯಾವಾಗಲೂ ಬರುವಿರಿ**

## ಮಹಾತ್ಮ ಗಾಂಧಿಯವರ ಅಸ್ತಿನಿಕ್ಷೇಪ

### ಬಳ್ಳಾರಿ ಜಿಲ್ಲೆಯಲ್ಲಿ

ಕೆಲಭಾಗದ ಅಸ್ತಿಗಳನ್ನು ಪವಿತ್ರ ಪಾತ್ರೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂ ಮತ್ತು ವೀರಾಸ್ವಾಮಿಯವರು 11ನೆಯ ದಿನಾಂಕ ಪ್ರಾತಃಕಾಲ ತಂದರು. ಪ್ರಚಂಡ ಮೌನ ಮೆರವಣಿಗೆಯಿಂದ ಅವನ್ನು ಮುನಿಸಿಪಲ್ ಹೈಸ್ಕೂಲಿಗೆ ತೆಗೆದೊಯ್ಯಲಾಯಿತು. ಅಧಿಕಾರಿಗಳು ಪೋಲೀಸರು ಮಾನಾರ್ಪಣೆ ಮಾಡಿದರು. ಹೊಸಪೇಟೆಯಲ್ಲಿ 12ನೆಯ ಪ್ರಾ. ಮೆರವಣಿಗೆಯು ತೆಗೆಯಲಾಗಿತ್ತು. ಹಂಪಿ ಚಕ್ರ ತೀರ್ಥದಲ್ಲಿ ವಿಧಿವತ್ತಾಗಿ ಬಿಟ್ಟಾಗ ಸಾವಿರಾರು ಜನರು ನೆರೆದಿದ್ದರು. ಬಳ್ಳಾರಿಯಿಂದ ಹೊಸಪೇಟೆಗೆ ಸ್ಪೆಶಲ್ ಟ್ರೇನದ ವ್ಯವಸ್ಥೆ ಇದ್ದಿತು.

### ಹಂಪಿಯಲ್ಲಿ ಮಹಾತ್ಮರ ಚಿತಾಭಸ್ಮ ನಿಕ್ಷೇಪ

ಬಳ್ಳಾರಿ ನಗರದಲ್ಲಿ 11ನೆಯ ಪ್ರಾತಃಕಾಲ 11ರಿಂದ ಮಾರನೆಯ ದಿನ ಪ್ರಾ. ವರೆಗೆ ಶ್ರದ್ಧಾಂಜಲಿಗಳನ್ನು ಮಹಾತ್ಮರ ಚಿತಾಭಸ್ಮಕ್ಕೆ ಇಡೀ ಜನತೆಯೇ ಅರ್ಪಿಸಿತು. ಹೊಸಪೇಟೆಯಲ್ಲಿ ಪ್ರಚಂಡ ಮೌನ ಮೆರವಣಿಗೆಯಾಗಿ ಹಂಪಿಯಲ್ಲಿ ಶ್ರೀಗಳಾದ ಬಾಲಕೃಷ್ಣಭಟ್ ಮತ್ತು ರಾಮಭಟ್ಟರ ಪೌರೋಹಿತ್ಯದಲ್ಲಿ ವೇದ ಉಪನಿಷತ್ತು ಗೀತ ರಾಮಭಜನ ಶ್ರವಣದೊಂದಿಗೆ ಪ್ರಚಂಡ ಜನಸಮೂಹದೆದುರು ಶ್ರೀ ಸುಬ್ರಹ್ಮಣ್ಯಂರವರು ಚಕ್ರತೀರ್ಥದಲ್ಲಿ ವಿಲೀನಗೊಳಿಸಿದರು.

ಬಳ್ಳಾರಿ-ಹೊಸಪೇಟೆಗಳಲ್ಲಿ 12ನೆಯ ದಿನಾಂಕ ಪೂರ್ಣ ಹರತಾಳವಾಯಿತು. ಹಂಪೆಗೆ ಸಾವಿರಾರು ಸ್ತ್ರೀ-ಪುರುಷರು-ವಿದ್ಯಾರ್ಥಿಗಳು ಗಾಂಧೀಜಿ ಶ್ರಾದ್ಧ ಕರ್ಮಕ್ಕಾಗಿ ಹೋಗಿದ್ದರು.

ಕಂಪ್ಲಿಯ ಶ್ರೀ ಎಲಿಗಾರ ಮುಕ್ಕಣ್ಣನವರು ಅಲ್ಲಿಗೆ ಹೋದ ಸಾವಿರಾರು ಜನರಿಗೆ ಊಟಕ್ಕೇರ್ಪಡಿಸಿದುದು ಅತ್ಯಂತ ಪ್ರಶಂಸನೀಯವಾದುದಾಗಿದೆ.

ಬಳ್ಳಾರಿ ನಗರದಲ್ಲಿ 12ನೆಯ ಸಾಯಂಕಾಲ ಗಾಂಧಿ ಭಾವಚಿತ್ರದ ಮೆರವಣಿಗೆಯ ನಂತರ ಶ್ರೀ ಟಿ. ಸುಬ್ರಹ್ಮಣ್ಯರವರಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೂಡಿ ಗಾಂಧೀಜಿ ಜೀವಿತದ ಬಗ್ಯೆ ಪ್ರಮುಖರ ಭಾಷಣಗಳಾದವು. ಶ್ರೀ ದೊಡ್ಡನಗೌಡರು, ಕೃಷ್ಣಮೂರ್ತಿ, ಸುಬ್ಬಣ್ಣ ಶೇಕ್ ಸಾಹೇಬರು ತಾವು ರಚಿಸಿದ ಕವಿತೆಗಳನ್ನೋದಿದರು

### ಕೊಟ್ಟೂರು

### ಹೆರಿಗೆ ಆಸ್ಪತ್ರೆಯ ನಿರ್ಮಾಣ

ಇಲ್ಲಿಯ ವರ್ತಕ ಸಂಘದ ಸಭೆಯಲ್ಲಿ ದುಃಖಸೂಚಕ ತೀರ್ಮಾನವಾಗಿ ಗಾಂಧೀಜಿಯವರ ಮರಣದಿಂದ ಜಗತ್ತಿಗಾದ ಹಾನಿಯ ವಿವರವು ತಿಳಿಯಹೇಳಲಾಯಿತು 12ನೆಯ ತಾ|| ಸಂಪೂರ್ಣ ಹರತಾಳವಾಯಿತು ಅಂದಿನ ಬಹಿರಂಗ ಸಭೆಯಲ್ಲಿ ಮಹಾತ್ಮರ ಸ್ಮಾರಕ್ಕಾಗಿ 40 ಸಾವಿರ ರೂ ಖರ್ಚಿನಿಂದ ಒಂದು ಹೆರಿಗೆ ಆಸ್ಪತ್ರೆಯನ್ನು ನಿರ್ಮಿಸಲು ಜಾಹೀರು ಮಾಡಲಾಯಿತು. ಈ ಜನಸೇವೆಯ ಕಾರ್ಯಕ್ಕೆ ತಾಲೂಕಿನ ಜನರು ಮುಕ್ತಹಸ್ತದಿಂದ ಸಹಾಯಮಾಡಲು ಕೋರಲಾಗಿದೆ.

**ESTD. 1938.**

# RADIO - LECTRIC
## HOUSE
KRISHNAMA SETTY SREET,
BELLARY.

### ತೌಡೂರು

ಪೂಜ್ಯ ಗಾಂಧೀಜಿಯವರ ನಿಧನದ ಬಗ್ಗೆ ತಾ॥ 1-2-48ನೇ ದಿನ ಶ್ರೀ ಶಿವರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಶ್ರೀ ಸದ್ಯೋಜಾತರು ಗಾಂಧಿ ಜೀವನ ಚರಿತ್ರೆಯ ಬಗ್ಗೆ ಭಾಷಿಸಿದರು, ಕೆ. ಜೀವಣ್ಣ ಇವರು ಸ್ವತಃ ರಚಿಸಿದ ಗಾಂಧೀಜಿಯವರ ಮೇಲಿನ ಪದ್ಯಗಳನ್ನು ಓದಿದರು ಮತ್ತು ಗಾಂಧೀಜಿಯವರ ನಿರಭಿಮಾನತೆ ಹರಿಜನೋದ್ಧಾರತೆ ಇವುಗಳ ಬಗ್ಗೆ ಮಾತನಾಡಿದರು. ಶ್ರೀ ರುದ್ರಪ್ಪ ಇವರು ಮಹಾತ್ಮರ ಅಹಿಂಸಾ ಸಿದ್ಧಾಂತದ ಬಗ್ಗೆ ಮಾತನಾಡಿದರು. ಶ್ರೀ ಶಿ. ಮ. ಕೊಟ್ರಯ್ಯ, ನೀಲನಗೌಡ ಇವರುಗಳೂ ಸಾಕಷ್ಟು ಮಾತನಾಡಿ ಮಹಾತ್ಮರ ಮರಣದ ಬಗ್ಗೆ ದುಃಖ ವ್ಯಕ್ತಮಾಡಿ ಸಭೆ ಕೊನೆಗಾಣಿಸಿದರು

### ಕಾನಾಮಡುಗು

ಬಾಪೂಜಿ ತರುಣ ಸಂಘದಾಶ್ರಯದಲ್ಲಿ ವೇದಮೂರ್ತಿ ದೊಗ್ಗನಹಾಳು ಸ್ವಾಮಿಗಳು ಅಧ್ಯಕ್ಷತೆಯನ್ನು ವಹಿಸಿದ ಸಭೆಯಲ್ಲಿ ಗಾಂಧೀಜಿ ನಿಧನದ ಬಗ್ಗೆ ದುಃಖ ವ್ಯಕ್ತವಾಯಿತು. ಶ್ರೀಗಳೂ ಮತ್ತು ಶ್ರೀ ಪಾಲ್ತೂರು ಚನ್ನಬಸಪ್ಪನವರು ಬಾಪೂಜಿ ಜೀವನ ವ್ಯಕ್ತಿತ್ವ ಮತ್ತು ತತ್ವಗಳ ಮೇಲೆ ವಿಪುಲವಾಗಿ ಭಾಷಣ ಕೊಟ್ಟರು ಬಾಪೂಜಿ ತರುಣ ಸಂಘಕ್ಕೆ ಶ್ರೀ ದಾ. ಪ., ಶರಣಪ್ಪ ಸ್ವಾಮಿಗಳು 25 ರೂ ದಾನವಾಗಿ ಇತ್ತಿರುವರು.

### ಹಾ. ಹೊಸಹಳ್ಳಿ

ಮ॥ ಗಾಂಧಿಯವರ ನಿಧನವಾರ್ತೆಯು ತಿಳಿದ ತಕ್ಷಣವೇ ಈ ಗ್ರಾಮದ ಜನರು ಶೋಕ ಸಭೆ ನೆರವೇರಿಸಿ ಗಾಂಧೀಜಿಯವರ ಶಾಶ್ವತ ಸ್ಮಾರಕವನ್ನು ಸ್ಥಾಪಿಸಲು ಕೃತನಿಶ್ಚಯರಾಗಿ ಶ್ರೀ ರಾಮರೆಡ್ಡಿ ಜಾಗಿದಾರರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುವರು. ಈ ಸಮಿತಿಯಲ್ಲಿ ಕಿರಣಂ ರಾಘವೇಂದ್ರರಾವ್, ರೆಡ್ಡಿ ವೀರನಗೌಡು, ಗೋವಿಂದರೆಡ್ಡಿ, ಕೃಷ್ಣರಾವ್, ಶರಭಪ್ಪ ವೀರಯ್ಯ ಈ ಮಹನೀಯರು ಸದಸ್ಯರಾಗಿ ಆರಿಸಲ್ಪಟ್ಟಿರುತ್ತಾರೆ. ನಿಧಿ ಸಂಗ್ರಹಕಾರ್ಯವು 12ನೇ ತಾ॥ ನಿಂದ ಪ್ರಾರಂಭವಾಗಿದೆ.

# The Rayalaseema Confectionery Works, Bellary.

## ದಿ ರಾಯಲಸೀಮ ಕನ್ಫೆಕ್ಶನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | | |
|---|---|---|
| First Quality | .... .... | Rs. 32.0-0 |
| Second | .... .... | Rs. 28-0 0 |
| Without essence | .... | Rs. 26-0-0 |

Per Tin of 28 lbs Ex, Factory, Sales Tax Extra.

None to beat us in quality. Try and be convinced - Encourage the industries of these most backward tracts.

**ಇಳಿಸಿದ ಬೆಲೆ** **ಪೆಪ್ಪರಮಿಂಟು**

| | | |
|---|---|---|
| ಪ್ರಥಮ ವರ್ಗದ್ದು | .... | ರೂ 32—0—0 |
| ದ್ವಿತೀಯ " | .... | 28—0—0 |
| ಎಸ್ಸೆನ್ಸ ಇಲ್ಲದ್ದು | .... | 26—0-0 |

28 ಪೌಂಡಿನ ಟಿನ್ನಿನ ಫ್ಯಾಕ್ಟರಿ ಹೊರಗಿನ ಬೆಲೆ ಸೇಲ್ಸಟ್ಯಾಕ್ಸ ಬೇರೆ-ಗುಣದಲ್ಲಿ ತಯಾರಿಕೆಯಲ್ಲಿ ನಾವು ಯಾರಿಗೂ ಕಡಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಯಾವಾಗಲೂ ನಮ್ಮಲ್ಲೇ ಬರುವಿರಿ. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪೋಷಿಸಿರಿ.


### ಸಾಗರಹಾಳು (ಶಿರುಗುಪ್ಪ)

ಭರತ ಖಂಡದ ದಿವ್ಯಜ್ಯೋತಿಯು ಶಾಂತವಾಗಿ ಕಣ್ಮರೆಯಾದುದಕ್ಕೆ ಈ ಊರಿನ ರೈತರು, ಇತರ ಜನರು ದುಃಖಸಾಗರದಲ್ಲಿ ಮುಳುಗಿ ಸಭೆಗೂಡಿ ದುಃಖಪೂರಿತ ಉಪನ್ಯಾಸಮಾಡಿ ಗಾಂಧೀಜಿ ಗುಣಗಾನಮಾಡಿದರು.

### ಕಮಲಾಪುರ

ಪ್ರಾತಃಕಾಲ ಮೆರವಣಿಗೆ ಧ್ವಜವಂದನೆಯಿಂದ ಗಾಂಧೀ ದಿನಾಚರಣೆಯಾಯಿತು. ಚಕ್ರತೀರ್ಥವ ಶ್ರಾದ್ಧಕ್ಕೆ ಕಮಲಾಪುರದ ಸ್ತ್ರೀ-ಪುರುಷರೆಲ್ಲಾ ಭಾಗವಹಿಸಿದ್ದರು. ಜನಾಬ ಸಾಹೇಬಜಾನರ ಅಧ್ಯಕ್ಷತೆಯಲ್ಲಿ ಯಂ. ಯನ್. ಕೆ. ಗೌಡ, ರಾಜನ್ನ. ಡಾ. ದಾಸರಾವು ಶಂಭುನಾಥ ಆಶ್ರಮದ ಸ್ವಾಮಿ ಭಾಷಣವಾಯಿತು. ಗಾಂಧಿ ಪ್ರತಿಮೆಗಾಗಿ ಹಣದ ಸಂಗ್ರಹವಾಯಿತು.

—)0(—

## ರಾಜಕೀಯ ಕೈದಿಗಳಿಗೆ ಭೂದಾನ

ಮುನಿಸಿಪಾಲ್ಟಿ ಕಾರ್ಪೊರೇಶನ್‌ಗಳಿಗೆ ದೂರವಿದ್ದ ಸರ್ಕಾರದ ಶಿವಾಯಜಮೆ, ಪೊರಂಬೋಕು ಭೂಮಿಗಳಿದ್ದರೆ ಮಾತ್ರ ಅಂಥವನ್ನ ಕೊಡಲಾಗುವುದೆಂದು ಸರ್ಕಾರದ ಪ್ರಕಟನೆ ಹೊರಟಿದೆ.


# Meenakshi Bhavan.

(Regd.)

## ಮೀನಾಕ್ಷಿ ಭವನ (ರಿಜಿಸ್ಟರ್ಡ್.)

**ಶಾಖೆಗಳು:—**

1) ಮೀನಾಕ್ಷಿ ಗಾರ್ಡನ ಕೆಫೆ
2) ಮೀನಾಕ್ಷಿ ಭವನ, ಬೆಂಗಳೂರು ರೋಡ್.

**ಸುಂದರ ವಸತಿಸ್ಥಾನ-ಸ್ವಚ್ಛ**
**ಹವೇಶೀರ್ - ಕೊಠಡಿಗಳು**
**ರುಚಿಯಾದ ಶುಚಿಯಾದ ಫಲಹಾರ ಊಟ**

ಬಳ್ಳಾರಿಗೆ ಬಂದಾಗ ನಿಮಗೇ ಅನುಭವವಾಗುವುದು.


**ಕಾಶ್ಮೀರ**—ಕಾಶ್ಮೀರ ಪ್ರಶ್ನೆಯನ್ನು ಮುಂದೆ ಸಾಗಲು ಭದ್ರತಾ ಮಂಡಲದ ಭಾರತ ಪ್ರತಿನಿಧಿಗಳಿಗೆ ಸಲಹೆ ಕೊಡಲಾಗಿದೆ. ಈ ವಾರ ಕಾಶ್ಮೀರದಲ್ಲಿ ಭೀಕರ ಕದನವಾಗಿ 11 ಸಾವಿರ ಗುಡ್ಡಗಾಡು ಜನರ ದಾಳಿಯಲ್ಲಿ 2 ಸಾವಿರ ಜನರು ಮರಣ ಹೊಂದಿದರು.

ಪರ್ಷಿಯಾಕ್ಕೆ ಕೊಡುವ ಅಮೇರಿಕಾದ ಸಹಾಯವು ರಷ್ಯಾಕ್ಕೆ ಅಪಾಯಕರವಾದುದೆಂದು ರಷ್ಯಾ ಸರ್ಕಾರವು ವಿರೋಧಿಸಿದೆ.

# AMBIKA BHAVAN
( REGD. )

**Boarding - Lodging.**

Was opened on 15—2—48 at 6-30 A.M. All sorts of modern comforts have been made.

B. GOPAL RAO.
Propritor.

ಅಂ ಬಿ ಕಾ ಭ ವ ನ
(ರಿಜಿಸ್ಟರ್.)

**ಊಟ ಮತ್ತು ವಸತಿಗೃಹದ**

ಉದ್ಘಾಟನೆಯು ಇದೇ ತಿಂಗಳು ತಾ॥15.2.48 ಆದಿತ್ಯವಾರ ಉದಯ ಘಂಟೆ 6-30ಕ್ಕೆ ನಡೆಯಿತು. ಸಕಲ ಸೌಕರ್ಯಗಳ ನವೀನ ಸುವ್ಯವಸ್ಥೆ ಇದೆ.

ಬಿ. ಗೋಪಾಲರಾವ್,
ಪ್ರೊಪ್ರಯಿಟರ್.


## ಅಕ್ರಮ ಸಂಸ್ಥೆಗಳು

ಲೀಗ್ ನ್ಯಾಷನಲ್ ಗಾರ್ಡ್ಸ್ ಮತ್ತು ಖಾಕ್ಸಾರ ಸಂಸ್ಥೆಗಳು ಶಾಸನವಿರೋಧ ಮತ್ತು ಅಕ್ರಮವಾದುವು ಎಂದು ಇಂಡಿಯಾ ಸರ್ಕಾರವು ಆಜ್ಞೆಯನ್ನು ಹೊರಡಿಸಿದೆ. ದೇಶದಲ್ಲಿ ಈಗ ವ್ಯಾಪಿಸಿರುವ ಹಿಂಸೆ ಮತ್ತು ದ್ವೇಷ ಶಕ್ತಿಗಳನ್ನು ಬುಡಸಹಿತ ನಿರ್ಮೂಲ ಮಾಡಲು ಸರಕಾರವು ವಹಿಸಿರುವ ಧೋರಣದ ಮೊದಲ ಹೆಜ್ಜೆಯಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಅಕ್ರಮ ಸಂಸ್ಥೆಯೆಂದು ಸಾರಲಾಯಿತು. ಈಗ ಲೀಗ್ ಖಾಕ್ಸಾರ ಸಂಸ್ಥೆಗಳಿಗೆ ಸರದಿ ಬಂದಿದೆ. ಖಾಸಗಿ ಸೈನ್ಯಗಳಿಗೆ ಅವಕಾಶ ಕೊಡಬಾರದೆಂದು ತೀರ್ಮಾನಿಸಲಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು ಎಲ್ಲಾ ಕಡೆಗಳಲ್ಲೂ ಬಂಧಿಸಲ್ಪಡುತ್ತಿರುವರು. ಬಳ್ಳಾರಿಯಲ್ಲೂ ಸಹ ವರದರಾಜಲುಶೆಟ್ಟಿ ಎಂಬುವ ಸಂಘಟಕನನ್ನು ಬಂಧಿಸಿದ್ದಾರೆ.

## ಗಾಂಧಿನಗರ ಹೈಯರ್ ಎಲಿಮೆಂಟರಿ ಪಾಠಶಾಲೆ ಬಳ್ಳಾರಿ

11-2-48ನೆಯ ತಾ॥ ಮದರ್ಸ ಅಸೋಸಿಯೇಷನ್ ಆಶ್ರಯ ಶ್ರೀಮತಿ ಡಾ॥ ಲಕ್ಷ್ಮೀದೇವಿಯವರಧ್ಯಕ್ಷತೆಯಲ್ಲಿ ಸಭೆಯು ಸಮಾವೇಶವಾಗಿ ಈಕೆಳ ತೀರ್ಮಾನಗಳು ಸ್ವೀಕೃತವಾದವು.

ಗಾಂಧಿನಗರ ಹೈಯರ್ ಎಲಿಮೆಂಟರಿ ಮದರ್ಸ ಅಸೋಸಿಯೇಷನ್ ಮಹಾತ್ಮ ಗಾಂಧಿಯವರ ನಿಧನಕ್ಕೆ ತನ್ನ ಹಾರ್ದಿಕ ದುಃಖವನ್ನು ವ್ಯಕ್ತಪಡಿಸುತ್ತಾ ಮೃತರಾತ್ಮಕ್ಕೆ ಶಾಂತಿಕೋರುವುದು.

ಗಾಂಧೀಜಿ ತತ್ವಗಳನ್ನು ಪಾಲಿಸಲು ಸಂಘವು ಬದ್ಧವಾಗಿ ಪಂಡಿತ ನೆಹರೂರ, ಪಟೇಲರ ಅವರ ಮಂತ್ರಿಮಂಡಳದ ಮುಂಖಡತ್ವ ಒಪ್ಪುವುದು.

—ಮುಸಲ್ಮಾನರಿಗೆ ಪ್ರತ್ಯೇಕ ಶಾಲೆಗಳು ಇನ್ನು 5 ವರ್ಷಗಳವರೆಗೆ ಮದ್ರಾಸಾಧಿಪತ್ಯದಲ್ಲಿರುವುವು. ಅನಂತರ ಅವುಗಳನ್ನು ಮುಂದುವರಿಸಲು ಸರ್ಕಾರವು ಬದ್ಧವಿಲ್ಲ. 6-7-8 ನೆಯ ತರಗತಿಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಂತೀಯ ಭಾಷೆಯನ್ನು ಕಲಿಸಲೇಬೇಕು.


# B. V. BUDUR
**Photographers, Watch Repairers and Photo Goods Dealers.**

**Head Office: BELLARY. Branch: HOSPET.**

Electric Studio a Speciality
Excellent Workmanship
Executed Promptly
Expeditiously delivered
Enlargement of Photoes,
.... .... .... .... Undertaken.

**Reasonable Charges,**

Hitherto Scarce

*Roll Films are available now for sale.*

# ವಾಸುವಾಂಬಾ ಭವನ

## ಕಾಫಿಕ್ಲಬ್ ಮತ್ತು ಊಟದ ಹೋಟೆಲು

ಬೆಂಗಳೂರ್ ರೋಡ್, ಬಳ್ಳಾರಿ.

- ಸುಂದರ ವಸತಿಸ್ಥಾನ
- ಗಾಳಿ ಬೆಳಕುಗಳ ಸ್ವಚ್ಛರೂಂಗಳು
- ತಣ್ಣೀರು, ಬಿಸಿನೀರಿನ ಸ್ನಾನ
- ವ್ಯಾಪಾರ, ಉದ್ಯಮಗಳಿಗೆ ಮಧ್ಯಸ್ಥಳ
- ರುಚಿ, ಆರೋಗ್ಯಕರ ಭೋಜನ ಮತ್ತು ಫಲಹಾರ
- ವಿನಯಶೀಲ ನೌಕರವರ್ಗ

ಪರ್ಮಿಟ್ ಕೊಟ್ಟಲ್ಲಿ ಸಂತೋಷ ಕೂಟಗಳಿಗೂ ಅಲ್ಪೋಪಹಾರಗಳನ್ನು ಬೇಕಾದಂಥ ಪಕ್ವಾನ್ನ ಫಲಹಾರಗಳನ್ನು ಸರಿಯಾದ ದರಗಳಿಂದ ಒದಗಿಸುತ್ತೇವೆ.

ಬಳ್ಳಾರಿಗೆ ಬಂದರೆ ಇಲ್ಲಿಯೇ
ವಸತಿಮಾಡಲು ಮರೆಯಬೇಡಿರಿ


**The Rayalaseema Bank Ltd.**
Head Office: BELLARY.

**ANNOUNCEMENT.**

We have pleasure to announce that the Net Profit for the year ending 31st December, 1947, (subject to audit) is Rs. 1,19,014—10—7 as against Rs. 54,207—1—6 for 1946.

B. V. Seshagiri Rao, B. Com
Secretary.

**ದಿ ರಾಯಲಸೀಮ ಬ್ಯಾಂಕ್ ಲಿ॥ ಬಳ್ಳಾರಿ.**

— (0) —

31ನೆಯ ಡಿಶಂಬರ್ 1947ಕ್ಕೆ ಮುಗಿಯುವ ವರ್ಷದಲ್ಲಿ ರೂ. 1,19.014-10-7 ನಿವ್ವಳ ಲಾಭ ಬಂದಿದೆಯೆಂಬುದನ್ನು ತಿಳಿಸಲು ನಮಗೆ ಸಂತೋಷವಾಗುತ್ತದೆ. 1946ಕ್ಕೆ ರೂ. 54,207-1-6 ಲಾಭ ಬಂದಿತ್ತು.

ಬಿ. ವಿ. ಶೇಷಗಿರಿರಾವು, ಬಿ. ಕಾಂ.
ಕಾರ್ಯದರ್ಶಿ.


**NAVA BHARAT BELLARY.**

Reg. No. M. 47

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates |
| --- | --- |
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri.......................................
.......................................
.......................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್.

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ರ್ಷ ೧೧
ಂಚಿಕೆ ೭

ಬಳ್ಳಾರಿ ಫಿಬ್ರವರಿ ೨೩ ಸೋಮವಾರ ೧೯೪೮

0—2—0

ಸಂಪಾದಕ ಮತ್ತು ಪ್ರಕಾಶಕ
ಟಿ ಬಿ. ಕೇಶವರಾವ್.


## ಸುಭಾಸಬೋಸರು ಜೀವಂತರಿರುವರಂತೆ

—

ಅಣ್ಣ

ಶರತಬೋಸರ ಹೇಳಿಕೆ.

— ● —

ಭಾರತಕ್ಕೆ ಈಗಿನ ಪರಿಸ್ಥಿತಿಯಲ್ಲಿ

ಬರುವರೇ?

(ವಿವರ 11ನೇ ಪುಟದಲ್ಲಿ ನೋಡಿರಿ)

# ಮಹಾತ್ಮ ಕಬೀರ್.

ಕಥಾ ಸಾರಾಂಶ.

ಕ್ರಿಸ್ತಶಕ ಇಪ್ಪತ್ತನೆ ಶತಮಾನ:—

ಪುಣ್ಯಭೂಮಿ ಎನಿಸಿದ ಕಾಶೀಕ್ಷೇತ್ರದಲ್ಲಿ ಕಬೀರ್ ಮಂದಿರವೆಂಬ ಸ್ಥಳ. ಯಾತ್ರಾರ್ಥಿಗಳು ಮಂದಿರದಲ್ಲಿ ಪೂಜಾರಿಯಿಂದ ಕಬೀರ್ ಮಹಾತ್ಮನ ಜೀವನ ಚರಿತ್ರೆಯನ್ನು ಕೇಳಲು ಬಯಸುವರು. ಪೂಜಾರಿಯು ಕಥೆಯನ್ನು ಹೇಳುವನು.

ಕ್ರಿಸ್ತಶಕ ೧೪ನೇ ಶತಮಾನದಲ್ಲಿ ಅದೇ ಕಾಶಿಯಲ್ಲಿ ವಾಸಿಸುತ್ತಿದ್ದ ರಾಮಾನಂದರೆಂಬ ರಾಮಭಕ್ತರು ತಮ್ಮ ಶಿಷ್ಯವರ್ಗದವರಿಗೆ ಶ್ರೀರಾಮ ನಾಮ ಮಹಿಮೆಯನ್ನು ಉಪದೇಶಿಸುತ್ತಿದ್ದರು. ಅವರು ಒಂದು ದಿನ ಬೆಳಗಿನಝಾವ ಗಂಗಾಸ್ನಾನಕ್ಕೆಂದು ಹೋಗುತ್ತಿದ್ದಾಗ ಆಕಾಶದಿಂದ ಭೂಮಿಗಿಳಿದ ಒಂದು ದಿವ್ಯ ಜ್ಯೋತಿಯನ್ನು ನೋಡಿ ಮಹಾತ್ಮನೋರ್ವನು ಜನಿಸುವನೆಂಬ ಭವಿಷ್ಯವಾಣಿಯನ್ನು ನುಡಿದರು, ಅದರಂತೆಯೇ ಕಬೀರ್ ಮಹಾತ್ಮನು ಲಾಹೋರ್ ಎಂಬ ಒಂದು ಕಮಲಸರೋವರದಲ್ಲಿ ತನ್ನ ಜನ್ಮವನ್ನು ತಾಳಿದನು ನೇಯ್ಗೆಯ ಕಸುಬಿನ ನೀರು-ನೀಮಾ ಎಂಬ ಮುಸಲ್ಮಾನ ದಂಪತಿಗಳು ಅಲ್ಲಿಗೆ ಸಮೀಪದಲ್ಲಿಯೇ ವಾಸಿಸುತ್ತಿದ್ದರು. ಒಂದು ದಿನ ನೀರು ಆ ಸರೋವರದ ಬಳಿ ಹೋಗುತ್ತಿದ್ದಾಗ ಶಿಶುರೋಧನದ ಧ್ವನಿಯನ್ನು ಕೇಳಿ, ಆ ಧ್ವನಿ ಇದ್ದೆಡೆಗೆ ಹೋಗಲು ಕೆರೆಯಲ್ಲಿ ಒಂದು ಕಮಲಪುಷ್ಪದಲ್ಲಿ ಗಂಡುಶಿಶುವು ಮಲಗಿದ್ದುದನ್ನು ಕಂಡು ಅದನ್ನು ತನ್ನ ಮನೆಗೆ ಎತ್ತಿಗೊಂಡು ಬಂದನು. ಆ ದಂಪತಿಗಳೀರ್ವರೂ ಅದನ್ನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗುವಂತೆ ಸಾಕಿ ಸಲಹಿದರು ಹೆಸರಿಡುವದಕ್ಕಾಗಿ ಮೌಲ್ವಿಯನ್ನು ಬರಮಾಡಿದರು ಮೌಲ್ವಿಯು ದೇವರನ್ನು ಪ್ರಾರ್ಥಿಸಿ ಪದ್ಧತಿಯಂತೆ ಕುರಾನಿನಲ್ಲಿ ನೋಡಲು 'ಕಬೀರ್' ಎಂಬ ಪದವು ಕಣ್ಣಿಗೆ ಬೀಳುವುದು, ಆ ಹೆಸರನ್ನು ಇಡಲು ಮೌಲ್ವಿಗೆ ಇಷ್ಟವಿಲ್ಲ. ಏಕೆಂದರೆ ಆ ಶಬ್ದವು ದೇವರಿಗೆ ಸಂಬಂಧಿಸಿದ್ದು ಮನುಷ್ಯರಿಗೆ ತಕ್ಕದ್ದಲ್ಲವೆಂದು ಪುನಃ ಕುರಾನದ ಹಾಳೆಯನ್ನು ಮಗುಚಿನೋಡುವನು. ಎಲ್ಲಿ ನೋಡಿದರೂ ಕಬೀರ್ ಎಂಬ ಶಬ್ದವಲ್ಲದೆ ಬೇರೆ ಕಾಣಿಸದು. ಮೌಲ್ವಿಯು [illegible]ನು ಅಷ್ಟರಲ್ಲಿ ಓರ್ವ ಸ್ತ್ರೀಯು ನಿಶ್ಚೇಷ್ಟಿತವಾಗಿದ್ದ ಶಿಶುವೊಂದನ್ನು ಎತ್ತಿಕೊಂಡು ಬಂದು ಮೌಲ್ವಿಯ ಮುಂದಿಡುವಳು. ಮಗುವಿಗೆ ಉಸಿರೇ ಇಲ್ಲ. ಸಂತೋಷದ ಸಮಯದಲ್ಲಿ ನಿರ್ಜೀವಿಯಾಗಿದ್ದ ಮಗುವನ್ನು ಅಲ್ಲಿಗೆ ತಂದುದಕ್ಕಾಗಿ ಎಲ್ಲರೂ ಖೇದಗೊಳ್ಳುವರು. ಆದರೆ ಎಂತಹ ಆಶ್ಚರ್ಯ ನೀಮಾಳ ತೊಡೆಯಲ್ಲಿ ಮಲಗಿದ್ದ ಶಿಶುವು ಆ ನಿರ್ಜೀವಿ ಶಿಶುವನ್ನು ಮುಟ್ಟಿದ ಕೂಡಲೇ ಅದಕ್ಕೆ ಚೈತನ್ಯ ಉಂಟಾಯಿತು. ಕಬೀರ್ ಎಂಬ ಹೆಸರು ಅನ್ವರ್ಥವೆಂದು ಮೌಲ್ವಿಗೆ ತೋರಿತು. ಆ ಶಿಶುವಿಗೆ ಕಬೀರ್ ಎಂಬ ನಾಮಕರಣ ಮಾಡಿದರು. ಕಬೀರನಿಗೆ ಬಾಲ್ಯದಿಂದಲೂ ಭೂತದಯೆಯೂ, ಜಾತಿಭೇದಗಳಲ್ಲಿ ಅಸಹನೆಯೂ ಸಹಜಗುಣಗಳಾಗಿದ್ದವು. ತನ್ನ ಮನೆಗೆ ಸಮೀಪದಲ್ಲಿದ್ದ ಶ್ರೀರಾಮಾನಂದರ ಮಠಕ್ಕೆ ರಾಮಭಜನೆ ಕೇಳಲು ಹೋಗಬೇಕೆಂದು ಅವನಿಗೆ ಆಸೆ ಅಲ್ಲಿನ ಕಾವಲುಗಾರರು ಅವನನ್ನು ಒಳಕ್ಕೆ ಬಿಡರು. ಆ ಕಾವಲುಗಾರರಿಂದ ತಿರಸ್ಕೃತನಾಗಿ ಮನೆಗೆ ಹಿಂತಿರುಗುತ್ತಿರುವಾಗ ಯಾವನೋ ಒಬ್ಬನು ಕಬೀರನಿಗೆ "ಬೆಳಗಿನ ಝಾವ ರಾಮಾನಂದರು ಗಂಗಾಸ್ನಾನಕ್ಕೆ ಬರುವರು. ಆಗ ಅಲ್ಲಿ ಅವರನ್ನು ಕಾಣು" ಎಂದು ಹೇಳುವನು. ಅದರಂತೆಯೇ ಕಬೀರ್ ಒಂದು ದಿನ ಬೆಳಗಿನ ಝಾವ ಗಂಗಾನದಿಯ ಬಳಿಯಲ್ಲಿ ಕಾದಿರುವನು. ಅವರ ಪಾದಸ್ಪರ್ಶ ಮಾಡಬೇಕೆಂಬ ಆಕಾಂಕ್ಷೆಯಿಂದ ಮೆಟ್ಟಲಿನಮೇಲೆ ಮಲಗುವನು. ಅವನು ಮಲಗಿದ್ದುದನ್ನು ಕಾಣದೆ ರಾಮಾನಂದರು ಅವನ ತಲೆಯ ಮೇಲೆ ಕಾಲಿಡುವರು. ಬಾಧೆಯನ್ನು ತಾಳಲಾರದೆ "ಆ" ಎಂಬ ಕಬೀರನ ಆರ್ತ ಧ್ವನಿಯನ್ನು ಕೇಳಿ ರಾಮಾನಂದರು "ರಾಮ! ರಾಮ! ಕಾಣದೆ ಯಾರನ್ನೋ ತುಳಿದುಬಿಟ್ಟನೆ" ಎಂದು ಕಬೀರನನ್ನು ಸಂತೈಸಿ "ಅಪ್ಪಾ! ರಾಮ ರಾಮ! ಎಂದು ಹೇಳು ನಿನ್ನ ಬಾಧೆಯೆಲ್ಲವೂ ಪರಿಹಾರವಾಗುವುದು" ಎಂದರು. ಕಬೀರನಿಗೆ ಗುರುವಿನ ಉಪದೇಶವಾಯಿತು. ಅಂದಿನಿಂದ "ರಾಮ" ಎಂಬ ಶಬ್ದವೇ ತನ್ನ ಆರಾಧ್ಯ ದೈವವೆಂದು ನಂಬಿದನು. ರಾಮಭಕ್ತನಾದ ಕಬೀರನು ಬಾಲ್ಯದಿಂದಲೇ ಶ್ರೀರಾಮನಾಮ ಮಹಿಮೆಯನ್ನು ಜನರಿಗೆ ಉಪದೇಶಿಸುತ್ತಿದ್ದನು

ಇನ್ನುಳಿದಭಾಗ ತೆರೆಯ ಮೇಲೆ ನೋಡಿರಿ,

# ಬಳ್ಳಾರಿ ಜಿಲ್ಲಾ ಸಮಾಚಾರಗಳು

## ಆತ್ಮಶಾಂತಿ ಉತ್ಸವ.

6-2-48 ರಿಂದ 16-2-48ರ ವರೆಗೆ ಮಹಾರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಹವನ, ಹೋಮ, ಪೂರ್ಣಾಹುತಿ ನಡೆಸಿ ಪೂರ್ಣ ಭಾರತ, ಭಾಗವತ, ದೇವಿ ಭಾಗವತ, ರಾಮಾಯಣ, ಹರಿವಂಶ ಗೀತೆ ಉಪನಿಷದ್ ಗ್ರಂಥಗಳ ಪಾರಾಯಣೆ ನಡೆಸಿ ಮಹಾತ್ಮ ಗಾಂಧಿಯವರ ಆತ್ಮಕ್ಕೆ ಶಾಂತಿ ಕೋರಲಾಯ್ತೆಂದೂ ಪ್ರತಿದಿನ ಬ್ರಾಹ್ಮಣರ ಸಂತರ್ಪಣೆ ಮಾಡಲಾಯ್ತೆಂದೂ ಶ್ರೀಮಾನ್ ರಾ. ಸಾ. ವಿಠಲಶೇಷಪ್ಪಶೆಟ್ಟರ ಸದನದಿಂದ ತಿಳಿದು ಬರುತ್ತದೆ.

## ಹೊಸಪೇಟೆ

12ನೆಯ ದಿನಾಂಕ ಚಕ್ರತೀರ್ಥದಲ್ಲಿ ಗಾಂಧೀಜಿ ಅಂತ್ಯವಿಧಿಯು ನಂತರ ಸಾಯಂಕಾಲ ಮುನಿಸಿಪಲ್ ಆಫೀಸ್ ಮೈದಾನದಲ್ಲಿ ಸಭೆಗೂಡಿ ಶ್ರೀಗಳಾದ ಅನಂತಾಚಾರ್, ಮು. ವೆಂಕಟಸ್ವಾಮಿ, ಯಂ. ಯಂ. ಭಟ್ಟ, ರಾಮಭಟ್ಟ, ಪಾಷಾಸಾಹೇಬರು, ಎ. ಪಿ. ರಾವ್ (ಸಕ್ಕರೆ ಕಾರ್ಖಾನೆ) ಸೈಯದ್ ಇಸ್ಮಾಯಿಲ್, ಅಸುಂಡಿ ತಿರುಮಲರಾವ್, ತಿರುಮಲಾಚಾರ್ಯರು, ಗಾಂಧೀಜಿ ಗುಣಗಾನ ಮಾಡಿದರು ಕೊನೆಗೆ ಮಹಾತ್ಮರ ಸ್ಮಾರಕಕ್ಕಾಗಿ 2 ಲಕ್ಷ ರೂ. ಸಂಗ್ರಹಿಸುವ ನಿಶ್ಚಯವಾಗಿ ಸಭೆಯಲ್ಲಿ ನೂರು ಸಾವಿರ ರೂ.-ಗಳ ವಾಗ್ದಾನವಾಯಿತು.

(ಸ್ವ ಸು.)

## ಹೊಸಪೇಟೆ ರೈತರ ಸಭೆ

ಡಾ. ಗೌಡರಧ್ಯಕ್ಷತೆಯಲ್ಲಿ 14ನೆಯ ದಿನಾಂಕ ಸಭೆಗೂಡಿ ಮಹಾತ್ಮರ ಜೀವಿತ ಬಗ್ಗೆ ಭಾಷಣಗಳನಂತರ ದುಃಖಸೂಚಕ ಗೊತ್ತುವಳಿಯು ಮೌನ ಪ್ರಾರ್ಥನೆಯಿಂದ ಸ್ವೀಕೃತವಾಯಿತು. ಅಲ್ಲದೆ ಸ್ಮಾರಕಕ್ಕಾಗಿ ಪೂರ್ಣ ಸಹಕಾರದ ಆಶ್ವಾಸನ ಕೊಡಲಾಯಿತು. ಕಬ್ಬಿನ ಧಾರಣೆ, ರೈತರ ಕಷ್ಟ, ಗೊಬ್ಬರದ ಬಗ್ಗೆ ರೈತರ ಪ್ರತಿನಿಧಿಗಳ ಶಿಷ್ಟಮಂಡಲವು ಮದ್ರಾಸಿನಲ್ಲಿ 19-2-48ರ ದಿನ ಮಂತ್ರಿಗಳನ್ನು ಕಾಣಲು ನಿಶ್ಚಯವಾಯಿತು.

(ಸ್ವ. ಸು)

## ಉರವಕೊಂಡ ಜಗದ್ಗುರುಗಳ ಕಾರ್ಯಕ್ರಮ.

ಉರವಕೊಂಡ ಗವಿಮಠದ ಜಗದ್ಗುರುಗಳಾದ ಶ್ರೀ ಕರಿಬಸವರಾಜೇಂದ್ರಸ್ವಾಮಿಗಳು 28-2-48ನೆಯ ಭಾನುವಾರ ರಾತ್ರಿಯ ರೈಲಿನಿಂದ ಧಾರ್ವಾಡಕ್ಕೆ ಪ್ರಯಾಣ ಬೆಳೆಸುವರು. 29—2—48ನೆಯ ದಿನ ಅಲ್ಲಿ **ಕರ್ನಾಟಕ ಪ್ರಾದೇಶಿಕ ಗ್ರಂಥಾಲಯದ** ಪ್ರಾರಂಭೋತ್ಸವವನ್ನು ಮುಗಿಸಿಕೊಂಡು ಆರಾತ್ರಿಯೇ ಹಿಂದಿರುಗುವರು. ಹುಬ್ಬಳ್ಳಿ ಧಾರವಾಡಗಳಲ್ಲಿ ಯಾರೂ ಇತರ ಯಾವ ವಿಧದ ಕಾರ್ಯಕ್ರಮಗಳನ್ನಿಟ್ಟುಕೊಳ್ಳಬಾರದೆಂದು ಸ್ವಾಮಿಗಳ ಕಛೇರಿಯಿಂದ ವಿನಂತಿಸುತ್ತಾರೆ.

## ತಾಡೂರು.

12ನೆಯ ತಾ॥ ಗಾಂಧೀಜಿ ದಿನಾಚರಣೆಯು ನಿಮಿತ್ಯ ಪ್ರಭಾತಫೇರಿ ಭಾವಚಿತ್ರ ಮೆರವಣಿಗೆಯನಂತರ ಶ್ರೀ॥ ವೀರಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ರುದ್ರಪ್ಪ ಸದ್ಯೋಜಾತ ಇವರು ಮಹಾತ್ಮರ ಬಗ್ಗೆ ಮಾತನಾಡಿದರು ಗಾಂಧಿ ಪುತ್ಥಳಿಯ ಸ್ಥಾಪನೆಗೆ ಯತ್ನಗಳಾಗುತ್ತಲಿವೆ.

## ಕಲುಗೋಡು (ರಾಯದುರ್ಗ)

ಆದರ್ಶ ಯುವಕ ಸಂಘದವರು ಪ್ರಾಥಮಿಕ ಶಾಲಾ ತಂಡವೊಡನೆ ಗಾಂಧೀ ದುಃಖದಿನಾಚರಣೆಯನ್ನು ಆಚರಿಸಿದರು. ಇದಕ್ಕಾಗಿ ಸಮಾವೇಶವಾದ ಸಭೆಯಲ್ಲಿ ಶ್ರೀ ರಾಮರಾಯರು (ಅಧ್ಯಾಪಕ) ಬಸವನಗೌಡರು, ತಿಪ್ಪಾರೆಡ್ಡಿ, ಪಾ॥ ವೀರಭದ್ರಾರೆಡ್ಡಿ, ಡಾಕ್ಟರ್ ಹೊನ್ನೋಜಿ, ಸಂಜೀವರಾವು ಉಪಾಧ್ಯಾಯರು ಗಾಂಧಿ ಜೀವಿತ ತತ್ವಗಳ ಬಗ್ಗೆ ವಿಸ್ತಾರವಾಗಿಯೂ, ಎಲ್ಲರಿಗೂ ಮನನವಾಗುವಂತೆ ಭಾಷಣಮಾಡಿದರು ಎಲ್ಲರೂ ವೇದಾವತಿ ನದಿಗೆ ಹೋಗಿ ಕರ್ಮಕಾಂಡವನ್ನು ನೆರವೇರಿಸಿ ದುಃಖಿತರಾಗಿ ಮರಳಿದರು.

## ಹಾ. ಹೊಸಹಳ್ಳಿ

12ನೆಯ ತಾ॥ ಗಾಂಧಿ ಸ್ಮಾರಕ ಸೇವಾಸಂಘದವರು ಶ್ರೀ ವೆಂಕಣ್ಣನವರ ಅಧ್ಯಕ್ಷತೆಯಲ್ಲಿ ಸಭೆಗೂಡಿತ್ತು. ಅದರ ಮೊದಲು ದೈವಗೀತೆ ಭಜನೆ, ಹರಿಕಥಾ ಶ್ರವಣವಾಯಿತು ಬುನಾದಿಯ ಸ್ಥಾಪನಾನಂತರ ಶ್ರೀ ಶೇಷಗಿರಿರಾವು, ಮತ್ತು ಅಧ್ಯಕ್ಷರಾದ ವೆಂಕಣ್ಣನವರು ಗಾಂಧೀಜಿಯವರ ಗುಣಗಾನ ಮಾಡಿದರು. ಶ್ರೀ ರಾಮರೆಡ್ಡಿಯವರು ವಿಗ್ರಹ ಪ್ರತಿಷ್ಠೆಯ ದಿನ ಅನ್ನ ಸಂತರ್ಪಣೆ ಮಾಡುವುದಾಗಿ ವಾಗ್ದಾನವಿತ್ತರು.

## ಹೂವಿನ ಹಡಗಲಿ

ತರುಣ ಸಾಹಿತ್ಯ ಸಂಘದ ಸಭೆ ವಿದ್ಯಾರ್ಥಿ ಕಾಂಗ್ರೆಸ್‌ನವರು ಗಾಂಧೀಜಿ ನಿಧನದ ಬಗ್ಗೆ ದುಃಖದರ್ಶಿಸಿದರು. ಅಧ್ಯಕ್ಷರಾದ ಸೊಪ್ಪಿನ ಗುರುಲಿಂಗಪ್ಪ ಮತ್ತು ವೆಂಕಟಸುಬ್ಬನ್‌ರವರು ಚ. ಬ ಪಟೇಲ, ಶಿತಿಕಂಠಶಾಸ್ತ್ರಿ, ಶಂಭುಲಿಂಗಯ್ಯ, ಪಂಚಾಕ್ಷರಯ್ಯ. ಗಿರಿ, ಷಡಕ್ಷರಯ್ಯ, ವಿಶ್ವನಾಥ, ಪಾಲಾಕ್ಷಯ್ಯ ವಗೈರೆ ಮಿತ್ರರು ಭಾಷಣಕೊಟ್ಟರು ಪ್ರಾತಃಕಾಲ ಭಜನೆ ಪ್ರಭಾತಫೇರಿಗಳಾದವು. ಮಹಾತ್ಮರ ಆತ್ಮಕ್ಕೆ ಚಿರಶಾಂತಿ ಕೋರಲು ಮೌನ ಪ್ರಾರ್ಥನೆಯಾಯಿತು

## ಗ. ಕೋಡಿಹಳ್ಳಿ

7ನೆಯ ತಾ॥ ಗ್ರಾಮದಲ್ಲಿ ಪೂರ್ಣ ಹರತಾಳವಾಗಿ ಶ್ರೀ ಜನಬಸವನಗೌಡರ ಅಧ್ಯಕ್ಷತೆಯಲ್ಲಿ ಸಭೆಯಾಯಿತು ಅಧ್ಯಕ್ಷರು ಗೀತಾ ಪಠನೆಮಾಡಿ ಗಾಂಧಿ ಜೀವನ ಚರಿತೆಯನ್ನು ಕುರಿತು ವಿಸ್ತೃತ ಭಾಷಣಮಾಡಿದರು. ಶ್ರೀ ಪಾಲಾಕ್ಷಯ್ಯನವರೂ ಮಾತಾಡಿದರು, ಮೌನ ಪ್ರಾರ್ಥನೆಯನಂತರ ಸಭೆಮುಗಿಯಿತು.

## ಬಾಪೂಜಿ ಅಮರರಾಗಲಿ!

## ಮಹಾತ್ಮಜೀಯವರ ತಿಥಿ, ಮಾಗಳ.

ಪಚ್ಚೆಗರಿಗಳಿಂದ ಚಪ್ಪರವನ್ನು ಹಾಕಿ, ಮಹಾತ್ಮಜೀಯ ಮೂರ್ತಿಯನ್ನು ಆದರಲ್ಲಿರಿಸಿ, ನಂದಾದೀಪಗಳನ್ನು ಹಚ್ಚಿದ್ದರು. ಧ್ವಜವಂದನಾಕಾಲದಲ್ಲಿ ಚಿಕ್ಕವರಿಂನ ಹಿಡಿದ ವೃದ್ಧರು ಮೊದಲು ಮಾಡಿ ಆಗಮಿಸಿದ್ದರು. ಸಂಜೆ 5 ಗಂಟೆಗೆ ಲಿಂಗಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಸಭೆಯು ಶಾಂತರೀತಿಯಿಂದ ಇದ್ದುದಲ್ಲದೇ ಶಾಂತಿಯು ಕಾಂತಿಯೇ ಇಂದು ನಮ್ಮನ್ನಗಲಿದೆಯೆಂದು ದೃಢೀಕರಿಸಿತು. ಕಾಂಗ್ರೆಸ್ಸಿನ ನಿಜವಾದ ಭಟರಾದ ಬಿ. ಲಂಕೆಪ್ಪನವರು ಮಹಾತ್ಮಜೀಯವರ ಬಾಲ್ಯಾಂತ ಚರಿತ್ರೆಯನ್ನು ಜನರಿಗೆ ತಿಳಿಸುವಾಗ ಬಹಳ ಬಳಲಿದವರಂತೆ ತೋರುತ್ತಿದ್ದರು. ಸಭೆ ಮುಗಿದನಂತರ ಗಾಂಧೀಜಿಯವರ ಪ್ರಸಾದಕ್ಕೆ ಎಲ್ಲರೂ ಹೋದರು ಆ ದಿನದ ಪ್ರಸಾದವನ್ನು ಸುಮಾರು ಮುನ್ನೂರು ಜನರು ಸೇವಿಸಿರಬಹುದು.

## ಹೊಸಪೇಟೆ

## ಡಿಸ್ಟ್ರಿಕ್ಟ್ ಮುನಿಸಿಫ್ ಕೋರ್ಟಿನಲ್ಲಿ.

O S. No. 284/47.

ಅಳ್ಳಳ್ಳಿ ರುದ್ರಪ್ಪ .... .... ವಾದಿ
ಬಸಪ್ಪನ ಮಗ ಅನುಮಾಲು | ಪ್ರತಿವಾದಿ
ಮುರುಡಪ್ಪ ಸಾ॥ ತೆಕ್ಕಲಕೋಟೆ |

### ಪ್ರತಿವಾದಿಗೆ ನೋಟೀಸು

ಮೇಲ್ಕಂಡ ನಂಬರಿನಲ್ಲಿ ವಾದಿಯು ನಿಮ್ಮ ಮೇಲೆ ಪ್ರಾಮಿಸರಿ ನೋಟಿನ ಬಾಕಿಗಾಗಿ ರೂ. 349.8 0 ಗಳಿಗೆ ಕೋರ್ಟಿನ ಖರ್ಚುಗಳು, ಮುಂದಿನ ಬಡ್ಡಿಗಾಗಿಯ ದಾವೆ ಮಾಡಿದ್ದಾನೆ. ಸದ್ರಿ ದಾವೆ 8-3-1948 ಕ್ಕೆ ವಾಯಿದೆ ಇರುತ್ತದೆ. ಸದರಿ ವಾಯಿದೆಗೆ ನೀವು ಕೋರ್ಟಿನಲ್ಲಿ ಹಗಲು 11 ಘಂಟೆಗೆ ಹಾಜರಾಗದಿದ್ದಲ್ಲಿ ನಿಮ್ಮ ಪರೋಕ್ಷವಾಗಿ ವಿಚಾರಿಸಲ್ಪಟ್ಟು ತೀರ್ಮಾನವಾಗುವುದು.

ಹೊಸಪೇಟೆ | ಎಂ. ನಟೇಶಮೊದಲಿಯಾರು.
18-2-48 | ವಾದಿ ವಕೀಲರು.

# ಪೂಜ್ಯಪಿತಾಮಹ ಗಾಂಧೀಜಿಯವರಿಗೆ ದುಃಖೋದ್ಗಾರ.

ಗಾಂಧಿಮಹಾತ್ಮರ ಪವಿತ್ರಾತ್ಮಕ್ಕೆ ಅನವರತ ಪರಮ ಶಾಂತಿಯನ್ನೀಯಲೆಂದು ಆತ್ಮಸಾಕ್ಷಿಯಾಗಿ ಪರಮಾತ್ಮನನ್ನು ಹೃದಯಾಂತರಾಳದಿಂದ ಪ್ರಾರ್ಥಿಸದ ಪರಮಪಾಪಿ ಇದ್ದಾನೆಯೇ?

ಮಹಾತ್ಮರ ಭೌತಿಕ ದೇಹವನ್ನು ಕೊನೆಗೊಳಿಸಿದ ಕೊಲೆಪಾತಕಿಯ ದೇಹದಲ್ಲಿ ಆತ್ಮನಿರಬಹುದೇ?

ಅಹಿಂಸಾಮೂರ್ತಿಯ ಅವಸಾನವು ಹಿಂಸಾರೂಪದಿಂದಾಗಿರುವುದು ಹಿಂಸೆಯನ್ನು ಧ್ವಂಸಮಾಡಲಿಕ್ಕಿರಬಹುದೇ? ತಲೆ ತಿರುಕನಿಗೆ ಹಿಂಸೆಗೆ ತಲೆತಿರುಗಿದರೆ ವಿಶ್ವಬಂಧುವಿನ ಅಸತ್ಯ, ಪ್ರೇಮ, ಅಹಿಂಸಾವಾದಗಳಿಗೆ ಎಂದಾದರೂ, ಎಷ್ಟಾದರೂ ಕೆಳಮುಖವಿರುವುದೇ? ಹಿಂಸೆಗೆ ಹಿಂಸೆಯಾದಲ್ಲಿ ಹಿಂಸೆಯವಂಶ ಬೆಳೆದೀತು ಹಿಂಸೆಯನ್ನು ಅಹಿಂಸೆಯ ಹಟದಿಂದ, ಎದೆಗಾರಿಕೆಯಿಂದ ಎದುರಿಸಿರುವಾಗ ಅಹಿಂಸೆಗೆ ಪ್ರಚಂಡ ವಿಜಯವಲ್ಲದೆ ಮತ್ತೇನು?

ಎಲ್ಲರೂ ನನ್ನವರೆಂದು ತುಂಬಾನಂಬಿದ ವಿಶ್ವಹೃದಯಿಯ ಮೇಲೆ ಕೈಮಾಡಿದ ಆ ಅತೀವ ಮಾನವನಿಗೆ ಹೃದಯವಿದ್ದೀತೇ? ವಿಶ್ವಕೋಟಿ ಹೃದಯಗಳು ಮಿಡಿಯುತ್ತಿರುವಾಗ, ಮರಮರ ಮರುಗುತ್ತಿರುವಾಗ ಆ ಕೊಲೆಪಾತಕಿಯ ಶೂನ್ಯ ಹೃದಯವೇನೆನುತ್ತಿರಬಹುದು? ಇಂಸಹ ಪಕ್ಷಕಟ್ಟಿಕೊಂಡ ಒಂದೆರಡು ಲಕ್ಷ ನರಾಧಮರ ದುಷ್ಹೃದಯಗಳನ್ನು ಧ್ವಂಸಮಾಡಿದರೆ ಕೋಟ್ಯಾಂತರ ಜನಸಮೂಹಕ್ಕೆ ನಿಜಶಾಂತಿ ದೊರೆವಲ್ಲಿ ಈ ಕಾರ್ಯವೂ ಸಾಮೂಹಿಕ ಅಹಿಂಸಾನುರಾಗ ಸಾಧನೆಗೆ ಯೋಗ್ಯ ಸಾಧನೆಯಲ್ಲವೇ?

ಈ ಅಸಹನೀಯ ಕೃತಿಗೂ ದೈವಿಕಶಕ್ತಿಯ ಬೆಂಬಲವು ತಿಲಾಂಶವಾದರೂ ಇದ್ದೀತೇ? ಹಾಗಿದ್ದರೆ ಆ ದೇವನನ್ನಾದರೂ ಶಕ್ತ ಶಿಕ್ಷೆಗೆ ಗುರಿಪಡಿಸದೆ ಬಿಡಬಾರದೆನಿಸುತ್ತದೆ. ಸನಂಗ ಮದನಗಿಂತ ಅನಂಗ ಮದನನು ಹೆಚ್ಚು ಆರ್ಕರ್ಷಕನಿರುವಂತೆ ಅಶರೀರ ಗಾಂಧೀಜಿಯವರ ಉಪದೇಶಗಳು ಬಹುಮುಖವಾಗಿ ಕಾರ್ಯರಂಗಕ್ಕಿಳಿಯಲಿ. ಎಲ್ಲರೂ ಅವರವರ ಆತ್ಮಶಕ್ತಿಯ ಶೋಧಮಾಡಿಕೊಂಡು ಕೃತಿಯಲ್ಲಿಳಿಸಲು ಎಷ್ಟು ಸಾಧ್ಯವೆಂಬುದನ್ನರಿತುಕೊಂಡು ಅಷ್ಟನ್ನಾದರೂ ಕಾರ್ಯರೂಪಕ್ಕಿಳಿಸುವುದುತ್ತಮ. ಮನೋಶಕ್ತಿ ಬೆಳೆದಂತೆಲ್ಲಾ ಹೆಚ್ಚು ಹೆಚ್ಚು ಉಪದೇಶಗಳನ್ನು ಕಾರ್ಯರಂಗಕ್ಕಿಳಿಸುವೆವೆಂಬ ಪ್ರತಿಜ್ಞೆಯನ್ನು ನಿಚ್ಚಲ, ನಿಚ್ಚಳ ಮನಸ್ಸಿನಿಂದ ಇಂದೇ ಕೈಕೊಳ್ಳೋಣ ಇದುವೇ ಲೋಕಪಿತನಿಗೆ, ಸ್ವಾತಂತ್ರ ಜನಕನಿಗೆ ವಿಶ್ವಕುಟುಂಬಿಗೆ ಸಲ್ಲಿಸುವ ನಿಜ ಸ್ಮಾರಕ. ಇದೇ ಮಹಾತ್ಮರ ಮಹದಾತ್ಮಕ್ಕೆ ಚಿರಶಾಂತಿಯನ್ನು ಕೋರುವನ್ಯೈಜಬುದ್ಧಿ.

ಜಗತ್ತನ್ನೇ ಈ ಕ್ಷಣದಲ್ಲಿ ನಾಶಮಾಡುವ ದುರಂತ ಶಕ್ತಿಯನ್ನು ಅತಿ ವೈಜ್ಞಾನಿಯು ಕಂಡು ಹಿಡಿದಾನು ಆದರೆ ಅಂಥವನು ವಿಶ್ವಕೋಟಿಗೇ ಬೇಕಾಗಿರುವ ಇಂತಹ ಮಹಾತ್ಮರ ಪ್ರಾಣವನ್ನು ತಿರುಗಿ ತರುವ ಯಾವ ತುಪಾಕಿಯನ್ನು ಸೃಷ್ಟಿಸಲಾರ. ಅಂದಮೇಲೆ ದೇವರ ಅಸ್ತಿತ್ವದ ಒಗ್ಗೆ ಬೇರೆ ನಿದರ್ಶನಗಳು ಬೇಕಾಗಿಲ್ಲ. ಸರ್ವಕರ್ತನಾದ ದೇವರು ನಮ್ಮೆಲ್ಲರ ಭವಿತವ್ಯವನ್ನು ಉಜ್ವಲವಾಗಿಸಲಿ. ಯಾವ ಕೊಲೆಗಡಕನಿಂದಲೂ ಏನೂ ಮಾಡಲಿಕ್ಕೆ ಬಾರದ ನಿತ್ಯವಾಗಿರುವ ಮಹಾತ್ಮ ಗಾಂಧಿಯವರ ಆತ್ಮದ ಅಂತಶ್ಶಕ್ತಿಯು ನಮ್ಮ ನಾಯಕರಿಗೆ ಸಮಯೋಚಿತ ಸ್ಫೂರ್ತಿಯನ್ನೀಯಲಿ ಬಾಪೂರವರ ಕನಸಿನ ರಾಮರಾಜ್ಯ ಬೇಗನೆ ನನಸಾಗಲಿ. ಎಲ್ಲರು ಹಾತೊರೆಯುತ್ತಿರುವ ಸರ್ವಸಮನ್ವಯ ಸ್ವಾತಂತ್ರ್ಯವು ಬೇಗನೆ ಕೈಗೂಡಲಿ. ಸತ್ಯ ಪ್ರೇಮಾಹಿಂಸೆಗಳು ಸರ್ವ ಜನಾಂಗಗಳ ಆಚರಣೆಯ ಮಂತ್ರಗಳಾಗಲಿ. ಯೋಗಿಗಳ, ತಜ್ಞರು ತಾಯ್ನಾಡದ ಭರತಖಂಡದಲ್ಲಿ ಅಡಗಿರುವ, ಬರಲಿರುವ ಮಹಾತ್ಮರು ಬೇಗನೆ ಬೈಲಿಗೆ ಬಂದು ಬಾಯ್ಬಿಡುತ್ತಿರುವ ಭಾರತಾಂಬೆಯ ಬಾಲಕ ಬಳಗವನ್ನು ಸಂತೈಸಿ ಬೆನ್ನುತಟ್ಟಲಿ.

ಓಂ ಶಾಂತಿಃ, ಶಾಂತಿಃ, ಶಾಂತಿಃ

ಎ ನಾಗಪ್ಪ,
ಪಿ. ಕೈ. ಕಾಲೇಜು.

# ಭಾರತಕ್ಕೆ ಏಶಿಯಾದಲ್ಲಿ ಗಣ್ಯಸ್ಥಾನ ★

## ಸರದಾರ ಪಟೇಲರ ಭಾಷಣ

ಮಹಾತ್ಮ ಗಾಂಧಿಯವರ ಮುಖಂಡತ್ವದಲ್ಲಿ ಹೋರಾಡಿ ಸಂಪಾದಿಸಿದ ಸ್ವಾತಂತ್ರ್ಯವು ನಮಗೆ ಒಗ್ಗಬೇಕಾದರೆ ಎಲ್ಲ ಜನರೂ....ರಾಜರು ಮಹಾರಾಜರು ರೈತರು ಕೂಲಿಕಾರರು, ಬಂಡವಲದಾರರು....ಸಂಯುಕ್ತ ಪ್ರಯತ್ನದಿಂದ ಕಾರ್ಯಮಾಡಬೇಕಾಗುವದು. ಕಾಂಗ್ರೆಸ ಸರಕಾರಗಳು ಚುನಾವಣೆಯ ಘೋಷಣದಲ್ಲಿ ಜಮೀನದಾರಿ ನಿರ್ಮೂಲನ ಮಾಡುವಾಗ ಜಮೀನದಾರರಿಗೆ ಯೋಗ್ಯ ಪರಿಹಾರ ಕೊಡಲಾಗುವದೆಂದು ಸಾರಿವೆ. ಕಾಂಗ್ರೆಸ್ ಕೊಟ್ಟ ವಚನ ಪಾಲಿಸಲೇಬೇಕು. ಸಾಮ್ಯವಾದಿಗಳು ಇಲ್ಲವೆ ಕಮ್ಯುನಿಸ್ಟರು ಜಮೀನದಾರರಿಗೆ ಪರಿಹಾರ ಕೊಡಕೂಡದೆಂದು ಹೇಳುವ ಮಾತಿಗೆ ಹೆದರಬೇಕಾಗಿಲ್ಲ. ಜಮೀನದಾರರಿಗೆ ಪರಿಹಾರ ಕೊಡಬಾರದೆಂದು ಹೇಳುವದು ಅವರಂತೆ ನಡೆಯುವದೆಂದರೆ ಅದು ದರೋಡೆಗಿಂತ ಹೀನಕೃತ್ಯವಾದೀತು. ಕಾಂಗ್ರೆಸಿನಂಥ ದೊಡ್ಡ ಸಂಸ್ಥೆಯು ವಚನ ಪಾಲಿಸದೆ ಇಂಥ ಕೃತಿಗಳಿಗಿಳಿಯುವದು ಅದರ ಗೌರವಕ್ಕೆ ಸಲ್ಲದಮಾತು.

### ಪಾಕಿಸ್ತಾನದ ಬಗ್ಗೆ ಎಚ್ಚರ

ನಾವು ಪಾಕಿಸ್ತಾನದೊಡನೆ ಸ್ನೇಹಭಾವದಿಂದ ವರ್ತಿಸಲು ಶಕ್ತಿಮೀರಿ ಪ್ರಯತ್ನಿಸಿದೆವು. ಆದರೂ ಪಾಕಿಸ್ತಾನದ–ಹಿಂದುಸ್ತಾನದುವೆ ಸಂಬಂಧವು ನೆರೆ ರಾಷ್ಟ್ರಗಳಲ್ಲಿರಬೇಕಾದ ಸೌಹಾರ್ದಭಾವನೆಯುಳ್ಳದ್ದಾಗಿರುವದಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅದುದರಿಂದ ನಾವು ಯಾವಾಗಲೂ ಜಾಗರೂಕರಾಗಿರುವದು ಕ್ಷೇಮಕರ. ಈ ದೃಷ್ಟಿಯಿಂದ ನಾವು ಬಲಾಢ್ಯವಾದ ಸೈನ್ಯ ಹಾಗು ವಿಮಾನದಲ ಕಟ್ಟುವದು ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯವಾದುದಾಗಿದೆ. ದೇಶದಲ್ಲಿ ಎಲ್ಲ ಪಕ್ಷಗಳು ಒಮ್ಮತದಿಂದ ಜಾತೀಯ, ರಾಜಕೀಯ ಆರ್ಥಿಕ ಶಾಂತವಾತಾವರಣ ನಿರ್ಮಾಣ ಮಾಡದಿದ್ದರೆ ರಾಷ್ಟ್ರದ ಶಕ್ತಿ ಸಂವರ್ಧನೆಗೆ ಅತ್ಯಂತ ಅಗತ್ಯವಾದ ಉತ್ಪತ್ತಿ ಹೆಚ್ಚಿಸುವ ಕಾರ್ಯ ಸಾಧಿಸಲಾರದು.

### ಭಾರತವು ಅಧೋಗತಿಯ ಕಡೆಗೆ ತಿರುಗಿದೆ.

ನಾನು ನನ್ನ ಮನಬಿಚ್ಚಿ ನನ್ನ ಮಾತಿನಲ್ಲಿ ದ್ವೇಷಭಾವನೆ ಇರದೆ ನಿಮ್ಮ ಕಲ್ಯಾಣಕ್ಕಾಗಿಯೇ ನಾನು ಒರಟಾಗಿ ಹೇಳಿದರೂ. ನೀವು ಕ್ಷಮಿಸುವಿರೆಂದು ಆಶಿಸುವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನರು ಅನುಸರಿಸುತ್ತಿದ್ದ ಒಳ್ಳೇ ಉಚ್ಚ ನೀತಿ ಮತ್ತು ಜೀವನ ಸೇವಾಬುದ್ಧಿ, ತ್ಯಾಗ ಇವು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಮಾಯವಾಗಿದ್ದು ಕಂಡು ನನಗೆ ಅತೀವ ದುಃಖವಾಗಿದೆ. ಈಗ ಹಿಂದೂಸ್ಥಾನವು ಅಧೋಗತಿಯ ದಾರಿ ಹಿಡಿಯಹತ್ತಿದೆ. ವಿದೇಶಿಯರ ಪ್ರಭುತ್ವ ಕೊನೆಗಂಡಿತೆಂದು ಕಾಂಗ್ರೆಸು ಹಾಗೂ ಹಿಂದೂಸ್ತಾನದ ಜನತೆ ಯಾವ ಗುರಿ ಸಾಧಿಸಲು ಹೋರಾಡುತ್ತಿದ್ದರೋ ಆ ಗುರಿ ಸಾಧಿಸಿದಂತಾಗಿಲ್ಲ. ಸ್ವಾತಂತ್ರ್ಯದ ನಿಜವಾದ ಲಾಭವು ಜನತೆಗೆ ಸಲ್ಲಿಸಬೇಕಾದರೆ ಇನ್ನೂ ಅನೇಕ ಉಪಾಯಗಳನ್ನು ನಾವು ಸಾಧಿಸಬೇಕಾಗಿದೆ ಎಂಬುದನ್ನು ಮರೆಯತಕ್ಕದ್ದಲ್ಲ. ಜಾತೀಯ ದ್ವೇಷ ಭಾವನೆಯು ಹಬ್ಬಿ ಕಲಕತ್ತೆಯಲ್ಲಿ ಹತ್ಯಾ-ಕಾಂಡ ಪ್ರಾರಂಭವಾಗಿ ಅದು ಕ್ರಮೇಣ ದೇಶದ ಅನೇಕ ಭಾಗಗಳಲ್ಲಿ ವ್ಯಾಪಿಸಿತು. ಇನ್ನು ಈ ಜಾತೀಯ ದ್ವೇಷದ ಉಚ್ಚಾಟನೆ ಸಂಪೂರ್ಣವಾಗಿ ಆಗಿಲ್ಲ. ಈಗ ಮೊದಲಿಗಿಂತ ಶಾಂತ ಪರಿಸ್ಥಿತಿ ನಿರ್ಮಾಣವಾದದ್ದೇನೋ ನಿಜ. ಕಾಂಗ್ರೆಸ್ಸಿಗರಲ್ಲಿಯೇ ಹೊಡೆದಾಟ ಪ್ರಾರಂಭವಾಗಿದ್ದು ಅದು ಅತಿ ಅಸಹ್ಯ ಸ್ವರೂಪ ತಾಳುತ್ತಲಿದೆ. ಬಿಹಾರದ ಬಗೆಯೇ ಹೇಳುವದಾದರೆ ಮಂತ್ರಿಮಂಡಲ ಹಾಗೂ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರ ಮೇಲೆ ಅವಿಶ್ವಾಸ ಗೊತ್ತುವಳಿ ಬಂದಿವೆ, ಲಂಚಗುಳಿತನ, ಪಕ್ಷಪಾತ, ಈ ಆರೋಪಗಳೂ ಇವೆ. ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆಯೇ ಜನರಲ್ಲಿ ಅಧಿಕಾರ ಲಾಲಸೆ ಹಾಗೂ ಮುಖಂಡತ್ವದ ಹಪಾಹಪಿತನ ಬೆಳೆದಿದೆ. ಈ ವೃತ್ತಿಯಿಂದ ರಾಷ್ಟ್ರಕ್ಕೆ ಬಹುದೊಡ್ಡ ಹಾನಿಯಾಗುವದರಲ್ಲಿ ಸಂದೇಹವೇ ಇಲ್ಲ. ಸ್ವಾತಂತ್ರ್ಯವನ್ನು ಈ ರೀತಿ ಜನರು ಅಧೋಗತಿಗಿಳಿಸುವದಕ್ಕಾಗಿ ಪಡೆದುದಿಲ್ಲ. ಕಾಂಗ್ರೆಸ್ಸಿನ ಪ್ರತಿಷ್ಠೆ, ಗೌರವಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳುವ ಹೊಣೆ ಇವ

ವರಲ್ಲಿ ನಾನೂ ಒಬ್ಬ. ಆದುದರಿಂದ ಕಾಂಗ್ರೆಸಿಗರೆಲ್ಲ ಈ ರೀತಿಯ ನೈತಿಕ ಅಧಃಪತನ, ಅಧಿಕಾರ ಲಾಲಸೆಯ ಹುಚ್ಚಾಟ ನಡೆದದ್ದನ್ನು ನೋಡಿ ನಾನು ಸಹಿಸಲಾರೆ.

ಬಿಹಾರ ಪ್ರಾಂತಿಕ ಕಾಂಗ್ರೆಸ ಸಮಿತಿ ಹಾಗೂ ಬಿಹಾರ ಸರಕಾರಗಳಲ್ಲಿ ಏಕಮತವಿರುವದು ಅಗತ್ಯವಾದುದು. ಕಾಕಂಬಿ ವಿಷಯದಲ್ಲಿ ಪಕ್ಷಪಾತ, ಲಂಚಬಡಕತನದ ಆರೋಪಗಳಿಗೆ ಗುರಿಯಾದ ಜನರು ವಿಚಾರಣೆಗೆ ಗುರಿಪಡಿಸಲ್ಪಡಬೇಕು. ಅವರು ಅಪರಾಧಿಗಳೆಂದು ಸಿದ್ಧವಾದದ್ದಾದರೆ ಅವರಿಗೆ ಉಗ್ರಶಿಕ್ಷೆ ವಿಧಿಸಬೇಕು. ಇಂಥ ಅಪಸಂಗಗಳಿಂದ ಬಿಹಾರದ ಹೆಸರಿಗೆ ಕಲಂಕ ಹತ್ತಿದೆ ಇಷ್ಟೇ ಅಲ್ಲ. ಕಾಂಗ್ರೆಸಿನ ಧವಳಕೀರ್ತಿಗೂ ಮಸಿ ಬಳಿದಂತಾಗಿದೆ.

## ಕೂಲಿಕಾರರಿಗೆ ಹಿತೋಪದೇಶ

ಜನರು ಮೊದಲು ರಾಷ್ಟ್ರೀಯ ಸಂಪತ್ತು ಹೆಚ್ಚಿಸಲು ದುಡಿಮು ಸಂಪತ್ತು ಹೆಚ್ಚಿದಂತೆ ಅದರಲ್ಲಿ ಪಾಲು ಕೇಳುವದು ಕ್ರಮಪ್ರಾಪ್ತವು. ಇದನ್ನು ಬಿಟ್ಟು ಹುಟ್ಟುವಳಿ ಹೆಚ್ಚಿಸುವ ಪೂರ್ವದಲ್ಲಿಯೇ ಹೆಚ್ಚಿನ ಪಾಲು ದೊರಕಿಸಿರಿ ಎಂದು ಕೂಲಿಕಾರರೇ ಮೊದಲಾದ ಜನರಲ್ಲಿ ಸಂಪುಹೂಡಿ ಹೆಚ್ಚಿನ ಪಾಲು ದೊರಕಿಸಲು ಪ್ರಚಾರಮಾಡಲಾಗುತ್ತಿದೆ. ಇದೆಂತು ಸರಿಯಾಗುವದು? ಎಲ್ಲ ಪಕ್ಷದವರು ಈಗ ಕೂಲಿಕಾರರಿಗೆ ರೈತರಿಗೆ ಹೆಚ್ಚು ಉತ್ಪತ್ತಿ ಕಡಿಮೆಯಾಗುವ ರೀತಿಯಲ್ಲಿ ಯಾರೂ ವರ್ತಿಸಬಾರದು. ಕೂಲಿಕಾರರ ನ್ಯಾಯವಾದ ಬೇಡಿಕೆಗಳನ್ನು ಪೂರೈಸಲಾಗುವದು ಇವನ್ನು ಸಾಧಿಸಲು ಸಂಪು ಹೂಡಬೇಕಾಗಿಲ್ಲ. ಸಂಪು ಹೂಡುವದರಿಂದ ಉತ್ಪತ್ತಿ ಕಡಿಮೆಯಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಹದಗೆಟ್ಟರೆ ಆದರಿಂದ ಕೂಲಿಕಾರರಿಗೆ ಹೆಚ್ಚಿನ ಹಾನಿಯೇ ತಟ್ಟುವದೆಂಬುವದನ್ನು ಮರೆಯಕೂಡದು.

ಔದ್ಯೋಗಿಕ ರಾಷ್ಟ್ರೀಕರಣವಾಗಬೇಕೆಂಬ ಕೂಗು ಅಲ್ಲಲ್ಲಿ ಕೇಳಬರತ್ತಿದೆ ಈಗಾಗಲೆ ಸರಕಾರದ್ದು ಹೊಣೆಗಳೇ ಬಹಳಾಗಿದ್ದು ಅವುಗಳನ್ನೇ ಸರಕಾರ ಸಮರ್ಪಕವಾಗಿ ನಿರ್ವಹಿಸುವದು ಅಸಾಧ್ಯವಾಗುತ್ತಿರುವಾಗ ಔದ್ಯೋಗಿಕ ರಾಷ್ಟ್ರೀಕರಣದಿಂದ ಹೆಚ್ಚಿನ ಹೊಣೆ ಸರಕಾರದ ಮೇಲೆ ಹೇರುವದು ಈ ಪರಿಸ್ಥಿತಿಯಲ್ಲಿ ವ್ಯವಹಾರ ದೃಷ್ಟಿಯಿಂದ ಸರಿಯಾಗಲಾರದು.

## ಸಂಸ್ಥಾನಗಳ ಲೀನೀಕರಣ

ಸರಿಕಲಾ, ಖಾರಸ್ವಾನ, ಸಂಸ್ಥಾನಗಳನ್ನು ತಾತ್ಕಾಲಿಕವಾಗಿ ಓರಿಸಾ ಪ್ರಾಂತದಲ್ಲಿ ಸೇರಿಸಲಾದದ್ದನ್ನು ಕುರಿತು ಬಿಹಾರ-ಓರಿಸಾ ಎರಡೂ ಕಾಂಗ್ರೆಸ ಮಂತ್ರಿಮಂಡಲವಿದ್ದ ಪ್ರಾಂತಗಳೇ ಇದ್ದರೂ ದೊಡ್ಡ ಸಂಸ್ಥಾನಗಳು ತಾತ್ಕಾಲಿಕ ವಿಲೀನ ಹೊಂದುವವೆಂದೂ ... ದು ನ್ಯಾಯಮಂಡಲದ ವಿಚಾರಣಾ ಸಮಿತಿ ನೇಮಿ... ರ ನಿರ್ಣಯದಂತೆ ಈ ಸಂಸ್ಥಾನಗಳನ್ನು ನ್ಯಾ...ವಾಗಿ ಅವು ಸೇರಬೇಕಾದ ಪ್ರಾಂತದಲ್ಲಿ ಸೇರಿಸಲಾಗುವವೆಂದು ಸ್ಪಷ್ಟವಾಗಿ ಸಾರಿದ್ದರೂ ಈ ಜಿಲ್ಲರ ವಿಷಯದ ಮೇಲೆ ದೊಡ್ಡ ಹೋರಾಟದ ಪ್ರಸಂಗವೇ ಉಂಟಾದದ್ದು ರಾಷ್ಟ್ರದ ಪ್ರಗತಿಗೆ ಹಾನಿ ತಪ್ಪದೆ ಹೋಗದು. ಇಂಥ ಸಂಕುಚಿತ ದೃಷ್ಟಿಯ ವಾದವಿವಾದ ನಿಲ್ಲಲೇಬೇಕು.

## ಜನತೆಯ ಕರ್ತವ್ಯ

ಈ ವರೆಗೆ ನಾವು ಚಳವಳಿ ಮಾಡುತ್ತ ಬಂದವರಾಗಿದ್ದೇವೆ. ಇನ್ನು ಮೇಲೆ ನಾವು ಹಿಂದುಸ್ಥಾನವು ಬಲಾಢ್ಯ ರಾಷ್ಟ್ರವಾಗಿ ಏಶಿಯ ಖಂಡದ ರಾಷ್ಟ್ರಗಳ ಮುಖಂಡತ್ವ ವಹಿಸುವ ಶಕ್ತಿ ಹಿಂದುಸ್ಥಾನಕ್ಕೆ ಬರುವಂತೆ ನಾವು ದುಡಿಯಬೇಕಾಗಿದೆ. ಎಲ್ಲ ವರ್ಗದ ಜನರಿಗೂ ಅವರ ನಿಜವಾದ ಕರ್ತವ್ಯವೇನೆಂಬುದನ್ನು ತಿಳಿಸಿ ಹೇಳಬೇಕು. ರಾಷ್ಟ್ರದ ಸಲುವಾಗಿ ಪ್ರತಿಯೊಬ್ಬನೂ ತನ್ನ ಕರ್ತವ್ಯ ಕರ್ಮವನ್ನು ಪ್ರಾಮಾಣಿಕ ರೀತಿಯಲ್ಲಿ ನೆರವೇರಿಸಬೇಕು. ಕಾಂಗ್ರೆಸು ಎಲ್ಲ ವರ್ಗದವರ ಹಿತಸಂಬಂಧಗಳನ್ನು ನೋಡಿಕೊಳ್ಳುವದೆಂದು ನಾನು ಆಶ್ವಾಸನ ಕೊಡುವೆ. ಆದರೂ ಯಾವನೇ ಒಂದು ಗುಂಪು ಈಗಿನ ಸರಕಾರದ ವಿರುದ್ಧ ಹೋರಾಡುವ ಹುನ್ನಾರವನ್ನಿಟ್ಟುಕೊಂಡಿದ್ದರೆ ಅವರು ಘಟನಾತ್ಮಕವಾಗಿ ಈಗಿನ ಸರಕಾರವನ್ನು ಉರುಳಿಸಲು ಅಡ್ಡಿಯಿಲ್ಲ. ಆದರೆ ರಾಷ್ಟ್ರದ ಹಿತಕ್ಕೆ ವಿಘಾತಕವಾದ ಕೃತ್ಯಗಳ ಪ್ರಚೋದನೆ ಮಾಡಕೂಡದು. ಜನರಿಗೆ ನಾವು ಅಧಿಕಾರದಲ್ಲಿರುವದು ಬೇಕಾಗಿಲ್ಲವೆಂಬದು ತಿಳಿದಾಕ್ಷಣ ನಾವು ಅಧಿಕಾರ ತ್ಯಾಗ ಮಾಡಲು ಹಿಂದೆ ಮುಂದೆ ನೋಡುವದಿಲ್ಲ. ವಿದೇಶೀಯರನ್ನು ಸತ್ತಾತ್ಯಾಗ ಮಾಡಲು ಒತ್ತಾಯಗೊಳಿಸುವ ರೀತಿ ನೀತಿ

ಗಳನ್ನು ನಿಮ್ಮವರೇ ಆದ ನಿಮ್ಮ ಮುಖಂಡರನ್ನು ಅಧಿಕಾರದಿಂದ ನಿವೃತ್ತಿಗೊಳಿಸಲು ಮಾಡುವದೆಲ್ಲಿಯ ನ್ಯಾಯ? ಘಟನಾತ್ಮಕವಾಗಿ ಜನಮತ ದೊರಕಿಸಿದರೆ ಸರಕಾರದಲ್ಲಿ ಬದಲಾವಣೆ ಆಗಲೇಬೇಕು. ಹೀಗಿದ್ದರೂ ಸಂಪು ಹೂಡಲು ಪ್ರಚೋದನೆ ಮಾಡುವದು ರಾಷ್ಟ್ರಘಾತಕತನವು. ಪೋಲೀಸರಿಗೆ ಸಂಪು ಹೂಡಲು ಪ್ರಚೋದನೆ ಮಾಡಿದ್ದಂತೂ ತೀರ ಮನೆಮುರುಕತನವು ಸರಕಾರಕ್ಕೆ ನಿಷ್ಠರಾಗಿರುವದು ಪೋಲೀಸರ ಆದ್ಯ ಕರ್ತವ್ಯವಾಗಿದೆ. ಪೋಲೀಸರಿಗೆ ಸಂಪು ಹೂಡಲು ಪ್ರೋತ್ಸಾಹ ಕೊಡುವವರು ತೀರ ಅದೂರ ದೃಷ್ಟಿಯು ಚಳವಳಿಗಾರರೆಂದು ಹೇಳಬಯಸುವೆ. ಈ ಜನರು ಇಂಥ ಸಂಪು ಹೂಡುವದೆಂದರೆ ಬೆಂಕಿಯೊಡನೆ ಚಿನ್ನಾಟ ನಡೆಸಿದಂತೆ ಈಗ ಪೋಲೀಸರಿಗೆ ಸಂಪು ಹೂಡಲು ಕಲಿಸಿದ ಜನರೇ ನಾಳೆ ಅಧಿಕಾರ ವಹಿಸಿದಾಗ ಇದೇ ಮಂತ್ರವನ್ನು ಪೋಲೀಸರು ಇವರ ಮೇಲೆಯೂ ಪ್ರಯೋಗಮಾಡಲಾರರೆಂದು ಯಾರು ಹೇಳಬೇಕು?

—)O(—

## ಭಾವಲಪೂರ ಸಂಸ್ಥಾನ
### ೧ ಲಕ್ಷ ಹಿಂದೂ-ಸೀಖರ ಕೊಲೆ
### ದೆಹಲಿ ಕೇಂದ್ರ ಶಾಸನ ಸಭೆಯಲ್ಲಿ

ಹಿಂದುಸ್ಥಾನದ ಕೇಂದ್ರ ಶಾಸನಸಭೆಯ ಮುಂಗಡ ಪತ್ರಿಕೆಯ ಅಧಿವೇಶನವು ತಾ॥ ೨೮ ಕ್ಕೆ ಮುಂಜಾನೆಯಿಂದ ಶ್ರೀ ಮಾವಳಣಕರರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಒಂದೂಕಾಲು ತಾಸು ಕಾರ್ಯಕಲಾಪ ನಡೆಸಿ ಸಭೆಯು ತಾ ೩೦ ಕ್ಕೆ ಮುಂದುವರಿದಿತು.

ಈ ದಿನದ ಸಭೆಯಲ್ಲಿ ೬ ಪ್ರಶ್ನೆಗಳು ಕೇಳಲ್ಪಟ್ಟವು. ಅವೆಲ್ಲ ಮುಖ್ಯವಾಗಿ ನಿರಾಶ್ರಿತರಿಗೇ ಸಂಬಂಧಿಸಿದ್ದವು. ಶ್ರೀ ಆರ್. ಕೆ. ಸಿಧ್ವಾರ ಪ್ರಶ್ನೆಗೆ ಉತ್ತರ ಕೊಡುತ್ತ ನಿರಾಶ್ರಿತರ ಪುನರ್ನಿವಾಸದ ಮಂತ್ರಿಗಳಾದ ಶ್ರೀ ಕೆ. ಸಿ. ನಿಯೋಗಿಯವರು, ಭಾವಲಪೂರ ಸಂಸ್ಥಾನದಲ್ಲಿ ಇನ್ನೂ ೭೦ ಸಾವಿರ ಹಿಂದೂ ಮತ್ತು ಶೀಖರು ಇರುವರೆಂದೂ ಒಂದೂವರೆ ಲಕ್ಷ ಹಿಂದುಗಳು ಅಲ್ಲಿಂದ ಹಿಂದುಸ್ಥಾನಕ್ಕೆ ಬಂದಿರುವರೆಂದೂ ಇನ್ನು ಹಿಂದು ಲಕ್ಷ ಜನರ ಲೆಕ್ಕವಿಲ್ಲವೆಂದೂ ಅವರ ಕೊಲೆಯಾಗಿರಬೇಕು ಇಲ್ಲವೆ ಅವರು ಒತ್ತಾಯದ ಮತಾಂತರಕ್ಕೆ ಗುರಿಯಾಗಿರಬೇಕೆಂದೂ ತಿಳಿಸಿದರು

ಭಾವಲಪೂರ ಸಂಸ್ಥಾನದಲ್ಲಿರುವ ಬಹುಜನ ಮುಸಲ್ಮಾನೇತರರು ಹಿಂದುಸ್ಥಾನಕ್ಕೆ ಬರಬೇಕೆಂದು ಬಯಸುತ್ತಿದ್ದರೂ ಅಲ್ಲಿಯ ಅಧಿಕಾರಿಗಳು ಅವರಿಗೆ ಹಾರಿಗೆಯ ವ್ಯವಸ್ಥೆ ಮಾಡಲು ಒಪ್ಪುವದಿಲ್ಲವೆಂಬುದಾಗಿ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತ ಶ್ರೀ ನಿಯೋಗಿ ಅವರು ಹೇಳಿದರು.

ಪಾಕಿಸ್ತಾನ ಸರಕಾರವನ್ನು ಈ ಬಗ್ಗೆ ವಿಚಾರಿಸಬೇಕೆಂದು ಕೇಳಿದ ಪ್ರಶ್ನೆಗೆ ಪಂ. ಜವಾಹರರು ಸ್ಪಷ್ಟೀಕರಣ ಹೇಳುತ್ತ ಡಾ. ಸುಶೀಲಾನಯ್ಯರ ಹಾಗೂ ಅಂತರಾಷ್ಟ್ರೀಯ ರೆಡ್‌ಕ್ರಾಸಿನ ಪ್ರತಿನಿಧಿಯೊಬ್ಬರ ಸರಕಾರೇತರ ಶಿಷ್ಟಮಂಡಲವನ್ನು ಈ ಬಗ್ಗೆ ಅಲ್ಲಿಗೆ ಕಳಿಸಲಾಗಿದೆಯೆಂದೂ ಆವಶ್ಯಕತೆ ತೋರಿದ ಮತ್ತು ಪಾಕಿಸ್ತಾನವು ಒಪ್ಪಿದರೆ ಹೆಚ್ಚು ಡೆಪ್ಯುಟಿ ಹೈಕಮಿಶನರರನ್ನು ನೇಮಿಸಲಾಗುವದೆಂದೂ ನುಡಿದರು.

## ಪೆಟ್ರೋಲ್ ವಿನಿಯಂತ್ರಣ
### ದೆಹಲಿ ಕೇಂದ್ರ ಶಾಸನ ಸಭೆಯಲ್ಲಿ

ಪೆಟ್ರೋಲಿನ ಬಗ್ಗೆ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಲೋಕೋಪಯೋಗಿ ಶಾಖೆಯ ಮಂತ್ರಿ ಶ್ರೀ ಎನ್. ವಿ. ಗಾಡಗೀಳರು ಈ ರೀತಿ ತಿಳಿಸಿದರು.

ಸೀದಾ ಲೆಕ್ಕದಂತೆ ಹಿಂದುಸ್ಥಾನದಲ್ಲಿ ಈಗ ಪ್ರತಿ ವರ್ಷ ೩೦ ಲಕ್ಷ ಟನ್ ಪೆಟ್ರೋಲು ವೆಚ್ಚವಾಗುತ್ತಿದ್ದು ಅವರಲ್ಲಿ ನೂರಕ್ಕೆ ಏಳರಷ್ಟು ಮಾತ್ರ ನಮ್ಮ ದೇಶದಲ್ಲಿ ಹುಟ್ಟುತ್ತದೆ. ಯುದ್ಧಪೂರ್ವದಲ್ಲಿ ನಮಗೆ ೨೦ ಲಕ್ಷ ಟನ್ನು ಮಾತ್ರ ಬೇಕಾಗುತ್ತಿತ್ತು. ಸೀದಾ ಕೆತ್ತಿದರೆ ೪೦ ಲಕ್ಷದ ವರೆಗೆ ಬಳಕೆಯು ಏರಬಹುದು.

ಯುದ್ಧಕ್ಕೆ ಮೊದಲು ನಮ್ಮ ದೇಶಕ್ಕೆ ನೂರಕ್ಕೆ ೩೫ ರಷ್ಟು ಪೆಟ್ರೋಲು ಬ್ರಹ್ಮದೇಶದಿಂದ ೪ ರಷ್ಟು ಪಾಕಿಸ್ತಾನದಿಂದ ೯ ರಷ್ಟು ಸ್ಥಾನಿಕ ಉತ್ಪತ್ತಿಯಿಂದ ಹಾಗೂ ಉಳಿದುದು ಬೇರೆ ದೇಶಗಳಿಂದ ಬರುತ್ತಿತ್ತು. ಪೆಟ್ರೋಲ ಕಣಿಗಳ ಶೋಧಕ್ಕಾಗಿ ಬ್ರಿಟನದಿಂದ ಹಿಂದುಸ್ಥಾನಕ್ಕೆ ಓರ್ವ ತಜ್ಞರನ್ನು ಕರೆಸಲಾಗಿದೆ. ಜೋಧಪುರ ಸಂಸ್ಥಾನದಲ್ಲಿ ಈಗ ಈ ಬಗ್ಗೆ ಪರಿಶೀಲನೆ ನಡೆದಿರುವದು.

# ಗಾಂಧೀಜಿ ಕೊಲೆ.

**"ಗಾಂಧೀಜಿ ಕೊಲೆ ಜಾತೀಯತೆಯು ರಾಷ್ಟ್ರೀಯತ್ವಕ್ಕೆ ಕೊಟ್ಟ ಆಹ್ವಾನ. ವರ್ಣವಾದಿಗಳು ಇಂದಿನ ಸರ್ಕಾರಕ್ಕೆ ಅಂತರಂಗ ದ್ರೋಹಿಗಳು'**

(ಶ್ರೀ ಶರಿಬಸವರಾಜೇಂದ್ರಸ್ವಾಮಿ.)

ಉರವಕೊಂಡ ಜಗದ್ಗುರುಗಳಾದ ಶ್ರೀ: ಶರಿಬಸವರಾಜೇಂದ್ರ ಸ್ವಾಮಿಗಳ ಭಾಷಣದಿಂದ ಈ ಕೆಳ ಭಾಗವನ್ನು ಎತ್ತಿ ತೆಗೆದಿದ್ದೇವೆ.

ಗಾಂಧೀಜಿ ಕೊಲೆಯಾದುದು ಕೇವಲ ಭಾರತಕ್ಕೆ ನಷ್ಟವಾಗಿಲ್ಲ. ಇಡಿಯ ಜಗತ್ತಿಗೇ ಶ್ರೇಷ್ಠ ಮಾರ್ಗದರ್ಶಕರಾಗಬಲ್ಲ ಅರ್ಹತೆಯಿದ್ದ ಮಹಾತ್ಮರ ಮರಣವು ಜಗತ್ತು ಪ್ರಥಮ ಪುರುಷನೊಬ್ಬನನ್ನು ಮರೆಮಾಡಿಕೊಂಡಂತಾಗಿದೆ. ಈ ಕೊಲೆ ಓರ್ವ ಬ್ರಾಹ್ಮಣಾಧಮನ ತಲೆತಿರುಕತನದ ಹುಚ್ಚು ಕೃತಿ ಆಗಿರದೆ ಜಾತೀಯತೆಯು ರಾಷ್ಟ್ರೀಯತ್ವಕ್ಕೆ ಕೊಟ್ಟ ಆಹ್ವಾನವಾಗಿದೆ. ಇದಕ್ಕೆ ಇಂದಿನ ನಮ್ಮ ಸರ್ಕಾರ ಯಾವ ಉತ್ತರವನ್ನು ಕೊಡಬಲ್ಲದೆಂಬುದರ ಮೇಲೆಯೇ ಭಾರತದ ಭವಿತವ್ಯವು ರೂಪುಗೊಳ್ಳುವುದರಲ್ಲಿದೆ. ಇದನ್ನು ಎಲ್ಲರೂ ಚೆನ್ನಾಗಿ ಲಕ್ಷಿಸಲಿ

ಸತ್ಪುರುಷರನ್ನು ಪಡೆದುಕೊಳ್ಳುವ ಭಾಗ್ಯ ಭಾರತಕ್ಕೆ ಅನೇಕ ಸಲ ಒದಗಿದ್ದರೂ ಅವರನ್ನು ಸದುಪಯೋಗಿಸಿಕೊಳ್ಳುವಂಥ ಸ್ಥಿತಿ ಮಾತ್ರ ಈ ದೇಶದಲ್ಲಿ ಯಾವಾಗಲೂ ಸಾಧ್ಯವಾಗಿಲ್ಲ. ಸಾವಿರಾರು ವರ್ಷಗಳಿಂದ ವರ್ಣಧರ್ಮ, ಮೇಲುಕುಲ, ಕೀಳುಕುಲ ಇತ್ಯಾದಿ ನಾನಾ ತಪ್ಪು ಕಲ್ಪನೆಗಳಲ್ಲೇ ಜನತೆಯನ್ನು ಬೆಳೆಸಿಕೊಂಡು ಬಂದ ಹಿಂದೂ ಜಾತೀಯತಾವಾದವೇ ದೇಶದ ಇಂದಿನ ಶೋಚನೀಯ ಸ್ಥಿತಿಗೆ ಮುಖ್ಯ ಕಾರಣವಾಗಿದೆ. ಹಿಂದೂ ಧರ್ಮವು ತನ್ನ ಪಾವಿತ್ರ್ಯವನ್ನು ಯಾವಾಗಲೂ ಕಾಪಾಡಿಕೊಂಡಿಲ್ಲ. ಈಗ ಅದು ಜಾತೀಯ ಸ್ವರೂಪಕ್ಕೆ ಪೂರ್ಣವಾಗಿ ಪರಿವರ್ತಿತವಾಗಿದ್ದು ಹಿಂದುಗಳೆಂದು ಹೇಳಿಕೊಳ್ಳುವುದಕ್ಕೇ ತಲೆ ತಗ್ಗಿಸಬೇಕಾಗಿದೆ. ಹಿಂದು ಧರ್ಮಾಂಧರಿಗೆ ಮನುಷ್ಯತ್ವವೆಲ್ಲಿ ಉಳಿದಿದೆ?

ಮಾನವಕೋಟಿಯ ಸ್ವಾತಂತ್ರ್ಯ ಸಮಾನತೆಗಳ ನಂದಾದೀಪ ಹಚ್ಚಿದ ಬುದ್ಧದೇವನ ರಾಷ್ಟ್ರೀಯ ಧರ್ಮವನ್ನು ಭಾರತದಿಂದಲೇ ಓಡಿಸಿಬಿಟ್ಟ ವರ್ಣಧರ್ಮ ಯಾವ ಕಾಲದಲ್ಲಿ ಜನತೆಯನ್ನುದ್ಧರಿಸಲು ಮುಂದೆ ಬಂದಿದೆ? ಬದಲಾವಣೆಯಾದ ಕಾಲವನ್ನು ಅರಿತಾಗೆಲ್ಲ ಕಾಲಕ್ಕೆ ತಕ್ಕಂತೆ ಜನತೆಯನ್ನು ವಂಚಿಸಿ ದೇಶದ ಗುಲಾಮಗಿರಿಗೆ ಕಾರಣವಾದ ಇಂದಿನ ಹಿಂದೂ ವರ್ಣಾಶ್ರಮ್ಯಗಳು ಖಂಡಿತವಾಗಿ ನಾಶವಾಗಲೇಬೇಕು. ಅನೇಕ ರಾಷ್ಟ್ರೀಯರೆಂಬುವರು ಇತರರನ್ನು ಜಾತೀಯವಾದಿಗಳೆಂದು ಆರೋಪಿಸುವುದೇ ತಮ್ಮ ರಾಷ್ಟ್ರೀಯತೆ ಎಂದು ಭಾವಿಸಿದಂತೆ ತೋರುತ್ತಿದೆ. ಇಂತಹ ಸ್ವಾರ್ಥಸಾಧಕರಾದ ವರ್ಣವಾದಿಗಳು ಹಿಂದೂ ಜಾತಿಯಲ್ಲಿ ಅಸಂಖ್ಯರಾಗಿದ್ದು ಇಂದಿನ ಸರ್ಕಾರಕ್ಕೂ ಸಹ ಅವರು ಅಂತರಂಗದ್ರೋಹಿಗಳೇ ಆಗಿರುವಲ್ಲಿ ಯಾವ ಸಂಶಯವೂ ಇಲ್ಲ, ಕಾರಣ ಭಾರತದ ನಾಗರಿಕರು ಮಹಾತ್ಮಾಜಿಯ ಶೀಲ, ಸಚ್ಚಾರಿತೆಗಳನ್ನನುಸರಿಸಿದರೆ ಮಾತ್ರ ಅವರ ಆತ್ಮಕ್ಕೆ ಶಾಂತಿ ದೊರಕೀತು. ಅವರಿಗೆ ಯಾವುದು ಸಾಧ್ಯವಾಗಲಾರದು

ಗಾಂಧೀಜಿ ತಮ್ಮ ಅಪಾರ ಸೇವೆ, ತ್ಯಾಗಗಳಿಂದ ನಮ್ಮ ಸ್ವಾತಂತ್ರ್ಯವನ್ನು ನೀಗಿಸಿದರು, ಅಶಾಂತಿನ ವಿಪ್ಲವಗಳಿಂದ ಒಳಲುತ್ತಿದ್ದ ವಿಶ್ವಕ್ಕೆ ಶಾಂತಿಸಮಾಧಾನಗಳ ವಿಶ್ವಸಂದೇಶ ಬೀರಿದರು. ಸತ್ಯದ ಪ್ರತೀಕ ಅಹಿಂಸೆಯ ಮೂರ್ತಿಯಾಗಿದ್ದ ಈ ಶ್ರೇಷ್ಠಾತ್ಮನ ಅಂತ್ಯವು ಕೊನೆಗೆ ಹಿಂಸೆಗೆ ಆಹುತಿಯಾಗುದು ಪ್ರಪಂಚಕ್ಕೆಲ್ಲಾ ಆಶ್ಚರ್ಯ ಹಾಗೂ ಅದ್ಭುತ ವಿಷಯವಾಗಿದೆ.

ಹಿಂದುಸ್ಥಾನ ಸರಕಾರದವರು ಪಾಕಿಸ್ತಾನದ ಜಾತೀಯ ಕಲ್ಪನೆಯನ್ನು ನಾಶಗೊಳಿಸಲು ಸಮರ್ಥರಾಗಲಿಲ್ಲ ನಿಜ! ಆದರೆ ತಾವು ಮಾತ್ರ ಗಾಂಧೀಜಿಯಂತಹ ಮಾರ್ಗದರ್ಶಕರಿರುವಾಗ ನಡೆದ ಮಾರ್ಗವನ್ನೇ ಮುಂದೆಯೂ ಅನುಸರಿಸಿದಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ಗಂಡಾಂತರ ಬಂದರೂ ಅದನ್ನು ಪರಿಹರಿಸಿಕೊಳ್ಳಬಲ್ಲೆವು. ಇದನ್ನು ನಾವೆಲ್ಲಾ ಪೂರ್ಣವಾಗಿ ಯೋಚಿಸಿ ನಮ್ಮ ಆತ್ಮವನ್ನು ಶುದ್ಧಮಾಡಿಕೊಂಡು ಜಾತೀಯತೆಗೆ ನೀರಾಬಿಟ್ಟು ರಾಷ್ಟ್ರೀಯ ಧರ್ಮವನ್ನು ಆಚರಿಸುತ್ತಾ ಗಾಂಧೀ ಆತ್ಮಕ್ಕೆ ಚಿರಶಾಂತಿ ದೊರೆಯುವಂತೆ ಪ್ರಯತ್ನಿಸೋಣ.

# The Rayalaseema Bank Ltd., H. O. Bellary.

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193

## ಮುಖ್ಯ ಕಾರ್ಯಾಲಯ—ಬಳ್ಳಾರಿ.

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | ಮದ್ರಾಸು : ೩೦೧ ಲಿಂಗಶೆಟ್ಟಿ ಬೀದಿ.
ಬೆಂಗಳೂರು : ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

ಸ್ಥಾಯಿ **ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರಿಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ,
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಜೆ. ಲಿಂಗಾರೆಡ್ಡಿ**, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

# The Rayalaseema Confectionery Works, Bellary.

## ದಿ ರಾಯಲಸೀಮ ಕನ್ಫೆಕ್ಷನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | |
|---|---|
| First Quality .... .... | Rs, 32.0-0 |
| Second .... .... | Rs, 28 0-0 |
| Without essence .... | Rs, 26-0-0 |

Per Tin of 28 lbs Ex, Factory.
Sales Tax Extra.

None to beat us in quality. Try and be convinced - Encourage the industries of these most backward tracts.

**ಇಳಿಸಿದ ಬೆಲೆ ಪೆಪ್ಪರಮಿಂಟು**

| | |
|---|---|
| ಪ್ರಥಮ ವರ್ಗದ್ದು .... | ರೂ 32—0—0 |
| ದ್ವಿತೀಯ ,, .... | 28—0—0 |
| ಎಸ್ಸೆನ್ಸ ಇಲ್ಲದ್ದು .... | 26—0—0 |

28 ಪೌಂಡಿನ ಟಿನ್ನಿನ ಫ್ಯಾಕ್ಟರಿ ಹೊರಗಿನ ಬೆಲೆ ಸೇಲ್ಸಟ್ಯಾಕ್ಸು ಬೇರೆ. ಗುಣದಲ್ಲಿ ತಯಾರಿಕೆಯಲ್ಲಿ **ನಾವು** ಯಾರಿಗೂ ಕಡಿಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಯಾವಾಗಲೂ ನಮ್ಮಲ್ಲೇ ಬರುವಿರಿ. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪೋಷಿಸಿರಿ.

# ನೇತಾಜಿ ಸುಭಾಸಚಂದ್ರಬೋಸ್ ಬದುಕಿರುವರೇ?

## ಅಣ್ಣ ಶರತ್‌ಬೋಸರ ಹೇಳಿಕೆ.

'ಫ್ರೀ ಇಂಡಿಯಾ' ಎಂಬ ಪತ್ರಿಕೆಯಲ್ಲಿ ಹೀಗೆ ಪ್ರಸಿದ್ಧವಾಗಿದೆ.

ಶರತ್‌ಚಂದ್ರಬೋಸರು ತಮ್ಮ ಇತ್ತೀಚಿನ ಲಖನೋ ಭೆಟ್ಟಿಯಲ್ಲಿ ಅಲ್ಲಿದ್ದ ಒಬ್ಬ ಪ್ರಾಮುಖ್ಯ ಮುಖಂಡರೊಡನೆ, ನೇತಾಜಿಯು ಜೀವಿಸಿರುವರೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ, ಎಂದು ಹೇಳಿದರಂತೆ. ಸುಭಾಸರು ಸೋವಿಯೆಟ್ ರಷ್ಯದಲ್ಲಿರುವರೆಂದೂ ಅದಕ್ಕೋಸ್ಕರವೇ ತಾವವರ ಶ್ರಾದ್ಧವನ್ನು ಆಚರಿಸಲಿಲ್ಲವೆಂದು ಶರತ್ ಬಾಬುಗಳು ಹೇಳಿರುವರು. ಇವರು ಈ ರೀತಿ ನಂಬಲು ಎರಡು ಕಾರಣಗಳಿವೆಯಂತೆ, ಮೊದಲನೆಯದಾಗಿ ರಷ್ಯನ್ ಪತ್ರಿಕೆಗಳಲ್ಲಿ ಇಂಡಿಯದ ರಾಜಕೀಯ ವಿಚಾರವಾಗಿ ಒಂದೇಸಮನೆ ಮಹತ್ವದ ಲೇಖಗಳು ಪ್ರಕಟವಾಗಿವೆಯಂತೆ. ಇವರ ಊಹೆಯಲ್ಲಿ ನೇತಾಜಿಯು ಹೊರತು ಇನ್ನಾರು ಇಂತಹ ಪ್ರತಿಭಾನ್ವಿತ ಸೂಚನೆಗಳು ಕೊಡಲು ಸಮರ್ಥರಿಲ್ಲವಂತೆ. ಆದ್ದರಿಂದ ನೇತಾಜಿ ರಷ್ಯಾದಲ್ಲಿರುವರೆಂದು ಇವರ ನಂಬಿಗೆಯಂತೆ.

ಇನ್ನೊಂದು ಕಾರಣವೆಂದರೆ ಮಾಸ್ಕೊ ರೇಡಿಯೊದಿಂದ ಬಂಗಾಲಿ ಭಾಷೆಯಲ್ಲಿ ಭಾಷಣದ ಪ್ರಸರಣವಾಗುತ್ತಿರುವುದು. ಬೋಸರ ವಿಮಾನ ಅಪಘಾತದಿಂದ ಸತ್ತಿರುವರೆಂದು ಬೇಕೆಂದೇ ಪ್ರಕಟಿಸಲಾಗಿದ್ದು ಭೋಸರು ತಾವು ಪ್ರಕಟವಾಗಲು ಈ ಸಮಯಸನ್ನಿವೇಶಗಳು ಸರಿಯಲ್ಲವೆಂದೂ ಜಾಗತಿಕ ಮೂರನೆಯ ಯುದ್ಧದಾಂಭದಲ್ಲಿ ಇವರು ಪ್ರಕಟವಾಗುವ ನಿರೀಕ್ಷೆಯಿದೆಯೆಂದು ಶರತ್ ಬಾಬುಗಳು ನಂಬಿರುವಂತೆ ಪ್ರಕಟವಾಗಿದೆ

—)O(—

## ಗೋಧಿ

ಬಳ್ಳಾರಿ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳಲ್ಲಿ ಗೋಧಿಯ ಸೀದಾ ಮತ್ತು ಅದರ ಮೇಲಿದ್ದ ನಿಯಂತ್ರಣ ತೆಗೆದುಹಾಕಲಾಗಿದೆಯೆಂದು (Samba Wheat) ಸರ್ಕಾರದ ಪ್ರಕಟನೆ ಹೊರಟಿದೆ.

# ಜಿಲ್ಲಾ ಮುನ್ಸೀಫರ ಕೋರ್ಟು ಹೊಸಪೇಟೆಯಲ್ಲಿ

S. C. No. 468/47.

| | |
|---|---|
| ಗೌಳೇರ ಲಕ್ಷ್ಮಪ್ಪ ತಂದೆ ಉಮ್ಮಣ್ಣ ಗೌಳಿ, ಜಿರಾಯ್ತಿ ಹರಪನಹಳ್ಳಿ | ವಾದಿ |
| ಹಸೇನ್ ಸಾಬು ತಂದೆ ಮಾರಗಾಲಿ ಸಾಬು, ಮೋಜರು, ಮುಸ್ಲಿಂ, ಕಂಟ್ರಾಕ್ಟರ್, ಹರಪನಹಳ್ಳಿ. | ಪ್ರತಿವಾದಿ. |

ವಾದಿ ಪ್ರತಿವಾದಿಯ ಮೇಲೆ ರು. 53-14-0 ಗೆ ದಾವಾಮಾಡಿರುತ್ತಾನೆ. 28-2-48 ಕ್ಕೆ ವಾಯಿದಾ ಇರುತ್ತದೆ. ಆದಿವಸ ಪ್ರತಿವಾದಿ ಖುದ್ದಾಗಲಿ ವಕೀಲರ ದ್ವಾರವಾಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತವೆ.

| | |
|---|---|
| ಹೊಸಪೇಟೆ 21-2-48 | ಎ. ಆರ್ ಕೃಷ್ಣರಾವ್, ಅಡ್ವೊಕೇಟ್ (ವಾದಿಪರ) |

## ತುಂಗಭದ್ರಾಯೋಜನೆ.

ಮದ್ಯ ನಿಷೇಧ ಶಾಸನವನ್ನುಲ್ಲಂಘಿಸಿ ಕಳ್ಳ ಸಾರಾಯಿ ಭಟ್ಟಿ ಇಳಿಸಿ ಶಿಕ್ಷೆಗೊಳಗಾದ ಸುಮಾರು 2000 ಕೈದಿಗಳನ್ನು ತುಂಗಭದ್ರ ಕಾಲುವೆ ಅಗಿಯಲು ಸರ್ಕಾರದವರು ಏರ್ಪಡಿಸಿರುವರೆಂದು ಪ್ರಕಟವಾಗಿದೆ. ಕೆಲಸ ನಡೆಯುವ ಪ್ರದೇಶದಲ್ಲಿ "ಕ್ಯಾಂಪ್ ಜೈಲ" ನ್ನು ನಿರ್ಮಿಸಿ ಕೆಲಸ ಮುಗಿದ ಕೂಡಲೆ ಒಳಗೆ ಹಾಕುವರು. ಅವರಿಗೆ ಕೊಡುವ ಕೂಲಿಯು ಕೆಲಸಗಾರರ ಲೆಕ್ಕಕ್ಕೆ ಜಮಾ ಆಗುತ್ತದೆ. ಈ ಹೆಚ್ಚಿನ ಆದಾಯದಿಂದ ಅವರಿಗೆ ಒಳ್ಳೆಯ ಆಹಾರ ಕೊಡುವದಾಗುವುದೆಂದು ತಿಳಿದುಬಂದಿದೆ.

## ಶ್ರೀ ಕೃಷ್ಣಮೂರ್ತಿಯವರ ಬಂಧನ

ರಾಯಚೂರು ಕಾಂಗ್ರೆಸ್ ಹಸ್ತ ಪತ್ರಗಳನ್ನು ಹಚ್ಚುತ್ತಿದ್ದರೆಂಬ ಆರೋಪ ಹೊರಿಸಿ ಶ್ರೀ ಕೃಷ್ಣಮೂರ್ತಿಯವರನ್ನು ಪೋಲೀಸರು ಬಂಧಿಸಿ ತಮ್ಮ ಕೈಕಿಂಡಿ ತೀರಿಸಿಕೊಂಡರು. ಆಹಾರ ಕೊಡದೆ ಮತ್ತು ಕೋರ್ಟಿನಲ್ಲಿ ತರದೆ ತಮ್ಮ ಕೈವಶದಲ್ಲಿಯೇ ಇಟ್ಟುಕೊಂಡಿರುವರು. ಊಟ ಕೊಡಲು ಹೋದ ಜನರನ್ನು ಪೀಡಿಸಿ ಕಳುಹುತ್ತಿರುವರು. ಪೋಲೀಸರ ಗುಂಡಾಗಿರಿ ಹೆಚ್ಚುತ್ತ ಸಾಗಿದೆ.

ಇಂದೇ ನೋಡಿ ಆನಂದಿಸಿರಿ.

ಲಕ್ಷ್ಮೀಬಾಯಿ .... ಸುಬ್ಬಯ್ಯ ನಾಯ್ಡು .... ನಾಗೇಂದ್ರರಾವ್
ಕಮಲಾಬಾಯಿ....ಜಯಮ್ಮ....ಮುರಾರಿರಾವ್ ಮುಂತಾದವರು ನಟಿಸಿರುವ

# ಮಹಾತ್ಮ ಕಬೀರ್ (ಕನ್ನಡ)

ಪತಿಯೇ ಪರದೈವವೆಂದು ನಂಬಿರುವ ಸತಿಗೆ ಪತಿ ಪೂಜಿಸುವ ದೈವವೇ ದೇವರು; ಆವರೂ ಪತಿಗೆ ಆನಂದವಾದ ಕಷ್ಟಗಳು ಬಂದಾಗ ಮಾತ್ರ ಕೆರಳಿದ ಸಿಂಹಿಣಿಯಂತೆ ದೈವವನ್ನೇ ಕಣ್ಣೀರಿನ ಕಡಲಿಂದ ಎದುರಿಸಲು ಪ್ರಯತ್ನಪಟ್ಟು ಯಶಸ್ಸುಗಳಿಸಿದ ಲೋಯೀ ಪಾತ್ರದಲ್ಲಿ —ಶ್ರೀಮತಿ ಲಕ್ಷ್ಮಿಬಾಯಿ

ಸೃಷ್ಟಿಕರ್ತನಾದ ದೇವರು ಒಬ್ಬನೇ. ಆತನಿಗೆ ಜಾತಿಯಿಲ್ಲ. ಕುಲವಿಲ್ಲ ಎಂದಬಳಿಕ ಅವನ ಮಕ್ಕಳಾದ ನಮಗೇತಕ್ಕೆ ಜಾತಿ ಮತಗಳೆಂಬ ದುರಭಿಮಾನ ಎಂದು ಜಗತ್ತಿಗೇ ಜ್ಞಾನಮಾರ್ಗವನ್ನು ತೋರಿಸಿದ ಮಹಾತ್ಮ ಕಬೀರ ಪಾತ್ರದಲ್ಲಿ —ಶ್ರೀಮಾನ್ ಎಂ. ವಿ ಸುಬ್ಬಯ್ಯ ನಾಯ್ಡು

ಗಣೇಶ್ ಪಿಕ್ಚರ್ಸ್ ಮತ್ತು S. S S. ನಾಟಕ ಮಂಡಲಿಯವರ ತಯಾರಿಕೆ

## ಪ್ರಭಾತ ಟಾಕೀಸ್‌ನಲ್ಲಿ ೨೦-೨-೪೮ರಿಂದ



**NAVA BHARAT BELLARY.**

Reg. No. M, 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5-0-0 | One Year 5-0-0 |
| 6 ತಿಂಗಳಿಗೆ 3-0-0 | Six months 3-0-0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..............................................

..............................................

..............................................

Printed at Vittal Press, Q H No B-24 For (Q H No B-5)
Edited & Published T, B, Keshava Rao. by

ಜೈ ಹಿಂದ್.

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಸಂಚಿಕೆ ೮ | ಬಳ್ಳಾರಿ ಮಾರ್ಚ್ ೧ ಸೋಮವಾರ ೧೯೪೮ | 0-2-0

ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## ಹೈದರಾಬಾದ್ ಗುಂಡಾಜನರಿಂದ ಬಳ್ಳಾರಿ ಹಳ್ಳಿಯಲ್ಲಿ [ನದಿಚಾಗಿ] ಕೊಲೆ ಸುಲಿಗೆ.

ಬಳ್ಳಾರಿ ಜಿಲ್ಲಾ ಸಿರುಗುಪ್ಪ ಪೋಲೀಸ್ ಸರ್ಕಲ್‌ಗೆ ಸೇರಿ ನದಿಚಾಗಿ ಯೆಂಬ ಸುಮಾರು 1500 ಜನಸಂಖ್ಯೆಯ ಹಳ್ಳಿಯಲ್ಲಿ 25-2-48 ನೆಯ ದಿನಾಂಕ ಬುಧವಾರ ಪ್ರಾತಃಕಾಲ 7 ಘಂಟೆಗೆ ಹೈದರಾಬಾದ ಕಡೆಯಿಂದ ಬಂದ 80 ಜನ ಗುಂಡಾ ಜನರಿಂದ ಕೊಲೆ ಸುಲಿಗೆಯು ನಡೆಯಿತು ಈ ಹಳ್ಳಿಯು ತುಂಗಭದ್ರಾ ತೀರದಲ್ಲಿದೆ. ಪಶ್ಚಿಮ ತೀರ ಪ್ರದೇಶವು ರಾಯಚೂರ ಜಿಲ್ಲಾ ಸಿಂಧನೂರು ತಾಲೂಕಿಗೆ ಸೇರಿದೆ. ಸುದ್ದಿಯು ... ದ ಮಾರನೆಯ ದಿನ ಮಧ್ಯರಾತ್ರಿಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಸೂಪರೆಂಟರು ರಿಸರ್ವ ಪೋಲೀಸ್ ದಳದೊಂದಿಗೆ ... ದರು. ಅಷ್ಟು ಹೊತ್ತಿಗೆ ಎಲ್ಲಾ ಕಥೆಯು ಮುಗಿದಿದ್ದಿತು. ... ಶಸ್ತ್ರಗಳನ್ನು ಧರಿಸಿ ಆಯುಧ ಕಠಾರಿ ಮತ್ತು ಬಂದೂಕಗಳಿಂದ ಸುಸಜ್ಜಿತರಾಗಿ ಬಂದವರನ್ನು ತಡೆಯ ಹೋದವನನ್ನು ... ಮಾಡಿ ಗುಂಡಿನಿಂದ ಸಾಯಹೊಡೆದರು. ಶ್ರೀಮಂತರ ಮನೆಗಳನ್ನು ಲೂಟಮಾಡಿ ಆಸ್ತಿಗಳನ್ನು ಕೊಂಡೊಯ್ದರು. ... ಯಾದ ಆಸ್ತಿಯ ಬೆಲೆ 20 ಸಾವಿರ ರೂ. ಗಳೆಂಬುದಾಗಿ ಅಧಿಕಾರಿಗಳು ಅಂದಾಜು ಮಾಡುತ್ತಾರೆ. ಬಂದ ಗೂಂಡಾ ಜನರು ತಮ್ಮ ತಮ್ಮಲ್ಲಿ ಹಿಂದೂಸ್ತಾನಿಯಲ್ಲೂ ಊರ ಜನರೊಡನೆ ಕನ್ನಡ-ತೆಲುಗುಗಳಲ್ಲೂ ಮಾತಾಡಿದರೆಂದು ಊರ ಜನರು ಹೇಳುತ್ತಾರೆ. ಈ ಗುಂಪಿನಲ್ಲಿ ಮಿಲಿಟರಿ ಪೋಲೀಸರು ಇಲ್ಲವೆಂದರೂ ಇಷ್ಟು ದೊಡ್ಡ ಗುಂಪು ಅವರ ಸಹಾಯವಿಲ್ಲದೆ ಬಂದಿಲ್ಲ. ಇತ್ತೆಹಾದುಲ್ ಸಂಘದವರೆಂಬುದು ಸಿದ್ಧವಾದ ಮಾತು ಜಿಲ್ಲಾ ಮ್ಯಾಜಿಸ್ಟ್ರೇಟರು ರಿಸರ್ವ ಪೋಲೀಸ್ ದಳದ ಭಾಗವನ್ನು ಬಿಟ್ಟು ಬಂದಿರುತ್ತಾರೆ. ಹಚ್ಚೊಳ್ಳಿ ಫಿರ್ಕಾ ಭಾಗದಲ್ಲಿನ ನದೀತೀರ ಪ್ರದೇಶದ ಹಳ್ಳಿಗಳವರೂ ಮುಖ್ಯವಾಗಿ ತುಂಗಭದ್ರಾ ತೀರ ಪ್ರದೇಶದವರೂ ಈ ಘಟನೆಯಿಂದ ಭಯಭ್ರಾಂತರಾಗಿರುತ್ತಾರೆ.

ಹಳ್ಳಿಗಳಲ್ಲಿ ಕೆಲವರಿಗೆ ಲೈಸನ್ಸ್ (Fire arms) ಕೊಟ್ಟಿರುವರಾದರೂ ಶಸ್ತ್ರಗಳನ್ನು ಪೂರೈಸುವ ಜವಾಬ್ದಾರಿಯನ್ನು ಸರಕಾರದವರು ವಹಿಸಿಲ್ಲ. ಬಳ್ಳಾರಿ ಜಿಲ್ಲೆಯ ನೂರಾರು ಮೈಲಿ ಪ್ರದೇಶದ ತುಂಗಭದ್ರಾ ತೀರದ ಸಂರಕ್ಷಣೆಗೆ ಜನರ ಸಹಕಾರವೂ ಬೇಕು. ಆದರೆ ಸಶಸ್ತ್ರ ಜನರ ಮುಂದೆ ನಿಶ್ಶಸ್ತ್ರರಾದವರೇನು ಮಾಡಬೇಕು? 1500 ಜನರುಳ್ಳ ಹಳ್ಳಿಯವರು 80 ಜನರಿಗೆ ಶರಣಾಗತರಾಗಬೇಕಾಯಿತು. ಸರ್ಕಾರದವರು ಈಗಲಾದರೂ ಎಚ್ಚತ್ತು ತುಂಗಭದ್ರಾ ತೀರ ಪ್ರದೇಶದ ಜನರಿಗೆ ಶಸ್ತ್ರಾಸ್ತ್ರಗಳನ್ನೊದಗಿಸುವ ಜವಾಬ್ದಾರಿ ವಹಿಸಬೇಕು. ಇಲ್ಲವಾದರೆ ಜನರ ಆಸ್ತಿ - ಮಾನ - ಪ್ರಾಣಗಳನ್ನು ಸಂರಕ್ಷಿಸಲು ಅಸಮರ್ಥವಾದ ಸರ್ಕಾರವಿದೆಂಬುವ ಅಪಕೀರ್ತಿಯನ್ನು ಹೊರಬೇಕಾದೀತು. ಪ್ರಜಾಸರ್ಕಾರವು ಕೂಡಲೇ ಜಾಗೃತವಾಗಬೇಕು.

ನವ ಭಾರತಕ್ಕೆ ಜಾಹಿರಾತುಗಳು ಕೊಡಿರಿ.

THE NAVA BHARAT
ನವಭಾರತ
ಸಂಪಾದಕ-ಟಿ.ಬಿ.ಕೇಶವರಾವ್

ಮಾರ್ಚ್ 1 ಸೋಮವಾರ 1948

# ಅಕ್ಕಿಯ ಸೀದಾ (ರೇಷನ್) ಅನಾವಶ್ಯಕ.

ಬಳ್ಳಾರಿ ಜಿಲ್ಲೆಯಲ್ಲಿ ಹತ್ತು ಲಕ್ಷಕ್ಕಿಂತಲೂ ಹೆಚ್ಚಿನ ಜನರು ಸೀದಾ ಪದ್ಧತಿಯಿಲ್ಲದೆ ಜೀವನನಿರ್ವಾಹ ಮಾಡುತ್ತಿರುವರೆಂದರೆ ಸುಮಾರು 1,50,000 ಜನಸಂಖ್ಯೆಯುಳ್ಳ ಬಳ್ಳಾರಿ, ಆದವಾನಿ, ಹೊಸಪೇಟೆ ನಗರಗಳವರು ಅಕ್ಕಿಯ ಸೀದಾ ಇಲ್ಲದೆ ಜೀವಿಸುವುದು ಕಷ್ಟವೆಂದು ಭಾವಿಸುವುದು ಹಾಸ್ಯಾಸ್ಪದವೇ ಸರಿ. ನೆಲ್ಲು ಬೆಳೆವ ಪ್ರದೇಶಗಳಿಂದ ಅಕ್ಕಿಯನ್ನು ತಂದು ಹೆಚ್ಚು ದರಗಳಲ್ಲಿ ಅದೃಶ್ಯವಾಗಿ ಮಾರುತ್ತಿರುವರು. ಈ ಕಂಟ್ರೋಲಿನ ಪೀಡೆಯಿಂದ ಹೆಚ್ಚು ಹಣವಿದ್ದವರಿಗೆ ಸುಖವೂ ಬಡವರಿಗೆ ಅತಿಶಯ ತೊಂದರೆಯೂ ಉಂಟಾಗುತ್ತಲಿವೆ

ಅಧಿಕಾರೀವರ್ಗಗಳಲ್ಲಿ ಕಂಟ್ರೋಲ್ ಇದ್ದರೆ ತಮ್ಮ ಸ್ವಾರ್ಥಲಾಭೋದ್ದೇಶಗಳು ನೆರವೇರುವವೆಂಬ ಮರಾಕೆಯಿದ್ದೇ ಇರುತ್ತದೆ, ಅವರಿಗೆ ಬಹುಜನ ಹಿತದ ಲಕ್ಷ್ಯವೇ ಇಲ್ಲ ಸ್ವಹಿತ ಸ್ವಾರ್ಥವಿದ್ದರಾಯಿತು. ಪರಿಸ್ಥಿತಿಯನ್ನು ಗಮನಿಸುವಾಗಲೂ ಪಕ್ಷಪಾತ ದೃಷ್ಟಿಯಿಂದ ಗಮನಿಸುವರು, ಬಳ್ಳಾರಿ ಜಿಲ್ಲೆಯಲ್ಲಿ ಪರಿಸ್ಥಿತಿಯು ತೃಪ್ತಿಕರವಿಲ್ಲೆಂದೂ ಅಲ್ಲಿ ಸೀದಾ ತೆಗೆಯಬಾರದೆಂದೂ ಡೆಪ್ಯೂಟಿ ಕಮೀಶನರ್ ಆಫ್ ಶಿವಿಲ್ ಸಪ್ಲೇಸ್ ಸಿಫಾರ್ಸು ಮಾಡಿರುವರೆಂತ ತಿಳಿದುಬಂದಿದೆ. ಇದು ನಿಜವಿರುವ ಪಕ್ಷದಲ್ಲಿ ಅವರು ಯಾವ ಆಧಾರದ ಮೇಲೂ ಇಂಥಾ ಸಿಫಾರ್ಸು ಮಾಡಿರುವರೋ ಊಹಿಸುವುದೂ ಅಶಕ್ಯವಾಗಿದೆ,

ದತ್ತಮಂಡಲದ ಜಿಲ್ಲೆಗಳ ಪರಿಸ್ಥಿತಿಯೆಲ್ಲಾ ಒಂದೇ. ಈಗ ನಾಲ್ಕು ಜಿಲ್ಲೆಗಳಲ್ಲಿ ಅನುಕೂಲ ವಾತಾವರಣವಿದೆ ಮೇ, ಜೂನ್ ತಿಂಗಳುಗಳಲ್ಲಿ ಆಹಾರಧಾನ್ಯಗಳ ಬೆಲೆಯು ಸ್ವಲ್ಪ ಮಟ್ಟಿಗೆ ಏರಬಹುದು. ಆದರೆ ಮತ್ತೆ ನಿಯಂತ್ರಣ ತರಬೇಕೆಂಬ ಮಟ್ಟಕ್ಕಲ್ಲ. ಈ ಕಾರಣ ಸರ್ಕಾರದವರು ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿ ಬಳ್ಳಾರಿ ಜಿಲ್ಲೆಯಲ್ಲಿ ನಿಯಂತ್ರಣವನ್ನು ನಿರ್ಮೂಲ ಮಾಡಲೆಂದು ಆಶಿಸುತ್ತೇವೆ.

## ಹೊಸಪೇಟೆ ರೈತರ ಶಿಷ್ಟಮಂಡಳಿ ಕಬ್ಬಿನ ಬೆಲೆಯ ಬಗ್ಗೆ

ಮೇಲಿನ ಮಂಡಳವು 1) ಬಿ ಅನಂತಾಚಾರ್ಯ ಎಂ. ಎಲ್. ಎ, 2) ಡಾ॥ ಆರ್, ನಾಗನಗೌಡ ಅಧ್ಯಕ್ಷ ರೈತ ಸಂಘ, 3) ಪಂತರ ರಾಮಚಂದ್ರರಾವ್, ಉಪಾಧ್ಯಕ್ಷ ರೈತ ಸಂಘ, 4) ಎನ್ ಲಕ್ಷ್ಮಣಮೂರ್ತಿ, ರೈತ ಸಂಘದ ಕಾರ್ಯದರ್ಶಿ, 5) ಆರ್. ವಿ. ದೇಸಾಯಿ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಛೇರಿಯ ಕಾರ್ಯದರ್ಶಿ, 6) ಎನ್. ಶಿವಪ್ಪ, ರೈತಕಾರ್ಯಕರ್ತ. ಕಂಚೂರು ಮತ್ತು ಹೊಸಪೇಟೆಯ 12 ಜನ ರೈತರನ್ನೊಳಗೊಂಡು 19-2-48 ಸಾಯಂಕಾಲ 3 ಗಂ ಡಾ॥ ಟಿ. ಎಸ್. ಎಸ್. ರಾಜನ್ ರವರನ್ನು ಆಹಾರಮಂತ್ರಿಗಳು ಮದ್ರಾಸ್ ಸರ್ಕಾರದ ಕಛೇರಿಯಲ್ಲಿ ಕಂಡು ಕಬ್ಬಿನ ಬೆಲೆಯು 23 ಭಾಗ ಅಂದರೆ ಸುಮಾರು ರೂ. 66 ಕೊಡಬೇಕೆಂತಲೂ ಸಕ್ಕರೆ ಕಾರಖಾನೆಯಲ್ಲಿ ಉಂಟಾಗುತ್ತಿರುವ ಇತರ ಕೊರತೆಗಳನ್ನು ನಿವೇದಿಸಿದರು. ಮಾನ್ಯಮಂತ್ರಿಗಳು ಕಬ್ಬಿನ ಮಂತ್ರಿಗಳು ಕಬ್ಬಿನ ಬೆಲೆ ನಿರ್ಣಯಿಸುವದಾಗಿ ತಿಳಿಸಿದರು

ಪುನಃ 20-2-48ರಲ್ಲಿ ಮಾನ್ಯ ಹೆಚ್. ಸೀತಾರಾಮರೆಡ್ಡಿ ಔದ್ಯೋಗಿಕ ಮಂತ್ರಿ, ಮಾನ್ಯ ಕೆ. ಮಾಧವ ಮೆನನ್, ವ್ಯವಸಾಯಮಂತ್ರಿ ಕಂಡು ಈ ವಿಷಯ ತಿಳಿಸಲಾಯಿತು. ಅವರು ಈ ಬಗ್ಗೆ ಸರಕಾರಿ ಪ್ರಕಟನೆ ಹೊರಡಿಸುವದಾಗಿ ಆಶ್ವಾಸನ ಕೊಟ್ಟಿದ್ದಾರೆ. ಬೇಗನೇ ಈ ವಿಷಯದಲ್ಲಿ ಪ್ರೆಸ್ ಸ್ಟೇಟ್‌ಮೆಂಟ್ ಅಥವಾ ಗೆಜೆಟಿನಲ್ಲಿ ಆಗಲೀ ಹೊರಬೀಳುವದೆಂದು ಆಶಿಸಲಾಗಿದೆ. ಈ ವಿಷಯದಲ್ಲಿ ದಕ್ಷಿಣ ಹಿಂದೂದೇಶದ ಕಾರಖಾನೆ ಒಡೆಯರ ಸಂಘದವರೂ ಮಂತ್ರಿಗಳನ್ನು ಭೆಟ್ಟಿಯಾಗಿ ತಮ್ಮ ವಿಚಾರಗಳನ್ನು ತಿಳಿಸಿದ್ದಾರೆ.

## ಯುರೋಪದಲ್ಲಿ

# ಕೂಲಿಕಾರ ಸಾಹುಕಾರ ತಿಕ್ಕಾಟ

ಕಮ್ಯೂನಿಷ್ಟರ ಹಾವಳಿಯಿಂದಾಗಿ ಯುರೋಪ ಖಂಡದಲ್ಲಿಯ ಪರಿಸ್ಥಿತಿಯು ದಿನ ದಿನಕ್ಕೂ ಗಂಭೀರವಾಗತೊಡಗಿದೆಯೆಂದೂ ಅಲ್ಲಿಯ ಮುಖಂಡರು ಈ ಬಗ್ಗೆ ಬಹಳ ಚಿಂತಾತುರರಾಗಿರುವರೆಂದೂ ಅಲ್ಲಿಂದ ಬಂದ ವರದಿಗಳ ಮೇಲಿಂದ ತಿಳಿದುಬರುತ್ತವೆ. ಉದ್ಯೋಗ ವ್ಯವಸಾಯಗಳಲ್ಲಿ ಮುಷ್ಕರ, ದೇಶಗಳ ಒಳ ಆಡಳಿತದಲ್ಲಿ ಅಡ್ಡಗಾಲು, ಪರಕೀಯ ನೆರವನ್ನು ಪಡೆಯಬೇಕೆಂದರೆ ಅಡ್ಡಿ ಆತಂಕಗಳನ್ನು ತಂದೊಡ್ಡುವದು, ತನ್ನ ಪ್ರಚಾರಕಾರ್ಯವನ್ನು ಅವ್ಯಾಹತವಾಗಿ ಸಾಗಿಸಲು ಬೇಕಾದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವದು, ಇವೇ ಮೊದಲಾದ ಕಮ್ಯೂನಿಷ್ಟ ಪಾರ್ಟಿಯ ಚಟುವಟಿಕೆಗಳಿಂದ ಇಂದು ಇಡೀ ಯುರೋಪವೇ ಜರ್ಝರಿತವಾಗಿದೆಯೆನ್ನಬಹುದು.

ರಶಿಯದ ನೆರವು ಸಹಾನುಭೂತಿಗಳನ್ನು ಪಡೆಯುತ್ತಲಿದ್ದ, ಯುರೋಪದ ಎಲ್ಲ ದೇಶಗಳಲ್ಲಿಯೂ ವ್ಯಾಪಿಸಿಕೊಂಡಿದ್ದ ಈ ಕಮ್ಯೂನಿಷ್ಟ ಪಡೆಯು, ಅಮೇರಿಕೆಯು ಯುರೋಪಕ್ಕೆ ಕೊಡಮಾಡಿದ್ದ ನೆರವನ್ನು ಎಲ್ಲ ದೇಶಗಳಲ್ಲಿಯೂ ವಿರೋಧಿಸಲು ಪ್ರಚಂಡವಾದ ಆಂದೋಲನವನ್ನೇ ಹೂಡಿಬಿಟ್ಟಿದೆ. ಮುಷ್ಕರಗಳಿಂದ, ಹಿಂಸೆಯಿಂದ, ಪ್ರಚಾರದಿಂದ, ಇನ್ನೂ ಅನೇಕ ಬಗೆಯ ಉಪಾಯಗಳನ್ನು ಯೋಚಿಸಿ ಮಾರ್ಶಲ ಯೋಜನೆಯು ಯುರೋಪದಲ್ಲಿ ಕಾರ್ಯಕಾರಿಯಾಗದಂತೆ ಈ ಕಮ್ಯೂನಿಷ್ಟರು ದೀರ್ಘ ಪ್ರಯತ್ನವನ್ನು ಮಾಡುತ್ತಲಿದ್ದಾರೆ. ಅದರಲ್ಲಿಯೂ ಫ್ರಾನ್ಸ ಮತ್ತು ಇಟಲಿಗಳಲ್ಲಿಯೂ ಈ ಕಮ್ಯೂನಿಷ್ಟರ ಹಾವಳಿಯು ಅತಿರೇಕಕ್ಕೆ ಮುಟ್ಟಿದೆಯೆಂದು ಹೇಳಬಹುದಾಗಿದೆ. ಈ ಸಂಪು ಮುಷ್ಕರಗಳ ಪರಿಣಾಮದಿಂದಾಗಿ ದೇಶದ ಉತ್ಪತ್ತಿಯ ಪ್ರಮಾಣಕ್ಕೆ ಬಲವಾದ ಪೆಟ್ಟು ತಗಲಿದೆ. ದೇಶದಲ್ಲಿ ಉತ್ಪತ್ತಿ ಕಡಿಮೆಯಾಗಿ ವ್ಯಾಪಾರೋದ್ಯೋಗಗಳು ಕಟ್ಟಾಗಿ ದೇಶದ ಆರ್ಥಿಕ ಪರಿಸ್ಥಿತಿಯು ದಿನ ದಿನಕ್ಕೂ ಕೆಡುತ್ತ ನಡೆದಿದೆ. ಹೀಗಿರುವದರಿಂದ ಅಮೇರಿಕನ್ನ ಕಾಂಗ್ರೆಸು, ಹೆಚ್ಚು ಸ್ವಾರ್ಥತ್ಯಾಗವನ್ನೂ ಹೆಚ್ಚು ಸಹಾಯವನ್ನೂ ಮಾಡಿ ಕಮ್ಯೂನಿಷ್ಟ ಅಲ್ಲದೆ ಸರಕಾರವು ಮುಳುಗುತ್ತಿರುವದನ್ನು ಎತ್ತಿ ಹಿಡಿಯಬೇಕಾಗಿದೆ.

ಫ್ರಾನ್ಸದಲ್ಲಿಯಂತೂ ವಿಶೇಷ ಪರಿಣಾಮವಾಗಿರುವುದು ಕಂಡುಬರುತ್ತದೆ. ಸುಮಾರು 7 ಕೋಟಿ 50 ಲಕ್ಷ ಕೆಲಸದ ತಾಸುಗಳು ಕಳೆದಿದೆಯೆಂದು ಹೇಳಬಹುದು. ಮುಷ್ಕರಗಳಿಂದ ಇನ್ನೂ ಹೆಚ್ಚಿನ ಹಾನಿಯಾಗುವಂತೆ ಕಂಡುಬರುತ್ತದೆ. ರಾಷ್ಟ್ರದ ಉತ್ಪತ್ತಿಯಲ್ಲಿ ಸುಮಾರು ನೂರಕ್ಕೆ ಇಪ್ಪತ್ತೈದರಷ್ಟು ಕಡಿಮೆಯಾಗಿದೆಯೆಂದು ಹೇಳಬಹುದು. ಅಂದರೆ ಸುಮಾರು 20 ಕೋಟಿ ಡಾಲರಗಳಷ್ಟು 51 ಲಕ್ಷ ಟನ್ನ ಕಚ್ಚಾ ಕಬ್ಬಿಣ, 21 ಲಕ್ಷ ಟನ್ನ ಕಬ್ಬಿಣ, 2 ಲಕ್ಷ ಟನ್ನ ಉಕ್ಕು ಮತ್ತು 1 ಲಕ್ಷ 75 ಸಾವಿರ ಟನ್ನ ಸಿದ್ಧ ಉಕ್ಕು ಇಷ್ಟು ಉತ್ಪತ್ತಿ ಕಡಿಮೆಯಾಗಿದೆ. ಅಂದರೆ ಸುಮಾರು ನೂರಕ್ಕೆ ನಾಲ್ವತ್ತರಷ್ಟು ಉತ್ಪತ್ತಿ ಕಡಿಮೆಯಾದಂತಾಯಿತು. ಪುನರಚನೆಯ ಹೋರಾಟದಲ್ಲಿಯಂತೂ ಅಪಾರವಾದ ಹಾನಿಯಾಗಿದೆ. ಬೆಲೆಗಳ ಏರುವಿಕೆಯಂತೂ ಒಂದೇ ಸವನೆ

11ನೇ ಪುಟವನ್ನು ನೋಡಿರಿ.

MEENAKSHI BHAVAN
(REGD).
Coffee Club, Boarding & Lodging
Brahmin Street, BELLARY.

ಮೀನಾಕ್ಷಿ ಭವನ
(ರಿಜಿಸ್ಟರ್ಡ್)
ಕಾಫೀ ಕ್ಲಬ್, ಊಟ ವಸತಿ,
ಬ್ರಾಹ್ಮಣ ಬೀದಿ, ಬಳ್ಳಾರಿ.

ಶಾಖೆಗಳು:—
1) ಮೀನಾಕ್ಷಿ ಗಾರ್ಡನ್ ಹೋಟಲ್
ಕಾಫೀ ಕ್ಲಬ್ - ಊಟ ವಸತಿ.
2) ಮೀನಾಕ್ಷಿ ಕೇಫ್ - ಕಾಫೀ ಕ್ಲಬ್ ಮಾತ್ರ
(ಪ್ರೊ. ಸುಬ್ಬಣ್ಣಾಚಾರ್ಯ)
ರುಚಿ - ಶುಚಿ - ಯಾವಾಗಲೂ ಇಲ್ಲಿಯೇ ಬರ್ರಿ.

## ಆಂಧ್ರಪ್ರಾಂತ ರಚನೆಯೂ ಹೊಸರಾಜ್ಯ ಘಟನೆಯೂ.

—— ● ——

### ಘಟನಾ ಕರಡಿನೊಳಗಿಂದ ಆಂಧ್ರಪ್ರಾಂತ ಹೆಸರನ್ನು ಕಡಿಮೆ ಮಾಡಲಾಗುವದು?

ದಿಲ್ಲಿಯಿಂದ ಡಾ|| ಲಂಕಾಸುಂದರಂ ಎಂಬವರು ಮದ್ರಾಸದ "ಇಂಡಿಯನ್ ಎಕ್ಸಪ್ರೆಸ್" ಪತ್ರಿಕೆಗೆ ಕಳಿಸಿದ ಒಂದು ತಂತಿಮೂಲಕ ಕೆಳಗಿನಂತೆ ತಿಳಿಸಿರುವರೆಂದು ತಾ|| 21-2-48ರ "ಇಂಡಿಯನ್ ಎಕ್ಸಪ್ರೆಸ್" ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ.

ಘಟನಾ ಸಮಿತಿಯು ಈಗ ನಿಶ್ಚಿತಗೊಳಿಸಬೇಕಾಗಿರುವ ಘಟನೆಯ ಕರಡಿನಲ್ಲಿ ನಮೂದಿತವಾದ ಪ್ರಾಂತಗಳಲ್ಲಿ ಒಳಗೊಂಡ "ಆಂಧ್ರ" ಪ್ರಾಂತದ ಹೆಸರನ್ನು ತೆಗೆದುಹಾಕಬೇಕೆಂದು ಹಿಂದುಸ್ಥಾನ ಸರಕಾರದ ಪ್ರಧಾನಾಮಾತ್ಯರು ಆದೇಶಿಸಿರುವರೆಂಬ ವರದಿಯು ಆಂಧ್ರಗುಂಪಿನಲ್ಲಿ ವಿಸ್ಮಯವನ್ನುಂಡುಮಾಡಿದೆ.

ಘಟನೆಯನ್ನು ಸಿದ್ಧಪಡಿಸಿದ ಉಪಸಮಿತಿಯು ಘಟನೆಯ ಕರಡಿನಲ್ಲಿ ಆಂಧ್ರಪ್ರಾಂತದ ಹೆಸರನ್ನು ಕಾಣಿಸಿದ್ದಿತೆಂದು ನಂಬಲಾಗಿತ್ತು. ಆದರೆ ಈಗ ವರದಿಯಾದಂತೆ ಪ್ರಧಾನ ಮಂತ್ರಿಗಳು ಆ ಹೆಸರನ್ನು ಕಡಿಮೆ ಮಾಡಲು ಆದೇಶಿಸಿದುದು ನಿಜವೇ ಆದರೆ "ಆಂಧ್ರಪ್ರಾಂತಮಾತ್ರ ಹೊಸರಾಜ್ಯ ಘಟನೆಯೊಡನೆಯೇ ಅಸ್ತಿತ್ವದಲ್ಲಿ ಬರುವದು" ಎಂದು ಹೇಳಿದ ಅವರ ಮೊದಲಿನ ಆಶ್ವಾಸನಕ್ಕೆ ಈ ಆದೇಶವು ವಿರೋಧವಾಗಿದೆಯೆಂಬುದೇ ವಿಸ್ಮಯಕ್ಕೆ ಕಾರಣವಾಗಿದೆ.

ಸಾಮಾನ್ಯ ಇಲ್ಲವೆ ವಿಶಿಷ್ಟವಾಗಿ ಆಂಧ್ರಪ್ರಾಂತ ನಿರ್ಮಾಣವಾದ ಆತುರತೆಯ ಬಗ್ಗೆ ಯಾವದೂ ಗೊತ್ತುವಳಿಯನ್ನು ಮಂಡಿಸಕೂಡದೆಂದು ಸದಸ್ಯರನ್ನು ಒಡಂಬಡಿಸಲಾಗಿದೆ. ಆದ್ದರಿಂದ ಪ್ರಧಾನ ಮಂತ್ರಿಗಳ ಈ ಆದೇಶದಿಂದ ಇನ್ನು ಮುಂದೆ ಘಟನಾಸಮಿತಿಯ ಇಡೀ ಆಯುಷ್ಯದಲ್ಲಿಯೇ ಆಂಧ್ರಪ್ರಾಂತರಚನೆಯ ಪರಿಶೀಲನೆಯನ್ನು ವರ್ಜಿಗೆ ತರಲು ಯಾವ ಘಟನಾತ್ಮಕ್ಕೆ ಸಾಧ್ಯತೆಯೂ ಉಳಿಯಲಿಲ್ಲವೆಂದು ಆಂಧ್ರರು ತಿಳಿಯತೊಡಗಿದಾರೆ.

## ಬಳ್ಳಾರಿ

### ತಾರಾನಾಥ ಆಯುರ್ವೇದ ವಿದ್ಯಾಪೀಠದಲ್ಲಿ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿ.

ಮದ್ರಾಸಿನ ಹಿಂದಿನ ಆರೋಗ್ಯ ಮಂತ್ರಿಗಳಾಗಿದ್ದ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರು ಚಿಕಿತ್ಸೆಗಾಗಿ ಇಲ್ಲಿ ಬಂದು ಒಂದು ತಿಂಗಳವರೆವಿಗೂ ಇದ್ದು ಬಹುಮಟ್ಟಿಗೆ ಗುಣಹೊಂದಿ ತೆರಳಿದರು. ಅವರು ಇಲ್ಲಿದ್ದಾಗ ಆಶ್ರಮದ ಸಕಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಆಗಾಗ್ಗೆ ಉಪದೇಶಪರ ಸಂಭಾಷಣೆಗಳನ್ನು ನಡೆಸುತ್ತಿದ್ದರು. ಕಳೆದವಾರ ಒಂದು ಮೆಡಿಕಲ್ ವಾರ್ಡಿನ ಪ್ರಾರಂಭೋತ್ಸವವು D. M. O. ರಧ್ಯಕ್ಷತೆಯಲ್ಲಿ ಶ್ರೀಮತಿಯವರ ಸಮ್ಮುಖದಲ್ಲಿ ನಡೆಯಿತು.

### ಹಿಟ್ಟು—ನುಚ್ಚು.

[ನೇತಾಜಿ ತರುಣ ಸಂಘ—ಆಲೂರು (ಕೂಡ್ಲಿಗಿ)]

1) ಅಪ್ರಮಾಣಿಕತನ, ಲಾಭಕೋರತನಗಳು ನಿಯಂತ್ರಣವನ್ನು ಜಾರಿಗೆ ತರಲು ಕಾರಣವಾದವು (ಗಾಂಧಿ). ಹೌದು! ಇದು ಅಕ್ಷರಶಃ ನಿಜ.

2) ನಿಯಂತ್ರಣವು ಇದ್ದಾದರೆ ಬಂಗಾಲ ಕ್ಷಾಮದಂತಹ ಕ್ಷಾಮ ಒದಗುವದೆಂಬುವವರ ಉದ್ಗಾರವು ಆಧಾರವಿಲ್ಲದಂತಾಗುತ್ತಿದೆ. ಇವರೆಲ್ಲಾ ಲಾಭಬಡಕ ಕುಹಕ ವ್ಯಾಪಾರಿಗಳಲ್ಲದೆ ಬೇರೆ ಯಾರೂ ಅಲ್ಲ

3) ವಿವಿಧ ಜಾತಿಗಳವರಿಗೆಲ್ಲಾ ನವನಿರ್ಮಿತ ಭಾರತದಲ್ಲಿ (Secular State) ಸಮಾನ ಸ್ಥಾನವಿದೆ (ಜವಹರಲಾಲ ನೆಹರು)

ಈಗಲಾದರೂ ಜಾತೀಯತೆಯ ಸಂಕುಚಿತ ಮಾರ್ಗವನ್ನು ವಿವಿಧ ಮತಗಳವರು ತ್ಯಜಿಸಬಾರದೇ?

4) ಸಹಕಾರ ಬುದ್ಧಿಯೇ ಸಮಾಜೋದ್ಧಾರದ ಉಸಿರು. ಹಳ್ಳಿಗಳ ಸಹಕಾರ ಸಂಘಗಳಂತೆ ಕೆಲವರು ಮಾತ್ರ ಸಾಲತೆಗೆದುಕೊಂಡು ಸಂಘವನ್ನೆ ಮುಳುಗಿಸುವ ಪ್ರವೃತ್ತಿಯು ಹಳ್ಳಿ ನಾಯಕರಲ್ಲಿ ಸಾಮಾನ್ಯವಾಗುಂಟು. ಗ್ರಾಮಾಭಿವೃದ್ಧಿಯಲ್ಲಿ ಸಹಕಾರ ಬೇಕು. ಏಕೆಂದರೆ ಭಾರತ ಭವಿಷ್ಯವು ಹಳ್ಳಿಗರನ್ನವಲಂಬಿಸಿದೆ.

5) ಪ್ರಜಾಪ್ರಭುತ್ವವೆಂದರೆ ಜನಾಭಿಪ್ರಾಯದ ಮಾನ್ಯತೆ. ಆದರೆ ಓಟಿಗೆ ಮಾತ್ರ ಜೋಡಿದಾಗುವದು ಬೇಡ.

# MAHATMA GANDHI'S
## MESSAGE TO THE WORLD.

### Sir Stafford Cripps's Tribute

" Non-violence for him was not . negative policy; it was much more than that It was determination that the power of love should triumph — a determination based upon a deep and unshakable belief in that power. It was by that power of love that he was de. termined to liberate his conntry and for that purpose he spent many years walking up and down its length and breadth preaching his gospel of freedom through love and non violence He never took the view that he must divorce his religion from his everyday life Religion was his life and his life was his religion.

SIMPLE LIFE

" He lived the simplest of lives, surrounded by an evergrowing band of devotee followers. His food, his clothing, his lodgings were all the simplest. He indulged in no luxuries and did without many things that most of us would regard as necessities His most powerful wespon with his own people was his willingress to fast, taking upon himself the sins of others and thus doing penance for them.

"He was no simple mystic; combined with his religious outlook was his lawyer traine mind,d quick and apt in reasoning. He was a formidable opponent in argument, and would often take up the attitude that his views and the policy he was advocating had come to him in his meditations from God, and then no reasoning upon earth could make him depart from them.

"He knew he was right. It was by prayer and meditation that his mind

---

ಅವರು ತಮ್ಮ ಸ್ವಶಕ್ತಿಯಿಂದಲೇ ಬದುಕಿದರು, ಬಾಳಿದರು ಮತ್ತು ಸ್ವಶಕ್ತಿಯಿಂದಲೇ ಸತ್ತರು. ನಮ್ಮ ಮನಸ್ಸಿನಲ್ಲಿ ನಮ್ಮ ಮುಂದಿನ ಜನಾಂಗದ ಹೃದಯಗಳಲ್ಲೂ ಎಂದೆಂದಿಗೂ ಮಾಸದ ಚಿತ್ರವನ್ನು ಬಿಟ್ಟು ಮಹಾತ್ಮರು ಮಾಯವಾದರು.

ಮಹಾತ್ಮರು ತಮ್ಮ ಬರಿಯ ಚಿತ್ರವನ್ನು ಬಿಡಲಿಲ್ಲ. ನಮ್ಮ ನಾಡಿನವರಗಳಲ್ಲೆಲ್ಲಾ ನಮ್ಮ ಎದೆ ತಲೆಯಲ್ಲೆಲ್ಲಾ ಒಂದು ಹೊಸ ಚೇತನ ಸ್ಫೂರ್ತಿಯನ್ನು ತುಂಬಿ ಹೋಗಿರುವರು. ಗಾಂಧಿ ಯುಗವು ಕಳೆದು ಹೋದರೂ ಗಾಂಧಿ ತತ್ವವು ಕಲೆತಲಾಂತರ ಮುಂದಿನ ಪೀಳಿಗೆಯಲ್ಲೂ ಸ್ಫೂರ್ತಿ ಶಕ್ತಿಯಾಗುಳಿವುದು.

ನಮ್ಮಲ್ಲಿ ಭಾವನಾಶಕ್ತಿ ಕರ್ತವ್ಯ ಕಮ್ಮಿಯಾಗುತ್ತಿದ್ದಾಗ ಬಾಪು ಅವತಾರ ಮಾಡಿ ಅದನ್ನು ಕ್ಷೀಣಿಸಗೊಡದಂತೆ ಬೆಳೆಯಿತೊಡಗಿಸಿದರು. ದುರ್ಬಲರಾಗುತ್ತಿದ್ದ ನಮ್ಮನ್ನು ಸಬಲರನ್ನಾಗಿ ಮಾಡಿದರು. ಬಾಪು ಕೊಟ್ಟ ಶಕ್ತಿ ನಮಗಾಗಿ ಮಾತ್ರವಲ್ಲ. ಭಾರತದ ಮುಂದಿನ ತಲೆಮಾರುಗಳ ಭವ್ಯಭವಿಷ್ಯವನ್ನು ರೂಪಿಸಿಕೊಡ ನಂತಹ ಅನುವರಿತಿಕ ಶಕ್ತಿಯನ್ನು ಬಾಪು ನಮಗೆ ಭಾರತಕ್ಕೆ ಭಾರತದ ಮುಂದಿನ ಮಕ್ಕಳಿಗೆ ದಾನ ಮಾಡಿದರು.

ಬಾಪು ಜಗತ್ತನ್ನು ಮುಗ್ಧಗೊಳಿಸುವಂತಹ ಸೇವೆ ತ್ಯಾಗವನ್ನು ಭಾರತಕ್ಕಾಗಿ ಜಗತ್ತಿಗಾಗಿ ಮಾಡಿ ಮಡಿದ. ಈಗ ಅವನ ಧ್ಯೇಯ ಅವನ ತತ್ವಗಳನ್ನು ಆಚರಿಸಿಕೊಂಡು ಬರುವ ಹೊಣೆ ನಮಗಿದೆ. ದಾವು ಹಿಂದೆ ಅನೇಕ ಸಾರಿ ಪ್ರತಿಜ್ಞೆ ಮಾಡಿರುವಂತೆ ಇಂದೂ ಪ್ರತಿಜ್ಞೆ ಬಾಪುವಿನ ಯೋಗ್ಯ ಅನುಯಾಯಿಗಳಾಗಿ ಅವರ ತತ್ವವನ್ನು ಆಚರಿಸೋಣ

....ಜವಾಹರಲಾಲ ನೆಹರು.

was often made up, and not by reasoning with his fellow men.

## FEARLESS BELIEVER

"He stood out head and shoulders above all his contemporaries as one who believed, and who fearlessly put his beliefs into practice. I know of no other man in our time or indeed in recent history, who so fully and convincingly demonstrated the powers of spirit over material things. In his religion he was Catholicist in outlook.

"A sincere Hindu, he did not seek to convert others to his religion, for he recognised the value of all true religions in the influence they could bring to bear on man's lives. But he expected others to live up to their own religious beliefs as he lived up to his.

"He stuck firmly to his own views as to the way in which Indian freedom should come, but he always tried his utmost to avoid all communal feeling and rivalries.

## PEACE MISSION

"It was in the supreme effort to heal the differences between the Hindu Mussulman and the Skih that he was engaged at the time of his death. It was the greatest task that had ever undertaken and in it he had already had a large measure of success. Almost alone he quelled the disturbances in Bengal which, but for the force of his character and teaching would undoubtedly have led to disasters as serious as those in the Punjab.

"His attitude to the British as individuals was always one of friendliness and even extended as far as that some what impersonal entity, the British people

"His personality was magnetically attractive, especially in those intimate personal talks to which he gave so much of his time. He was always ready — except on his days of silence — to counsel and advise in small things as well as great. He was truly a friend of everyone he met.

## FAITHFUL FRIEND

"I certainly always found him a good and faithful friend upon whose word I could rely. It was at times difficult for me to see things through his eyes and to follow his reasonings. But than I had the Western European background of thought, while he was steeped in the philosophy of India and the East. He took a strong view however of what he regarded as th unsympathetic, and wrong attitude c successive British Governments in thei policies, and he found it hard to reali after the war that there had been great change of out look in this countr though, I believe, that he waa final convinced of this after the visit of tl Cabinet Delegation to India in 1946.

"The fact that he resisted — his policy of non-cooperation —

# ಭಾರತದ ಬಾಪು

## ಹರಿಜನ ಪತ್ರಿಕೆಯಲ್ಲಿ

### ಪಂಡಿತ ಜವಾಹರರ ಲೇಖನ

ಬಾಪು ಏನು ಮುಟ್ಟಿದನೋ ಅದೆಲ್ಲಾ ಯೋಗ್ಯ ಹಾಗೂ ಪವಿತ್ರವಾಯಿತು. ಅವರೇನು ಮಾಡಿದರೋ ಅದರಿಂದ ಭಾರತಕ್ಕೆ ಫಲಿತ ಫಲಗಳು ತುಂಬಿ ಬಂದವು.

ಬಾಪುವಿನ ದೀರ್ಘ ಜೀವನದಲ್ಲಿ ಅವರ ಎಡೆಬಿಡದ ದುಡಿತದಲ್ಲಿ ಅವರ ರೋಮಾಂಚಕಾರಿ ಕ್ರಾಂತಿ ಪಥದಲ್ಲಿ ಅವರ ಸಾಹಸದ ಕಥೆಯಲ್ಲಿ ಎಲ್ಲಿಯೂ ಯಾವೆಡೆಯಲ್ಲೂ ಒಂದಾದರೂ ಕಪ್ಪು ಚುಕ್ಕೆಯಿಲ್ಲ.

ಮಹಾತ್ಮರ ದಿವ್ಯವಚನವನ್ನು ಕೇಳುತ್ತಿದ್ದರೆ, ಅವರ ಮುಖಾರವಿಂದವನ್ನು ನೋಡುತ್ತಿದ್ದರೆ, ಸಾಕು, ಮಾನವನು ತನ್ನನ್ನು ತಾನೆ ಮರೆತುಬಿಡುವನು. ಮಹಾತ್ಮರು ಕುಳಿತಡೆ ದೇವಾಲಯ, ಅವರು ನಡೆದ ಭೂಮಿ ಯಾಗ ಭೂಮಿ.

ಭಾರತದ ತಂದೆ ಗಾಂಧೀಜಿಯ ಮರಣದಿಂದ ವಿಹ್ವಲರಾದ ಅವರ ಉತ್ತರಾಧಿಕಾರಿ ಭಾರತದ ನಾಯಕಮಣಿ ಜವಾಹರರು, ಗಾಂಧೀಜಿಯವರೊಂದಿಗೆ ಇದ್ದ ಸಂಬಂಧ ಅವರು ಪ್ರಭಾವದ ಬಗ್ಗೆ ಫೆಬ್ರುವರಿ 15 ನೆ 'ಹರಿಜನ' ಪತ್ರಿಕೆಯಲ್ಲಿ 'ಬಾಪು' ಎಂಬ ಶಿರೋನಾಮೆಯಲ್ಲಿ ಅಗ್ರ ಲೇಖ ಬರೆದಿರುವರು. ಜವಾಹರರ ಪ್ರತಿಯೊಂದು ಮಾತು ವೇದನಾಮಯವಾಗಿದ್ದರೂ ಭಾವನಾ ಪೂರ್ಣವಾಗಿದೆ. ಮಹಾತ್ಮರ ವ್ಯಕ್ತಿತ್ವವೇನೆಂಬುದನ್ನು ಅವರ ಜೀವನಾಡಿಯಂತಿದ್ದ ನೆಹರುರವರಲ್ಲದೆ ಇನ್ನಾರು ಸರಿಯಾದ ಮಾತುಗಳಲ್ಲಿ, ಉಚಿತ ರೀತಿಯಲ್ಲಿ ಹೇಳಬಲ್ಲರು?

'ನಾನು ಬಾಪುವನ್ನು ಮೊದಲು ಬಾರಿ ನೋಡಿದುದು 1916 ರಲ್ಲಿ ಅಂದರೆ 32 ವರುಷಗಳ ಹಿಂದೆ. ಈ ಮೂವತ್ತೆರಡು ವರುಷಗಳಲ್ಲಿ ಒಂದು ಶತಮಾನದ ಬದಲಾವಣೆಗಳು ಭಾರತದಲ್ಲಿ ಆಗಿಹೋಗಿವೆ.

ನೆನಪುಗಳು ನೆತ್ತಿಗೇರಿದಾಗ ಸ್ವಾಭಾವಿಕವಾಗಿ ಮನುಷ್ಯನು ಹಿಂದಿನ ದಿನಗಳ ಚಿತ್ರವನ್ನು ಮನಸ್ಸಿಗೆ ಕರೆದುಕೊಳ್ಳುವನು. ಅಖಿಲ ಭಾರತದ ಇತಿಹಾಸದಲ್ಲಿ ಎಂತಹನವ್ಯೋಧ್ಯಾಯದ ಸೃಷ್ಟಿಯಾಗಿದೆ. ಈ ಭಾರತದ ಇತಿಹಾಸದ ನಾಟಕವು ತನ್ನೆಲ್ಲ ಏರು ಪೇರುಗಳನ್ನು ಸೋಲು ಗೆಲುವುಗಳನ್ನು ನುಂಗಿಕೊಂಡು ಎಂತಹ ಸೋಜಿಗದ ಆಟವನ್ನು ಆಡಿರುವುದು! ಈ ನಾಟಕದ ಮಹತ್ವ ಇದರ ವೈಶಿಷ್ಟ್ಯದಿಂದ ನಮ್ಮಂತಹವರು ಬೆಳಕಿಗೆ ಬಂದೆವು. ನಾವೀ ನಾಟಕದಲ್ಲಿ ಮಹತ್ವದ ಪಾತ್ರಧಾರಿಗಳಾಗದಿದ್ದರೂ, ಒಟ್ಟಿನಲ್ಲಿ ಪಾತ್ರವಹಿಸಿದ್ದೆವು ಎಂದು ಹೇಳಬಹುದು.

ಭಾರತದ ಈ ನವನಾಟಕದ ಅವಧಿಯಲ್ಲಿ ಜಗತ್ತಿನಲ್ಲಿ ಒಂದರಮೇಲೊಂದು ಜಾಗತಿಕ ಯುದ್ಧಗಳಾದವು. ಅನಿರೀಕ್ಷಿತ ಆಶ್ಚರ್ಯಕರ ಘಟನೆಗಳು ಅನೇಕ ನಡೆದುಹೋದವು. ಆದರೂ ಭಾರತದ ಘಟನೆಗಳು ಈ ವಿಲಕ್ಷಣ ಘಟನೆಗಳ ಗುಂಪಿಗೆ ಸೇರಿಲ್ಲ ಏಕೆಂದರೆ ಭಾರತದ ಹೋರಾಟ, ಭಾರತದ ರೀತಿನೀತಿಗಳ ಧೋರಣವು ಲೋಕಮಾನ್ಯರ ತತ್ವವನ್ನು ಅವಲಂಬಿಸಿದ್ದವು. ಬಾಪುವಿನ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳದೆ ಅಥವಾ ಬಾಪುವಿನ ಇರುವಿಕೆಯನ್ನು ತಿಳಿಯದೆಯೂ ಈಗ ಆಗಿ ಮುಗಿದಿರುವ ಭಾರತದ ಘಟನೆಗಳನ್ನು ತೂಗಿ ನೋಡಿದರೆ ಇವು ಹೇಗೆ ನಡೆದವು. ಇದೆಲ್ಲಾ ಏಕೆ ನಡೆದವು ಎಂಬ ವಿಚಾರವಶನಾಗಿ ದಿಗ್ಭ್ರಮೆಹೊಂದುವನು. ನಮಗೆ ಒಂದೊಂದು ಸಾರಿ ಸಾಮಾನ್ಯ ರೀತಿಯಲ್ಲಿ ಯೋಚಿಸುವುದಾದರೆ, ನಾವೇಕೆ ಹೀಗೆಮಾಡಿದೆವು. ಎಂಬುದರ ಅರ್ಥ ನಮಗಾಗುತ್ತಿಲ್ಲ.

ಈ ಅವಧಿಯಲ್ಲಿ ಇಂಡಿಯಾದ ಅತ್ಯಾಶ್ಚರ್ಯಕರ ಘಟನೆಯೆಂದರೆ, ಇಡೀ ಭಾರತಕ್ಕೆ ಭಾರತವೇ ಒಂದೇ ತತ್ವದಮೇಲೆ ನಿಂತು ಕಾರ್ಯಾಚರಣೆಮಾಡಿತು ಅದು ಸ್ವಲ್ಪ ದಿನವಲ್ಲ. ಬಹುದಿನಗಳ ಕಾಲ. ಇದು ನಿಜವಾಗಿಯೂ ಅಪೂರ್ವಘಟನೆ. ಇಂತಹ ದಾರಿಯಲ್ಲಿ ನಮ್ಮನ್ನು ತರಬೇತುಮಾಡಿದ ಮಹಾ ವ್ಯಕ್ತಿಯೊಂದನ್ನು ಅರ್ಥಮಾಡಿಕೊಳ್ಳದೆ ನಾವು ಘಟನೆಗಳನ್ನು ಅರ್ಥಮಾಡಿಕೊಳ್ಳುವಂತಿಲ್ಲ. ಇಂಡಿಯಾದ ಅರ್ಧಶತಮಾನದ ಇತಿಹಾಸದಲ್ಲಿ ಬಾಪು ಇತಿಹಾಸದ ಉದ್ದಕ್ಕೂ ಅಗಲಕ್ಕೂ ವ್ಯಾಪಿಸಿ ನಿಂತಿರುವನು. ನಾವು ಬಾಪುವಿನ ಅಗಲಿಕೆ

ಯಿಂದ ತಬ್ಬಲಿಗಳಂತೆ ದುಃಖಿಸುತ್ತಿರುವೆವು. ಅವರ ಅದ್ಭುತ ಜೀವನದ ಕಡೆಗೆ ತಿರುತಿರುಗಿ ನೋಡುತ್ತಾ ರೋದಿಸುತ್ತಿರುವೆವು. ನಮಗೇನು ಕಾಣಿಸುತ್ತಿರುವುದು? ಬದುಕಿನಲ್ಲಿ ಇಂತಹ ಸಾರ್ಥಕತೆಯನ್ನು ಗಳಿಸಿಕೊಂಡಂತಹ ಮಹಾಪುರುಷರು ಇತಿಹಾಸದಲ್ಲಿ ಕೇವಲ ಕೆಲವರಿರುವರು.

ಬಾಪು ನಮ್ಮ ಸೋಲಿಗಾಗಿ, ಅನೇಕ ಬಾರಿ ಸಂಕಟಪಟ್ಟಿರುವರು. ಭಾರತವು ಇನ್ನು ಉನ್ನತ ಸ್ಥಾನಕ್ಕೇರದಿರುವುದಕ್ಕಾಗಿ ಅವರು ತುಂಬಾ ಅಸಂತೋಷರಾಗಿದ್ದರು. ಈ ಸಂಕಟ, ಅತೃಪ್ತಿ ನಮಗರ್ಥವಾಗುತ್ತಿದೆ ನಿಜ ಆದರೂ ಅವರ ಜೀವಿತ ಅಪಜಯದ ಜೀವಿತವೆಂದು ಹೇಳಲು ಯಾರಿಗೆ ಧೈರ್ಯವಿದೆ?

ಬಾಪು ತಾನು ಮುಟ್ಟಿದ್ದನ್ನೆಲ್ಲಾ ಯೋಗ್ಯವಸ್ತುವನ್ನಾಗಿ ಮಾಡಿದನು. ಅಷ್ಟೇ ಅಲ್ಲ ಪವಿತ್ರವನ್ನಾಗಿಯೂ ಮಾಡಿದನು. ಅವನೇನು ಮಾಡಿದರೂ ಅದರಿಂದ ಫಲಿತ ಫಲಗಳು ಭಾರತಕ್ಕೆ ತುಂಬಿ ಬಂದವು. ಕೆಲವು ಮಾತ್ರ ಅವನು ನಿರೀಕ್ಷಿಸಿದಷ್ಟು ಫಲ ಮಾತ್ರ ಭಾರತಕ್ಕೆ ಬಹು ಪವಿತ್ರವಾದವು.

"ಕರ್ಮ ಮಾಡಲು ಮಾತ್ರ ನಿನಗೆ ಅಧಿಕಾರ, ಫಲ ಕೇಳುವ ಅಧಿಕಾರ ನಿನಗಿಲ್ಲ. ಎಂಬ ಗೀತಾವಾಣಿಯಂತೆ, ಮಹಾತ್ಮರು ನಿಷ್ಕಾಮಿಗಳಾಗಿ ದುಡಿದರು, ಸೇವೆ ಮಾಡಿದರು, ತ್ಯಾಗಮಾಡಿದರು. ಅಂತಹ ನಿಷ್ಕಾಮ ಕರ್ಮದಿಂದಲೇ ಇಂತಹ ಪವಿತ್ರ ಫಲಗಳು ಮೂಡಿದವು.

ಅವರ ದೀರ್ಘ ಜೀವನದಲ್ಲಿ, ಅವರ ಎಡೆಬಿಡದ ದುಡಿತದ ಜೀವನದಲ್ಲಿ ಅವರ ರೋಮಾಂಚಕಾರಿ ಕ್ರಾಂತಿ ಪಥದಲ್ಲಿ ಅವರ ಸಾಹಸದ ಕತೆಯಲ್ಲಿ ಎಲ್ಲಿಯೂ ಯಾವೆಡೆಯಲ್ಲೂ ಒಂದಾದರೂ ಟೀಕಿಸುವಂತಹ ಘಟನೆಗಳೇ ಇಲ್ಲ

ಅವರು ಮಾಡಿದ ಪ್ರತಿಯೊಂದರ ಕಾರ್ಯವೂ ಶಾಶ್ವತ ನೀತಿಯ ಸ್ಮಾರಕದಂತಾಗಿದೆ. ಅವರ ಒಂದೊಂದು ಮಾತು ಅವರ ಒಂದೊಂದು ಭಾವವೂ ನಮ್ಮ ಜೀವನವನ್ನು ತಿದ್ದಿದವು. ಮಹಾತ್ಮರು ಪರಿಪೂರ್ಣ ಬದುಕಿದ ಕಲೆಯನ್ನು ಕಲಿತ ಕಲಾವಿದ. ಆದರೂ ಅವನ ಬದುಕಿನ ಅವನ ಜೀವಿತದ ರೀತಿಯು ಪ್ರಾಪಂಚಿಕ ಜೀವಿತದಿಂದ ಅನ್ಯವಿತ್ತು. ಸತ್ಯ, ಮತ್ತು ಸದ್ವರ್ತನೆ ಇವುಗಳ ಮಾನವ ನಿಜ ಜೀವಿತದ ಕಲೆಯನ್ನು ಕಲಿಸಿಕೊಡುವುದೆಂಬುದನ್ನು ಬಾಪು ನಮಗೆ ತೋರಿಸಿಕೊಟ್ಟನು.

ಬಾಪು ವೃದ್ಧನಾದರೂ, ಅವನ ದೇಹವು ಪ್ರಭಾವಶಾಲಿಯಾದ ಆತ್ಮ ಶಕ್ತಿಯನ್ನು ಹೊರಲಾರದೆ ಹೊರುತ್ತಿರುವ ಒಂದು ವಾಹನದಂತೆ ಕಂಡಿತು. ಮಹಾತ್ಮರ ದಿವ್ಯ ವಚನಗಳನ್ನು ಕೇಳುತ್ತಿದ್ದರೆ, ಅಥವಾ ಮಹಾತ್ಮರ ಮುಖವನ್ನು ಆರು ನೋಡುತ್ತಿದ್ದರೆ ಸಾಕು. ಮಾನವನು ತನ್ನ ದೇಹದ ಮೇಲಿನ ಸ್ಫೂರ್ತಿಯನ್ನು ಕಳೆದುಕೊಳ್ಳುವನು ಮಹಾತ್ಮರು ಕುಳಿತಲ್ಲಿಯೇ ದೇವಾಲಯವಾಯಿತು, ಅವರು ನಡೆದ ಭೂಮಿಯೆಲ್ಲಾ ಯಾಗಭೂಮಿಯಾಯಿತು.

ಬಾಪುವಿನ ಸಾವಿನಲ್ಲೂ ಅದೊಂದು ಅದ್ಭುತವಿದೆ. ಪರಿಪೂರ್ಣ ಪಡೆಯುವ ಮಾನವದ ಜೀವಿತ ಉನ್ನತಿಯ ಪರಮಾವಧಿಯನ್ನು ಮಹಾತ್ಮರ ಬದುಕು ಕಂಡಿದ್ದಿತು. ಮಾನವ ಜೀವಿತವೆಂತಿರಬೇಕು, ಎಂಬ ಬಗ್ಗೆ ಮಹಾತ್ಮರ ಜೀವನ ಒಂದು ಉನ್ನತ ನೀತಿಯನ್ನು ಬೋಧಿಸುವಂತಿತ್ತು. ಪ್ರಾರ್ಥನಾ ಸಮಯದಲ್ಲಿ ಪ್ರಾರ್ಥನೆ ಮಾಡುತ್ತಲೇ ಬಾಪು ಧರ್ಮವೀರನಾಗಿ ಸತ್ತನು. ಯಾವ ಐಕ್ಯಕ್ಕಾಗಿ ತನ್ನ ಜೀವಿತವೆಲ್ಲಾ ಅದ್ಭುತ ತ್ಯಾಗ, ಸೇವೆಮಾಡಿದರೋ ಆ ತತ್ವಕ್ಕೇ ಮಹಾತ್ಮರು ಜೀವತೆತ್ತರು.

ರೋಗಗಳಿಲ್ಲದ, ನರಳುವಿಕೆಯಿಂದ ನಶಿಸದೆ ಎಲ್ಲರೂ ಬಯಸುವ ಸಾವನ್ನು ಮಹಾತ್ಮರು ಹೊಂದಿದರು. ಕಣ್ಣು ಮುಚ್ಚಿ ತೆರೆಯುವದರೊಳಗಾಗಿ ಮಹಾತ್ಮರ ಮರಣವಾಯಿತು. ಅವರಿಗೆ ವೃದ್ಧಾಪ್ಯದ ಆರುಳು ಮರಳು ಬರಲಿಲ್ಲ ದೇಹವು ಕಂದಲಿಲ್ಲ. ಕುಂದಲಿಲ್ಲ ರೋಗರುಜಿನಗಳಿಂದ ನರಳಲಿಲ್ಲ. ಆದರೂ ನಾವೇಕೆ ಅವರ ಸಾವಿಗಾಗಿ ಸಂಕಟ ಪಡಬೇಕು, ಅವರನ್ನು ನೆನಸಿಕೊಂಡರೆ ಸಂಕಟ ತಾನಾಗಿಯೇ ಉಕ್ಕಿ ಬರುವುದು. ಯಾವನ ಪಾದಗಳು ಬೆಳಕಿನ ಹಾದಿಯಲ್ಲಿ ಕರೆದೊಯ್ಯುತ್ತಿದ್ದವೋ ಯಾವನ ಮುಗುಳು ನಗೆಯು ಸಕಲ ಜೀವಿಗಳನ್ನು ಆಕರ್ಷಿಸುತ್ತಿದ್ದಿತೋ ಯಾವನ ದೃಷ್ಟಿಯಲ್ಲೂ ನಗುವಿನ ನೆಲೆಯಿದ್ದಿತೋ ಆ ಚಿತ್ರಗಳನ್ನು ನೆನಸಿಕೊಂಡರೆ ದುಃಖ ಬರದೆ?

British - controlled Indian Government was a natural and, I would say, proper reaction of a keen Indian nationalist bent upon winning the freedom of his people by non-violent means. I feel fairly certain that any of us who had encountered similar circumstances in our own country would have taken ction of the same kind had we had his spiritual force and his political determination.

"He stands out as a great example of spiritual strength which should help to guide us as well as his own people in the difficult years that lie ahead. His passage from us is a loss to all the world, for where can we find to day the leaders who are able to emphasise by their own life and actions the overpowering force of love in solving our diffficulties. And yet that as the doctrine which Christ taught us and which we as Christians profess.

### LESSON TO LEARN

"May not the whole world learn from his life something of fundamental value That it is idle to try and save ourseleves from destructon by the use of force and that our greatest weapon of salvation is the supreme and redeeming power of love.

" It is our earnest prayer that, in his own country, example of patience tolerance and love of his fellow men may live on to bring their peoples through the troubulous times which now beset them, into that fair and happy future which was ever his wish, and for which he so steadfastly worked and sacrificed throughout his life,

## ಜಿಲ್ಲಾ ಮುನ್ಸೀಫರ ಕೋರ್ಟು ಹೊಸಪೇಟೆಯಲ್ಲಿ

S. C. No. 454/47.

ಮೆಟ್ರಿ ಸಿದ್ದಪ್ಪ ಅಂಡ್ ಸನ್ಸ್ ಬೈ ಪಾರ್ಟನರ್ ಮೆಟ್ರಿ ಭೀಮಪ್ಪ } ವಾದಿ,

Vs,

1) ಕುಂಬಾರ ನೀಲಮ್ಮ<br>
2) ಕುಂಬಾರ ಲಿಂಗಪ್ಪ } ಪ್ರತಿವಾದಿಗಳು,

ಎರಡನೆಯ ಪ್ರತಿವಾದಿಯಾದ ಕುಂಬಾರ ಲಿಂಗಪ್ಪನಿಗೆ ತಿಳಿಯಪಡಿಸುವದೇನಂದರೆ

ಮೇಲಿನ ನಂಬರಿನಲ್ಲಿ ವಾದಿ ನಿನ್ನ ಮೇಲೆ ರೂ. 209—6—6 ಗಳಿಗೆ ದಾವಾ ಮಾಡಿರುತ್ತಾನೆ. ಅದಕ್ಕೆ ತಕರಾರು ಇದ್ದಲ್ಲಿ ಈ ಕೋರ್ಟಿಗೆ 2 3-1948 ಕ್ಕೆ ಹಾಜರಾಗಿ ತಕರಾರು ತಿಳಿಯಪಡಿಸತಕ್ಕದ್ದು. ತಪ್ಪಿದಲ್ಲಿ ಯಕ್ಸಪಾರ್ಟಿ ಮಾಡಿ ತೀರ್ಮಾನಿಸಲ್ಪಡುತ್ತದೆ.

ಹೊಸಪೇಟೆ 29 2-48 | ರಂಗನಾಥಾಚಾರು, ವಾದಿ ವಕೀಲರು.

## ಜಿಲ್ಲಾಬೋರ್ಡ ನದಿ ಟೋಳ್ಯಾಗಳ ಯಾಲಂ

ಜಿಲ್ಲಾ ಬೋರ್ಡಿನವರು ನದಿ ಟೋಳ್ಯಾಗಳ ಯಾಲಂ ಮಾಡಬೇಕಾದರೆ ಅದನ್ನು ಹಿಡಿಯುವವರ ಆಸ್ತಿ ಪಟ್ಟಿಯನ್ನು ಕೇಳುತ್ತಾರೆ. ಇದು ಸರಿಯಾದುದಲ್ಲ. ಸರಕಾರದ ರೂಲೇ ಹೀಗಿದ್ದರೆ ಇದನ್ನು ಬದಲಾಯಿಸಲಿಕ್ಕೇಬೇಕು. ಯಾಲಂ ಮೊತ್ತ ಎಷ್ಟಿರುತ್ತದೋ ಅದನ್ನು ಪೂರಾ ಕಟ್ಟಿದಮೇಲೆ ಯಾಲಂದಾರನ ಆಸ್ತಿಯ ಪಟ್ಟಿ ಏತಕ್ಕೆ ಬೇಕು? ಮನುಷ್ಯನ ಯೋಗ್ಯತೆಯು ಬರೀ ಆಸ್ತಿಯನ್ನೇ ಅವಲಂಬಿಸಿಲ್ಲ. ಈ ಕಾರಣ ಸರ್ಕಾರದವರು ಈ ವಿಷಯದಲ್ಲಿ ತಕ್ಕ ಬದಲಾವಣೆಮಾಡಬೇಕೆಂದು ಕೋರುತ್ತೇನೆ.

ದೇಶನೂರು ರಾಮರೆಡ್ಡಿ.

# The Rayalaseema Bank Ltd., H. O. Bellary.

—)0(—

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ— ಬಳ್ಳಾರಿ.

—]0[—

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ
ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.

ಶಾಖೆಗಳು | ಮದ್ರಾಸು : ೩೦೧ ಲಿಂಗಶೆಟ್ಟಿ ಬೀದಿ
| ಬೆಂಗಳೂರು : ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ,
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,**
**ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.**

**ಬಿ. ವಿ. ಶೇಷಗಿರಿರಾವ್, ಬಿ. ಕಾಂ.,**
**ಕಾರ್ಯದರ್ಶಿ.**

# The Rayalaseema Confectionery Works, Bellary.

## ದಿ ರಾಯಲಸೀಮ ಕನ್ಫೆಕ್ಷನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | |
|---|---|
| First Quality .... .... | Rs. 32-0-0 |
| Second .... .... | Rs. 28 0 0 |
| Without essence .... | Rs. 26-0-0 |

Per Tin of 28 lbs Ex. Factory,
Sales Tax Extra.

None to beat us in quality. Try and be convinced - Encourage the industries of these most backward tracts.

**ಇಳಿಸಿದ ಬೆಲೆ** **ಪೆಪ್ಪರಮಿಂಟು**

| | |
|---|---|
| ಪ್ರಥಮ ವರ್ಗದ್ದು .... | ರೂ 32—0—0 |
| ದ್ವಿತೀಯ ,, .... | 28—0—0 |
| ಎಸೆನ್ಸ್ ಇಲ್ಲದ್ದು .... | 26—0—0 |

28 ಪೌಂಡಿನ ಟಿನ್ನಿನ ಫ್ಯಾಕ್ಟರಿ ಹೊರಗಿನ ಬೆಲೆ ಸೇಲ್ಸ್‌ಟ್ಯಾಕ್ಸ್ ಬೇರೆ. ಗುಣದಲ್ಲಿ ತಯಾರಿಕೆಯಲ್ಲಿ ನಾವು ಯಾರಿಗೂ ಕಡಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಯಾವಾಗಲೂ ನಮ್ಮಲ್ಲೇ ಬರುವಿರಿ. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ.

3ನೇ ಪುಟದಿಂದ ಬಂದದ್ದು

ನಡೆದಿವೆ. ಈ ಸಂಪು ಮುಷ್ಕರಗಳ ಆಂದೋಲನದ ಪರಿಣಾಮವಾಗಿ ಫ್ರೆಂಚ ಸರಕಾರಕ್ಕೆ 180 ಕೋಟಿ ಡಾಲರಗಳಷ್ಟು ಹಾನಿ ಸಂಭವಿಸಿದೆ.

ಫ್ರಾನ್ಸು ಮತ್ತು ಇಟಲಿಗಳಲ್ಲಿ ಈ ಕಮ್ಯೂನಿಷ್ಟ ಚಳವಳಿಯಿಂದಾಗಿ ಸಂಭವಿಸಿದ ಹಾನಿಯ ವಿವರವನ್ನು ವಿವರವಿವರವಾಗಿ ತಿಳಿಯಲು ಇನ್ನೂ ಸಾಧ್ಯವಿರದಿದ್ದರೂ, ಸುಮಾರಾಗಿ ಆದ ಹಾನಿಯೇ ಎದೆ ಒಡೆಸುವಂತಿದೆಯೆಂದು ಹೇಳಬಹುದು. ಇದಲ್ಲದೆಯೇ ಯುರೋಪದ ತುಂಬೆಲ್ಲ ಪೆಟ್ರೋಲು, ಕಲ್ಲಿದ್ದಲು, ಮೊದಲಾದ ಆವಶ್ಯಕ ಪದಾರ್ಥಗಳ ಉತ್ಪತ್ತಿಯೂ ದಿನೇ ದಿನೇ ಕಡಿಮೆಯಾಗುತ್ತ ನಡೆದಿರುವುದನ್ನು ನೋಡಿದರೆ, ಪರಿಣಾಮವು ಬಹಳ ನಿರಾಶಾದಾಯಕವಾಗಿವೆಯೆಂದು ಎನಿಸದೆ ಇರದು.

ನಿರ್ಯಾತ-ವ್ಯಾಪಾರದಲ್ಲಿ ಇಳಿತ, ಬೆಲೆಯ ಏರಿಕೆ, ಇವುಗಳಿಂದ ಉದ್ಭವಿಸಿದ ಅಸಾಮಾನ್ಯ ಆರ್ಥಿಕ ತೊಂದರೆ ಇವುಗಳಿಂದ ಕಂಗೆಟ್ಟು ಹತಾಶರಾದ ಜನತೆಯನ್ನು ಹಿಡಿತದಲ್ಲಿಡಲು ಅಲ್ಲಿಯ ಸರಕಾರಗಳು ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದರೂ, ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲು ದಿನದಿನಕ್ಕೂ ಅಸಾಧ್ಯವಾಗುತ್ತ ನಡೆದಂತೆ ಕಂಡುಬರುತ್ತದೆ.

ಇಟಲಿಯಲ್ಲಿಯೂ ಇದೇ ಪ್ರಕಾರವಾದ ಗಂಭೀರ ಪರಿಸ್ಥಿತಿಯಿದ್ದು, ಸರಕಾರವು ಪುನರ್ರಚನಾ ಕಾರ್ಯದಲ್ಲಿ ಯಶಸ್ವಿಯಾಗುತ್ತ ನಡೆದಿದೆಯಾದರೂ ಬಹುಶಃ ಮಾರ್ಚ ತಿಂಗಳಲ್ಲಿ ಸರಕಾರದ ವಿರುದ್ಧ ಬಂಡು ಏಳುವ ಸಂಭವವೂ ಕಂಡುಬರುತ್ತದೆ.

ಈ ಎಲ್ಲ ಪರಿಸ್ಥಿತಿಯ ಪರಿಣಾಮವಾಗಿ ಅಮೇರಿಕೆಯು ಯುರೋಪದ ಪುನರ್ರಚನೆಗಾಗಿ ಕೊಡಲಿರುವ ಸಹಾಯದ ನೆರವನ್ನು ನೀಡುವ ಕಾಲದಲ್ಲಿ ಪ್ರಬಲವಾದ ಗಂಡಾಂತರವು ಕಂಡುಬರುವದಲ್ಲದೆ, ನೆರವು ನೀಡುವುದೆಂದರೆ ಕಮ್ಯುನಿಸ್ಟರ ವಿರೋಧವನ್ನು ಕಟ್ಟಿಕೊಂಡಂತೆ ಎಂದು ಎನಿಸತೊಡಗಿದೆ. ಹೀಗಾಗಿ, ಏನಾದರೊಂದು ಹೊಸತಾದ ಯೋಜನೆಯೂ ಹೊರಬೀಳುವ ಸಂಭವವಿರುವದು. ಪ್ರೆಸಿಡೆಂಟ ಟ್ರೂಮನ್ನರು ಅಮೇರಿಕನ್ನ ಕಾಂಗ್ರೆಸ್ಸನ್ನು ಶೀಘ್ರವಾಗಿ ಪಶ್ಚಿಮ ಯುರೋಪದ ತೆರವನ್ನು ತುಂಬಲಿಕ್ಕೆ ಕೇಳಿಕೊಳ್ಳಬಹುದೆಂದು ಆಶಿಸಲಾಗಿದೆ

ಕೊನೆಗೆ ಕಮ್ಯೂನಿಸ್ಟರು ತಮ್ಮ ಸರ್ವ ಪ್ರಯತ್ನಗಳೂ ಈ ಮಾರ್ಶಲ ಯೋಜನೆಯ ಪ್ರತಿಭಟನೆಯಲ್ಲಿ ನಿಷ್ಫಲವಾದುದನ್ನು ಕಾಣಬಹುದು. ಈಗಾಗಲೇ ಲಕ್ಷಗಟ್ಟಲೆ ಹಿಂಬಾಲಿಗರನ್ನು ಅವರು ಕಳೆದುಕೊಳ್ಳುತ್ತಲಿದ್ದಾರೆ ಕಮ್ಯೂನಿಸ್ಟರ ಆಂದೋಲನವೆಲ್ಲ ಕಮ್ಯೂನಿಸಂ ಪ್ರಚಾರಕ್ಕೂ, ಮಾಸ್ಕೋದ ಉತ್ಕರ್ಷಕ್ಕೂ ಮಾತ್ರ ಬೆಂಬಲವಾಗುವಂತೆ ಈ ರೀತಿ ಸಂಪು ಮುಷ್ಕರಗಳನ್ನು ಹೂಡಲಾಗುತ್ತಿದೆಯೆಂದು ಜನತೆಯ ಅಭಿಪ್ರಾಯವಾಗುತ್ತ ನಡೆದಿದೆ

ಏನೇ ಇದ್ದರೂ ಪರಿಣಾಮ ಮಾತ್ರ ಅಮೇರಿಕೆಯ, ಈ ಯುರೋಪಕ್ಕೆ ನೆರವಾಗುವ ಯೋಜನೆಯನ್ನು ಹೆಚ್ಚು ಬಿಕ್ಕಟ್ಟಿನದಾಗಿಯೂ ತುಟ್ಟಿಯದಾಗಿಯೂ ಮಾಡುವದರಲ್ಲಿ ಸಂದೇಹವಿಲ್ಲ ಹೀಗೆ ಈ ಕೂಲಿಕಾರ ಸಾಹುಕಾರ ತಿಕ್ಕಾಟದಿಂದ ಮುಂದೆ ಯುರೋಪದಲ್ಲಿ ಏನಾಗುವುದೋ ನೋಡಬೇಕಾಗಿದೆ.

## ಶಾಲೆಗಳಮೇಲೆ ಪತಾಕೆ

ವಿದ್ಯಾಸಂಸ್ಥೆಗಳಮೇಲೆ ಭಾರತರಾಷ್ಟ್ರೀಯ ಪತಾಕೆಯಲ್ಲದೆ ಮತ್ತಾವ ಪತಾಕೆಗಳನ್ನು ಹಾರಿಸಬಾರದೆಂದು ಮದ್ರಾಸ್ ಸರ್ಕಾರದವರು ಆಜ್ಞೆಮಾಡಿದ್ದಾರೆ

## ಹೈದರಾಬಾದು

ಇಲ್ಲಿ ಮಂತ್ರಿಗಳಾಗಿದ್ದ ಶ್ರೀ ಜೆ ರಾಮಾಚಾರ್ಯರು ರಾಜೀನಾಮೆ ಕೊಟ್ಟು ಒಂದು ಹೇಳಿಕೆಯಲ್ಲಿ ಇತ್ತೆಹಾದ ಸ್ವಯಂಸೇವಕರು ಪೋಲೀಸ್ ಮತ್ತು ಮಿಲಿಟರಿಯವರೊಡನೆ ಕಲೆತು ಹಳ್ಳಿಗಳನ್ನು ಸುಡುವ ಮತ್ತು ಇತರ ಅತ್ಯಾಚಾರಗಳನ್ನು ನಡೆಸುವ ಕಾರ್ಯದಲ್ಲಿ ತೊಡಗಿದ್ದಾರೆಂದು ಹೇಳಿರುವರು

ಹೈದರಾಬಾದ್ ಭಾರತದ ಶಾಶ್ವತ ಸಂಬಂಧವನ್ನು ಚರ್ಚಿಸಲು ಸರ್ ವಾಲ್ಟರ್ ಮಾಂಕ್ಟನ್ ರವರ ನೇತೃತ್ವದಲ್ಲಿ ಒಂದು ಶಿಷ್ಟಮಂಡಲವು ಡೆಲ್ಲಿಗೆ ಹೋಗಿದೆ.

## ೨ನೇ ವಾರ ★ ೨ನೇ ವಾರ

ಪ್ರಭಾತ
ಶಿನೆಮಾದಲ್ಲಿ

ಮಹಾತ್ಮ

# ಕಬೀರ್

ಅಪೂರ್ವ
ಅಮೋಘ ಭಕ್ತಿರಸ
ಚಿತ್ರ


# NAVA BHARAT BELLARY.

Reg No. M. 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | | Subscription Rates |
|---|---|---|
| ವರ್ಷಕ್ಕೆ | 5—0—0 | One Year 5—0—0 |
| 6 ತಿಂಗಳಿಗೆ | 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | | Subscription will not be accepted for less than 6 months. |


To
Sri.............................................
.............................................
.............................................


Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್

164

# ನವ ಭಾರತ

— ಬಳ್ಳಾರಿ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

೧೧ / ೬ | ಬಳ್ಳಾರಿ ಮಾರ್ಚ್ ೮ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## ಅಕ್ಕಿಯನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಳ್ಳಿರಿ.

ಮದ್ರಾಸ್ ಅಸೆಂಬ್ಲಿಯ ಉಪಾಧ್ಯಕ್ಷರಾದ ಶ್ರೀಮತಿ ...ಕೃಷ್ಣರಾಜಾರವರು ಒಬ್ಬ ಮಂತ್ರಿಯ ಬಳಿ ಹೋಗಿ ...ಬ್ಳಾರಿನಿಂದ ಅಕ್ಕಿ ತರಿಸಬೇಕಾಗಿದೆ. ಇದಕ್ಕೇನು ಮಾಡ...ು ತಿಳಿಸಿರಿ" ಎಂದು ಸಲಹೆ ಕೇಳಿದರು. ಅದಕ್ಕೆ ಮಂತ್ರಿ "ಬ್ಲಾಕ್ ಮಾರ್ಕೇಟದಲ್ಲಿ ಬೇಕಾದಷ್ಟು ಅಕ್ಕಿ ದೊರೆಯುವ... ನಿಮಗೆ ಬೇಕಾದಷ್ಟನ್ನು ಅಲ್ಲೇಕೆ ಕೊಳ್ಳಬಾರದು?" ...ರು. ಈ ಸಲಹೆಯನ್ನು ಕೇಳಿ ನನಗೆ ಸಿಡಿಲು ಹೊಡೆದಂ...ತು ಎಂದು ಅಮ್ಮ ರಾಜಾರವರು ಅಂದರು.

ನಮಗೇನೂ ಇದರಿಂದ ಸಿಡಿಲು ಹೊಡೆದಂತಾಗಲಿಲ್ಲ. ...ತ್ರಿಗಳು ಇಂಥಾ ಸೂಚನೆ ಕೊಟ್ಟದ್ದರಲ್ಲಿ ಮಂತ್ರಿಗಳು ...ಪ್ರತಿನಿಧಿಗಳಾಗಿ ತಮ್ಮ ಕಾರ್ಯವನ್ನು ನೆರವೇರಿಸುತ್ತಿಲ್ಲ ...ನಮ್ಮ ಅಭಿಪ್ರಾಯಕ್ಕೆ ಪುಷ್ಟಿಯು ದೊರೆಯುತ್ತದೆ. ಇಂಥಾ ಆಪಾದನೆಯನ್ನು ಕೇಳಿದ ಶಾಸನಸಭ್ಯರು ಇದ...ಷೇಧವನ್ನೂ ಸೂಚಿಸಲಿಲ್ಲ. ಸಂಬಂಧಿಸಿದ ಮಂತ್ರಿಯ...ನ್ನು ಬಹಿರಂಗ ಪಡಿಸಲು ಕೇಳಲೂ ಇಲ್ಲ. ಇದು ಮಾತ್ರ ...ರ್ಯದ ಸಂಗತಿಯಾಗಿದೆ.

ಪ್ರಾಂತದ ಒಳ್ಳೆಯ ಹೆಸರನ್ನುಳಿಸುವ ದೃಷ್ಟಿಯಿಂದ ಈ ...ಚನೆಯು ನಿಜವಲ್ಲವೆಂದು ಸಂಬಂಧಿಸಿದ ಮಂತ್ರಿಯು ...ಕೆ ಕೊಡಬೇಕು. ಇಲ್ಲವೇ ರಾಜೀನಾಮೆ ಕೊಡಬೇಕು ... ಮಾರ್ಕೆಟ್‌ಗೆ ತನ್ನ ಸಮ್ಮತಿಯನ್ನು ಸೂಚಿಸುವ ...ವರ್ಗದಲ್ಲಿ ಸ್ಥಾನವಿರಬಾರದು (ಸಂಡೇ ಟೈಮ್ಸ್)

## ಕರ್ನಾಟಕ ಏಕೀಕರಣ ಶೀಘ್ರದಲ್ಲಾಗುವುದು

ಕರ್ನಾಟಕ ಏಕೀಕರಣವು ಕೈಗೂಡಿ ಕರ್ನಾಟಕ ಪ್ರಾಂತವು ಶೀಘ್ರದಲ್ಲಿಯೇ ನಿರ್ಮಾಣವಾಗಲಿರುವದೆಂಬ ಹಿರಿಯಾಶೆಯನ್ನು ನವದೆಹಲಿಯಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ವ್ಯಕ್ತಪಡಿಸಿರುವದರಿಂದ ಕನ್ನಡನಾಡಿನಲ್ಲಿ ಅಮಿತವಾದ ಸಂತೋಷವಾಗಿದೆ.

## ಗಾಂಧಿ ಸೂತ್ರಗಳು

ಪ್ರೊಫೆಸರ್ ಡಿ ಎಸ್. ಶರ್ಮರವರು 108 ಸೂತ್ರಗಳನ್ನು ಸಂಸ್ಕೃತದಲ್ಲಿ ಬರೆದು ಅವುಗಳಲ್ಲಿ ಮಹಾತ್ಮ ಗಾಂಧಿಯವರ ಸಮಸ್ತ ಸೂತ್ರಗಳೂ ಅಡಗಿರುವಂತೆ ರಚಿಸಿ ಇಂಗ್ಲೀಷ್ ಭಾಷೆಯಲ್ಲಿ ಟೀಕೆಯನ್ನು ಬರೆದಿದ್ದಾರೆ. ಅದನ್ನು ಕಂಠಸ್ಥಮಾಡುವ ಬಾಲಬಾಲೆಯರು ಗಾಂಧೀಜಿ ತತ್ವಗಳನ್ನೆಲ್ಲಾ ಸಂಕ್ಷಿಪ್ತವಾಗಿ ಹೇಳಲನುಕೂಲವಾಗುತ್ತದೆ.

## ಭಾರತ ಹೈದರಾಬಾದು

ಶಾಶ್ವತ ಸಂಧಾನಕ್ಕಾಗಿ ಮೂರನೆಯ ಸಲ ಹೋರಾಟ ಭಾರತ ಶಿಷ್ಟಮಂಡಳದಲ್ಲಿದ್ದ ಮುಖ್ಯ ಮಂತ್ರಿ ಲಾಯಕಾಲಿಯವರು ಕರಾಚಿಗೆ ಹೋಗಿ ಜಿನ್ನಾರವರೊಡನೆ ವಿಚಾರ ವಿನಿಮಯ ಮಾಡಿ ಬಂದರು.

... ಹೈದರಾಬಾದಿನ 125 ಸಿಕಂದರಾಬಾದಿನ 19 ವಕೀಲರು ಕೋರ್ಟುಗಳಿಗೆ ರಾಜೀನಾಮೆ ಕೊಟ್ಟಿರುತ್ತಾರೆ. ದೇಶದಲ್ಲಿ ಶಾಂತಿಯು ತಲೆದೋರುವವರೆಗೂ ಅವರು ಉದ್ಯೋಗಗಳಿಗೆ ಹಿಂದಿರುಗುವಂತಿಲ್ಲ.

## ಉರವಕೊಂಡ ಜಗದ್ಗುರುಗಳ ಕರ್ನಾಟಕ ಸಂಚಾರ

**ಧಾರ್ವಾಡದಲ್ಲಿ:-**

**ಸ್ವಾಗತ:-** ಉರವಕೊಂಡದ ಗವಿಮಠದ ಜಗದ್ಗುರು ಶ್ರೀ ಕರಿಬಸವರಾಜೇಂದ್ರಸ್ವಾಮಿಗಳು ಬಳ್ಳಾರಿ ನಗರದಿಂದ ೨೮ನೆಯ ಶನಿವಾರ ಪ್ರಾತಃಕಾಲದ ರೈಲಿನಿಂದ ಹುಬ್ಬಳ್ಳಿಗೆ ಹೊರಟಾಗ ದಾರಿಯಲ್ಲಿ ಹೊಸಪೇಟೆ ಕೊಪ್ಪಳ ಗದಗ ಹುಬ್ಬಳ್ಳಿಗಳಲ್ಲಿ ಸಂಭ್ರಮದ ಸ್ವಾಗತವಾಯಿತು ಕಾಂಗ್ರೆಸ್ ಸಂಸ್ಥೆಗಳವರಷ್ಟೇ ಅಲ್ಲದೆ ಇತರ ಅನೇಕ ಸಂಘ ಪ್ರತಿನಿಧಿಗಳು ಪೂಜ್ಯಸ್ವಾಮಿಗಳನ್ನು ಭೆಟ್ಟಿಯಾಗಿ ಸಾದರದಿಂದ ಪೂವಮಾಲೆಗಳನ್ನರ್ಪಿಸಿದರು ಹುಬ್ಬಳ್ಳಿಯಲ್ಲಿ ಶ್ರೀಮಾಲಿಯವರಲ್ಲಿ ಒಂದುಗಂಟೆ ವಿಶ್ರಮಿಸಿ ಧಾರ್ವಾಡಕ್ಕೆ ಶನಿವಾರ ರಾತ್ರಿ ಆಗಮಿಸಿ ಶ್ರೀ ಆರ್ ಯಸ್ ಹಿರೇಮಠರಲ್ಲಿ ಆತಿಥ್ಯವನ್ನು ಸ್ವೀಕರಿಸಿದರು.

**ಧ್ವಜಾರೋಹಣ ಧಾರ್ವಾಡ ೨೯ನೆಯ ಭಾನುವಾರ (ಪ್ರಾತಃಕಾಲ).**

ಕರ್ನಾಟಕ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು ಶ್ರೀಗಳು ಭಾರತ ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಕರ್ನಾಟಕದ ಮಹಾಮಂಡಲದ ಕಾರ್ಯಕರ್ತರು ಸ್ವಾಮಿಗಳವರಲ್ಲಿ ಕರ್ನಾಟಕದ ಜಟಿಲ ಪ್ರಶ್ನೆಯಾದ ಏಕೀಕರಣವನ್ನು ಕುರಿತು ವಿಚಾರವಿನಿಮಯ ಮಾಡಿದರು. ಶ್ರೀಗಳು ಅಮೂಲ್ಯ ಮತ್ತು ಸೂಕ್ತ ಸಲಹೆಗಳನ್ನಿತ್ತು ಈಗಿನ ಪರಿಸ್ಥಿತಿಯಲ್ಲಿ ಕನ್ನಡ ಜನಾಂಗದ ವಿವಿಧ ಬಣಗಳಲ್ಲಿ ಐಕ್ಯವನ್ನು ಮಾಡುವುದು ಮುಖ್ಯವೆಂದರು ಸಾಯಂಕಾಲ 4-30 ರಿಂದ ಪೋಲೀಸ್, ಮಿಲಿಟರಿ ಬ್ಯಾಂಡಿನ (ಮಾನ್ಯ ಮತ್ತು ಪೂಜ್ಯ ವ್ಯಕ್ತಿಗಳಿಗಾಗಿ ಮೀಸಲಾದ ವಾದ್ಯದವರು) ವರು ಸ್ವಾಮೀಜೀಯವರನ್ನು ಅಲಂಕೃತ ಕಾರಿನಲ್ಲಿ ವಿದ್ಯಾವರ್ಧಕ ಸಂಘದ ಕಟ್ಟಡಕ್ಕೆ ಕರೆದೊಯ್ದರು. ಮೆರವಣಿಗೆಯಲ್ಲಿ ಆ ಬಾಲ ವೃದ್ಧರೂ ಸೇರಿ ಪ್ರಚಂಡ ಜನಸಮೂಹವಿದ್ದಿತು ದಾರಿಯಲ್ಲಿ ಪೂಮಾಲೆಗಳ ಸುರಿಮಳೆಯಾಯಿತು.

**ಕ. ವಿ. ವ. ಸಂಘದ ಗ್ರಂಥಾಲಯದ ಉದ್ಘಾಟನೆ**

**29-2-48 ಸಾಯಂಕಾಲ**

ಅಲಂಕೃತ ಮಂಟಪದ ಉಚ್ಚಾಸನದಲ್ಲಿ ಶ್ರೀಗಳೂ ಎಡಭಾಗದಲ್ಲ ಸ್ವಲ್ಪ ಕೆಳಗೆ ಪೂಜ್ಯ ಮಹದೇವ ಸ್ವಾಮಿಗಳೂ ಮಠದ ಗೌರವಾನ್ವಿತ ಚಿಹ್ನೆಗಳನ್ನು ಧರಿಸಿದ ಸೇವಕರೂ ಸ್ತಬ್ಧರಾಗಿ ಕುಳಿತು ಎಲ್ಲವನ್ನು ವೀಕ್ಷಿಸುತ್ತಿದ್ದ ವಿದ್ವಾಂಸ ಸ್ತ್ರೀ ಪುರುಷಸಮಾಜವು ಪ್ರೇಕ್ಷಣೀಯವಾಗಿದ್ದಿತು ಜೂಬಿಲಿ ಮಹೋತ್ಸವವೂ ಇಷ್ಟು ವೈಭವದಿಂದ ನೆರವೇರಿದ್ದಿಲ್ಲ. ಸ್ವಾಗತಗೀತೆಯನಂತರ ಶ್ರೀ ಜಾಗೀರದಾರರ, ಸ್ವಾಮಿಗಳಿಗೆ ಹೃತ್ಪೂರ್ವಕ ಸ್ವಾಗತ ಬಯಸಿ ಮಾದಿಯನ್ನೂರದಿ ಬೊಂಬಾಯಿಯ ಮುಖ್ಯ ಮಂತ್ರಿಗಳೇ ಮನ್ನಿಸಿ ನೂರಾರ ಸಂದೇಶಗಳ ಸಂಕ್ಷಿಪ್ತ ವರ್ಣಿಸಿ ಗ್ರಂಥಾಲಯಕ್ಕೆ ಕಡಿಮೆ ಬಿದ್ದ ರೂ. 1510 ಗಳನ್ನು ಸ್ವಾಮಿಗಳು ಕೊಟ್ಟವದಾಗಿ ಸಾರಿದರು ಶ್ರೀ ನಲವಡಿಯವರು ಮಾನಪತ್ರ ವಾಚಿಸಿದರು, ಸ್ವಾಮಿಗಳ ಸಂಪೂರ್ಣ ಭಾಷಣವನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗಿಲ್ಲ, ಸ್ವಾಮಿಗಳ ಅಸ್ಖಲಿತ ಮತ್ತು ಗಂಭೀರವಾಣಿಯಿಂದ ಹೊರಬಿದ್ದ ಮುತ್ತು ನಾವು ಆರಿಸಿದ ಮುಕ್ತಾಫಲಗಳು "ಸ್ವತಂತ್ರ ಭಾರತದಲ್ಲಿ ಇಲ್ಲಿಗೆ ಬಂದಿದ್ದೇವೆ ಇದೇ ಮಹಾನಂದ ಸಂಗತಿ ಸ್ವಾತಂತ್ರ್ಯ ಪ್ರದಾನ ಮಾಡಿದ ಗಾಂಧೀಜೀಯ ಅಭಾವದಿಂದ ನಮಗೆ ವಿಶೇಷ ದುಃಖವಾಗಿದೆ ಅವರ ತತ್ವಾನುಯಾಯಿಗಳಾಗೋಣ ಅವರ ಮೂರ್ತಿ ಪೂಜೆಯು ಅವರ ಆತ್ಮಕ್ಕೆ ಶಾಂತಿಕೊಡಲಾರದು ನಮ್ಮಲ್ಲಿ ವೈಷಮ್ಯಗಳು ಹುಟ್ಟುತ್ತಲಿವೆ, ಬಸವಣ್ಣನವರು ಹೇಳಿದಂತೆ ಮನಶ್ಶುದ್ಧಿ ಮಾಡಿಕೊಂಡು ನಿಶ್ಚಿತ ಗುರಿಯನ್ನು ಮುಟ್ಟೋಣ. ಜಾತಿಭೂತವು ಸಾರ್ವಜನಿಕ ಕಾರ್ಯದಲ್ಲಿ ಪ್ರವೇಶಿಸದಿರಲಿ, ಪ್ರಜಾ ಸರ್ಕಾರವು ಗ್ರಂಥಾಲಯದ ಸಂಪೂರ್ಣ ಹೊಣೆಹೊರಬೇಕು. ಶಸ್ತ್ರ ಶಿಕ್ಷಣವೂ ಬೇಕು. ಲೋಕ ಶಿಕ್ಷಣವೂ ಬೇಕು ....

ಶ್ರೀ ನಾಯಕ ವೆಂಕಟರಾಯರು ವಂದನಾರ್ಪಣೆ ಮಾಡಿದರು.

**೧ನೇ ತಾ ಸೋಮವಾರ ಪ್ರಾತಃಕಾಲ**

ಕ. ವಿ. ವ. ಸಂಘದ ಮಾಳಿಗೆಯ ಮೇಲೆ ಕಾರ್ಯಕಾರಿಣಿ ಸಮಿತಿಯ ಛಾಯಾ ಚಿತ್ರವು ಶ್ರೀಗಳೊಡನೆ ತೆಗೆಯಲಾಯಿತು ಇದಾದ ನಂತರ ಸಾಹಿತ್ಯದ

ಅಟ್ಟದ ಮೇಲೆ ಕರ್ನಾಟಕ ಹೊಲಿಗೆಯ ವಿದ್ಯಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿ ದೇಶದ ಆರ್ಥಿಕಾಭಿವೃದ್ಧಿಯ ಮೇಲೆ ಅದ್ಭುತ ಪಾಂಡಿತ್ಯ ಪರಿಪೂರ್ಣ ಉಪನ್ಯಾಸವನ್ನೆಸಗಿ ವೃತ್ತಿ ಶಿಕ್ಷಣದ ಮಹತ್ವವನ್ನು ಅವರಲ್ಲಿ ನಿಖರವಾಗಿ ಸೂಚಿಸಿದರು. ಡಾ ವಿ ಕೆ ನ್ ಹಸ್ಸಲರ ನಾಕಲೋಕ ಸುಧಾರಣೆಯ ಉತ್ಸಾಹವೂ ಎಲ್ಲರ ಮನಾಕರ್ಷಣೆ ಮಾಡಿತು. ಹರೇಪೇಟೆ ಚಿಂತಾಮಣಿಸಾಯರ್ರು ಸ್ವಾಮಿಗಳನ್ನು ವಂದಿಸಿ ಕಡಮೆ ವೇತನದ ಪರಿಶ್ರಮಿಗಳ ಈ ಉದ್ಯೋಗಕ್ಕೆ ಸ್ವಾಮಿಗಳಾಶೀರ್ವಾದವನ್ನು ಕೋರಿದರು

ಮಹಿಳಾ ಸೇವಾ ಸಮಾಜ ಸಂಸ್ಥೆಯಲ್ಲಿ ಶ್ರೀಗಳವರಿಗೆ ಶ್ರೀಮತಿ ಭಾಗೀರಥಬಾಯಿ ಪುರಾಣಿಕ ಡಿ. ಬಿ. ಪಾಟೀಲರು ಅಲ್ಲಿ ನಡೆಯುತ್ತಿರುವ ಸಕಲ ಚಟುವಟಿಕೆಗಳನ್ನು ತಿಳಿಸಿ ಸ್ವಾಮಿಗಳ ಸಹಾಯ, ಸಹಕಾರ ಕೋರಿದರು. ಇಂಥ ಸಂಸ್ಥೆಗಳು ಯಾವಾಗಲೂ ಸಹಾಯಯೋಗ್ಯವೆಂದೂ ಸ್ತ್ರೀಯರಿಗೆ ನೀಚಸ್ಥಾನವನ್ನು ಕೊಟ್ಟ ಸಮಾಜವು ಇನ್ನು ಬುದ್ಧಿಗಲಿಯಬೇಕೆಂದೂ ಹೇಳಿ ಆಶ್ರಯಸ್ಥಾನಗಳಿಂದ ಮಹಿಳೆ ಬಾಲಿಕೆಯರಿಗೆ ಫಲ ಪುಷ್ಪಗಳನ್ನಾಶೀರ್ವದಿಸಿದರು.

**೩ನೆಯ ದಿನಾಂಕ ಮಂಗಳವಾರ.**

ಶ್ರೀಗಳು ಗುರುದೇವ ಸಾಹಿತ್ಯ ಸಮಿತಿಯಿಂದ ಪ್ರಕಟವಾಗುವ "ಕಲ್ಯಾಣ ಕ್ರಾಂತಿ" ಎಂಬ ಕವನ ಸಂಗ್ರಹದ ಪ್ರಕಾಶನ ಸಮಾರಂಭದಲ್ಲಿ ಸಾಹಿತ್ಯ ಏಕೀಕರಣ ವಿಷಯಗಳ ಮೇಲೆ ಉಜ್ವಲ ಭಾಷಣ ಮಾಡಿದರು. "ಸಾಹಿತ್ಯದಲ್ಲಿ ಪರಭಾಷಾನುವಾದ ಬೇಡ. ಜೀವನದ ನಾಡಿಯನ್ನು ಮಿಡಿಯುವ ಅಂತರಂಗದಿಂದ ಹೊರಹೊಮ್ಮುವ ಸ್ಫೂರ್ತಿಯ ಸಾಹಿತ್ಯವನ್ನು ಸೃಷ್ಟಿಸಿ ನುಡಿ ನಡೆ ವೃತ್ತಿ ಇವೆಲ್ಲ ಕನ್ನಡ ನಾಡಿಗಾಗಿ ಮೀಸಲಾಗಿರಿಸಿರಿ. ನಿವೃತ್ತಿಯ ಪ್ರದರ್ಶನದಿಂದ ಸೃಷ್ಟಿಯಾಗುವ ಸಾಹಿತ್ಯದಿಂದ ಲಾಭವು ಕಡಮೆ. ದೇಶದ ಪುನರ್ರಚನಾ ಕಾರ್ಯದಲ್ಲಿ ಸಾಮಾನ್ಯ ಜನತೆಯ ಸಾಹಿತ್ಯಬೇಕು."

"ಕನ್ನಡ ನಾಡಿಗಾಗಿ ತನು-ಮನ-ಧನಗಳನ್ನರ್ಪಿಸಿ ಅದಕ್ಕೆ ಅಂತರಾಷ್ಟ್ರೀಯ ಸ್ಥಾನವು ಲಭಿಸಬೇಕು ಸುಂದರ ಕನ್ನಡನಾಡಿನ ರಚನೆಗಾಗಿ ನಮ್ಮಿಂದೆನು ಸಾಧ್ಯವೋ ಎಷ್ಟು ಆತ್ಮಾರ್ಪಣ ಮಾಡುಬೇಕೋ ಎಂತಹ ತ್ಯಾಗಬೇಕೊ ಅವಕ್ಕೆಲ್ಲಾ ಸಿದ್ಧರು ನಾವು" ಎಂದು ಶ್ರೀಗಳಪ್ಪನೆ ಕೊಡಿಸಿದರು ಶ್ರೀ ಗಂಗಪ್ಪ ಮಾಲಿಯವರ ಪರಿಚಯವನ್ನು ಅನೇಕ ಮಿತ್ರರು ಮಾಡಿದರು, ಕವಿಗಳಿಂದ ಸುಮಧುರ ಕಾವ್ಯವಾಚನವಾಯಿತು. ಏಕೀಕರಣ ಲಕ್ಷನಿಧಿಗೆ ಸಹಾಯಮಾಡಲು ತಿಳಿಸಿ ಹುಬ್ಬಳ್ಳಿಯೇ ರಾಜಧಾನಿಯಾಗಲಿ ಎಂಬ ಹೆಬ್ಬಯಕೆ ವ್ಯಕ್ತಗೊಳಿಸಿ ವರ್ಕಿಂಗ್ ಕಮಿಟಿ ಮಂತ್ರಿವರ್ಗದಲ್ಲಿ ಪ್ರಾತಿನಿಧ್ಯವು ದೊರಕಬೇಕು ಎಂದು ಹಾರೈಸಿದರು.

**ಹುಬ್ಬಳ್ಳಿಯಲ್ಲಿ-**

೨ನೆಯ ದಿನಾಂಕ ಸೋಮವಾರ ಸಾಯಂಕಾಲ ಆಗಮಿಸಿ ಕನ್ಸರ್ಷಿಯಲ್ ಕಾಲೇಜ್ ಪೋಲಿಟೆಕ್ನಿಕ್ ಸಂಸ್ಥೆಗಳಲ್ಲದೆ ನವಯುಗ, ಸಂಯುಕ್ತ ಕರ್ನಾಟಕ ವಿಶಾಲ ಕರ್ನಾಟಕ, ತರುಣ ಕರ್ನಾಟಕ ಕಾರ್ಯಾಲಯಗಳಿಗೆ ಭೆಟ್ಟಿಯಿತ್ತು. ಅವುಗಳ ಕಾರ್ಯ ಗೌರವವನ್ನು ಪ್ರಶಂಶಿಸಿದರು. ಅಖಿಲ ಕರ್ನಾಟಕ ಮಹಾಸಮಿತಿಯ ಕಾರ್ಯಾಲಯದಲ್ಲಾದ ವಿಚಾರವಿಮರ್ಶೆಯನ್ನು ಪರಿಶೀಲಿಸಿದರು. ಲಕ್ಷನಿಧಿಯ ಬಗ್ಗೆ ಸ್ವಾಮಿಗಳ ಸಹಾಯ ಕೋರಲಾಯಿತು.

ನಗರ ಸಭೆಯಲ್ಲಿ ರಾತ್ರಿ ಹತ್ತು ಗಂಟೆಗಳವರೆಗೂ ನಡೆದ ಸಭೆಯು ಹುಬ್ಬಳ್ಳಿಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ, ಅನೇಕ ಸಂಘ ಸಂಸ್ಥೆಗಳವರು ಪೂಮಾಲೆಗಳನ್ನರ್ಪಿಸಿ ಮಾನಪತ್ರಗಳನ್ನೋದಿದರು. ಸಭಾಭವನದಲ್ಲಿ ಸ್ಥಳಸಾಲದೆ ಸಾವಿರಾರು ಜನರು ಹೊರಗೆನಿಂತಿದ್ದರು. ಧ್ವನಿವಾಹಕ ಯಂತ್ರದ ವ್ಯವಸ್ಥೆಯಿದ್ದ ಕಾರಣ ನಗರಭವನದ ತೋಟದಲ್ಲಿ ಸಾವಿರಾರು ಜನರು ಕಿಕ್ಕಿರಿದಿದ್ದರು. ಗ್ರಂಥಾಲಯ ಪ್ರವೇಶೋತ್ಸವ ಕಾಲಕ್ಕೆ ಸ್ವಾಮಿಗಳ ಸಂಕ್ಷಿಪ್ತ ಜೀವನದ ಲಾವಣಿ ಹೇಳಿ ಜನರಂಜನೆ ಮಾಡಿದ ವಿಷಕಂಠರ ಪ್ರತಿಪಾದನೆ ಪುನಃ ಆಯಿತು ಉದಯ ವಾಗಲಿ ಚೆಲುವ ಕನ್ನಡನಾಡಿನ ಕೋಮಲ ಕಂಠಗಳಿಂದ ಬಂದ ಗಾನವು ಎಲ್ಲರ ಚಿತ್ತಾಕರ್ಷ ಮಾಡಿತು. ಶ್ರೀ ಹಿರೆಮಲ್ಲೂರು ಈಶ್ವರನ್‌ರು 'ಕಲ್ಪನಾ' ಗ್ರಂಥಮಾಲೆಯ ಉದ್ದೇಶಗಳನ್ನು ತಿಳಿಸಿ ಪ್ರಕಟವಾದ ಮೂರು ಗ್ರಂಥಗಳನ್ನು ಸ್ವಾಮಿಗಳಿಗರ್ಪಿಸಿದರು. ಪ್ರೊ, ಬಸವನಾಳರು ನಾಲ್ಕು ಮಾತುಗಳಾದನಂತರ ಸ್ವಾಮೀಜೀಯವರಾಶೀರ್ವಾದ ಮಾಡಿ ಹರಸಿದರು. ಕರ್ನಾಟಕ ಏಕೀಕರಣ ಮಹತ್ವವನ್ನು ಕುರಿತು ಸ್ವಾಮೀಜೀಯವರು ಅಮೂಲ್ಯ ಸಲಹೆ ಕೊಟ್ಟು ಭೇದಗಳನ್ನು ನಿರ್ಮೂಲ

ಮಾಡಲು ಹೇಳಿ ಸಭೆಯಲ್ಲಿ 10 ಸಾವಿರವಾದರೂ ಸಂಗ್ರಹವಾಗಬೇಕೆಂದರು. ಅಲ್ಪ ಸಂಖ್ಯಾಕರ ಪ್ರಶ್ನೆಯನ್ನೆಬ್ಬಿಸಿದವರು ಕುತಂತ್ರಿಗಳೆಂದರು. ಮತ್ತೆ ಕೆಲ ಗ್ರಂಥಕರ್ತರು ಪುಸ್ತಕಗಳನ್ನರ್ಪಿಸಿದರು. ಸ್ವಾಮಿಗಳ ಪ್ರಭಾವದಿಂದ ಸಭೆಯಲ್ಲೇ ಸಾಕಷ್ಟು ಹಣದ ಸಂಗ್ರಹವಾಯಿತು. ಮಂಗಳವಾರ ಮತ್ತಷ್ಟು ಧನಾರ್ಜನೆಯಾಯಿತು.

### 4ನೆಯ ದಿನಾಂಕ ಬುಧವಾರ (ಗದಗಿನಲ್ಲಿ)

ಗದಗಿನ ಮಹಾಲಕ್ಷ್ಮಿ ಥಿಯೇಟರಿನಲ್ಲಿ ಗದಗ ಬೆಟಗೇರಿ ನಾಗರೀಕರ ಮೆರವಣಿಗೆಯ ನಂತರ ಸಾಯಂಕಾಲ ಮಾನಪತ್ರವನ್ನರ್ಪಿಸಿದರು. ಶ್ರೀಗಳು ಗಾಂಧೀಜಿಯವರ ನಿಧನದ ನಂತರ ಉಂಟಾದ ಪರಿಸ್ಥಿತಿಯನ್ನು ವಿವರಿಸಿ ಸ್ವತಂತ್ರ ಭಾರತಕ್ಕೆ ಪೋಷಕವಾಗುವ ಏಕೀಕೃತ ಕರ್ನಾಟಕದ ಅವಶ್ಯಕತೆಯನ್ನು ಎಲ್ಲಾ ದೃಷ್ಟಿಗಳಿಂದ ವಿವೇಚಿಸಿದರು. ಕರ್ನಾಟಕ ಏಕೀಕರಣ ನಿಧಿಗೆ ಇಲ್ಲಿ ಯೋಗ್ಯ ಪುರಸ್ಕಾರ ದೊರೆಯಿತು.

— ● —

### ಮುಂಗಡ ಪತ್ರಿಕೆಗಳು ಗಳಿಲ

| | ಆದಾಯ | ವೆಚ್ಚ | ಕಡಮೆ |
|---|---|---|---|
| ಇಂಡಿಯಾ | 230 ಕೋಟಿ | 257 ಕೋಟಿ | 27 |
| ಪಾಕಿಸ್ತಾನ | 79 ,, | 89 ,, | 10 |

ಇಂಡಿಯಾದ ಅರ್ಥಿಕ ಮಂತ್ರಿಗಳು ಪ್ರಥಮವಾಗಿ ಮಹಾತ್ಮ ಗಾಂಧಿಯವರಿಗೆ ಗೌರವ ಸಲ್ಲಿಸಿ ಕೆಲಕರಗಳಲ್ಲಿ ಕಡಿಮೆ ಮಾಡಿ ಕೆಲ ಹೊಸ ಕರಗಳನ್ನು ಹೆಚ್ಚಿಸಿದುದನ್ನು ಹೇಳಿದರು. ಪಾಕಿಸ್ತಾನವು ಸಾಲ ತೆಗೆಯಲಿದೆ. ಭಾರತವು ಬ್ರಿಟನ್ನಿನಿಂದ ಬರಬೇಕಾದ ಹಣ 1 ಕೋಟಿ ಪೌಂಡು ಉಳಿದ ಹಣ ಹೊಸ ಕರಗಳಿಂದ ತುಂಬಬಾಗುತ್ತೆ.

### ಭಾರತದ ಮೇಲೆ ಹೈದರಾಬಾದ ಪುಂಡರದಾಳಿ ಅಶಾಂತಿಯ ಇತರ ವಿವರ

ಗದಗಿಗೆ 20 ಮೈಲು ದೂರವಿರುವ ಹಾಳಕೇರಿ ಎಂಬ ಊರಿನ ಮೇಲೆ ನೈಜಾಮ ಪುಂಡರು ದಾಳಿಮಾಡಿದರು. ಅಲ್ಪ ಸ್ವಲ್ಪ ಜನ ಪೋಲೀಸರಿದ್ದರು. ಆದರೂ ಗುಂಡು ಹಾರಿಸಿದರು. ಸಾವು ನೋವು ಆಸ್ತಿ ಪಾಸ್ತಿಗಳ ಸಂಬಂಧ ವಿಷಯ ಗೊತ್ತಾಗಿಲ್ಲ.

### ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 350/1947.

**ವಾದಿ: —**

ಮುಂಗ್ಳಳಿ ನಾಗಪ್ಪ ತಂದೆ ಸರ್ವತಪ್ಪ, ವಯಸ್ಸು 28, ವೈಶ್ಯರು ವ್ಯಾಪಾರ, ಸಾ॥ ನಾರಾಯಣದೇವರಕೆರೆ, ತಾ॥ ಹೊಸಪೇಟೆ.

**ಪ್ರತಿವಾದಿ: —**

ಇಟ್ಗಿ ದಾವಣಗೆರೆ ಲೆಕ್ಕದ ಶರಣಪ್ಪ, ತಂದೆ ತಿಳಿಯದು, ವೋಜರು, ಲಿಂಗಾಯ್ತ, ವ್ಯಾಪಾರ ಸಾ॥ ದಾವಣಗೆರೆ ಮೈಸೂರು ಇಲಾಖೆ.

ಮೇಲಿನ ನಂಬರಿನಲ್ಲಿ ವಾದಿಯು ಪ್ರತಿವಾದಿಯ ಮೇಲೆ ತಿಳಿಸಿದ ಮೇಲಿನ ಬಾಕಿಗೆ ರೂ.573 12—0 ದಾವಾಮಾಡಿತ್ತಾರೆ. ವಾಯಿದೆ 15—3—48 ಕ್ಕೆ ಇರುತ್ತದೆ. ತಕರಾರು ಇದ್ದಲ್ಲಿ ಸದರಿ ವಾಯ್ದೆಗೆ ಹಾಜರಾಗಿ ಅನಸರು ದಖಲು ಮಾಡಲು ತಪ್ಪಿದಲ್ಲಿ ಪ್ರತಿವಾದಿಯ ಮೇಲೆ ಯಕ್ಸಪಾರ್ಟಿ ಡಿಕ್ರಿ ಮಾಡೋಣಾಗುತ್ತದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

1-3-48 }
ಹೊಸಪೇಟೆ }

ಎಂ. ವೆಂಕೋಬಶೆಟ್ಟಿ,
ಅಡ್ವೋಕೇಟ್ (ವಾದಿಪರ)

ನಲಗೊಂಡಾ ಜಿಲ್ಲೆಯ ಕೋಟ್ಪಾಡು ಎಂಬ ಹಳ್ಳಿಯಲ್ಲಿ ನಿಜಾಮ ಪೋಲೀಸರ ಮೇಲೆ ಕಮ್ಯೂನಿಷ್ಟರು ದಾಳಿಮಾಡಿ ಕೆಲ ಪೋಲೀಸರನ್ನು ಕೊಂದ ವಿವರಗಳು ಮುಟ್ಟಿವೆ.

### ಕೇಂದ್ರ ಮಂತ್ರಿವರ್ಗದಲ್ಲಿ ಪರಿವರ್ತನೆಯಾಗಬೇಕು

ಶ್ರೀಗಳಾದ ಶಾಮಪ್ರಸಾದ ಮುಖರ್ಜಿ, ಸರ್ದಾರ ಬಲದೇವಸಿಂಗ, ಭಾಭಾ, ಮತ್ತು ಷಣ್ಮುಖಂಶೆಟ್ಟಿಯವರು ಜಾತೀಯವಾದದ ಧನಿಕರ ಪ್ರತಿನಿಧಿಗಳಾಗಿರುವದರಿಂದ ಕೇಂದ್ರ ಮಂತ್ರಿವರ್ಗದಿಂದ ಇವರು ರಾಜೀನಾಮೆ ಕೊಡಬೇಕೆಂದು ಸಮಾಜವಾದಿ ಪುಢಾರಿ ಶ್ರೀ ಜಯಪ್ರಕಾಶನಾರಾಯಣರು ಹೇಳಿಕೆ ಕೊಟ್ಟು ನೆಹರೂರವರು ಬದಲು ಮಾಡಲು ನಿರಾಕರಿಸಿದ ಕಾರಣ ಸಮಾಜವಾದಿಗಳು ಕಾಂಗ್ರೆಸ್ ಬಿಟ್ಟು ಹೋಗಲು ನಿರ್ಧರಿಸಿರುವದಾಗಿ ಗೊತ್ತಾಗಿದೆ.

## ನವಿಚಾಗಿ ಗ್ರಾಮದ ಮೇಲೆ ನಿಜಾಂ ಪೋಲೀಸ್ ಮತ್ತು ಗೂಂಡಾ ಜನರ ಹಾವಳಿ.

ಆದವಾನಿ ರೈತ ಸಂಘದ ಅಧ್ಯಕ್ಷರಾದ ಶ್ರೀ ಪಿ. ವೆಂಕಟರಾಮಪ್ಪನವರು ಹೀಗೆ ಬರೆಯುತ್ತಾರೆ

"25ನೆಯ ಪ್ರಾತಃಕಾಲ ಸೂರ್ಯೋದಯದ ನಂತರ ನಿಜಾಂ ಪೋಲೀಸ್ ಮಿಲಿಟರಿ ಮತ್ತು ಗೂಂಡಾ ಜನರು ಸುಮಾರು 50 ರಿಂದ 60 ಇರಬಹುದು. ಆದವಾನಿ ತಾಲೂಕ ನವಿಚಾಗಿ ಗ್ರಾಮದ ಮೇಲೆ ದಾಳಿಮಾಡಿದರು. ಈ ಗೂಂಡಾ ಜನರು ತುಪಾಕಿ, ಕತ್ತಿ, ಬಾಕು ಮೊದಲಾದ ಆಯುಧಗಳಿಂದ ಸುಸಜ್ಜಿತರಾಗಿದ್ದರು. ಮೊಟ್ಟಮೊದಲು ನರಸಯ್ಯಗಾರಿ ತಿಮ್ಮಯ್ಯನ ಮನೆ ಮೇಲೆ ದಾಳಿಯಾಗಿ ಮೂರು ಸೇರು ಭಂಗಾರ, ರೇಶ್ಮಿ ಸೀರೆ ಮೊದಲಾದ 15000 ಸಾವಿರ ರು. ಆಸ್ತಿ ಪಾಸ್ತಿಗಳನ್ನು ಲೂಟಿಮಾಡಿದರು. ಶ್ರೀ ಪೆಂಡ್ಯಾಲ ಈರಣ್ಣ ಶೆಟ್ಟಿಯವರ ಮನೆ ಲೂಟಿಯು ಮತ್ತೆ ಆರಂಭವಾಯಿತು. ಅವರ ಅಣ್ಣ ಉಪ್ಪಯ್ಯ ಕೇಕೆ ಹಾಕಿ ಊರಜನರನ್ನು ಕರೆಯಲಾರಂಭಿಸಿದನು. ಗೂಂಡಾ ಜನರು ಅವರನ್ನು ಕೂಡಲೇ ಗುಂಡಿನಿಂದ ಸುಟ್ಟು ಕೊಂದುಹಾಕಿದರು. ಉಪ್ಪಯ್ಯನ ಮಗನು ಅಡ್ಡಬಾರಲು 'ಇನ್ಕಿಲಾಬ್ ಕಾಟೋ" ಎನ್ನುತ್ತಾ ನಾರಾಯಣಪ್ಪನನ್ನು ಕೆಳಬೀಳಿಸಿ ಪೆಂಡ್ಯಾಲ ಈರಣ್ಣನನ್ನು ಕತ್ತಿಯಿಂದ ಬಲಗೈಯನ್ನು ಕಡಿದರು. ಈ ಗದ್ದಲದಿಂದ ಊರ ಜನರೆಲ್ಲಾ ಹೊರಬಂದರು. ಗೂಂಡಾ ಜನರು ಅವರ ಮೇಲೆ ಗುಂಡು ಹಾರಿಸತೊಡಗಿದರು. ಇದರಿಂದ ಪ್ರಮಾದವಾದ ಗಾಯಗಳಾಗಿವೆ

### ಗುಂಡಿನೇಟುತಗಲಿ ಗಾಯಹೊಂದಿದವರು

1) ಮಡಿವಾಳಯ್ಯ ಎಂಬ ಉಪಾಧ್ಯಾಯರು 2) ವೆಂಕಮ್ಮ 3) ಬಸಣ್ಣ 4) ಫಕೀರಪ್ಪ 5) ಹುಚ್ಚಪ್ಪ 6) ಶೀನಪ್ಪ 7) ನಾರಾಯಣಪ್ಪ (ಕತ್ತಿಯಿಂದ ಕೊಯ್ದಿದ್ದಾರೆ) ಇವರಲ್ಲದೆ ಇನ್ನೂ 30 ಜನರಿಗೆ ಗಾಯಗಳಾಗಿವೆ. ನರಸಯ್ಯಗಾರಿ ತಿಮ್ಮಯ್ಯ, ತಿಮ್ಮಯ್ಯಗಾರಿ ಕೇಶಯ್ಯ, ಗುಡಿ ಕಂಬಾಲಿ ಹನುಮಂತಯ್ಯ, ಪೆಂಡ್ಯಾಲ ಈರಣ್ಣ ಈ ನಾಲ್ಕು ಮನೆಗಳು ಲೂಟಿಯಾಗಿವೆ. ಇನ್ನೂ ಕೆಲ ಮನೆಗಳು ಲೂಟಿಯಾದಂತೆ ಗೊತ್ತಾಗಿವೆ. ಒಟ್ಟಿನಲ್ಲಿ 60,000 ರೂಪಾಯಿಗಳ ಮಾಲು ಲೂಟಿಯಾಗಿವೆ. ಗ್ರಾಮಸ್ಥರು ಭಯಕಂಪಿತರಾಗಿದ್ದಾರೆ. ಸರ್ಕಾರದ ಪೂರ್ವ ಭಾವೀ ಸಹಾಯಗಳಿಲ್ಲವೆಂದು ದಿಗ್ಭ್ರಮೆಯಾಗಿದ್ದಾರೆ.

---

### ಪಾಕಿಸ್ತಾನ ಪತ್ರಿಕೆಗಳ ಅಪಪ್ರಚಾರ

ಪಾಕಿಸ್ತಾನ ಉರ್ದು ಪತ್ರಿಕೆಗಳು ಹಿಂದೂಸ್ತಾನವನ್ನು ಜಯಿಸಿರಿ ಈ ಧರ್ಮ ಯುದ್ಧದಲ್ಲಿ ಗುಡ್ಡಗಾಡು ಜನರು ಸಹಾಯಮಾಡಿರೆಂದು ಪ್ರೇರೇಪಿಸುತ್ತಿರುವ ವಿಷಯವು ಸರಕಾರದ ಗಮನಕ್ಕೆ ಬಂದಿದೆ. ಈ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಲು ಪ್ರಾಂತೀಯಾಧಿಕಾರಿಗಳಿಗೆ ಅಧಿಕಾರವಿದೆ.

### ಪಾಕಿಸ್ತಾನ ಸೈನ್ಯ

ಕಾಶ್ಮೀರ ಜಮ್ಮುಗಡಿಯಲ್ಲಿ ಪಾಕಿಸ್ತಾನದ ಸೈನ್ಯಗಳನ್ನಿರಿಸಲಾಗಿವೆಯೆಂದು ಪಾಕಿಸ್ತಾನ ಪ್ರಕಟನೆಯೊಂದು ತಿಳಿಸುತ್ತದೆ.

### ರಾಜಕೀಯ

ಪಾಕಿಸ್ತಾನ ಮತ್ತು ಹೈದರಾಬಾದ್ ಸರ್ಕಾರಗಳು ಇಟಲಿ ದೇಶದಿಂದ ಯುದ್ಧ ವಿಮಾನಗಳನ್ನು, ಟ್ಯಾಂಕುಗಳನ್ನು ಕೊಳ್ಳಲು ನಿಶ್ಚಯಿಸಿರುತ್ತವೆಯೆಂದು ತಿಳಿದುಬಂದಿದೆ.

— ಪಾಕಿಸ್ತಾನಕ್ಕೆ ಹೈದರಾಬಾದವು ಕೊಟ್ಟ ೨೦ ಕೋಟಿ ರೂ. ಗಳ ಸಾಲ, ಸಂಸ್ಥಾನದಲ್ಲಿ ಜಾರಿಮಾಡಿದ ನಾಣ್ಯಕ್ಕೆ ಸಂಬಂಧಿಸಿದ ಕಾಯಿದೆ; ಯಥಾಸ್ಥಿತಿ ಒಪ್ಪಂದದ ವಿರುದ್ಧ ಆಕಾಶವಾಣಿ ಕೇಂದ್ರ ರಚಿಸಲು ವಿದೇಶಿ ಸಂಸ್ಥೆಗೆ ಅವಕಾಶಕೊಟ್ಟುದುದು; ಭಾರತ ಒಕ್ಕೂಟ ಸರಕಾರದ ಒಪ್ಪಿಗೆಯಿಲ್ಲದೆ ಸಂಸ್ಥಾನದ ಸೈನ್ಯ ಸಂಖ್ಯೆಯನ್ನು ಹೆಚ್ಚಿಸಿದುದು; ಇತ್ತೆಹಾದ ಅಲ್ - ಮುಸ್ಲಿಮೀನ್ ಕೈಕೊಂಡಿರುವ ಭಾರತ ವಿರುದ್ಧ ಚಟುವಟಿಕೆಗೆ ಸಿಗುತ್ತಿರುವ ಪ್ರೋತ್ಸಾಹ ಮೊದಲಾದ ಸಮಸ್ಯೆಗಳು ತಲೆಯೆತ್ತಿವೆ. ಈ ವಿಷಯಗಳು ಮತ್ತು ಗಡಿ ಪ್ರದೇಶಗಳಲ್ಲಿ ನಡೆದ ಕೆಲವು ದುರ್ಘಟನೆಗಳ ಬಗ್ಗೆ ಕೂಡಾ ಚರ್ಚೆ ನಡೆಯಲಿದೆ.

—ನೀವು ಯಹೂದಿಗಳಿಗೆ ಇಂಥಾ ಪ್ರೋತ್ಸಾಹ ಕೊಡುತ್ತಾ ಹೋದರೆ ನಿಮಗೆ ಕೊಟ್ಟಿರುವ ಎಣ್ಣೆ ಸವಲತ್ತುಗಳನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಅರಬ್ ಲೀಗ್ ಅಧಿಕಾರಿಗಳು ಅಮೆರಿಕೆಗೆ ಎಚ್ಚರ ಕೊಟ್ಟಿದ್ದಾರೆ

# Mahatma Gandhi A Man of faith

BY

*Dr Ranjee G. Shahani.*

And so Mahatma Gandhi is gone! His murder is something far more frightening than a cunning political crime. It belongs to the dread kingdom of absolute evil.

"The innocent perish while the wicked flourish like the green bay tree." Why is this so? Plato brooded on the matter (he was thinking of the fate of Socrates), and came to no satisfactory conclusion. Shakespeare held, with Ecclesiastes, that "Time and circumstance happen to all men." Fine; but the problem still remains the good fortune of the bad and the bad fortune of the good:

"And he that of the black seed eateth fruit, To him the savour as honey shall be sweet; And he in whom the white seed hath struck root, He shall have sorrow and trouble and tears for meat."

Here, let us confess, we have one of the supreme paradoxes of life. The rose is born to bloom but it must fall when the east wind blows. Why?

## MISSION OF PEACE

The whole civilized world has mourned the passing of Mahatma Gandhi. Kings, Presidents and Prime Ministers have told us in what high esteem they held him. Almost everybody is agreed that the bullets that killed him have, in a very real sense struck us too; for we are now deprived of his wise counsel. In a brutal and brutalising world he stood for peace and goodwill among men. His every presence, as was proved again and again, gave healing and health.

The first person to give me news of Mahatma Gandhi's assassination was my housekeeper. "Isn't it terrible, sir?" she said. "He was such a good man." I heard similar words wherever I went. There is no doubt that the English have felt the death of Mahatma Gandhi as a personal loss. How can this be, you ask, since he fought them for years. The fact is, the English put goodness above every other quality; and they were convinced that Mahatma Gandhi was a truly good man.

Many have tried to analyse the character of Mahatma Gandhi. To what they ask did he owe his tremendous influence not only in India but in many parts of the world?

Mr. L. S. Amery tells us that he was a "saintly mystic." This is flatly contradicted by Edward Thompson who did not think that Gandhi was a saint. These differences seem to me meaningless. There have been many saints and mystics who have gone their way to dusty death without moving anyone.

## NOBLE IDEAL

The secret of Mahatma Gandhi's success, other writers inform us, was the s cret of a great popular leader one who embodied and appealed to the peculiar instincts and emotions of his own people This is only partly true, Mahatma Gandhi was certainly popular more popular than any other man we can think of; but and here is the point- even those who differed from him often bowed to his wishes. How was this possible?

Mahatma Gandhi was absolutely selfless. Every Indian-even his bitterest political foes - knew that. This man had no axe to grind. He was always thinking of the good of others. That India should take her rightful place in the comity of nations was one of his most cherished ideals. He pursued it in ways that others did not like, but nobody doubted even for an instant the nobility of the ideal. Englishmen instinctively approved of it.

The first thing then to remember is that we Indians trusted Mahatma Gandhi as we trusted no one else. Our interests and the interests of our country, we knew, were in safe hands. Many preferred his misleadings to the leadings of opportunist politicians.

## INNER VOICE

The Mahatma Gandhi was a faith. He believed in the oneness of God and therefore, in the oneness of humankind For him there were no inferior and superior races. All were the children of God and equal in his sight

This side of Mahatma Gandhi appealed equally to East and west. He was compared to Christ, had heart knowledge An inner voice spoke to him secrets hid from others.

Mahatma Gandhi was brave as few have been brave. He did things that would frighten many a soldier. But he was never foolhardy; he al ways knew what he was doing. Because he was rooted in Truth, he often achieved the impossible, Passivity, with him was a kind of higher activity. He concentrated his powers towards one end, and nothing could deflect him from his purpose once he was convinced that he was right.

But, like all supremely sensitive souls, he was ever prepared to learn. He never presevered in an error out of mere pride He was always ready to say: "I'am sorry, I was wrong, I shall make amends.' Here he showed his true stature.

## FIRST OF THE MODERNS

It said that he was simple-minded and did not understand the vast and intricate problems of the modern world This is hardly correct, Mahatma Gandhi hated the false complexity of our days and wished us to return to the grand simplicities .man, he said, is the master of his fate; he cannot be the

slave of his fellow beings or of machinery.

I call Mahatma Gandhi the first of the moderns he was an activist bt an activist who spent his life in disinterested service "One for all and all for one" that was his secret dream; and he acted his dream.

And now he is no more I can hardly believe it. Silent is the voice that in a word or two could convey so much. It is not only India that mourns his loss. but the whole world.

—— ● ——

## ಗಾಂಧಿ ಪ್ರತಿಮೆಗಳು.

### ಸ್ವಲ್ಪ ತಡೆಯಿರಿ ಸರ್ಕಾರದ ಸೂಚನೆ

ಅನೇಕ ಹಳ್ಳಿಗಳಲ್ಲಿ ತಮಗೆ ಇಚ್ಛೆ ಬಂದಂತೆ ಗಾಂಧೀಜಿ ಪ್ರತಿಮೆಗಳನ್ನು ಮಾಡಿಸಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮದ್ರಾಸ್ ಸರ್ಕಾರದವರು ಮದ್ರಾಸ್ ಕಲಾಶಾಲೆಯ ಮುಖ್ಯ ಅಧ್ಯಾಪಕರಿಗೆ ಆಜ್ಞೆ ಮಾಡಿ ಸುಂದರ ಮತ್ತು ಗಾಂಧೀಜಿಯ ಸ್ವಾಭಾವಿಕ ಪ್ರತಿಮೆಯ ನಮೂನೆಯನ್ನು ತಯಾರಿಸಿಕೊಡಲು ಕೇಳಿದ್ದಾರೆ. ಈ ನಮೂನೆಯ ಪ್ರಕಾರಕ್ಕೆ ತಯಾರಿಸಿಕೊಳ್ಳಬೇಕಾದ್ದಿಲ್ಲ. ಅಧಿಕೃತ ನಮೂನೆಯು ದೊರಕುವವರೆಗೆ ಸಾರ್ವಜನಿಕರು ತಡೆಯಬೇಕೆಂದು ಕೋರಿಕೆ.

### ಭಾರತದ ಹೊಸಹಡಗು ನೆಹರೂರಿಂದ ಉದ್ಘಾಟನೆ.

ಭಾರತದ ಪೂರ್ವತೀರದಲ್ಲಿನ ವಿಶಾಖ ಪಟ್ಟಣದಲ್ಲಿ ಸಿಂದಿಯಾ ಸ್ಟೀಮ್ ನ್ಯಾವಿಗೇಶನ್‌ರವರಿಂದ 58 ಲಕ್ಷ ವೆಚ್ಚದಿಂದ ಕಟ್ಟಲ್ಪಟ್ಟಿರುವ ಹಡಗಿನ ಉದ್ಘಾಟನೆಯು ಮಾರ್ಚ್ 14ರ ದಿನ ಭಾರತದ ಮುಖ್ಯಮಂತ್ರಿ ಪಂಡಿತ ಜವಹರಲಾಲ ನೆಹರೂರವರಿಂದ ಪ್ರಾರಂಭವಾಗುವುದು. ಅಂದು ಅದು ತನ್ನ ಜಲಯಾತ್ರೆಯನ್ನಾರಂಭಿಸುವುದು. ವಿಶಾಖ ಪಟ್ಟಣದಲ್ಲಿ ಆಂಧ್ರ ಕಾಂಗ್ರೆಸ್ ಸಮಿತಿ ಮತ್ತು ಶಾಸನ ಸಭ್ಯರ ಸಭೆಯಲ್ಲಿ ನೆಹರೂರವರು ಮಾತಾಡಲಿದ್ದಾರೆ

### ಕೇಂದ್ರದ ಹೊಸ ತೆರಿಗೆಗಳು

ಪರದೇಶಿ ಕಂಪನಿಗಳು ಮೋಟಾರಕಾರ, ಶಿಗಾರ, ಶಿಗರೆಟ್ಸ್, ಟೀ, ಕಾಫಿ, ವನಸ್ಪತಿವಸ್ತು ಟೈರ್‌ಗಳ ಮೇಲೆ ಕೇಂದ್ರ ಸರಕಾರವು ತೆರಿಗೆಯನ್ನು ವಿಧಿಸಲು ನಿಶ್ಚಯಿಸಿದೆ. ಆದರೂ ಕಡಮೆ ಬಿದ್ದ ಇನ್ನು ಒಂದು ಕೋಟಿ ರೂಪಾಯಿಗಳನ್ನು ತುಂಬಲಾಗಲಿಲ್ಲ.

### ಕಾಶ್ಮೀರ

ಇಂಗ್ಲಂಡ ಅಮೇರಿಕೆಗಳು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೂಡಿಸಲು ಭಾರತದ ಮೇಲೆ ಎಲ್ಲಾ ತರದ ಒತ್ತಾಯ ಮಾಡಲು ಸಿದ್ಧವಿವೆಯೆಂದು ಒಂದು ವಾರ್ತಾ ಸಂಸ್ಥೆಯು ತಿಳಿಸುತ್ತದೆ.

—ಇಂಡಿಯಾ ಒಕ್ಕೂಟದ ಸೇರ್ಪಡೆಗೆ ಜುನಾಗಢ, ಮಂಗ್ರೋಲ, ಬಾಭರಿವಾಡ ಮುಂತಾದ ಕಾಠಿಯವಾಡ ಸಂಸ್ಥಾನಗಳು ಜನ ಮತದ ಮೂಲಕ ಒಪ್ಪಿದವು.

—ಕಳೆದವಾರ ಭಾರತದ ಸರ್ಕಾರದ ಸಂಸ್ಥಾನ ಖಾತೆಯ ಕಛೇರಿಯಲ್ಲಿ ಬೊಂಬಾಯಿ, ಮದ್ರಾಸ್ ಮಧ್ಯಪ್ರಾಂತಗಳ ಪ್ರಧಾನರು ಹೈದರಬಾದ್ ಗಡಿ ಪ್ರದೇಶಗಳಲ್ಲಿ ನಡೆದ ಘಟನೆಗಳನ್ನು ಸರ್ದಾರ ವಲ್ಲಭಭಾಯಿ ಪಟೇಲರ ಸಮ್ಮುಖದಲ್ಲಿ ಚರ್ಚಿಸಿದರು.

—29ನೆಯ ದಿನಾಂಕ ಬ್ರಿಟಿಷ್ ಸೈನಿಕರ ರೇಲುಗಾಡಿಗೆ ಕ್ರಾಂತಿಕಾರರು ಸಿಡಿಮದ್ದು ಹಾಕಿದ್ದರಿಂದ 20 ಸೈನಿಕರು ಸತ್ತರು.

—ಮಂಚೂರಿಯಾದಲ್ಲಿ ಕಮ್ಯೂನಿಸ್ಟ ಸೈನ್ಯದ ಪ್ರಗತಿಯಾಗುತ್ತಲಿದೆ. ಇಡಿ ಮಂಚೂರಿಯಾವು ಚೀನದ ಕೈಬಿಡುವ ಸಂಭವವಿದೆ.

### ಏಡೆಡ್ ಶಾಲೆಗಳವರ ಸಂಬಳ

#### ಸರ್ಕಾರದವರ ಸೂಚನೆ

ಸರ್ಕಾರದ ಮಾಧ್ಯಮಿಕ ಶಾಲೆಗಳಲ್ಲಿನ ವೇತನಗಳನ್ನು ಖಾಸಗಿ ವ್ಯವಸ್ಥಾಪಕರ ಮಾಧ್ಯಮಿಕ ಶಾಲೆಗಳಲ್ಲಿ ಜಾರಿಗೆ ತರಲು ಅಡ್ಡಿ ಇಲ್ಲ. ರಿವೈಸ್ಡ ಸ್ಕೇಲ್‌ನಂತೆ ಇಂಕ್ರಿಮೆಂಟ್ (ಸಂಬಳದಲ್ಲಿ ಹೆಚ್ಚಳ) ಕೊಟ್ಟದ್ದನ್ನು ಸರ್ಕಾರದವರು 1947ನೆಯ ಜೂನ್‌ದಿಂದ 2/3 ಭಾಗದ ಗ್ರಾಂಟು ಪರಿಹಾರ ಕೊಡುವರು.

## ಕರ್ನಾಟಕ ಏಕೀಕರಣ ಸಿದ್ಧಿಗಾಗಿ
## ೧ ಲಕ್ಷ ರೂಪಾಯಿ ನಿಧಿ ಬೇಕು!
### ಕರ್ನಾಟಕದ ಸಮಸ್ತ ಜನತೆಯಲ್ಲಿ
### ಕರ್ನಾಟಕ ಏಕೀಕರಣ ಮಹಾಸಮಿತಿಯ
### ಬಿನ್ನಹ.

ಭಾರತಕ್ಕೆ ಸ್ವಾತಂತ್ರ್ಯ ದೊರೆತರೂ ಕರ್ನಾಟಕಕ್ಕೆ ಆ ಸ್ವಾತಂತ್ರ್ಯ ಫಲದ ಪೂರ್ಣ ಸವಿಯನ್ನು ಉಣ್ಣುವ ಭಾಗ್ಯವು ಇನ್ನೂ ಒದಗಿ ಬಂದಿಲ್ಲ. ಏಕೆಂದರೆ ಹಲವು ಆಡಳಿತಗಳಲ್ಲಿ ಒಡೆದುಹೋದ ಕನ್ನಡ ನಾಡು ಇನ್ನೂ ಏಕೀಕೃತವಾಗಿಲ್ಲ. ಆ ಪೂರ್ಣ ಕರ್ನಾಟಕ ನಿರ್ಮಾಣಕ್ಕಾಗಿ ಕನ್ನಡಿಗರು ಈಗ ಹಗಲಿರುಳೂ ಎಚ್ಚರಿಕೆಯಿಂದ ದುಡಿಯಬೇಕಾಗಿದೆ.

ಭಾಷಾನ್ವಯ ಪ್ರಾಂತರಚನೆಯ ತತ್ವವನ್ನು ಭಾರತ ಸರಕಾರದವರು ಒಪ್ಪಿದ್ದು, ರಾಷ್ಟ್ರಪತಿ ರಾಜೇಂದ್ರಪ್ರಸಾದರೂ ಪಂಡಿತ ಜವಾಹರಲಾಲ ನೆಹರೂ ಇವರೇ ಮೊದಲಾದ ದೇಶದ ವರಿಷ್ಠರೂ, ದಿಲ್ಲಿಗೆ ತೆರಳಿದ ಕರ್ನಾಟಕ ಶಿಷ್ಟಮಂಡಲದವರಿಗೆ ಇದೇ ತಿಂಗಳು ಇತ್ತ ಆಶ್ವಾಸನದಿಂದ ನಮ್ಮ ಪ್ರಾಂತರಚನೆಗೆ ಇನ್ನು ವಿಲಂಬವಾಗುವದಿಲ್ಲವೆಂದು ತಿಳಿದು ಬಂದಿದೆ. ಪೂಜ್ಯ ಬಾಪೂಜಿಯವರು ಕರ್ನಾಟಕ ಏಕೀಕರಣವು ತಮಗೆ ಸದೈವ ಮಾನ್ಯವೂ ಪ್ರಿಯವೂ ಎಂದು ತಮ್ಮ ಕೊನೆಯ ಬಯಕೆಯನ್ನು ವ್ಯಕ್ತಮಾಡಿ ತೆರಳಿದರು. ಬರಲಿರುವ 2-3 ತಿಂಗಳುಗಳಲ್ಲಿಯೇ ಭಾರತದ ಭಾಗ್ಯವಿಧಾತನು ಕನ್ನಡ ನಾಡಿನ ಹಣೆಬರಹವನ್ನು ಬರೆಯಲಿದ್ದಾನೆ.

ಹೊಸ ಹೊಸ ಹೊಣೆಗಳು ಕ್ಷಣ ಕ್ಷಣಕ್ಕೂ ಬರತೊಡಗಿವೆ. ದಿಲ್ಲಿ, ಮುಂಬಯಿ, ಮದ್ರಾಸ, ಬೆಂಗಳೂರು ಮೊದಲಾದ ರಾಜಧಾನಿಗಳಿಗೆ ಕರ್ನಾಟಕದ ಮುಖಂಡರ ತೆರಪಿಲ್ಲದ ಭೆಟ್ಟಿಗಳು ಅವಶ್ಯಕವಾಗಿವೆ. ಪರಸ್ಪರ ಸ್ನೇಹದಿಂದ ಕರ್ನಾಟಕದ ಎಂಟೂ ಗಡಿಗಳನ್ನು ಭದ್ರವಾಗಿ ಕಾಯ್ದುಕೊಳ್ಳಬೇಕಾಗಿದೆ. ಎಲ್ಲ ಗಡಿಗಳಲ್ಲಿ ಶಾಖಾಕಾರ್ಯಾಲಯಗಳು ಉತ್ಸಾಹದಿಂದ ನಿತ್ಯಪ್ರಚಾರ ಕಾರ್ಯ ಮಾಡಬೇಕಾಗಿದೆ. ನೂರಾರು ಪ್ರಕಟನಗಳೂ ಕಿರುಹೊತ್ತಿಗೆಗಳೂ ಬೇಗನೆ ಅಚ್ಚಾಗಬೇಕಾಗಿದೆ. ಭಾರತದ ಇಂಗ್ಲಿಷ್ ಪತ್ರಿಕೆಗಳಲ್ಲಿ ಭರದಿಂದ ಪ್ರಚಾರಕಾರ್ಯ ನಡೆಯಬೇಕಾಗಿದೆ. ಈಗಾಗಲೇ ಒಳನಾಡಿನಲ್ಲಿ ಏಕೀಕರಣ ಸಂಘದ ಜಿಲ್ಲಾ ಶಾಖೆಗಳೂ ನಗರ ಶಾಖೆಗಳೂ ಕೆಲಸಮಾಡುತ್ತಿವೆಯಲ್ಲದೆ, ಪೂರ್ವ ಕರ್ನಾಟಕದಲ್ಲಿ ಆದವಾನಿ, ಆಲೂರ, ರಾಯದುರ್ಗ, ಅನಂತಪುರ, ಮಡಕಶಿರ, ಹಿಂದುಪುರ, ಪೆನೆಗೊಂಡೆ, ಹೊಸೂರು, ಕೊಲಮಂಗಲಗಳಲ್ಲಿಯೂ ಉತ್ತರ ಕರ್ನಾಟಕದಲ್ಲಿ ಸಾಂಗ್ಲಿ (ವಿಶ್ರಾಮಬಾಗ) ಕೊಲ್ಹಾಪುರಗಳಲ್ಲಿಯೂ ದಕ್ಷಿಣ ಕರ್ನಾಟಕದಲ್ಲಿ ಬೆಂಗಳೂರಿನಲ್ಲಿಯೂ ಶಾಖೆಗಳು ತಕ್ಕಮಟ್ಟಿಗೆ ಕೆಲಸ ಮಾಡುತ್ತಿವೆ. ಇನ್ನೂ ಹಲವು ಸ್ಥಳಗಳಲ್ಲಿ ಶಾಖೆಗಳನ್ನು ತೆರೆಯುವದಲ್ಲದೆ ಇದ್ದವುಗಳನ್ನು ಸುವ್ಯವಸ್ಥಿತಗಿ ಸಂಘಟಿಸಬೇಕಾಗಿದೆ. ದಿಲ್ಲಿಯಲ್ಲಿ ಆಗಾಗ ತಾತ್ಕಾಲಿಕ ಕಾರ್ಯಾಲಯವು ಕಾರ್ಯಸಾಗಿಸುತ್ತಿದ್ದು ಆ ಮಹಾರಾಜಧಾನಿಯಲ್ಲಂತೂ ಸುಸಜ್ಜಿತವಾದ ಶಾಖಾ ಕಾರ್ಯಾಲಯವನ್ನು ಹೇರಳ ವೆಚ್ಚದಿಂದ ಗುರಿ ಮುಟ್ಟುವವರೆಗೂ ನಡೆಸಿಕೊಂಡು ಬರಬೇಕಾಗಿದೆ. ನಾಡಿನ ಮೂಲೆಮೂಲೆಗಳಲ್ಲಿ ನೇತನದ ಪ್ರಚಾರಕರು ಹಾಗೂ ಮುಖಂಡರು ಸತತ ಸಂಚರಿಸಬೇಕಾಗಿದೆ. ವಿಲೀನವಾದ ಆಗುತ್ತಿರುವ ಸಂಸ್ಥಾನ ಪ್ರದೇಶಗಳಲ್ಲಿ ಏಕೀಕರಣ ಸಿದ್ಧಿಗಾಗಿ ವಾತಾವರಣವನ್ನು ಹದಗೊಳಿಸಬೇಕಾಗಿದೆ. ಎಲ್ಲ ಗಡಿಗಳಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿ ಕೋರ್ಟು, ಕಚೇರಿಗಳಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನವುಂಟಾಗುವಂತೆ ಕೂಡಲೇ ಮಾಡಬೇಕಾಗಿದೆ. ಒಟ್ಟಿನಲ್ಲಿ ಮಿಂಚಿನ ವೇಗದಿಂದ ಕಾರ್ಯವು ಒತ್ತರದಿಂದ ಸಾಗಬೇಕಾಗಿದೆ. ಇಷ್ಟೆಲ್ಲಾ ಒದಗಿ ಬರಬೇಕಾದರೆ ಕನಿಷ್ಠ 1 ಲಕ್ಷ ರೂಪಾಯಿ ಹಣವಿಲ್ಲದೆ ಗತಿಯಿಲ್ಲ.

ಇಂದಿನಿಂದ 1-2 ತಿಂಗಳಲ್ಲಿಯೇ 1 ಲಕ್ಷ ರೂಪಾಯಿ ನಿಧಿಯನ್ನು ಸಂಗ್ರಹಿಸಲು ಕರ್ನಾಟಕ ಏಕೀಕರಣ ಮಹಾಸಮಿತಿಯು ಕ್ರಿಯಾಸಮಿತಿಯೂ ದಿನಾಂಕ 13-2-48ರಲ್ಲಿ ಸೇರಿದ ಸಭೆಯಲ್ಲಿ ನಿರ್ಧರಿಸಿದೆ. ಈ ಕಾರ್ಯದಲ್ಲಿ ಸಮಸ್ತ ಜನತೆ ಪತ್ರಿಯ ಸಹಾನುಭೂತಿಯಿಂದ ಸಹಕರಿಸಬೇಕಾಗಿ ಈ ಮೂಲಕ ಬಿನ್ನವಿಸಿಕೊಳ್ಳುತ್ತೇವೆ. ಕನ್ನಡಿಗರು ಭಾರತಾಂತರ್ಗತವಾಗಿ ತಮ್ಮ ನಾಡು ಕಟ್ಟಿಕೊಳ್ಳುವ ಸುಮುಹೂರ್ತ ಬಂದಿದೆ. ಅವರ ದಾತೃತ್ವದ ಪರೀಕ್ಷೆಯ ಕಾಲ ಬಂದಿದೆ. ಮಹಾಜನರು ತ್ವರಿತ ಗತಿಯಿಂದ ನಿಧಿ ಸಂಗ್ರಹದ ಕಾರ್ಯವನ್ನು ಪೂರೈಸಿಕೊಡುವರೆಂದು ನಂಬಿದ್ದೇವೆ.

# ಬಾ ಪೆಣ್ಣೆ ಬಾ.

ಕರೆದವರು ಧಾ. ಮ. ಶ, ಸ್ವಾಮಿ

ಬಾ ಪೆಣ್ಣೆ ಬಾ ನೀಂ ಒಲಿದು ಬಾ  ಬಾ ಬೇಗ ಬಾ!!
ಬಾರದಿರೆ ತರುಣಸಾಹಿತಿಯೆದೆಯೊ ಒಲವೆ?
ಬಾಧೆಪಡುವದಿಟಂ ಇದನರಸಿ ಬಾ... ಬಾ ಪೆಣ್ಣೆ ಬಾ
ಎಳೆವನಿತೆ ಒಲು ಚಪಲೆ ಶ್ರಮವಿಲ್ಲನೀಂವಲಿಯೆ
ಶ್ರಮಿಸುವೆನು ಚಿರಕಾಲ ಮು-ಬಾಳಸುಗಮವೆಸಗೆ
ಭೋಗದಾಶೆಗೆ ಶಿಕ್ಷೆ ನಲುಗಬೇಂಬರದೆ;
ಬರಗಾಲ ಮಿದ್ದರುಂ ಜಗಕ್ಕೆಲ್ಲ,
ಬರಗಾಲಬರದಿರಬೇಕು ಭಾವಹೃದಯಕ್ಕೆ
ಇಷ್ಟೆಲ್ಲ ಬಂದ, ಕರೆವನಶ್ರು ಹುಡಿಗಳಿವಲ್ಲ
ಅಷ್ಟಾತ್ಮ ಉಳ್ಳವನ 'ಕರುಣೆ' ಇತಲದವೆ
ಇಷ್ಟವಿಲ್ಲವಾದರು 'ಒಲಿದು' ನೀಂಬರುವೆ ಪೆಣ್ಣೆ
ಬಾ ಪೆಣ್ಣೆ ಬಾ ... ನೀಂ ಒಲಿದು ಬಾ ಬಾ ಬೇಗ ಬಾ
ಬಾವನಿತೆ ಬಾ ನೀಂಬೇಗ ಬಾ ಒಳ್ಮೆಯುಂಟದು ನನ್ನೊ
ಳ್ ನೀಂಒಲಿದುಬಾ.

## ಮೈಲಾರ ದೇವಸ್ಥಾನದಲ್ಲಿ ಹರಿಜನರ ಪ್ರವೇಶ.

ಫೆಬ್ರುವರಿ 25ನೆಯ ದಿನಾಂಕ ಶ್ರೀ ಸೂಗೂರು ಕರಿಯಪ್ಪನವರು ತಮ್ಮ ಪತ್ನಿಯವರೊಂದಿಗೆ ಹರಿಜನರನ್ನು ಕೂಡಿಕೊಂಡು ಜಿಲ್ಲೆಯ ಸುಪ್ರಸಿದ್ಧ ದೇವಾಲಯಗಳಲ್ಲೊಂದು ಈ ಊರಿನ ಮೈಲಾರಲಿಂಗ ದೇವಸ್ಥಾನವನ್ನು ಪ್ರವೇಶಿಸಿ ಪೂಜಾಭಿಷೇಕಗಳನ್ನು ನಡೆಸಿದರು ದೇವಾಲಯದ ಧರ್ಮದರ್ಶಿಗಳು ಅವರನ್ನು ಆನಂದದಿಂದ ಬರಮಾಡಿಕೊಂಡರು

## ಹೊಳಲು

ಬಳ್ಳಾರಿ ವೀರಶೈವ ಕಲಾಶಾಲೆಯ ಕನ್ನಡ ಪ್ರಾಧ್ಯಾಪಕರಾದ ವಿದ್ವಾನ್ ಶ್ರೀ ನಾಗೇಶಶಾಸ್ತ್ರಿ ಸರ್ವದರ್ಶನ ತೀರ್ಥ ಅಧ್ಯಕ್ಷತೆಯಲ್ಲಿ ದಿನಾಂಕ 1-3—48ರಲ್ಲಿ ಈ ಗ್ರಾಮದ ಬಸವೇಶ್ವರ ವಾಚನಾಲಯದ ಉದ್ಘಾಟನವನ್ನು "ಗಮಕ ಕಲಾಸಿಧಿ" ಶ್ರೀ ಜೋಳದರಾಶಿ ದೊಡ್ಡನಗೌಡರು ಮಾಡಿದರು ಆ ಸಾಯಂಕಾಲ ಬಾನುಲಿಯ ಉದ್ಘಾಟನವು ಬಳ್ಳಾರಿಯ ಶ್ರೀ ಕೊ ಚನ್ನಬಸಪ್ಪನವರಿಂದಾಯಿತು.

ಶ್ರೀ ದೊಡ್ಡನಗೌಡರು ಹರಿಶ್ಚಂದ್ರ ಕಾವ್ಯದ ಕೆಲವು ಭಾಗಗಳನ್ನು ತಾವು ಬರೆದಿರುವ ಕೆಲವು ಪದ್ಯಗಳನ್ನು, ತತ್ವಗಳನ್ನು ಓದಿದರು.

ದಿನಾಂಕ 2-3-48ರಲ್ಲಿ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವನ್ನು ಹೊಸಪೇಟೆಯ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎ ಚನ್ನಬಸಪ್ಪನವರು ಉದ್ಘಾಟನ ಮಾಡಿದರು. ಹರಪನಹಳ್ಳಿ ವಿದ್ಯಾಧಿಕಾರಿಗಳಾದ ಶ್ರೀ ಎ ಶಾಂತವೀರಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. "ಗಮಕಕಲೆ" ಯನ್ನು ಉಪಾಧ್ಯಾಯರು ತಮ್ಮ ಶಾಲೆಗಳಲ್ಲಿ ಹೇಗೆ ಕಲಿಸಬೇಕೆಂಬುದನ್ನು ಕುರಿತು ಶ್ರೀ ದೊಡ್ಡನಗೌಡರು ಕೆಲವು ಸೂಚನೆಗಳನ್ನು ಕೊಟ್ಟರು. ಸ್ವತಂತ್ರ ಭಾರತದಲ್ಲಿ ಉಪಾಧ್ಯಾಯನ ಸ್ಥಾನವನ್ನು ಕುರಿತು ಶ್ರೀ ಚನ್ನಬಸಪ್ಪನವರು ಮಾತಾಡಿದರು.

ಶ್ರೀ ಹೊನ್ನಪ್ಪ ಬಣಗಾರ ಇವರು ತಾವು ರಚಿಸಿರುವ ಕೆಲವು ಪದ್ಯಗಳನ್ನು ಹಾಡುಗಳನ್ನು ಹೇಳಿದರು,

ಆ ಸಾಯಂಕಾಲ ಉಪಾಧ್ಯಾಯರ ಸಮಾವೇಶವು ಶ್ರೀ ಎ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ತಮ್ಮ ಸಂಬಳ, ಭತ್ಯ ಮೊದಲಾದ ವಿಷಯಗಳನ್ನೊಳಗೊಂಡ ಹಲವು ಗೊತ್ತುವಳಿಗಳು ಆದವು. ರಾತ್ರಿ ಹಳ್ಳಿಯ ಜನರಿಂದ ಕೋಲಾಟ, ಆವಣಿಗಳಾಗಿ ಯೋಗ್ಯರಾದವರಿಗೆ ಪದಕಗಳನ್ನು ಕೊಡಲಾಯಿತು.

## ಭಾರತ . ಹೈದರಾಬಾದ

ನಿಜಾಮರೊಡನೆ ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳಬೇಕಾದರೆ ಜವಾಬ್ದಾರ ಸರಕಾರವನ್ನು ಸ್ಥಾಪಿಸಿ ಜನಸಂಖ್ಯೆಗನುಗುಣವಾಗಿ ಮಂತ್ರಿವರ್ಗ ಮತ್ತು ಸರಕಾರಿ ಸ್ಥಾನಗಳಲ್ಲಿ ಪ್ರಾತಿನಿಧ್ಯವನ್ನು ಕೊಡಬೇಕು, ಇತ್ತೆಹಾದುಲ್ ಸಂಸ್ಥೆಯನ್ನು ವಿಸರ್ಜಿಸಿ ಸರಕಾರೀ ವಿರೋಧ ಸಂಸ್ಥೆಯೆಂದು ಸಾರಬೇಕು ಎಂದು ಭಾರತ ಸರ್ಕಾರವು ಹೈದರಾಬಾದ ನಿಯೋಗಕ್ಕೆ ತಿಳಿಸಿರುವುದಾಗಿ ಗೊತ್ತಾಗಿದೆ,

# The Rayalaseema Bank Ltd., H. O. Bellary.

)0(

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಏಳಿಗೆ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.<br>**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇದಲ್ಲದೆ ರಾಯಲಸೀಮೆಯ ಇತರ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% — ಎರಡು ವರ್ಷ 3½%

ಸೀಸನ್ ಡಿಪಾಜಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.

ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.

ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್.** ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

**ಬಿ. ವಿ. ಶೇಷಗಿರಿರಾವ್,** ಬಿ. ಕಾಂ.,
ಕಾರ್ಯದರ್ಶಿ.



# The Rayalaseema Confectionery Works, Bellary.

ದಿ ರಾಯಲಸೀಮ ಕನ್ಫೆಕ್ಷನರಿ ವರ್ಕ್ಸ್, ಬೆಂಗಳೂರು ರೋಡ್, ಬಳ್ಳಾರಿ.

**Reduced Rates.**

| | | | |
|---|---|---|---|
| First Quality | .... | .... | Rs. 28 0-0 |
| Second | .... | .... | Rs. 24 0 0 |
| Without essence | | .... | Rs. 21 0-0 |

Per Tin of 28 lbs Ex. Factory, Sales Tax Extra.

None to beat us in quality. Try and be convinced. Encourage the industries of these most backward tracts.

**ಇಳಿಸಿದ ಬೆಲೆ** **ಪೆಪ್ಪರಮಿಂಟು**

| | | |
|---|---|---|
| ಪ್ರಥಮ ವರ್ಗದ್ದು | .... | ರೂ 28—0—0 |
| ದ್ವಿತೀಯ „ | .... | 24—0—0 |
| ಎಸೆನ್ಸ್ ಇಲ್ಲದ್ದು | .... | 21—0—0 |

28 ಪೌಂಡಿನ ಟಿನ್ನಿನ ಫ್ಯಾಕ್ಟರಿ ಹೊರಗಿನ ಬೆಲೆ ಸೇಲ್ಸ್‌ಟ್ಯಾಕ್ಸ್ ಬೇರೆ. ಗುಣದಲ್ಲಿ ತಯಾರಿಕೆಯಲ್ಲಿ ನಾವು ಯಾರಿಗೂ ಕಡಿಮೆ ಇಲ್ಲ, ಒಂದು ಸಲ ಪರೀಕ್ಷಿಸಿದರೆ ಯಾವಾಗಲೂ ನಮ್ಮಲ್ಲೇ ಬರುವಿರಿ. ಬಹಳ ಹಿಂದುಳಿದ ನಮ್ಮ ಪ್ರದೇಶಗಳ ಕೈಗಾರಿಕೆಗಳನ್ನು ಪೋಷಿಸಿರಿ.

# "ಪ್ರಭಾತ"ದಲ್ಲಿ ೩ನೇ ವಾರ ★ ★

ಅಪೂರ್ವ

ಅಶೇಷ ಭಕ್ತಿರಸ

ಚಿತ್ರ

ಮಹಾತ್ಮ

## ಕಬೀರ್

ಮಾಮೂಲು ದರಗಳು

ಈ ಸುಸಂದರ್ಭ

ಕಳೆದುಕೊಳ್ಳ ಬೇಡಿರಿ.

ಮಹಾತ್ಮ ಕಬೀರ್

ಈ ಕಬೀರ ಚಿತ್ರದೊಂದಿಗೆ
ಅಪರೂಪವಾದ

ಪಂಡಿತ

ಜವಾಹರಲಾಲರ

ಕಾಶ್ಮೀರ ಸಂದರ್ಶನ

ಭಾರತ ಸೈನ್ಯಗಳ ವಿಮಾನ

ಪ್ರಯಾಣ ಈ ಎರಡು

ರೀಲುಗಳು ೫-೩-೪೮

ರಿಂದ ಒಂದು ವಾರದವರೆಗೆ

ಮಾತ್ರ

ಪ್ರದರ್ಶಿಸಲಾಗುವುದು.



# NAVA BHARAT BELLARY.

Reg No. M. 4746

ನವ ಭಾರತ ಬಳ್ಳಾರಿ.
(Nationalist Weekly)


| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri..................................................

..................................................

..................................................


Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್

121

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಸಂಪುಟ ೧೧ | ಸಂಚಿಕೆ ೧೦ | ಬಳ್ಳಾರಿ ಮಾರ್ಚ್ ೧೫ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## — ಕರ್ನಾಟಕ ಪ್ರಾಂತರಚನೆ —

## ಮುಖಂಡರ ಯಥಾಸ್ಥಿತಿಯ (Status Quo) ಸ್ವೀಕಾರ

## ಬಳ್ಳಾರಿ ಜಿಲ್ಲೆಯ ಇಬ್ಭಾಗಕ್ಕೆ ಹೆದ್ದಾರಿ.

(ಬಳ್ಳಾರಿ ಕನ್ನಡಿಗ).

ಕರ್ನಾಟಕ ಪ್ರಾಂತರಚನೆಯು ಆಂಧ್ರ ಪ್ರಾಂತ ರಚನೆಯೊಡನೆ ಆಗುವುದು ಅತ್ಯಂತಾವಶ್ಯಕವೆಂದು ಸೂಚಿಸಲು ಹೋದ ನಿಯೋಗ ಶಿಷ್ಟಮಂಡಳದವರು ಕಾಂಗ್ರೆಸ್ ಪರಿಷತ್ತಿಗೆ ಬಿನ್ನವತ್ತಳೆಯನ್ನು ಕೊಡಬೇಕಾದರೆ "ಬಳ್ಳಾರಿಯ ಕನ್ನಡಭಾಗಗಳು" ಎಂದು ಸೂಚಿಸಿ ಬಳ್ಳಾರಿ ಜಿಲ್ಲೆಯಲ್ಲಿ ತೆಲುಗು ಭಾಗಗಳಿವೆಯೆಂದು ಒಪ್ಪಿಕೊಂಡರು. ಅಲ್ಲದೆ ಕಳೆದ ತಿಂಗಳ 26ನೆಯ ತಾರೀಕು ದೆಹಲಿಯಲ್ಲಿ ಬಾಬುರಾಜೇಂದ್ರ ಪ್ರಸಾದರ ಸಮ್ಮುಖದಲ್ಲಿ ಶ್ರೀ ದಿವಾಕರರ ದೃಷ್ಟಿ ಸ್ವೀಕೃತವಾದ ಮೇಲಂತೂ ಈ ಪರಿಸ್ಥಿತಿಯನ್ನೇ ಪ್ರಾಂತನಿರ್ಮಾಣಕಾಲಕ್ಕೊಪ್ಪಿಕೊಂಡು ಸರಹದ್ದು ಗಡಿ ನಿರ್ಣಯ ಸಮಿತಿಗೆ ವಾದಾತ್ಮಕ ಪ್ರದೇಶಗಳ ವಿಷಯವನ್ನು ಒಪ್ಪಿಸುವುದು ಸಿದ್ಧವಾದಂತಾಗಿದೆ.

ಕರ್ನಾಟಕ ಪ್ರಾಂತ ನಿರ್ಮಾಣವು ಆಂಧ್ರದಷ್ಟು ಸುಲಭವಲ್ಲವೆಂಬ ಕಾರಣವೋ ಆತುರವಾಗಿ ಬಂದಷ್ಟನ್ನು ಸೆಳೆದುಕೊಂಡು ಪ್ರಾಂತವನ್ನು ರಚಿಸಿಬಿಡೋಣವೆಂಬ ಉದ್ದೇಶದಿಂದಲೋ, ಪ್ರಾರಂಭದಲ್ಲಿಯೇ ಬಲಿಷ್ಠರೊಡನೆ ಹೋರಾಟವು ಅನಗತ್ಯವೆನ್ನಿಸುವ ಔಚಿತ್ಯದಿಂದಲೋ ನಮ್ಮ ಧುರೀಣರು ಇರುವ ಕಾಂಗ್ರೆಸ್ ಪ್ರಾಂತಗಳ ರಚನೆಯನ್ನೊಪ್ಪಿ ತಾತ್ಕಾಲಿಕವಾಗಿ ಯಥಾಸ್ಥಿತಿಗೆ (Status Quo) ಸಹಿಹಾಕಿರುವರೆಂದು ಗೊತ್ತಾಗಿದೆ. ಮುಖಂಡರ ಯಾವ ಉದ್ದೇಶಮೂಲಗಳನ್ನೂ ನಾವು ಚರ್ಚಿಸುವ ಗೋಜಿಗೆ ಹೋಗುವುದಿಲ್ಲ. ಆದರೆ ಇದರಿಂದಾಗುವ ಪರಿಣಾಮಗಳನ್ನು ಮಾತ್ರ ಇಲ್ಲಿ ವಿವೇಚಿಸುವುದು ಅನೌಚಿತ್ಯವಾಗಲಾರದು.

'Give him an inch, he will take an ell' ಎಂಬ ಇಂಗ್ಲೀಷ್ ಗಾದೆಯು ನಮಗೆ ಜ್ಞಾಪಕಕ್ಕೆ ಬಂದ. ಜಿಲ್ಲೆಯೆಲ್ಲಾ ಅಲ್ಲದಿದ್ದರೂ ಆಂಧ್ರರ ಸ್ವಾಧೀನಕ್ಕೆ ಆ ಮೂರು ತಾಲೂಕುಗಳು ಅಲ್ಪಕಾಲ ಸೇರುವುದೆಂದರೂ ಅಲ್ಲಿ ಕೋಲಾಹಲವೇ ನಡೆಯುವದು. ಅವರ ಪ್ರಚಾರಸಾಧನಗಳು, ಪ್ರಚಾರಕರು ಕೌಶಲ್ಯ, ಪ್ರೋತ್ಸಾಹನೆಗಾಗಿ ಹೆಚ್ಚಿಸಲ್ಪಡುವ ಸಂಪತ್ತಿಯನ್ನು ಎಲ್ಲವರು ಬಲ್ಲರು. ಬಳ್ಳಾರಿ ಜಿಲ್ಲೆಯ ಪಶ್ಚಿಮದಲ್ಲಿ ರಾಣೆಬೆನ್ನೂರು ತಾಲೂಕಿಗೆ ಹೊಂದಿಕೊಂಡಿರುವ ಹರಪನಹಳ್ಳಿಯಲ್ಲೂ ಅನೇಕ ವರ್ಷ ತಪ್ಪಿಸಿಕೊಳ್ಳದೆ ತೆಲುಗು ಶಾಲೆಗಳನ್ನನುಭವಿಸಿದರು. ನಮ್ಮ ಹಿರಿಯರೆಲ್ಲಾ ತೆಲುಗು ಕಲಿತರು. ಜಿಲ್ಲೆಯನ್ನೆಲ್ಲಾ ಯಾವ ಅಧಿಕಾರವೂ ಇಲ್ಲದೆ ತೆಲುಗುಮಯ ಮಾಡಿದ್ದರು. ಇನ್ನು ಅಧಿಕಾರ ಬಂದಮೇಲೆ ಕೇಳಬೇಕೆ?

1921ರಲ್ಲಿ ಗೋಕ್ಲರ ಮಹಾಶಯರಧ್ಯಕ್ಷತೆಯಲ್ಲಿ ಕೂಡಿದ ಪಂಚಾಯಿತಿಯು ಮೂರು ತಾಲೂಕುಗಳನ್ನು ಆಂಧ್ರರಿಗೆ ಅನ್ನು ಕರ್ನಾಟಕಕ್ಕೆಂತ ಅನ್ಯಾಯ ತೀರ್ಪು ಕೊಟ್ಟರು. ಪಂಚಾಯ್ತಿಯ ಲ್ಲೊಬ್ಬರಾದರೂ, ಬಳ್ಳಾರಿ ಜಿಲ್ಲೆಯವರಲ್ಲ. ಸದರಿ ಮೂರು ತಾಲೂಕುಗಳ ಪತ್ತು ಹಳ್ಳಿಗಳಲ್ಲಾದರೂ ಸಂಚರಿಸಲಿಲ್ಲಾ, ಜನಾಭಿಪ್ರಾಯ ಕೇಳಲಿಲ್ಲ. 1911 ನೇ ವರ್ಷದಲ್ಲಿ ತೆಗೆದ ಜನಗಣನೆಯ ಆಧಾರದ ಮೇಲೆ ತಮ್ಮ ತೀರ್ಪುಕೊಟ್ಟ

ರು. ಇಂಥಾ ಅನ್ಯಾಯ ತೀರ್ಪನ್ನು ಜಿಲ್ಲೆಯವರ್‍ಯಾರೂ ಒಪ್ಪಿರಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರಾದರೂ ಕನ್ನಡಾಂಧ್ರ ಭೇದವಿಲ್ಲದೆ ಜಿಲ್ಲೆಯಲ್ಲೆಲ್ಲಾ ಕಾರ್ಯಸಾಗಿಸಿದ್ದರು.

ಕನ್ನಡ ಹಳ್ಳಿ-ಕನ್ನಡ ಜನರು-ಕನ್ನಡ ಸಂಸ್ಕೃತಿಯನ್ನುಳ್ಳ ಜಿಲ್ಲೆಯ ಅತ್ಯಂತ ಸಂಪದ್ಯುಕ್ತ ಭಾಗವು ಸದ್ಯಕ್ಕಾದರೂ ಆಂಧ್ರರದೆಂದು ಒಪ್ಪಿಕೊಳ್ಳುವುದರಿಂದ ಅವರ ಕಪಿಮುಷ್ಟಿಗೆ ಬಿಟ್ಟುಕೊಟ್ಟಂತಾಯಿತೆಂದು ಕನ್ನಡಿಗರಿಗನಿಸಹತ್ತಿದೆ. ಪ್ರಪಂಚದ ರಾಜಕೀಯ ಇತಿಹಾಸದಲ್ಲಿ ಪ್ರಾರಂಭದಲ್ಲಾಗುವ ತಾತ್ಕಾಲಿಕ ಸಂಧಿ (Truce) ಗಳೇ ಶಾಶ್ವತ ರಾಜಿಗೆ ಅಡಿಗಲ್ಲನ್ನು ಹಾಕುವವೆಂದು ಎಲ್ಲ ತಜ್ಞರಿಗೂ ತಿಳಿದ ಮಾತಾಗಿದೆ.

ಮೂರು ತಾಲೂಕುಗಳಲ್ಲಿನ ಅಧಿಕ ಸಂಖ್ಯಾಕರಾದ ಕನ್ನಡಿಗರು ತಮ್ಮ ಸಂಸ್ಕೃತಿಯ ಮೇಲಿನ ಭವಿಷ್ಯದಾಳಿಯನ್ನೂಹಿಸಿ ಭಯಭ್ರಾಂತರಾಗಿದ್ದಾರೆ. ಕೇಳ್ಕರರ ಅನ್ಯಾಯದ ತೀರ್ಪನ್ನೇ ತಮ್ಮ ಆಧಾರವಾಗಿಟ್ಟು ನಮ್ಮ ಧುರೀಣರು ಬಳ್ಳಾರಿ ಜಿಲ್ಲೆಗೆ ತುಂಬಲಾರದಷ್ಟು ಅನ್ಯಾಯ ಮಾಡಿದರೆಂದೂ ಇದನ್ನು ಪ್ರತಿಭಟಿಸಬೇಕೆಂದೂ ನಿಶ್ಚಯಿಸಿದ್ದಾರೆ.

---

## ನಾರಾಯಣದೇವರಕೆರೆಯಲ್ಲಿ ಇತ್ತೆಹಾದುಲ್ ಪುಂಡರ ಅಪಪ್ರಚಾರ

(ನಮ್ಮ ಹೊಸಪೇಟೆ ಸುದ್ದಿಗಾರರಿಂದ)

ಇಲ್ಲಿ 8ನೆಯ ತಾ॥ ರಾತ್ರಿ ಇತ್ತೆಹಾದುಲ ಪುಂಡರು ಕೇರಿನ ಗಾಲಿಗೆ ಉರ್ದುವಿನಲ್ಲಿ ಬರೆದ ಪ್ರಕಟನೆ ಅಂಟಿಸಿರುತ್ತಾರೆ. ಹಿಂದೂಗಳನ್ನು ಹೊಡೆದು ಮುಸಲ್ಮಾನರನ್ನಾಗಿ ಮಾಡಲು ಧರ್ಮಯುದ್ಧ ಹೂಡಲು ಹೈದರಾಬಾದು ಮುಸಲ್ಮಾನರ ರಾಜ್ಯ ಸಂರಕ್ಷಿಸಲು ಮುಸಲ್ಮಾನರಿಗೆ ಪ್ರೇರೇಪಣೆ ಇತ್ತು. ಈ ವಿಷಯ ತಿಳಿದು ಹೊಸಪೇಟೆಯ ಪೋಲೀಸರು ಸ್ಥಾನಿಕ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಹೋಗಿ ಅಲ್ಲಿಯ ಮುಖ್ಯರಿಗೆಲ್ಲಾ ಧೈರ್ಯ ಹೇಳಿದರು. ಅಲ್ಲಿಯ ಜನರು ಪುಂಡರನ್ನು ಪ್ರತಿಭಟಿಸಲು ಸಿದ್ಧರಿದ್ದು ಶಸ್ತ್ರಗಳನ್ನೊದಗಿಸಲು ಕೇಳಿಕೊಂಡರು.

## ಕಲವಾಳ

ಕರ್ನಾಟಕ ಏಕೀಕರಣ ಸಂಘದ ಕಾರ್ಯಕರ್ತರಾದ ಶ್ರೀ ಶಿವದೆ ಶಾಮಯ್ಯನವರ ಅಧ್ಯಕ್ಷತೆಯಲ್ಲಿ ಹರಿಜನರು, ಹಳ್ಳಿಗರಿಂದ ಕೂಡಿದ ಪಂಚಕಲಶ ಮೆರವಣಿಗೆಯಲ್ಲಿ ಮಹಾತ್ಮ ಗಾಂಧೀಯವರ ಭಾವಚಿತ್ರವು ತಳಿರು ತೋರಣಗಳಿಂದಲಂಕೃತ ಬೀದಿಗಳಲ್ಲಿ ಕೊಂಡೊಯ್ಯಲಾಯಿತು. ನಂತರ ರಾಷ್ಟ್ರಧ್ವಜದ ಪೂಜೆ ವಂದನೆ ಆರೋಹಣವಾಯಿತು. ಶ್ರೀ ನೀಲಪ್ಪ ಇಚ್ಚಂಗಿಯವರು ಹರಿಜನರ ಸಮಸ್ಯೆ, ಶಾ. ಹುಚ್ಚರಾಯರು ಗ್ರಾಮಾಭಿವೃದ್ಧಿ, ಐಕ್ಯತೆ, ರುದ್ರಪ್ಪ ಶಿವಾರ್ಪುರರು ಬಸವೇಶ್ವರ ಗಾಂಧೀಜಿ ತತ್ವದ ಮೇಲೆ ಮಾತಾಡಿದನಂತರ ಅಧ್ಯಕ್ಷರು ಸ್ಫೂರ್ತಿದಾಯಕವಾಗಿ ಸದ್ಯದ ಪರಿಸ್ಥಿತಿ ರಾಜಕೀಯ ವ್ಯವಹಾರ ಸಂಡೂರು ರಾಜರಂಥವರ ಹಟಮಾರಿತನದ ಮೇಲೆ ಚನ್ನಾಗಿ ಮಾತನಾಡಿದರು.

(ಎಸ್. ಎಸ್. ಗುರಣ್ಣನವರ ಉತ್ಸವ ಕಾರ್ಯದರ್ಶಿ)

**ಹಾಗಲೂರು:—**

ಮಹಾತ್ಮ ಗಾಂಧೀಜಿ ನಿಧನ ವಾರ್ತೆಯಿಂದ ಈ ಹಳ್ಳಿಗರು ಅತ್ಯಂತ ದುಃಖಿತರಾಗಿ ಸಂತಾಪ ಸಭೆಯನ್ನು ನೆರವೇರಿಸಿ ಗಾಂಧೀಜಿಗೆ ಯೋಗ್ಯ ಸ್ಮಾರಕವನ್ನು ನಿರ್ಮಿಸಲು ನಿಶ್ಚಯಿಸಿದರು. ದೇವಸ್ಥಾನವನ್ನು ಕಟ್ಟಬೇಕೊ ಇಲ್ಲವೇ ಗಾಂಧೀ ಪ್ರಾರ್ಥನಾಮಂದಿರವನ್ನು ಕಟ್ಟಬೇಕೊ ಎಂಬುದು ಇನ್ನೂ ಇತ್ಯರ್ಥವಾಗಿಲ್ಲ. ಶ್ರೀ ಪಾಲಾಕ್ಷರೆಡ್ಡಿ ಮತ್ತು ಇತರ ಮಿತ್ರರು ಈ ಕಾರ್ಯದಲ್ಲಿ ತೊಡಗಿದ್ದಾರೆ.

## ಉದ್ಯೋಗಕ್ಕಾಗಿ ಬಂದವರನ್ನು ಮಾತಾಡಿಸುವ ಯಂತ್ರ

ಅಮೇರಿಕಾದಲ್ಲಿ ಬಹುಮಟ್ಟಿಗೆ ಎಲ್ಲಾ ಕಾರ್ಯವೂ ಯಂತ್ರಗಳಿಂದಲೇ ನಡೆಯುತ್ತದೆ. ಕೆಲಸವಿಲ್ಲದವರು ಕೆಲಸಗಳಿಗಾಗಿ ಬಂದರೆ ಕೆಲಸಕೊಡುವ ಧಣಿಯು ಹೊರಗೆ ಬಂದು ಯಂತ್ರವಿಟ್ಟಿರುವನು. ತಾನು ಕೇಳಬೇಕಾದ ಪ್ರಶ್ನೆಗಳನ್ನೆಲ್ಲಾ ಯಂತ್ರವೇ ಕೇಳಿಬಿಡುತ್ತದೆ. ಪ್ರಶ್ನೆಗಳಿಗೆ ಉತ್ತರಕೊಡುವುದರಲ್ಲಿ ಎಷ್ಟು ಸಮಯವಾಯಿತು? ಕೇಳುವ ವ್ಯಕ್ತಿ ಸ್ತ್ರೀಯೋ ಇರಲಿ ಪುರುಷನೇ ಇರಲಿ ವಾಚಾಳತ್ವ, ವಾಗ್ವೈಖರಿ ಮತ್ತು ಇತರ ವ್ಯಕ್ತಿಗುಣ ವಿಶೇಷಗಳನ್ನು ಸಹ ಯಂತ್ರವು ಸೂಚಿಸಲು ಯೋಗ್ಯವಿದೆ. ಯಂತ್ರಯುಗದ ಆಶ್ಚರ್ಯ ಸಂಶೋಧನೆಗಳಲ್ಲಿ ಇದೊಂದು.

THE NAVA BHARAT
ನವಭಾರತ
ಸಂಪಾದಕ-ಟಿ.ಬಿ.ಕೇಶವರಾವ್
ಸೋಮವಾರ 15 ಮಾರ್ಚ್ 1948.

## ಹೈದರಾಬಾದು ಪುಂಡರು ಯಾರು?
### ಗಡಿಹಳ್ಳಿಗರ ಸಂರಕ್ಷಣೆ.

ಹೈದರಾಬಾದಿನಲ್ಲಿ ಇತ್ತೆಹಾದುಲ್ ಮುಸ್ಲಿಮೀನ್ ಎಂಬ ಸಂಸ್ಥೆಯು ರಜಾಕಾರ ಎಂಬ ಹೆಸರಿನ ಸ್ವಯಂಸೇವಕರಿರುವರು. ಇವರಿಗೆಲ್ಲಾ ಶಸ್ತ್ರಾಸ್ತ್ರಗಳನ್ನೊದಗಿಸಲಾಗಿದೆ ಇವರಲ್ಲದೆ ಸಿದ್ದೀಕ್ ಎಂಬಾತನು ತಾನು ಚನ್ನಬಸವೇಶ್ವರನ ಅವತಾರವೆಂದೂ ಲಿಂಗಾಯ್ತರೂ ಶಿವಭಕ್ತರೂ ಮುಸಲ್ಮಾನರಾಗಬೇಕೆಂದೂ ಇದಕ್ಕಾಗಿ ಧರ್ಮ ಯುದ್ಧವನ್ನು ತಾನು ಹೂಡಿರುವುದಾಗಿಯೂ ಹೇಳಿ ತನ್ನ ಸಾವಿರಾರು ಅನುಯಾಯಿಗಳೊಂದಿಗೆ ಪುಂಡಾಟ ಹೂಡಿರುತ್ತಾನೆ. ಇತ್ತೆಹಾದದವರೂ, ಈ ಸಿದ್ದೀಕ್ ಚನ್ನಬಸವೇಶ್ವರನೂ ಭಾರತದ ಗಡಿಯ ಮೇಲೆ ಬಂದು ಕೊಲೆ, ಸುಲಿಗೆ, ಅತ್ಯಾಚಾರಗಳನ್ನು ನಡೆಸಿರುವರು ಹೈದರಾಬಾದ್ ಪ್ರದೇಶದ ಗಡಿಯಲ್ಲಿ ಇವರ ಕವಾಯ್ತು ಚಟುವಟಿಕೆಗಳು ಅವ್ಯಾಹತವಾಗಿ ನಡೆದಿವೆ,

ನದೀಹಾಳಗಿ ದಾಳಿಯನಂತರ ಆದವಾನಿ ಡೆಪ್ಯೂಟಿ ಸೂಪರೆಂಟರು, ರಾಯಚೂರು ಪೋಲೀಸರೊಂದಿಗೆ ಮಾಸ್ಕಿ ಭಾಗದಲ್ಲಿ ಸಂಚರಿಸಿ ಬಂದರು. ಇವರ ಕಣ್ಣೆದುರಿಗೇ ರಜಾಕಾರ ಮತ್ತು ಇತ್ತೆಹಾದ ಸ್ವಯಂಸೇವಕರು ಸಮವಸ್ತ್ರಗಳೊಂದಿಗೆ ಪ್ರಾರ್ಥನೆ ನಡೆಸುವುದೂ ಕವಾಯ್ತು ಮಾಡುವುದೂ ನಡೆಯಿತು, ಹೈದರಾಬಾದ ಪೋಲೀಸ್ ಮತ್ತು ಮಿಲಿಟರಿಯವರು ಇವರಿಗೆ ಅಪ್ರತ್ಯಕ್ಷ ರೀತಿಯಿಂದ ಸಹಾಯ ಒದಗಿಸುತ್ತಿರಬೇಕು ಇಲ್ಲವೇ ಪುಂಡಾಟಿಕೆಯನ್ನು ತಡೆಯಲು ಅಶಕ್ತರಾದ ನಪುಂಸಕರಿರಬೇಕು.

ಹೈದರಾಬಾದ್ ನಿಜಾಮರು ದೇಶವನ್ನು ವಿಚ್ಛಿದ್ರಗೊಳಿಸುವ ಮತ್ತು ಹಿಂದೂ ಜಾತಿಯನ್ನು ನಿರ್ಮೂಲಗೊಳಿಸುವ ಸಂಗಡಿಗರಿಗೆಲ್ಲಾ ಪ್ರೋತ್ಸಾಹನ ಕೊಟ್ಟು ಈಗ ಅವರ ಪುಂಡಾಟಿಕೆ ತಡೆಯದೆ ನಿಸ್ಸಹಾಯರಾಗಿ ನೋಡುತ್ತಿರುವರು, ನಿಶ್ಶಸ್ತ್ರರಾದ ಪ್ರಜೆಗಳು ಸಶಸ್ತ್ರ ಪುಂಡರೊಂದಿಗೆ ಹೇಗೆ ಹೋರಾಡಬೇಕೋ ತಿಳಿಯದ ಸಮಸ್ಯೆಯಾಗಿದೆ. ಹೀಗೆ ಹಿಂದೂಗಳು ದಿಕ್ಕು ಕಾಣದವರಾಗಿದ್ದಾರೆ ಅಗ್ನಿ ಶಸ್ತ್ರಗಳಿಗಾಗಿ ಲೈಸನ್ಸ್ ಪಡೆದವರು ಎಲ್ಲಿಂದಲಾದರೂ ಎಷ್ಟು ಬೆಲೆಗಾದರೂ ಶಸ್ತ್ರಗಳನ್ನು ಕೊಳ್ಳುವುದು ಉಚಿತವೆಂದು ತೋರುತ್ತದೆ, ನಮ್ಮ ಗಡಿ ಪ್ರದೇಶದ ಹಳ್ಳಿಗಳಲ್ಲಿ ಕನಿಷ್ಟಕ್ಕೆ ಊರಿಗೆ 3-4 ಬಂದೂಕಗಳಾದರೂ ಇಲ್ಲದಿದ್ದರೆ ಹೇಗೆ? ಈ ಹಳ್ಳಿಗರಿಗೆ ಶಕ್ಯ ಸಹಾಯ ಮಾಡಬೇಕಾದುದು ಸರ್ಕಾರದ ಕರ್ತವ್ಯ.

ಸರ್ಕಾರವು ತನ್ನ ಪ್ರಜೆಗಳ ಮಾನ, ಪ್ರಾಣ, ಆಸ್ತಿಗಳ ಸಂರಕ್ಷಣೆ ಮಾಡಬೇಕು, ಪರಕೀಯರ ದಾಳಿಯನ್ನು ತಡೆಯಲಾಗದಿದ್ದರೆ ನೊಂದವರಿಗೆ ತಕ್ಕ ಪರಿಹಾರ ಕೊಡಿಸಬೇಕು ಇಲ್ಲವೇ ಕೊಡಬೇಕು. ಈ ವಿಷಯದಲ್ಲಿ ಪ್ರಜೆಗಳೂ ಕೂಡ ಕರ್ತವ್ಯ ಶೂನ್ಯರಾಗಬಾರದು, ಭಯಭ್ರಾಂತರಾಗಿ ಊರು ಬಿಟ್ಟು ಓಡಿಹೋಗುವುದು ತರವಲ್ಲ ಪುಂಡರು ದಾಳಿಮಾಡಿದಾಗ, ಅತ್ಯಾಚಾರ ನಡೆಸಿದಾಗ ಕೈಗೆಸಿಕ್ಕ ಆಯುಧದಿಂದ ಪುಂಡರನ್ನು ಪ್ರತಿಭಟಿಸಬೇಕು. ಗಾಂಧೀಜಿಯವರು ಹೇಳಿದಂತೆ ಅಹಿಂಸೆಯಿಂದ ಶಕ್ಯವಿಲ್ಲವಾದರೆ ಹಿಂಸೆಯಿಂದಲಾದರೂ ಸ್ವಯಂರಕ್ಷಣೆಮಾಡಿಕೊಂಡರೆ ಅದು ಶೌರ್ಯದ ಲಕ್ಷಣವೆನಿಸುತ್ತದೆ. ಪೂರ್ವದ ಪಾಳೆಗಾರರ ಕಾಲದಲ್ಲಿ ಗ್ರಾಮಪ್ರದೇಶಗಳಲ್ಲಿ ಅತ್ಯಾಚಾರಗಳನ್ನು ತಡೆಯಲು ಕೋಟೆ, ಕೊತ್ತಲಗಳನ್ನು ಕಟ್ಟಿಕೊಂಡು ಹೋರಾಟ ಸಾಗಿಸುತ್ತಿದ್ದರು, ಈಗ ಅವಾವುವೂ ಇಲ್ಲದೆ ಆಧುನಿಕ ರೀತಿಯಿಂದ ಸಂರಕ್ಷಣೆ ಮಾಡಿಕೊಳ್ಳುವುದೊಂದೇ ಮಾರ್ಗ.

---

—ಬೆಜವಾಡ ನಗರವನ್ನು "ವಿಜಯವಾಡ" ಎಂದು ಸಂಬೋಧಿಸಲು ಮದ್ರಾಸ್ ಸರ್ಕಾರವು ಅನುಮತಿಸಿದೆ.

- ಈವಾರ ಬರ್ಮಾದಿಂದ ಮದ್ರಾಸಿಗೆ 3387 ಟನ್‌ನಷ್ಟು ಅಕ್ಕಿಯು ಬಂದಿದೆ. ಇದನ್ನು ಕೇಂದ್ರ ಸರ್ಕಾರದ ಸಂಗ್ರಹಕ್ಕೆ ಸೇರಿಸಲಾಗಿದೆ.

## ಮಹಾತ್ಮ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ

### ಸಹಾಯ ಸಲ್ಲಿಸುವುದು ಪ್ರತಿಯೊಬ್ಬನ ಕರ್ತವ್ಯ- ನಿಧಿಕಾರ್ಯದರ್ಶಿಗಳ ಹೇಳಿಕೆ.

ಮಹಾತ್ಮ ಗಾಂಧಿಯವರು ಜೀವಿಸಿ, ಅದಕ್ಕಾಗಿಯೇ ಮರಣಹೊಂದಿದ ಆದರ್ಶಗಳಿಗೆ ಒಂದು ಮೂರ್ತಸ್ವರೂಪ ಕೊಡಲು ಇಡೀ ರಾಷ್ಟ್ರವೇ ಒಮ್ಮತದಿಂದ ಮಾಡಲು ಅವಕಾಶ ಸಿಗಬೇಕೆಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಪ್ರಾರಂಭಿಸಲಾಗಿದೆ. ಅವರ ಆ ಆದರ್ಶಗಳಿಗೆ ಹೊಂದಿಕೊಂಡು ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದಷ್ಟೂ ಅವರ ಸ್ಮರಣಾರ್ಥ ನಾವು ಸಲ್ಲಿಸುವ ಶ್ರದ್ಧಾಂಜಲಿಯು ನಿಜವಾದದ್ದಾಗುವದು. ಆ ಆದರ್ಶಗಳು ಎಲ್ಲ ಧರ್ಮ, ಜಾತಿ ಇಲ್ಲವೇ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ ನಿಂತಿವೆ. ಆದುದರಿಂದ ಈ ನಿಧಿಯ ಉದ್ದೇಶವನ್ನು ಈಡೇರಿಸುವದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಾಗಿದೆಯೆಂದು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ಪ್ರಕಟನಾಕಾರ್ಯದರ್ಶಿಗಳು ಬರೆದಿದ್ದಾರೆ. ಅವರಿನ್ನೂ ಬರೆದುದೇನೆಂದರೆ-

ಈ ನಿಧಿಗೆ ಪ್ರತಿಯೊಬ್ಬನೂ ತನ್ನ ಹತ್ತು ದಿನದ ಸಂಬಳವನ್ನು ಸಲ್ಲಿಸಬೇಕೆಂದು ರಾಷ್ಟ್ರಪತಿಗಳು ಹಾಗೂ ಮುಖ್ಯ ಮಂತ್ರಿಗಳೂ ಅರಿಕೆ ಮಾಡಿಕೊಂಡಿದ್ದಾರೆ. ಧನಿಕರು ಹತ್ತು ದಿನದ ಉತ್ಪನ್ನವನ್ನೇ ಲಕ್ಷದಲ್ಲಿ ಇಟ್ಟುಕೊಳ್ಳಬಾರದು. ಅಷ್ಟು ಕೊಡಲಾಗದಿದ್ದರು ಶಕ್ಯವಾದುದನ್ನು ಕೊಡಬೇಕು. ಅದನ್ನು ಒಮ್ಮೆಲೆ ಅಥವಾ ಕಂತದಂತೆ ಕೊಡಬಹುದು. ಬಡವನ ಒಂದು ಪೈ ಕೂಡ ಉಪಯೋಗ ಬೀಳುವದು.

ಕೇಂದ್ರ ಹಾಗೂ ಕೆಲವು ಪ್ರಾಂತಿಕ ಸಮಿತಿಗಳಿಗೆ ಈಗಾಗಲೇ ಹಣವು ಬರಹತ್ತಿದೆ. ಜನರು ತಮ್ಮ ದೇಣಿಗೆಯನ್ನು ಸಮಿತಿಗಳಿಗಾಗಲೀ ಇಲ್ಲವೇ ಕೆಲವು ಅಧಿಕೃತ ಬ್ಯಾಂಕುಗಳಿಗೆ (ಪಂಜಾಬ ನ್ಯಾಶನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್, ಭಾರತ ಬ್ಯಾಂಕ್) ಕಳಿಸಿದರೆ ಸ್ಮಾರಕ ಸಮಿತಿಗಳ ಕೆಲಸ ಹಗುರಾಗುವದು. ಯಾವನೇ ಅನಧಿಕೃತ ಮನುಷ್ಯನ ಕೈಯಲ್ಲಿ ಏನೂ ಕೊಡಬಾರದು. ಕೂಡಿದ ನಿಧಿಯನ್ನು ಪ್ರಾಂತ ಹಾಗೂ ಸಂಸ್ಥಾನಗಳಲ್ಲಿಯೇ ಖರ್ಚು ಮಾಡುವದರಿಂದ ಮಹಾತ್ಮರ ಹೆಸರಿನಲ್ಲಿ ಮತ್ತಾವ ನಿಧಿಯನ್ನೂ ಎತ್ತಬಾರದು.

ಈ ನಿಧಿಯ ಯಶಸ್ಸಿನ ಮೇಲೆ ಪ್ರಾರಂಭಿಸಬೇಕೆಂದಿರುವ ಸಂಸ್ಥೆಗೆ ಮಹಾತ್ಮರ ವಿಚಾರ ಆದರ್ಶಗಳನ್ನು ಪ್ರಚಾರ ಮಾಡುವದೇ ಉದ್ದೇಶ ಇದಕ್ಕೆ ಒಂದು ದೊಡ್ಡ ವಿಶಾಲ ಪ್ರಾತಿನಿಧ್ಯವಿರುವಂತೆ ಹೇಗೆ ಮಾಡಬೇಕೆಂಬುದಕ್ಕೆ ಒಂದು ಸಮಿತಿಯನ್ನು ನೇಮಿಸಲಾಗುವುದು.

ಈ ಅವಧಿಯಲ್ಲಿ ಗಾಂಧಿ ಸ್ಮಾರಕ ನಿಧಿಯ ಕಡೆಗೆ ನಮ್ಮೆಲ್ಲರ ಲಕ್ಷ್ಯವನ್ನು ಕೇಂದ್ರೀಕರಿಸೋಣ. ಇಂತಿಷ್ಟೇ ಎಂದು ನಿರ್ಣಯಿಸಲಾಗದಿದ್ದರೂ, ಸಮಿತಿಯು ಮಾಡಿಕೊಂಡ ಮಿತಿಯನ್ನು ಮೀರಲು ನಾವು ಪ್ರಯತ್ನಿಸೋಣ.

---

### ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. No. 4/48.

**ಕೆಲಶೇರ ಹುಸೇನಮ್ಮ .... ಅರ್ಜಿದಾರಳು**

ಮೇಲಿನ ನಂಬರಿನಲ್ಲಿ ಅರ್ಜಿದಾರಳು ತನ್ನ ಗಂಡನಾದ ಲೇಟು ಕೊಲ್ಲಾರಪ್ಪನ ಬಾಕಿಗಳು ಒರಮಾಡಿಕೊಳ್ಳಲು ತನಗೆ ವರಸು ಅಧಿಕೃತ ಪತ್ರ (Succession Certificate) ಕೊಡಬೇಕೆಂತ ಅರ್ಜಿ ಇಟ್ಟಿರುತ್ತಾಳೆ. ವಿಚಾರಣೆ 25—3—1948 ಕ್ಕೆ ಇರುತ್ತದೆ. ಯಾರದಾದರೂ ತಕರಾರು ಇದ್ದಲ್ಲಿ ಆ ದಿನ ಬೆಳಿಗ್ಗೆ ಕೋರ್ಟಿಗೆ ಹಾಜರಾಗತಕ್ಕದ್ದು.

**ರಾ. ಶ್ರೀಪಾದಾಚಾರ್ಯ,**
**ಅರ್ಜದಾರಳ ಅಡ್ವೋಕೇಟು.**

---

### ತಮಾಷಿ ಮಾಡಿದ್ದಕ್ಕೆ ಶಿಕ್ಷೆ

ಅಮೇರಿಕಾದ ನ್ಯೂಜೆರ್ಸಿ ನಗರದಲ್ಲಿ ರಿಚಾರ್ಡ ಕೇನರ್ ಎಂಬಾತನು ಹೋಟೆಲದಲ್ಲಿ ಮಲಗಿರಬೇಕಾದರೆ ತಮಾಷೆಗೆಂದು ಹೋಟೆಲದ ತೆನ್ನಾಲ ರಾಮನೊಬ್ಬನು ಬೆಂಕಿಪುಳ್ಳೆ ಕೆರೆದು ಕಾಲಿಗಿಟ್ಟನು. ಅದರಿಂದ ಅವನ ಇಜಾರ ಸುಟ್ಟು ಕಾಲಮೇಲೆ ವೃಷ್ಣದ ಮೇಲೆ ಗಾಯವಾಯಿತು. ಕೋರ್ಟಿನವರು ಅವನಿಗೆ ರೂ 7500 ಪರಿಹಾರ ದ್ರವ್ಯವನ್ನೊದಗಿಸಿ ಕೊಟ್ಟರು.

# ಸ್ವಾತಂತ್ರ್ಯ ರಕ್ಷಣೆ

## ಹಗುರಾದ ಕಾರ್ಯವಲ್ಲ

ಕಳೆದ ಅರ್ಧಶತಮಾನದಲ್ಲಿ ಹಿಂದುಸ್ಥಾನವು ತಾನು ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ತಿರುಗಿ ಸಂಪಾದಿಸಲು ವಿಶ್ವಪ್ರಯತ್ನ ಮಾಡಿತು. ಆಗ ನಡೆದ ಹೋರಾಟವು, ನಮ್ಮಲ್ಲಿ ಬಂದು ಸೇರಿಕೊಂಡಿದ್ದ ಪರಕೀಯರೊಡನೆ ನಡೆದಿತ್ತು. ಆ ಪರಕೀಯರಿಗೆ ನಮ್ಮಲ್ಲಿಯ ಕೆಲವರು, ಅವರ ಹಿತವನ್ನು ಇಲ್ಲಿಯೇ ಉಳಿಸಲು ಸಹಾಯ ಮಾಡಿದರು. ಆದರೆ ದೇಶದಲ್ಲಿ ಆದ ಪ್ರಚಂಡ ಜಾಗ್ರತಿಯ ಮುಂದೆ ಇವರ ಸಹಾಯವು ಅವರನ್ನು ಉಳಿಸಲು ಸಮರ್ಥವಾಗಲಿಲ್ಲ.

ಪರಕೀಯರಿಗೆ ಸಹಾಯಮಾಡಿದ ನಮ್ಮ ಜನರು ಬೇಕೆಂತಲೇ ಹಾಗೆಮಾಡದೆ ನಿರ್ವಾಹವಿಲ್ಲದ್ದಕ್ಕಾಗಿ ಆ ರೀತಿ ನಡೆದುಕೊಂಡರೆಂದು ಹೇಳದೆ ಗತ್ಯಂತರವಿಲ್ಲ. ಹೀಗೆ ಬ್ರಿಟಿಶರಿಗೆ ಸಹಾಯಮಾಡಿದವರಲ್ಲಿ ಪ್ರಮುಖರೆಂದರೆ ನಮ್ಮಲ್ಲಿಯ ಸಂಸ್ಥಾನಿಕರು. ಅವರು ಸಹಾಯಮಾಡದಿದ್ದರೆ ಅವರ ಸಂಸ್ಥಾನಗಳೇ ಉಳಿಯುತ್ತಿದ್ದಿಲ್ಲ. ಆದ್ದರಿಂದ ಅವರು ಬ್ರಿಟಿಶರು ಹೇಳಿದಂತೆ ಕುಣಿದರು.

ಕೆಲವು ವ್ಯಕ್ತಿಗಳೂ ಅವರಿಗೆ ನೆರವಾದರು. ಇವರು ಮಾತ್ರ ಕೇವಲ ತಮ್ಮ ಉದರ ನಿರ್ವಾಹಕ್ಕಾಗಿ ಹಾಗೆಮಾಡಿದವರು. ಸ್ವಾತಂತ್ರ್ಯ ಸಿಕ್ಕ ಬಳಿಕ ಅವರೇ ಇವರು ಈಗ ನಮ್ಮ ಸರಕಾರಕ್ಕೆ ಪಕ್ಷಸ್ಥರಾಗಿ ದುಡಿಯುತ್ತಿದ್ದಾರೆ. ಈ ವರ್ಗಕ್ಕೆ ಒಂದು ತತ್ವ ಅಥವಾ ಧೋರಣೆಯು ಇರುವುದಿಲ್ಲ. ಯಾವ ಸರಕಾರವು ಬರುತ್ತದೋ ಅದರಂತೆ ಇತರ ಜನರು ಕೆಲಸ ಮಾಡುತ್ತಾರೆ.

ಸ್ವಾತಂತ್ರ್ಯವನ್ನು ದೊರಕಿಸಲು ಭಾರತೀಯರು ಪಟ್ಟ ಕಷ್ಟಗಳು ಕಡಿಮೆಯೇನೂ ಆಗಿಲ್ಲ. ಇತರ ದೇಶಗಳು ಈ ಕಾರ್ಯಕ್ಕಾಗಿ ಪಟ್ಟ ಶ್ರಮದ ದೃಷ್ಟಿಯಿಂದ ನಮ್ಮ ಕಷ್ಟಗಳು ಕಡಿಮೆಯೆಂದೇ ಹೇಳಬೇಕಾಗುವುದು. ಆದರೆ ಹಿಂದೆ ಉಳಿದ ನಮ್ಮ ಜನಾಂಗವು ಈ ರೀತಿಯ ತ್ಯಾಗವನ್ನು ಮಾಡಲು ಮುಂದೆ ಬಂದುದು ಆಶ್ಚರ್ಯ ಮಾತ್ರ ಸರಿ. ಹಿಂದೂಸ್ಥಾನಕ್ಕೆ ಇಷ್ಟು ಬೇಗನೆ ಮತ್ತು ಇಷ್ಟು ಸುಲಭವಾಗಿ ಸ್ವಾತಂತ್ರ್ಯವು ಸಿಕ್ಕದ್ದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು.

ಹೇಗೋ ಒಮ್ಮೆ ಸ್ವಾತಂತ್ರ್ಯವು ನಮಗೆ ಸಿಕ್ಕಿತು. ಆದರೆ ಅದನ್ನು ಉಳಿಸಿಕೊಳ್ಳಲು ಮತ್ತು ಅದರ ಕಾಲದಲ್ಲಿ ರಾಜ್ಯವನ್ನು ಶಾಂತಿ ಸಮಾಧಾನಗಳೊಡನೆ ನಡೆಸಲು ಇಂದು ನಾವು ದುಡಿಯಬೇಕಾಗಿದೆ. ಯಾವುದೇ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಕೂಡಲೆ ಅಲ್ಲಿ ಹೊಡೆದಾಟ ಬಡಿದಾಟಗಳು, ಅಲ್ಲೋಲಕಲ್ಲೋಲವು ನಡೆಯುವುದು ಸಹಜವಾದದ್ದೆಂಬುದನ್ನು ಇತಿಹಾಸವು ಹೇಳುತ್ತದೆ. ಹಿಂದಕ್ಕೆ ಶ್ರೀ ದೇವಿದಾಸ ಗಾಂಧಿಯವರು ಲಂಡನ್ನಿಗೆ ಹೋದಾಗ್ಗೆ ಶ್ರೀ ಬರ್ನಾರ್ಡ ಶಾರು ಈ ಮಾತನ್ನು ಮತ್ತೊಮ್ಮೆ ನೆನಪು ಮಾಡಿ ಕಳುಹಿಸಿದ್ದಾರೆ. "ನಿಮಗೆ ಸ್ವಾತಂತ್ರ್ಯ ಸಿಕ್ಕಕೂಡಲೆ ನೀವು ಬಡಿದಾಡಲಿರುವಿರಿ" ಎಂದು ಅವರು ನಿಶ್ಚಯಾತ್ಮಕವಾಗಿ ಹೇಳಿದ್ದಾರೆ.

ಈ ಮಾತಿಗೆ ಅಪವಾದವಾಗಬಾರದು ಎಂದು ಆಲೋಚಿಸಿಯೋ ಏನೋ ನಮ್ಮ ದೇಶವು, ನಮಗೆ ಸ್ವಾತಂತ್ರ್ಯ ಸಿಕ್ಕನಿಮಿಷದತೊಟ್ಟು ಕೊಲೆಸುಲಿಗೆಗಳಲ್ಲಿ ಮಗ್ನವಾಯಿತು. ಮನುಷ್ಯರು ಮನುಷ್ಯತ್ವವನ್ನು ಬಿಟ್ಟು ವರ್ತಿಸಿದರು. ಸ್ವಾತಂತ್ರ್ಯದ ಗಾಳಿಯು ಇಷ್ಟು ನಿಷ್ಕರುಣೆಯಿಂದ ಕೂಡಿದ್ದಿರುತ್ತದೆಂಬ ಮಾತು ಆಗ ಚನ್ನಾಗಿ ಮನವರಿಕೆಯಾಯಿತು.

ಏನು ಕಾರಣ ಹೀಗಾಗುತ್ತಿರಬಹುದು? ಎಂದು ಯಾರೂ ತಲೆಕೆರೆದುಕೊಳ್ಳುವ ಕಾರಣವಿಲ್ಲ. ಅದರ ಮೂಲವೆಂದರೆ ರಾಜಕೀಯ ಸ್ವಾರ್ಥ. ದೇಶವು ಸ್ವತಂತ್ರವಾಗುತ್ತಲೇ ಅದನ್ನು ಯಾರು ಆಳಬೇಕು? ಯಾವ ಜಾತಿಯವರ ಅಂಕಿತದಲ್ಲಿ ಅದು ಉಳಿಯಬೇಕು? ಯಾವ ಪಕ್ಷದವರ ಕೈಯಲ್ಲಿ ಅಲ್ಲಿಯ ರಾಜ್ಯ ಸೂತ್ರಗಳು ಹೋಗಬೇಕು? ಎಂಬ ಬಗ್ಗೆ ತಿಕ್ಕಾಟವು ಪ್ರಾರಂಭವಾಗುತ್ತದೆ.

ನಮ್ಮ ದೇಶದಲ್ಲಿ ಇದೇ ರೀತಿ ನಡೆಯಿತು. ಸ್ವಾತಂತ್ರ್ಯ ಬರಬೇಕೆಂದಾಗಲೇ ನಮ್ಮಲ್ಲಿಯ ಮುಸಲ್ಮಾನ ಬಂಧುಗಳು ತಾವು ಪ್ರತ್ಯೇಕ ಭಾಗದಲ್ಲಿ ಇರಬಯಸಿ ಅದನ್ನು ಪಡೆದುಕೊಂಡರು. ಮತ್ತು ತಮ್ಮ ತಮ್ಮ ಕುದುರೆಯನ್ನು ಮುಂದೆ ಓಡಿಸುವ ಉದ್ದೇಶದಿಂದಲೇ ಕೊಲೆ, ಸುಲಿಗೆ, ಧರ್ಮಾಂತರ, ಸ್ತ್ರೀಯರ ಮಾನಭಂಗ ಮೊದಲಾದ ಅನಾಚಾರಗಳಿಗೆ ಕೈಹಾಕಿದರು.

ಇಂತಹ ಘಟನೆಗಳನ್ನು ತಡೆಯುವುದಕ್ಕಾಗಿಯೇ ಮಹಾತ್ಮಾ ಗಾಂಧಿಯವರು ತಮ್ಮ ಕೊನೆಯ ದಿವಸಗಳನ್ನು ಕಳೆದರು. ಭಿನ್ನಜಾತೀಯರಲ್ಲಿ ದ್ವೇಷಾಸೂಯೆಗಳು ಅಸಾಧ್ಯ ಬೆಳೆದು ಬಂದು, ಒಬ್ಬರಿಗೊಬ್ಬರು ಕತ್ತಿಗೆ ಹಚಿಕಲು ಮುಂದೆ ಬಂದರು. ಇದನ್ನು ಕಡಿಮೆ ಮಾಡುವುದಕ್ಕಾಗಿ ಮಹಾತ್ಮಾಜಿಯವರು ಉಪವಾಸ ಮಾಡಿದರು.

ಮುಂದೆ ಈ ವಿಷಯವು ಇಷ್ಟು ಬೆಳೆದು, ಮಹಾತ್ಮಾಜಿಯವರ ಕೊನೆಯವರೆಗೆ ಹೋಯಿತು. ಆದರಿಂದ ದುಃಖಪಟ್ಟವರೆಲ್ಲ, ಗಾಂಧೀಜಿಯವರನ್ನು ಕೊಲೆ ಮಾಡಿದವನಿಗಾಗಿ ಶಪಿಸುತ್ತಿದ್ದಾರೆ. ಆದರೆ ಅವರನ್ನು ಕೊಂದವನು ಓರ್ವ ವ್ಯಕ್ತಿಯಲ್ಲ ಅಥವಾ ಒಂದು ಜಾತಿಯವನಲ್ಲ ಎಂಬುದನ್ನು ಅವರು ಮರೆಯುತ್ತಾರೆ. ಸ್ವಾತಂತ್ರ್ಯ ಸಿಕ್ಕನಂತರ ನಾವು ಉಣ್ಣಬೇಕಾದ ಫಲಗಳಲ್ಲಿ ಅದು ಒಂದು ಆಗಿದೆಯೆಂಬುದನ್ನು ಮರೆತರೆ ನಡೆಯದು.

ಗಾಂಧೀಜಿಯವರಂತಹ, ದೇಶದ ಅಮೂಲ್ಯನಿಧಿಯನ್ನು ಈ ಪರಿಸ್ಥಿತಿಯು ಕೊಂಡ ಹೋದದರಿಂದ ಹಿಂದುಸ್ಥಾನವು ಹೌಹಾರಿದೆ. ಆದರೆ ಇದು ಅನಿವಾರ್ಯವಾದ ಪರಿಣಾಮವಾಗಿದೆ. ಜಗತ್ತಿನ ಇತಿಹಾಸವನ್ನು ನೋಡಿದರೆ ಇಂತಹ ಹೃದಯದ್ರಾವಕ ಘಟನೆಗಳು ಎಷ್ಟೋ ಕಂಡುಬರುತ್ತವೆ. ಈ ಪ್ರಸಂಗಗಳು ಎಷ್ಟೇ ಅಸಹ್ಯವಾಗಿದ್ದರೂ ಅವುಗಳಿಂದ ನಮಗಾಗುವ ಹಾನಿಯು ಎಷ್ಟೇ ಅಸಾಧ್ಯವಾಗಿದ್ದರೂ ಅವುಗಳ ಅನಿವಾರ್ಯತೆಯನ್ನು ತಿಳಿದುಕೊಂಡು ನಾವು ಅವುಗಳನ್ನು ಶಾಂತ ಮನಸ್ಸಿನಿಂದ ಸಹಿಸಿಕೊಳ್ಳಲೇಬೇಕು.

ಭರತಖಂಡದ ಇಂದಿನಿಂದ ರಾಜಕೀಯ ಸ್ಥಿತಿಯನ್ನು ಅಭ್ಯಾಸಮಾಡಿದರೆ ಹಿಂದಿನದಕ್ಕೂ ಅಜಗಜಾಂತರವು ಕಂಡುಬರುವುದು. ಸ್ವಾತಂತ್ರ್ಯವು ಸಿಗುವ ಮೊದಲು ಸರಕಾರ ಮತ್ತು ಕಾಂಗ್ರೆಸು ಹೀಗೆ ಎರಡೇ ಪಕ್ಷಗಳು ಎದ್ದುಕಾಣುತ್ತಿದ್ದವು. ದೇಶದಲ್ಲಿ ಇತರ ಅನೇಕ ಪಕ್ಷಗಳು ಇದ್ದರೂ ಅವುಗಳಿಗೆ ಮಹತ್ವವಿರಲಿಲ್ಲ.

ಇಂದು ಆ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನ ಸ್ಥಾನವು ಅಷ್ಟು ಪರಿಶುದ್ಧವಾಗಿ ಇನ್ನು ಮುಂದೆ ಉಳಿಯಲಾರದು ನಿಜವಾಗಿ ನೋಡಿದರೆ, ಕಾಂಗ್ರೆಸ್ಸಿನ ಅವತಾರಕಾರ್ಯವು ಸ್ವಾತಂತ್ರ್ಯ ಸಿಕ್ಕಕೂಡಲೆ ಮುಗಿದು ಹೋಯಿತೆಂದು ಹೇಳಬಹುದು.

ಎಲ್ಲಿಯವರೆಗೆ ತ್ಯಾಗದ ಕಾರ್ಯಕ್ರಮವು ಕಾಂಗ್ರೆಸ್ಸಿನಿಂದ ನಡೆಸಲ್ಪಡುತ್ತಿತ್ತೋ ಅಲ್ಲಿಯವರೆಗೆ ಅದನ್ನು ಸಂಗಟ್ಟುವುದಕ್ಕೆ ಇತರ ಸಂಸ್ಥೆಗಳಿಗೆ ಆಗಲಿಲ್ಲ. ಅಧಿಕಾರ ಪ್ರಾಪ್ತಿಯಾದ ನಂತರ ಕಾಂಗ್ರೆಸಿನಲ್ಲಿಯೇ ಅದರ ಲಾಲಸೆಯ ಮನೋವೃತ್ತಿಯು ಬೆಳೆದು ಅದರ ಲೋಕಪ್ರಿಯತೆಯು ಕಡಿಮೆಯಾಗುತ್ತ ನಡೆದಿದೆ.

ಮತ್ತು ಇಂದು ನಡೆದ ಘಟನೆಗಳನ್ನು ನೋಡಿದರೆ ಸದ್ಯದಲ್ಲಿದ್ದ ಕಾಂಗ್ರೆಸ ಸರಕಾರವನ್ನು ದೇಶದಲ್ಲಿಯ ಕೆಲವು ಶಕ್ತಿಗಳು, ಉರುಳಿಸುವ ಯತ್ನವನ್ನು ನಡೆಸಿವೆ. ಅಧಿಕಾರದಲ್ಲಿ ಇರುವ ಪಕ್ಷದ ಗತಿಯು ಈ ರೀತಿಯಾಗುವುದು ಸಹಜವಾದಂಥದಿದೆ. ಅದು ಮಾಡುವ ಕಾರ್ಯಗಳ ಮೂಲಕ ಅದಕ್ಕೆ ಒಂದಿಲ್ಲೊಂದು ವರ್ಗವು ವಿರುದ್ಧವಾಗುತ್ತಲೇ ನಡೆಯುತ್ತಿದೆ. ಈ ಪಕ್ಷವು ಸತ್ಯಕ್ಕೆ ಅಂಟಿಕೊಂಡಿದ್ದರೂ, ಉಳಿದ ಪಕ್ಷಗಳ ಅಧಿಕಾರಲಾಲಸೆಯು ಅದನ್ನು ಉರುಳಿಸಲು ಸಮರ್ಥವಾಗುವ ಸಂಭವವಿದೆ.

ಹೀಗಿರುವಾಗ ಕಾಂಗ್ರೆಸ ಸಂಸ್ಥೆಯ ಮಾರ್ಗವು ಇನ್ನು ಮುಂದೆ ಕಠಿಣವಾಗುವುದಿದೆ. ಅದರ ಮಹತ್ವವು ಕಡಿಮೆಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಅದರ ಘಟನೆಯನ್ನು ತಿದ್ದಿದಮಾತ್ರಕ್ಕೆ ಆ ಸಂಸ್ಥೆಯ ನೈತಿಕ ಮಟ್ಟ ಏರಲಾರದು. ಅದರಲ್ಲಿಯ ಕಾರ್ಯಕರ್ತರ ಮನೋವೃತ್ತಿಯು ತಿದ್ದಲ್ಪಡಬೇಕು. ಇಂದು ಈ ಸಂಸ್ಥೆಗೆ ಗ್ರಹಣಹಿಡಿದಿದ್ದರೆ ಅದರ ಕಾರ್ಯಕರ್ತರ ವರ್ತನದ ಮೂಲಕವೇ ಆಗಿದೆಯೆಂಬುದನ್ನು ಯಾರೂ ಮರೆಯಬಾರದು.

ಕಾಂಗ್ರೆಸ ಸಂಸ್ಥೆಯು ದೇಶದಲ್ಲಿಯ ಇತರ ಪಕ್ಷ ಪಂಗಡಗಳಲ್ಲಿ ಒಂದಾಗಿ ಪರಿಣಮಿಸುವ ಸಂಭವವೇ ಇನ್ನು ಬಹಳವಾಗಿದೆ. ಈ ಪಕ್ಷಗಳ ತಿಕ್ಕಾಟದಲ್ಲಿಯೇ ನಮ್ಮ ದೇಶದ ರಾಜಕಾರಣವು ಇನ್ನು ಮುಂದೆ ಸಾಗಬೇಕಾಗಿದೆ. ತಿಕ್ಕಾಟವು ನಮ್ಮೊಳಗೆ ಇರಬೇಕೇ ಹೊರತು ದೇಶದ ಸ್ವಾತಂತ್ರ್ಯ ರಕ್ಷಣೆಗೆ ಭಂಗತರುವಂತೆ ಆಗದಿರುವ ಹಾಗೆ ಭಾರತೀಯರು ಜಾಗ್ರತರಾಗಿ ನಡೆದುಕೊಳ್ಳಬೇಕಾಗಿದೆ. ಈ ಕಾರ್ಯವು ಹಗುರು ಮಾತ್ರ ಆಗಿಲ್ಲ

# ಸಮತಾವಾದಿಗಳು

ಭಾರತವನ್ನು ಬಲಿಷ್ಟ ರಾಷ್ಟ್ರವನ್ನಾಗಿಯೂ ಭವ್ಯ ರಾಷ್ಟ್ರವನ್ನಾಗಿಯೂ ಕಟ್ಟಲು ಸಮತಾವಾದಿ ಪಕ್ಷದ ಕಾರ್ಯಕಾರಿ ಸಮಿತಿಯು ಕೆಳಗಿನ 10 ಬಗೆಯ ಯೋಜನೆಗಳ ಕಾರ್ಯಕ್ರಮದ ರೂಪರೇಷೆಯೊಂದನ್ನು ಜನತೆಯ ಮತ್ತು ಸರಕಾರದ ಅವಗಾಹನೆಗಾಗಿ ಪ್ರಕಟಿಸಿರುತ್ತದೆ.

1) ಒಂದು ಮತ, ಒಂದು ಜಾತಿ ಇವುಗಳ ಸಂಬಂಧವಾಗಿ ಅಥವಾ ಒಂದು ಜಾತೀಯ ಆಂದೋಲನಕ್ಕಾಗಿ ನಿರ್ದಿಷ್ಟಗೊಳಿಸಿರುವ ಯಾವ ಸಂಘ, ಸಂಸ್ಥೆಯನ್ನೇ ಆಗಲಿ ಅದು ನಿಯಮಬಾಹಿರವೆಂಬ ನಿರಂತರ ಕಾಯಿದೆಯೊಂದು ಅಸ್ತಿತ್ವದಲ್ಲಿ ಬರಬೇಕು. ಮತ್ತು ಈ ಬಗೆಯ ಸಂಘ ಸಂಸ್ಥೆಗಳ ವತಿಯಿಂದ ಸಾರ್ವಜನಿಕ ಆಯ್ಕೆ ಶಾಸನ ಭೆವೆಂದವಾದವುಗಳಲ್ಲಿ ಜನರು ಮುಂಬರುವದನ್ನು ತಡೆಯಬೇಕು.

2) ಯಾವ ಘಟನೆಗಳಲ್ಲಿಯೇ ಆಗಲಿ ಜಾತೀಯ ಪ್ರಾಮುಖ್ಯತೆಯಿಂದ ಸಮ್ಯತನದ ಹಂಚಿಕೆಯನ್ನು ಮೀಸಲಿಡುವದನ್ನು ಇನ್ನು ಮುಂದೆ ತಪ್ಪಿಸಬೇಕು.

3) ಆಡಳಿತದಲ್ಲಿ ಜಾತೀಯ ಪ್ರಾತಿನಿಧ್ಯದ ದೃಷ್ಟಿಯಿಂದ ಯಾವ ವಿಶೇಷ ಸ್ಥಾನಮಾನಗಳು ಇರಕೂಡದು.

4) ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ತಮ್ಮ ಪ್ರಚಾರ ಕಾರ್ಯಶಾಖೆಯನ್ನು ಪತ್ರಿಕಾ ಪ್ರಕಟನೆ ರೇಡಿಯೋ ಪ್ರಚಾರ ಮೆದಲಾದವುಗಳನ್ನು ಅಧಿಕಾರೇತರ ಸಂಸ್ಥೆಗಳಿಗೆ ಬಿಟ್ಟುಕೊಡಬೇಕು.

5) ಮಾನವನ ಜೀವಿತವನ್ನು ತಿದ್ದುವ ಸಾಧನವು ಶಿಕ್ಷಣವೇ ಆದ್ದರಿಂದ ಸರಕಾರವು ಈಗಿನ ಶಿಕ್ಷಣ ಪದ್ಧತಿಯನ್ನೇ ಸ್ಥಿತ್ಯಂತರಗೊಳಿಸಬೇಕು

6) ಸೈನಿಕರನ್ನು ಸೇರಿಸಿಕೊಳ್ಳುವುದರಲ್ಲಿಯೂ ಜಾತೀಯ ಅಥವಾ ಪ್ರಾಂತೀಯ ಭಾವನೆಗಳಿರಕೂಡದು.

7) ಸೈನಿಕ ಶಿಕ್ಷಣಕ್ರಮದಲ್ಲಿಯೂ, ಸ್ಥಿತ್ಯಂತರವಾಗಿ, ಅವರಲ್ಲಿ ದೇಶಭಕ್ತಿ, ರಾಷ್ಟ್ರೀಯತೆ, ಸೋದರಭಾವ ಹುಟ್ಟುವಂತಹ ಶಿಕ್ಷಣ ದೊರೆಯಬೇಕು ಹಿಂದೀ ಭಾಷೆಯೇ ಸಾರ್ವತ್ರಿಕ ಭಾಷೆಯಾಗಬೇಕು.

8) ಶಾರೀರಕ ಶಿಕ್ಷಣ, ನಾಗರಿಕದಲ, ಮೊದಲಾದವುಗಳ ಬಗ್ಗೆ ಸರಕಾರವು ಕೂಡಲೆ ಗಮನಕೊಟ್ಟು ಅವು ಬಲಗೊಳ್ಳುವಂತ ಮಾಡಬೇಕು.

9) 18-19 ವರ್ಷದ ಯುವಕರಿಗೆಲ್ಲಾ ಕಡ್ಡಾಯವಾಗಿ, ಸೈನಿಕ ಶಿಕ್ಷಣವನ್ನು ಕೊಡಬೇಕು. ಸ್ತ್ರೀಯರು ಮತ್ತು ಸ್ವಯಂಸೇವಿಕೆಯರ ದಲಗಳನ್ನು ರಚಿಸಿಕೊಳ್ಳಬೇಕು. ಸೈನಿಕ ಶಿಕ್ಷಣದ ಉಪಯೋಗವು ರಚನಾತ್ಮಕ ಕಾರ್ಯದ ಕಡೆಗೆ ಹೊಂದಿಕೊಂಡಿರಬೇಕು.

10) ಪ್ರಜಾಪ್ರಭುತ್ವದ ರಾಷ್ಟ್ರರಚನೆಯಲ್ಲಿ ಆಸಕ್ತವಾಗಿರುವ ಸಾರ್ವಜನಿಕ ಸಾಂಸ್ಕೃತಿಕ ಮತ್ತು ರಾಜಕೀಯ ಸಂಸ್ಥೆಗಳು ಎಲ್ಲವೂ ಒಟ್ಟಿಗೆ ಸೇರಿ ಇಂದಿನ ತರುಣ ಜನಾಂಗದ ಮುಖಂಡತ್ವವನ್ನು ವಹಿಸಿಕೊಳ್ಳಬೇಕು.

ಇವೇ ಮೊದಲಾದ ನಿಯಮ ನಿರ್ಬಂಧಗಳನ್ನು ಸಮತಾವಾದ ಪಕ್ಷದವರು ಸಾರ್ವಜನಿಕ ಮನವಿ ಎಂದು ಜನತೆಯ ಮುಂದೆ ಪ್ರಕಟ ಮಾಡಿರುವುದನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯಕರವೆನಿಸುವುದಲ್ಲದೆ ಈ ಎಲ್ಲ ನಿಯಮ ನಿರ್ಬಂಧಗಳನ್ನು ಈಗಾಗಲೇ ಆಚರಣೆಯಲ್ಲಿ ಕಾಂಗ್ರೆಸು ತಂದು ಹಳೆಯ ಮಾತಾಗಿರುವದರಿಂದ ಈ ವಿಷಯಗಳ ಪುನರುಚ್ಚಾರಣೆಯು ಅವಶ್ಯಕತೆ ಏನಿರುವದೋ ತಿಳಿಯದು

ಸಕಲ ಜಾತಿಗಳ ಸಕಲ ಸಂಘಗಳ ಸಕಲ ಪಕ್ಷಗಳ ಪ್ರಾತಿನಿಧ್ಯದಿಂದ ಇ ದಿನವರೆಗೂ ಕಾಂಗ್ರೆಸು ಕೂಡಿಕೊಂಡು ದೇಶಹಿತ ಕಾರ್ಯದತ್ತ ಅದ್ಭುತ ಕಾರ್ಯವನ್ನು ಮಾಡಿ ತೋರಿಸಿ ಸಾಫಲ್ಯವನ್ನು ಹೊಂದಿದೆ. ಇದಕ್ಕೆಲ್ಲ ಮಹಾತ್ಮಾಜಿಯವರ ಮಾರ್ಗದರ್ಶನವೇ ಮುಖ್ಯಕಾರಣವಾಗಿದೆ ಇನ್ನು ಮುಂದಾದರೂ ತಮ್ಮ ನಿಜವಾದ ಉತ್ತರಾಧಿಕಾರಿಗಳು ಪಂಡಿತ ಜವಾಹರಲಾಲರೇ ಎಂದು ಮಹಾತ್ಮರೇ ಹೇಳಿದಂತೆ, ಅವರ ನೇತೃತ್ವದಲ್ಲಿಯೇ ಈ ಎಲ್ಲ ಜಾತಿ-ಮತ-ಪಂಥ-ಪಂಗಡಗಳು ಒಂದೊಂದಾಗಿ ಬಲಗೊಂಡು ಕಾಂಗ್ರೆಸ ಸಂಸ್ಥೆಗೆ ಸಾಮೂಹಿಕ ಬಲವನ್ನು ನೀಡಿ ರಾಷ್ಟ್ರ ರಚನಾ ಕಾರ್ಯದಲ್ಲಿ ನೆರವು ನೀಡುವುದು ಅತ್ಯಾವಶ್ಯವೂ ಯೋಗ್ಯವೂ ಆದ ದಾರಿಯೇ ಆಗಿದೆ

ಈಗ ಸಮತಾವಾದಿಗಳು ಹೇಳಿರುವ 10 ನಿಯಮಗಳಲ್ಲಿಯೂ ಇದೇ ಮಾತೇ ಪ್ರತಿಧ್ವನಿತವಾಗುತ್ತದೆ

ಯಲ್ಲದೆ, ಜನತೆಯು ತನ್ನ ಸರ್ವಶಕ್ತಿಯನ್ನೂ ಜನತಾ ಸರಕಾರವನ್ನು ಬಲಪಡಿಸುವಲ್ಲಿ ಉಪಯೋಗಿಸಿದರೆ, ಭವ್ಯಭಾರತವು ನಿರ್ಮಾಣವಾಗುವುದರಲ್ಲಿ ಏನೂ ಸಂದೇಹವೇ ಇಲ್ಲ. ಆದ್ದರಿಂದ ಭಾರತದಲ್ಲಿಯ ಸಕಲ ಸಂಸ್ಥೆ ಪಂಥ, ಪಂಗಡ ಜಾತಿಮತಗಳು ಒಂದು ಸ್ವತಂತ್ರ ರಾಷ್ಟ್ರದ ಹೊಣೆಗಾರ ನಾಗರಿಕರಂತೆ ಹೊಣೆಯರಿತು ಸರಕಾರಕ್ಕೆ—ಕಾಂಗ್ರೆಸ್ ಸರಕಾರಕ್ಕೆ—ಬೆಂಬಲ ಕೊಡುವುದು ಕಾಲೋಚಿತವಾಗಿದೆ.

---

## ಸಮತಾವಾದಿ ಪಕ್ಷ (ಇಂಡಿಯಾ)

### ಆರನೆಯ ವಾರ್ಷಿಕ ಸಮ್ಮೇಳನ

ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಮಾರ್ಚ ತಿಂಗಳ 16, 17, 18ನೇ ದಿನಾಂಕಗಳಲ್ಲಿ ಸೇರುವುದು, ತಾರೀಖು 19, 20, 21ನೇ ದಿನಾಂಕಗಳಲ್ಲಿ ಕೊಟವಾಲನಗರ, ನಾಸಿಕದಲ್ಲಿ ಸಮಾಜವಾದಿ ಪಕ್ಷದ ಆರನೆಯ ವಾರ್ಷಿಕ ಸಮ್ಮೇಳನವು ಭಾಯಿ ಅಶೋಕಮೇಥಾ ಇವರ ಅಧ್ಯಕ್ಷತೆಯಲ್ಲಿ ಜರುಗುವುದು.

ಈ ಸಮ್ಮೇಳನದಲ್ಲಿ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಮಹಾತ್ಮ ಗಾಂಧೀಜಿಯವರ ಅಕಾಲಿಕ ನಿಧನದಿಂದುಂಟಾದ ಪರಿಸ್ಥಿತಿಯಲ್ಲಿ ಸಮಾಜವಾದಿ ಪಕ್ಷದ ಧೋರಣೆ, ಕಾಶ್ಮೀರದ ಪರಿಸ್ಥಿತಿ, ರೈತ-ಕೂಲಿಕಾರ ಸಂಸ್ಥೆಗಳು, ಸಂಸ್ಥಾನಗಳು ಮೊದಲಾದವುಗಳ ಮೇಲೆ ಪಕ್ಷದ ಧ್ಯೇಯ ಧೋರಣೆ ಕಾರ್ಯಕ್ರಮಗಳನ್ನು ನಿರ್ಧರಿಸಲಾಗುವುದು

ಈ ಸಮ್ಮೇಳನಕ್ಕೆ ಒಂದು ಸಾವಿರಕ್ಕೂ ಮೇಲ್ಪಟ್ಟ ಪ್ರತಿನಿಧಿಗಳೂ, ಅತಿಥಿಗಳೂ, ಪಕ್ಷದ ಧ್ಯೇಯಧೋರಣೆಗಳನ್ನು ತಿಳಿದುಕೊಳ್ಳಲೋಸುಗ ಬರಲಿರುವರೆಂದು ಆಶಿಸಲಾಗಿದೆ. ಸುಮಾರು 50,000 ಕ್ಕೂ ಹೆಚ್ಚು ಜನರು ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಬಹುದೆಂದು ಅಂದಾಜು ಮಾಡಲಾಗಿದೆ ಈ ಸಮ್ಮೇಳನದಲ್ಲಿ ರಾಷ್ಟ್ರೀಯ ಆಂದೋಲನದ ಬದಲ ವಣೆಗಳನ್ನು ಸೂಚಿಸುವ ಚಿತ್ರಗಳ ಪ್ರದರ್ಶನವನ್ನು ಸಹ ಏರ್ಪಡಿಸಲಾಗುತ್ತದೆ.

## ಪ್ರಾರ್ಥನೆ.

---

ಪರದೇವ ಪ್ರಾರ್ಥಿಸುವೆ
ಚರಣಕ್ಕೆ ನಾನಿಂದು
ಭಾರತಿಯ ನಾತ್ಮಕ್ಕೆ
ಚಿರಶಾಂತಿ ನೀಡೆಂದು. ೧

ಸಕಲಲೋಕದದೇವ
ಭಕುತಿಯಲಿ ಬೇಡುವೆನು
ಲೋಕಹಿತನಾತ್ಮಕ್ಕೆ
ಸುಖವನ್ನು ನೀಡೆಂದು. ೨

ಓರಂತೆ ಬೇಡುವೆನು
ನಿರವದ್ಯನಾತ್ಮಕ್ಕೆ
ಚಿರಶಾಂತಿ ಇರಬೇಕು
ಮರವ್ಯರಿ ಕೊಡಬೇಕು, ೩

ಹರಿಜನರ ರಕ್ಷಕಗೆ
ಚರಕದಾದ ತನಗೆ
ಭಾರತಿಯ ಪುತ್ರನಿಗೆ
ಚಿರಶಾಂತಿ ವಿರಸಿನ್ನು. ೪

ಶಾ. ನ. ಮೂರ್ತಿ.

---

ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಪಕ್ಷದ ಧ್ಯೇಯ, ಧೋರಣೆ ಬಗ್ಗೆ ಸ್ವೀಕರಿಸಲಾದ ನಿರ್ಣಯಗಳನ್ನು ಭಾಯಿ, ಜಯಪ್ರಕಾಶನಾರಾಯಣ, ಆಚಾರ್ಯ, ನರೇಂದ್ರದೇವ, ಅಚ್ಯುತಪಟವರ್ಧನ, ಡಾ|| ರಾಮ ಮನೋಹರ ಲೋಹಿಯಾ ಶ್ರೀಮತಿ ಅರುಣಾ ಅಸಫ ಅಲ್ಲಿ ಮೊದಲಾದವರು ತಿಳಿಸಿ ಹೇಳಲಿರುವರು.

ಈ ಸಮ್ಮೇಳನಕ್ಕೆ ಬರುವರೆಲ್ಲರಿಗೆ ಊಟ, ಫಲಹಾರ ವಸತಿಗಳ ಏರ್ಪಾಡುಗಳನ್ನು ಸಮಾಜವಾದಿ ಪಕ್ಷ ಸಮ್ಮೇಳನದ ಕಛೇರಿ ಸರ್ಕಲ್ ಸಿನಿಮಾ, ನಾಸಿಕ ಇವರು ಮಾಡುವರು.

## ಹೊಸಪೇಟೆ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. No. 331/1947.

ವಾದಿ:—

ಎ. ವಾಸುದೇವಭಟ್.

ಪ್ರತಿವಾದಿ:—

1. ಸಿ. ಅಣ್ಣಾಸ್ವಾಮಿ ಮೊದಲಿಯಾರ್.
2. ದೇವಶಿಖಾಮಣಿ ,,
3. ಅರುಣಾಚಲಂ ,,
4. ತಿರುವೆಂಕಟ ,,

**ಮೊದಲನೆಯ ಪ್ರತಿವಾದಿಗೆ ನೋಟೀಸು.**

ನಿಮ್ಮ ಮೇಲೂ 4 ಜನ ಇತರರ ಮೇಲೂ ವಾದಿಯು ಹೂಡಿದ ದಾವೆಯು ನಿಮ್ಮ ಹಾಜರಿಗಾಗಿ 24—3—'48 ಕ್ಕೆ ವಾಯಿದೆ ಹಾಕಲಾಗಿದೆ ನೀವು ಆ ದಿನ ಕೋರ್ಟಿಗೆ ಹಾಜರಾಗಲು ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿಯಾಗಿ ಮಾಡಿ ದಾವೆಯು ಮುಂದೆ ಸಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಹೊಸಪೇಟೆ — ಎಂ. ರಂಗನಾಥಾಚಾರ್.
10—3—48 — ವಾದಿಯ ವಕೀಲ

## ಭಾರತ ಶಾಸನಸಭೆಯಲ್ಲಿ
## ಪಂಡಿತ ನೆಹರೂರ ಹೇಳಿಕೆ

ಈಗಿನ ಪರಿಸ್ಥಿತಿಯಲ್ಲಿ ಮಂತ್ರಿ ಮಂಡಳವನ್ನು ಟೀಕಿಸುವುದು ನ್ಯಾಯವಲ್ಲ. ಆರ್. ಯಸ್. ಯಸ್. ಮತ್ತು ಮುಸ್ಲಿಂಲೀಗು ಹೊರತಾಗಿ ಉಳಿದೆಲ್ಲ ಪಕ್ಷಗಳವರಿಗೆ ಮಂತ್ರಿಮಂಡಲದಲ್ಲಿ ಸ್ಥಾನವಿದೆ. ಮಂತ್ರಿಗಳಿಗೆ ಬಹಳ ಹೆಚ್ಚಿನ ಕೆಲಸವಿದೆಯೆಂಬುದು ನಿಜ. ಆದರೆ ಮಂತ್ರಿಗಳ ವಿಸ್ತರಣೆಯಿಂದ ಏಕೀಕೃತ ಅಭಿಪ್ರಾಯಕ್ಕೆ ಐಕ್ಯವರ್ತನೆಗೆ ಧಕ್ಕೆತಗಲುತ್ತದೆ. ಕಲಸದ ಹೊರೆಯನ್ನು ಕಡಮೆ ಮಾಡಲು ಉಪಮಂತ್ರಿಗಳಿರಬೇಕೆಂಬ ಸೂಚನೆಯನ್ನು ನಾನು ಒಪ್ಪುತ್ತೇನೆ ಮಂತ್ರಿಮಂಡಳದಲ್ಲಿನ ನಲ್ವರು ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತಿದ್ದಾರೆ ಆದರೆ ಅವರು ನನ್ನ ಬೇಡಿಕೆಯಂತೆ ನಮ್ಮ ಕೆಲಸ ಸಾಗಿಸುತ್ತಿರುವರು ಮಂತ್ರಿಮಂಡಳದ ರೀತಿ ನಡೆದಿರುವ ವ್ಯರ್ಥ ಟೀಕೆಯಿಂದ ನನಗೆ ಸಂಕಟವಾಗಿದೆ ಎಂದರು. ನೆಹರೂರ ಹೇಳಿಕೆಯ ನಂತರ ಕಡಿತದ ಸೂಚನೆಗಳೆಲ್ಲ ಹಿಂದೆಗೆದುಕೊಳ್ಳಲಾದವು.

## In the Court of the District Munsif of Hospet

O. S. No. 331 of 1947.

Between:—

A. Vasudeva Bhat. .... Plaintiff

Vs.

1 C. Annaswamy Mudaliar. }
2. Devasikamani ,, } Defendants,
3 Arunachalam ,, }
4. Tiruvenkata ,, }

**To 1st Defendant.**

The above suit filed against you and 4 others by the plaintiff is posted to 24—3—1948 for your appearance If you fail to attend the court on that day you will be declared Ex-parte and the suit will be proceeded with.

Hospet — M Ranganathachar
10—3—1948 — Pleader for plaintiff

**ಕಾಶ್ಮೀರ:—**

ಬಂಧನದಲ್ಲಿದ್ದ ಮುಸ್ಲಿಂ ಕಾನ್ಫರೆನ್ಸ್ ಅಧ್ಯಕ್ಷರಾದ ಚೌಧರಿ ಗುಲಾಂ ಅಬ್ಬಾಸರ ಬಿಡುಗಡೆಯಾಗಿದೆ. ಅವರು ಜಿನ್ನಾರವರನ್ನು ಕಾಣಲು ಕರಾಚಿಗೆ ಹೋಗಿರುವರು. ಭದ್ರತಾಮಂಡಲದಲ್ಲಿ ಹಿಂದೂಸ್ತಾನಕ್ಕನುಕೂಲವಾದ ಧೋರಣೆಯು ಅನುಸರಿಸಲ್ಪಡುವುದೆಂಬ ಸೂಚನೆಗಳು ತೋರಿಬರುತ್ತಲಿವೆ.

**ಹೈದರಾಬಾದು:—**

ಸಂಧಾನಕ್ಕಾಗಿ ಡೆಲ್ಲಿಗೆ ತೆರಳಿದ ಹೈದರಾಬಾದು ಶಿಷ್ಟಮಂಡಳವು ಮರಳಿ ಬಂದಿದೆ ಮದ್ರಾಸ್ ಬೊಂಬಾಯಿ ಗಡಿಗಳಲ್ಲಿ ಹೈದರಾಬಾದ ಪುಂಡರ ದಾಳಿಗಳಾಗುತ್ತಲೇ ಇವೆ. ಹೈದರಾಬಾದ್‌ನಲ್ಲಿ ಭಾರತದ ನಾಣ್ಯಗಳನ್ನು ಕಠಿಣವಾಗಿ ತಡೆಯುತ್ತಿರಲಾಗಿದೆ.

# ಮತ್ತೆ ಯುದ್ಧವೇ?

(ಜಯ ಹಿಂದ)

ಜಗತ್ತಿನಲ್ಲಿ ನಡೆದ ತಿಕ್ಕಾಟವು ಒಂದು ಅನ್ಯಾಹತವಾದ ಘಟನೆಯಾಗಿ ಕುಳಿತಿದೆ. ಅದು ಎಂದು ಮುಗಿದೀತೋ ಎಂದು ಎಲ್ಲರೂ ಆಲೋಚಿಸುತ್ತಿದ್ದಾರೆ. ಆದರೆ ಇವರ ಈ ಆಲೋಚನೆಗೆ ಏನೂ ಬೆಲೆ ಇಲ್ಲವಾಗಿದೆ. ಏಕೆಂದರೆ ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವವರು ಕೈಲಾಗದವರು. ತಿಕ್ಕಾಟವನ್ನು ಮಾಡುತ್ತಿರುವವರು ಪ್ರಬಲರು ಅವರನ್ನು ಆ ದಾರಿಯಿಂದ ತಿರುಗಿಸಲು ಅವರಿಗಿಂತ ಪ್ರಬಲರಾದವರೇ ಬೇಕು. ಅದಿಲ್ಲದೆ ಕೇವಲ ಇಚ್ಛಾಪ್ರದರ್ಶನ ಮಾಡಿದ ಮಾತ್ರಕ್ಕೆ ಇಂತಹ ತೊಡಕುಗಳು ಅಥವಾ ತೊಂದರೆಗಳು ನಿವಾರಣೆ ಹೊಂದಲಾರವು.

ಇಂದು ಬಂದಿರುವ ತೊಂದರೆಯ ವಿಷಯವೆಂದರೆ ರಶಿಯಾದ ಪ್ರಾಬಲ್ಯ ಅಥವಾ ಅದರ ಆತ್ಮ ರಕ್ಷಣೆಯ ಹವ್ಯಾಸ ನಿಜವಾಗಿ ನೋಡಿದರೆ ರಶಿಯಾವು ಇಂದು ಯುದ್ಧಮಾಡುವ ಸ್ಥಿತಿಯಲ್ಲಿಲ್ಲ. ಮತ್ತು ಅದು ಯುದ್ಧವನ್ನು ತಪ್ಪಿಸುವ ಮಾರ್ಗದಲ್ಲಿಯೇ ಸಾಗುತ್ತಿದೆ. ಪ್ರಸಂಗವೇ ಬಂದರೆ ಹಿಂದೆ ಬೀಳಬಾರದೆಂದು ಅದು ನಿರ್ಧರಿಸಿಸುವುದು ಸ್ವಾಭಾವಿಕವಾಗಿದೆ.

ರಶಿಯಾವು ಹೋದಯುದ್ಧದಲ್ಲಿ ಬಹಳ ಹಾನಿಗೊಂಡಿದೆ. ಇತ್ತೀಚಿನ ಪರಿಸ್ಥಿತಿಯಲ್ಲಿಯೂ ಅದು ಆರ್ಥಿಕಮುಗ್ಗಟ್ಟನ್ನು ಬಹಳವಾಗಿ ಎದುರಿಸುತ್ತದೆ ಎಂದು ಬಲ್ಲವರು ಹೇಳುತ್ತಿದ್ದಾರೆ. ಒಟ್ಟಾಗಿ ಈಗ ಅದು ಕಾಲು ಕೆದರುವ ಸ್ಥಿತಿಯಲ್ಲಿ ಮಾತ್ರವಿಲ್ಲ.

ಅಂದ ಮೇಲೆ ಈಗ ತಿಕ್ಕಾಟವೇಕೆ ಬಂದಿದೆ? ಎಂಬುದು ಮಹತ್ವದ ಪ್ರಶ್ನೆಯಾಗಿದೆ. ರಶಿಯಾದೇಶವು ಸುತ್ತಲೂ ಕಾಲುಚಾಚುತ್ತ ತನ್ನ ವಿಸ್ತಾರವನ್ನು ಮಾಡಿಕೊಳ್ಳಲು ಹೆಣಗುತ್ತಿರುವುದಲ್ಲದೆ ಜಗತ್ತಿನ ಬಹು ಭಾಗದಲ್ಲಿ ತನ್ನ ವರ್ಚಸ್ಸನ್ನು ಕೂಡ್ರಿಸುವ ಹವ್ಯಾಸವನ್ನಿಟ್ಟುಕೊಂಡಿದೆ ಎಂದು ಇಂಗ್ಲಂಡ ಅಮೇರಿಕೆಗಳು ಅನ್ನುತ್ತಿವೆ ಇತ್ತ ರಶಿಯಾದ ಮಾತುಗಳನ್ನು ಕೇಳಿದರೆ, ಅಮೇರಿಕೆಯು ಯುರೋಪದ ಪುನರ್ರಚನಾಕಾರ್ಯಕ್ಕೆ ಸಹಾಯ ಮಾಡುವ ಸೋಗುಹಾಕಿ ಆ ಭಾಗವನ್ನು ತನ್ನ ವರ್ಚಸ್ಸಿನ ಕೆಳಗೆ ಹಾಕಿಕೊಳ್ಳಬೇಕೆಂದು ಹೊಂಚು ಹಾಕಿದೆಯೆಂದು ಅದು ಅನ್ನುತ್ತದೆ. ಯಾವ ಪ್ರಶ್ನೆಯನ್ನೂ ಬಗೆಹರಿಯಗೊಡುತ್ತಿಲ್ಲ, ಇಲ್ಲದ ನ್ಯಾಯದ ಮಾತುಗಳನ್ನು ಆಡುತ್ತ ತನ್ನ ಹಟವನ್ನು ಸಾಧಿಸುವುದಕ್ಕೇ ಹೆಣಗುತ್ತಿದೆ. ಆದ್ದರಿಂದ ಅದರೊಡನೆ ಯಾವ ಒಡಂಬಡಿಕೆಯನ್ನೂ ಮಾಡಿಕೊಳ್ಳುವುದು ಅಸಾಧ್ಯವಾಗಿ ಕುಳಿತಿದೆ. ಎಂದು ಅಮೇರಿಕೆಯು ಅನ್ನುತ್ತಿದೆ. ರಶಿಯಾವು ಮಾತ್ರ ಅಮೇರಿಕೆ ಇಂಗ್ಲಂಡುಗಳು ಸಾಮ್ರಾಜ್ಯವಾದಿ ರಾಷ್ಟ್ರಗಳಾಗಿದ್ದು ಅದರ ಪ್ರಸಾರಾರ್ಥವಾಗಿಯೇ ಅವು ಕೆಲಸಮಾಡುತ್ತಿವೆ, ಅವರ ಈ ಪ್ರಯತ್ನ ಮುರಿಯದಿದ್ದರೆ ಅವರು ನಾಳೆ ಪುನಃ ಜಗತ್ತಿನಲ್ಲಿ ತಮ್ಮದೇ ಕೈವಾಟ ಸಾಗಿಸಲು ಯತ್ನಿಸುವರು ಎಂದು ಅನ್ನುತ್ತಿದೆ.

ಈ ತಿಕ್ಕಾಟದ ಮಾತುಗಳನ್ನು ನೋಡಿದರೆ ಹೊರಗಿನವರಿಗೆ ಏನೂ ಅರ್ಥವಾಗುವಂತಿಲ್ಲ. ಇವರಲ್ಲಿ ಯಾರದು ತಪ್ಪು ಯಾರದು ಸರಿ ಎಂದು ಹೇಳಲು ಬರುವಂತಿಲ್ಲ.

ತನ್ನ ಪ್ರಭುತ್ವವನ್ನೇ ಬೆಳೆಸಲು ರಶಿಯಾವು ಕಾಲುಕೆದರುತ್ತದೆಯೆನ್ನಬೇಕೇ ? ಅದರಲ್ಲಿ ಉಂಟಾದ ಆರ್ಥಿಕ ತೊಂದರೆಯನ್ನು ನೋಡಿವರೆ ಹೀಗೆ ಕಾಲುಕೆದರುವುದು ಅದಕ್ಕೆ ಸಾಧ್ಯವಾಗಿ ತೋರುವುದಿಲ್ಲ. ಅದು ಆಗಾಗ್ಗೆ ವ್ಯಕ್ತಪಡಿಸುವ ಹಟಮಾರಿತನವನ್ನು ನೋಡಿದರೆ ಹೀಗೇಕೆ ಮಾಡಬೇಕು ಎಂದೆನಿಸುತ್ತದೆ.

ಅಮೇರಿಕೆಯನ್ನು ನೋಡಿವರೆ ಅದು ಎಷ್ಟೋ ಪರೋಪಕಾರ ಬುದ್ಧಿಯಿಂದ ಇಂದು ಯುರೋಪಕ್ಕೆ ಸಹಾಯಮಾಡಲು ಹೊರಬಿದ್ದರೂ ಅದರಲ್ಲಿ ರಾಜಕೀಯ ಉದ್ದೇಶವೂ ಇದ್ದೇ ಇದೆಯೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಮೇರಿಕೆಯು ಹೀಗೆ ಮಾಡುತ್ತಿರುವುದರ ಬಗ್ಗೆ ರಶಿಯಾವು, ಅವಾಸ್ತವವಾಗಿದೆಂದೂ ಹೇಳಲು ಬರುವಂತಿಲ್ಲ

ಎರಡೂ ಪಕ್ಷದವರು ಒಟ್ಟಿಗೆ ಕೂಡಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡು ತಮ್ಮಿಂದ ಜಗತ್ತಿಗಾಗಬಹುದಾದ ತಲ್ಲಣವನ್ನು ತಪ್ಪಿಸುವುದು ಯೋಗ್ಯವಾಗಿದೆಯೆಂದು ಮಾತ್ರ ಮೂರನೆಯವರು ಹೇಳಬಹುದಾಗಿದೆ ಮೊನ್ನೆ ಮೊನ್ನೆ ಆದ ಮಹಾಯುದ್ಧದಿಂದ ಜಗತ್ತು

ಇನ್ನೂ ಕಷ್ಟಮಯಸ್ಥಿತಿಯಲ್ಲಿರುವಾಗ ಪುನಃ ಹೀಗೆ ಹೊಡೆದಾಡಿ ಇವರು ಕಿಡಿಯೆಬ್ಬಿಸುವುದು ಯಾರಿಗೂ ಸೇರಲಾರದು.

ಹೇಳುವುದು ಸುಲಭವಾದರೂ ಆ ಮನಸ್ಥಿತಿಯಲ್ಲಿದ್ದ ಪಕ್ಷಗಳ ಮನೋವೃತ್ತಿಯು ದೃಷ್ಟಿಯಿಂದ ಅದನ್ನು ಕಾರ್ಯದಲ್ಲಿ ತರುವ ವಿಷಯವು ಅಷ್ಟೇ ಕಷ್ಟಕರವಾಗಿವೆಯೆಂಬುವದನ್ನೂ ಒಪ್ಪಿಕೊಳ್ಳದೆ ಗತ್ಯಂತರವಿಲ್ಲ.

ಒಟ್ಟಿನಲ್ಲಿ ಇಂದು ಈ ಎರಡು ಪಕ್ಷಗಳಲ್ಲಿ ಒಮ್ಮತವಾಗಲಿಲ್ಲ ಮತ್ತು ಆಗುವ ಲಕ್ಷಣಗಳೂ ತೋರುತ್ತಿಲ್ಲ ಅವರ ವಿರುದ್ಧವಾಗಿ, ಅವರಲ್ಲಿಯು ದ್ವೇಷಾಸೂಯೆಗಳು ಮತ್ತು ಸಂಶಯವೃತ್ತಿಯು ದಿನದಿನಕ್ಕೆ ಬೆಳೆಯುತ್ತಿದೆ

ಸಂಧಾನದ ಮಾತುಗಳು ಇತ್ತ ನಡೆಯುತ್ತಿರುವಾಗಲೇ, ಈ ಎರಡು ಪಕ್ಷಗಳು ತಮ್ಮ ತಮ್ಮ ಕುದುರೆಗಳನ್ನು ಮುಂದೆ ಓಡಿಸಲು, ಸಿದ್ಧತೆ ಮಾಡಿಕೊಂಡು ಆ ಸಂಬಂಧವಾಗಿ ಉಗ್ರ ಕಾರ್ಯಕ್ರಮಗಳನ್ನು ಸಾಗಿಸುತ್ತಲೇ ಇದ್ದವು ಅದರ ಪರಿಣಾಮವೇ ಇಂದು ಜಗತ್ತಿನ ಸರ್ವಭಾಗಗಳಲ್ಲಿ ಕಂಡು ಬರುತ್ತಿರುವ ಕಮ್ಯೂನಿಸ್ಟ ಮತ್ತು ಇತರ ಪಕ್ಷಗಳ ತಿಕ್ಕಾಟ.

ಬಿಸಿ ಬಿಸಿ ಸುದ್ದಿಯನ್ನು ಹೇಳಬೇಕಾದರೆ ಫಿನಲಂಡನ್ನು ರಶಿಯಾವು ಬಗಲಿಗೆ ಹಾಕಿಕೊಂಡಿತು. ಅಂತಹ ಚಿಕ್ಕ ಪುಟ್ಟ ರಾಷ್ಟ್ರಗಳು ರಶಿಯಾದ ಬೆದರಿಕೆಗೆ ಬಲಿಬೀಳದೆ ಇರುವುದು ಅಸಾಧ್ಯವಾದ ಮಾತು

ಝೆಕೋಸ್ಲೋವಾಕಿಯಾ ದೇಶದ ಅಧ್ಯಕ್ಷರಾದ ಡಾ. ಎಡ್ವರ್ಡ ಬೆನೆಸರು ತಮ್ಮ ಸ್ಥಾನಕ್ಕೆ ತ್ಯಾಗಪತ್ರವನ್ನು ಕೊಟ್ಟಿದ್ದಾರಂತೆ. ಇದು ತೀರ ಹೊಸ ಸುದ್ದಿ. ಇದರಿಂದಲೇ ಈ ತಿಕ್ಕಾಟಕ್ಕೆ ಅತಿರೇಕತೆ ಬರುವುದೆಂದು ಜಾಗತಿಕ ರಾಜಕಾರಣಿಗಳು ಅಭಿಪ್ರಾಯ ಪಡುತ್ತಿದ್ದಾರೆ ಇದು ಮೂರನೆ ಯುದ್ಧಕ್ಕೆ ''ಶಾಂತಿಪಾಠ'' ವಾಗಬಹುದೆಂದೂ ಅವರ ಅಂಬೋಣವಿದೆ. ಎಲ್ಲೆಡೆಗಳಲ್ಲಿಯೂ ಮೂರನೆಯುದ್ಧದ ಮಾತು ಇಂದು ನಡೆದಿರುವುದಕ್ಕೆ ಇದೇ ಕಾರಣ.

ಕಮ್ಯೂನಿಸ್ಟರ ಆಕ್ರಮಣವೃತ್ತಿಯು ಬೆಳೆಯುತ್ತ ಝೆಕೋಸ್ಲೋವಾಕಿಯಾದ ಆಡಳಿತವನ್ನೇ ತಮ್ಮ ಕಡೆಗೆ ತೆಗೆದುಕೊಳ್ಳಲು ಅವರು ಸಮರ್ಥರಾದುದರಿಂದಲೇ ಆ ದೇಶದ ಅಧ್ಯಕ್ಷರಾದ ಡಾ. ಬೆನೆಸರು ಉಪಾಯಗಾಣದೆ ಅಧ್ಯಕ್ಷ ಪದವಿಯನ್ನು ಬಿಟ್ಟು ಹೊರಬಿದ್ದಿದ್ದಾರೆ. ಇದರಿಂದ ಅಮೇರಿಕೆ ಇಂಗ್ಲಂಡುಗಳ ಪಕ್ಷವು ಹೌಹಾರಿದೆ ಮತ್ತು ಇದಕ್ಕೆ ತಕ್ಕ ತಮ್ಮ ಸಿದ್ಧತೆಯನ್ನು ಮಾಡಿಕೊಳ್ಳುವ ಗಡಿಬಿಡಿಯಲ್ಲಿ ಬಿದ್ದಿದೆ

ಯುದ್ಧವಾಗಲು ಇಷ್ಟೇ ಕಾರಣವು ಸಾಕಾಗಿದೆ. ಅದರ ಉಗಮವು ಸಣ್ಣದಿದ್ದರೂ ಮುಂದೆ ಅದು ಜಾಗತಿಕ ಸ್ವರೂಪವನ್ನು ತಳೆಯುವುದಕ್ಕೆ ತಡವಾಗುವದಿಲ್ಲ. ಉಗಮವು ಯಾವಾಗಲೂ ಸಣ್ಣದೇ ಇರುತ್ತದೆ. ಅದರಿಂದ ಹೊರಡುವ ನದಿಯು ಮುಂದೆ ಭಯಾನಕ ಸ್ವರೂಪವನ್ನು ತಾಳುವದೆಂಬುದು ಅನುಭವದ ಮಾತಾಗಿದೆ.

ಆಲೋಚನೆ ಮಾಡುತ್ತ, ಯುದ್ಧವಾದರೆ ಏನುಗತಿ ಎಂದು ತಳಮಳಿಸುವುದರಲ್ಲಿ ಏನೂ ಅರ್ಥವಿಲ್ಲ. ಆ ತಳಮಳದಿಂದ ನಮ್ಮ ದೌರ್ಬಲ್ಯವು ಮಾತ್ರ ಹೊರಬೀಳುವುದೇ ವಿನಾ ಆ ಯುದ್ಧವೇನೂ ನಿಲ್ಲುವುದಿಲ್ಲ

ಏನೇ ಆಗಲಿ ಅದನ್ನು ಜಗತ್ತು ಸಹಿಸುವದೊಂದೇ ಯುಕ್ತ ಉಪಾಯವಾಗಿದೆ. ಇದು ಒಂದು ಕಾಲ ಪ್ರಬಲ ಶಕ್ತಿಗಳು ಹೀಗೆ ಪರಸ್ಪರ ತಿಕ್ಕಾಟದಲ್ಲಿಯೇ ನುಗ್ಗಾಗಿ ಮಾಯವಾಗಬೇಕಾಗುತ್ತದೆ. ಮೇಲಿಂದ ಮೇಲೆ ಯುದ್ಧವಾಗುವುದರಿಂದಲೇ ಅವುಗಳು ಹಣ್ಣಾಗುವುದುಂಟು ಒಮ್ಮೆ ಇವರ ತೋಳುತಿಂಡಿ ತೀರಿಹೋದರೆ ಜಗತ್ತಿಗೆ ಆ ಮೇಲಾದರೂ ಸುಖಶಾಂತಿಗಳು ಲಭಿಸಬಹುದಾಗಿದೆ. ಆ ದಿನದ ದಾರಿಕಾಯುತ್ತ ಜಗತ್ತು ಅಥವಾ ಶಾಂತಿಪ್ರಿಯ ಜನತೆಯು ಕಾಲಹರಣ ಮಾಡಬೇಕಾಗಿದೆ.

---

## ಇಂಗ್ಲಂಡಿನಿಂದ ಇಂಡಿಯಾಕ್ಕೆ ಬೈಸಿಕಲ್ಲುಗಳು

1942ರಲ್ಲಿ ಇಂಗ್ಲಂಡು ಇಂಡಿಯಾಕ್ಕೆ 2 ಕೋಟಿ 60 ಲಕ್ಷ ರೂ ಬೆಲೆಯ 3 ಲಕ್ಷ ಬೈಸಿಕಲ್ಲುಗಳನ್ನು ಕಳುಹಿಸಿದೆ 1946ರಲ್ಲಿ 1 ಕೋಟಿ 60 ಲಕ್ಷ ರೂ ಬೈಸಿಕಲ್ಲುಗಳು ಬಂದಿದ್ದವು. ಜಗತ್ತಿನಲ್ಲೇ ಈ ಪ್ರಮಾಣದ ಸೈಕಲ್ ಉತ್ಪನ್ನವು ಯಾವ ದೇಶದಲ್ಲಿಯೂ ಇಲ್ಲ. ಇಂಗ್ಲೆಂಡಿನ ಕಾರ್ಖಾನೆಗಳಲ್ಲಿ ಪ್ರತಿನಿತ್ಯವೂ 8200 ಬೈಸಿಕಲ್ಲುಗಳು ಅಂದರೆ 8 ಗಂಟೆಯ ಕಾರ್ಯದಲ್ಲಿ ನಿಮಿಷಕ್ಕೆ 17 ತಯಾರಿಸುತ್ತಿರುವರು. ಇದೇ ಲೆಕ್ಕದ ಪ್ರಕಾರಕ್ಕೆ ಪ್ರತಿದಿವಸವೂ 10 ರಂತೆ ಪರದೇಶಗಳಿಗೆ ಕಳುಹಿಸುತ್ತಿರುವರು.

132

# The Rayalaseema Bank Ltd., H. O. Bellary.

)0(

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

]0[

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಅರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.

ಶಾಖೆಗಳು | ಮದ್ರಾಸು : ೩೦೧ ಲಿಂಗಶೆಟ್ಟಿ ಬೀದಿ.
ಬೆಂಗಳೂರು : ರುಕ್ಮಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ $3\frac{1}{4}\%$ — ಎರಡು ವರ್ಷ $3\frac{1}{2}\%$

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತವೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಕೆಚ್. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್–ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

---

# NAVA BHARAT BELLARY.

Reg. No. M. 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..........................................
..........................................
..........................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

೧೧ |
ಕೆ ೧೧ | ಬಳ್ಳಾರಿ ಮಾರ್ಚ್ ೨೨ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶ
ಟಿ. ಬಿ. ಕೇಶವರಾವ್.

## ಯೂರೋಪಿನ ಪಶ್ಚಿಮ ರಾಷ್ಟ್ರಗಳು ೫೦ ವರ್ಷದ ಒಪ್ಪಂದ.

ಬ್ರುಸೆಲ್ಸ ತಾ ೧೭.... ಬ್ರಿಟನ್, ಫ್ರಾನ್ಸ ಬೆಲ್ಜಿಯಂ, ಹಾಲಂಡ ಮತ್ತು ಲಕ್ಸೆಂಬರ್ಗ್ ಈ ಐದು ರಾಷ್ಟ್ರಗಳ ಪ್ರತಿನಿಧಿಗಳು ಇಂದು ೫೦ ವರುಷಗಳ ಪರಸ್ಪರ ಸಹಾಯಕ ಮಿಲಿಟರಿ. ಆರ್ಥಿಕ ಹಾಗೂ ಸಾಂಸ್ಕೃತಿಕ ಒಪ್ಪಂದಕ್ಕೆ ಸಹಿ ಹಾಕಿದರು. ಕೆಲವು ಕರಾರುಗಳನ್ನಯು ಇನ್ನಿತರ ದೇಶಗಳೂ ಇದರೊಂದಿಗೆ ಕೂಡಿಕೊಳ್ಳಬಹುದು.

ಪ್ರಜಾಸತ್ತೆ. ವ್ಯಕ್ತಿ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಘಟನಾತ್ಮಕ ಪರಂಪರೆ, ಶಾಸನ ರಾಜ್ಯಗಳನ್ನು ರಕ್ಷಿಸಿಕೊಳ್ಳಲು ಮಾಡಿಕೊಂಡ ಈ ಒಪ್ಪಂದದನ್ವಯ, ಈ ಯಾವುದಾದರೊಂದು ರಾಷ್ಟ್ರದಮೇಲೆ ಆಕ್ರಮಣಶೀಲ ದಬ್ಬಾಳಿಕೆ ನಡೆದರೆ, ಸಂಯುಕ್ತ ರಾಷ್ಟ್ರ ಸಂಘದ ೫೧ನೇ ಸೂತ್ರದನ್ವಯ ಉಳಿದ ರಾಷ್ಟ್ರಗಳು ಆ ರಾಷ್ಟ್ರಕ್ಕೆ ಆರ್ಥಿಕ ಮಿಲಿಟರಿ ಹಾಗೂ ಇನ್ನಿತರ ಸಹಾಯಗಳನ್ನು ನೀಡುವವು

ಅಂಥ ಉಪಾಯಗಳನ್ನೆಲ್ಲ ಆ ಕೂಡಲೇ ಭದ್ರತಾ ಮಂಡಲಕ್ಕೆ ತಿಳಿಸಬೇಕು ಮತ್ತು ಭದ್ರತಾ ಮಂಡಲವು ಅಂತರಾಷ್ಟ್ರೀಯ ಶಾಂತಿ ರಕ್ಷಣೆಗಾಗಿ ಯೋಗ್ಯ ಉಪಾಯವನ್ನು ತೆಗೆದುಕೊಂಡ ಮೇಲೆ ಸಹಾಯ ನಿಲ್ಲಿಸಬೇಕು.

ಒಂದು ಶಾಶ್ವತ ಸಲಹಾಮಂಡಲವನ್ನು ರಚಿಸಲಾಗುವುದು. ಜರ್ಮನಿ ಪುನಃ ಆಕ್ರಮಣ ಶೀಲ ದಬ್ಬಾಳಿಕೆ ಕೈಕೊಂಡರೆ ಅಥವಾ ಯಾವುದೇ ಭಾಗದಲ್ಲಿ ಶಾಂತಿಗೆ ಗಂಡಾಂತರ ಬರುವ ಪರಿಸ್ಥಿತಿ ಉದ್ಭವಿಸಿದರೆ ಅಥವಾ ಆರ್ಥಿಕ ಸುವ್ಯವಸ್ಥೆಗೆ ಗಂಡಾಂತರ ಬರುವ ಪರಿಸ್ಥಿತಿಯುಂಟಾದರೆ ಒಂದು ರಾಷ್ಟ್ರದ ವಿನಂತಿಯನ್ನು ಲಕ್ಷಿಸಿ ಸಲಹಾ ಮಂಡಲವು ಪರ್ಯಾಲೋಚನೆ ನಡೆಸುವುದು.

## ಕಾಶ್ಮೀರ ಪ್ರಶ್ನೆ ಭದ್ರತಾ ಮಂಡಲದ ಸೂಚನೆ

ಈಗ ಭದ್ರತಾ ಮಂಡಲದ ಅಧ್ಯಕ್ಷರಾಗಿರುವ ಚೀನದ ಡಾ॥ ಟಿ. ಎಸ್ ಸಿಯಾಂಗರು ಕಾಶ್ಮೀರದೊಳಗೆ ಒಂದು ಗೊತ್ತುವಳಿಯನ್ನು ಮಂಡಿಸಿರುವರು ಭಾರತ ಸೈನ್ಯವನ್ನು ಕ್ರಮೇಣವಾಗಿ ಹಿಂತೆಗೆದುಕೊಳ್ಳಬೇಕು. ಅಲ್ಲಿ ಸಾರ್ವತ್ರಿಕ ಮತಗಣನೆಯು ಪಕ್ಷಾತೀತವಾಗಿ ಸ್ವತಂತ್ರವಾಗಿ ನಡೆಯಲು ಏರ್ಪಡಿಸಬೇಕು. ಭದ್ರತಾ ಮಂಡಲದ ಕಮಿಶನ್ ಮೇಲ್ವಿಚಾರಣೆಯಲ್ಲಿ ಇದು ನಡೆಯಬೇಕು. ಈಗಿರುವ ನಡುಗಾಲ ಸರ್ಕಾರವು ಮತಗಣನೆಯಲ್ಲಿ ತನ್ನ ಪ್ರಭಾವವನ್ನು ಬೀರದಿರಬೇಕು - ವಗೈರೆ ಇಂಡಿಯಾ ಮತ್ತು ಪಾಕಿಸ್ತಾನ ಪ್ರತಿನಿಧಿಗಳು ತಮ್ಮ ತಿದ್ದುಪಡಿಗಳನ್ನು ಸೂಚಿಸಲು ಅವಕಾಶಕೊಟ್ಟಿರುವರು. ಪಾಕಿಸ್ತಾನ ಪ್ರತಿನಿಧಿಗಳಾದ ಝಫರುಲ್ಲಾರು ಗಾಬರಿಗೊಂಡಿದ್ದಾರಂತೆ.

## ಸೀಖರು ಕಾಂಗ್ರೆಸ್ ಸೇರಲು ನಿರ್ಧರಿಸಿದರು

ಭಾರತ ಮಹಾಶಾಸನಸಭೆ, ಪೂರ್ವ ಪಂಜಾಬ ಶಾಸನ ಸಭೆಗಳಲ್ಲಿ ಶಿರೋಮಣಿ ಅಕಾಲಿದಳದ ಸದಸ್ಯರು ಕೂಡಲೇ ಕಾಂಗ್ರೆಸ್ ಸೇರಬೇಕೆಂದು ನಿರ್ಧರಿಸಿದರು, ಅಕಾಲಿಪಕ್ಷವು ಇದರಿಂದೇನು ರದ್ದಾಗದಂತಾಗಲಿಲ್ಲ. ಜಾತೀಯ ಪ್ರಶ್ನೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ಪ್ರಾರಂಭದಿಂದಲೂ ಕಾಂಗ್ರೆಸ್ಸಿನ ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮಗಳಿಗೆ ಸೀಖರು ಬೆಂಬಲ ಕೊಡುತ್ತಾ ಬಂದಿರುವರು ಅಕಾಲಿದಲವು ಇನ್ನುಮುಂದೆ ಸೀಖಧರ್ಮ ಪ್ರಚಾರ, ಪಾಕಿಸ್ತಾನದಲ್ಲಿನ ಸೀಖ ಗುರುದ್ವಾರಗಳ ಸಂರಕ್ಷಣೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪ್ರಗತಿಗಳ ಕಡೆ ಗಮನಕೊಡುವುದು.

---

## ಗಾಂಧಿ ಸ್ಮರಣೆ

**"ಹುಟ್ಟತರುವರಮನೆಗೆ — ಹುಲ್ಲತರುವಾ"**

**ಯೆಂಬ ಪುರಂದರದಾಸರ ಹಾಡಿನಂತೆ,**

ರಾಗ - ಭೀಂಪಲಾಸು, ತಾಳ - ಅರಘೂಂಪೆ.

ಹಿಂದುಳಿದ - ಹರಿಜನರ - ಮುಂದೆ ತಂದಾ - (ಪ)
ಹಿಂದು - ಇಸಲಾಂ ಬಂಧು - ಗಾಂಧಿತಾ ಬಂದೂ -
‖ ಅ. ಪ ‖

ದೇಶಸೇವೆಗೆ ದೇಹ - ಮೀಸಲಾಗಿರಿಸುತಾ -
ಯೋಸೋ ಉಪವಾಸ - ಸೋಶಿನೋಳ್ ಮಾಡಿದಾ -
ಈಸಿದಾ ಕಿರಿವಾಸ ಜೈಸಿದಾ ಪರವಾಶಾ -
ದೇಶದಾ ಹಿತಕೆ ತಾ - ಅಸುವನೇ ನೀಡಿದಾ - (1)

ಬಲಹೀನ ಭಾಂಧವರ ಹೊಲೆಯರೆಂದೇಳುವಾ -
ಕುಲಜಾತಿಯಾಮೂಲ - ನಿನರ್ಮೂಲ ಮಾಡಿದಾ -
ನಲಿದು ಹರಿಜನರದೇ - ವಾಲಯವ ಬಿಡಿಸಿದಾ -
ತಲೆಬಾಗಿ ನಡೆಯುವರ - ತಲೆಯೆತ್ತಿಸಿದನೋ - (2)

ನಿಂದಿಸರ - ವಂದಿಸರ - ಒಂದಾಗಿ ನೋಡಿದಾ )
ವಂದೇಮಾತರಂ - ಯೆಂದುತಾಹಾಡಿದಾ -
ಹಿಂದೂದೇಶವೇ ತನ್ನ - ಬಂಧುಬಳಗಾವೆಂದ -
ತಂದೆಯಾ - ಮಕ್ಕಳೇ - ಕೊಂದರೋಯೆಂದೂ - (3)

[C. P. R. Hpt.]

## ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಸಮಿತಿ.

೧೪ನೆಯ ದಿನಾಂಕ ಜಿಲ್ಲಾಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಹೊಸಪೇಟೆಯಲ್ಲಿ ಸಮಾವೇಶವಾಗಿ ತೀರ್ಮಾನಗಳಾದವು.

ಜಗದ್ವಂದ್ಯ ಗಾಂಧೀಜಿ ದುರಂತ ನಿಧನದಿಂದ ದೇಶಕ್ಕೊದಗಿದ ಮಹಾವಿಪತ್ತಿಗಾಗಿ ಎಲ್ಲರೂ ಸರ್ವಂಸಹತೆಯಿಂದ ಕ್ಷಮಿಸಬೇಕೆಂದು ಕೋರುತ್ತದೆ. ಗಾಂಧೀಜಿ ಚಿತಾಭಸ್ಮದಕಾಲಕ್ಕೆ ಭಕ್ತಿ ಪ್ರೇಮ ಪುರಸ್ಸರವಾಗಿ, ಹಂಪೆಯ ಯಾತ್ರೆಯಲ್ಲಿ ಸೇವೆಗೈದ ಎಲ್ಲಾ ಜನರಿಗೂ ಸಮಿತಿಯು ಕೃತಜ್ಞತೆಯನ್ನರ್ಪಿಸುತ ನೂತನ ರಾಜ್ಯ ಘಟನೆಯು ಜಾರಿಯಲ್ಲಿ ಬರುವ ಮೊದಲೇ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಜನರವಿಶ್ವಾಸಕ್ಕೆ ಪಾತ್ರವಾದ ಗಡಿನಿರ್ಣಯ ಸಮಿತಿಯನ್ನು ರಚಿಸಿ ಸೌಹಾರ್ದದಿಂದ ಈಪ್ರಶ್ನೆಯನ್ನು ಬಗೆಹರಿಸಬೇಕೆಂದೂ ಅಖಿಲಕರ್ನಾಟಕ ದೃಷ್ಟಿಯಿಂದ ಒಂದು ಉಪಸಮಿತಿಯು ಅಂಕೆಸಂಖ್ಯೆಗಳನ್ನೊದಗಿಸಲು ನಿಯಮಿತವಾಗಬೇಕೆಂದು ನಿಶ್ಚಯಿಸಲಾಯಿತು.

ಬಳ್ಳಾರಿ ಗಡಿಪ್ರದೇಶಗಳಲ್ಲಿ ಕೊಲೆ ಸುಲಿಗೆ ಅತ್ಯಾಚಾರಗಳು ಹೈದರಬಾದಿನ ಗೂಂಡಾ ಜನರಿಂದ ನಡೆಯುವುದನ್ನು ಈಸಭೆಯು ತೀವ್ರವಾಗಿ ಖಂಡಿಸುತ್ತಾ ಮದ್ರಾಸ್ ಸರ್ಕಾರಕ್ಕೆ ಸೂಕ್ತ ಸಲಹೆ ಕೊಡಲು ಶ್ರೀ ಅನಂತಾಚಾರಿ, ಸುಬ್ರಹ್ಮಣ್ಯಂ ಮತ್ತು ಶ್ರೀ ಸಿರಸಪ್ಪನವರನ್ನು ನಿಯಮಿಸುತ್ತದೆ, ಮದ್ರಾಸ್ ಪ್ರಾಂತದಲ್ಲಿ ಬನಗಾನಪಲ್ಲಿ ಪುದುಕೋಟೆಯಂಥ ಮೊದ್ದ ಸಂಸ್ಥಾನಗಳು ವಿಲೀನೀಕರಣವಾದಾಗ್ಯೂ, ತೀರ ಚಿಕ್ಕದಾದ ಸಂಡೂರು ಈವರೆವಿಗೂ ಬಳ್ಳಾರಿಜಿಲ್ಲೆಯಲ್ಲಿ ವಿಲೀನೀಕರಣವಾಗದಿರುವುದು ಆಶ್ಚರ್ಯವಾಗಿದೆ, ಕೂಡಲೇ ಬಳ್ಳಾರಿಯಲ್ಲಿ ಸಂಡೂರು ಸೇರಬೇಕು ಜಿಲ್ಲೆಯಲ್ಲಿನ ಮುನಿಸಿಪಲ ನಗರಗಳಾದ ಬಳ್ಳಾರಿ-ಆದವಾನಿ, ಹೊಸಪೇಟೆಯಲ್ಲಿನ ಸೀದಾಪದ್ಧತಿಯು ರದ್ದಾಗಬೇಕು

---

THE NAVA BHARAT
ನವಭಾರತ
ಸಂಪಾದಕ-ಟಿ.ಬಿ.ಕೇಶವರಾವ್

ಸೋಮವಾರ 22 ಮಾರ್ಚ 1948.

# ಅಮೆರಿಕಾದ ಅಪಾಯ ಘೋಷಣೆ.

ಯೂರೋಪ ಪೂರ್ವ ಮತ್ತು ಏಷಿಯಾದಲ್ಲಿ ಆವರಿಸಿರುವ ಬಲಾಢ್ಯ ರಾಷ್ಟ್ರವಾದ ರಷ್ಯವು - ಯೂರೋಪ್ ಪೂರ್ವಭಾಗವನ್ನೆಲ್ಲಾ ತನ್ನ ಪ್ರತಿಭಾಕ್ಷೇತ್ರಕ್ಕೆಳೆದುಕೊಂಡಿತು. ಫಿನ್‌ಲೆಂಡಿನ ತರುವಾಯ ಜೆಕೊಸ್ಲೋವೇಕಿಯಾ ದೇಶದಲ್ಲಿಯೂ ಆಡಳಿತ ಸೂತ್ರಗಳನ್ನು ಕಮ್ಯೂನಿಷ್ಟರು ವಹಿಸಿಕೊಂಡಮೇಲೆ ಅಮೆರಿಕಾಕ್ಕೆ ಭಯ ಹುಟ್ಟಿತು. ಇಟಲಿಯಲ್ಲಿ ಏಪ್ರಿಲ್ ೧೮ರ ದಿನ ಚುನಾವಣೆಗಳು ನಡೆಯಲಿವೆ. ಅದರ ಆಡಳಿತವೂ ರಷ್ಯಾದ ಕಮ್ಯೂನಿಸಂ ತತ್ವದ ಪ್ರಕಾರವಾಗಿಯಾದರೆ ಯುದ್ಧವು ಶತಸಿದ್ಧವಾದುದು ಎಂದು ಹೇಳುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಅಮೆರಿಕಾವು, ತನ್ನ ಘೋಷಣೆಯಲ್ಲಿ ರಷ್ಯಾದ ಈ ಅಪಾಯವನ್ನು ಜಗಕ್ಕೆ ಸಾರಿ ಹಿಂದಿನಂತೆ ತಪ್ಪು ಮಾಡುವುದಿಲ್ಲೆಂದು ಸ್ಪಷ್ಟೀಕರಿಸಿದೆ. ಹಿಟ್ಲರನ ಅಪಾಯವನ್ನು ಕ್ಷುಲ್ಲಕವೆಂದು ತುಚ್ಛೀಕರಿಸಿ ಬಹುಕಾಲ ಔದಾಶೀನ್ಯವನ್ನು ವಹಿಸಿದ ಕಾರಣ - ಹಿಟ್ಲರನು ಬಲಗೊಂಡು ದ್ವಿತೀಯ ಮಹಾಯುದ್ಧದ ಪರಿಣಾಮ ಪ್ರಪಂಚವೇ ತಲ್ಲಣಗೊಳ್ಳಬೇಕಾಯಿತು. ಅದಕ್ಕಾಗಿ ಪ್ರಜಾತತ್ವರಾಷ್ಟ್ರಗಳು ಬಹು ಬೆಲೆಯನ್ನು ಕೊಡಬೇಕಾಯಿತು.

ಅಮೆರಿಕಾದ ಹೇಳಿಕೆಯ ಪ್ರಕಾರ ಕ್ಕೆ ರಷ್ಯಾದ ಸರ್ವಾಧಿಕಾರಿ ಸ್ಟಾಲಿನ್ನನಿಗೆ - ಇಷ್ಟು ಅವಕಾಶವನ್ನು ಕೊಡಲಾಗುವುದಿಲ್ಲವಂತೆ - ದ್ವಿತೀಯ ಮಹಾಯುದ್ಧದಿಂದ ಯೂರೋಪ್ ರಾಷ್ಟ್ರಗಳು ಹಾಳಾಗಿಹೋಗಿವೆ. ಅವು ಚೇತರಿಸಿಕೊಳ್ಳಬೇಕಾದರೆ - ಅಗಾಧ ಆರ್ಥಿಕ ಸಹಾಯಬೇಕು. ಅಂಥಾ ಆರ್ಥಿಕ ಸಹಾಯವನ್ನು ಈ ನಾಶಹೊಂದಿದ ರಾಷ್ಟ್ರಗಳಿಗೊದಗಿಸಬಲ್ಲ ಸಮರ್ಥ ಸಂಪನ್ನ ರಾಷ್ಟ್ರವೆಂದರೆ ಅಮೆರಿಕಾ ಒಂದೇ !! ಈ ಕಾರಣ ಅಮೆರಿಕಾವು ತನ್ನ ಮಹಾಶಾಸನ ಸಭೆಯಲ್ಲಿ ಯೂರೋಪ್ ಪಶ್ಚಿಮ ರಾಷ್ಟ್ರಗಳ ಪುನರ್ರಚನೆ ಪುನರುತ್ಥಾನಕ್ಕಾಗಿ ಅನೇಕ ಕೋಟಿ ರೂಪಾಯಿಗಳನ್ನು ಕೊಡಲು ನಿಶ್ಚಯಿಸಿದೆ. ಈ ದ್ರವ್ಯವು ದಾನವೋ - ಸಾಲವೋ ಗೊತ್ತಿಲ್ಲ. ಈ ಹಣಸಹಾಯ ಹೊಂದಿದ ರಾಷ್ಟ್ರಗಳು ಚೇತರಿಸಿಗೊಂಡು ಪುನಃ ಅಮೇರಿಕಾದ ಸಾಲವನ್ನು ಹಿಂದಕ್ಕೆ ಕೊಡುವುದು ಅನುಮಾನ.

ಯೂರೋಪಿನ ಸಣ್ಣ - ಪುಟ್ಟರಾಷ್ಟ್ರಗಳ ಮಾತು ಹಾಗಿರಲಿ, ಪ್ರಪಂಚದ ಪ್ರತಿಯೊಂದು ದೇಶಕ್ಕೂ, ದ್ವಿತೀಯ ಮಹಾಯುದ್ಧದ ಬೇಗೆಯುತಗಲಿ, ಆರ್ಥಿಕ ರಚನೆಯೇ ಕುಸಿದು ಬಿದ್ದಿದೆ, ಹೀಗಿರುವಾಗ ತೃತೀಯ ಮಹಾಯುದ್ಧವೆಂದರೆ. ಜಗತ್ತಿನ ನಾಶವು ಸರ್ವವಿಧಗಳಲ್ಲಿಯೂ ಪೂರ್ಣವಾಗುವುದು, ಶಾಂತಿಯನ್ನು ಕೋರುತ್ತಿದ್ದ. ಅಹಿಂಸಾ ಶಾಂತಿಮಾರ್ಗಗಳಿಗಾಗಿ ಯತ್ನಿಸುತ್ತಿದ್ದ, ಒಂದೇ ಒಂದು ಜಗದ್ವಂದ್ಯ ಸೂರ್ಯನೂ (ಗಾಂಧೀಜಿ) ಅಸ್ತಮಯನಾದನು, ಪ್ರಪಂಚದ ಯಾವ ಭಾಗದಲ್ಲಿಯ ಶಾಂತಿಯು ಮಾತು ಕತೆಯಿಲ್ಲ. ಎಲ್ಲಿನೋಡಿದರೂ ಯುದ್ಧ ವಾತಾವರಣ, ತಯಾರಿ, ವಿವಂಚನೆಗಳೇ ಕಂಡುಬರುತ್ತವೆ.

ಜಗತ್ತಿನ ಪ್ರಳಯವಾಗಬೇಕೆಂದು ಭಗವಂತನ ಇಚ್ಛೆ ಇರುವುದೇ ?

---

## ಸಮತಾವಾದಿಗಳು ಕಾಂಗ್ರೆಸ್

ಸಮತಾವಾದಿಗಳು ಕಾಂಗ್ರೆಸ್ ಬಿಡಬೇಕೆಂದು ಅವರ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಅವ ಶಿಫಾರಸನ್ನು ಮಹಾಧಿವೇಶನವು (ನಾಸಿಕ್) ಸ್ವೀಕರಿಸಬಹುದೆಂದು ನಂಬಲಾಗಿದೆ.

# ಮಾದರಿ ಮದುವೆ
## ವಧು ಬ್ರಾಹ್ಮಣ—ವರ ಹರಿಜನ

ಸೇವಾಗ್ರಾಮದ ಕಸ್ತೂರಿಬಾ ನಿವಾಸದ ಮುಂಭಾಗದಲ್ಲಿ ೧೧ನೇ ತಾ|| ಹರಿಜನ ಹುಡುಗನಿಗೂ ಬ್ರಾಹ್ಮಣ ಹುಡಿಗಿಗೂ ವಿವಾಹ ನೆರವೇರಿತು. ವರನು ಅರ್ಜುನ ಭಾಯ್, ಎಂಬ ಒಬ್ಬ ಹರಿಜನ ಯುವಕ. ವಧುವು ಒಬ್ಬ ಅಚ್ಚ ಸನಾತನಿ ರಾಮಚಂದ್ರರಾವ ಎಂಬ ಒಬ್ಬ ಬ್ರಾಹ್ಮಣನ ಮಗಳು ಆಕೆಯ ಹೆಸರು ಕುಮಾರಿ ಮನೋರಮ ವಧುವಿನ ತಂದೆ ಆಂಧ್ರದ ಕಡೆಯವನು. ಎ. ಐ. ಸಿ. ಸಿ. ಸದಸ್ಯ.

ಪ್ರಭಾಕರಜಿಯವರು ವಿವಾಹದ ವಿಧಿ ನಿಯಮಗಳನ್ನು ನೆರವೇರಿಸಿದರು. ದಂಪತಿಗಳು ಜೀವನವನ್ನೂ ತ್ಯಾಗ ಮತ್ತು ಸೇವೆಯಿಂದ ಕಳೆಯುತ್ತೇವೆಂದು ಪ್ರತಿಜ್ಞೆ ಮಾಡಿದರು.

ದಂಪತಿಗಳನ್ನು ಇಂದು ಅತಿಥಿಗಳಿಗೆ ಪರಿಚಯ ಮಾಡಿಕೊಡುತ್ತಾ ಸೇವಾಗ್ರಾಮಾಶ್ರಮದ ಪ್ರಮುಖ ಕಾರ್ಯಕರ್ತರಾದ ಶ್ರೀ ಮಹಾಲಾಲರವರು, ಗಾಂಧೀಜಿಯು ತಾವು ಬದುಕಿರುವಾಗ ಈ ವಿವಾಹವನ್ನು ನಡೆಸಬೇಕೆಂದು ಎರಡು ವರ್ಷಗಳ ಹಿಂದೆಯೇ ನಿರ್ಧರಿಸಿದರು. ದಂಪತಿಗಳಲ್ಲಿ ಒಬ್ಬರಾದರೂ ಹರಿಜನರಾದರೆ ಅಂಥಹಾ ದಂಪತಿಗಳಿಗೆ ಮಾತ್ರ ನಾನು ಆಶೀರ್ವದಿಸುವೆನು ಎಂದು ಹೇಳುತಿದ್ದರು. ಮದುವೆಯಾದ ಅನಂತರ ಪಂಡಿತ ನೆಹರೂರವರು ಆಶ್ರಮಕ್ಕೆ ಬಂದರು. ದಂಪತಿಗಳು ನೆಹರೂರ ಪಾದಧೂಳಿಯನ್ನು ಹಣೆಗೆ ಹಚ್ಚಿಕೊಂಡರು. ನೆಹರೂರವರು ಆ ದಂಪತಿಗಳಿಗೆ ಆಶೀರ್ವದಿಸಿದರು.

---

### ಪಾಕಿಸ್ತಾನದಲ್ಲಿ ಖಾದಿ ಉಪಯೋಗ

ಪಾಕಿಸ್ತಾನದಲ್ಲಿ ಬಟ್ಟೆಯ ಕ್ಷಾಮವು ಅಧಿಕವಾಗಿರುವ ಕಾರಣ ಚರಖಾಗಳನ್ನು ಜಾರಿಯಲ್ಲಿ ತಂದು ಖಾದಿಯನ್ನು ಉತ್ಪನ್ನ ಮಾಡಿ ಜನತೆಗೆ ಒದಗಿಸಬೇಕೆಂದು ಪಾಕಿಸ್ತಾನ ಸರಕಾರವು ನಿಶ್ಚಯಿಸಿದೆಯೆಂದು ಪ್ರಕಟವಾಗಿದೆ.

### ಹೈದರಾಬಾದ್ ಅತ್ಯಾಚಾರಗಳು

ಮದ್ರಾಸ್ ಆದಿಪತ್ಯದ ಕರ್ನೂಲು ಜಿಲ್ಲೆಯ ದೇವಮಾದಹಳ್ಳಿಗೆ ಹೈದರಾಬಾದಿನ ೩೦ ಗುಂಡಾಜನರು ಬಂದು ಲೂಟಿಮಾಡಿದ್ದಾರೆ.

### ರ ಷ್ಯಾ ದ ಸೈ ನ್ಯ ಬ ಲ

ರಷ್ಯಾದಲ್ಲಿ ೩೦ ಲಕ್ಷ ಸೈನಿಕರೂ, ೬ ಲಕ್ಷ ವೈಮಾನಿಕರೂ, ೧೪ ಸಾವಿರ ವಿಮಾನಗಳೂ, ಯುದ್ಧಕಾಲದ ಹೆಚ್ಚಿನವರನ್ನು ಮನೆಗೆ ಕಳುಹಿಸಿದ ಮೇಲೆ ಉಳಿಯುವವಂತೆ. ಇವುಗಳ ಅರ್ಧಭಾಗವೂ ಕೂಡ ಆಮೇರಿಕಾದಲ್ಲಿಲ್ಲವಂತೆ ಅಮೇರಿಕಾದಲ್ಲಿನ ಆಟಂಬಾಂಬಿನ ಕಾರ್ಖಾನೆಗಳು ರಷ್ಯಾದಲ್ಲಿರಲಿಕ್ಕಿಲ್ಲವೆಂದು ಕೆಲವರ ಊಹೆ.

### ಮದ್ರಾಸ್ ಕಾಂಗ್ರೆಸ್ ಪಾರ್ಟಿ ಮುಖಂಡರು

ಕಾಂಗ್ರೆಸ್ ಶಾಸನಸಭೆಯ ನಿಯಮಗಳಿಗನುಸರಿಸಿ ಮುಖಂಡರು ವರ್ಷಕ್ಕೊಂದು ಸಲ ಆರಿಸಲ್ಪಡಬೇಕು. ೩೧ ಮಾರ್ಚಿ ಒಳಕ್ಕೆ ಮುಖಂಡರ ಆಯ್ಕೆ ಉಂಟೆಂದೂ, ಮತ್ತೆ ಶ್ರೀ ಟಿ ಪ್ರಕಾಶಂರವರು ಪದಾರೂಢರಾಗಲು ಪ್ರಯತ್ನಿಸುತ್ತಿರುವರೆಂದೂ ಸುದ್ದಿ ಬಂದಿದೆ. ಆದರೆ ಈಗಿದ್ದವರೇ ಮುಂದೆ ಇರುವರೆಂದು ಬಹುಸಂಖ್ಯಾಕರ ಅಂಬೋಣವಿದೆ

---

# ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಾ ರಾಷ್ಟ್ರಭಾಷೆ ಪ್ರವೇಶಿಕ ವಿಶಾರದ ವಿದ್ವಾನ್ ವಗೈರೆ ಪರೀಕ್ಷೆಗಳಿಗೆ ಕೂಡಲೆ ತಕ್ಕ ಸಲಹೆ ಕೊಡುತ್ತೇವೆ ಪರಸ್ಥಳದವರು ಮಾಹಿತಿಗಾಗಿ ಸ್ಟಾಂಪಿಟ್ಟು ಬರೆಯಿರಿ.

ಟಿ. ಬಿ ಕೇಶವರಾವ್

ಜಿಲ್ಲಾ ಹಿಂದೀ ಪ್ರೇಮೀಮಂಡಲ ಬಳ್ಳಾರಿ.

---

ಕೊಲ್ಹಾಪುರದ ಮಂತ್ರಿ ಮಂಡಲವನ್ನು ರದ್ದುಗೊಳಿಸಿ ಪ್ರತ್ಯೇಕ ಆಡಳಿತಗಾರರನ್ನು ನಿಯಮಿಸಲಾಗುವುದೆಂದು ಸಂಸ್ಥಾನ ಕಾರ್ಯಕಾರ್ಯದರ್ಶಿಗಳಾದ ಶ್ರೀ ವಿ. ಟಿ. ಮೆನನ್ನರು ತಿಳಿಸಿರುವರು.

## ಶ್ರೀಮಾನ್ ಬಸರೀಗಿಡದ ವೀರಪ್ಪನವರು

ಗದಗಿನ ದಾನಶೂರ ಶ್ರೀಮಂತ ಬಸರಿಗಿಡದ ವೀರಪ್ಪನವರು ಪೂರ್ವ ಕರ್ನಾಟಕದ ಪ್ರಾಂತ್ಯದ ಆಮಂತ್ರಣವನ್ನು ಸ್ವೀಕರಿಸಿ ಉರವಕೊಂಡ ಭಾಗದಲ್ಲಿ ಕರ್ನಾಟಕ ಏಕೀಕರಣ ಜಾಗ್ರತಿಮಾಡಿ ಜಗದ್ಗುರುಗಳ ಆಶೀರ್ವಾದ ಪಡೆದು ಸಂಡೂರಭಾಗದಲ್ಲಿ ಏಕೀಕರಣ ಪ್ರಸಾರಮಾಡಿ ಗದಗಿಗೆ ತಿರುಗಿದರು.

# GOVERNMENT OF INDIA
# MINISTRY OF LABOUR

## District Employment Office, Bellary.

## ಕೆಲಸಗಳು ಖಾಲಿ ಇವೆ
## ಅರ್ಜಿ ಕೊಡಿರಿ

ಮದ್ರಾಸ್ ಪ್ರಾಂತದ ಪ್ರತ್ಯೇಕ ಪೋಲೀಸ್ ದಳದಲ್ಲಿ ತಿಂಗಳಿಗೆ ರೂ 53—0 0 ವೇತನವುಳ್ಳ ಕಾನ್‌ಸ್ಟೇಬಲರ ಕೆಲಸಗಳು ಖಾಲಿಇವೆ. ಈ ಕೆಳಗೆ ಕಾಣಿಸಿದ ಯೋಗ್ಯತೆಗಳನ್ನುಳ್ಳವರು ನಮಗೆ ಅರ್ಜಿ ಇಟ್ಟುಕೊಂಡರೆ ಕೆಲಸ ದೊರಕಿಸಲು ನಾವು ಸಹಾಯ ಮಾಡುತ್ತೇವೆ. ನಮ್ಮ ಆಫೀಸಿನಲ್ಲಿ ಯಾವ ದಿನವಾದರೂ 11 ರಿಂದ 5 ಗಂಟೆವರೆಗೆ ಎಲ್ಲಾ ಮಾಹಿತಿ ಕೊಡುತ್ತೇವೆ.

| | ಮಿಲಿಟರಿಯಲ್ಲಿದ್ದು ಬಂದವರಿಗೆ | ಇತರರಿಗೆ. |
|---|---|---|
| ಎತ್ತರ | 5 ಅಡಿ 5 ಅಂಗುಲ. | 5 ಅಡಿ 6 ಅಂಗುಲ. |
| ಎದೆಯಳತೆ | 31 ರಿಂದ 33 ಅಂಗುಲ. | 32 ರಿಂದ 34 ,, |
| ವಯಸ್ಸು | 18 ರಿಂದ 25 ವರೆಗೆ. | 18 ರಿಂದ 25 ವರೆ. |

ಕನ್ನಡ ಅಥವಾ ತೆಲುಗು ಓದಲು ಬರೆಯಲು ಬರಬೇಕು ಈ ತಿಂಗಳ 24—3—48 ರದಿನ ಪ್ರಾತಃಕಾಲ 8-30ಕ್ಕೆ ಅರ್ಜಿದಾರರನ್ನಾರಿಸುವರು. ಅದರ ನಂತರವೂ ಅರ್ಜಿ ಇಟ್ಟುಕೊಳ್ಳಬಹುದು.

ಬಳ್ಳಾರಿ 18-3-'48. ಡಿಸ್ಟ್ರಿಕ್ಟ್ ಎಂಪ್ಲಾಯ್ಮೆಂಟ್ ಆಫೀಸರ್,
ಕೃಷ್ಣಮಾಚಾರ್ ಕಾಂಪೌಂಡು, ಬಳ್ಳಾರಿ.

## ಲಾರಿಯು ಮಾರಲಿದೆ.

ಪೆಟ್ರೋಲಿನಿಂದ ನಡೆಯಲ್ಪಡುವ ಮತ್ತು ಕರ್ನೂಲು ಜಿಲ್ಲೆಯ ೬ ಲೈಸನ್ಸುಳ್ಳ ಒಕ್ಕೆಯ ಲಾರಿ ಮಾರಾಟಕ್ಕಿದೆ ಆದವಾನಿ, ಎಮ್ಮಿಗನೂರು ಮಾರ್ಗವಾಗಿ, ಬಳ್ಳಾರಿಯ ಮಾರ್ಗಕ್ಕೆ (Route) ಲೈಸನ್ಸಿದೆ ಲಾರಿಯ ಪರಿಶೀಲನೆ ಬೆಲೆ ವಗೈರೆಗಳನ್ನು ನಮ್ಮಿಂದ ತಿಳಿಯಿರಿ.

ಕೆ ನರಶಿಂಹಶಾಸ್ತ್ರಿ,
ವಕೀಲರು, ಬಳ್ಳಾರಿ.

## ಯುದ್ಧದ ತಯಾರಿ.

ಅಮೇರಿಕಾದ ಅಧ್ಯಕ್ಷರಾದ ಮಿ॥ ಟ್ರೂಮನ್‌ರವರು ಶಾಸನಸಭೆಗಳ ಸಂಯುಕ್ತ ಸಭೆಯಲ್ಲಿ ಘೋಷಣೆ ಮಾಡುತ್ತ, ಯೂರೋಪಿನ ರಾಷ್ಟ್ರಗಳಿಗೆ ಆರ್ಥಿಕ ಸಹಾಯವನ್ನೊದಗಿಸಬೇಕೆಂದೂ, ರಷ್ಯಾದ ಕಮ್ಯೂನಿಸಂ ತತ್ವದ ವಿರುದ್ಧ ಹೋರಾಟ ಸಾಗಿಸಲು ಮತ್ತು ಪ್ರಪಂಚವನ್ನು ಯುದ್ಧಭಯದಿಂದ ತಪ್ಪಿಸಲು ಅಮೇರಿಕೆಯಲ್ಲಿ ಸಾರ್ವತ್ರಿಕ ಸೈನ್ಯಶಿಕ್ಷಣ ಕೊಡಬೇಕೆಂತಲೂ ಹೇಳಿದರು.

## ನೆಹರೂರವರ ಸಹಾಯ.

ಡೆಲ್ಲಿಯಲ್ಲಿ ಮೋಟಾರ ಅಪಘಾತವಾದಾಗ ನೆಹರೂರವರು ಧಾವಿಸಿಬಂದು ಗಾಯಾಳುಗಳನ್ನೆಬ್ಬಿಸಿ, ಶುಶ್ರೂಷೆಗೆ ಕಳುಹಿಸಿದರು.

## ಗದುಗಿನ ವೀರನಾರಾಯಣ ಗುಡಿಯಲ್ಲಿ
## (ಗರ್ಭಗುಡಿಯಲ್ಲೂ ಸಹಾ)
## ಹರಿಜನರ ಪ್ರವೇಶ ವಾಯಿತು

# ಸಂಡೂರಿನ ವಿಲೀನೀಕರಣದ ಆವಶ್ಯಕತೆ

**ವಿಸ್ತಾರ:—**

ಬಳ್ಳಾರಿ ಜಿಲ್ಲೆ ಮಧ್ಯಭಾಗದಲ್ಲಿರುವ ಸಂಡೂರಿನ ಇಲಾಖೆಯನ್ನು ಸಂಸ್ಥಾನವೆನ್ನುವದಕ್ಕಿಂತ ಜಹಗೀರಿಯೆನ್ನುವುದು ಹೆಚ್ಚು ಉಚಿತವಾಗಿದೆ. ಅದಕ್ಕೆ ಆಧಾರಗಳೂ ದೊರೆಯುತ್ತವೆ. 140 ಚದರ ಮೈಲಿಗಳ ವಿಸ್ತಾರ, 22 ಗ್ರಾಮಗಳು, ಸುಮಾರು 20 ಸಾವಿರ ಜನಸಂಖೆಯು ಗುಡ್ಡಗಾಡಿನ ಪ್ರದೇಶವು ತನ್ನ ದೈನಂದಿನ ಜೀವನಕ್ಕಾಗಿ ಭಾರತಭಾಗದ ಮೇಲೆಯೇ ಅವಲಂಬಿಸಿದೆ ಈ ಮಧ್ಯವರ್ತೀ ಜಹಗೀರಿಯು ಪೂರ್ಣ ಸ್ವಾವಲಂಬೀ ಉಳಿಯಲು ಈಗಿನ ವಾತಾವರಣದಲ್ಲಿ ಸಾಧ್ಯವೇ ಇಲ್ಲ.

**ಪೂರ್ವದ ಸಂಕ್ಷಿಪ್ತ ಇತಿಹಾಸ:-**

ಬಳ್ಳಾರಿ ಜಿಲ್ಲದ ಗಜೆಟದಿಂದ ಇದರ ಇತಿಹಾಸವು ನಮಗೆ ಹೊಳೆಯುತ್ತದೆ (Bellary District Gazetter Volume II Pages 313—319) 1826ರಲ್ಲಿ ಮನ್ರೊ ಸರ್ಕಾರವು ಸಂಡೂರಿನ ಶಿವರಾಯರಿಗೆ ಒಂದು ಸನದನ್ನು ಕೊಟ್ಟಿತು. ಶಿವರಾಯನೂ ಆತನ ವಂಶಸ್ಥರೂ ಸಂಡೂರು ಜಹಗೀರಿಯಲ್ಲಿನ ಭೂಮಿಗಳನ್ನೆಲ್ಲಾ ಯಾವ ವಿಧವಾದ ಆರ್ಥಿಕ ಬಂಧನಗಳೂ ಇಲ್ಲದೆ ಸದಾ ಅನುಭವಿಸಿಕೊಂಡು ಹೋಗುತಕ್ಕದ್ದೆಂದೂ ರೆವಿನ್ಯೂ-ಪೋಲೀಸ್-ನ್ಯಾಯ ಖಾತೆಗಳ ಸಂಪೂರ್ಣ ಆಡಳಿತವು ಒಳ್ಳೆಯ ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದಲ್ಲಿ ಸ್ವಾಮಿ ಭಕ್ತಿ ಮತ್ತು ವಿಶ್ವಾಸಕ್ಕೊಳಪಟ್ಟು ಆತನ ಮತ್ತು ವಂಶಜರ ಸ್ವಾಧೀನದಲ್ಲಿರಬೇಕೆಂದೂ ಸನದಿನಲ್ಲಿ ಸೂಚಿಸಲಾಗಿದೆ (It conferred on him and his heirs for ever the lands of Sandur in Zahagir free of Pecshknsh and Pecuniary demands and delegated to him the entire management of revenue. Police and civil justice subject to conditions that he should at all times maintain faith and allegiance to the British Government. He was answerable for good Government........") ಇದಕ್ಕೂ ಪೂರ್ವದಲ್ಲಿ ಅಂದರೆ ಸುಮಾರು 1700ರ ಸುಮಾರಕ್ಕೆ ಈ ಸಂಸ್ಥಾನವು ಜಮಾಲಿಯ ಪಾಳೆಗಾರರ ವಶದಲ್ಲಿತ್ತು, ಅದನ್ನು 1728ರ ಸುಮಾರಕ್ಕೆ ಸಿಂಧೋಜಿರಾವ್ ಘೋರ್ಪಡೆಯು ಸ್ವಾಧೀನಪಡಿಸಿಕೊಂಡನು ಬಾಸೀನ್ ಸಂಧಿಯ ಪ್ರಕಾರಕ್ಕೆ ಸಂಡೂರು ಮತ್ತೆ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಟ್ಟು ನಂತರ ಮೇಲೆ ಹೇಳಿದಂತೆ ಕೊಡಲಾಯಿತು. ಈ ನೂರು ವರ್ಷಗಳಲ್ಲಿ ಸಂತತಿ ಪ್ರಶ್ನೆಯುತ್ಪನ್ನವಾಗಿ ಬ್ರಿಟಿಷ್ ಅರಸರ ನಿರ್ಣಯಕ್ಕೊಳಪಟ್ಟು ಹತ್ತಿರ ಸಂಬಂಧೀಕರಿಗೆ ಜಹಗೀರಿಯು ಆಡಳಿತವು ಕೊಡಲ್ಪಟ್ಟ ಕೆಲ ಪ್ರಸಂಗಗಳನ್ನು ಕಾಣಬಹುದು,

**ಸುಪ್ರಸಿದ್ಧ ಕೊಮಾರಸ್ವಾಮಿ, ಅದಕ್ಕಿರುವ ಆಸ್ತಿ**

ದಕ್ಷಿಣ ಕಾಶಿಯೆಂದು ಪ್ರಸಿದ್ಧಿ ಹೊಂದಿದ ಸುಪ್ರಸಿದ್ಧ ಕೊಮಾರಸ್ವಾಮಿ (ಕಾರ್ತಿಕೇಯ ಸ್ವಾಮಿ) ದೇವಾಲಯವು ಸಂಡೂರಿಗೆ ಆರು ಮೈಲ ಭವ್ಯವಾದ ಗುಡ್ಡದ ಮೇಲಿದೆ. ಸಂಡೂರಿನ ಘೋರ್ಪಡೆ ವಂಶಸ್ಥರ ಅಧಿದೇವನಾದ ಕಾರಣ ಸಂಡೂರಿನ 22 ಹಳ್ಳಿಗಳಲ್ಲಿ 13 ಹಳ್ಳಿಗಳೂ, 87000 ಎಕರೆ ಸಾಗುಭೂಮಿಯಲ್ಲಿ 47000 ಎಕರೆಗಳೂ ಕೊಮಾರಸ್ವಾಮಿ ದೇವಸ್ಥಾನದ ಆಸ್ತಿಯಾಗಿದೆ. ಇನ್ನೂ ಜಹಗೀರಿಯಲ್ಲಿ ಉಳಿದ ಭಾಗವೆಂದರೆ 9 ಹಳ್ಳಿಗಳು 40000 ಎಕರೆ ಭೂಮಿ ಡಚ್ ಕಂಪೆನಿಯಿಂದ ನಡೆಸಲ್ಪಡುತ್ತಿದ್ದ ಮ್ಯಾಂಗನೀಸ್ ಗಣಿಯ ಆದಾಯವು ಮೊದಲು ದೇವಸ್ಥಾನಕ್ಕೆ ಸೇರುತ್ತಿತ್ತು ಈಗ ಆದರ ವಿಷಯ ಗೊತ್ತಿಲ್ಲ. ಗಂಧದ ಮರದ ಮಾರಾಟ ಮತ್ತು ಜಾತ್ರೆ ಉತ್ಸವಗಳಿಂದ ವಾರ್ಷಿಕ ಉತ್ಪನ್ನವು ಅನೇಕ ಸಾವಿರಾರು ರೂಪಾಯಿ ದೊರೆಯುತ್ತೆ. ಈ ದೇವಸ್ಥಾನದ ಆದಾಯ ಖರ್ಚುಗಳು ಸಾಮಾನ್ಯ ಪ್ರಜೆಗಳಿಗ್ಯಾರಿಗೂ ಗೊತ್ತಿಲ್ಲ. ಯಾವಾಗಲೂ ಪ್ರಕಟವಾಗಿಲ್ಲ. ಅರಸರೆಷ್ಟು ಬಳಸುತ್ತಿರುವುದು ಯಾರಿಗೂ ಗೊತ್ತಿಲ್ಲ.

ಸಂಡೂರಿನ ಅರಸರು ಸಂಸ್ಥಾನದ ಆದಾಯದಲ್ಲಿ ಎಷ್ಟು ಭಾಗವನ್ನು ಸ್ವಂತಕ್ಕಾಗಿ ಬಳಸುತ್ತಿರುವುದು ಹೊರಗಿನವರಿಗ್ಯಾರಿಗೂ ಗೊತ್ತಿಲ್ಲ. ಈ ಹಿಂದಿನ ಪ್ರಜಾ

ಮಂತ್ರಿಗಳಾಗಲಿ, ಈಗ ಹೊಸದಾಗಿ ಆಗಿರುವ ಪ್ರಜಾ ಮಂತ್ರಿಗಳಾಗಲಿ ಇದನ್ನು ಹೇಳಲಾರರು. ಈಗಿನ ಅರಸರು ಆಡಳಿತ ಸೂತ್ರಗಳನ್ನು ವಹಿಸಿದ ಮೇಲೆ ಎಷ್ಟು ಸಂಪಾದನೆ ಯಾಗಿದೆಯೆಂಬುವೂ ಯಾರಿಗೂ ಗೊತ್ತಿಲ್ಲ. 1937ರಲ್ಲಿ ಸಂಡೂರಿನ ಮುಖ್ಯ ಜನರು ರೆಸಿಡೆಂಟರಿಗೆ ಅರ್ಜಿ ಇಟ್ಟುಕೊಂಡರು (Under the Provisions of the notification in the Imperial Gazetteer of India Volume XXII Oxford 1908 & also as per Bellary Dt. Gazetteer) ಇದರ ಪ್ರಕಾರಕ್ಕೆ ರಾಜರಿಗೆ ಸ್ವತಂತ್ರಾಧಿಕಾರಗಳಿಲ್ಲ. ಅವರು ಜಹಗೀರಿಯ ಮ್ಯಾನೇಜರರು ಮಾತ್ರ. ಇನಾಂ ಭೂಮಿಗಳನ್ನು ಆಕ್ರಮಿಸಿಕೊಂಡು ತೆರಿಗೆ ಹೆಚ್ಚಿಸಲು ಅವರಿಗೆ ಅಧಿಕಾರವೇ ಇಲ್ಲ. ಇನಾಂ ರೆಗ್ಯುಲೇಷನ್ ಆಕ್ಟು 1937 ಎಂತ ಕಾಯ್ದೆ ಜಾರಿಯಲ್ಲಿ ತಂದು ಸುಮಾರು 3500 ಎಕರೆಗಳನ್ನು ಹುಜೂರ್ ಟೆನೆನ್ಸಿ ಲ್ಯಾಂಡ್ಸ ಆಗಿ ಮಾಡಿದ್ದು ಪರಮ ಅನ್ಯಾಯ. ಹೆಚ್ಚು ಆದಾಯ ಕೊಮಾರಸ್ವಾಮಿ ಲೆಕ್ಕಗಳು ತಪಾಸಿಗರಿಂದ ಪರಿಶೋಧಿಸಲ್ಪಡಬೇಕು ವಗೈರೆ ಆಪಾದನೆಗಳನ್ನು ಹೊರಿಸಿ ರೆಸಿಡೆಂಟರಿಗೆ 5-6 ಸಲ ಮೆಮೋರಿಯಲ್ ಕೊಟ್ಟರು. ರಾಜರು ತಮ್ಮ ಖಾಸಗಿ ಖರ್ಚುಗಳಿಗಾಗಿ ದೇವಸ್ಥಾನದ ನಿಧಿಯನ್ನು ಬಳಸುತ್ತಿರುವರೆಂಬ ಅನುಮಾನವನ್ನೂ ಸೂಚಿಸಿದ್ದರು. ಬ್ರಿಟಿಷ್ ರೆಸಿಡೆಂಟರು ಮತ್ತು ಸಂಸ್ಥಾನಾಧೀಶರ ಭೂತಕಾಲದ ಪ್ರೇಮ ಸಂಬಂಧವನ್ನು ಬಲ್ಲವರೇ ಬಲ್ಲರು. ರೆಸಿಡೆಂಟರು ಬಂದರು ಉಪಚಾರ ಹೊಂದಿಹೋದರು. ಆದರೆ ಬಿನ್ನವತ್ತಳೆಯನ್ನರ್ಪಿಸಿದ ಜನರಿಗೆ ತಮ್ಮ ಸ್ವಸ್ಥಾನವಾದ ತಿರುವಾಂಕೂರಿಗೆ ಹೋಗಿ ಹೀಗೆ ಬರೆದರು.

Trivandrum R/Dis 3578 Dated 4-3-'38

"The Resident for the Madras States has discussed the matter of the Sri Komaraswami Temple with the Ruler of Sandur and is satified that the temple has been since 1934 administered by the Public Works Officer of the Sandur State in accordance with a proclamation issued in that year. The Ruler absolutely denies that any part of the Temple income has been appropriated to his Huzur Khasji account" ಮದ್ರಾಸ್ ಸಂಸ್ಥಾನಗಳ ರೆಸಿಡೆಂಟರು ಸಂಡೂರು ಅರಸರೊಂದಿಗೆ ಕೊಮಾರಸ್ವಾಮಿ ದೇವಸ್ಥಾನದ ವಿಷಯವನ್ನು ಚರ್ಚಿಸಿರುತ್ತಾರೆ. ಸಂಡೂರ ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಆಫೀಸರವರು 1934 ರಿಂದ ಅದೇ ವರ್ಷ ಜಾರಿಯಲ್ಲಿ ಕೊಟ್ಟ ಆಜ್ಞಾ ಪ್ರಕಾರಕ್ಕೆ ದೇವಸ್ಥಾನದ ಆಡಳಿತವನ್ನು ನಡೆಸುತ್ತಿರುವರೆಂದು ರೆಸಿಡೆಂಟರಿಗೆ ಮನವರಿಕೆಯಾಗಿದೆ. ದೇವಸ್ಥಾನದ ಆದಾಯವು ಹುಜೂರು ಖಾಸಗಿ ಲೆಕ್ಕಕ್ಕೆ ಸೇರಿಸಲ್ಪಟ್ಟಿರುವ ವಿಷಯವನ್ನು ಅರಸರು ಪೂರ್ಣವಾಗಿ ಇಲ್ಲೆನ್ನುತ್ತಾರೆ.

ರೆಸಿಡೆಂಟರಿಗೆ ಎಂಥಾ ಅಧಿಕಾರಗಳಿದ್ದು ಅವರು ಅರಸರನ್ನು ಹೇಗೆ ದಾರಿಗೆ ತರಬಲ್ಲವರಿದ್ದರೆಂಬುವ ಪ್ರಶ್ನೆಯೇ ಈಗ ಉಳಿದಿರುವುದಿಲ್ಲ. ಜನರು ಕೊಟ್ಟ ಆಪಾದನೆಯನ್ನು ವಿಚಾರಿಸದೆ ರಾಜರು ಹೇಳಿದ್ದೇ ಸತ್ಯವೆಂದು ಭಾವಿಸಿದ ವಿಚಾರವನ್ನು ತಿಳಿಸಲು ಮತ್ತು ಮುಂದೆ ಇದರ ಪುನರಾವೃತ್ತಿಯಾಗಬಾರದೆಂದು ಇದರ ವಿಮರ್ಶೆ ಮಾಡಲಾಗಿದೆ. ಏತಕ್ಕೆಂದರೆ ಪೀಡಿತ ಪ್ರಜೆಗಳಿಗೆ ರಾಜರ ಮೇಲೆ ದಾವೆ ಮಾಡಿ ಪರಿಹಾರ ಪಡೆಯಲು ರೆಸಿಡೆಂಟರು ಅನುಮತಿ ಕೊಡಲಿಲ್ಲ. ಇಷ್ಟೇ ಅಲ್ಲ, ಪತ್ರ ವ್ಯವಹಾರವನ್ನು ಕೂಡ ಪ್ರಕಟಿಸಬಾರದೆಂದರು

## ಪ್ರಾದೇಶಿಕ ಮತ್ತು ರೈತರ ಕರುಣಾಜನಕ ಪರಿಸ್ಥಿತಿ.

ಇಲ್ಲಿಯ ಜನರೂ, ರೈತರೂ ಕಡುಬಡವರು, ಯಾವ ದೊಡ್ಡ ಕಾರ್ಖಾನೆಗಳು ಇಲ್ಲ ಹಳ್ಳಿಗಳಲ್ಲಿ ಮಲೇರಿಯಾದಿಂದ ಬಾಧೆಪಡುತ್ತಿರುವವರೆಷ್ಟೋ ಜನರಿದ್ದಾರೆ. ನಿರುದ್ಯೋಗಿಗಳಿಗೆ ಪರಿಹಾರವೇ ಇಲ್ಲ ಸಂಸ್ಥಾನದ ಮುಖ್ಯ ಉದ್ಯೋಗಗಳಲ್ಲಾ ದೂರದಿಂದ ಬಂದ ಮರಾಠೀಗರೇ ಅಧಿಕಾರಿರುವರು. ಭಾರತದ ಭಾಗದಲ್ಲಿ ಎಕರೆಗೆ 0-13-2 ಪೈ ಅಸೆಸ್ಮೆಂಟ್ ಇದ್ದರೆ - ಸಂಡೂರಿನ ಭಾಗದಲ್ಲಿ 10/- ವರೆಗೂ ಮತ್ತು ಸರಾಸರಿ 6-1-10 ಇದೆ. ಈ ಕಾರಣ ರೈತರು ಸಾಲಿನಂದಿಗರಾಗಿರುವರು. ರಾಜರ ಬೇಟೆಗಾಗಿ ಅರಣ್ಯಗಳು ಕಾದಿಡಲಾಗಿವೆ. ಅಲ್ಲಿ ಹುಲ್ಲು

ಮೇಯಿಸುವುದೂ ಕಷ್ಟ ಬೇಟೆಯ ಕಾಯ್ದೆ (Grazing Laws) ಮಾಡಿ ಉಲ್ಲಂಘಿಸಿದವರಿಗೆ ಹೆಚ್ಚಿನ ದಂಡ ವಿಧಿಸುತ್ತಿರುವರು.

## ರಾಜಕೀಯ ಸ್ವಾತಂತ್ರ್ಯವೇ ಇಲ್ಲ;—

ಇಲ್ಲಿ ಈ ಹಿಂದೆ ರಾಜಕೀಯ ಸಭೆಗಳೇ ಆಗಿಲ್ಲ ಆಗಗೊಡುವುದಿಲ್ಲ, ಆಗಗೊಟ್ಟಿಲ್ಲ. ಈಗ ಸಂಸ್ಥಾನ ಕಾಂಗ್ರೆಸ್ ಎಂಬುದು ರಾಜರ ಕೈಗೊಂಬೆ ವೃತ್ತ ಪತ್ರಿಕಾ ಸುದ್ದಿಗಾರರೆಲ್ಲಾ ಕಛೇರಿಯಲ್ಲಿ ಕೆಲಸಮಾಡುವ ಉದ್ಯೋಗಿಗಳು ಹೇಳಿದ್ದನ್ನು - ಬರೆಸಿದ್ದನ್ನು ಬಾ-ಜೂ ಎನ್ನದೆ ಕಳುಹಿಸಬೇಕು. ಹೊರಗಿನ ಪ್ರಪಂಚಕ್ಕೆ ಇಲ್ಲಿ ಧರ್ಮ ರಾಜ್ಯವಿದೆಯೆಂದು ಭಾಸವಾಗುತ್ತದೆ, ಇಲ್ಲಿಯ ಬಡತನದ ಭವಣೆ - ರೈತನ ಕರುಣಾಜನಕ ಪರಿಸ್ಥಿತಿಯನ್ನು ನೋಡಿದವರೇ ಬಲ್ಲರು. ರಾಜರ ವಿರುದ್ಧ ಬಂಡಾಯ ಹೂಡಿದವರೆಂದು ಈ ಹಿಂದೆ ಮಂತ್ರಿಗಳಾಗಿದ್ದ ಡಾ. ಶ್ರೀನಿವಾಸರಾಯ ಸರಾಫ್, ಕೃಷ್ಣರಾವ್ ಸರಾಫ್‌ರನ್ನೂ ಬಂಧಿಸಿಟ್ಟಿದ್ದರು, ಮನೆಯಲ್ಲಿ ಮಾತಾಡುವುದೂ ಕಷ್ಟವಾಗಿತ್ತು - ಈಗಲಾದರೂ ವಾಕ್ ಸ್ವಾತಂತ್ರವೇನಿದೆ? ಈಗಾಗಲೀ ಸರಕಾರದ ವಿರುದ್ಧ. ರಾಜರವಿರುದ್ಧ ರಚನಾತ್ಮಕ ಟೀಕೆಯನ್ನಾದರೂ ಸಹಿಸುವರೆ? ಇಂಥಾ ಗುಲಾಮಗಿರಿಯು ಬೇಡ.

## ವಿಲೀನೀಕರಣವೇ ಯೋಗ್ಯ ;—

ಪುದುಕೋಟೆ. ಜಮಖಂಡಿ- ಸವಣೂರಿನಂಥ ಮತ್ತು ದಕ್ಷಿಣೇ ಸಂಸ್ಥಾನಗಳ ವಿಲೀನೀಕರಣದ ನಂತರ ಸಂಡೂರಿಗೆ ಯಾವ ಮಾರ್ಗವೂ ಉಳಿದಿರುವುದಿಲ್ಲ. ಈ ಇಪ್ಪತ್ತನೇ ಶತಮಾನದಲ್ಲಿ ನಿರಂಕುಶರಾಜನ ಆಡಳಿತವೇ ಇರಲೆಂದು ಹೇಳುವವನನ್ನು ಹುಚ್ಚರ ಆಸ್ಪತ್ರೆಗೆ ಕಳುಹಿಸಬೇಕು. ಭಾರತ ಒಕ್ಕೂಟಕ್ಕೆ ಸೇರಿರುವೆನೆಂದು ಹೇಳುತ್ತಾ ಒಕ್ಕೂಟದ ಧ್ವಜವನ್ನೇ ಹಾರಗೊಡದಿರುವ ಪ್ರವೃತ್ತಿಯನ್ನೇನೆನ್ನಬೇಕು. ಸಂಸ್ಥಾನವು ಎಲ್ಲಾ ವಿಧದಿಂದಲೂ ಪ್ರಗತಿಮಾರ್ಗವನ್ನು ಹಿಡಿಯಬೇಕೆಂದರೆ - ಸಂಡೂರಿನ ಪ್ರಜೆಗಳೆಲ್ಲಾ ವಿಲೀನೀಕರಣಕ್ಕೆ ಒಪ್ಪಬೇಕು. ವಿಲೀನೀಕರಣವಾದರೇನೇ- ಸಂಸ್ಥಾನದ ಪ್ರದೇಶದಲ್ಲಿನ ಹುಟ್ಟುವಳಿಯೆಲ್ಲಾ ಪ್ರದೇಶದ ಅಭಿವೃದ್ಧಿಗಾಗಿ ವಿನಿಯೋಗವಾಗುತ್ತದೆ- ವಾಕ್ಸ್ವಾತಂತ್ರ್ಯ ಮುದ್ರಣ ಸ್ವಾತಂತ್ರ್ಯ-ರಾಜಕೀಯ ಸ್ವಾತಂತ್ರ್ಯ- ಬರುತ್ತದೆ- ಸಣ್ಣಪ್ರದೇಶದವರು ದೊಡ್ಡ ಅರಮನೆಯ ಆಡಳಿತ ಬೆಂಗಳೂರು, ಬೊಂಬಾಯಿ ಖರ್ಚುಗಳು ಪರದೇಶ ಸಂಚಾರದ ಖರ್ಚು ವಗೈರೆ ವಹಿಸಲು ಸರ್ವಥಾ ಸಾಧ್ಯವಿಲ್ಲ. ಈ ಕಾರಣ ಇದಕ್ಕೆಲ್ಲಾ ವಿಲೀನೀಕರಣವೊಂದೇ ಮಾರ್ಗ.

## ಹೊಸಪೇಟೆ ಪೋಲೀಸ್ ಸಬ್ ಇನ್ಸ್ಪೆಕ್ಟರು ಕೊಪ್ಪಳದಲ್ಲಿ ಬಂಧನ

ಹೊಸಪೇಟೆ ಟೌನ್ ಪೋಲೀಸ್ ಸಬ್ ಇನ್ಸ್ಪೆಕ್ಟರು ಕೊಪ್ಪಳಕ್ಕೆ ಮಾಮೂಲೀ ಪೋಲೀಸ್ ವಿಚಾರಣೆಗೆ ಹೋದಾಗ ನಿಜಾಮ ಪೋಲೀಸರು ಇವರನ್ನು ಬಂಧಿಸಿ ನಂತರ ಅಲ್ಲಿಯ ಡೆಪ್ಯೂಟೀ ಸೂಪರಿಂಟರ ಮೂಲಕ ಬಿಡುಗಡೆಯಾದರು. ಅವರನ್ನು ಸ್ಟೇಷನ್ನಿಗೆ ತಂದು ಬಿಟ್ಟಾಗ ಗದಗ ಪೋಲೀಸರ ಸಹಾಯದಿಂದ ಪ್ರತ್ಯೇಕ ಗಾಡಿಯಲ್ಲಿ ಹೊಸಪೇಟೆಗೆ ಬಂದಿಳಿದರು. ಕೊಪ್ಪಳದ ನಿಜಾಂ ಸಬ್ ಇನ್ಸ್ಪೆಕ್ಟರು ನಮ್ಮವರನ್ನು ದುರ್ಭಾಷೆಗಳಿಂದ ಬೈದರಂತೆ

### ಹೊ ಸ ಪೇ ಟೆ.

15ನೆಯ ದಿನಾಂಕ 5 ಗಂಟೆಗೆ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಆಟಪಾಟ, ವಿವಿಧವಿನೋದಾವಳಿ, ಸಂಗೀತ ನಡೆಯಿತು ಕಲೆಕ್ಟರ್ ಅನಂತರಾವ ರಾಯರು, ಸ್ವಾತಂತ್ರ್ಯ ಪ್ರದಾನದ ನಂತರ ಜನರ ಕರ್ತವ್ಯವನ್ನು ಹೇಳಿ, ಆರೋಗ-ವಿದ್ಯಾ-ಸಾಕ್ಷರತ ಪ್ರಚಾರ ಮದ್ಯ ನಿರೋಧದ ಬಗ್ಗೆ ಮಾತಾಡಿದರು. R D. O ರು ವಂದನಾರ್ಪಣೆ ಮಾಡಿದರು. ಈ ಸಮಾರಂಭದ ವ್ಯವಸ್ಥೆಯನ್ನು ಶ್ರೀ ಆರ್ ಶಂಕರಶಾಸ್ತ್ರಿ ರೂರಲ್ ವೆಲ್ಫೇರ ಆಫೀಸರು ಚನ್ನಾಗಿ ಮಾಡಿದ್ದರು.

## ಕುರುಗೋಡು ಜಾತ್ರೆ.

೨೫ ನೆಯ ದಿನಾಂಕ ಗುರುವಾರ, ಸರ್ವಜಿತ್ತು ನಾಮ ಸಂವತ್ಸರದ ಮಾಘ ಶು॥ ೧೫॥ ಹುಣ್ಣಿಮೆಯ ಶುಭಮುಹೂರ್ತದಲ್ಲಿ ಕುರುಗೋಡು ದೊಡ್ಡಬಸವೇಶ್ವರನ ರಥೋತ್ಸವವು ನಡೆಯಲಿದೆಯೆಂದೂ, ಎಲ್ಲ ಭಕ್ತ ಮಹಾಶಯರೂ ಅಂದು ಬರಬೇಕೆಂದೂ ವ್ಯವಸ್ಥಾಪಕರು ತಿಳಿಸುತ್ತಾರೆ.

# Sandur's Stand

Sondur's Minister has declared slatly against a merger of the State. Earlier the Ruler also declared that Sandur, a Mahratta State in a Kanarese areacould not think of losing its identity or separateness The amalgamation of Banganapalle is apparently ignored by the Sandur ruler and his minister who refers to the people's opposition to any merger proposal. This cuts across the familiar assumption that the terms of merger for Sandur are ready since a non-jurisdictional or non-salute State does not come among the large States (with a population of one million and a revenue of one crore) that can try to stand up by themselves. It is overlooked that the southern Mahratta States, larger than Sandur are now merged in Bombay after dissolving their federal scheme. Though Sandur may have minerals it is not unique in regard to administration and the impossibility of producing ref rms for a very small principality is the most compelling reason for denying the correctness of the view that Sandur cannot be joined to Bellary. Congressmen in Rayalaseema are certainly convinced that Sandur cannot long stand out and a merger is therefore inevitable. Since a decision by the States Ministry is in sight, there is no need to discuss the various claims made for Sandur by

## ಪಾಲಿಸ್ತಾನದ ವಿಭಜನೆ.
## ರಷ್ಯಾದ ಸಮರ್ಥನೆ.

ಪಾಲಿಸ್ತಾನದ ವಿಭಜನೆಗೆ ರಷ್ಯಾವು ಸಮರ್ಥಿಸುತ್ತಿರುವ ಕಾರಣವೆಂದರೆ, ಅಮೇರಿಕಾ ಮತ್ತು ಅರಬರಾಷ್ಟ್ರಗಳು ನಡುವೆ ಕಲಹಗಳನ್ನುಂಟುಮಾಡಿ ಅಮೇರಿಕಾಕ್ಕೆ ಪರ್ಶಿಯಾ ಎಣ್ಣೆಯನ್ನು ಸಿಗದಂತೆ ಮಾಡುವುದೇ ಆಗಿದೆ ಎಂದು ಅರಬ್ ಲೀಗದ ಸೆಕ್ರೆಟರಿ ಜನರಲ್‌ರವರು ಒಂದು ಹೇಳಿಕೆ ಕೊಟ್ಟಿರುತ್ತಾರೆ.

---

## ಬಳ್ಳಾರಿ
## ಗಾಂಧೀಜಿ ಯುಗಪುರುಷ

ಜಿಲ್ಲಾ ಜಡ್ಜರಾದ ಮ್ಯಾಳರವರ ಅಧ್ಯಕ್ಷತೆಯಲ್ಲಿ ೨೦ನೆಯ ದಿನಾಂಕ ಮ್ಯಾಕ್‌ಸ್ಟೇಡಿಯಂದಲ್ಲಿ ಅಮೇರಿಕಾದ ಪ್ರಿನ್ಸ್‌ಟನ್ ಜೋನ್ಸ್, ಬೇಲೂರು ಸುಬ್ರಹ್ಮಣ್ಯಂ. ಭೀಮರಾವ್, ಬಾಷಿತ್ ಸಾಹೇಬ್‌ರವರು **'ಗಾಂಧೀಜೀಯು ಯುಗಪುರುಷ'** ನೆಂಬ ವಿಷಯದಮೇಲೆ ಭಾಷಣ ಕೊಟ್ಟರು ಗಾಂಧೀಜೀಯು ಕ್ರೈಸ್ತರಲ್ಲಿ ಶ್ರೇಷ್ಠ ಕ್ರೈಸ್ತರೆಂದೂ, ಮುಸಲ್ಮಾನರಲ್ಲಿ ಶ್ರೇಷ್ಠ ಮುಸಲ್ಮಾನರೆಂದೂ, ಹಿಂದೂಗಳಲ್ಲಿ ಶ್ರೇಷ್ಠ ಹಿಂದೂಗಳೆಂದೂ ಹೇಳುತ್ತಾ . ಸರ್ವಧರ್ಮಗಳ ಶ್ರೇಷ್ಠತೆಯನ್ನೇ ಅವರು ಕಂಡಿದ್ದರೆಂದು ಭಾಷಣಕಾರರು ಹೇಳಿದರು.

ರಘುಪತಿರಾಘವ ರಾಜಾರಾಂ, ಖುರಾನು ಬೈಬಲ್ ಪ್ರಾರ್ಥನೆಗಳನಂತರ ಸಭೆಯು ಮುಗಿಯಿತು.

## ಕಾಳಿನ ಸಂಗ್ರಹದ ಅರ್ಥವೇನು?

ಕೂಡ್ಲಿಗಿ ತಾಲೂಕು ತಹಶೀಲ್ದಾರರು ಹಳ್ಳಿಗಳಿಗೆ ಒಂದು ಎಕರೆಗೆ ಇಂತಿಷ್ಟು ಕಾಳನ್ನು ಕೊಡಬೇಕೆಂದು ಕೇಳುತ್ತಿರುವರು ಕಾಳಿಲ್ಲದವರು ಕೊಂಡಾದರು ಕೊಟ್ಟೇತೀರಬೇಕೆಂದು ನಿರ್ಬಂಧಿಸುತ್ತಿರುವರು. ಕಾಳಿನ ನಿಯಂತ್ರಣದನಂತರ - ಕಾಳನ್ನು ಸಂಗ್ರಹಿಸುವ ಅರ್ಥವೇ ನಮಗಾಗಲೊಲ್ಲದು. ಸರ್ಕಾರದ ಪರವಾಗಿ ಕಲೆಕ್ಟರವರು ಇದನ್ನು ಸ್ಪಷ್ಟಪಡಿಸುವರೇ?

ಒಬ್ಬ ರೈತ.

---

Dr. S. B. Shroff, Ex. Minister of the State.

(Indian Express)

## ಸರ್ದಾರ ಪಟೇಲರಿಗೆ ಸಂಡೂರು ಪ್ರಜಾಪರಿಷತ್ತಿನ ತಂತಿ

"ಪ್ರಜಾಪ್ರತಿನಿಧಿಗಳೆಂದು ನಿಮ್ಮಲ್ಲಿಗೆ ಬಂದಿರುವ ಠಾಕ್ಕರ್ ಸರಾಫ ಮತ್ತು ನರಸಿಂಹರಾಯರು, ರಾಜನ ಜನರು, ಅವರ ಪ್ರಾತಿನಿಧ್ಯಕ್ಕೆ ಬೆಲೆಯಿಲ್ಲ, ಸಂಡೂರಿನ ಹಿತದೃಷ್ಟಿಯಿಂದ ಅದನ್ನು ಕೂಡಲೇ ಬಳ್ಳಾರಿಜಿಲ್ಲೆಯಲ್ಲಿ ವಿಲೀನೀಕರಣಮಾಡಿರಿ, ಇದಕ್ಕಾಗಿ ಬೇಕಾದರೆ ಜನಮತವನ್ನು ತೆಗೆದುಕೊಳ್ಳಿರಿ. ನಾವು ನಿಮಗೆ ವಿವರಗಳನ್ನು ಕಳುಹಿಸುತ್ತೇವೆ" ಎಂದು ಪ್ರಜಾಪರಿಷತ್ತಿನ ಶ್ರೀ ಅಂಗಡಿ ವೀರಭದ್ರಯ್ಯನವರು ಸರ್ದಾರ ವಲ್ಲಭಭಾಯಿ ಪಟೇಲರಿಗೆ ತಂತಿ ಕಳುಹಿಸಿದ್ದಾರೆ.

## ಭಾವಚಿತ್ರಗಳನ್ನು ವೈರ್‌ಲೆಸ್ ಮೂಲಕ

ಭಾವಚಿತ್ರ, ಪತ್ರಗಳು - ಚೆಕ್‌ಗಳನ್ನು ಈಗ ಲಂಡಂನ್ನಿನಿಂದ ವೆಲ್ಲಿಂಗ್ಟನ್‌ಗೆ ಕೊಲಂಬೋದ ಮಾರ್ಗವಾಗಿ 18000 ಮೈಲಿ ವೈರ್‌ಲೆಸ್ ಮೂಲಕ ಕಳುಹಿಸಲು ಏರ್ಪಾಟಾಗಿದೆ. ಪ್ರಪಂಚದಲ್ಲೇ ದೀರ್ಘವಾದ ಮಾರ್ಗವಿದು.

## ಭೂಸ್ವರ್ಗದಂಥ ದ್ವೀಪ

ಪೂರ್ವ ಆಸ್ಟ್ರೇಲಿಯಾಕ್ಕೆ (ಪೆಸಿಫಿಕ್ ಸಾಗರದಲ್ಲಿ) 300 ಮೈಲಿ ದೂರದಲ್ಲಿ ಲಾರ್ಡ ಹೌ ದ್ವೀಪವೊಂದಿದೆ. 1834ರಲ್ಲಿ ಮೂವರು ಬಿಳಿಯರು, ಮೂವರು ಮೆಕ್ಸಿಕೊ ದೇಶಸ್ಥರು ಅಲ್ಲಿ ಹೋಗಿ ನೆಲೆಸಿದರು. ಈಗ ಆ ದ್ವೀಪದ ಜನಸಂಖ್ಯೆ 150ಕ್ಕೆ ಬಂದಿದೆ. ನ್ಯೂ ಸೌತ್‌ವೇಲ್ಸಿನ ಸರ್ಕಾರದ ಪ್ರಧಾನಕಾರ್ಯದರ್ಶಿಯಿಂದ ನಿಯುಕ್ತರಾದ ಪಂಚರು ಇಲ್ಲಿ ರಾಜ್ಯಭಾರಮಾಡುತ್ತಾರೆ. ಮದುವೆಯಾದ ತರುಣನಿಗೆ ಬಿತ್ತನೆಗೆ ಸಾಕಷ್ಟು ಭೂಮಿ - ಮನೆಕಟ್ಟಿಕೊಳ್ಳಲು ಉಚಿತ ನಿವೇಶನ ದೊರೆಯುತ್ತದೆ. ಈ ದ್ವೀಪದಲ್ಲಿ ತೆರಿಗೆಗಳಿಲ್ಲ, ಬಾಡಿಗೆ ಇಲ್ಲ. ವರ್ತಮಾನಪತ್ರ- ತಂತೀ ಕಛೇರಿ - ನ್ಯಾಯಸ್ಥಾನ - ಜಡ್ಜಿ - ಮ್ಯಾಜಿಸ್ಟ್ರೇಟರ್‍ಯಾರೂ ಇಲ್ಲ. ಇದು ಭೂಸ್ವರ್ಗವಿದ್ದಂತಿದೆ.

## ಕೋಲಾರದ ಭಂಗಾರ ಗಣಿಗಳು

ಮೈಸೂರು ದೇಶದ ಕೋಲಾರು ಜಿಲ್ಲೆಯ ಭಂಗಾರ ಗಣಿಗಳ ಚರಿತ್ರೆ ವಿಚಿತ್ರವಾಗಿದೆ ಭಂಗಾರದಿಂದ ಕೂಡಿದ ಕಲ್ಲು ಮಣ್ಣುಗಳ ಪದರೆಗಳೊಡನೆ ಭೂಗರ್ಭದ ಬಹಳ ಆಳದಲ್ಲಿ ಮುಚ್ಚಿದ ಪುಸ್ತಕದ ಹಾಳೆಗಳಂತಿರುತ್ತವೆ. ಈ ಹಾಳೆಗಳು ನೆಲದಮೇಲೆ ತಮ್ಮ ಥಳುಕು ಬೆಳಕುಗಳನ್ನು ತೋರಿಸುತ್ತಾ ಕೆಲ ಅಂಗುಲಗಳಿಂದ ೨೦ ಅಡಿಗಳವರಿಗೂ ಅಗಲವಿರುತ್ತವೆ ಸಾಧಾರಣವಾಗಿ ಅವುಗಳ ಸರಾಸರಿ ಅಗಲ ೪ ರಿಂದ ೫ ಅಡಿ. ಕೋಲಾರದ ಭಂಗಾರ ಗಣಿಗಳಲ್ಲಿ ಕಳೆದ ೬೦ ವರ್ಷಗಳಲ್ಲಿ ಸುಮಾರು ಎರಡುಕೋಟಿ ಔನ್ಸುಗಳ ಬಂಗಾರವು ತೆಗೆಯಲ್ಪಟ್ಟಿದೆ. ಅದರ ಬೆಲೆ ಸುಮಾರು ೧೪೪ ಕೋಟಿ ರೂಪಾಯಿ.

---

## ವಿಶಾಖ ಪಟ್ಟಣದಲ್ಲಿ ನೆಹರೂರವರಿಂದ 'ಜಲಉಷಾ"ದ ಉದ್ಘಾಟನೆ

೧೪ನೆಯ ತಾ|| ಭಾರತದ ಪ್ರಧಾನಮಂತ್ರಿ ಪಂಡಿತ ನೆಹರುರವರು ಭಾರತದಲ್ಲಿ ಕಟ್ಟಿದ ಮೊದಲನೆಯ ಎಂಟು ಸಾವಿರ ಟನ್‌ಗಳ ಭಾರದ "ಜಲ ಉಷಾ" ಹಡಗವನ್ನು ನೀರಿಗಿಳಿಸುತ್ತ "ಇನ್ನೂ ಇದರಂತೆ ಅನೇಕ ದೊಡ್ಡ ಮತ್ತು ಚಿಕ್ಕ ಹಡಗುಗಳು ಇಂದಿನಿಂದ ನೀರಿಗಿಳಿಯಲಿ. ಭಾರತದಸಂದೇಶವನ್ನು ಜಗತ್ತಿನ ದಶದಿಕ್ಕುಗಳಿಗೆ ನಾವು ಒಯ್ಯುವಂತಾಗಲಿ" ಎಂದುಹೇಳಿ ಹಡಗದ ಯಶ, ಭಾಗ್ಯವನ್ನು ಆಶಿಸಿದರು

ಈ ಹಡಗದ ಉದ್ಘಾಟನೆಯೊಂದಿಗೆ ಕೆಲವು ತಿಂಗಳುಗಳ ಹಿಂದೆ ಭಾರತದ ಸ್ವಾತಂತ್ರ್ಯದ ಅರುಣೋದಯದಿಂದ ಅಸ್ತಿತ್ವಕ್ಕೆ ಬಂದ "ಭಾರತ ರಾಷ್ಟ್ರ ಹಡಗ"ದ ವಿಜಯೋತ್ಸವವನ್ನು ನೆಹರುರವರು. ಹೋಲಿಸಿ, ಜಲಉಷಾದ ಧಕ್ಕೆಯ ಕೂಲಿಕಾರರು ಹಾಗೂ 'ರಾಷ್ಟ್ರಹಡಗ'ದ ನಾವಿಕರು (ಎಂದರೆ ಭಾರತದ ಪ್ರಜೆಗಳು ಎಂದೂ ಹಡಗದ ಪ್ರಗತಿಯನ್ನು ಸಾಧಿಸಲು ಹೆಣಗಬೇಕೆಂದು ವಿನಂತಿ ಮಾಡಿಕೊಂಡರು. ಈ ಹಡಗವನ್ನು ನೀರಿಗಿಳಿಸುವ ಸಮಾರಂಭಕ್ಕೆ ೩೦ ಸಾವಿರ ಜನರು ಬಂದಿದ್ದರು.

---

## ಕೂಡ್ಲಿಗಿ

ಇಲ್ಲಿ ಕಳ್ಳರ ಹಾವಳಿ ಜಾಸ್ತಿಯಾಗಿದೆ ಕಳೆದ ಕೆಲ ದಿನಗಳಲ್ಲಿ ಕಳ್ಳತನಗಳಾಗಿವೆ. ಪೋಲೀಸರು ಹೆಚ್ಚು ಜಾಗ್ರತರಿದ್ದು ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕು

*Please Note*

**Narasepalli Workshops**

BELLARY.

— UNDERTAKE —

**Turning, Electric Welding & Tempering**

OF

SPARE PARTS OF ALL KINDS.

☞ **Reasonable Charges**

**TRIAL SOLICITED.**

Telegrams
OIL MILLS.

Telephone
57.



## ಬಳ್ಳಾರಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಿಗೆ

### ಸುಭಾಷ "ರಾಷ್ಟ್ರಗೀತೆಯು" ಉಚಿತ.

ಬಳ್ಳಾರಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ರಾಷ್ಟ್ರೀಯ ಗೀತಗಳು, ಮಹಾತ್ಮ ಗಾಂಧಿಯವರಿಗೆ ಪ್ರಿಯವಾದ ಪ್ರಾರ್ಥನೆ ಮತ್ತು ಗಾನಗಳು ಕಲಿಸಲ್ಪಡಬೇಕೆಂಬ ಸದುದ್ದೇಶದಿಂದ ಬಳ್ಳಾರಿ ನವಭಾರತ ಕಾರ್ಯಾಲಯದಿಂದ ಪ್ರಕಟವಾದ 'ಸುಭಾಷ ರಾಷ್ಟ್ರಗೀತೆ'ಯನ್ನು ಉಚಿತವಾಗಿ ಕೊಡಲು ದೇಶಭಕ್ತ ಶ್ರೀ ದೇಸಾಯಿ ಅಂಬಣ್ಣ ಅನಂತಶಯನಗುಡಿ ಇವರು ನಿರ್ಧರಿಸಿರುವರು. ಇದು ಸ್ತುತ್ಯ.

# The Rayalaseema Bank Ltd., H. O. Bellary.

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು
- **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
- **ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ **ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ $3\frac{1}{4}\%$ — ಎರಡು ವರ್ಷ $3\frac{1}{2}\%$

ಸೀಸನ್ ಡಿಪಾಜಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ,
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ

**ಹೆಚ್. ಲಿಂಗಾರೆಡ್ಡಿ**, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್ ಬಿ. ಕಾಂ.,
ಕಾರ್ಯದರ್ಶಿ.


---


# NAVA BHARAT BELLARY.

Reg. No. M. 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months, |

To
Sri ..................................................
..................................................
..................................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.


೧೧ | ಬಳ್ಳಾರಿ ಮಾರ್ಚ್ ೨೯ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾ

ಕೆ ೧೨ | | ಟಿ. ಬಿ. ಕೇಶವರಾವ್.


## ಬಳ್ಳಾರಿಯಲ್ಲಿ ಇತ್ತೆಹಾದ ಪುಂಡರು

22ನೆಯ ದಿನಾಂಕ ಇಲ್ಲಿಯ ಪೋಲೀಸ್ ಸರ್ಕಲ ಶ್ರೀ ವಿ. ರಾಮಕೋಟರೆಡ್ಡಿಯವರು ಸಂಶಯದ ಮೇಲೆ ಮೂವರು ಇತ್ತೆಹಾದ ಪುಂಡರನ್ನು ಬಂಧಿಸಿರುವರು. ವಿಚಾರಣೆಗಾಗಿ ಅವರನ್ನು 15 ದಿನ ರಿಮಾಂಡದಲ್ಲಿಟ್ಟಿರುವರು. ಜಹಿರುದ್ದೀನ್ ಅಲಿಯಾಸ್. ಅಬ್ದುಲ್ ಖಾದರ್ ಸದಾರ್ ಮುಹಮ್ಮದ್ ಇಸ್ಮಾಯಿಲ್ ಅವರ ಹೆಸರು. ಮೊದಲನೆಯವನು ಅಬ್ದುಲ್ ಖಾದರ್ ಎಂಬ ಹೊಸ ಹೆಸರಿಟ್ಟುಕೊಂಡು ರೈಲ್ವೆ ಸ್ಟೇಷನ್ ರಿಫ್ರೆಶಮೆಂಟರೂಮದಲ್ಲಿಳಿದಿದ್ದನು. ಉಳಿದಿಬ್ಬರು ಜುಮ್ಮಾ ಮಸೀದಿಯಲ್ಲಿ ಸಿಕ್ಕರು. ಇವು ರಾಜಕೀಯ ಉದ್ದೇಶವನ್ನು ಸಾಧಿಸಲೋಸುಗ ಇಲ್ಲಿಗೆ ಬಂದವರೆಂದು ಗೊತ್ತಾಯಿತು.

ಇತ್ತೆಹಾದ ಪಕ್ಷದ ಬಹಳ ಇತಿಹಾಸವು ಅವರಿಂದ ದೊರೆಯಿತು. ಇದಲ್ಲದೆ ಲೈಸೆನ್ಸಿಲ್ಲದ ರಿವಾಲ್ವರ್ ಉಪಯೋಗಿಸದ ಮೋಂಬತ್ತಿ, ಸ್ಕ್ರೂಡ್ರಾಯವರ್, ಜಿನ್ನಾರ ಭಾವಚಿತ್ರಗಳು ಅವರಲ್ಲಿದ್ದವು. ಜಹಿರುದ್ದೀನನೆಂಬುವನು ಇತ್ತೆಹಾದ ಪಕ್ಷದ ಒಳಕಾರ್ಯಕಾರೀ ಸಮಿತಿಯಲ್ಲಿರುವನೆಂದು ಹೇಳಿಕಕೊಟ್ಟಿರುವನು.

## ಹಿಂದಿನ ರಾಜಕೀಯ ಕೈದಿಗಳಿಗೆ ಜಮೀನು.

ಈಗಾಗಲೇ ಭೂಮಾಲೀಕರಾದ ಹಿಂದಿನ ರಾಜಕೀಯ ಕೈದಿಗಳು ಅರ್ಜಿದಾರರಲ್ಲಿ ಬಹಳ ಸ್ವಲ್ಪೇ ಜನರಿರುವ ಕಾರಣ ಎಲ್ಲರಿಗೂ ಸಂಸಮಾನವಾಗಿ ಭೂದಾನ ಮಾಡಬೇಕೆಂದು ಮದ್ರಾಸ್ ಸರ್ಕಾರದವರು ವಿಧಿಸಿರುವರು. ಇವರ ಶೀಘ್ರ ಇತ್ಯರ್ಥ ಮಾಡಲೋಸುಗ ಒಂದು ಅಧಿಕಾರೀ ಸಮಿತಿಯನ್ನು ನಿರ್ಮಿಸಿರುವರು.

---

## ಅಲ್ಪಸಂಖ್ಯಾಕರು — ಗುಳೆ ಹೋಗಬಾರದು —

### ಮುಖ್ಯ ಪ್ರಧಾನಿಗಳ ಜನ್ಮಹ

ಭಾರತ ಮತ್ತು ಪಾಕಿಸ್ತಾನಗಳ ಮುಖ್ಯ ಪ್ರಧಾನಿಗಳು ಒಂದು ಸಂಯುಕ್ತ ಹೇಳಿಕೆ ಹೊರಡಿಸಿ ತಮ್ಮ ತಮ್ಮ ಭಾಗಗಳಿಂದ ಅಲ್ಪ ಸಂಖ್ಯಾಕರು ಗುಳೆ ಹೋಗಬಾರದೆಂದೂ, ಅವರಿಗೆ ಸಾಕಷ್ಟು ರಕ್ಷಣೆ ಕೊಡಲಾಗುವದೆಂದೂ ಕೋರಿರುವರು. ತಪ್ಪಿಷ್ಟದ ಮೇಲೆ ಒಂದು ಭಾಗದಿಂದ ಇನ್ನೊಂದಕ್ಕೆ ಹೋಗುವವರಿಗೆ ಸಾಕಷ್ಟು ರಕ್ಷಣೆ ಕೊಡಲಾಗುವದು ಎಂದು ಅದರಲ್ಲಿ ಸೂಚಿತವಾಗಿದೆ.

---

## ಶ್ರೀ ರಾಮಸ್ವಾಮಿರೆಡ್ಡಿಯಾರರು ಮುಖಂಡರು

ಮದ್ರಾಸ್ ಕಾಂಗ್ರೆಸ್ ಶಾಸನ ಸಭೆಯ ಪಕ್ಷದ ಮುಖಂಡರ ಆಯ್ಕೆಯು ನಡೆದು ಶ್ರೀ ಪ್ರಕಾಶಂ ಮತ್ತು ಓಮಂಡೂರ ರಾಮಸ್ವಾಮಿರೆಡ್ಡಿಯಾರರು ಸ್ಪರ್ಧಿಸಿದರು. ರೆಡ್ಡಿಯಾರರಿಗೆ ಹೆಚ್ಚಿಗೆ ಮತಗಳು ಬಿದ್ದು ಅವರೇ ಗೆದ್ದರು. ಅಂದರೆ ಈಗಿರುವ ಮಂತ್ರಿಮಂಡಲದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

# ಕುರುಗೋಡು [ಬಳ್ಳಾರಿ] ದ್ವಿತೀಯ ದನಗಳ ಪ್ರದರ್ಶನ

## ಶ್ರೀ ಬಸರೀಗಿಡದವರ ಉದ್ಬೋಧಕ ಭಾಷಣ

ಕುರುಗೋಡು ಶ್ರೀ ದೊಡ್ಡಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ ಕಳೆದ ವರ್ಷದಿಂದ ಪ್ರಾರಂಭವಾದ ದನಗಳ ಪ್ರದರ್ಶನದ ಉದ್ಘಾಟನೆಯನ್ನು ಗದಗಿನ ಸುಪ್ರಸಿದ್ಧ ದಾನಶೂರ ಶ್ರೀಮಂತ ಬಸರೀಗಿಡದ ವೀರಪ್ಪನವರು ಜಿಲ್ಲಾ ಕಲೆಕ್ಟರ್ ಶ್ರೀ ಕೆ. ಎನ್. ಅನಂತರಾಮನ್‌ರ ಅಧ್ಯಕ್ಷತೆಯಲ್ಲಿ 26ನೆಯ ದಿನಾಂಕ ಶುಕ್ರವಾರ ಪ್ರಾತಃಕಾಲ ನೆರವೇರಿಸಿದರು. ಮೈಸೂರು, ಹೈದರಾಬಾದ್ ಮತ್ತು ಜಿಲ್ಲೆಯ ವಿವಿಧಭಾಗಗಳಿಂದ ಸಾವಿರಾರು ಶ್ರೇಷ್ಠ ರಾಸಿ ದನಗಳು ಬಂದಿದ್ದವು, ಸರ್ಕಾರದ ದೇಣಿಗೆಯಲ್ಲದೆ ಶ್ರೀ ನಾಡಗೌಡ್ರು ಮರಿಬಸವನಗೌಡ್ರು ಪ್ರದರ್ಶನದ ಬಹುಮಾನಗಳ ಸಲುವಾಗಿ 200 ರೂ ಕೊಟ್ಟಿದ್ದರು. ಗೌಡರಲ್ಲದೆ ಶ್ರೀ ರಾಮಚಂದ್ರಶೆಟ್ಟಿ, ಶೇಷಗಿರಿಯಪ್ಪ ಹೆಬ್ಬಾಳಪ್ಪ ಮತ್ತು ಸ್ಥಾನೀಕ ಮಹನೀಯರು ಜಾತ್ರೆಯ ಮತ್ತು ಪ್ರದರ್ಶನದ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದ್ದರು,

ಪ್ರಾರಂಭದಲ್ಲಿ ಕುರುಗೋಡಿನ ನಾಗರೀಕರು ಶ್ರೀ ಬಸರೀಗಿಡದವರಿಗೆ ಮಾನಪತ್ರವನ್ನರ್ಪಿಸಿ ಕರ್ನಾಟಕದ ನಾಡು ನುಡಿಗಳಿಗಾಗಿ ಅವರು ಗೈಯುತ್ತಿರುವ ಸೇವೆಯನ್ನು ಪ್ರಶಂಸಿದರು.

ಶ್ರೀ ಬ ವೀರಪ್ಪನವರು ಉತ್ತರಿಸಿದರು.

"ನಿಮ್ಮ ಸನ್ಮಾನಕ್ಕೆ ನಾನು ಋಣಿ ಇರುವೆ. ನೀವು ಕಾಣಿಸಿದ ಯೋಗ್ಯತೆಗಳು ನನ್ನಲ್ಲಿಲ್ಲವಾದರೂ, ಕೈಲಾದ ಸೇವೆಯನ್ನು ಸಲ್ಲಿಸಲು ನಾನು ಸದಾ ಯತ್ನಿಸುತ್ತೇನೆ

ನಾನು ಒಬ್ಬ ಸಾಧಾರಣ ರೈತ ಈಗಿನ ಪರಿಸ್ಥಿತಿಯಲ್ಲಿ ರೈತನ ಏಳಿಗೆಯು ಸುಧಾರಿಸಿದ ವ್ಯವಸಾಯ ಉಪಕರಣ ಪದ್ಧತಿಗಳಿಂದಾಗಬೇಕು. ನಮಗೆ ವಿದ್ಯುಚ್ಛಕ್ತಿಯೂ ಬೇಕು. ಟ್ರಾಕ್ಟರುಗಳೂ ಬೇಕು, ನಿಮ್ಮ ಭಾಗಕ್ಕೆ ಜೋಗದ ವಿದ್ಯುತ್ತಿನಿಂದ ಲಾಭವಾಗಲೆಂದು ಆಶಿಸುವೆ, ಪಾಶ್ಚಾತ್ಯ ದೇಶಗಳಲ್ಲಿ ಅದರಲ್ಲಿಯೂ ಅಮೇರಿಕಾ ಕಾನಡಾಗಳಲ್ಲಿ ನಮಗಿಂತಲೂ 2-3 ರಷ್ಟು ಹೆಚ್ಚಿಗೆ ಬೆಳೆಯುತ್ತಾರೆ. ಅಲ್ಲಿ ಆಹಾರಧಾನ್ಯದ ಕೊರತೆಯಿಲ್ಲ. ನಮ್ಮ ದೇಶದಲ್ಲಿ ಆಹಾರ ಧಾನ್ಯದ ಕೊರತೆ ಜನಸಂಖ್ಯೆ ಹೆಚ್ಚಿದಂತೆಲ್ಲಾ ಅಧಿಕವಾಗುತ್ತಲಿದೆ. ಈ ಕಾರಣ ಗೊಬ್ಬರ, ಬೀಜಗಳ ಸುಧಾರಣೆಯಾಗಬೇಕು. ಹಳ್ಳಿಗಳ ನಾಡಾದ ಭಾರತದಲ್ಲಿ ದನಗಳ ಅಭಿವೃದ್ಧಿಯೂ ಆಗಬೇಕು

ಈಗಿರುವ ಸರಕಾರ ಪ್ರಜಾ ಸರಕಾರ ವೃಥಾ ಟೀಕಿಸುವುದರಿಂದ ಉಪಯೋಗವಿಲ್ಲ. ಅವರ ಕೈಗಳನ್ನು ಬಲಗೊಳಿಸಬೇಕು. ಪ್ರಾರಂಭದಲ್ಲಿ ಎಷ್ಟು ಕಷ್ಟಗಳಿವೆ. ಅವುಗಳನ್ನು ದುರ್ಲಕ್ಷಿಸುವುದು ಬೇಡ. ಸ್ವಾತಂತ್ರ್ಯವಿದ್ದ ಎಲ್ಲಾ ಕಾರ್ಯಗಳನ್ನೂ ಮಾಡಲಾಗುತ್ತವೆ. ನಡುವೆ ಹಾಕಿಸುವುದು ಭಾವಿ ತೆಗೆಸುವುದು ಟ್ರಾಕ್ಟರ್ ಬಾಡಿಗೆಗೆ ಒದಗಿಸುವುದು ನಡೆದೇ ಇವೆ. ಬೊಂಬಾಯಿ ಪ್ರಾಂತದಂತೆ ನಿಮ್ಮಲ್ಲಾದರೂ ಅಭಿವೃದ್ಧಿ ಕೆಲಸಗಳು ಸಾಗಿರಲಿಕ್ಕೆ ಸಾಕು. ನಿಮ್ಮ ನಿಮ್ಮ ಬೇಡಿಕೆಗಳನ್ನು ಠರಾವುಗಳ ಮೂಲಕ ಸರ್ಕಾರಕ್ಕೆ ತಿಳಿಸಿರಿ.

ಗ್ರಾಮಗಳೂ, ರೈತರೂ ಸ್ವಾವಲಂಬಿಯಾಗಬೇಕೆಂದರೆ ಸರ್ಕಾರದ ಜನತೆಯ ಪರಸ್ಪರ ಸಹಾಯವಶ್ಯಕ ಸರ್ಕಾರದವರು ಸೌಲಭ್ಯಗಳನ್ನೊದಗಿಸಬೇಕು. ರೈತರು ಅವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಗೊಬ್ಬರದಲ್ಲಿ ಸತುವು ಒಳ್ಳೆಯ ಬೀಜ. ಸುಧಾರಿಸಿದ ಯಾಂತ್ರಿಕ ಪದ್ಧತಿಗಳಿಂದ ಧಾನ್ಯವನ್ನು ಹೆಚ್ಚಿಗೆ ಬೆಳೆಸಲೇಬೇಕು ಇಲ್ಲವಾದರೆ ನಾಶವು ಖಂಡಿತ

ಗಾಂಧೀಜೀಯು ಮಹಾವಿಭೂತಿ, ರಾಮರಾಜ್ಯ ಸ್ಥಾಪಿಸಲೆತ್ನಿಸುತ್ತಿದ್ದರು. ಭಾರತದ ಪ್ರತಿಯೊಬ್ಬನಿಗೂ ಹೊಟ್ಟೆತುಂಬಾ ಅನ್ನ, ಮೈತುಂಬಾ ಬಟ್ಟೆ ದೊರಕಿಸುವ ರಾಜ್ಯವೇ ರಾಮರಾಜ್ಯ. ಇದೇ ಭಾರತವನ್ನು ಸುಂದರ ಜಗತ್ತಾಗಿ ಮಾಡುವ ಕನಸನ್ನು ಮಹಾತ್ಮರು ಕಂಡರು. ನಾವು ಆ ಸ್ವಪ್ನನೋಡಿ ಕಾರ್ಯರೂಪಕ್ಕೆ ಇಳಿಸಬೇಕು.

### ೨೫೦ ದಾನ

ನಿಮ್ಮೂರಲ್ಲಿ ನೀರಿನ ಕಷ್ಟವಿದೆಯೆಂದು ಕೇಳಿ ಪರಸ್ಥಳದವನಾದರೂ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಲು 250 ರೂ. ಕೊಡುತ್ತೇನೆ. ನೀವು ಸರ್ಕಾರ ಜನತೆಯ ಸಹಾಯದಿಂದ ಪೂರ್ಣ ಲಾಭಹೊಂದಿರಿ. ನಿಮಗೆ ದೇವರು ಯಶಸ್ಸೀಯಲಿ" ಎಂದು ಮುಗಿಸಿದರು.

ಸ್ಥಾಪಿತ: 1937. **ನವಭಾರತ, ಬಳ್ಳಾರಿ.** ಸೈಜು 1/4 ಫೂಲ್ಸಕೇಪ್

(ಆಂಗ್ಲ - ಕನ್ನಡ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.)

— ಪ್ರಕಟನೆಯ ದರಗಳು. —

| | ಒಂದು ಸಲ. | ತಿಂಗಳು. | 3 ತಿಂಗಳು. | 6 ತಿಂಗಳು. | 1 ವರ್ಷ |
|---|---|---|---|---|---|
| ಪೂರ್ಣ ಪುಟ | 25/- | 75/- | 125/- | 200/- | 300/- |
| ಅರ್ಧ ಪುಟ | 15/- | 50/- | 100/- | 150/- | 200/- |
| 1/4 ಪುಟ | 10/- | 30/- | 75/- | 100/- | 150/- |

ಜಾಹೀರಾತಿನ ಅವಧಿಯ ಹಣವನ್ನು ಮುಂಗಡವಾಗಿ ಸಲ್ಲಿಸಬೇಕು. ಹೆಚ್ಚು ಜನಪ್ರಿಯವಾದ, ಹೆಚ್ಚು ಬಳಕೆಯ ಈ ವಾರ ಪತ್ರಿಕೆಯಲ್ಲಿ ಶೀಘ್ರವಾಗಿ ಪ್ರಕಟನೆಕೊಟ್ಟು ಲಾಭ ಪಡೆಯಿರಿ,

ವ್ಯವಸ್ಥಾಪಕ,
**ನವಭಾರತ, ಬಳ್ಳಾರಿ.**

ನಂತರ ಕಲೆಕ್ಟರ್ ಶ್ರೀ ಅನಂತರಾಮನ್‌ರವರು ತಮಗೆ ಭಾಷೆ ಬರದ ಕಾರಣ ತೆಲುಗಿನಲ್ಲಿ ಮಾತಾಡುವೆನೆಂದೂ ಉಭಯ ಭಾಷಾ ಪಂಡಿತರಾದ ಶ್ರೀ ಟಿ ಬಿ. ಕೇಶವರಾಯರನ್ನು ಕನ್ನಡದಲ್ಲಿ ಭಾಷಾಂತರಿಸಲು ಕೇಳಿಕೊಳ್ಳುವುದಾಗಿಯೂ ತಿಳಿಸಿ ಹೀಗೆ ಹೇಳಿದರು.

"ಶ್ರೀ ಬಸರೀಗಿಡದವರು ಬಹಳ ದಾನಶೂರರೆಂದೂ ಲಕ್ಷಗಟ್ಟಲೆ ದಾನಮಾಡಿರುವುದಾಗಿಯೂ ಕೇಳಿದ್ದೇನೆ, ಮನುಷ್ಯನ ಬೆಲೆಯು ಅವನ ಆಸ್ತಿಯಿಂದ ಪ್ರಕಟವಾಗುವುದಿಲ್ಲ. ಅವನು ಕೊಡುಗೈಯಿಂದ ಕೊಡುವ ದಾನದಿಂದ ವ್ಯಕ್ತವಾಗುತ್ತದೆ. ರೈತನೆಂದರೆ ಕೊಡುವವನೆಂದರ್ಥ ಸೇವೆಯೇ ಅವನ ಹಕ್ಕು. ಇಂಥಾ ಸೇವಾಧುರೀಣ ವೀರಪ್ಪನವರು ರೈತರಿಗೆ ಬೆಲೆಯುಳ್ಳ ರಚನಾತ್ಮಕ ಸಲಹೆ ಇತ್ತಿದ್ದಾರೆ, ರೈತನು ಒಳ್ಳೆಯ ಬದುಕನ್ನು ಬದುಕಬೇಕೆಂದರೆ, ಅಜ್ಞಾನ, ದಾರಿದ್ರ್ಯ, ಜಾತಿಮತ ಭೇದಗಳು ಹೋಗಬೇಕೆಂದರೆ ಸರ್ಕಾರ ಅದರಲ್ಲೂ ರೈತರ ಸಹಕಾರವು ಅಗತ್ಯ. ಹೊಸ ಪದ್ಧತಿಗಳು ಬೇಕು ಮದ್ರಾಸ್ ಪ್ರಾಂತದಲ್ಲಿ ಮದ್ಯನಿಷೇಧವಿಲ್ಲದಿದ್ದರೆ ಗ್ರಾಮಗಳಿಗೆ ಹೆಚ್ಚು ಉಪಯುಕ್ತ ಕಾರ್ಯವಾಗುತಿತ್ತು ಆದರೆ ಮದ್ಯನಿಷೇಧದಿಂದ ಕುಡುಕರಾಗಿದ್ದ ಕುಟುಂಬೀಕರಿಗೆ ಸರಾಸರಿ ವರ್ಷಕ್ಕೆ 400 ರೂ. ಉಳಿತಾಯವಾಗಿದೆ. ಈ ಕಾರಣ ಮದ್ರಾಸಿಗೆ 18 ಕೋಟಿ ರೂ. ಲುಕ್ಸಾನಾದರೂ ಚಿಂತೆಯಿಲ್ಲ ನಮ್ಮಲ್ಲಿ ಶೇಕಡ 92% ಜನರು ಜನರು ನಿರಕ್ಷರರು. ವಿದ್ಯಾಭ್ಯಾಸಕ್ಕೆ ಸರ್ಕಾರ ಸಹಕಾರ ಬೇಕು. ರೈತನೂ ತ್ಯಾಗಮಾಡಬೇಕು.

ಮಲೇರಿಯಾದಿಂದ ಭಾರತಕ್ಕೆ 40 ಕೋಟಿ ರೂ. ಹಾನಿಯಾಗುತ್ತಲಿದೆ. ಇದನ್ನು ತಪ್ಪಿಸಬೇಕು.

ಶ್ರೀ ಮರಿಬಸವನಗೌಡರು 200 ರೂ. ಕೊಟ್ಟು ಪ್ರದರ್ಶನಕ್ಕೆ ಇನ್ನೂ ಹೆಚ್ಚು ಕಳೆ ಕೊಟ್ಟರು. ಅವರಿಗೆ ವಂದನೆ ಎಂದರು. ಶ್ರೀಮತಿ ಪಾರ್ವತೀ ಅನಂತರಾಮನ್‌ರವರು ಒಳ್ಳೆಯ ದನಗಳಿಗೆ ಬಹುಮಾನ ಹಂಚಿದರು. ಛಾಯಾಚಿತ್ರ ತೆಗೆದುಕೊಳ್ಳಲಾಯಿತು. ಗೌಡರು ವಂದನಾರ್ಪಣೆಮಾಡಿದನಂತರ ಸಮಾವೇಶವು ಮುಗಿಯಿತು.

## ಪಾಲಿಸ್ತಾನ ವಿಭನೆ

ಇಲ್ಲಿಯವರೆವಿಗೂ ಪಾಲಿಸ್ತಾನದ ವಿಭಜನೆಯಾಗಬೇಕೆಂದು ಹೇಳುತ್ತಿದ್ದ ಅಮೇರಿಕಾವು ಯಹೂದಿಗಳನ್ನು ಕೈಬಿಟ್ಟಂತಾಯಿತು. ಭವಿಷ್ಯ ಯುದ್ಧದಲ್ಲಿ ಅರಬ್ ರಾಷ್ಟ್ರಗಳು ಎಣ್ಣೆಯನ್ನು ಕೊಡಲಿಕ್ಕಿಲ್ಲೆಂದು ಅಮೇರಿಕಾವು ಈ ರಾಜತಂತ್ರವನ್ನು ಹೂಡಿದೆ.

# ಹೈದರಾಬಾದು ಪುಂಡರನ್ನೋಡಿಸಿದರು

## ವಲ್ಲಭಾಪುರ (ಬಳ್ಳಾರಿ)

ಹೈದರಾಬಾದು ಇತ್ತೀಚಾದ ಪುಂಡರು ನಾರಾಯಣದೇವರಕೆರೆಯ ಸಮೀಪ ವಲ್ಲಭಾಪುರದ ಬಳಿ ತುಂಗಭದ್ರಾ ದಾಟಿ ಬಂದಾಗ ಆ ಸಶಸ್ತ್ರ 25 ಪುಂಡರನ್ನು ಗ್ರಾಮದವರು ಕತ್ತಿ-ಕಠಾರಿ-ಲಾಠಿ ತೆಗೆದುಕೊಂಡು ಬಂದು ಹಾವಳಿಮಾಡುವ ಮೊದಲೇ ಓಡಿಸಿ ಬಿಟ್ಟರು. ಸ್ತ್ರೀಯರೂ ಸಹ ಕಲ್ಲುಗಳಿಂದ ಹೊಡೆಯಲು ಮಾಳಿಗೆಗಳ ಮೇಲೆ ಸುಸಜ್ಜಿತರಾಗಿ ನಿಂತಿದ್ದರು. ಈ ಪ್ರರಾಕ್ರಮದ ಪಾಠವನ್ನು ನದಿತೀರದ ಹಳ್ಳಿಗಳವರೆಲ್ಲಾ ಕಲಿಯಬೇಕು.

---

## ಹಿರೇಹಡಗಲಿ

ಪುರಾಣೀಕ ಮಠದಲ್ಲಿ 23ನೆಯ ದಿನಾಂಕ ವೀರಶೈವ ಮತಸ್ಥಾಪಕರಲೊಬ್ಬರಾದ ಶ್ರೀ ರೇಣುಕಾಚಾರ್ಯರ ಜಯಂತಿಯು ವೈಭವವಾಗಿ ನೆರವೇರಿತು. ಶ್ರೀ ವಿರುಪಾಕ್ಷ ಶಾಸ್ತ್ರಿಗಳು ನೆರೆದ ಭಕ್ತ ಮಂಡಳಿಗೆ ಜಯಂತಿಯ ಮಹತ್ವವನ್ನು ತಿಳಿಯ ಹೇಳಿದರು. ಜಯಘೋಷದಿಂದ ಸಭೆ ಮುಗಿಯಿತು.

---

## ವುಲುವತ್ತಿ

20ನೆಯ ದಿನಾಂಕ ಬೋರ್ಡ್ ಶಾಲೆಯಲ್ಲಿ ಶ್ರೀ ಹೆಚ್. ಯಸ್ ಸಂಗನಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಸೇರಿ ಶಾಲಾ ಸಮಿತಿ ಸದಸ್ಯರು ಗ್ರಾಮದ ಮಹಾಶಯರು ಗಾಂಧೀಜಿ ಸ್ಮಾರಕಕ್ಕಾಗಿ ದೊಡ್ಡ ಭಾವಚಿತ್ರವನ್ನು ಅನಾವರಣ ಮಾಡಿದರು.

---

**ಪೂರ್ವಬಂಗಾಲ** (ಪಾಕಿಸ್ಥಾನ) ದ ರತ್ನಾಪುರ ಎಂಬ ಹಳ್ಳಿಯಲ್ಲಿ 39 ಹಿಂದೂಗಳ ಮನೆಗಳನ್ನು ಸುಟ್ಟಿರುವರು. 40 ಸಾವಿರ ರೂ. ನಷ್ಟವಾಗಿದೆ.

ಇದೇ ಭಾಗದ ಜೆಸ್ಸೂರಿನ ಗಲಭೆಯಲ್ಲಿ ಒಬ್ಬನು ಸತ್ತು ಹೋದನು, ಕೆಲ ಹೆಂಗಸರಿಗೂ ಗಾಯಗಳಾಗಿವೆ. ಈ ಗಲಭೆಗಳ ಕಾರಣ ಹಿಂದೂಗಳು ಊರು ಬಿಡುತ್ತಿದ್ದಾರೆ.

# ಭಾರತ ಪಾಕಿಸ್ಥಾನದ ಐಕ್ಯ

## ಶ್ರೀ ಜಯಪ್ರಕಾಶರ ಭಾಷಣ

ಭಾರತದಲ್ಲಿ ಸಮಾಜವಾದೀ ರಾಜ್ಯದ ಪ್ರತಿಷ್ಠಾಪನೆಯಾದಾಗ ಪಾಕಿಸ್ತಾನವೂ ಭಾರತವನ್ನು ಕೂಡುವ ಆಶಾಕಿರಣವಿದೆ. ಇಂದು ಡಿಲ್ಲಿಯಲ್ಲಿ ಪದರೂಢವಾದ ಸರ್ಕಾರವು ಬಡವರಿಗಾಗಿ ಶ್ರಮಿಸುತ್ತಿದೆ ನಿರ್ದಿಷ್ಟ ಸಮಾಜದ ಹಿತಕ್ಕಲ್ಲ ಎಂದು ಪಾಕಿಸ್ತಾನಗಳಿಗೆ ಖಚಿತವಾಗಬೇಕು ಏಕೆಂದರೆ ಈಸಂಬಂಧ ಪಾಕಿಸ್ತಾನೀ ಮುಖಂಡರು ವಿರುದ್ಧ ಭಾವನೆಗಳನ್ನು ಬಿತ್ತಿರುವರು. ಇಲ್ಲಿ ನಡೆದ ಘಟನೆಗಳಾದರೂ ಅವರ ಭಾವನೆಗಳನ್ನು ದೃಢೀಕರಿಸಿವೆ ಎಂದು ಜಯಪ್ರಕಾಶ ನಾರಾಯಣ[illegible] ಸೂರತ್‌ದಲ್ಲಿ ನಡೆದ ವಿದ್ಯಾರ್ಥಿಗಳ ಸಭೆಯೊಂದರ[illegible] ಒಂದು ಪ್ರಶ್ನೆಗೆ ಉತ್ತರ ಕೊಟ್ಟರು.

---

— ಹೈದರಾಬಾದ್‌ದಲ್ಲಿ ಆಯುಧಗಳ ಕಾರ್ಖಾನೆಯಿದ್ದು ಬಂದೂಕ, ರಿವಾಲ್ವರ್, ತೋಟಾಗಳ ತಯಾರಿಕೆಯು ನಡೆದಿದೆಯೆಂಬುದು ತಮ್ಮ ಗಮನಕ್ಕೆ ಬಂದಿ[illegible]ದಾಗಿಯೂ, ಏಜಂಟ ಜನರಲ್‌ರ ವಿಚಾರಣೆಗೆ ಹೋ[illegible] ಅವರಿಂದ ವರದಿ ಬಂದಿಲ್ಲವೆಂದೂ ನಹರೂರವರು ಡೊಮಿನಿಯನ್ ಪಾರ್ಲಿಮೆಂಟದಲ್ಲಿ ಹೇಳಿದರು.

— ಜರ್ಮನಿಯ ಬರ್ಲಿನ್ ನಗರದ ಚತುರ್ರಾಷ್ಟ್ರದವರ ಆಡಳಿತದಲ್ಲಿ ರಷ್ಯಾ ಕೌನ್ಸಿಲ್‌ದಿಂದ ಹೊರ[illegible]ದ್ದ ಕಾರಣ ಬಿಕ್ಕಟ್ಟುಂಟಾಗಿದೆ

---

## ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಾ ರಾಷ್ಟ್ರಭಾಷೆ ಪ್ರವೇಶಿಕ ವಿಶಾರದ ವಿದ್ವಾನ್ ವಗ್ಯರೆ ಪರೀಕ್ಷೆಗಳಿಗೆ ಕೂಡಲು ತಕ್ಕ ಸಲಹೆ ಕೊಡುತ್ತೇವೆ. ಪರಸ್ಥಳದವರು ಮಾಹಿತಿಗಾ[illegible] ಸ್ಟಾಂಪಿಟ್ಟು ಬರೆಯಿರಿ.

ಟಿ. ಬಿ. ಕೇಶವರಾವ್,

ಜಿಲ್ಲಾ ಹಿಂದೀ ಪ್ರೇಮೀಮಂಡಲ ಬಳ್ಳಾರಿ

# ಉರಿ ಆರಿಸಲು ಎಣ್ಣೆ ಸಂಗ್ರಹ

"ಇತ್ತ ರಶಿಯಾವೂ ಅತ್ತ ಅಮೇರಿಕೆಯೂ ಜಗತ್ತಿಗೇ ಉರಿಹತ್ತಬಹುದೆಂದೂ, ಅದಕ್ಕಾಗಿಯೇ ಆ ಉರಿಯನ್ನು ಆರಿಸಲು ಎಣ್ಣೆಯನ್ನು ಸಂಗ್ರಹಿಸುತ್ತಿದ್ದೇವೆ" ಎಂದೂ ಹೇಳುತ್ತಲಿವೆಯಂತೆ.

"ಅಮೇರಿಕೆಯಿಂದ ಇಡೀ ಯುರೋಪವೇ ಹಾಳಾಗಿ ಹೋಗುತ್ತಲಿದೆ ಅಮೇರಿಕೆಯ ಸಾವುಕಾರಿಕೆಯ ಪಾಶದಲ್ಲಿ ಸಿಕ್ಕು ಪಶ್ಚಿಮ ಯುರೋಪದ ದೇಶಗಳು ಉಸಿರುಗಟ್ಟಿ ಗುರುಗುಟ್ಟುತ್ತಲಿವೆ ಮಾರ್ಶಲ ಯೋಜನೆಯನ್ನು ಸ್ವೀಕರಿಸುವುದೆಂದರೆ ನಮ್ಮ ದೇಶದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಇವುಗಳ ನಾಶಕ್ಕಾಗಿ ಅಮೇರಿಕೆ ಟೊಂಕಕಟ್ಟಿ ಧನದ ಮೋಹವೆರಚಿ ಅದನ್ನು ಮರೆಸಲ ಯತ್ನಿಸುತ್ತಿದೆ ಅಮೇರಿಕೆಯ ಈ ನೀತಿಯಿಂದ ಜಗತ್ತಿಗೇ ಗಂಡಾಂತರ ಉಂಟು, ಮೂರನೆಯ ಮಹಾಯುದ್ಧಕ್ಕಾಗಿ ಅಮೇರಿಕೆ ತನ್ನ ಬಗಲುಗೂಸಾದ ಇಂಗ್ಲಂಡದೊಡನೆ ಕೂಡಿಕೊಂಡು ಕಾಲುಕೆದರುತ್ತಲಿದೆ. ಯುರೋಪದಲ್ಲಿ ಅಮೇರಿಕೆಯ ಸಾವುಕಾರಿಕೆಯ ಕೈವಾಡ ನಡೆಯದಂತೆ ಮಾಡಿದರೇನೇ ಜಗತ್ತಿಗೆ ಕ್ಷೇಮ ಇಲ್ಲದಿದ್ದರೆ ಜಗತ್ತಿನಲ್ಲಿ ಅಶಾಂತಿಯುಂಟಾಗುವುದು. ಬರಬರುತ್ತ ಈ ಅಮೇರಿಕನ್ ಸಾವುಕಾರೀ ಪಾಶದಿಂದ ಜಗತ್ತೇ ನರಳಬೇಕಾಗುವುದು. ಆದ್ದರಿಂದ ಇದರ ಬಗ್ಗೆ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ ಕಮ್ಯೂನಿಸಂ ತತ್ವ ಸರ್ವ ಸಮಾನತ್ವದ ಹಾಗೂ ಸರ್ವ ಸಾಮಾನ್ಯರಿಗೂ ಸುಖ ಶಾಂತಿಗಳನ್ನು ತರುವಂಥದು. ಅದರ ಪ್ರಚಾರ ಬೆಳವಣಿಗೆಗಳಿಂದಲೇ ಜಗತ್ತಿಗೆ ಹಿತ ಜಗತ್ತಿನಲ್ಲಿ ಶಾಶ್ವತ ಶಾಂತಿಯುಂಟಾಗಬೇಕಾದರೆ ಜಗದ ತುಂಬ ಕಮ್ಯೂನಿಸಂ ಪ್ರಸಾರವಾಗಿ, ಸರ್ವ ಸ್ವಾತಂತ್ರ್ಯ ಸರ್ವ ಸಮಾನತ್ವಗಳು ನೆಲೆಗೊಂಡು ಮೆರೆಯಬೇಕು ಈ ಕಮ್ಯೂನಿಸಂ ಪ್ರಚಾರದಲ್ಲಿ ಅರ್ಥಾತ್ ಜಗತ್ ಶಾಂತಿ ಪ್ರಚಾರದಲ್ಲಿ ಅಮೇರಿಕೆಯೂ ಕೂಡಿಕೊಳ್ಳಬಯಸಿದರೆ ನಮಗೆ ಬಹಳ ಆನಂದವಾಗುವುದು"

"ಏನೇ ಆಗಲಿ, ಈ ಕಮ್ಯೂನಿಸಂ ಪ್ರಚಾರ ಅಥವಾ ಜಗತ್ ಶಾಂತಿಗಾಗಿ ನಾವು ಸಾಕಷ್ಟು ಸೈನ್ಯ ಸಂಗ್ರಹ, ಪೆಟ್ರೋಲು, ವಿಮಾನ, ಬಾಂಬು, ಮದ್ದು, ಗುಂಡು ಮೊದಲಾದವುಗಳನ್ನು ಯಥೇಚ್ಛವಾಗಿ ಸಂಗ್ರಹಿಸಬೇಕಲ್ಲದೆ ರಶಿಯಾದಲ್ಲಿ ಪ್ರತಿಯೊಬ್ಬ ಯುವಕನಿಗೂ ಯುವತಿಗೂ ಯುದ್ಧ ಶಿಕ್ಷಣಕೊಟ್ಟು ಸಿದ್ಧವಿಡಬೇಕು. ನಮಗೇನೂ ಯುದ್ಧ ಮಾಡುವ ಆತುರವಿಲ್ಲ. ಯುದ್ಧದಿಂದ ಎಂತಹ ಹಾನಿ ಎಂಬ ಮಾತು ಕಳೆದ ಎರಡು ಜಾಗತಿಕ ಮಹಾಯುದ್ಧಗಳಿಂದ ನಮಗೂ ಜಗತ್ತಿಗೂ ಗೊತ್ತೇ ಆಗಿದೆ. ಆದರೆ ಜಗತ್ತು ಸಾವುಕಾರೀ ಪಾಶದಲ್ಲಿ ಸಿಕ್ಕು ಸಂಕಟ ಪಡುತ್ತ ಅಶಾಂತಿಗೆ ತುತ್ತಾಗಬಾರದು ಅನಿವಾರ್ಯಕವಾಗಿ ನಾವು ಈ ಸಿದ್ಧತೆಯನ್ನು ಮಾಡಬೇಕಾಗುತ್ತಲಿದೆ. ಏಕೆಂದರೆ ಜಗತ್ತಿನ ಶಾಂತಿ ಕಾಯುವದರಲ್ಲಿ ರಶಿಯಾದ ಹೊಣೆ ಬಹಳವಾಗಿದೆ. ಯುರೋಪ ಮತ್ತು ಏಶಿಯಾ ಎರಡೂ ಖಂಡಗಳಲ್ಲಿ ಹಬ್ಬಿದ ಬೃಹತ್ ರಾಷ್ಟ್ರ ಇದು. ಜಗತ್ತಿನಲ್ಲಿ ಹೀಗೆ ಎರಡು ಖಂಡಗಳಲ್ಲಿ ಹಬ್ಬಿದ ರಾಷ್ಟ್ರ ಇನ್ನೊಂದಿಲ್ಲ. ಆದ್ದರಿಂದ ಈ ವಿಶ್ವಶಾಂತಿಯ ಹೊಣೆ ನಮ್ಮ ಮೇಲೆಯೇ ಇರುವದು ಸ್ವಾಭಾವಿಕವಾದದ್ದು ಅದಕ್ಕಾಗಿಯೇ ರಶಿಯಾದ ಪ್ರತಿಯೊಬ್ಬನೂ ಯುದ್ಧ ಸಿದ್ಧತೆಯನ್ನು ಮಾಡಿಕೊಳ್ಳಬೇಕಲ್ಲದೆ ಯುರೋಪದ ಇತರ ದೇಶಗಳು ಬಡತನದ ಭೂತಕ್ಕೆ ಬಲಿಯಾಗಿ ನರಳುತ್ತಿದ್ದರೂ, ಅಲ್ಲ ಅಮೇರಿಕೆ ಬಂದು ಹಣದ ಆಶೆ ಆಮಿಷಗಳನ್ನು ತೋರಿಸಿ ಅವುಗಳ ನೈತಿಕ ಸ್ವಾತಂತ್ರವನ್ನು ಹರಣ ಮಾಡುವದನ್ನೂ ನಾವು ಸಹಿಸಲಾರೆವು ಇದನ್ನು ತಡೆಗಟ್ಟದಿದ್ದರೆ ಜಗತ್ತಿನ ಶಾಂತಿಗೆ ಗಂಡಾಂತರ!"

ಇದು ಬಿಚ್ಚು ಮನದಿಂದ ಹೇಳಿದ ರಶಿಯಾದ ವಾದ.

"ರಶಿಯಾವು ಇಡೀ ಪಶ್ಚಿಮ ಯುರೋಪವನ್ನೇ ಪಾದಾಕ್ರಾಂತ ಮಾಡಲು ಹೆಣಗುತ್ತಿದೆಯಲ್ಲದೆ ಪೂರ್ವಕ್ಕೂ ಚೀನದಲ್ಲಿ ತನ್ನ ಕೈವಾಡವನ್ನು ನಡೆಸಿ ಅಶಾಂತಿಯನ್ನು ಹಬ್ಬಿಸಿ ಅಲ್ಲಿ ಭಯಂಕರ ಯಾದವೀ ಯುದ್ಧವನ್ನೇ, ನಡೆಸಿಬಿಟ್ಟಿದೆ. ಚೀನದ ಪೂರ್ವ ಮುಖಾಂತರವಾಗಿಯೂ ಯುರೋಪದ ಪಶ್ಚಿಮ ಮುಖಾಂತರವಾಗಿಯೂ, ತನ್ನ ಕಮ್ಯುನಿಸ್ಟ ತತ್ವಗಳಿಂದ, ರಾಜಕಾರಣದಲ್ಲಿ ತನ್ನ ಕೈವಾಡ ನಡೆಸಿ, ತನ್ಮೂಲಕ ಅಮೇರಿಕೆಯ ಹೆಣಹಾಕಲು ಅದು ಪ್ರಯತ್ನಿಸುತ್ತಲಿದೆ. ಇದರಿಂದ ಗಂಡಾಂತರ ಪ್ರಾಪ್ತವಾಗುವದಲ್ಲದೆ, ಜರ್ಮನಿ, ಗ್ರೀಸ, ಝುಕೋಸ್ಲೋವಾಕಿಯಾ ಮೊದಲಾದೆಡೆಗಳಲ್ಲಿ ಈಗಾಗ

ಲೇ ಅದು ನಡೆಸಿದ ಕೃತ್ಯಗಳಿಂದ ಈ ಮಾತಿನ ಸತ್ಯತೆಯು ಪ್ರತೀತಿಗೆ ಬರುವಂತಿದೆ. ಎರಡನೆಯ ಯಾವ ರಾಷ್ಟ್ರದ ಏಳ್ಗೆಯನ್ನೂ ಅದು ಸಹನಮಾಡ ವಂತಿಲ್ಲ. ಪ್ರತಿಯೊಂದರಲ್ಲಿಯೂ ತನ್ನದೇ ಮೂಗು ಮೇಲು ಮಾಡಲು ಪ್ರಯತ್ನ ಪಡುತ್ತಲಿದೆ. ಇದರಿಂದ ಉಳಿದ ಸಣ್ಣಪುಟ್ಟ ರಾಷ್ಟ್ರಗಳ ಆಂತರಿಕ ಶಾಂತಿಗೆ ಭಂಗಬರುವ ಸಂಭವ ಬಹಳವಿದೆ. ಆದ್ದರಿಂದ ಅಮೇರಿಕೆ ಇದರಲ್ಲಿ ಅನಿವಾರ್ಯವಾಗಿ ಕೈಹಾಕಲೇ ಬೇಕಾಗಿದೆ. ಅದಕ್ಕಾಗಿ ಅಮೇರಿಕೆಯಲ್ಲಿ ಕಡ್ಡಾಯ ಸೈನ್ಯಶಿಕ್ಷಣ, ಯುದ್ಧ ಸಾಮಗ್ರಿಗಳ ಸಂಗ್ರಹ ನಡೆಯಲೇಬೇಕು. ಇವೆಲ್ಲ ಜಾಗತಿಕ ಶಾಂತಿಗಾಗಿಯೇ ಆಗಬೇಕಾದ ವಿಷಯ. ಇಲ್ಲದಿದ್ದರೆ, ಬರಲಿರುವ ಜಾಗತಿಕ ಮಹಾಯುದ್ಧಕ್ಕಾಗಿ ನಾವು ಇದಕ್ಕೂ ಹೆಚ್ಚಿನ ಬೆಲೆಯನ್ನು ತೆತ್ತಬೇಕಾದೀತು

ಇದು ಅಮೇರಿಕೆಯ ಆಂತರಿಕ ಧನಿಯವಾದ.

ಈ ರೀತಿ ಇವೆರಡೂ ಪ್ರಮುಖ ದೇಶಗಳು ಶಾಂತಿಗಾಗಿ ಯುದ್ಧಸಿದ್ಧತೆ ನಡೆಸಿದ್ದು ಉರಿ ಆರಿಸಲು ಎಣ್ಣೆ ಸಂಗ್ರಹ ಮಾಡಿದಂತೆಯೇ ಎಂದು ಹೇಳಬಹುದು. ಈಗೆರಡು ಜಾಗತಿಕ ಮಹಾಯುದ್ಧಗಳ ಕಷ್ಟನಷ್ಟಗಳನ್ನು ಅನುಭವಿಸಿಯೂ ಈತರ ಇವು ನಡೆವಳಿಕೆ ಇಟ್ಟುಕೊಳ್ಳುವುದು ನಿಜವಾಗಿಯೂ ವ್ಯಸನಾಸ್ಪದ ಮಾತೇ ಸರಿ.

(ಜಯಹಿಂದ್)

## ಪಂಡಿತ ನೆಹರು ಪ್ರಾಂತೀಕರಣ

"ಭಾಷಾವಾರ ಪ್ರಾಂತೀಕರಣ ತತ್ವವನ್ನು ನಾವು ಸ್ವೀಕರಿಸಿದ್ದೇವೆ. ಪ್ರಾಂತಗಳ ರಚನೆಯ ವಿಷಯದಲ್ಲಿ ಸಾಧ್ಯಾಸಾಧ್ಯತೆಯನ್ನು ಆಲೋಚಿಸಿ ನಮಗೆ ವರದಿಯನ್ನರ್ಪಿಸಲು ಒಂದು ಸಮಿತಿಯನ್ನು ನಿರ್ಮಿಸಿ ಅವರ ವರದಿಯು ಬಂದಕೂಡಲೇ ಸರಹದ್ ಸಮಿತಿಯನ್ನು ರಚಿಸುತ್ತೇವೆ.

ಆದರೆ ಇಂಥಾ ಅಪಾಯಕರ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅಂಧ್ರಪ್ರಾಂತೀಯ ಕಾಂಗ್ರೆಸ್ ಸಮಿತಿಗೇನು ಬಂದಿದೆ? ಇವರ ತಲೆಯಲ್ಲಿ ಪ್ರಾಂತನಿರ್ಮಾಣ ಬಿಟ್ಟರೆ ಬೇರೊಂದು ವಿಷಯವಿಲ್ಲೇನು? ಸಂಕುಚಿತ ಪ್ರಾಂತೀಯತೆ ಕೂಪಸ್ಥಮಂಡೂಕ ವೃತ್ತಿಯನ್ನು ತ್ಯಜಿಸಬೇಕಾದುದವಶ್ಯಕ. ಕೇಂದ್ರವು ಬಲಿಷ್ಠ ಮತ್ತು ಪುಷ್ಟವಿದ್ದರೆ ಅದರ ಭಾಗಗಳಾದ ಪ್ರಾಂತಗಳ ಸ್ವಾತಂತ್ರ್ಯವೂ ಭದ್ರವಿರುವುದು. ಭದ್ರತೆಯಿಲ್ಲದೆಯೇ ಪ್ರಾಂತಗಳನ್ನು ರಚಿಸಿದರೇನು ಪ್ರಯೋಜನ" ಎಂದು ಪಂಡಿತ ಜವಹರಲಾಲ ನೆಹರೂರವರು ವಿಶಾಖಪಟ್ಟಣದ ಸಾರ್ವಜನಿಕ ಸಭೆಯಲ್ಲಿ ಹೇಳಿದರು. ಇದಕ್ಕಾಗಿ ಕೆಲ ಅಂಧ್ರರು (ಜಾತೀಯ ದೃಷ್ಟಿಯ) ರೊಚ್ಚಿಗೆದ್ದಿರುವರು.

## ಜಿಲ್ಲಾ ಮುನ್ಸೀಫರ ಕೋರ್ಟ ಹೊಸಪೇಟೆ

O. S. No 37/48

ವಾದಿ:—

**ಆರ್. ಗೂಳಪ್ಪ, ತಂದೆ, ರುದ್ರಪ್ಪ 45 ಯಾದವ ಕಂಟ್ರಾಕ್ಟರ್ ಹೊಸಪೇಟೆ.**

ಪ್ರತಿವಾದಿ:—

**ಕೆ. ಅಬ್ದುಲ್ ಹಾಮದ್ ಸಾಬು,** ತಂದೆ ಅಜುಮುದ್ದೀನ್ ಸಾಬು, 30, ಮುಸ್ಲಿಂ, ವ್ಯಾಪಾರ, ಕೂಡ್ಲಿಗಿ

ಪ್ರತಿವಾದಿ 9 5—45 ನೆಯ ತೇದಿ ವಿ. ಅಬ್ದುಲ್ ಸಾಹೇಬನ ಹೆಸರಿಗೆ ರೂ 75/-ಕ್ಕೆ ಬರೆದುಕೊಟ್ಟ ಪ್ರೋನೋಟನ್ನು ವಾದಿ 15—12—47 ನೆಯ ತೇದಿ ಟ್ರಾನ್ಸಫರ್ ತೆಗೆದುಕೊಂಡು ರೂ. 416—5—6 ಗೆ ಪ್ರತಿವಾದಿಯ ಮೇಲೆ ದಾವಾ ಮಾಡಿರುತ್ತಾನೆ. 31—3—48ಕ್ಕೆ ವಾಯ್ದೆ ಇರುತ್ತದೆ. ಆ ದಿವಸ ಪ್ರತಿವಾದಿ ಖುದ್ದಾಗಲಿ, ವಕೀಲರ ದ್ವಾರವಾಗಲಿ ಹಾಜರಾಗದಿದ್ದರೆ ಪ್ರತಿವಾದಿಯ ಮೇಲೆ ಎಕ್ಸಪಾರ್ಟಿ ಡಿಕ್ರಿ (Exparte) ಆಗುತ್ತದೆ.

ಹೊಸಪೇಟೆ 20-3-48 | ಎ. ಆರ್. ಕೃಷ್ಣರಾವ್, ವಾದಿಯ ಅಡ್ವೊಕೇಟರು

—ಬಳ್ಳಾರಿ ಛೇಂಬರ್ ಆಫ್ ಕಾಮರ್ಸದ ಅಧ್ಯಕ್ಷರಾದ ಶ್ರೀ ಟಿ. ಬಿ. ಸತ್ಯನಾರಾಯಣ ಇವರು Bellary Chamber of Commerce ಛೇಂಬರ್‌ದ ಪರವಾಗಿ ಮದ್ರಾಸ್ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ಕಾಳಿನ ವಿನಿಯಂತ್ರಣದ ನಂತರ ಅಕ್ಕಿಯ ನಿಯಂತ್ರಣದ ಅವಶ್ಯಕತೆ ಉಳಿದಿಲ್ಲವೆಂದೂ, ಅದನ್ನು ಕೂಡಲೇ ತೆಗೆದು ಹಾಕಬೇಕೆಂದೂ ತಿಳಿಸಿರುವರು.

## ಸರ್ವೋದಯ ಸಮಾಜ

ಮಹಾತ್ಮಾ ಗಾಂಧಿಯವರ ವಿಧಾಯಕ ಕಾರ್ಯಕ್ರಮದಲ್ಲಿ ಆಸ್ಥೆಯಿದ್ದ ಮತ್ತು ಅವರ ತತ್ವ ಪ್ರಣಾಲಿಯಂತೆ ನಡೆಯಬಯಸುವ ಕಾರ್ಯಕರ್ತರ ಸಭೆಯೊಂದು ಸೇವಾಗ್ರಾಮದಲ್ಲಿ ಸೇರಿತ್ತು. ವಿಧಾಯಕ ಕಾರ್ಯಕರ್ತರ ಭಾವೀ ಧೋರಣ ಮತ್ತು ಕಾರ್ಯಕ್ರಮದ ಬಗ್ಗೆ ಕೂಲಂಕಷ ಚರ್ಚೆಯಾಗಿ ಸರ್ವೋದಯ ಸಮಾಜವೆಂಬ ಸಂಸ್ಥೆಯನ್ನು ಸಂಸ್ಥಾಪಿಸಬೇಕೆಂದು ಗೊತ್ತಾಯಿತು. ಕಳೆದ 27 ವರುಷ ಕಾಂಗ್ರೆಸ್ಸು ಅಹಿಂಸಾತ್ಮಕ ಹೋರಾಟ ಹೂಡಿ ಸ್ವಾತಂತ್ರ್ಯವನ್ನು ಸಂಪಾದಿಸಿತು. ಆದರೆ ಆ ಸ್ವಾತಂತ್ರ್ಯ ಸಂಪಾದನೆಯ ನಂತರ ದೇಶದಲ್ಲಿ ಅಹಿಂಸೆಯುಳಿಯದೆ ಹಿಂಸೆ ತಾಂಡವನೃತ್ಯ ನಡೆಸಿತು. ಈಗಲೂ ಪೂರ್ಣ ಶಾಂತತೆ ಪ್ರಸ್ಥಾಪಿತವಾಗಿಲ್ಲ. ಈ ಪರಿಸ್ಥಿತಿಯಲ್ಲಿ ಅಹಿಂಸೆಯ ಬಗ್ಗೆ ಆಸ್ಥೆಯಿದ್ದವರು ಯಾವ ರೀತಿಯಿಂದ ತಮ್ಮ ತತ್ವದ ಪ್ರಚಾರ ಮಾಡಬೇಕು. ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವುದಕ್ಕಾಗಿ ಯಾವ ಬಗೆಯಿಂದ ಕಾರ್ಯ ಮಾಡಬೇಕು ಎಂಬುದೆ ತಿಳಿಯದಂತಾಗಿದೆಯೆಂದು ಹೇಳಿದರೆ ತಪ್ಪಾಗದು. ಮಹಾತ್ಮರ ವಿಧಾಯಕ ಕಾರ್ಯಕ್ರಮವು ಅದರಲ್ಲಿಯೂ ಅಹಿಂಸೆ ಯಶಸ್ವಿಯಾಗಬೇಕೆಂದರೆ ಅದೇ ಧ್ಯೇಯವನ್ನಿಟ್ಟುಕೊಂಡು ಕೆಲಸ ಮಾಡುವವರು ಅವಶ್ಯ. ಕಾಂಗ್ರೆಸ್ಸು ಇಡೀ ರಾಷ್ಟ್ರದ ಪ್ರಾತಿನಿಧಿಕ ಸಂಸ್ಥೆಯಾದ್ದರಿಂದ ಎಲ್ಲ ಬಗೆಯ ವಿಚಾರದ ಜನರಿಗೂ ಅದರಲ್ಲಿ ಸ್ಥಾನವಿದ್ದುದರಿಂದ ಕೇವಲ ಕಾಂಗ್ರೆಸ ಸಂಸ್ಥೆಯಿಂದ ಈ ಕಾರ್ಯವಾಗದು. ಇದನ್ನೆಲ್ಲ ವಿಚಾರಿಸಿ ಹೊಸದೊಂದು ಸಂಸ್ಥೆಯನ್ನು ಸ್ಥಾಪಿಸಿದ್ದು ಉಚಿತವಾಯಿತು. ಸತ್ಯ ಮತ್ತು ಅಹಿಂಸೆಯ ತಳಹದಿಯನ್ನವಲಂಬಿಸಿದ, ಜಾತೀಯ ಭೇದವಿಲ್ಲದ ಆರ್ಥಿಕ ಶೋಷಣೆಗೆ ಅಸ್ಪದವಿಲ್ಲದ ವೈಯಕ್ತಿಕ ಮತ್ತು ಸಾಮುದಾಯಿಕ ಪ್ರಗತಿಗೆ ಅವಕಾಶವಿದ್ದ ಸಮಾಜವನ್ನು ರಚಿಸುವದೆ ಈ ಹೊಸ ಸಂಸ್ಥೆಯ ಧ್ಯೇಯವೆಂದು ಸಾರಲಾಗಿದೆ. ಮಹಾತ್ಮರ ತತ್ವದಲ್ಲಿ ವಿಶ್ವಾಸವಿದ್ದವರು ಅದನ್ನು ಕಾರ್ಯರೂಪದಲ್ಲಿ ತರಲು ಮನಸಾ ಪ್ರಯತ್ನಿಸುವವರು ಮಾತ್ರ ಈ ಸಮಾಜದಲ್ಲಿ ಸೇರುವದು ಅವಶ್ಯವಾಗಿದೆ. ಗಾಂಧೀಜಿಯ ಜಾತೀಯ ಐಕ್ಯ, ಖಾದಿ, ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ ಮೊದಲಾದ 22 ವಿಧಾಯಕ ಕಾರ್ಯಕ್ರಮಗಳಲ್ಲಿ ಯಾವುದಾದರೊಂದು ಕಾರ್ಯಕ್ರಮವನ್ನಿಟ್ಟುಕೊಂಡು ಕೆಲಸ ಮಾಡುವವರು ಈ ಸಮಾಜದಲ್ಲಿ ಸೇರಬಹುದು. ಕೇವಲ ಸಮಾಜ ಸೇವೆಗಾಗಿ ಬದ್ಧಕಂಕಣರಾದ ಈ ಕಾರ್ಯಕರ್ತರಲ್ಲಿ ಅಧಿಕಾರ ಲಾಲಸೆ, ಅಹಂಮನ್ಯತೆ ಮೊದಲಾದ್ದು ಇರಬಾರದಿಷ್ಟೇ ಅಲ್ಲ. ಪ್ರಚಾರ ಪಡಿಸುತ್ತಿರುವ ತತ್ವಗಳಲ್ಲಿ ಸಂಪೂರ್ಣ ವಿಶ್ವಾಸವಿರಬೇಕು. ಸ್ವತಃ ಆ ತತ್ವಗಳಂತೆ ನಡೆಯಬೇಕಾದುದೂ ಅವಶ್ಯ. ಡಾಂಭಾಚಾರಿಗಳಿಂದ ಯಾವ ಪ್ರಯೋಜನವೂ ಆಗದು. ಇಂಥ ತತ್ವನಿಷ್ಠರಿ ಈ ಸಮಾಜದಲ್ಲಿ ಸೇರಿ ಗಾಂಧೀಜಿಯ ತತ್ವ ಭಾರತದಲ್ಲೆಲ್ಲ ಪ್ರಸಾರವಾಗಿ ಕಾರ್ಯರೂಪವಲ್ಲಿಳಿದರೆ ಗಾಂಧೀಜಿಯ ಆತ್ಮ ಚಿರಶಾಂತಿಯನ್ನು ಹೊಂದುವದೆಂದು ಬೇರೆ ಹೇಳಬೇಕಿಲ್ಲ.

## ರಾಷ್ಟ್ರರಕ್ಷಣೆ

ಹಿಂದುಸ್ತಾನ ಸರಕಾರವು ರಾಷ್ಟ್ರರಕ್ಷಣೆಯ ಸಮಸ್ಯೆಯತ್ತ ತೀವ್ರ ಗಮನಕೊಟ್ಟು ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯ ಪಡೆಯನ್ನು ಸಂಸ್ಥಾಪಿಸಲು ನಿರ್ಧರಿಸಿದ್ದು ಅತ್ಯಂತ ಉಚಿತವಾಗಿದೆ. ಬ್ರಿಟಿಶರಾಳಿಕೆಯಲ್ಲಿ ಭಾರತೀಯರು ನರಗುಂದಿದವರಂತಾಗಿ ಆತ್ಮರಕ್ಷಣೆಯ ಶಕ್ತಿಯನ್ನೆ ಕಳೆದುಕೊಂಡಿದ್ದರು. ಇಂಥ ಭಾರತೀಯರಲ್ಲಿ ನವಚೈತನ್ಯವನ್ನು ತುಂಬಿ ಆತ್ಮರಕ್ಷಣೆಯಲ್ಲಿ ಅವರನ್ನು ಸಮರ್ಥ ಮತ್ತು ನಿರತರನ್ನಾಗಿ ಮಾಡುವದು ಅತ್ಯಂತ ಅವಶ್ಯಕ ಮತ್ತು ಇಷ್ಟವಾದ ಕೆಲಸವಾಗಿದೆ. ಸರಕಾರದವರು ಕುಂಜರು ಸಮಿತಿಯ ಸೂಚನೆಗಳನ್ವಯ ವಿದ್ಯಾರ್ಥಿಗಳಿಗೂ ಸೈನ್ಯ ಶಿಕ್ಷಣ ಕೊಡುವ ಸಲಹೆ ಕೊಟ್ಟಿದ್ದಾರೆ. ಬಾಲಕಿಯರಿಗೂ ಆತ್ಮರಕ್ಷಣೆಯ ಪಾಠ ಕಲಿಸಲು ಕುಂಜರು ಸಮಿತಿಯವರು ಸೂಚಿಸಿದ್ದು ಅತ್ಯಂತ ಉಚಿತವಾಗಿದೆ. ಇಂದು ಜಗತ್ತಿನಲ್ಲಿ ಅಬಲೆಯರ ಮೇಲೆ ಆಗಾಗ ಆಗುತ್ತಿರುವ ಅತ್ಯಾಚಾರ ಮೊದಲಾದವುಗಳನ್ನು ನೆನೆದರೆ ಸ್ತ್ರೀಯರಿಗೆ ಆತ್ಮರಕ್ಷಣೆಯ ಶಿಕ್ಷಣಕೊಡುವದು ಅತ್ಯಂತ ನ್ಯಾಯವೆನಿಸಹತ್ತಿದೆ. ಅವರಲ್ಲಿ ಶಿಸ್ತು ಸಂಘಟನೆ ಆತ್ಮಾವಲಂಬನವೃತ್ತಿಯನ್ನು ಬೆಳೆಸಿ ಕಠಿಣ ಪ್ರಸಂಗದಲ್ಲಿ ಅವರನ್ನು ಆತ್ಮರಕ್ಷಣೆಗೆ ಸಮರ್ಥರನ್ನಾಗಿ ಮಾಡುವದು ಇಂದಿನ ಈ ದುರ್ದಿನಗಳಲ್ಲಿ ಸರಕಾರದ ಕರ್ತವ್ಯವಾಗಿದೆ. ಬ್ರಿಟಿಶರಾಳಿಕೆಯಲ್ಲಿಯೂ ವಿದ್ಯಾರ್ಥಿಗಳಿಗೆ ಯು. ಟಿ. ಸಿ ಮುಖಾಂತರ ಸೈನಿಕ ಶಿಕ್ಷಣ ಕೊಡ

ಲಾಗುತಿತ್ತು ಆದರೆ ಆ ಶಿಕ್ಷಣದಿಂದ ಅನೆಷ್ಟು ಸೈನಿಕರು ಸೈನ್ಯಾಧಿಕಾರಿಗಳು ತರಬೇತಾದರೊ ತಿಳಿಯದು. ಸ್ವತಂತ್ರ ಹಿಂದುಸ್ಥಾನ ಸರಕಾರ ಕೊಡಲು ಯೋಚಿಸಿದ ಈ ಶಿಕ್ಷಣವು ಪೂರ್ಣ ಸೈನಿಕ ಶಿಕ್ಷಣವಿದ್ದು ಅದು ವಿದ್ಯಾರ್ಥಿ ವೇಷಿಯಲ್ಲಿಯೆ ಪೂರ್ಣ ಕೊಡಲ್ಪಡುವಂತೆ ಯೋಚಿಸುವದು ಅವಶ್ಯವಾಗಿದೆ. ಅಹಿಂಸೆಯನ್ನು ಬೋಧಿಸುತ್ತಿರುವ ಹಿಂದುಸ್ಥಾನವಿಂದು ವಿದ್ಯಾರ್ಥಿಗಳಿಗೂ ಸೈನ್ಯ ಶಿಕ್ಷಣ ಕೊಡಲೆಳೆಸಿ ಯುದ್ಧದ ದಾರಿಯನ್ನು ಹಿಡಿಯಿತೆಂದು ಮಾತ್ರ ಯಾರೂ ಅರ್ಥಮಾಡಿಕೊಳ್ಳಬಾರದು. ಹಿಂದುಸ್ಥಾನ ಯಾವ ರಾಷ್ಟ್ರವನ್ನು ಆಕ್ರಮಿಸುವ ಧೋರಣವನ್ನು ತಾಳಿಲ್ಲ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಬುದ್ಧಿ, ನೈತಿಕ ಬಲ, ಧುರೀಣತ್ವ ಮೊದಲಾದವುಗಳು ಬೆಳೆದು ಅವರು ಆತ್ಮರಕ್ಷಣೆಗೆ ಶಕ್ತರಾಗುವದೆ ಇವರ ಉದ್ದೇಶವೆಂದು ಸಂರಕ್ಷಣ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಹಿಂದುಸ್ಥಾನದಲ್ಲಿಯ ವಿದ್ಯಾರ್ಥಿಗಳು ಈ ಪಡೆಯಲ್ಲಿ ಸೇರಿ ಶಿಕ್ಷಣ ಪಡೆಯಬೇಕೆಂದು ಸೂಚಿಸುತ್ತೇವೆ

---

## ಬಳ್ಳಾರಿಯಲ್ಲಿ
## ಫಾರ್ವರ್ಡ್‌ಬ್ಲಾಕ್ ಮುಖಂಡರು.

---

ಅಖಿಲ ಭಾರತ ಫಾರ್ವರ್ಡ್‌ಬ್ಲಾಕ್‌ದ ಅಧ್ಯಕ್ಷರಾದ ಸರ್ದಾರ ಶಾರ್ದೂಲಸಿಂಹ ಕವೀಶ್ವರರು, ಅನಿಲರಾಯ್ ಕರ್ನಾಟಕದ ಚಾಲಕರಾದ ಶ್ರೀ ಮರುಳಾರಾಧ್ಯ ಶಾಸ್ತ್ರಿ ಮಂಡಿಗೆ ಮತ್ತು ಇತರ ಪರಿವಾರದೊಡನೆ 24ನೆಯ ದಿನಾಂಕ ಸಾಯಂಕಾಲ ಆಗಮಿಸಿ ಸಾಂಬಮೂರ್ತಿ ಮೈದಾನದಲ್ಲಿ ಸಂಘದ ಧ್ಯೇಯ ನೀತಿಗಳ ಮೇಲೆ ಭಾಷಣವಿತ್ತರು. ಶ್ರೀ ಮರುಳಾರಾಧ್ಯಶಾಸ್ತ್ರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು

ಸರ್ದಾರ ಶಾರ್ದೂಲ ಸಿಂಹರು ಕಾಂಗ್ರೆಸಿನ ಹಿಂದಿನ ಇತಿಹಾಸವನ್ನು ಸಾದ್ಯಂತವಾಗಿ ಹೇಳಿ ಗಾಂಧೀಜಿಯ ನಾಯಕತ್ವದಲ್ಲಿ ಅದೆಷ್ಟು ಪ್ರಗತಿಪರವಾಯ್ತೆಂಬುವನ್ನು ಸೂಚಿಸಿ ಭಾರತ ಜನತೆಯು ಗಾಂಧೀಜೀಗೆ ಚಿರಋಣಿಗಳಾಗಿರತಕ್ಕದೆಂದು ಹೇಳಿದರು. ಅವರು ಮುಂದುವರಿಯುತ್ತಾ ಹೇಳಿದ್ದೇನೆಂದರೆ ಗಾಂಧೀಜೀಯು ಸುಭಾಷರ ಕಾರ್ಯಕ್ರಮವನ್ನೊಪ್ಪಲಿಲ್ಲ. ಹಿಂಸೆಯ ತಳಹದಿಯನ್ನು ಅವರು ವಿರೋಧಿಸಿದುದು ಸಹಜವೇ ಆಗಿದೆ. ಆದರೆ ಅವರ ಶಿಷ್ಯರು ಈಗ ಅಹಿಂಸಾವಾದಿಗಳೆಲ್ಲಿದ್ದಾರೆ? ದೇಶದ ಕಠಿಣ ಪರಿಸ್ಥಿತಿಯಲ್ಲಿ ಗೂಂಡಾ ಜನರನ್ನು ವಿರೋಧಿಸುವಾಗ (ಕಾಶ್ಮೀರ, ಜುನಾಗಢದಂಥ ಪ್ರದೇಶಗಳಲ್ಲಿ) ಅಹಿಂಸಾ ಪಾಠದಿಂದ ಉಪಯೋಗವಾಗದು ಸುಭಾಷರ ಕಾರ್ಯಕ್ರಮದಿಂದ ಸೈನಿಕರಲ್ಲಿ ಮಾನವು ಪ್ರಜ್ವಲಿತವಾಗಿ ಗಾಂಧೀಜೀಯ ಇಂಡಿಯಾ' ಆಂದೋಲನವು ಸಾಫಲ್ಯವನ್ನು ಹೆ ದೇಶಕ್ಕೆ ಸ್ವಾತಂತ್ರ್ಯವು ಲಭಿಸಿತೆಂದರೆ ಆಜಾದ್ ಹಿಂದ್ ಫೌಜ್‌ಗೆ ಮಹತ್ವ ಸ್ಥಾನವು ಸಿಗಬೇಕು ಸೈನಿಕರಲ್ಲಿ ಸ್ವಾತಂತ್ರ್ಯ ರಾಷ್ಟ್ರೀಯ ಭಾವನೆಗಳುತ್ಪನ್ನವಾದಮೇಲೆ ಪ್ರಜೆಗಳ ಇಷ್ಟವಿಲ್ಲದೆ ಯಾವ ಆಡಳಿತಕ್ಕೂ ರಾಜ್ಯಭಾರ ನಡೆಸುವುದು ಸಾಧ್ಯವಿಲ್ಲ.

ಸ್ವಾತಂತ್ರ್ಯ ದೊರೆಯಿತೆಂದರೆ ನಮ್ಮ ಕೆಲಸ ಮುಗಿದಂತಾಗಲಿಲ್ಲ. ಅದು ಪ್ರಜೆಗಳ ರಾಜ್ಯಭಾರವಾಗಬೇಕು. ಬ್ರಿಟಿಷರು ಹೋಗಿ ಅದೇ ಸ್ಥಾನದಲ್ಲಿ ನಮ್ಮವರು ಬಂದಿದ್ದಾರೆ. ಆದರೆ ಯಂತ್ರವು ಬದಲಾಗಲಿಲ್ಲ. ದಾರಿದ್ರ್ಯವಿದೆ, ಕ್ಷಾಮವಿದೆ, ಆಹಾರವಿಲ್ಲ, ಜನತೆಗೆ ಅನೇಕ ವಿಧವಾದ ಕಷ್ಟಗಳಿವೆ. ಈ ಸಮಸ್ಯೆಗಳನ್ನು ಬಗೆಹರಿಸಲು ಈ ಸರ್ಕಾರವೇನು ಮಾಡಿತು? ಕಳ್ಳಬಜಾರ, ಲಾಭಬಡಕತನ, ಲಂಚ ರಿಶ್ವತ್ತುಗಳೇ ಕಂಡುಬರುತ್ತಿವೆ. ಹೈದರಾಬಾದಿನ ಗೂಂಡಾಜನರು ಭಯಂಕರ ಅತ್ಯಾಚಾರಗಳನ್ನು ನಡೆಸಿದ್ದಾರೆ. ಭಾರತ ಸರ್ಕಾರವು ಮೌನಧಾರಣಮಾಡಿದೆ ಜನತೆಗೆ ಶೀಘ್ರ ಪರಿಹಾರ ದೊರೆಯಬೇಕು ............ಎಂದರು.

ಶ್ರೀ ಅನಿಲರಾಯರು ಹೇಳಿದ್ದು ಭಾರತದ ಸರ್ವವಿಧದ ಪ್ರಗತಿಗೂ ನೇತಾಜೀಯವರ ಮಾರ್ಗ ಶ್ರೇಷ್ಠ. ನಾವು ಬಲಿಷ್ಠರಿಲ್ಲದ ಕಾರಣ ದೇಶದ ವಿಭಜನೆಯಾಯಿತು. ಬ್ರಿಟಿಷ್ ಅಮೇರಿಕಾಗಳೊಂದುಕಡೆ, ರಷ್ಯಾ ಒಂದುಕಡೆ ಜಗತ್ತಿನಲ್ಲಿ ತಮ್ಮ ಪ್ರತಿಭೆ ಬೀರುತ್ತಲಿವೆ ಅಂತರಾಷ್ಟ್ರೀಯ ಸ್ಥಾನಮಾನಗಳನ್ನರಿತು ತಮ್ಮ ಶಕ್ತಿಯು ಕುಂದದಿರಲೆಂದು ಅಮೆರಿಕಾ ಬ್ರಿಟನ್‌ಗಳು ಪಾಕಿಸ್ಥಾನವನ್ನು ಭದ್ರಮಾಡುತ್ತಲಿವೆ. ಅಲ್ಪಸಂಖ್ಯಾತರ ಸಮಸ್ಯೆಯನ್ನು ಭೂತಗನ್ನಡಿಯಲ್ಲಿ ತೋರಿಸುತ್ತಲಿವೆ. ಇವೆಲ್ಲಾ ಇತ್ಯರ್ಥವಾಗಿ ನಮಗೆ ಲಭಿಸಿದ ಸ್ವಾತಂತ್ರ್ಯವು ಶಾಶ್ವತವಾಗಿರಬೇಕೆಂದರೆ ಸಮತಾವಾದಿ ತಳಹದಿಯ ಮೇಲೆ ರಾಜ್ಯಭಾರವೇರ್ಪಡಬೇಕು..........ಎಂದರು.

ಶ್ರೀ ಮರುಳಾರಾಧ್ಯ ಶಾಸ್ತ್ರಿಯವರು ಸಂಕ್ಷಿಪ್ತವಾಗಿ ಭಾಷಣಕಾರರ ಅಭಿಪ್ರಾಯಗಳನ್ನು ಸಮರ್ಥಿಸಿ ಕರ್ನಾಟಕದ ಪರವಾಗಿ ಅವರನ್ನಭಿನಂದಿಸಿದರು. ಶ್ರೀ ಶಾಂತರುದ್ರಪ್ಪನವರು ಬಳ್ಳಾರಿಯವರ ಪರವಾಗಿ ವಂದನಾರ್ಪಣೆ ಮಾಡಿದರು. ಈ ಸಭೆಯು ಆಜಾದ ಕಬನ ಪರವಾಗಿ ಏರ್ಪಟ್ಟಿತ್ತು. 25ನೆಯ ತಾ|| ಪ್ರಾತಃಕಾಲ ಪಕ್ಷದ ಸಂಘಟನ ಇತರ ಮುಖ್ಯ ವಿಷಯಗಳನ್ನು ಕಾರ್ಯಕರ್ತರೊಡನಾಲೋಚಿಸಿ ಹುಬ್ಬಳ್ಳಿ ಕಡೆ ಹೊರಟರು.

## ಭಾವಿ ತೋಡಲು ಸರ್ಕಾರದ ಸಹಾಯ

ಈ ಪ್ರಾಂತದಲ್ಲಿ ಭಾವಿ ತೋಡುವುದಕ್ಕೆ ಧನ ಸಹಾಯ ಕೊಡುವ ಯೋಜನೆಯನ್ನು ಬರುವ ಎಪ್ರಿಲ್ ತಿಂಗಳಿಂದ ಒಂದು ವರ್ಷದ ವರೆಗೆ ಸರ್ಕಾರವು ಮುಂದುವರಿಸಿದೆ. ಕಳೆದ ವರ್ಷದ ಅಂತ್ಯದ ವರೆಗೆ 23517 ಭಾವಿಗಳಿಗೆ ರೂ 78,79,863 ಸರಕಾರವು ಮಂಜೂರು ಮಾಡಿತ್ತು. ಅವರಿ 20,799 ಭಾವಿ ತೋಡಲು ರೂ. 70,14,810 ಮಾತ್ರ ನಿಜವಾಗಿ ಹಂಚಲ್ಪಟ್ಟಿತ್ತು. 459 ಭಾವಿ ತೋಡಿ ಆಗಿದೆ. 9,841 ಭಾವಿಗಳ ಕೆಲಸ ನಡೆಯುತ್ತಿತ್ತು. 10,082 ಭಾವಿ ತೋಡಲಿಕ್ಕಾರಂಭಿಸಲಿಕ್ಕಿತ್ತು. 31-12-47 ರಂದು 43,895 ಅರ್ಜಿಗಳು ಬಾಕಿ ಇದ್ದವು. ಪ್ರತ್ಯೇಕಿಸಲ್ಪಟ್ಟ ಮೊಬಲಗಿನಲ್ಲಿ ಬಾಕಿ ಉಳಿದ 71 ಲಕ್ಷ ರೂಪಾಯಿಯಿಂದ ಇನ್ನು 20,000 ಭಾವಿಗಳಿಗೆ ಸಹಾಯ ಕೊಡಬಹುದು. ಇನ್ನು ಹೆಚ್ಚಿನ ಮಂಜೂರಾತಿಯಿಲ್ಲದೆ ತಿರುಗಿ ಹಂಚಿ ಹಾಕಿದ ಮೊಬಲಗು ಮೀರುವುದಿಲ್ಲವಾದರೆ ಗೊತ್ತುಪಡಿಸಿದ ಸಂಖ್ಯೆಯನ್ನು ಜಿಲ್ಲಾ ಕಲೆಕ್ಟರರು ಮೀರಬಹುದೆಂದು ಅಪ್ಪಣೆಕೊಡಲಾಗಿದೆ. ಕಲೆಕ್ಟರರ ವರದಿ ಪ್ರಕಾರ 31-3-48 ರೊಳಗೆ ರೂ 55,01,460 ಹೆಚ್ಚು ಮಾಡಬೇಕಾಗುವುದು. 46,915 ಎಕ್ರೆ ಹೆಚ್ಚು ವಿಸ್ತೀರ್ಣ ಸ್ಥಳವನ್ನು ಬೇಸಾಯಕ್ಕೆ ಯೋಗ್ಯವನ್ನಾಗಿ ಮಾಡಬಹುದೆಂದೂ ಇದರಿಂದ 14 255 ಟನ್ನು ಹೆಚ್ಚು ಆಹಾರ ಧಾನ್ಯ ದೊರೆಯಬಹುದೆಂದೂ ನಿರೀಕ್ಷಿಸಲಾಗಿದೆ. ಈ ಪೈರಿನ ಕೆಲಸ ಮುಗಿದಿರುವುದರಿಂದ ಬರುವ 3 4 ತಿಂಗಳುಗಳಲ್ಲಿ ರೈತರ ಭಾವಿ ತೋಡುವ ಕೆಲಸಕ್ಕೆ ಹೆಚ್ಚಿನ ಗಮನಕೊಡಬಹುದೆಂದೂ ನಿರೀಕ್ಷಿಸಲಾಗಿದೆ.

## ಗಾಂಧೀಜಿ ಬಿದ್ದ ಸ್ಥಳ.

ಮಹಾತ್ಮಾಜೀಯವರ ದೇಹವನ್ನು ಗುಂಡುಗಳು ತಿವಿದ ನಂತರ ಅವರ ದೇಹದಿಂದ ರಕ್ತ ಕಣಗಳು ಬಿದ್ದ ಕಡೆಯಲ್ಲಿ ಒಂದು ಬಲಿ ಪೀಠವು ನಿರ್ಮಿಸಲ್ಪಟ್ಟಿದೆ. ಅದರ ಮೇಲೆ ಅವರು ಪ್ರಜ್ಞೆ ತಪ್ಪಿ ಬೀಳುವಾಗ ಉಚ್ಚರಿಸಿದ "ಹೇ ರಾಮ" ಎಂದು ಬರೆಯಲಾಗಿದೆ. ಈ ಘಟನೆ ನಡೆದ ತಾರೀಕು "30-1-48 ಸಾಯಂಕಾಲ 5-17 ಕ್ಕೆ" ಕೆತ್ತಲಾಗಿದೆ

---

ಜನರ ಕಷ್ಟಗಳನ್ನು ನಿವಾರಿಸಿ ಅವರಿಗೆ ಆಹಾರ, ಬಟ್ಟೆ, ಮನೆ, ವಿದ್ಯಾಭ್ಯಾಸಗಳನ್ನು ಒದಗಿಸುವುದಕ್ಕೋಸ್ಕರ ತಕ್ಕ ಏರ್ಪಾಡಿಲ್ಲದಿದ್ದರೆ ಸ್ವರಾಜ್ಯವು ಪೂರ್ತಿಯಾಗದು. ಈ ದೇಶದಲ್ಲಿರುವ ಕೃಷಿಕರ ಸಂಖ್ಯೆ ಹೆಚ್ಚು. ವ್ಯವಸಾಯವು ನಮ್ಮ ಮುಖ್ಯ ಕೈಗಾರಿಕೆಯು. ಕೃಷಿಕರಿಗೂ ದೇಶಕ್ಕೂ ಅಭ್ಯುದಯವನ್ನು ತರಲು ಭೂಮಿಯ ಫಲೋತ್ಪಾದ ಶಕ್ತಿಯನ್ನು ವರ್ಧಿಸುವುದು ಅವಶ್ಯ."

**[ಪಂಡಿತ ಜವಹಿರ್‌ಲಾಲ್ ನೆಹರು]**

ಹಿಂದುಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ ಒರೇ 13 ಇಸ್ಟಿದೆ. ಇದೊಂದು ಶೋಚನೀಯ ಸಂಗತಿ. ವಿದ್ಯೆಯ ಮಟ್ಟಿಗೆ ಇಷ್ಟು ಹಿಂದುಳಿದಿರುವ ದೇಶವು ಪ್ರಪಂಚದ ರಾಷ್ಟ್ರಗಳು ಗೌರವ ಸ್ಥಾನವನ್ನು ಆಕ್ರಮಿಸಲು ಸಾಧ್ಯವಿಲ್ಲ. ಆದುದರಿಂದ ವಿದ್ಯಾಭ್ಯಾಸವನ್ನು ಹಿಂದೀಯ ಭೂರಿ ಜನರಲ್ಲಿ ಪ್ರಸಾರಮಾಡಬೇಕು. ಶೀಘ್ರವಾಗಿ ನಾವು ಸಾಗಬೇಕು. ಆದರೆ ದೇಶದಲ್ಲಿ ಇರುವ ವಿವೇಕಿಗಳ ಸಹಾಯ ಸಹಕಾರಗಳಿಲ್ಲದಿದ್ದರೆ ಇದು ಸಾಧ್ಯವಿಲ್ಲ

**(ಅಬುಲ್ ಕಲಾಮ್ ಅಜಾದ್)**

—ಪಾಕಿಸ್ತಾನದಲ್ಲಿ ಏಪ್ರಿಲ್ 1 ರಿಂದ ಜಾರಿಯಲ್ಲಿ ಬರುವ ಹೊಸ ಬ್ಯಾಂಕು ನೋಟುಗಳು ಇಂಡಿಯಾದಲ್ಲಿ ಚಲಾವಣೆಯಿಲ್ಲವೆಂದು ರಿಸರ್ವ ಬ್ಯಾಂಕಿನವರು ಪ್ರಕಟಿಸಿದ್ದಾರೆ.

—ಭಾರತದಲ್ಲಿ ಅಣುಶಕ್ತಿಯ ಉಪಯೋಗಮಾಡಿಕೊಳ್ಳಲು ಶಾಸನಸಭೆಯಲ್ಲಿ ನೆಹರೂರವರು ಒಂದು ಮಸೂದೆಯನ್ನು ಮಂಡಿಸಿದರು

# ಮದ್ರಾಸ್ ಸರ್ಕಾರದ ಪ್ರಕಟನೆಗಳು

## ಗೋದಿ-ರವೆ-ಹಿಟ್ಟು

ಪರದೇಶದಿಂದ ಮದ್ರಾಸ್ ಪ್ರಾಂತಕ್ಕೆ ರವೆ ಗೋಧಿ ಹಿಟ್ಟು ಇತ್ಯಾದಿಗಳನ್ನು ತರಿಸಲು ಅನುಮತಿಗಾಗಿ ಅನೇಕ ಅರ್ಜಿಗಳು ಬರುತ್ತಿವೆ ಆದರೆ ಈ ವರ್ಷಕ್ಕೆ ಕೇಂದ್ರ ಸರ್ಕಾರವೇ ರವೆಯನ್ನು ತರಿಸುವ ಆಲೋಚನೆಯಲ್ಲಿರುವುದರಿಂದ ಅದು ನಿಶ್ಚಯವಾಗುವ ತನಕ ಸಮ್ಮತಿ ದೊರೆಯಲಾರದು. ಹಿಟ್ಟು ಇತ್ಯಾದಿಗಳ ಬಗ್ಗೆ ಸರ್ಕಾರವು ಇನ್ನು ನಿರ್ಣಯಕ್ಕೆ ಬರಲಿಲ್ಲ

## ನೆಲಗಡಲೆ ಹಿಂಡಿ

ಗಿರಣಿದಾರರು ತಮ್ಮ ಈಗಿನ ಉತ್ಪತ್ತಿಯಲ್ಲಿ ಶೇಕಡಾ 60 ರಷ್ಟು ಮಾತ್ರ ಕೃಷಿ ಇಲಾಖೆಗೆ ಕೊಡಬೇಕಾಗಿದೆ. ಉಳಿದುದನ್ನು ಯಾರ ಅಪ್ಪಣೆಯೂ ಇಲ್ಲದೆ ಮಾರಬಹುದು. ತಮ್ಮ ಉತ್ಪತ್ತಿಯ ಕುರಿತು ವಾರಕ್ಕೊಮ್ಮೆ ಎಗ್ರಿಕಲ್ಚರ ಡೈರೆಕ್ಟರರಿಗೆ ವರದಿ ಕೊಡಬೇಕು. ಅವರು ನಿಯಂತ್ರಣಕ್ಕೆ ಒಳಗಾದ ಭಾಗವನ್ನು ಪ್ರಾಂತದಲ್ಲಿ ಎಲ್ಲಿಗೂ ಒಯ್ಯಬಹುದು. ಆದರೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಾಗಿಸಲು ವ್ಯಾಪಾರಸ್ಥರಿಗೆ ಎಗ್ರಿಕಲ್ಚರ್ ಡೈರೆಕ್ಟರರ ಪರ್ಮಿಟು ಬೇಕು

## ಎಯ್ಡೆಡ್ ಸೆಕೆಂಡರಿ ಶಾಲೆಗಳಿಗೆ ಗ್ರಾಂಟು

ಈ ಶಾಲೆಗಳ ಉಪಾಧ್ಯಾಯರಿಗೆ ಸ್ಥಳೀಕ ಸಂಸ್ಥೆಗಳ ಅಧಿಕಾರದ ಸೆಕೆಂಡರೀ ಶಾಲೆಗಳ ಉಪಾಧ್ಯಾಯರಿಗೆ ಗೊತ್ತುಪಡಿಸಿದ ಪರಿಷ್ಕೃತ ವೇತನ ಸರವನ್ನಾದರೂ ಕೊಡಬೇಕೆಂದು 10-5-47ರ ಅಪ್ಪಣೆಯಲ್ಲಿ ಸರ್ಕಾರವು ಸೂಚಿಸಿತ್ತು, ಇದರಿಂದ ಉಂಟಾಗುವ ವೆಚ್ಚಕ್ಕಾಗಿ ಟೀಚಿಂಗ್ ಗ್ರಾಂಟು 1/2 ರಿಂದ 2/3 ಕ್ಕೆ ಏರಿಸಲಾಗಿತ್ತು. ಈ ಶಾಲೆಗಳ ಮೇನೇಜರರು ತಮಗೆ ಸಾಧ್ಯವಿದ್ದರೆ ಸರಕಾರಿ ಶಾಲೆಗಳ ಅಧ್ಯಾಪಕರ ಪರಿಷ್ಕೃತ ವೇತನದ ದರದಲ್ಲೇ ಸಂಬಳ ಕೊಡಬಹುದು. ಆದರೆ ಅಂತಹ ಸಂದರ್ಭದಲ್ಲಿ ಉಂಟಾಗುವ ವೆಚ್ಚವನ್ನು ಅಧಿಕೃತವೆಚ್ಚ [illegible] ಸರ್ಕಾರವು 1—6—47 ರಿಂದ 2/ ಪಾಲು ಗ್ರಾಂಟನ್ನೇ ಈ ಶಾಲೆಗಳಿಗೂ ಕೊಡುವುದು. ಈ ಶಾಲೆಗಳ ಅಧ್ಯಾಪಕರಿಗೆ ಮುಂಗಡ ವೇತನವೇ ಮೊದಲಾದ ವಿಷಯಗಳಲ್ಲಿ ಸರ್ಕಾರವು ಕೈಹಾಕುವುದಿಲ್ಲ ಆದರೆ ಮೇನೇಜ್‌ಮೆಂಟುಗಳು ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಅಧ್ಯಾಪಕರಿಗೆ ಕೊಡುವ ರೀತಿಯಲ್ಲಿ ವೇತನ ಇತ್ಯಾದಿ ಕೊಟ್ಟರೆ ಟೀಚಿಂಗ ಗ್ರಾಂಟನ್ನು ಹೆಚ್ಚು ವೇತನ ಕೊಟ್ಟ ತಾರೀಕಿನಿಂದ ಲೆಕ್ಕಿಸಲಾಗುವುದು.

## ಕಬ್ಬಿನ ಬೆಲೆ

1947 48ನೇ ಕಬ್ಬನ್ನು ಹಿಂಡುವ ಕಾಲದಲ್ಲಿ ರೈತರು ಕಾರ್ಖಾನೆಗಳಿಗೆ ಕೊಡುವ ಕಬ್ಬಿಗೆ ನ್ಯಾಯವಾದ ಬೆಲೆಯನ್ನು ನಿಶ್ಚಯಿಸುವುದಕ್ಕೆ ಸರಕಾರವು ಸಂಬಂಧಪಟ್ಟವರೊಡನೆ ಚರ್ಚೆ ನಡೆಸಿದೆ ಕ್ರಯ ನಿಯಂತ್ರಣವು ರದ್ದಾದ 8 12-47 ರ ಮೊದಲು ಟನ್ನಿಗೆ ರೂ 508 ಇದ್ದದ್ದು ಈಗ ಸುಮಾರು ರೂ. 940 ಕ್ಕೆ ಏರಿದೆ. ಕಾರ್ಖಾನೆಯವರು ಈ ಲಾಭದಲ್ಲಿ ಟನ್ನಿಗೆ ರೂ. 54 ಆದರೂ ಬೆಳೆಸುವವರಿಗೆ ಕೊಡಬೇಕೆಂದು ಸರ್ಕಾರವು ನಿಶ್ಚಯಿಸಿದೆ ಈಗಾಗಲೇ ಕಾರ್ಖಾನೆಗೆ ಕೊಟ್ಟ ಮತ್ತು ಮುಂದೆ ಕೊಡುವ ಕಬ್ಬಿಗೂ ಈ ಲಾಭವನ್ನು ಕೊಡತಕ್ಕದ್ದು, ಈ ಬೆಲೆ ಸಂಯುಕ್ತ ಪ್ರಾಂತ ಬಿಹಾರುಗಳಲ್ಲೂ ಈ ಬೆಲೆಯು ಸಿಗುತ್ತದೆ. ಕಾರ್ಖಾನೆಗಳು ಹೀಗೆ ಬೆಲೆಕೊಡದಿದ್ದರೆ ಸರ್ಕಾರವು ತಕ್ಕ ಚರ್ಯೆ ತೆಗೆದುಕೊಳ್ಳಬಹುದು,

## ನೂಲು ನಿಯಂತ್ರಣ

16-3-48 ರಿಂದ ಈ ಪ್ರಾಂತದಲ್ಲಿ ನೂಲಿನ ಮೇಲಿದ್ದ ನಿಯಂತ್ರಣವು ರದ್ದಾಗುವುದು. ದಕ್ಷಿಣ ಹಿಂದುಸ್ಥಾನದ ಗಿರಣಿಗಳ ಮಾಲಿಕರು ನ್ಯಾಯವಾದ ರೀತಿಯಲ್ಲಿ ಎಲ್ಲಾ ಜಿಲ್ಲೆಗಳಿಗೂ ಸಾಕಷ್ಟು ನೂಲು ಒದಗಿಸುವ ಭರವಸೆ ಕೊಟ್ಟಿದ್ದಾರೆ ಏನಾದರೂ ಅನ್ಯಾಯ ನಡೆದರೆ ತಕ್ಕ ಚರ್ಯೆ ತೆಕ್ಕೊಳ್ಳಲಾಗುವುದು.

## ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ

ಪ್ರತಿ ತಿಂಗಳಲ್ಲಿಯೂ ಗ್ರಾಂಟ್ ಕೊಡುವಂತೆ ಆಯುವ್ಯಯ ಪಟ್ಟಿಯಲ್ಲಿ ತಕ್ಕ ಅವಕಾಶ ಕಲ್ಪಿಸಲಾಗಿದೆ ಬರುವ ಶಾಲಾ ವರ್ಷದಿಂದ ಅಂದರೆ ಜೂನ್ ತಿಂಗಳಿಂದ ಈ ರೀತಿ ಕೊಡಲಾಗುವುದು. ಇದರಿಂದ ಸುಮಾರು ರೂ. 2,63,000 ಹೆಚ್ಚು ವೆಚ್ಚವಾಗುತ್ತದೆ, ಕೆಲವು

Please Note

**Narasepalli Workshops**

BELLARY.

— UNDERTAKE —

Turning, Electric Welding & Tempering

OF

SPARE PARTS OF ALL KINDS.

☞ **Reasonable Charges**

TRIAL SOLICITED.

Telegrams
OIL MILLS.

Telephone
57.

ಸ್ಥಳೀಯ ಸಂಸ್ಥೆಗಳೂ ಏಡೆಡ್ ಶಾಲಾ ಯಜಮಾನರೂ ಉಪಾಧ್ಯಾಯರ ಸಂಬಳಗಳನ್ನು ಸರಿಯಾಗಿ ಪಾವತಿಮಾಡದಿರುವರೆಂದು ಚಿಂತಾಸ್ಪದ ವಿಷಯ. ಆದರೆ ಅಂಥ ವಿಷಯಗಳು ಸರಕಾರದ ಅವಗಾಹನೆಗೆ ತರಲ್ಪಟ್ಟರೆ ಸರ್ಕಾರವು ಬೇಗನೇ ಪಾವತಿಮಾಡುವಂತೆ ತಕ್ಕ ಚರ್ಯ ಕೈಕೊಳ್ಳುತ್ತದೆ. ಈ ಪ್ರಾಂತದಲ್ಲಿ ಅಧ್ಯಾಪಕರ ಯಜಮಾನತ್ವವು ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಯಜಮಾನತ್ವವಾಗಿದೆ. ಅವನ್ನು ಏಕೆ ತೆಗೆದು ಹಾಕಬೇಕೆಂದು ತಿಳಿಯುವುದಿಲ್ಲ.

## ಸರಕಾರಿ ನೌಕರಿಗಳಿಗೆ ಜಾತೀಯ ಪ್ರಾತಿನಿಧ್ಯ

ಕೊಡುವ ಈಗಿನ ಏರ್ಪಾಡುಗಳನ್ನು ಸರ್ಕಾರವು ಬದಲಾಯಿಸಬಯಸುವುದಿಲ್ಲ. ಆಯಾಯ ಜಾತಿಗಳ ಜನಸಂಖ್ಯೆಗಳಿಗನುಸಾರವಾಗಿ ಇತ್ತೀಚೆಗೆ ಈ ದಾಮಾಶವನ್ನು ಬದಲಾಯಿಸಿದುದಾಗಿದೆ. ಕ್ರೈಸ್ತರ ಜನಸಂಖ್ಯೆ ಪ್ರಾಂತದಲ್ಲಿ ಶೇಕಡ 4½ ಯಷ್ಟಿದೆ. ಅವರಿಗೆ ಕೊಟ್ಟ ಪ್ರಾತಿನಿಧ್ಯ ದಾಮಾಶಕ್ಕಿಂತ ಹೆಚ್ಚಲ್ಲದೆ ಕಡಮೆಯಲ್ಲ. ಬ್ರಾಹ್ಮಣರು ವಿಶಾಲ ಹಿಂದೂ ಜಾತಿಗೆ ಸೇರಿದವರು. ಅವರ ವಿದ್ಯಾಯೋಗ್ಯತೆಯೂ ಅವರಿಗೆ ಕೊಟ್ಟ ಪ್ರಾತಿನಿಧ್ಯಕ್ಕೆ ಕಾರಣವಾಗಿದೆ. ಹರಿಜನರಿಗೆ ಸದ್ಯ ಕೊಟ್ಟ 2 ಸ್ಥಾನಗಳು ಸಾಕೆಂದು ಸರ್ಕಾರದ ಅಭಿಪ್ರಾಯ. ಸಾಧ್ಯವಿದ್ದಷ್ಟು ಮಟ್ಟಿಗೆ ಶೆಡ್ಯೂಲ್ ಕಾಸ್ಟ್‌ಗಳನ್ನು ನ್ಯಾಯದಿಂದ ಹಾಗೂ ಸರಿಯಾದ ರೀತಿಯಲ್ಲಿ ನಡೆಸಲು ಸರ್ಕಾರವು ಯತ್ನಿಸುವುದು. ಜಾತೀಯ ಪ್ರಾತಿನಿಧ್ಯ ಕೊಡುವ ಈಗಿರುವ ಏರ್ಪಾಡನ್ನು ಸರಕಾರವು ಸದ್ಯಕ್ಕೆ ಬದಲಾಯಿಸುವುದು ಅವಶ್ಯವಿಲ್ಲವೆಂದೇ ಸರ್ಕಾರದ ಅಭಿಪ್ರಾಯ.

## ರಾಜಕೀಯ ಪಕ್ಷಗಳು ಏಡೆಡ್ ಎಲಿಮೆಂಟರಿ ಶಾಲಾ ನೌಕರರು

ಏಡೆಡ್ ಎಲಿಮೆಂಟರಿ ಶಾಲಾ ನೌಕರರು ಯಾವುದೇ ರಾಜಕೀಯ ಪಕ್ಷದ ಪ್ರೈಮರಿ ಸಂಸ್ಥೆಗಳ ಸಾಮಾನ್ಯ ಸದಸ್ಯರಾಗಿ ಚುನಾವಣೆಗಳಿಗೆ ಸಂಬಂಧವಿಲ್ಲದೆ ಇತರ ರಚನಾತ್ಮಕ ಕಾರ್ಯಗಳನ್ನು ನಿರ್ವಹಿಸಬಹುದೆಂದು ಕೊಟ್ಟ ಒಪ್ಪಿಗೆಯನ್ನು ಸರ್ಕಾರವು ಹಿಂತೆಗೆದಿದೆ. ಇಂತಹ ನೌಕರರು ಯಾವುದೇ ರಾಜಕೀಯ ಸಂಸ್ಥೆಯ ಸದಸ್ಯರಾಗಲು ಸಹ ಬರುವುದಿಲ್ಲ.

156


# The Rayalaseema Bank Ltd., H. O. Bellary.

—— )0( ——

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

——]0[——

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
| **ಬೆಂಗಳೂರು :** ರುಕ್ಮಿಣಿ ,ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ **ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½

ಸೇವಿಂಗ್ಸ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,**
**ಛೇರ್ಮನ್–ಬೋರ್ಡ್ ಆಫ್ ಡೈರೆಕ್ಟರ್ಸ್.**

**ಬಿ. ವಿ. ಶೇಷಗಿರಿರಾವ್ ಬಿ. ಕಾಂ.,**
ಕಾರ್ಯದರ್ಶಿ.


---


# NAVA BHARAT BELLARY.

Reg. No M. 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..........................................
..........................................
..........................................

**Printed at Vittal Press, Q H No B-24 For (Q H No B-5)**
**Edited & Published by T. B. Keshava Rao.**

ಶ್ರೀ ಓಂ

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

೧೧ | ಬಳ್ಳಾರಿ ಏಪ್ರಿಲ್ ೫ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ

ಕೆ ೧೩ | | ಟಿ. ಬಿ. ಕೇಶವರಾವ್.

## ನಗರಗಳ ಅಕ್ಕಿ ಸೀದಾ ರದ್ದಾಯಿತು.

—●—

ಬಳ್ಳಾರಿ, ಹೊಸಪೇಟೆ, ಆದವಾನಿ ನಗರಗಳಲ್ಲಿ ಜಾರಿಯಲ್ಲಿದ್ದ ಅಕ್ಕಿ ಸೀದಾ 11—4—48 ಭಾನುವಾರದಿಂದ ರದ್ದಾಗಲಿರುವದೆಂದೂ, ಲಾಭಬಡಕರು ಹೆಚ್ಚಿನ ದರಗಳಿಂದ ಮಾರದಂತೆ ಸರಿಯಾದ ದರಗಳಿಂದ ಮಾರುವ (Fair Price Depots) ಕೆಲ ಅಂಗಡಿಗಳನ್ನು ಏರ್ಪಡಿಸುವರೆಂದೂ ಗೊತ್ತಾಗಿದೆ.

ಬಳ್ಳಾರಿ ಜಿಲ್ಲಾ ಜಡ್ಜರಾಗಿ ಅತ್ಯಂತ ಜನಪ್ರಿಯವಾದ ಮತ್ತು ಬಳ್ಳಾರಿನಗರಕ್ಕೆ ಸುಮಾರು 30-40 ಸಾವಿರ ಖರ್ಚಿನಿಂದ ಆಟದ ಮೈದಾನಕ್ಕೆ ಕಾಂಪೌಂಡು ಕಟ್ಟಿಸಿಕೊಟ್ಟ ಕೀರ್ತಿಯನ್ನು ಪಡೆದು (B. D A A. Grounds) ಶ್ರೀ ಇ ಮ್ಯಾಕ್ ವರು ಹೈಕೋರ್ಟ ಜಡ್ಜರಾಗಿ ಮದ್ರಾಸಿಗೆ ತೆರಳಿದರು ಅವರ ಸ್ಥಳಕ್ಕೆ ಶ್ರೀ ಕನ್ನಬಾಬು ಎಂಬುವರು ಉತ್ತರಾಂಧ್ರಕಡೆಯಿಂದ ಬಂದಿದ್ದಾರೆ.

---

## ಅಕ್ಕಿ ಗೋಧಿ ಸಂಗ್ರಹ ಕೆಟ್ಟುಹೋಗಿದೆ

### ಸರ್ಕಾರದ ಜಾಣತನ

ಮದ್ರಾಸಿನ ಕೆಲ ಗುದಾಮುಗಳಲ್ಲಿಟ್ಟಿದ್ದ ಅಕ್ಕಿ-ಗೋಧಿಯು ಕೆಟ್ಟುಹೋಗಿ ಬಳಕೆಗೆ ಅಯೋಗ್ಯವಾಗಿದೆ ಅದನ್ನು ಬಿಸಿಲಿಗೆ ಹಾಕಿ ತೊಳೆದು ಜನ ಬಳಕೆಗೆ ಕೊಡುವರಂತೆ.

—ಶಾಲಾ ಕಟ್ಟಡಗಳಿಗೂ, ಆಟದ ಮೈದಾನಗಳ ನಿರ್ಮಾಣಕ್ಕೂ ಸರ್ಕಾರದವರು ಇನ್ನು ಮೇಲೆ ಗ್ರಾಂಟು ಕೊಡಲಿರುವರೆಂದು ಮದ್ರಾಸ್ ಆರ್ಥಿಕ ಮಂತ್ರಿ ಶ್ರೀ ಬಿ ಗೋಪಾಲರೆಡ್ಡಿಯವರು ಶಾಲೆಯ ವಾರ್ಷಿಕೋತ್ಸವವೊಂದರಲ್ಲಿ ಹೇಳಿದರು.

---

## ಹೈದರಾಬಾದ ಸಮಾಚಾರ.

ಕೊಪ್ಪಳ ಭಾಗದಲ್ಲಿ ಕೊಲೆ-ಸುಲಿಗೆ ಅತ್ಯಾಚಾರಗಳು ನಡೆದಿವೆ. ಬೊಂಬಾಯಿ ಸರ್ಕಾರದವರು ಹೈದರಾಬಾದಿಗೆ ಹೋಗುತ್ತಿದ್ದ ಪೆಟ್ರೋಲ್ ವಾಗೀನ-ಗಳನ್ನು ಸೋಲಾಪುರದಲ್ಲೇ ತಡೆದು ನಿಲ್ಲಿಸಿದ ಕಾರಣ ಹೈದರಾಬಾದು ಸರ್ಕಾರವು ಭಾರತಕ್ಕೆ ನಿಷೇಧ ಪತ್ರ ಕಳುಹಿಸಿದೆ

ಭಾರತ ಸರ್ಕಾರದ ಪತ್ರಕ್ಕೆ ಹೈದರಾಬಾದು ಸರ್ಕಾರದ ಈ ವಾರದೊಳಗಾಗಿ ಉತ್ತರ ಕೊಡಲಿದೆ-ಎಂದು ಪ್ರಕಟವಾಗಿದೆ.

ಹೈದರಾಬಾದು ಪರವಾಗಿ ಪರದೇಶಗಳಲ್ಲಿ ಏಜಂಟ ಜನರಲ್‌ರನ್ನಿಡಲು ಹೆಸರುಗಳನ್ನು ಸೂಚಿಸಿ ದೆಹಲಿಯ ಒಪ್ಪಿಗೆಗಾಗಿ ನಿಜಾಂ ಸರಕಾರವು ಕಳುಹಿಸಿದೆಯಂತೆ

# ನಡುನೀರಿನಲ್ಲೇ ಕೈಬಿಟ್ಟರು!

ಅಮೇರಿಕೆಯ ಅಧ್ಯಕ್ಷ ಮಿ॥ ಟ್ರೂಮನ್‌ರವರು ಪೊನ್ನೆಯ ದಿನ ಪ್ಯಾಲೆಸ್ಟೈನದ ಬಗ್ಗೆ ಮಹತ್ವದ ಘೋಷಣೆಯೊಂದನ್ನು ಮಾಡಿ, "ವಿಭಜನೆಗೆ ಇದುವರೆಗೆ ಕೊಡುತ್ತ ಬಂದಿದ್ದ ಬೆಂಬಲವು, ಇನ್ನು ಮುಂದೆ ದೊರೆಯಲಾರದು" ಎಂದು ತಮ್ಮ ಸರಕಾರದ ಧೋರಣೆಯನ್ನು ವ್ಯಕ್ತಪಡಿಸಿರುವುದು, ಅಂತರಾಷ್ಟ್ರೀಯ ರಾಜ್ಯಕಾರಣದ ಅಭ್ಯಾಸಿಗಳಿಗೆ ಆಶ್ಚರ್ಯವನ್ನುಂಟುಮಾಡಿದೆ. ಸಾರತಂತ್ರ್ಯಕ್ಕೆ ಒಳಗಾದ ಹಾಗೂ ಕಚ್ಚಾ ಮಾಲುಗಳ 'ಕಣಜ' ವಾದ ಎಲ್ಲ ರಾಷ್ಟ್ರಗಳಲ್ಲಿಯೂ ಆಂತರಿಕ ರಾಜಕಾರಣವು ಪ್ರಕ್ಷುಬ್ಧವಾಗಿಯೇ ಇರುತ್ತದಷ್ಟೆ. ಪಾಲೆಸ್ಟೈನದ ಗತಿಯೂ ಹೀಗಾಗಿದೆ. ಇಡೀ ಜಗತ್ತನ್ನೇ ಬಡಿದೆಬ್ಬಿಸಿದ ಇಂದಿನ ಜಾಗತಿಕ ನವಯುಗವು ಪಾಲೆಸ್ಟೈನದಲ್ಲಿಯೂ ಸ್ಥಿತ್ಯಂತರಗಳನ್ನುಂಟುಮಾಡಿದೆ. ಇಂಗ್ಲೆಂಡ-ಫ್ರಾನ್ಸ್ ಅಮೇರಿಕೆಗಳು 'ಮಧ್ಯಪೂರ್ವ' ಎನಿಸಿದ ಪಾಲೆಸ್ಟೈನ್, ಲೆಬನಾನ್, ಸಿರಿಯಾ, ಮೊದಲಾದ ರಾಷ್ಟ್ರಗಳಲ್ಲಿ ಚದುರಂಗದಾಟವನ್ನು ಹೂಡಿದಂತೆ, ಅವುಗಳನ್ನು ತಮ್ಮ ತಮ್ಮ ರಾಷ್ಟ್ರದ ಅಂತರ-ರಾಷ್ಟ್ರೀಯ ಧೋರಣೆಗೆ ಅನುಗುಣವಾಗಿ ಏರಿಸುತ್ತಲೂ ಇಳಿಸುತ್ತಲೂ ನಡೆದಿವೆ. ಪ್ರೆಸಿಡೆಂಟ್ ಟ್ರೂಮನ್ನರ ಇಂದಿನ 'ನಡುನೀರಲ್ಲಿ ಕೈಬಿಡುವ' ಧೋರಣವು ಚದುರಂಗಾಟದ ಒಂದು 'ಗತ್ತಿ' ನಂತಿದೆ. ಪಾಲಿಸ್ಟೈನವೇ ಮೊದಲಾದ ಮಧ್ಯಪೂರ್ವ ರಾಷ್ಟ್ರಗಳು ಪೌರ್ವಾತ್ಯ-ಪಾಶ್ಚಿಮಾತ್ಯ ರಾಷ್ಟ್ರಗಳ ನಡುವಣ ಸೇತುವೆಯಂತಿರುವುದರಿಂದಲೇ ಅವುಗಳ ರಾಜಕಾರಣವು ಜಾಗತಿಕ ಮಹತ್ವವುಳ್ಳವಾಗಿವೆ 10 ಲಕ್ಷ ಚಾರಸ ಮೈಲು ವಿಸ್ತೀರ್ಣ ಮತ್ತು 17 ಲಕ್ಷ ಜನಸಂಖ್ಯೆಯುಳ್ಳ ಈ ಪ್ರದೇಶದಲ್ಲಿ ಅರಬರೂ ಯೆಹೂದಿಗಳೂ ಮುಖ್ಯ ಜನಾಂಗಗಳಾಗಿವೆ. ಅರಬರ ಸಂಖ್ಯೆ 1 ಲಕ್ಷವಿದ್ದು, ಯೆಹೂದಿಗಳ ಸಂಖ್ಯೆ 6 ಲಕ್ಷದಷ್ಟಿದೆ ಈಗ್ಗೆ 100 ವರ್ಷಗಳ ಹಿಂದೆ ಅಲ್ಲಿ ಯೆಹೂದಿಗಳ ಸಂಖ್ಯೆ ಕೇವಲ 12 ಸಾವಿರವಾಗಿದ್ದಿತು. ಮೊದಲನೆಯ ಮಹಾಯುದ್ಧ (1914) ದ ವೇಳೆ 80 ಸಾವಿರವಾಯಿತು. ಪಾಲೆಸ್ಟೈನವನ್ನು "ಯೆಹೂದಿಗಳ ಜನ್ಮಭೂಮಿ" ಎಂದು ಲಾರ್ಡ ಬಲ್ಫರರು 1917 ರಲ್ಲಿ ಘೋಷಣೆ ಮಾಡಿದಂದಿನಿಂದ,—ಹಾಗೂ ಯುರೋಪಿನ ರಾಷ್ಟ್ರಗಳಲ್ಲಿ ಯೆಹೂದೀ ವಿರೋಧವು ಹೆಚ್ಚುತ್ತ ಹೋದುದರಿಂದ—ಯೆಹೂದಿಗಳು ತಂಡೋಪತಂಡವಾಗಿ ಪಾಲೆಸ್ಟೈನಕ್ಕೆ ವಲಸೆ ಬರತೊಡಗಿದರು. ದ್ವಿತೀಯ ಮಹಾಯುದ್ಧವು ಮುಗಿಯುವಷ್ಟರಲ್ಲಿ, ಯೆಹೂದಿಗಳ ಸಂಖ್ಯೆಯು 6 ಲಕ್ಷಕ್ಕೆ ಮುಟ್ಟಿತು! ಇದರ ಪರಿಣಾಮವಾಗಿ, ಬಹುಸಂಖ್ಯಾತರೂ, ಪ್ರಾಚೀನಕಾಲದಿಂದಲೂ ಮೂಲ ನಿವಾಸಿಗಳೂ ಆಗಿಕೊಂಡು ಬಂದಿದ್ದ ಅರಬರ 'ಜನ್ಮಸಿದ್ಧ ಹಕ್ಕಿ'ಗೆ ಧಕ್ಕೆಯೊದಗಿತು. ಬುದ್ಧಿ ಕುಶಲರೂ, ಆದ ಯೆಹೂದಿಗಳು ಜಗತ್ತಿನ ದೊಡ್ಡ ರಾಷ್ಟ್ರಗಳನ್ನೆಲ್ಲ ತಮ್ಮ ಕಡೆಗೆ ಒಲಿಸಿಕೊಂಡು, ಪಾಲಿಸ್ಟೈನವನ್ನು ವಿಭಜಿಸುವಂತೆ ಪ್ರೇರೇಪಣೆ ಮಾಡಿದರು. ಹಾಗೆ ವಿಭಜಿಸುವುದರಿಂದಲೇ, ಅರಬ-ಯೆಹೂದಿ ಘರ್ಷಣೆಯು ನಿಲ್ಲುವುದೆಂದು ನಂಬಿ, ಹಾಗೂ, ಆ ವಿಭಜನೆಯು ಪರಿಣಾಮವಾಗಿ ಇಂಗ್ಲೆಂಡ್ ಅಮೇರಿಕಗಳು ಕೊಟ್ಟಿದ್ದ ಆಶ್ವಾಸನದಂತೆ "ಯೆಹೂದಿ ಜನ್ಮಭೂಮಿ" (home-land) ಯ ಬೇಡಿಕೆ ಪೂರೈಸಿದಂತಾಗುವುದೆಂದು ತಿಳಿದು, ಇಂದಿನ ಸಂಯುಕ್ತ ರಾಷ್ಟ್ರಸಂಘದ ಸಮಿತಿಯು ವಿಭಜನೆಯ ನಿರ್ಣಯವನ್ನು ಪ್ರಕಟಿಸಿತು. ಈ ನಿರ್ಣಯವನ್ನು ಪಾಲೆಸ್ಟೈನದ ಅರಬರೂ ಅವರ ನೆರೆಹೊರೆಯ ರಾಷ್ಟ್ರಗಳೂ ಮಾನ್ಯಮಾಡಲಿಲ್ಲ. ಯೆಹೂದಿಗಳಿಗೆ "ಜನ್ಮಭೂಮಿ" ಕೊಡಿಸುವುದಾಗಿ ಘೋಷಣೆ ಮಾಡಿ, ಇಂದಿನ ಭಯಾನಕ ಪರಿಸ್ಥಿತಿಗೆ ಬೀಜ ಬಿತ್ತಿದ ಆಂಗ್ಲರು, **ಒಮ್ಮಿಂದೊಮ್ಮಿಗೇ ಯೆಹೂದಿಗಳ ಕೈಬಿಟ್ಟಂತೆ, ಅವರ ವಲಸೆಯನ್ನು ನಿರ್ಬಂಧಿಸಿ ಬಿಟ್ಟರು!** ಇದರಿಂದ ರೊಚ್ಚಿಗೆದ್ದ ಯೆಹೂದಿಗಳು ಬ್ರಿಟಿಷರ ವಿಶ್ವಾಸದ್ರೋಹದಿಂದ ತಮಗೀಗ 'ತ್ರಿಶಂಕುಸ್ವರ್ಗ' ವಾಯಿತೆಂಬ ದುಃಖದಿಂದ ಭಯೋತ್ಪಾದಕ ಚಳವಳಿ ಮಾಡಿ, ಆಂಗ್ಲರನ್ನೂ ಅರಬರನ್ನೂ ಆಹುತಿ ತೆಗೆದುಕೊಳ್ಳತೊಡಗಿದರು. ತಾವೇ ಕಟ್ಟಿದ್ದ ಟೆಲಿಅವಿವ್, ಹೈಫಾ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಆಸ್ತಿ ನಾಶಕರ ಕೃತ್ಯಗಳನ್ನು ಕೈಕೊಂಡರು. ಅರಬರೊಡನೆ ಭೀಕರವಾದ ಬಡಿದಾಟ ಮಾಡಿದರು. ಅನಂತರ ಯಾತನೆಯ ಅಂತರ್ಯುದ್ಧವೇ ಪ್ರಾರಂಭವಾದಂತಾಯಿತು! ಇಂತಹ ಭೀಕರ ಸನ್ನಿವೇಶದಲ್ಲಿ, ಈಗ್ಗೆ ಅಮೇರಿಕವು ಕೂಡ ತನ್ನ ಬೆಂಬಲವನ್ನು ಹಿಂತೆಗೆದುಕೊಂಡು, ಯೆಹೂದಿಗಳನ್ನು ನಡುನೀರಿನಲ್ಲಿ ಕೈಬಿಟ್ಟಿದೆ! ಇದೇ ಬರುವ ಮೇ 15ಕ್ಕೆ ಇಂಗ್ಲೆಂಡು, ಪಾಲಿಸ್ಟೈನದ

ನೀಡಿದ್ದ ತನ್ನ ಧರ್ಮದರ್ಶಿತ್ವದ ಆಡಳಿತ (ಮ್ಯಾಂಡೇಟ್) ವನ್ನು ವಿಸರ್ಜಿಸಿಕೊಳ್ಳುವುದು; ಹಾಗೂ ಆಗಸ್ಟ 15ರೊಳಗೆ ಅಲ್ಲಿಂದ ತನ್ನ ಸೈನ್ಯವನ್ನು ಹಿಂದೆಗೆದುಕೊಳ್ಳುವುದು. ಈ ಧರ್ಮದರ್ಶಿತ್ವದ ಆಡಳಿತ ಜನಾಂಗ ಸಂಘ (League of Nations) ದಿಂದ ಬ್ರಿಟಿಷರಿಗೆ 'ದತ್ತ' ವಾಯಿತು. ಆ ಆಡಳಿತವು ಎಷ್ಟೊಂದು ಆಘಾಮಿರ್ಕವಾಗಿದ್ದಿತೆಂಬುದಕ್ಕೆ ಪಾಲೆಸ್ಟೈನದ ಇಂದಿನ ಪರಿಸ್ಥಿತಿಗಿಂತ ಹೆಚ್ಚಿನ ಪುರಾವೆ ಬೇಕಾಗಿಲ್ಲ. ಅಂತೂ, ಅದರ ಭವಿತವ್ಯವು ರಣಮಯ (full of conflicts) ವಾಗಿದೆ ಎಂಬ ಬಗ್ಗೆ ಸಂದೇಹವೇ ಉಳಿದಿಲ್ಲವೆನ್ನಬಹುದು. ಮೂರನೆಯ ಮಹಾಯುದ್ಧವು ಪ್ರಾರಂಭದಲ್ಲಿ ಮಧ್ಯಪೂರ್ವ ರಾಷ್ಟ್ರಗಳು ಅದರಲ್ಲಿ ಅವಶ್ಯವಾಗಿ ಭಾಗೀದಾರರಾಗುವುದು ಅನಿವಾರ್ಯವಾಗಿದೆ. ಟ್ರೂಮನ್ನರ ಇಂದಿನ ನೀತಿಯು ಯೆಹೂದಿಗಳನ್ನು ಮಾತ್ರಷ್ಟು ಕೆರಳಿಸುವುದಾದರೂ, ಅಮೇರಿಕದ ಜನತೆಯು ಯೆಹೂದಿಗಳ ಬಗ್ಗೆ ವಿಶೇಷ ಪ್ರೀತ್ಯಾಸಕ್ತಿಯುಳ್ಳದ್ದಾಗಿದೆ ಎಂಬುದನ್ನು ಅವರು ಅರಿಯುವೇ ಇಲ್ಲ. ಚಿಕ್ಕ ಅಲ್ಪ ಸಂಖ್ಯಾತ ಗುಂಪನ್ನು ಬಹು ಸಂಖ್ಯಾತ ಗುಂಪಿನ ಸಂಖ್ಯಾಸಮಾನತೆಗೆ ತಂದಿರುವ ಬ್ರಿಟಿಷ್ ಮುತ್ಸದ್ದಿತನವು ತೀರ ಹೇಯವಾಗಿದೆ. ನಮ್ಮ ರಾಷ್ಟ್ರದಲ್ಲಿಯೂ ಇಂತಹ ಸಮಸ್ಯೆಯು ಹುಟ್ಟಿಸಲ್ಪಟ್ಟಿರುವುದು ಪಾಲಿಸ್ಟೈನ ಸಮಸ್ಯೆಯೊಡನೆ ಹೋಲಿಸಿ ನೋಡುವಂತಿದೆ. ನಮ್ಮ ನೆರೆಯ ಹೈದರಾಬಾದಿನಲ್ಲಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ಸಂಖ್ಯಾಸಮಾನತೆಗೆ ತರುವಂತೆ, ಮುಸ್ಲಿಂ ವಲಸೆಗಾರ ಚಳವಳಿ ನಡೆದೇ ಇದೆಯಲ್ಲವೆ? ಪಾಲೆಸ್ಟೈನದ ಬಗ್ಗೆ ಈಗ ವ್ಯಕ್ತ ಮಾಡಿರುವ ಧೋರಣೆಯನ್ನು ಪ್ರೆಸಿಡೆಂಟ ಟ್ರುಮನ್ನರು, ಕಳೆದ ವರ್ಷವೇ ಸಾರಿಬಿಟ್ಟಿದ್ದರೆ, ಈಗಿನಂತಹ ವಿಸ್ಫೋಟಕ ಸ್ಥಿತಿಗೆ ಅವಕಾಶವಾಗುತ್ತಿದ್ದಿಲ್ಲವೆನ್ನಬಹುದು.

(ನವಯುಗ)

## ಹೈದರಾಬಾದ ಸಮಸ್ಯೆ

ಭಾರತ ಸರಕಾರವು ಹೈದರಾಬಾದದಲ್ಲಿನ ಏಜಂಟ ಜನರಲ್‌ರಾದ ಶ್ರೀ ಕೆ. ಎಂ. ಮುನ್ಶಿಯವರು ಡೆಲ್ಲಿಯಿಂದ ಬಂದಕೂಡಲೇ ಭಾರತ ಸರಕಾರದ ಪತ್ರವನ್ನು ಅಲ್ಲಿಯ ಪ್ರಧಾನದ ಲಾಯಕ್ ಅಲಿಯವರ ಮೂಲಕ ನಿಜಾಮರಿಗೆ ಮುಟ್ಟಿಸಿದರು. ಲಾಯಕ್ ಅಲಿಯವರು ಹೈದರಾಬಾದ್ ಮುನಿಸಿಪಾಲಿಟಿಯವರ ಮಾನಪತ್ರಕ್ಕೆ ಉತ್ತರವೀಯುತ್ತಾ ಭಾರತ ಸರ್ಕಾರಕ್ಕೂ ಹೈದರಾಬಾದಿಗೂ ಸಂಧಾನವು ಶೀಘ್ರದಲ್ಲಿ ಕುದುರುವುದೆಂದು ಆಶೆಯನ್ನು ವ್ಯಕ್ತಪಡಿಸಿದರು.

ಇತ್ತೆಹಾದುಲ್ ಮುಸ್ಲಿಂ ಸಂಸ್ಥೆಯ ನಾಯಕನಾದ ಕಾಸಿಂ ರಜ್ವಿಯು ರಾಯಚೂರಿನಲ್ಲಿ ಕಳೆದವಾರ ತನ್ನ ಮುಖ್ಯ ಸಂಗಡಿಗರ ಸಭೆಯನ್ನು ಸೇರಿಸಿ ವಿಚಾರವಿನಿಮಯ ನಡೆಸಿದನು.

## ಪಠಾಣರು ಪರದೇಶೀಯರು

### ಖಾನ್‌ಬಂಧುಗಳ ಅಭಿಪ್ರಾಯ

ಇಂಡಿಯಾ ಸರಕಾರವು ಪಠಾಣರನ್ನು ಪರದೇಶೀಯರೆಂದು ನಿಶ್ಚಯಿಸಿ ಅವರನ್ನು ಕಾಯಿದೆಯ ಮೂಲಕ ಹೊರದೂಡಲು ಅವಕಾಶಮಾಡಿ ಕೊಟ್ಟಿದ್ದಕ್ಕಾಗಿ ಸರಹದ ಪ್ರಾಂತದ ಶಾಸನ ಸಭೆಯಲ್ಲಿ ಮಾಜಿಪ್ರಧಾನರಾದ ಖಾನ್‌ಸಾಹೇಬರು ತಮ್ಮ ವಿರೋಧವನ್ನು ಸೂಚಿಸಿ ಇದಕ್ಕಾಗಿ ತಾವು ಹೋರಾಟ ಹೂಡುವೆವೆಂದು ಹೇಳಿದರು.

ಸರಹದ ಗಾಂಧಿಯವರು ಉತ್ತರಿಸುತ್ತ ಹೀಗೆ ಹೇಳಿದರು. "ಭಾರತ ಸರಕಾರದವರು ಹೀಗೇಕೆ ಮಾಡಿದರೋ ಗೊತ್ತಿಲ್ಲ. ಪಾಕಿಸ್ತಾನವು ಒಪ್ಪುವುದಾದರೆ ಅವರೊಡನೆ ಸಂಧಾನ ನಡೆಸಲಡ್ಡಿಯಿಲ್ಲ. ನಾನು ದೆಹಲಿಗೆ ಹೋಗಲು ಸಿದ್ಧನಿದ್ದೇನೆ."

"ಮಹಾತ್ಮ ಗಾಂಧಿಯವರು ದಿವಂಗತರಾದಾಗಲೂ ನಾನು ದುಃಖ ಸೂಚಿಸಲು ಹೋಗಲಿಲ್ಲ. ನಮ್ಮ ಪ್ರತಿಯೊಂದು ಕೃತ್ಯವನ್ನೂ ಸಂಶಯಾತ್ಮಕ ದೃಷ್ಟಿಯಿಂದ ಸರಕಾರವು ನೋಡುತ್ತಲಿದೆ."

## ಯುದ್ಧವನ್ನು ತಪ್ಪಿಸಲು ಕೊನೆಯ-ಯತ್ನ ಮಾಡಿರಿ

ಈಗಿನ ಪರಿಸ್ಥಿತಿಯಲ್ಲಿ ಜಗತ್ತನ್ನು ಮೂರನೆಯ ಯುದ್ಧದ ಅನಾಹುತದಿಂದ ತಪ್ಪಿಸಬೇಕಾದರೆ ಅಮೇರಿಕಾದ ಅಧ್ಯಕ್ಷರಾದ ಟ್ರೂಮನ್‌ರವರು ರಶಿಯಾದ ಅಧ್ಯಕ್ಷ ಸ್ಟಾಲಿನ್‌ರನ್ನು ಸಂಧಿಸಿ ಮಾತುಕತೆ ನಡೆಸಬೇಕೆಂದು ಅಮೇರಿಕನ್ ಕಾಂಗ್ರೆಸ್‌ದ ಪ್ರಮುಖ ಸದಸ್ಯರೊಬ್ಬರಾದ ಪೆಪ್ಪರ್‌ರವರು ಟ್ರೂಮನರಿಗೆ ಸೂಚನೆ ಕೊಟ್ಟಿರುವರು.

# ನಮ್ಮ ಪ್ರಾಂತದ ಆರೋಗ್ಯ ★

## ಪೌಷ್ಟಿಕವಾದ ಆಹಾರ! ನಿರ್ಮಲ ವಸತಿ!! ಶುದ್ಧವಾದ ನೀರು!!!

(ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ, ಇವರಿಂದ)

ದೇಶದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಸಾರ್ವಜನಿಕ ಆರೋಗ್ಯ ಸುಧಾರಣೆಯು ಒಂದು ಅತ್ಯಂತ ಪ್ರಾಮುಖ್ಯ ವಿಷಯವಾಗಿದೆ. ಪಶ್ಚಿಮ ದೇಶಗಳಲ್ಲಿ ಜನರು ಆರೋಗ್ಯವಂತರೂ ದೀರ್ಘಾಯುಗಳೂ ಆಗಿದ್ದರೆ ನಮ್ಮ ದೇಶದಲ್ಲಿ ಅನಾರೋಗ್ಯವೂ ಅಕಾಲ ಮರಣವೂ ಸಾಮಾನ್ಯ ಜನರಲ್ಲಿ ವಾಡಿಕೆಯಾಗಿ ಬಿಟ್ಟಿದೆ. ಇತರ ಸುಧಾರಿತ ದೇಶಗಳಿಂದ ನಮ್ಮ ದೇಶದಲ್ಲಿ ಮರಣ ಸಂಖ್ಯೆಯೂ ಹೆಚ್ಚಾಗಿದೆ. ಸಾಮಾನ್ಯವಾಗಿ ಅಲ್ಲಿ ಸರಾಸರಿ ಆಯುಷ್ಯವು 60 ವರುಷಗಳಾಗಿವೆ. ಇಲ್ಲಿಯಾದರೆ ಸುಮಾರು 27 ವರ್ಷಗಳು ಮಾತ್ರ. ಈ ಅಲ್ಪಾಯುಷ್ಯದ ಜೀವಮಾನವೆಲ್ಲಾ ಹೆಚ್ಚಾಗಿ ರೋಗ ಕಷ್ಟ ದುಃಖಗಳಲ್ಲೇ ಕಳೆಯಲಾಯಿತು. ಶಿಶು ಹಾಗೂ ಮಕ್ಕಳ ಮರಣ ಸಂಖ್ಯೆಯು ಅತಿ ಹೆಚ್ಚಾಗಿದೆ, ಹತ್ತು ವರುಷಗಳಿಗಿಂತ ಮೊದಲೇ ಅರ್ಧಾಂಶ ಮಕ್ಕಳು ತೀರಿಹೋಗುವುವು. ಆದರೂ ಜನನ ಸಂಖ್ಯೆಯು ನಮ್ಮಲ್ಲಿ ಅತಿ ಹೆಚ್ಚಾಗಿದೆ. ಇದರಿಂದ ನಮ್ಮ ದೇಶದ ಜನಸಂಖ್ಯೆಯು ಹೆಚ್ಚುತ್ತಾ ಹೋಗುತ್ತಿದೆ. ಆದರೆ ಪಶ್ಚಿಮ ದೇಶಗಳಲ್ಲಿ ಜನಸಂಖ್ಯೆ ದಿನ ದಿನ ಕಡಮೆಯಾಗುತ್ತಿದೆ. ನಮ್ಮ ದೇಶದ ಅಧಿಕ ಸಂಖ್ಯೆಯ ಮರಣವೂ ಜನನವೂ, ಮಾನವ ಶಕ್ತಿಯ ನಿರರ್ಥಕತೆಗೆ ನಿದರ್ಶನವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದ ನಮ್ಮ ದೇಶದ ಆಹಾರಕ್ಕೂ ಉಣ್ಣುವ ಜನರ ಸಂಖ್ಯೆಗೂ ದಿನ ದಿನ ವ್ಯತ್ಯಾಸವನ್ನು ಹೆಚ್ಚಿಸುತ್ತಿದೆ. ಅನಾರೋಗ್ಯಕರವಾದ ವಸತಿ, ಅಲ್ಪ ಪೋಷಣೆ, ಆರೋಗ್ಯ ಶಾಖೆಯವರ ಕಾರ್ಯದಲ್ಲಿರುವ ದೌರ್ಬಲ್ಯ, ವಿದ್ಯಾಹೀನತೆ ಇವೆಲ್ಲಾ ನಮ್ಮ ಜನರ ಅನಾರೋಗ್ಯ ಸ್ಥಿತಿಗೆ ಕಾರಣಗಳಾಗಿವೆ. ಇವಕ್ಕಿಂತಲೂ ಪ್ರಬಲವಾದ ಮೂಲ ಕಾರಣವೆಂದರೆ ಬಡತನ. ನಮ್ಮ ದೇಶದ ಅಧಿಕ ಸಂಖ್ಯಾತ ಜನರು ಬಡವರಾಗಿದ್ದಾರೆ. ಇದರಿಂದ ಅವರಿಗೆ ಸುಖ ಜೀವನಕ್ಕೆ ಬೇಕಾದ ಸೌಕರ್ಯಗಳನ್ನು ಪಡೆಯಲು ಅನುಕೂಲವಿಲ್ಲ. ನಮ್ಮ ಪ್ರಾಂತದಲ್ಲಿ 35,430 ಗ್ರಾಮಗಳಿವೆ. ಶೇಕಡಾ 84 ಜನರು ಹಳ್ಳಿಗಳಲ್ಲೇ ವಾಸಮಾಡುತ್ತಿದ್ದಾರೆ. ಹಳ್ಳಿಯಲ್ಲಿರುವ ಅನೇಕ ಮನೆಗಳು ಮನುಷ್ಯ ವಾಸಕ್ಕೇ ಅಯೋಗ್ಯವಾಗಿರುವುವು. ಹಳ್ಳಿಗಳಲ್ಲಿ ಆರೋಗ್ಯ ರಕ್ಷಣೆಯ ಕಾರ್ಯವೇ ಇಲ್ಲವೆನ್ನಬಹುದು. ಮಣ್ಣು ಕೊಳೆಕಾದಂತೆ ಜನರು ನದೀ ದಂಡೆ ಕೆರೆ ಕಟ್ಟೆಗಳನ್ನು ಪಾಯಿಖಾನೆಗಳಂತೆ ಉಪಯೋಗಿಸುವುದರಿಂದ ಅನೇಕ ಸಲ ನೀರೂ ಹಾಳಾಗುವುದು. ಅನೇಕ ಕಡೆಗಳಲ್ಲಿ ಕುಡಿಯುವ ನೀರು ಸಾಕಷ್ಟು ಇರುವುದಿಲ್ಲ. ಇದ್ದರೂ ಕುಡಿಯುವುದಕ್ಕೆ ಯೋಗ್ಯವಾಗಿರುವುದಿಲ್ಲ. ಹಳ್ಳಿಯ ಜನರಲ್ಲಿ ಹೆಚ್ಚಿನವರು ಅರೆಹೊಟ್ಟೆಯಿಂದಲೇ ಜೀವಿಸುತ್ತಿದ್ದಾರೆ. ಅನೇಕ ಅನಾರೋಗ್ಯಕರವಾದ ದುರಭ್ಯಾಸಗಳು ಆರೋಗ್ಯ ಸೂತ್ರಗಳ ಪರಿಜ್ಞಾನವಿಲ್ಲದೆ ರೂಢಿಯಲ್ಲಿವೆ. ಪ್ರಾಕೃತಿಕ ಅನುಕೂಲತೆಗಳು ಹಳ್ಳಿಗಳಲ್ಲಿ ಪಟ್ಟಣಗಳಿಗಿಂತಲೂ ಚೆನ್ನಾಗಿರುತ್ತವೆ.

ನಮ್ಮ ಪಟ್ಟಣಗಳು ಸರಿಯಾದ ಕ್ರಮವಿಲ್ಲದೆ ಬೆಳೆದಿವೆ, ಬೆಳೆಯುತ್ತಿವೆ. ಮನೆಗಳ ಸ್ಥಿತಿಯು ತುಂಬ ಅತೃಪ್ತಿಕರವಾಗಿದೆ, ಹೊಲಸು ಮನೆಗಳೂ ಹೆಚ್ಚುತ್ತಿರುವ ಜನಸಂಖ್ಯೆಯೂ ಪರಿಸ್ಥಿತಿಯನ್ನು ತೀರಾ ಕೆಡಿಸಿವೆ. ಅದರಲ್ಲಿಯೂ ಕೈಗಾರಿಕಾ ಪ್ರದೇಶಗಳ ಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ಮಾರ್ಗದ ಬದಿಗಳಲ್ಲಿ ಸಾವಿರಾರು ಜನರು ವಾಸಮಾಡುತ್ತಿದ್ದಾರೆ. ಹೊಲಸುಗಳನ್ನು ಸಂಗ್ರಹಿಸಿ ಹೊರಗೊಯ್ಯುವ ಏರ್ಪಾಡು ಸರಿಯಾಗಿಲ್ಲ. ಖಾಸಗಿ ಹಾಗೂ ಸಾರ್ವಜನಿಕ ಪಾಯಿಖಾನೆಗಳಲ್ಲಿ ಅನೇಕ ಪಾಯಿಖಾನೆಗಳು ಹೆಚ್ಚಾಗಿ ಕೊಳಕಾಗಿರುವುವು. 46 ನಗರ ಸಭೆಗಳು ಮಾತ್ರ ನಮ್ಮ ಪ್ರಾಂತದಲ್ಲಿ ಶುದ್ಧ ನೀರಿನ ಪೂರೈಕೆಯನ್ನು ಗೈಯುತ್ತಿವೆ. ಅದರಲ್ಲಿ 40 ಕಡೆಗಳ ನೀರಿನ ಪೂರೈಕೆಯು ಪಟ್ಟಣಕ್ಕೆ ಸಾಕಾಗುವುದಿಲ್ಲ. ಇಲ್ಲವೇ ಸರಿಯಾಗಿ ಪೂರೈಸಲ್ಪಡುತ್ತಿಲ್ಲ. ಕೊಳಕು ನೀರಿನ ಕಾಲುವೆಗಳನ್ನು ಕೇವಲ 4 ನಗರಗಳಲ್ಲಿ ಈ ವರೆಗೆ ಪಾಕ್ಷಿಕ ಯೋಜನೆಯಾಗಿ ಮಾತ್ರ ರಚಿಸಲಾಗಿದೆ. ಧೂಳು ತುಂಬಿದ ಮಾರ್ಗಗಳು ನಮ್ಮ

ಜನರ ಆರೋಗ್ಯಕ್ಕೆ ಅತ್ಯಂತ ಅಪಾಯಕರಗಳಾಗಿವೆ ನೊಣ-ಸೊಳ್ಳೆಗಳು ಪಟ್ಟಣದಲ್ಲಿ ಎಲ್ಲೆಲ್ಲೂ ತುಂಬ ರೋಗಗಳನ್ನು ಹಬ್ಬಿಸುತ್ತಿವೆ. ನಿರ್ಬಲವಾದ ಶರೀರ ಪರಿಸ್ಥಿತಿ, ತಪ್ಪದೆ ಬರುತ್ತಿರುವ ರೋಗ ಇವಕ್ಕೆ ಉತ್ತಮವಾದ ಆಹಾರದ ಕೊರತೆಯೇ ಮುಖ್ಯಕಾರಣವೆನ್ನಬಹುದು. ಸರಿಯಾದ ಪೋಷಣೆಯಿಲ್ಲದೆ ಜನರಲ್ಲಿ ನಿರೋಧಕ ಶಕ್ತಿಯು ಕಡಮೆಯಾಗಿದೆ. ಇದರಿಂದ ಜನರು ಸುಲಭವಾಗಿ ಅಂಟು ರೋಗಗಳಿಗೆ ಬಲಿಯಾಗುತ್ತಾರೆ. ಅಂತಹರು ಅಕಾಲ ಮರಣಕ್ಕೆ ತುತ್ತಾಗದಿದ್ದರೂ ಅವರ ಜೀವನವು ನಿಶ್ಶಕ್ತಿಯಿಂದ ತುಂಬಿ ಅವರು ನಿಷ್ಪ್ರಯೋಜಕರಾಗುತ್ತಾರೆ.

ಈ ವರೆಗೆ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ನಾವು ಆಸ್ಪತ್ರೆಗಳನ್ನು ಹೆಚ್ಚಿಸುವುದಕ್ಕೂ ವೈದ್ಯವನ್ನು ಬೆಳೆಸಲೂ ಯತ್ನಿಸಿದ್ದೇವೆ. ರೋಗ ನಿವಾರಣೆಗಾಗಿ ಹೆಚ್ಚಿನ ಪ್ರಯತ್ನಪಟ್ಟಿರುವೆವಲ್ಲದೆ ರೋಗಗಳನ್ನು ತಡೆದು ಆರೋಗ್ಯವನ್ನು ರಕ್ಷಿಸಲು ಏನೂ ಪ್ರಯತ್ನ ಮಾಡಿಲ್ಲ. ಆಧುನಿಕ ವೈದ್ಯಶಾಸ್ತ್ರಜ್ಞರು ರೋಗ ಪ್ರತಿಬಂಧಕ ಹಾಗೂ ಪ್ರಾಕೃತಿಕ ಸುಧಾರಣೆಯ ಅನುಕೂಲತೆಗಳಿಂದ ಆರೋಗ್ಯವನ್ನುಳಿಸಲು ಯತ್ನ ನಡೆಸುತ್ತಿದ್ದಾರೆ. ಒಳ್ಳೆಯ ಆರೋಗ್ಯವು ವೈದ್ಯರ ಕೈಯಲ್ಲಿರುವುದಿಲ್ಲ. ಆಸ್ಪತ್ರೆಗಳಲ್ಲಾಗಲಿ ಔಷಧಗಳಲ್ಲಾಗಲಿ ಸೇರಿಕೊಂಡಿರುವುದಿಲ್ಲ. ಆರೋಗ್ಯ ಸೂತ್ರಗಳನ್ನು ಸರಿಯಾಗಿ ತಿಳಿದು ಉತ್ತಮವಾದ ಪೌಷ್ಟಿಕಾಹಾರವನ್ನು ಉಪಯೋಗಿಸುವುದರಿಂದ ಮಾತ್ರ ಆರೋಗ್ಯವು ದೊರೆಯುವುದು. ಪಾಶ್ಚಾತ್ಯ ದೇಶಗಳಲ್ಲಿ ಈ ಬಗೆಯ ಪ್ರಯತ್ನಗಳಿಂದ ಹೆಚ್ಚಿನ ಪ್ರಯೋಜನ ದೊರೆತಿದೆ. ಕಾರ್ಖಾನೆಗಳ ಮಸೂದೆಯನ್ನು ಮಂಜೂರು ಮಾಡಿದ ಮೇಲೆ ಅಧಿಕ ಪ್ರಯೋಜನ ದೊರೆತಿದೆ.

ಇಂದು ನಮ್ಮ ಹಳ್ಳಿಗಳಿಗೆ ನಾವು ಆಸ್ಪತ್ರೆ ಇತ್ಯಾದಿ ರೋಗ ನಿವಾರಕ ಸೌಕರ್ಯಗಳನ್ನು ಒದಗಿಸುವುದಕ್ಕಿಂತಲೂ ರೋಗ ನಿರೋಧಕ ಉಪಾಯಗಳನ್ನು ಕೈಕೊಂಡು ಹಳ್ಳಿಯ ವಾತಾವರಣವನ್ನು ಸುಧಾರಿಸಬೇಕು. ನಮ್ಮ ನಗರಗಳ ರಚನಾ ಕ್ರಮ, ಆರೋಗ್ಯಕರವಾದ ಮನೆಗಳನ್ನು ಕಟ್ಟುವುದು, ಪೌಷ್ಟಿಕವಾದ ಆಹಾರ, ನಿರ್ಮಲವಾದ ನೀರು, ಚರಂಡಿ-ಕಾಲುವೆಗಳ ಏರ್ಪಾಡು, ಇವೆಲ್ಲಾ ನಗರಗಳ ಆರೋಗ್ಯಕ್ಕೆ ತಳಹದಿಯಾಗಿದೆ. ಆಸ್ಪತ್ರೆಗಳನ್ನು ಹೆಚ್ಚಿಸಿ ರೋಗಿಗಳಿಗೆ ಹಾಸಿಗೆಗಳ ಏರ್ಪಾಡು ಎಷ್ಟು ಮಾಡಿದರೂ ಜನತೆಯಲ್ಲಿ ಒಂದು ಭಾಗಕ್ಕಿಂತ ಹೆಚ್ಚು ಜನರಿಗೆ ಈ ಸೌಕರ್ಯವನ್ನು ಒದಗಿಸಲು ಸಾಧ್ಯವಾಗದು. ಗುಣವಾಗತಕ್ಕ ಚಿಕಿತ್ಸೆಗಳ ಬಗ್ಗೆ ಜನರ ಕೇಳಿಕೆಗಳು ಕಡಮೆಯಾಗಬೇಕಾದರೆ ಸಾಕಷ್ಟು ರೋಗ ನಿರೋಧಕ ಕಾರ್ಯವೂ ನಡೆದಿರಬೇಕು. ಈಗಿರುವ ಆರೋಗ್ಯ ಇಲಾಖೆಯಿಂದ ರೋಗನಿವಾರಣೆಗಾಗಿ ವಿಸ್ತಾರವಾದ ಯೋಜನೆಗಳನ್ನು ಕೈಕೊಂಡು ಕಾರ್ಯನಡೆಸಲು ಸಾಧ್ಯವಾಗದಿದ್ದರೂ ರೋಗ ಪ್ರತಿಬಂಧಕ ಕಾರ್ಯವನ್ನು ಅದಕ್ಕಿಂತ ಚೆನ್ನಾಗಿ ನಡೆಸಲು ಸಾಧ್ಯವಿದೆ.

ಜೀವನ ಹಾಗೂ ಆರೋಗ್ಯವನ್ನು ಸರಿಯಾಗಿ ನಡೆಸಿಕೊಳ್ಳಬೇಕಾದರೆ ಆಹಾರ ವಸ್ತುಗಳ ಉತ್ಪತ್ತಿಯು ಹೆಚ್ಚಲೇ ಬೇಕು. ಯುದ್ಧ ಕಾಲದಲ್ಲಿ ಆರಂಭಿಸಲ್ಪಟ್ಟ ಹೆಚ್ಚು ಆಹಾರ ಬೆಳೆಯುವ ಚಳವಳವು ಶ್ರದ್ಧೆಯಿಂದ ಮುಂದುವರಿಸಲ್ಪಟ್ಟಿದೆ. ನೀರಾವರಿ ಗೊಬ್ಬರ, ಬೀಜಗಳಿಗೆ ಹೆಚ್ಚಿನ ಧನಸಹಾಯವೂ, ಮಾಡಲ್ಪಟ್ಟಿದೆ. ಆಹಾರ ಧಾನ್ಯಗಳು ಬೆಳೆಯುವ ಪ್ರದೇಶವು 26 43 ಮಿಲಿಯ ಎಕರೆಗಳಿಂದ 27,63 ಮಿಲಿಯ ಎಕರೆಗಳಿಗೆ ಏರಿದೆ. ಆಹಾರ ಪೋಷಕ ವಸ್ತುಗಳ ವಿಷಯದಲ್ಲಿ ಸಂಶೋಧನೆ ನಡೆಸಲಾಗುತ್ತಿದೆ. ಮನೆಕಟ್ಟುವ ಯೋಜನೆಗಳು ಜಾರಿಗೆ ಬಂದಿವೆ. ಇದಕ್ಕಾಗಿ ಗೃಹ ರಚನಾ ಸಹಕಾರ ಸಂಘಗಳು ರಚಿಸಲ್ಪಟ್ಟಿವೆ, ನಗರ ರಚನಾ ಶಾಸನದ ತಿದ್ದುಪಡಿಯು ವಿಚಾರಣೆಯಲ್ಲಿದೆ. ಆರೋಗ್ಯ ಸೂತ್ರಗಳಿಗೆ ಅನುಸಾರವಾಗಿ ಜನರು ವಾಸಿಸುವಂತೆ ಮಾಡಲು ನಮ್ಮ ನಗರಗಳು ಮುಂದೆ ಶಾಸ್ತ್ರೀಯ ರೀತಿಯಲ್ಲಿ ಅಭಿವೃದ್ಧಿ ಹೊಂದಲೂ ಇದರಿಂದ ಅವಕಾಶವಾಗುವುದು. ಈ ವಿಷಯದಲ್ಲಿ ನೇಮಿಸಲ್ಪಟ್ಟ ಸಮಿತಿಯು ಒಪ್ಪಿಸಿದ ವರದಿಯಲ್ಲಿ, ನೀರಿನ ಪೂರೈಕೆ, ಚರಂಡಿ-ಕಾಲುವೆ ಇವುಗಳ ಸಂಪೂರ್ಣ ಜವಾಬ್ದಾರಿಯನ್ನು ಪ್ರಾಂತದ ಆದ್ಯಂತವೂ ಸರಕಾರವೇ ವಹಿಸಬೇಕೆಂದು ಸೂಚಿಸಲ್ಪಟ್ಟಿದೆ. ಹತ್ತು ವರುಷದ ನೀರಿನ ಪೂರೈಕೆ ಯೋಜನೆಯೂ, ಹದಿನೈದು ವರುಷಗಳ ಚರಂಡಿ ಹಾಗೂ ಕಾಲುವೆಗಳನ್ನು ನಿರ್ಮಿಸುವ ಯೋಜನೆಯೂ ರಚಿಸಲ್ಪಡಬೇಕು. ಸಾರ್ವಜನಿಕ ಆರೋಗ್ಯಕ್ಕಾಗಿ ಇಂಜಿನಿಯರಿಂಗ್ ಇಲಾಖೆಯೊಂದನ್ನು ರಚಿಸಬೇಕು. ಈಗಾಗಲೇ ಸರಕಾರವು ಹಳ್ಳಿಗಳಲ್ಲಿ

ನೀರಿನ ಪೂರೈಕೆಗಾಗಿ ಒಂದು ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟದಲ್ಲದೆ ಪ್ರತಿ ವರ್ಷವೂ 15 ಲಕ್ಷ ರೂಪಾಯಿಗಳ ಸಹಾಯ ಧನವನ್ನು ಸುಧಾರಿಸುವುದೂ ನಿರ್ಮಲವಾದ ಕುಡಿಯುವ ನೀರನ್ನೊದಗಿಸುವುದೂ ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ಪ್ರಾಮುಖ್ಯವಾದುವು. 1947 ರಲ್ಲಿ ವೈದ್ಯ ಹಾಗೂ ಆರೋಗ್ಯ ಶಾಸ್ತ್ರಗಳಲ್ಲಿ ಚೆನ್ನಾಗಿ ನುರಿತವರ ಮಹಾಸಭೆಯನ್ನೂ ಕರೆಯಲಾಗಿತ್ತು. ಇದರಲ್ಲಿ ರಚಿಸಲ್ಪಟ್ಟ ಎರಡು ಉಪಸಮಿತಿಗಳು ಚೆನ್ನಾಗಿ ಪರಿಶೀಲನೆ ನಡೆಸಿ ತಮ್ಮ ವರದಿಯನ್ನು ಒಪ್ಪಿಸಿವೆ. ಸರಕಾರವು ಆ ವಿಷಯದಲ್ಲಿ ತಕ್ಕ ಪರ್ಯಾಲೋಚನೆ ನಡೆಸುವುದು. ವೈದ್ಯಕೀಯ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಸ್ಟೇನ್ಲಿ ಮತ್ತು ಆಂಧ್ರಮೆಡಿಕಲ್ ಕಾಲೇಜು ಆಸ್ಪತ್ರೆಗಳನ್ನೂ ವಿಸ್ತಾರಗೊಳಿಸುವ ಯೋಜನೆಗಳಿಗೆ ಸರಕಾರವು ಸಮ್ಮತಿ ಇತ್ತಿದೆ. ಆಗ ಪ್ರತಿ ಕಾಲೇಜಿನಲ್ಲಿ ಇನ್ನೂ 100 ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಓದಲು ಅವಕಾಶ ದೊರೆಯಬಹುದು. 50 ವಿದ್ಯಾರ್ಥಿಗಳಿಂದ ಕೂಡಿದ ಆಯುರ್ವೇದ ಕಾಲೇಜನ್ನು ಈ ವರ್ಷ ಸ್ಥಾಪಿಸಲಾಗಿದೆ. ಇದರೊಡನೆ ಆಯುರ್ವೇದ ಶಾಲೆ (ಸ್ಕೂಲ್ ಆಫ್ ಇಂಡಿಯನ್ ಮೆಡಿಸನ್) ಯನ್ನೂ ಮೊದಲಿನಂತೆಯೇ ಮುಂದುವರಿಸಲಾಗುವುದು. ಹೆಚ್ಚಿಗೆ ಕಟ್ಟಡಗಳನ್ನು ಕಟ್ಟಿಸಲೂ, ಸಿಬಂದಿ, ಸಲಕರಣೆ ಇತ್ಯಾದಿಗಳನ್ನು ಒದಗಿಸಲೂ ಸಂಶೋಧನ ಶಾಲೆಯನ್ನು ಆರಂಭಿಸಲು ಪ್ರಯತ್ನ ನಡೆಯುತ್ತಿದೆ. ಆರೋಗ್ಯ ಹಾಗು ವೈದ್ಯಕೀಯ ಕೇಂದ್ರಗಳನ್ನು ಹಳ್ಳಿ-ತಾಲೂಕು-ಜಿಲ್ಲೆಗಳ ಸಂಬಂಧದೊಡನೆ ಸ್ಥಾಪಿಸಬೇಕಾಗಿದೆ. ವರ್ಷಕ್ಕೆ 30 ಕ್ಷೇತ್ರಗಳನ್ನು ಪ್ರಾರಂಭಿಸಲು ಸರಕಾರವು ನಿಶ್ಚಯಿಸಿದೆ. ಇದಲ್ಲದೆ ಬೋರ್ ಕಮಿಟಿಯ ವರದಿಯಂತೆ ಅನೇಕ ಯೋಜನೆಗಳೂ ಕೈಕೊಳ್ಳಲಾಗುವುವು.

## ಪ್ರತ್ಯೇಕ ಪೋಲೀಸ್ ದಳ
## ಹೋಮ್ ಗಾರ್ಡ್ಸ್

ಪ್ರಾಂತದಲ್ಲಿ ನಡೆಯುವ ಅಕೃತ್ಯಗಳನ್ನು ನಿಲ್ಲಿಸಲು ಹಾಗೂ ಹೈದರಾಬಾದು ಗಡಿಯಲ್ಲಿ ಆಗಾಗ ನಡೆಯುತ್ತಿರುವ ಧಾಳಿಯನ್ನು ತಡೆಯಲು ಇತ್ತೀಚೆಗೆ ರಚಿಸಲ್ಪಟ್ಟ ಪ್ರತ್ಯೇಕ ಪೋಲೀಸ್ ದಳವು ಈಗಿರುವ ಪೋಲೀಸ್ ದಳದ ಶಕ್ತಿಯನ್ನು ಹೆಚ್ಚಿಸುವುದು. ಭಾರತ ಸರಕಾರ ಮತ್ತು ನೈಜಾಂ ಸರಕಾರಗಳೊಳಗಿನ ಮಾತು ಕತೆಯನ್ನು ಇನ್ನಷ್ಟು ತೊಂದರೆಗೆ ಗುರಿಮಾಡಲು ನಮ್ಮ ಸರಕಾರವು ಇಚ್ಛಿಸುವುದಿಲ್ಲ. ಆದರೆ ಈ ಧಾಳಿಗಳಿಗೆಲ್ಲಾ ಮುಖ್ಯ ಕಾರಣರಾದ ಇತ್ತಿಹಾದ್-ಉಲ್-ಮುಸ್ಲಿಮೀನ್ ಸಂಸ್ಥೆಯವರಿಂದ ನಮ್ಮ ಪ್ರಾಂತವನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.

ನೈಜಾಮ ಪೋಲೀಸರೂ ಧಾಳಿ ನಡೆಸಲು ಅವಕಾಶ ಕೊಡುತ್ತಿರುವರೆಂದು ದೂರು ಬಂದಿದೆ. ಯಾಗೇ ಆಗಲಿ ಗಡಿನಾಡಿನಲ್ಲಿ ಇಂತಹ ಅನ್ಯಾಯಗಳು ನಡೆಯದಂತೆ ಸರಕಾರವು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಜನರನ್ನು ರಕ್ಷಿಸುವುದು. ಯಾರೂ ಭಯಪಡಬೇಕಾಗಿಲ್ಲ. ಅಂತೆಗಿಂತೆಯ ಸುದ್ದಿಗಳಿಗೆ ಮನಕೊಟ್ಟು, ಗಾಬರಿಯಾಗಬಾರದು. ಸರಕಾರವು ಸರಕಾರವಾಗಿಯೇ ಉಳಿದಿದೆ. ಅದು ಜನತೆಗೆ ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿಯೇ ತೀರುವುದು.

ಶಾಸನ ಸಭೆಗಳಲ್ಲಿ ಇತ್ತೀಚೆಗೆ ಮಂಜೂರಾದ "ಹೋಮ್ ಗಾರ್ಡ್ಸ್" ಮಸೂದೆಯಿಂದ ನಮ್ಮಲ್ಲಿ ಕೆಲವರನ್ನಾದರೂ ಸಮಯ ಬಂದರೆ ಸ್ವಯಂ ರಕ್ಷಣೆಗೆ ಸಿದ್ಧರಾಗುವಂತೆ ತರಬೇತಿ ಮಾಡಬಹುದು. ಆರಂಭದಲ್ಲಿ ಇವರಿಗೆ ಆರ ವಾರಗಳಷ್ಟು ಆಯುಧಗಳನ್ನು ಉಪಯೋಗಿಸಲು ಪೋಲೀಸರು ಹೇಳಿಕೊಡುವರು. ಶಾಂತಿ ರಕ್ಷಣೆಯಲ್ಲಿ ಇಷ್ಟವುಳ್ಳವರೆಲ್ಲರೂ ಈ ದಳಕ್ಕೆ ಸೇರಿ ಅವಕಾಶ ಒದಗಿದಾಗ ಉಪಯೋಗಕ್ಕೆ ದೊರೆಯುವರೆಂದು ನಂಬಲಾಗಿದೆ. ನಮ್ಮ ಪ್ರಾಂತದ ಅನೇಕ ಸಂಘ ಸಂಸ್ಥೆಗಳ ಗುರಿಯೂ ಶಾಂತಿ ರಕ್ಷಣೆಯೇ ಆಗಿದೆ. ಇದರಿಂದ ಸರಕಾರವು ಈ ಕಠಿಣ ಶಾಸನಗಳನ್ನು ಉಪಯೋಗಿಸುವ ಸಂದರ್ಭ ಅವಶ್ಯಕತೆಗಳು ಬರಲಾರವೆಂದು ಆಶಿಸಲಾಗಿದೆ. ಹೇಗಿದ್ದರೂ ಜನರು ಶಾಂತಿಯಿಂದ ಜೀವಿಸಿ ನಮ್ಮ ಪ್ರಾಂತವು ಸರಿಯಾದ ಪ್ರಗತಿಯಿಂದ ನಡೆಯಬೇಕಾಗಿದೆ. ಇದಕ್ಕೆ ಬೇಕಾದ ಪ್ರತಿಯೊಂದು ಕಾರ್ಯವೂ ಕೈಕೊಳ್ಳಲಾಗುವುದು. ಸರಕಾರವು ತನ್ನ ಅಧಿಕಾರವನ್ನು ದುರುಪಯೋಗ ಮಾಡದೆ ನ್ಯಾಯ ಮಾರ್ಗದಲ್ಲಿ ನಡೆಯುವ ಯಾವ ವ್ಯಕ್ತಿಯೂ ಹೆದರಬೇಕಾಗಿಲ್ಲ. ಒಟ್ಟಾರೆ ಜನರು ಶಾಂತಿಯಿಂದ ಸುಖವಾಗಿ ಬಾಳುವುದೇ ನಮ್ಮ ಪ್ರಾಮುಖ್ಯ ಧ್ಯೇಯವಾಗಿದೆ ಎಂದು ಮಾನ್ಯ ಗೃಹ ಮಂತ್ರಿ ಡಾ॥ ಪಿ. ಸುಬ್ಬರಾಯನರು ಸಾರಿದ್ದಾರೆ.

*Please Note*

# Narasepalli Workshops

BELLARY.

— UNDERTAKE —

## Turning, Electric Welding & Tempering

OF

SPARE PARTS OF ALL KINDS.

☞ **Reasonable Charges**

TRIAL SOLICITED.

Telegrams
OIL MILLS.

Telephone
57.

# NAVA BHARAT, BELLARY.

ESTD 1937 *(English Kannada Nationalist Weekly.)* Size 1/4 Foolscap

—)o(—

**ADVERTISEMENT TARIFF.**

| | One insertion | Monthly. | Quarterly | yearly | Annual |
|---|---|---|---|---|---|
| Full Page | Rs 25/- | 75/- | 125/- | 200/- | 300/- |
| Half Page | Rs. 15/- | 50/- | 100/- | 150/- | 200/- |
| 1/4 Page | Rs 10/- | 30/- | 75/- | 100/- | 150/- |

Advance payment for the required period of publicity is essential.
Advertise in this widely circulated weekly & get bumper profits

*Manager,*
NAVA BHARAT BELLARY.

## The Provincial Arya Vysya Education Fund

## ಪ್ರಾಂತೀಯ ಆರ್ಯವೈಶ್ಯ ವಿದ್ಯಾನಿಧಿ

ಸಂಸ್ಥೆಯ ಪಿರಾಟ್ ಸಮಾವೇಶವು 28 ನೆಯ. ದಿನಾಂಕ ಶ್ರೀ ಪಿ ಯಸ್ ತೀರ್ಥಗಿರಿ ಶೆಟ್ಟಿರಧ್ಯಕ್ಷತೆಯಲ್ಲಿ ಸೇರಿ ಶ್ರೀ ಡಿ. ಯಲ್. ಗಂಗಾಧರ ಶೆಟ್ಟಿರು ಜನರಲ್ ಸೆಕ್ರೆಟರಿಗಳಾಗಿ ಆರಿಸಲ್ಪಟ್ಟರು. ಟ್ರೆಜರರ್ ಶ್ರೀ ಡಿ. ಯಲ್. ಶೆಟ್ಟಿರಿಂದ ರೂ. 1617—0—3 ಸಂಗಹವಾದ್ದು ಗೊತ್ತಾಯಿತು. ಜೂನ್ 1948 ರಿಂದ ವಿದ್ಯಾರ್ಥಿ ವೇತನ ಕೊಡಲು ಎಲ್ಲಾ ದಾತರೂ ಸಕಾಲದಲ್ಲಿ ದ್ರವ್ಯ ಸಹಾಯಮಾಡಬೇಕೆಂಬ ಕೋರಿಕೆಯಾಯಿತು. ಇಂಡಸ್ಟ್ರಿಯಲ್ ಮತ್ತು ಟೆಕ್ನಿಕಲ್ ವಿದ್ಯಾಭ್ಯಾಸಕ್ಕಾಗಿ ಯೋಗ್ಯರಾದ, ಬಡವಿದ್ಯಾರ್ಥಿಗಳು ಅರ್ಜಿ ಹಾಕಬಹುದೆಂದಾಯಿತು. ಸ್ತ್ರೀಯರಿಗೂ ವೇತನ ಕೊಡಲಾಗುತ್ತೆ. ಶ್ರೀಗಳಾದ ಚೆಲ್ಲೂರು ಶೇಷಪ್ಪ, ಪಿ. ಗೋವಿಂದಪ್ಪಶೆಟ್ಟಿ, ಆಗಡಿ ಲಕ್ಷ್ಮೀನಾರಾಯಣ ಶೆಟ್ಟಿಯವರು ಜೀವಾವಧಿ ಸದಸ್ಯರಾಗಲೊಪ್ಪಿದರು. ಮೊದಲನೆಯವರು ವಾರ್ಷಿಕವಾಗಿ ರೂ. 116 ಉಳಿದವರು ರೂ 51 ಕೊಡಲೊಪ್ಪಿದರು

## Bellary Aryavysya Yuvajana Sangha Bellary.

ಶ್ರೀ ಚೆಲ್ಲೂರು ಶೇಷಪ್ಪನವರು ಆನರರಿ ಮಾಜಿಸ್ಟ್ರೇಟರಾದ ಸಂತೋಷಕ್ಕಾಗಿ ಬಳ್ಳಾರಿ ಆರ್ಯವೈಶ್ಯ ಯುವಜನ ಸಂಘದವರು 28ನೆಯ ತಾ॥ ಶ್ರೀ ಸಿಂಗಂಸೆಟ್ಟಿ ಸುಬ್ಬರಾಯಿಡುರವರಧ್ಯಕ್ಷತೆಯಲ್ಲಿ 'ಚಹಪಾನ' ಏರ್ಪಡಿಸಿದ್ದರು.

## ವಿಧವಾ ವಿವಾಹ

ಶ್ರೀ ಎ. ರಾಮಚಂದ್ರಯ್ಯ ಶೆಟ್ಟಿಯವರು ಸೌಭಾಗ್ಯವತಿ ಭಾಗ್ಯಲಕ್ಷ್ಮಮ್ಮನವರನ್ನು ವಿವಾಹಮಾಡಿಕೊಂಡದ್ದು ಅತ್ಯಂತ ಪ್ರಶಂಸನೀಯವಾದ ಕಾರ್ಯವಾಗಿದೆ. ಬಾಲ ವಿಧವೆಯರ ಸಮಸ್ಯೆಯನ್ನು ಬಗೆಹರಿಸಬೇಕೆಂದರೆ ಇವರ ಉದಾಹರಣೆಯನ್ನು ಇತರ ಯುವಕರು ಅದರಲ್ಲಿ ವಿಧುರರು ಅನುಸರಿಸಬೇಕು. ಕಳೆದವಾರ ಈ ಲಗ್ನದ ಸಂತೋಷಕ್ಕಾಗಿ ಎಲ್ಲಾ ಸುಧಾರಕ ಬಂಧುಗಳು ಭೋಜನ ಸಮಾರಂಭ ನೆರವೇರಿಸಿದರು.

---

## ನಾ ಕಂಡ ಮಾಷ್ಟರಜೀ.

ಶಾಂತ ಸಮಯ. ಹೊಸ ಮುಖ್ಯೋಪಾಧ್ಯಾಯರನ್ನು ಸುಸ್ವಾಗತಿಸಲು ಗಡಬಡಿ ತಾಡೂರಲ್ಲಿ. ಶಾಲೆಯಲ್ಲಿ ಅದೇನೋ ಆನಂದವೇ ಆನಂದ ಮಾಸ್ತರು ಅಧಿಕಾರ ಪೀಠದಿಂದ ದರ್ಶನವಿತ್ತರು ನನಗೆ.

ಹಲದಿನಗಳು ಸಂದಿವವು. ಶಾಲೆಯ ರಜತ ಮಹೋತ್ಸವವೂ ಬಂದಿತು ಮಾಸ್ತರವರ ಹಿರಿಮೆ, ಹಾರಿಸವರ ಸಡಗರ ಹೆಚ್ಚಾಯಿತು

ಪೆಟ್ಟ ಹಬ್ಬದ ಸಕ್ಕರೆಯನ್ನೇ ಸವಿಯುತ್ತಾ ಒಂದು ಮಾಸ್ತರಜೀ ಮಾಸಗಳು ಉರುಳಿದಂತೆ ವಿದ್ಯಾರ್ಥಿಗಳು ಕಣ್ಮರೆಯಾದರು.

ನಮ್ಮ ಅಚ್ಚು ಮೆಚ್ಚಿನ ಶಾಲೆ ಮುಖ್ಯೋಪಾಧ್ಯಾಯರಿಗೆ ಕನಸಿನ ನೆನಪಾಯಿತು. ಪ್ರಯುಕ್ತವೇ ಶಾಲೆಬಾಗಿಲು ತೆರೆಯುದಾದಿತು. ಶಾಲೆ ಸಂಖ್ಯೆ ಶತಕ್ಕೆ ಮೀರಿದ್ದು ಶೂನ್ಯಕ್ಕೆ ಇಳಿಯುವಂತೆ ಆಯಿತು.

ಕೆಲ್ಸದ ಸಮಯ ನಿದ್ರಿಸುವುದು, ಮೂಲೆಗೆ ಸರಿದ ವಿದ್ಯಾರ್ಥಿಗಳ ಹೊಟ್ಟೆ ಜಗ್ಗುವುದು, ಶಾಲಾಸಂದರ್ಶಕರೊಡನೆ ಸವಿಮಾತನ್ನು ಸುರಿಸುವುದು ಮಾಷ್ಟರಜೀಯವರ ನವೀನ ಧೋರಣೆ ವಾರದ ಪ್ರಥಮ ದಿನವೇ ಮಾತ್ರ ಶಾಲೆ ನಡೆಸುವುದು ಅವರ ಚಪಲತನ, ಉಳಿದ ದಿವಸಗಳಲ್ಲಿ ಮನೆಯಲ್ಲಿಯೇ ಇರಬೇಕೆಂದು ಅವರ ಯೋಗಸಾಧನ ಶಾಲೆ ಇರುವ ಊರಲ್ಲಿ ಮನೆ ಮಾಡಬಾರದೆಂದೇ ಅವರ ಸಿದ್ಧಾಂತ. ವಿದ್ಯಾರ್ಥಿಗಳಿಗೆ 60 ಸೆಕೆಂಡಿನವರಿಗೂ ಪಾಠ ಭೋದಿಸಬೇಕೆಂದು ಅವರ ಉಚ್ಚ ಧ್ಯೇಯ ಕಾಲಾನುಚರ್ಯೆಯಲ್ಲಿ ಕೂತೇ ಬೀಡಿ ಸೇದುವುದು ಅವರ ಸಂತಸ, ಗ್ರಾಮ ಪ್ರಮುಖರ ನೀತಿ ಭೋದನೆಗೆ ಕಿವಿ ಕೊಡಲಬಾರದೆಂದೇ ಅವರ ಧೃಢ ನಿಶ್ಚಯ. ಖಾಲಿ ಹಾಲಿನ ಡಬ್ಬಿಯನ್ನು ತಮ್ಮ ಸ್ವಗ್ರಾಮಕ್ಕೆ ರವಾನಿಸುವದರಲ್ಲಿ ಅವರ ಅಟ್ಟಹಾಸ, ಶಾಲಾ ಮಂದಿರದಲ್ಲಿ ಹಾಲಿನ ಪುಡಿಯಿಂದಲೇ "ಜಾ" ಛಟ್ಟಿ ಇಳಿಸುವುದು ಅವರ ಕೈಚಳಕ. ಅಂದವಾಗಿ. ಇಬ್ಬರಿ

ಗೆ ಬೇಕಾಗುವಷ್ಟು ಹಾಜೂರು ತೆಗೆಯುವುದು ಅವರ ಕಲೆ.

ಬ್ರಹ್ಮನೂ ಸಹ ಸೃಷ್ಟಿಸಲು ಅಸದಳವಾದಂತೆ ಹೊಸ ಲೆಕ್ಕ ತಯಾರಿಸುವುದು ಅವರ ಸಾಹಸ.

ಅಂದಿನಿಂದ ಇಂದಿನವರಿಗೂ ಶ್ರೀ ಮುಖ್ಯೋಪಾಧ್ಯಾಯರ ಕೃಪಾಕಟಾಕ್ಷದಿಂದ ಶಾಲೆ ಮಾತ್ರ ರದ್ದಾಗಿಲ್ಲ. ಗ್ರಾಮದ ಮಕ್ಕಳು ವಿದ್ಯಾನೈಪುಣ್ಯರಾಗಬೇಕಾದರೆ ಒಂದೇ ಸರಳ ಮಾರ್ಗ. ಈ ಮುಖ್ಯೋಪಾಧ್ಯಾಯರನ್ನು ವರ್ಗೀಕರಿಸಿ ನವ ಮಾಸ್ಟರಜೀಯನ್ನು ಒದಗಿಸುವುದು ವಿದ್ಯಾಧಿಕಾರಿಗಳ ಸುಪಥವಾಗಿದೆ.

ಟಿ. ಯಸ್. ಸದ್ಯೋಜಾತ,
ತೌಡೂರು.

## ಕರ್ನಾಟಕ ಏಕೀಕರಣ ಪ್ರಚಾರಕಾರ್ಯ

ಶ್ರೀ ನರೇಗಲ್ಲ ಪ್ರಹ್ಲಾದರಾಯರು ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿ 3ನೆಯ ತಾ॥ ನಿಂದ ಏಕೀಕರಣ ಪ್ರಚಾರ ಕಾರ್ಯ ಮಾಡಲಿದ್ದಾರೆ. ಅಲ್ಲಲ್ಲಿಯ ಕಾರ್ಯಕರ್ತರು ಅವರ ಸಂಚಾರವನ್ನು ಯಶಸ್ವಿ ಮಾಡಲು ಕರ್ನಾಟಕ ಏಕೀಕರಣ ಮಹಾಸಮಿತಿಯ ಕಾರ್ಯದರ್ಶಿಗಳಾದ ಶ್ರೀ ದೊಡ್ಡಮೇಟಿಯವರು ಕೋರುತ್ತಾರೆ

## ಬೆಣ್ಣೆ ಕಲ್ಲು.

ಈ ಗ್ರಾಮದಲ್ಲಿ ಗಾಂಧೀಜಿ ಸ್ಮಾರಕಕ್ಕಾಗಿ ಒಂದು ವಾಚನಾಲಯ ಒಂದು ಔಷಧಾಲಯ ಒಂದು ಪ್ರಾರ್ಥನಾಲಯ ಕಟ್ಟಿಸಲು ನೇತಾಜಿ ತರುಣ ಸಂಘದವರು ನಿಶ್ಚಯಿಸಿದ್ದಾರೆ. ಶ್ರೀ ಉಮಾಕ್ಷರಯ್ಯನವರ ಸ್ತುತ್ಯ ಪ್ರಯತ್ನಗಳ ಫಲವಾಗಿ ಶ್ರೀ ಮಲ್ಲಿಕಾರ್ಜುನರಾಯರು ಉಚಿತವಾಗಿ ಒಂದು ಯೋಗ್ಯ ಸ್ಥಳ ಮತ್ತು ಊರಿನವರು ಒಂದು ಸಾವಿರ ರೂಪಾಯಿ ಕೊಡಲು ಒಪ್ಪಿಬರೆದು ಕೊಟ್ಟಿರುತ್ತಾರೆ. ಇದೇ ಗ್ರಾಮದ ಶಾನುಭೋಗರಾದ ಶ್ರೀ ಭೀಮಸೇನರಾಯರು ತಮ್ಮ ಜೈಲು ಜಾಗಾ ಕೊಡುವರೆಂಬ ನಂಬಿಕೆಯಿದೆ. ಕೊಡುಗೈಯಿಂದ ಎಲ್ಲರೂ ಸಹಾಯ ಸಲ್ಲಿಸಬೇಕು

ಕಳೆದವಾರ ಬಸವೇಶ್ವರ ದೇವಸ್ಥಾನದಲ್ಲಿ ಸಾರ್ವಜನಿಕ ಸಭೆಯು ಸೇರಿ ಶ್ರೀ ಕೇಶವಪ್ಪ, ಅಜ್ಜಯ್ಯ ಇವ ಈಗಿನ ರಾಜ್ಯದಾಡಳಿತ ರೈತ ಸಂಘಟನೆ ಪಂಚಾಯಿತಿ ಮಹತ್ವ ಮಾತಾಡಿದರು. ರಾಷ್ಟ್ರಗೀತೆಯಿಂದ ಸಭೆಯಂತವಾಯಿತು.

—●—

## ಕೇಂದ್ರ ಸರಕಾರೀ ನವಕರರಿಗೆ ಜವಹರಲಾಲರ ಎಚ್ಚರಿಕೆ.

"ಕಲ್ಕತ್ತೆಯಲ್ಲಿನ ಕೇಂದ್ರಸರಕಾರೀ ನವಕರರು ಏಪ್ರಿಲ್ ಮೊದಲನೆಯ ವಾರದಲ್ಲಿ ಸಂಪು ಹೂಡುವುದು ಅನ್ಯಾಯವಾದುದೂ, ಅಸಂಗತವಾದುದೂ ಆಗಿದೆ. ಇದು ಆರ್ಥಿಕವಿರದೆ ರಾಜಕೀಯಕ್ಕೆ ಸಂಬಂಧಿಸಿದೆ. ಕೆಲ ಜನರು ಸರ್ಕಾರವನ್ನು ಹಿಂಸಾಮಾರ್ಗಗಳಿಂದ ಬುಡಮೇಲು ಮಾಡಲು ಯತ್ನಿಸುತ್ತಿರುವರು. ಇಂಥಾ ಪ್ರಯತ್ನಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದು" ಎಂದು ಪಂಡಿತ ಜವಹರಲಾಲರು ಎಚ್ಚರಿಕೆಯನ್ನಿತ್ತಿರುವರು. ನೆಹರೂರ ಭಾಷಣವನ್ನು ಆಕಾಶವಾಣಿಯಿಂದ ಸಾರಲಾಯಿತು

---

## ಕಾಗದದ ಮೇಲಿನ ನಿರ್ಬಂಧ ಸಡಿಲವಾಯ್ತು

ಮದ್ರಾಸ್ ಸರ್ಕಾರವು ಕಾಗದಗಳನ್ನು ಪಡೆದು ಮಾರಲು ಇದ್ದ ನಿಯಂತ್ರಣವನ್ನು ಸಡಿಲಮಾಡಿ ಏಪ್ರಿಲ 1ನೆಯ ತಾ॥ ನಿಂದ ಇದಕ್ಕಾಗಿ ಲೈಸೆನ್ಸ್ ಹೊಂದಲವಶ್ಯವಿಲ್ಲೆಂದು ಪ್ರಕಟಿಸಿದೆ.

---


## ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಿಕ ರಾಷ್ಟ್ರಭಾಷೆ ಪ್ರವೇಶಿಕ ವಿಶಾರದ ವಿದ್ವಾನ್ ವಗೈರೆ ಪರೀಕ್ಷೆಗಳಿಗೆ ಕೂಡಲು ತಕ್ಕ ಸಲಹೆ ಕೊಡುತ್ತೇವೆ. ಪರಸ್ಥಳದವರು ಮಾಹಿತಿಗಾಗಿ ಸ್ಟಾಂಪಿಟ್ಟು ಬರೆಯಿರಿ.

ಟಿ. ಬಿ. ಕೇಶವರಾವ್,
ಜಿಲ್ಲಾ ಹಿಂದೀ ಪ್ರೇಮೀ ಮಂಡಲ, ಬಳ್ಳಾರಿ.

# The Rayalaseema Bank Ltd., H. O. Bellary.

)0(

**ಡಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ,**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ .ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

**ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳಲಾಗುತ್ತವೆ.

ಒಂದು ವರ್ಷ $3\frac{1}{4}$% --- ಎರಡು ವರ್ಷ $3\frac{1}{2}$%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ,
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಕೆ. ಲಿಂಗಾರೆಡ್ಡಿ,** ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.


---

# NAVA BHARAT BELLARY.

Reg.NoM. 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..............................................................
..............................................................
..............................................................


Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್.

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

೧೧
ಕೆ ೧೪

ಬಳ್ಳಾರಿ ಎಪ್ರಿಲ್ ೧೨ ಸೋಮವಾರ ೧೯೪೮

ಸಂಪಾದಕ ಮತ್ತು ಪ್ರಕಾಶ
ಟಿ. ಬಿ. ಕೇಶವರಾವ್.

## ಗಾಂಧಿ ಸ್ಮಾರಕ ನಿಧಿಗೆ ಉದಾರ ಕಾಣಿಕೆ ಕೊಡಿ

ಇಂದಿನ ಜಾಗತಿಕ ವಿದ್ಯಮಾನಗಳನ್ನು ಅಭ್ಯಸಿಸಿ ನೋಡಿದರೆ ಇಂದಿನ ಅನೇಕ ದುರ್ಘಟನೆ, ಜಟಿಲ ಸಮಸ್ಯೆ ಇವುಗಳಿಂದ ಪಾರಾಗಲು ಗಾಂಧೀಜಿಯವರ ಅಹಿಂಸಾ ಮಾರ್ಗವೊಂದೇ ಏಕೈಕ ಸಾಧನ. ಯುದ್ಧವೆಂದೂ ಚಿರಶಾಂತಿಯನ್ನೂ ಸೃಷ್ಟಿಸಿಕೊಡಲಾರದು.

ಗಾಂಧಿ ಸ್ಮಾರಕ ನಿಧಿಗೆ ಎಲ್ಲರೂ ಉದಾರತೆಯಿಂದ, ಭಕ್ತಿಯಿಂದ ಕಾಣಿಕೆ ಕೊಡಿ, ಮನೆ ಮಠಗಳಿಗೆ, ಊರು ಕೇರಿಗಳಿಗೆ ಗಾಂಧೀಜಿಯ ಹೆಸರನ್ನು ಇಡುವುದರಿಂದ ಆ ಮಹಾತ್ಮ ಮಹತ್ತಿಗೆ ಸಮವಾದ ಕಾಣಿಕೆ ಕೊಟ್ಟಂತಾಗಲಿಲ್ಲ. ಬಾಪೂಜಿ ಮಾಡಲಾರಂಭಿಸಿದ ಕಾರ್ಯವನ್ನು ಮಾಡಿ ಮುಗಿಸುವುದೇ ನಿಜವಾದ ಯೋಗ್ಯ ಸ್ಮಾರಕ. ಗಾಂಧೀಜಿಗೆ ಯಾವಾಗಲೂ ಹಳ್ಳಿಗಳೆಂದರೆ ಪ್ರಾಣ. ಅವರ ಸಂದೇಶವಿಂದು ಪ್ರತಿಯೊಂದು ಹಳ್ಳಿಗಳಲ್ಲೂ ಅಮರವಾಗಿ ಪ್ರತಿಧ್ವನಿಸುತ್ತಿರಬೇಕು, ಅವರ ಪ್ರಭಾವವಿರಬೇಕು. ರಚನಾತ್ಮಕ ಕಾರ್ಯಗಳಿಗಾಗಿ ಗಾಂಧೀಜಿ ಸ್ಮಾರಕ ನಿಧಿ ಉಪಯೋಗವಾಗುವುದೆಂಬುದನ್ನು ಅರಿತು ಸರ್ವರೂ ಮುಕ್ತಹಸ್ತದಿಂದ ಕಾಣಿಕೆ ಕೊಡಬೇಕು,

— ಪಂಡಿತ ನೆಹರು

## ಅಕ್ಕಿಯ ಬೆಲೆ ಏರದಂತೆ ಸರ್ಕಾರದವರು ಏನು ಮಾಡಬೇಕು?

---

ಬಳ್ಳಾರಿ ಆದವಾನಿ ಹೊಸಪೇಟೆ ಈ ಮೂರು ನಗರಗಳಲ್ಲಿ 11—4—48 ರಿಂದ ಅಕ್ಕಿಯ ಸೀದಾ ಪದ್ಧತಿಯನ್ನು ತೆಗೆದು ಹಾಕಲಾಗಿದೆಯೆಂದು ಅಧಿಕೃತವಾದ ಸರ್ಕಾರಿ [ಆಜ್ಞೆಯು ಕೈಸೇರಿದೆ. ನೀರಾವರಿ ಬೆಳೆಯ ಪ್ರದೇಶಗಳಾದ ಹೊಸಪೇಟೆ-ಸಿರುಗುಪ್ಪೆ ತಾಲೂಕುಗಳಲ್ಲಿ ಸರ್ಕಾರದ ಧಾನ್ಯ ಸಂಗ್ರಹ ನೀತಿಯ ಮೇಲಣ ಅಸಹ್ಯದಿಂದ ರೈತರು ಕುಪಿತರಾಗಿ ¾ [ನಾಲ್ಕರಲ್ಲಿ ಮೂರು ಪಾಲು ಮೇಲಣ ಭೂಮಿಯಲ್ಲಿ ಕಬ್ಬನ್ನು ಹಾಕಿದರು. ಈ ಕಾರಣ ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಅಕ್ಕಿ ಇಲ್ಲ ಮುಂದಿನ ಬೆಳೆ ಬರುವವರೆಗೂ ಈ ಪರಿಸ್ಥಿತಿ ಇರುತ್ತೆ - ಅಕ್ಕಿಯ ಅಭಾವದಿಂದ ಹೊಸಪೇಟೆ - ಸಿರುಗುಪ್ಪೆಯ ಭಾಗಗಳಲ್ಲಿ ಅಲ್ಪ ಸಂಗ್ರಹವಿದ್ದವರು ರೂಪಾಯಿಗೆ ಒಂದು ಸೇರು ಪಾವು; ಒಂದು ಸೇರಿನಂತೆ ಮಾರುತ್ತಿರುವರು. ಆದರೆ ಸೀದಾ ಪದ್ಧತಿಯ ನಿರ್ಮೂಲದಿಂದ ಅಕ್ಕಿಯನ್ನು ಬಳಸುತ್ತಿರುವರು ಇನ್ನು ಮೇಲೆ ದ್ವಿಗುಣವಾದ ಖರ್ಚನ್ನು ಭರಿಸಬೇಕು. ಒಂದು ಕುಟುಂಬಕ್ಕೆ 5/- ಖರ್ಚು ಮಾಡುವವರು 10/- ರೂ. ವೆಚ್ಚ ಮಾಡಬೇಕಾಗುತ್ತದೆ.

ಬಳ್ಳಾರಿ ಭಾಗಕ್ಕೆ ಅಕ್ಕಿಯು ಹೊರಗಿನಿಂದ ಬರುವ ಮುಖ್ಯ ಪ್ರದೇಶಗಳಲ್ಲಿ ಪ್ರಮುಖವಾದದ್ದು ತುಂಗಭದ್ರಾ ಭಾಗ - ಅಲ್ಲಿಂದ ಅಕ್ಕಿಯು ಸಾಕಷ್ಟು ಪ್ರಮಾಣದಲ್ಲಿ ಸರಿಯಾಗಿ ಬರುತ್ತಿದ್ದರೆ ಬೆಲೆಯ ಏರಿಳಿತದಲ್ಲಿ ಅಷ್ಟೊಂದು ವ್ಯತ್ಯಾಸವಾಗುವುದಿಲ್ಲ. ವಾಗೀನಿನ ಕೊರತೆಯಿಂದ ಕಷ್ಟವು ಮತ್ತಷ್ಟು ಹೆಚ್ಚಿದೆ.

ಕಲೆಕ್ಟರವರು ಇಲ್ಲಿಯವರೆವಿಗೆ ಸೀದಾ ಪದ್ಧತಿಯನ್ನು ಸರಿಯಾಗಿರಿಸಲು ಅಕ್ಕಿ ಬೆಳೆವ ಪ್ರದೇಶಗಳಿಂದ ಸರಿಯಾಗಿ ತರಿಸುವ ವ್ಯವಸ್ಥೆ ಮಾಡಿಸಿ ಒದಗಿಸುತ್ತಿದ್ದರು ಇದರಿಂದ ನಗರದ ಆಹಾರ ವ್ಯವಸ್ಥೆಯು ಕುಸಿದು ಬೀಳಲಿಲ್ಲ ಈಗಲಾದರೂ ಕಲೆಕ್ಟರವರು ಇಷ್ಟೇ ಶ್ರದ್ಧೆಯನ್ನು ವಹಿಸಬೇಕು. ಸೀದಾ ಪದ್ಧತಿಯ [ನಿರ್ಮೂಲನದಿಂದ ತಮ್ಮ ಜವಾಬ್ದಾರಿಯು ಅಂತವಾಯ್ತೆಂದು ತಿಳಿಯಬಾರದು. ರೈಲ್ವೆ ಶಾಖೆಯವರು ಖಾಸಗಿ ವರ್ತಕರಿಗೆ ವಾಗೀನುಗಳ ನ್ನೊದಗಿಸಲು ತಮ್ಮ ಜಗಜ್ಜನಿತ ಪದ್ಧತಿಗಳನ್ನೇ ಅನುಸರಿಸುತ್ತಿರುವರು. ಕೆಲ ಲಾಭ ಬಡಕ ವರ್ತಕರಾದರೂ ಈಗ ವ್ಯಾಪ್ತವಿರುವ ಆರ್ಥಿಕ ಬಿಕ್ಕಟ್ಟಿನ ಸಮಯವನ್ನು ದುರುಪಯೋಗ ಪಡಿಸಿಕೊಳ್ಳದಿರಲಾರರು. ಈ ಕಾರಣ ಕಲೆಕ್ಟರವರು ಸರ್ಕಾರದ ಸಹಾಯದಿಂದ ಆಹಾರ ಧಾನ್ಯಗಳ ಸರಫರಾಜಗಾಗಿ ವಾಗೀನುಗಳು ಹಿಂದಿನಂತೆ ಒದಗಿಸುವ ಪದ್ಧತಿಯನ್ನು ಚನ್ನಾಗಿಡಬೇಕು. ಸೀದಾ ಅಂಗಡಿಗಳಲ್ಲಿ ಕೊಡುವ ಧಾರಣೆಗೇ ಅಕ್ಕಿಯನ್ನು ಮಾರುವ ಸುಲಭ ದರದಂಗಡಿಗಳನ್ನು (Fair Price Depots) ಕೊನೆಯ ಪಕ್ಷಕ್ಕೆ ಆರು ತಿಂಗಳವರೆಗಾದರೂ ಜಾರಿಯಲ್ಲಿಟ್ಟಿರಬೇಕು. ಇಲ್ಲವಾದರೆ ಪರಿಸ್ಥಿತಿಯು ಹದಗೆಡುವುದು.

---

## ಮಾ|| ರಾ|| ಹೊಸಪೇಟೆ ಡಿ. ಮು. ಕೋರ್ಟಿನಲ್ಲಿ.

S. C. 277/47 I. A. 154/47.

ರಾಂಪುರದ ರುದ್ರಪ್ಪ. .... ವಾದಿ.
ವಕ್ಕಲಿಗರ ಈರಪ್ಪ ತಂದೆ ಮನ್ನಳ್ಳಪ್ಪ.... ಪ್ರತಿವಾದಿ.

.... ವಾದಿಪರ ನೋಟೀಸು. ...

ಮೇಲಿನ ಮಾದಿಸದ ವಾದಿ, ಪ್ರತಿವಾದಿಯ ಮೇಲೆ ರೂ. 200/-ಕ್ಕೆ ಕೋರು ಬಾಬ್ತು, ದಾವಾ ಮಾಡಿರುತ್ತಾನೆ. ಸದ್ರಿ ದಾವಾ ಮತ್ತು ಅದರಲ್ಲಿಯ ಅರ್ಜಿ I A. 154/47 ವಾಯಿದಾ 16—4—48ಕ್ಕೆ ಇರುತ್ತದೆ. ಅದಿನ ಹಗಲು 11 ಗಂಟೆಗೆ ಪ್ರತಿವಾದಿಯು ಹಾಜರಾಗದಿದ್ದರೆ ಎಕ್ಸ್‌ಪಾರ್ಟ ಮಾಡಲ್ಪಡುವದು.

9—4—48. ಹೊಸಪೇಟೆ. } ಕೆ. ಶ್ರೀನಿವಾಸಾಚಾರು, ಅಡ್ವೊಕೇಟ್— ವಾದಿಪರ.

# ಬಳ್ಳಾರಿ ಜಿಲ್ಲಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿ

(ಸ್ವಂತ ಸುದ್ದಿಗಾರ)

ತಾ॥ 4.4-48 ಆದಿತ್ಯವಾರ ಮಧ್ಯಾಹ್ನ 1-30 ಗಂಟೆಗೆ ಹೊಸಪೇಟೆಯಲ್ಲಿ ಕಾಂಗ್ರೆಸ್ ಆಫೀಸಲ್ಲಿ ಶ್ರೀ ಟೇಕೂರು ಸುಬ್ರಮಣ್ಯಂ ಜಿಲ್ಲಾ ಅಧ್ಯಕ್ಷತೆಯಲ್ಲಿ ಸಭೆಸೇರಿ ಈ ಕೆಳಗಿನವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷ:—ಐ. ಶಿರಸಪ್ಪ, ಹರಪನಹಳ್ಳಿ.
ಕಾರ್ಯದರ್ಶಿಗಳು:—ಶ್ರೀ ಅಂಗಡಿ ಚನ್ನಬಸಪ್ಪ, ಹಿರೇಹಡಗಲಿ.
,, ಹೆಚ್. ಬಸವನಗೌಡ, ಬಳ್ಳಾರಿ.
ಕೋಶಾಧ್ಯಕ್ಷ:—ಶ್ರೀ ಪಿ. ಗುರುನಾಥಪ್ಪಶೆಟ್ಟಿ, ಬಳ್ಳಾರಿ.
ಸದಸ್ಯರು:—

1 ಶ್ರೀ ಡಿ. ವೇಣುಗೋಪಾಲಚಾರ್, ಬಳ್ಳಾರಿ.
2 ಕೆ. ಚನ್ನಬಸವನಗೌಡ, ಬಾಚಿಗೊಂಡನಹಳ್ಳಿ.
3 ಎಂ. ಎಂ. ಜೆ. ಸದ್ಯೋಜಾತ, ಕೊಟ್ಟೂರು.
4 ಎ. ಎಲ್. ನಾರಾಯಣಚಾರ್, ನಾರಾಯಣದೇವರಕೆರೆ.
5 ಬಿ. ವಿಶ್ವನಾಥಶಿಂಗ್, ರಾಮಸಾಗರ.
6 ಬಿ. ವೀರಭದ್ರಪ್ಪ, ಕಂಪ್ಲಿ.
7 ಟಿ. ಯಂ. ಪಂಚಾಕ್ಷರಯ್ಯ, ಹರಪನಹಳ್ಳಿ.
8 ಪಿ ಸಚ್ಚಿದಾನಂದ ಶೆಟ್ಟಿ, ಕೊಟ್ಟೂರು.
9 ರಾಮಚಂದ್ರಗುಪ್ತ, ಕುರುಗೋಡು.
10 ರಂಗರಾವ್, ಅಗ್ರಸೂರು.
11 ಅಸುಂಡಿ ತಿರುಮಲರಾವ್, ಹೊಸಪೇಟೆ.
12 ಯಸ್. ಸುಬ್ಬರಾಯುಡು, ಬಳ್ಳಾರಿ.

ಈ ಸಮಿತಿಯುವರು ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳಲು ಅಧಿಕಾರಕೊಟ್ಟಿದೆ.

—ಪಾಲಸ್ತಾನದ ವಿಭಜನೆಯನ್ನು ಅಂತಗೂಳಿಸಲು ಅಮೇರಿಕೆಯು ಕೆಲ ಸೂಚನೆಗಳನ್ನು ಮಾಡಿದೆ.

# ಹೊಸಪೇಟೆ.

(ಸ್ವಂತ ಸುದ್ದಿಗಾರರಿಂದ)

2ನೆಯ ದಿನಾಂಕ ಸಾಯಂಕಾಲ ಮುನಿಸಿಪಲ್ ಹೈಸ್ಕೂಲ್ ವಾರ್ಷಿಕೋತ್ಸವವು ಶ್ರೀ ಬಿ. ಅನಂತಾಚಾರ್ಯರಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಸೋಮಯಾಜಿಶಾಸ್ತ್ರಿಗಳ ಭಾವಚಿತ್ರದ ಅನಾವರಣೋತ್ಸವ ಶ್ರೀ ವೈದೂರು ತಿರುಮಲಾಚಾರ್ಯರಿಂದಾಯಿತು.

ಸರ್ಕಲ್ ಇನ್‌ಸ್ಪೆಕ್ಟರ್‌ರವರು ಮೂವರು ಪಠಾಣರು ಮಹಮದ್ ಖಾಸಿಂಖಾನ್, ಅಬ್ದುಲ್ ರಹಮಾನ್. ಗುಲಾಮು ಮಹಮದ್ ಖಾನ್ ಎಂಬುವರನ್ನು ಸಂಶಯದ ಮೇಲೆ ಹಿಡಿದಿದ್ದಾರೆ. ಇವರ ಬಳಿ ಬಹಳವಾಗಿ ಹೈದರಾಬಾದ್ ಹಣ ದೊರಕಿದೆ. ಈಚೆಗೆ ಹೈದರಾಬಾದ್ ಕಡೆಯಿಂದ ಪುಂಡರು ಹೊಸಪೇಟೆಗೆ ಬಂದು ಧಾಂಧ್ಲೆ ಹಾಕುತ್ತಿರುವರು. ಇದಕ್ಕೆ ಕೂಡಲೇ ತಡೆಯಾಗಬೇಕು.

ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಶ್ರೀ ಪಂತಲು ರಾಮಚಂದ್ರರಾಯರಧ್ಯಕ್ಷತೆಯಲ್ಲಿ ನೆರವೇರಿತು ಗಾಂಧೀಜಿ ಗುರುರಾಜಾಚಾರ್ಯರ ಆಕಸ್ಮಿಕ ನಿಧನದ ಬಗ್ಗೆ ಗೊತ್ತುವಳಿಗಳಾದವು.

# ಕರ್ನಾಟಕ ಏಕೀಕರಣ ಸಂಘ

ಬಳ್ಳಾರಿಯ ಪೂರ್ವ ಭಾಗದಲ್ಲಿ ಕರ್ನಾಟಕ ಏಕೀಕರಣ ಸಂಘದ ಕಾರ್ಯವನ್ನು ಭರದಿಂದ ಸಾಗಿಸಲು ಬಳ್ಳಾರಿಯಲ್ಲಿ ಶಾಖೆಯು ಪ್ರಾರಂಭವಾಗಿ ಅದರ ಉದ್ಘಾಟನೆಯು ಶ್ರೀ ಬಸರೀಗಿಡದವರಿಂದಾಯಿತು. ಶ್ರೀ ಅಂದಾನಪ್ಪನವರೂ ನಗರದ ಪ್ರಮುಖರೂ ಸಮಾವೇಶವಾಗಿದ್ದರು. ಶ್ರೀ ಎಂ. ರೇವಣಸಿದ್ದಯ್ಯ, ಅಧ್ಯಕ್ಷ, ಶ್ರೀ ಕೊ. ಚನ್ನಬಸಪ್ಪ ಕಾರ್ಯದರ್ಶಿ ಕಾರ್ಯಕಾರಿಣೀ ಸಮಿತಿಯು ಸ್ಥಾಪಿಸಲಾಯಿತು.

## ಬಳ್ಳಾರಿ

ಆಕ್ಟ್ರಿಯ ರೇಷನಿಂಗ್ ಹೋದ ಮೇಲೆ ಸರಿಯಾದ ದರಗಳಿಂದ ಮಾರಲು ಕೆಲ ಅಂಗಡಿಗಳನ್ನು ಇಡಲು ಕಲೆಕ್ಟರವರು ಏರ್ಪಾಟು ಮಾಡುವವರಿದ್ದಾರೆ.

# ಬಿಸಿಹತ್ತದೆ ಬೆಣ್ಣೆ ಕರಗದು ★ ★

ತೀವ್ರ ಆವಶ್ಯಕ ಪ್ರಶ್ನೆಯಾದ ಕಾಶ್ಮೀರ ಪ್ರಕರಣವು ಭದ್ರತಾಮಂಡಲದೆದುರು ಬಂದು ಮೂರು ತಿಂಗಳಾದರೂ ಇನ್ನೂ ಯಾವದೇ ಒಂದು ನಿರ್ಣಯಕ್ಕೆ ಬರುವುದು ಸಾಧ್ಯವಾಗಿಲ್ಲ. ಇಷ್ಟೇ ಅಲ್ಲ. ಆ ಪ್ರಶ್ನೆಯಲ್ಲಿ ಯಾವ ಬಗೆಯಿಂದ ನೋಡಿದರೂ ಪ್ರಗತಿಪಥ ಹೆಚ್ಚು ಕಾಣ ಬರುವದಿಲ್ಲವೆಂತಲೇ ಹೇಳಬಹುದಾಗಿದೆ. ಈಗ ಮೂರು ನಾಲ್ಕು ದಿನಗಳಿಂದ ಪ್ರಸಿದ್ಧವಾದ ವಿಷಯಗಳನ್ನು ನೋಡಿದರಂತೂ ನಿರಾಶೆಯೇ ಕಂಡು ಬರುತ್ತದೆ.

ಕಲಾತ ಸಂಸ್ಥಾನವು ಪಾಕಿಸ್ತಾನವನ್ನು ಸೇರಿದ್ದರಿಂದಂತೂ ಕಾಶ್ಮೀರದ ಬಗ್ಗೆ ಜಿನ್ನಾ ಇನ್ನೂ ಹೆಚ್ಚು ಬಿಗುವಿನ ಧೋರಣವನ್ನು ವಹಿಸಬಹುದೆಂದು ಲಂಡನದ ರಾಜಕೀಯ ವರ್ಗದಲ್ಲಿಯ ಮಾತುಕತೆಗಳಿಂದ ಒಂದು ಧ್ವನಿ ಕೇಳಬರುತ್ತದೆ. ಫೆಬ್ರುವರಿ ಎರಡನೆಯವಾರದಲ್ಲಿ ಡಾ|| ಲೋಜನೊವರ ಗೊತ್ತುವಳಿ ಅಲ್ಲಿಯೇ ಕುಳಿತಿತು. ಚೀನದ ಪ್ರತಿನಿಧಿಯು ಪ್ರೆಸಿಡೆಂಟ ಸ್ಥಾನದಿಂದ ತಂದಿದ್ದ ಗೊತ್ತುವಳಿಯೂ, ಅರ್ಥಕ್ಕೇನಿಂತಿದೆ. ಮೊಗಲರ ಹುಮಾಯೂನನ ಕಾಲದಲ್ಲಿ ಮೂರೂ ಮುಕ್ಕಾಲು ಗಳಿಗೆ ಪಕಾಲಿಯವನ ರಾಜ್ಯಭಾರವಿದ್ದಂತೆ. ಕೆಲವೇ ದಿನಗಳ ಹಿಂದಿನ ಅನ್ಯಕ್ತೀಯ ಮಾರ್ಪಾಟುಗಳಿಂದ ಬರಿ ನಾಟಕವೇ ನಡೆಯಿತು, ಭದ್ರತಾ ಮಂಡಳದ ಚಿನ್ನಾಟ ನಡೆದಿರುವುದನ್ನು ಕಂಡರೆ ಅದುದರಿಂದ ಯಾವುದೇ ಒಂದು ನ್ಯಾಯನಿಷ್ಠುರ ನಿರ್ಣಯವನ್ನು ಅಪೇಕ್ಷಿಸುವುದು ವ್ಯರ್ಥವಲವೇ ಸರಿ.

ಏಪ್ರಿಲ ಒಂದನೆಯ ದಿನಾಂಕದಿಂದ ಅಧ್ಯಕ್ಷಸ್ಥಾನವು ಡಾ|| ಲೋಪೇಜರವರಿಗೆ ಹೋಗಲಿದೆ. ಆವರು ಬಂದ ಮಾತುಕತೆ ಚರ್ಚೆ ಪ್ರಾರಂಭ ಮಾಡತಕ್ಕವರು. ಒಟ್ಟು ಸಹಜ ಹೀಗೆ ದಿನಕ್ಕೊಂದು ಬಗೆಯಿಂದ ಹೊಸ ಹೊಸ ರೂಪತಳೆಯುತ್ತ ಬರಿಕಾಲ ಹರಣವಾಗುತ್ತಿರುವುದನ್ನು ನೋಡಿದರೆ ಈ ಪ್ರಶ್ನೆಯ ಬಗ್ಗೆ ಭದ್ರತಾ ಮಂಡಳದಲ್ಲಿ ಅಷ್ಟೊಂದು ಆಸ್ಥೆಯತೆ ಕಂಡುಬರುವದಿಲ್ಲವೆಂದ ಹೇಳಬಹುದು.

ಈ ಬಗ್ಗೆಯ ಉದಾಸೀನತೆಗೆ ಕಾರಣವೇನು? ಎಂದು ಸಹಜವಾಗಿಯೇ ಒಂದು ಪ್ರಶ್ನೆ ಮನಸಿನೆದುರು ಬರುತ್ತದೆ. ಬ್ರಿಟನದ ಒಲವು ಪಾಕಿಸ್ತಾನದತ್ತ ಇದ್ದು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೂಡಿಸುವ ಕಾರಸ್ಥಾನವೇ? ಅಥವಾ ತದರ್ಥ ಮದರ್ಥವೆಂಬಂತೆ ಲಾರ್ಡ ಮೌಂಟ ಬ್ಯಾಟನ ಯೋಜನೆಯಂತೆ ವಿಭಜನಾ ಕಾರ್ಯಕ್ರಮದ ರೂಪರೇಷೆಗಳು ಒಳಗಿಂದೊಳಗೇ ಸಿದ್ಧವಾಗುತ್ತಿರಬಹುದೋ? ಇಂಗ್ಲಂಡಿದ ಪ್ರತಿನಿಧಿಗಳಾದ ನೊಯೆಲ್ ಬೇಕರರು ಬೇಗನೆ ಹಿಂತಿರುಗಬಹುದೆಂದೂ ಲಂಡನಿನಲ್ಲಿ ಗುಜು ಗುಜು ಮಾತು ನಡೆದಿರುವುದನ್ನು ನೋಡಿದರೆ ಭದ್ರತಾ ಮಂಡಲದಲ್ಲಿ ಬರಿ ಕಾಶ್ಮೀರ ಚರ್ಚೆಯ ಸೋಗು ಮಾತ್ರ ಸಾಗುವುದೆಂದು ಸಂಶಯ ಬರುವಂತಿದೆ. ಕಾಶ್ಮೀರ ಪ್ರಶ್ನೆಯನ್ನು ಬಿಟ್ಟು ಕೊಡಬಹುವೆಂದೂ ಒಂದು ಅರ್ಥ ಹೊರಡುವಂತಿದೆ.

ಹಿಂದುಸ್ತಾನ ಸರಕಾರವು ತನ್ನ ಧೀರ ಸಭ್ಯವಾದ ಧೋರಣೆಯಿಂದ ನಡೆದಿರುವದು ಅವರ ಅಶಕ್ತತೆಯೆಂದು ಭದ್ರತಾಮಂಡಲದಲ್ಲಿ ಕೈವಾಡ ನಡೆಸುವವರು ಅರ್ಥ ಮಾಡಿಕೊಂಡಂತೆಯೂ ಇರಬಹುದೆಂದೇ ಊಹೆ. ಇಲ್ಲಿ ಶ್ರೀ ರಾಮಕೃಷ್ಣರ ಕತೆಯೊಂದು ನೆನಸಿಗೆ ಬರುತ್ತದೆ. ಒಂದು ಊರಲ್ಲಿ ಒಂದು ದೊಡ್ಡ ನಾಗರ ಹಾವು ಅನೇಕರಿಗೆ ಕಡಿದು ಕೊಂದು ಆ ಊರವರಿಗೆಲ್ಲ ದೊಡ್ಡ ಭಯವನ್ನೇ ಮಾಡಿಬಿಟ್ಟಿತು. ಒಂದು ಸಲ ಓರ್ವ ಸಾಧುವು ಆ ದಾರಿಗುಂಟ ಹೋಗುತ್ತ ಅದಕ್ಕೆ ಯಾರಿಗೂ ಕಡಿಯದಿರುವಂತೆ ಆಜ್ಞೆ ಮಾಡಿ ಅಹಿಂಸೆ ಬೋಧಿಸಿದರು. ಅಂದಿನಿಂದ ಅದು ಸುಮ್ಮನೆ ಇತ್ತು. ಊರವರಿಗೆ ಅದು ಕಡಿಯುವದಿಲ್ಲೆಂದು ಕೆಲ ದಿವಸಗಳ ಮೇಲೆ ಗೊತ್ತಾಗಿ, ದನಕಾಯುವ ಹುಡುಗರೂ ಕೂಡ ಅದರ ಬಾಲ ಹಿಡಿದ ಎಳೆದಾಡುತ್ತ ಅದರೊಡನೆ ಚಿನ್ನಾಟ ಮಾಡುತ್ತಿದ್ದರು. ಅದಕ್ಕೆ ಮಾತ್ರ ಪ್ರಾಣ ಸಂಕಟ. ಎಳೆದಾಡಿ ಮೈಯೆಲ್ಲ ರಕ್ತಮಯವಾಗಿ ಬಿಟ್ಟಿತು. ಸಾಧುವು ತಿರುಗಿ ಆ ದಾರಿಯಲ್ಲಿ ಬರುವಾಗ್ಗೆ ಹಾವಿನ ಈ ಅವಸ್ಥೆಯನ್ನು ಕಂಡು

9ನೇ ಪುಟವನ್ನು ನೋಡಿರಿ

## Remove the Punitive Police in M. Hanumapuram. (Rayadrug Tq.)

On behalf of the Kisan Committee Rayadrug Tq the Secretaries R. R. Nippani & Bandi Anjanaiah in course of a signed petition say that the punitive police were stationed in M. Hanumapuram since Nov. 1944. 106 Ryots of T. Veerapur, Gollapalli, Kodur and M. Hanumapur had to pay annually Rs. 6300/- to maintain this special force. Now they are required to pay it monthly. This year the Ryots have had to pay Rs. 27000/- inclusive of the Revenue Tax. This is a heavy drain & the poor Ryots cannot any more pay it & hence they pray for its immediate abolition.

(Whatever reasons might have impelled the authorities to adopt the punitive measures 3 yrs. ago, no longer hold good at present. The people of the concerned areas, we understand are peacefully following their usual avocations. We plead for its abolition by the popular Government.

Editor - Nava Bharat)

## ಪ್ಯುನಿಟಿವ್ ಪೋಲೀಸ್ ಪಡೆಯನ್ನು ತೆಗೆಯಿರಿ.

**ಮುರುಡಿ ಹನುಮಾಪುರ** [ರಾಯದುರ್ಗ ತಾಲೂಕ]

ರಾಯದುರ್ಗ ತಾಲೂಕು ಕಿಸಾನ ಕಮಿಟಿ ಪರವಾಗಿ ಕಾರ್ಯದರ್ಶಿಗಳಾದ ಶ್ರೀ ಆರ್. ಆರ್. ನಿಪ್ಪಾಣಿ ಮತ್ತು ಬಂಡಿ ಆಂಜನಯ್ಯನವರು ಎಲ್ಲ ರೈತರಿಂದಲೂ ಸಹಿಮಾಡಿದ ಅರ್ಜಿಯನ್ನು ಕಲೆಕ್ಟರವರಿಗೆ ಕಳುಹಿಸಿ ಅದರಲ್ಲಿ ಈ ಕೆಳಗೆ ಕಾಣಿಸಿದ ಅಂಶಗಳನ್ನು ಸೇರಿಸಿರುವರು.

" ಮುರುಡಿ ಹನುಮಾಪುರದಲ್ಲಿ ನವಂಬರ್ 1944 ರಿಂದ ಪೋಲೀಸ್ ಸ್ಟೇಷನ್ ಇಟ್ಟು ಅದರ ಖರ್ಚನ್ನು ಟಿ. ವೀರಾಪುರ - ಗೊಲ್ಲಪಲ್ಲಿ, ಕೋಡೂರು - ಎಂ. ಹನುಮಾಪುರದ 106 ರೈತರು ಭರಿಸುವಂತೆ ಸರ್ಕಾರದವರ ಆಜ್ಞೆ ಮಾಡಿರುತ್ತಾರೆ. ಈ ರೈತರು ವಾರ್ಷಿಕವಾಗಿ 6300 ರೂ. ಕೊಡಬೇಕು. ಈಗ ತಿಂಗಳು - ತಿಂಗಳು ಕೊಡಬೇಕೆಂದು ಟಾಂ - ಟಾಂ ಹಾಕಿಸಿರುವರು ಬಡರೈತರು ಈ ವರ್ಷ ತಾವು ಕೊಡಬೇಕಾದ ಕಂದಾಯದೊಂದಿಗೆ ರೂ. 27000 ಕೊಡಬೇಕಾಯಿತು. ಇಂಥಾ ಆರ್ಥಿಕ ಕಷ್ಟದಲ್ಲಿ ಹಳ್ಳಿಯ ಬಡರೈತರು ಈ ದಂಡದ ಮೊತ್ತವನ್ನು ಕೊಡಲು ಸಾಧ್ಯವೇ ಇಲ್ಲ. ಎಲ್ಲಿಡೆಯಲ್ಲೂ ಶಾಂತಿಯ ಲಕ್ಷಣಗಳಿವೆ. ಈ ದಂಡದ ಪೋಲೀಸ್ ಪಡೆಯನ್ನು ತೆಗೆಯಿರಿ.

(ರೈತರ ಬೇಡಿಕೆಯು ನ್ಯಾಯವಾಗಿದೆ. 3 ವರ್ಷಗಳ ಕೆಳಗೆ ಪ್ರತ್ಯೇಕ ಪೋಲೀಸ್ ದಳವಿಡಲು ಸರ್ಕಾರದವರಿಗಿದ್ದ ಕಾರಣಗಳು ಈಗ ಮುಂದುವರಿಸಲು ಇಲ್ಲ. ಪಾರ್ಟಿ ವ್ಯಾಜ್ಯಗಳಾಗಲಿ ಅಶಾಂತಿಯ ಲಕ್ಷಣಗಳಾಗಲಿ ಇಲ್ಲವೆಂದು ನಮಗೆ ತಿಳಿದು ಬಂದಿದೆ. ಹೀಗಿರುವಾಗ ಆದಷ್ಟು ಜಾಗ್ರತೆ ಈ ಪ್ರತ್ಯೇಕ ಪೋಲೀಸ್ ದಳವನ್ನು ತೆಗೆದು ರೈತರ ಹೊರೆಯನ್ನು ತಪ್ಪಿಸಬೇಕಾದುದು ಪ್ರಜಾ ಸರಕಾರದ ಪ್ರಥಮ ಕರ್ತವ್ಯವಾಗಿದೆ.

ಸಂಪಾದಕ - ನವಭಾರತ)

## ಡಾಕ್ಟರ್ ಸುಬ್ಬರಾಯನ್‌ರ ರಾಜೀನಾಮೆ

ಮದ್ರಾಸ್ ಮಂತ್ರಿವರ್ಗದಲ್ಲಿ ಅಸೆಂಬ್ಲಿನಾಯಕರಾದ ಡಾ॥ ಸುಬ್ಬರಾಯನ್‌ರವರು ಮಂತ್ರಿವರ್ಗದಿಂದ ರಾಜೀನಾಮೆ ಕೊಟ್ಟಿರುವರು. ಮುಖ್ಯಮಂತ್ರಿಗಳಾದ ಶ್ರೀ ಓ. ಪಿ. ರಾಮಸ್ವಾಮಿರೆಡ್ಡಿಯಾರರು ತಮ್ಮ ಶಾಖೆಯಲ್ಲಿ ಹಸ್ತಕ್ಷೇಪಮಾಡಿ ತಮಗೆ ತಿಳಿಸಿದಂತೆ ಕೆಲಸಗಳು ನಡೆಸುತ್ತಿರುವರೆಂದು ಸುಬ್ಬರಾಯನ್‌ರ ಆಪಾದನೆ ಹಾಗೆ ಮಾಡಿದರೂ, ತಿಳಿಸದೆ ಮಾಡುತ್ತಿಲ್ಲವೆಂದು ರೆಡ್ಡಿಯಾರವರು ಹೇಳಿದ್ದಾರೆ. ಶ್ರೀ ಸುಬ್ಬರಾಯನ್‌ರ ರಾಜೀನಾಮೆ ಸ್ವೀಕೃತವಾಗಿದೆ.

# ಯುದ್ಧ ತಪ್ಪಿಸಲು ಮೂರು ದಾರಿಗಳಿವೆ.

ಮೊದಲಿಂದ ಮೇಲೆ ಯುದ್ಧಗಳು ತಲೆದೋರುತ್ತಿರುವ ಸ್ಥಿತಿಯನ್ನು ಕಂಡು ಜಗತ್ತು ಬೇಸತ್ತು ಹೋಗಿದೆ. ಮತ್ತು ಯುದ್ಧಕ್ಕೆ ಕಾರಣರಾಗುತ್ತಿದ್ದವರನ್ನು ಎಲ್ಲರೂ ಶಪಿಸುತ್ತಿದ್ದಾರೆ. ಆದರೆ ಈ ಶಪಿಸುವಿಕೆಯು ಅರಣ್ಯರೋದನಕ್ಕೆ ಸಮಾನವಾದುದರಿಂದ ಅವರ ಬಗ್ಗೆ ಯಾರೂ ಮಹತ್ವ ಕೊಡುತ್ತಿಲ್ಲ.

ಹಿಂದೂಸ್ಥಾನದಂತಹ ದೇಶವು ಕೂಡ ಯುದ್ಧದ ಪರಿಣಾಮದಿಂದ ಬೇಸತ್ತು ಹೋಗಿದೆ. ಇದು ಪಟ್ಟ ಕಷ್ಟವೆಂದರೆ ಆಹಾರ, ಬಟ್ಟೆಗಳ ಸಂಬಂಧವಾದುದು ಮಾತ್ರ. ಯುದ್ಧಕ್ಕೆ ಇಲ್ಲಿಂದ ಜನರು ಸ್ವಸಂತೋಷದಿಂದ ಹೋದರು.

ಕೇವಲ ಜೀವನ ಸಾಮಗ್ರಿಗಳ ತುಟ್ಟಿತನಕ್ಕಾಗಿ ಕಷ್ಟಪಟ್ಟ ಹಿಂದುಸ್ಥಾನವು ಈ ರೀತಿ, ನಾಳಿನ ಯುದ್ಧದ ಬಗ್ಗೆ ಗಾಬರಿಗೊಂಡಿರುವಾಗ, ಪ್ರತ್ಯಕ್ಷ ಯುದ್ಧದ ಬೇಗೆಯಲ್ಲಿ ಸಿಕ್ಕು ಬೆಂದ ಜರ್ಮನಿ, ರಶಿಯಾ, ಇಂಗ್ಲಂಡಗಳಲ್ಲಿಯ ಜನತೆಯು ಅದರ ಬಗ್ಗೆ ಎಷ್ಟು ಚಿಂತಾಮಗ್ನವಾಗಿರುವುದೆಂಬದನ್ನು ಕಲ್ಪಿಸಬೇಕು.

ಈ ಮಾತನ್ನು ಸ್ಪಷ್ಟಮಾಡುವಂತಹ ಘಟನೆಯು ಮೊನ್ನೆ ತಾ|| 25ನೇ ದಿವಸ ನಡೆಯಿತು. ಪಾರ್ಲಿಮೆಂಟಿನಲ್ಲಿ ಯುದ್ಧದ ಬಗ್ಗೆ ಚರ್ಚೆ ನಡೆದಾಗ ಅದರ ಸಭಾಸದಳಾದ ಶ್ರೀಮತಿ ಲೀ ಮ್ಯಾನಿಂಗ್ ಎಂಬವಳು ಒಮ್ಮೆಲೇ ಬಿಕ್ಕಿ ಅಳುತ್ತಿದ್ದಳು. ಮತ್ತು "ನೀವು ಏನೂ ಚಿಂತೆಯಿಲ್ಲದೆ ಇಲ್ಲಿ ಯುದ್ಧದ ಬಗ್ಗೆ ಚರ್ಚೆಮಾಡುತ್ತ ಕೂಡುತ್ತೀರಿ. ಅದನ್ನು ನಿಲ್ಲಿಸುವ ಬಗ್ಗೆ ನಿಮ್ಮ ವಿಚಾರವೇ ಹರಿಯುವುದಿಲ್ಲ. ಈಗ ಅದರ ಬಗ್ಗೆ ಸ್ತ್ರೀಯರು ಟೊಂಕಕಟ್ಟುವ ವೇಳೆ ಬಂದಿದೆ ಯೆಂದು ನನಗೆನಿಸುತ್ತದೆ. ಇದಕ್ಕಾಗಿ ಮಹಿಳೆಯರ ಒಂದು ಅಂತರ ರಾಷ್ಟ್ರೀಯ ತಂಡವನ್ನು ನಾನು ನಿರ್ಮಿಸುವೆನು" ಎಂದು ಆವೇಶದಿಂದ ಅಲ್ಲಿದ್ದ ಪುರುಷ ಸಭಾಸದರಿಗೆ ಹೇಳಿದಳು.

ಶ್ರೀಮತಿ ಲೀ ಮ್ಯಾನಿಂಗಳು ಈ ಸಂಬಂಧವಾಗಿದ್ದ ತನ್ನ ನಿಶ್ಚಯವನ್ನು ಪ್ರಸಿದ್ಧಮಾಡಿದ್ದಾಳೆ. ಅವಳಿಗೆ ಸಹಾಯ ಮಾಡುವುದಾಗಿ 100 ಸಂಘ ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ತಂತಿಗಳೂ ಪತ್ರಗಳೂ ಬಂದಿವೆಯಂತೆ. ಹಾಗೆ ಬರೆದವರಲ್ಲಿ ಗಂಡಸರೂ ಇದ್ದಾರೆ.

ಒಂದು ನೂರು ಸ್ತ್ರೀಯರ ಶಿಷ್ಟ ಮಂಡಳವನ್ನು ರಶಿಯಾದ ಸ್ಟ್ಯಾಲಿನ್ನರ ಕಡೆಗೆ ಒಯ್ಯುವ ನಿಶ್ಚಯವನ್ನು ಮ್ಯಾನಿಂಗ ಇವಳು ಇಟ್ಟುಕೊಂಡಿದ್ದಾಳೆ. ಅಲ್ಲಿ ನಡೆಯುವ ವಿಚಾರಗಳ ದೃಷ್ಟಿಯಿಂದ ಆ ಮೇಲೆ ಅಮೇರಿಕೆಗೂ ಹೋಗುವ ವಿಚಾರವು ಅವಳದಾಗಿದೆ.

ಕೊನೆಗೆ ಬರುವದು ಇಲ್ಲಿಗೇ, ಪಕ್ಷಗಳ ನಾಯಕರು ತಮ್ಮ ತಮ್ಮ ಹಟದಲ್ಲಿಯೇ ಮುಳುಗಿರುವಾಗ ನಡುವಿನವರು ಅಡ್ಡಬಂದು ಅವರಲ್ಲಿ ಸಂಧಾನವನ್ನು ಹುಟ್ಟಿಸಬೇಕಾಗುತ್ತದೆ. ಇದೇ ಮೇರೆಗೆ ಬೇರೆ ಬೇರೆ ದೇಶಗಳಲ್ಲಿ ಅಮೇರಿಕೆ ರಶಿಯಾಗಳಲ್ಲಿ ಒಪ್ಪಂದ ಮಾಡಿಸಬೇಕೆಂಬ ಪ್ರಯತ್ನಗಳು ನಡೆಯುತ್ತವೆ.

ಚೀನದಲ್ಲಿಯ ಗೃಹ ಕಲಹವನ್ನು ನಿಲ್ಲಿಸಲು ಅಲ್ಲಿಯ ಹಿಂದಿನ ಮಂತ್ರಿಯ ಮಗ ಪರ್ಚಿನ್ ಎಂಬ ಗೃಹಸ್ಥನು ಮುಂದೆ ಬಂದಿದ್ದಾನೆ. ಅಲ್ಲಿಯ ರಾಷ್ಟ್ರೀಯ ಮತ್ತು ಕಮ್ಯುನಿಷ್ಟ ಪಕ್ಷಗಳ ಮುಂದೆ ಕೆಲವು ಸಂಗತಿಗಳನ್ನು ಇಟ್ಟು ಅವುಗಗ ತಳಹದಿಯಮೇಲೆ ಒಡಂಬಡಿಕೆಯನ್ನು ಸಾಧಿಸಬೇಕೆಂದು ಅವನು ಬಯಸುತ್ತಿದ್ದಾನೆ. ಅವನಿಂದ ಆ ಕಾರ್ಯವು ಸಾಧಿಸಿದರೆ ಅದು ಚೀನದ ಸುದೈವವೆಂದೇ ಹೇಳಬೇಕಾಗುವುದು.

ಟ್ರೂಮನ್, ಅಟ್ಲೀ ಮತ್ತು ಸ್ಟ್ಯಾಲಿನ್ನರ ಒಂದು ಸಭೆಯನ್ನು ಕೂಡಿಸಬೇಕೆಂಬ ಪ್ರಯತ್ನವು ನಡೆಯಿತು. ಆದರೆ ಅದು ಸಾಧ್ಯವಿಲ್ಲೆಂದು ಆ ಮೇಲೆ ಸುದ್ದಿ ಬಂದಿದೆ. ನಿಜವಾಗಿ ನೋಡಿದರೆ ಈ ಮುಖಂಡರೇ ಒಂದು ಕಡೆಗೆ ಕೂಡಿ ಈಗ ತಮ್ಮಲ್ಲಿ ಬಂದಿರುವ ಮತ ಭೇದಗಳನ್ನು ಸರಿಪಡಿಸಿಕೊಳ್ಳುವದು ಉತ್ತಮ ಪಕ್ಷವಾಗಿತ್ತು. ಮತ್ತು ಯುದ್ಧವನ್ನು ನಿಲ್ಲಿಸುವ ಸಂಬಂಧವಾಗಿ ಮಾಡಬಹುದಾದ ಪ್ರಯತ್ನದ ದೃಷ್ಟಿಯಿಂದ ಅದು ಒಂದುನೆಯದಾಗಿದೆ.

ಆದರೆ ಅಂತಹ ಪರಿಸ್ಥಿತಿಗೆ ಈ ಮೂರು ತಲೆ ಹುದ್ದರಿಗಳು ಇನ್ನೂ ಬಂದಿಲ್ಲವೆಂದು ಹೇಳಬಹುದಾಗಿದೆ ಅದಕ್ಕಾಗಿಯೇ ಅವರು ಒಬ್ಬರಿಗೊಬ್ಬರು ಕೂಡಲು ಇಂದು ಸಿದ್ಧರಿಲ್ಲ.

ಎರಡನೆಯ ದಾರಿಯೆಂದರೆ ಜಗತ್ತಿನಲ್ಲಿರುವ ಮುತ್ಸದ್ದಿಗಳು ಈ ಮೂವರನ್ನು ಒಂದು ಕಡೆಗೆ ಕೂಡಿಸುವ ಒಂದು ಪರಿಸ್ಥಿತಿಯನ್ನು ಹುಟ್ಟಿಸಬೇಕು. ಒಮ್ಮೆಲೇ ಆ ಪ್ರಸಂಗವು ಒದಗಲಾರದು ಮೊದಲು ಈ ಮುತ್ಸದ್ದಿಗಳು ಒಬ್ಬರ ಅಭಿಪ್ರಾಯವನ್ನು ಇನ್ನೊಬ್ಬರಿಗೆ ತಿಳಿಸುತ್ತ ಅಂಚೇ ನೌಕರನಂತೆ ತಿರುಗಾಡಬೇಕು. ಅವರಲ್ಲಿಯ ಮತಭೇದಗಳು ಬಗೆಹರಿಯಬಲ್ಲವಾಗಿವೆ ಎಂಬುದನ್ನು ಆ ಮೂವರಿಗೂ ಮನಗಾಣಿಸುವ ಸಂದರ್ಭವನ್ನು ನಿರ್ಮಾಣಮಾಡಬೇಕು. ಆ ಮೇಲೆ ಈ ಪ್ರಮುಖ ಪಕ್ಷಗಳಲ್ಲಿ ಒಡಂಬಡಿಕೆಯಾಗುವ ರೀತಿಯನ್ನು ಹುಡುಕಬೇಕು.

ಅದೂ ಸಾಧಿಸದಿದ್ದರೆ ಮೂರನೆಯದೊಂದು ಮಾರ್ಗವಿದೆ. ಅದೆಂದರೆ ಯುದ್ಧವಾಗುವ ವಿಚಾರಕ್ಕೆ ನೀರು ಹೊಯ್ಯುವ ವಾತಾವರಣವನ್ನು ಹುಟ್ಟಿಸುವುದು ಯುದ್ಧಮಾಡುವ ಈ ಧುರೀಣರು ದೇಶಾಭಿಮಾನ, ಸ್ವಾರ್ಥ, ಮತ್ಸರ, ದ್ವೇಷ ಮೊದಲಾದ ಸಾಧನಗಳಿಂದ ಜನರನ್ನು ಯುದ್ಧದಂತಹ ಭಯಾನಕವಾದ ವ್ಯಾಪಾರಕ್ಕೆ ಉದ್ರೇಕಗೊಳಿಸುತ್ತಾರೆ. ಆ ಪರಿಣಾಮದ ಹೊರಗೆ ಕಣ್ಣೆತ್ತಿ ನೋಡಲಾರದ ಆ ಅಸಹಾಯರಾದ ಪ್ರಜೆಗಳು ಈ ಪ್ರಮುಖರ ತಾಳದಂತೆ ಕುಣಿಯಲು ಸಿದ್ಧರಾಗುವುದು ಸ್ವಾಭಾವಿಕವಾಗಿದೆ ಅವರ ಮೇಲಿನ ಭರವಸೆಯಿಂದಲೇ ಈ ತಲೆನಾಯಕರು ಬೇಕಾದಾಗ ಯುದ್ಧ ಪ್ರಾರಂಭಿಸುತ್ತಾರೆ. ಬೇಕಾದಾಗ ಅದನ್ನು ನಿಲ್ಲಿಸುತ್ತಾರೆ ಅದು ಅವರ ಕೈಯೊಳಗಿದ್ದ ಆಟವಾಗಿದೆ.

ಯುದ್ಧದಿಂದಾಗುವ ಅನಿಷ್ಟ ಪರಿಣಾಮಗಳನ್ನು ಅವರು ಅರಿಯರೆಂದು ಹೇಳಲಾಗುವುದು. ಅದರ ಬಗ್ಗೆ ಸಂಪೂರ್ಣ ಜ್ಞಾನವಿದ್ದರೂ ತಮ್ಮ ಧುರೀಣತ್ವದ ರಕ್ಷಣೆಗಾಗಿ ಅವರು ಇಷ್ಟೊಂದು ವಿಶ್ವಪ್ರಯತ್ನವನ್ನು ನಡೆಸುತ್ತಾರೆ.

ಇಂತಹ ಪ್ರಸಂಗದಲ್ಲಿ ಆ ಆ ದೇಶಗಳ ಪ್ರಜೆಗಳಲ್ಲಿ ಜಾಗ್ರತಿಯಾಗುವುದು ಅವಶ್ಯವಿದೆ ದೇಶದ ಮುಖಂಡರು ಹೇಳಿದರೂ "ನಾವು ಯುದ್ಧ ಮಾಡಲು ಸಿದ್ಧರಿಲ್ಲ. ಯುದ್ಧವಾಗಲೇಬೇಕೆಂದು ಹೇಳುವುದಕ್ಕೆ ಇದ್ದ ಕಾರಣಗಳನ್ನು ನಿವಾರಿಸಲು ಪ್ರಯತ್ನಮಾಡಿರಿ. ಅದಕ್ಕೆ ನಾವು ಸಹಾಯಮಾಡುತ್ತೇವೆ" ಎಂದು ತಮ್ಮ ತಮ್ಮ ಮುಖಂಡರಿಗೆ ಅವರು ಧೈರ್ಯದಿಂದ ಹೇಳುವ ಪರಿಸ್ಥಿತಿಯನ್ನು ಹುಟ್ಟಿಸಬೇಕು.

ಹಾಗೆ ಹೇಳಲು ಇಂದು ಅವರು ಮನಸ್ಸಿನಲ್ಲಿ ಇಚ್ಛಿಸುತ್ತಿದ್ದರೂ ಅವರಲ್ಲಿ ಅದನ್ನು ಬಹಿರಂಗವಾಗಿ ಹೇಳುವ ಧೈರ್ಯವಿಲ್ಲದಾಗಿದೆ. ಹೇಳಿದರೆ ಅವರ ಮೇಲೆ ರಾಜದ್ರೋಹದ ಆರೋಪವನ್ನಿಟ್ಟು ದೇಹಾಂತಿಕ ಶಿಕ್ಷೆಯನ್ನು ಕೂಡ ವಿಧಿಸಲು ಈ ನಾಯಕರು ಹಿಂದೆ ಮುಂದೆ ನೋಡುವುದಿಲ್ಲ.

ಜಾಗತಿಕ ತಳಹದಿಯ ಮೇಲೆ "ಯುದ್ಧಬೇಡ" ಎಂಬ ಆಂದೋಲನವನ್ನು ಹೂಡುವುದು ಈಗ ಅವಶ್ಯವಿದೆ ಈ ಆಂದೋಲನದಿಂದ ಪ್ರಜೆಗಳ ಮನಸ್ಸನ್ನು ತಿರುಗಿಸುವುದಲ್ಲದೆ ಆಯಾ ದೇಶದ ಸೈನಿಕರ ಮನಸ್ಸನ್ನು ಕೂಡ ತಿರುಗಿಸ ಬಿಡಬೇಕು. ಬಾಂಬು ಒಗೆಯಿರಿ ಎಂದು ಹೇಳಿದರೆ "ಒಗೆಯುವುದಿಲ್ಲ" ಎಂದು ಅವರು ಹೇಳುವಂತಾಗಬೇಕು. ಅಂದರೆ ಈ ಜಗದ್ಘಾತಕರ ವಿಧ್ವಂಸಕ ಮನೋವೃತ್ತಿಯೂ. ಅಲ್ಲಿಂದ ಅಲ್ಲೇ ನಂದಿ ಹೋಗುವುದು.

ಸರ್ವ ಕಡೆಗೆ ಯುದ್ಧಬೇಡವೆಂಬ ಮನೋವೃತ್ತಿಗೆ ಪ್ರಾರಂಭವಾಗಿದೆ. ಮತ್ತು ಆ ದಿಶೆಯಲ್ಲಿ ಪ್ರಯತ್ನ ಮಾಡಲು ಕೂಡ ಎಷ್ಟೋ ಜನರು ಮತ್ತು ಸಂಸ್ಥೆಗಳು ಟೊಂಕ ಕಟ್ಟುತ್ತಿವೆ. ಈ ಪ್ರಯತ್ನಗಳು ಸಫಲವಾಗಲೆಂದೂ ಅವರ ಮೂಲಕ ಈ ರಾಕ್ಷಸೀ ಮಹತ್ವಾಕಾಂಕ್ಷೆಯ ಮನೋವೃತ್ತಿಗೆ ಇತಿಶ್ರೀಯುಂಟಾಗಿ ಜಗತ್ತಿನ ಜನತೆಯು ಶಾಂತ ವಾತಾವರಣದಲ್ಲಿ ಇರುವಂತಾಗಲೆಂದೂ ಹಾರೈಸೋಣ

---

## ರಾಷ್ಟ್ರಭಾಷೆ ಹಿಂದಿ ಕಲಿಯಿರಿ

ಭಾರತದ ರಾಷ್ಟ್ರಭಾಷೆ ಹಿಂದಿಯನ್ನು ಕಲಿಯಲು ಪ್ರಾಥಮಿಕ ಮಧ್ಯಮಿಕ ರಾಷ್ಟ್ರಭಾಷೆ ಪ್ರವೇಶಿಕ ವಿಶಾರದ ವಿದ್ವಾನ್ ವಗೈರೆ ಪರೀಕ್ಷೆಗಳಿಗೆ ಕೂಡಲು ತಕ್ಕ ಸಲಹೆ ಕೊಡುತ್ತೇವೆ ಪರಸ್ಥಳದವರು ಮಾಹಿತಿಗಾಗಿ ಸ್ಟಾಂಪಿಟ್ಟು ಬರೆಯಿರಿ.

ಪಿ. ಬಿ. ಕೇಶವರಾವ್,
ಜಿಲ್ಲಾ ಹಿಂದೀ ಪ್ರೇಮೀ ಮಂಡಲ, ಬಳ್ಳಾರಿ.

*Please Note*

# Narasepalli Workshops

BELLARY.

— UNDERTAKE —

## Turning, Electric Welding & Tempering

OF

SPARE PARTS OF ALL KINDS.

☛ **Reasonable Charges**

TRIAL SOLICITED.

Telegrams
OIL MILLS.

Telephone
57.

# NAVA BHARAT, BELLARY.

ESTD. 1937. *(English-Kannada Nationalist Weekly.)* Size 1/4 Foolscap

——)o(——

## ADVERTISEMENT TARIFF.

| | One insertion | Monthly, | Quarterly | yearly | Annual |
|---|---|---|---|---|---|
| Full Page | Rs. 25/- | 75/- | 125/- | 200/- | 300/- |
| Half Page | Rs. 15/- | 50/- | 100/- | 150/- | 200/- |
| 1/4 Page | Rs. 10/- | 30/- | 75/- | 100/- | 150/- |

Advance payment for the required period of publicity is essential
Advertise in this widely circulated weekly & get bumper profits

*Manager,*
NAVA BHARAT BELLARY.

4ನೇ ಪುಟದಿಂದ ಬಂದದ್ದು

ಕಸಿಕರ ಪಟ್ಟರು. "ನೋಡಿ ಸ್ವಾಮೀ, ನೀವು ಉಪದೇಶಿಸಿದ ಅಹಿಂಸೆಯ ಫಲ" ಎಂದು ಹಾವು ಹೇಳಿತು. ಆಗ ರಾಮಕೃಷ್ಣರು "ನಿನಗೆ ಕಡಿಯ ಕೂಡದೆಂದು ಹೇಳಿದ್ದೆ. ಆದರೆ ಭುಸ್ಸೆಂದು ಹೆಡೆ ತೆಗೆದು ಹೆದರಿಸಬಾರದೆಂದು ಹೇಳಿದ್ದಿಲ್ಲ. ನೀನು ಹಾಗೆ ಮಾಡಿದ್ದರೆ ಈಗತಿ ನಿನಗೆ ಬರುತ್ತಿದ್ದಿಲ್ಲ" ಎಂದು ಹೇಳಿದರಂತೆ. ಭದ್ರತಾ ಮಂಡಲದಲ್ಲಿ ಕೈವಾಡ ನಡೆಸುತ್ತಿರುವ ಕೆಲ ಕೆಲವು ಪ್ರಮುಖ ರಾಷ್ಟ್ರಗಳು ಭಾರತದ ಅಹಿಂಸೆಯ ವಿಷಯಕ್ಕೆ ಇದೇ ಧೋರಣೆಯನ್ನು ತಳೆದಂತೆ ತೋರುತ್ತದೆ.

ಜನಮತಗಣನೆ ನಡೆಸುವಷ್ಟು ಧೈರ್ಯವೂ ಭದ್ರತಾ ಮಂಡಲಕ್ಕೆ ಇಲ್ಲ ಏಕೆಂದರೆ ಜುನಾಗಡದ ಬಿಸಿ ಬಿಸಿ ಉದಾಹರಣೆ ಕಣ್ಣು ಮುಂದೆಯೇ ಇದೆ ಏನಾದರೂ ಪಾಕಿಸ್ತಾನದ ಲಾಭದ ಬಗ್ಗೆ ಅಲಕ್ಷ್ಯಮಾಡುವಂತಿಲ್ಲ ಏಕೆಂದರೆ ಅದು ತಾವೇ ಹುಟ್ಟಿಸಿದ ಕೂಸು. ಹೀಗಾಗಿ ಅಡಕೊತ್ತಿನೊಳಗೆ ಸಿಕ್ಕ ಅಡಿಕೆಯಂತೆ ಭದ್ರತಾ ಮಂಡಲದ ಪ್ರಮುಖರು ಒದ್ದಾಡುತ್ತ ಇಂದಿನ ಸಾವನ್ನು ನಾಳೆಗೆ ಹಾಕುವ ವಿಲಂಬ ಧೋರಣವನ್ನು ನಡೆಸಿದಂತೆ ತೋರುವುದೆಂದು ಅನೇಕ ರಾಜಕಾರಣೀ ನಿಸ್ಪೃಹಿಗಳ ಮತವಾಗಿದೆ. -- ಏನೇ ಆದರೂ ಭಾರತ ಸರಕಾರವು ಸುಮ್ಮನೆ ಕೂಡುವುದು ಒಳಿತಲ್ಲ. ತಮ್ಮ ನ್ಯಾಯ ಮತ್ತು ಸತ್ಯದ ಪಕ್ಷವನ್ನು ಮನದಟ್ಟಾಗುವಂತೆ ಈಗಾಗಲೇ ಜಗತ್ತಿನೆದುರು ಅವರು ಇಟ್ಟಿದ್ದಾರೆ. ಹಿಂಸೆಯ ಉದ್ದೇಶವಿಲ್ಲದಿದ್ದರೂ ಅವರು ಧ್ವಂಸನ ಕಾರ್ಯಮಾಡದೆ ಗತ್ಯಂತರವಿಲ್ಲವೆಂದು ಇಂದಿನ ವರೆಗಿನ ಪರಿಸ್ಥಿತಿಯನ್ನು ನಿರೀಕ್ಷಿಸಿದರೆ ಕಂಡುಬರದೇ ಇರದು. ಏಕೆಂದರೆ ಬಿಸಿ ಹತ್ತದೆ ಬೆಣ್ಣೆ ಕರಗದು ಎಂಬ ಗಾದೆಯ ಮಾತಿನಂತೆ ಯಾವದೇ ಕಾರ್ಯವಾದರೂ ನಡೆಯುವದು ಸಹಜ. ಪಾಕಿಸ್ತಾನದ ವಿಭಜನೆಯ ಬಗ್ಗೆ ಅಮೇರಿಕೆಯು ತನ್ನ ಧೋರಣೆಯನ್ನು ಮಾರ್ಪಡಿಸಿದ್ದು ಇದಕ್ಕೆ ಒಳ್ಳೆಯ ಉದಾಹರಣೆಯಲ್ಲವೇ?

## ಶ್ರೀ. ಜೆ. ಸಿ. ಕುಮಾರಪ್ಪ

ಮಹಾತ್ಮ ಗಾಂಧಿಯವರ ರಚನಾತ್ಮಕ ಕಾರ್ಯಗಳನ್ನು ಅಮಲಿನಲ್ಲಿ ತರಲು ಪ್ರಮುಖ ಶಿಷ್ಯವರ್ಗದವರಲ್ಲೊಬ್ಬರಾದ ಶ್ರೀ ಜೆ. ಸಿ. ಕುಮಾರಪ್ಪನವರು 4—4—48 ರ ದಿನಾಂಕ ಆಲೂರು ಅದವಾನಿಗಳನ್ನು ಸಂದರ್ಶಿಸಿದರು. ಈ ಎರಡು ಸ್ಥಳಗಳಲ್ಲಿಯೂ ಸಭೆಗಳಾಗಿ ಗಾಂಧೀಜಿಯವರ ನಿಜವಾದ ಸ್ಮಾರಕವೆಂದರೆ ಅವರು ಹಾಕಿಕೊಟ್ಟ ನಿರ್ಮಾಣ ಕಾರ್ಯಕ್ರಮವನ್ನನುಸರಿಸುವುದೇ ಆಗಿದೆಯೆಂಬಂಶವನ್ನು ಸ್ಪಷ್ಟವಾಗಿ ಹೇಳಿದರು. ಜಿ. ಕಾ. ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ್ವರರಾಯರು, ಪ್ರಾಂತೀಕ ಕಾರ್ಯದರ್ಶಿಗಳಾದ ಶ್ರೀ ಶಿವಮ್ಮಾರೆಡ್ಡಿಯವರೂ ಜೊತೆಯಲ್ಲಿದ್ದು ಪರಿಚಯ ಭಾಷಾಂತರಮಾಡಿದರು. ಅದವಾನಿಯಿಂದ ಕರ್ನೂಲಿಗೆ ಹೋದರು.

## ರಜಾ

.... ಉಗಾದಿ ಹಬ್ಬದಕಾರಣ ...

ಈವಾರ **ನವಭಾರತ** ಕಾರ್ಯಾಲಯಕ್ಕೆ ರಜವಿದೆ. ಈಕಾರಣ 19-4-48ರ ಪತ್ರಿಕೆಯು ಹೊರಡದೆ 26-4-48ಕ್ಕೆ ಪ್ರಸಿದ್ಧವಾಗುವದು.

ವ್ಯವಸ್ಥಾಪಕ ನವಭಾರತ.

# ಸೊಂಡೂರು ಸಂಸ್ಥಾನ ಮೊದಲನೆಯ ಪ್ರಜಾಪರಿಷತ್ತು

(ದೇ. ಭ. ಕಲ್ಲೂರು ರಾಯನಗೌಡರ ಅಧ್ಯಕ್ಷತೆಯಲ್ಲಿ ಎತ್ತಿನಹಟ್ಟಿಯಲ್ಲಿ 3ನೆಯ ದಿನಾಂಕ ಕೂಡಿತ್ತು. ಪರಿಷತ್ತಿನ ಉದ್ಘಾಟನೆಯನ್ನು ಶ್ರೀ ರತ್ನಪ್ಪ ಕುಂಬಾರೆ ಕೊಲ್ಹಾಪೂರ ಅವರು ನೆರವೇರಿಸಿದರು.)

## ಸ್ವೀಕೃತವಾದ ಗೊತ್ತುವಳಿಗಳು

ಗೊ. ನಂ. ೧:—ಹಿಂದುಸ್ತಾನ ಸ್ವಾತಂತ್ರ್ಯ ಶಿಲ್ಪಿಗಳೂ ಭಾರತ ಪಿತಾಮಹರೂ ಆದ ಮಹಾತ್ಮಾ ಗಾಂಧಿಯವರ ಮರಣದಿಂದ ಈ ಸಭೆಗೆ ಅತ್ಯಂತ ದುಃಖವಾಗಿರುತ್ತದೆ. ಹಾಗೂ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಗೊ. ನಂ. ೨:—ಪ್ರಜಾಪ್ರಭುತ್ವವು ಭರದಿಂದ ಬೆಳೆದು ಭಾರತವು ಪ್ರಗತಿ ಪಥದಲ್ಲಿ ಮುನ್ನಡೆಯುವ ಈ ಕಾಲದಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳು ಸ್ವತಂತ್ರ ಘಟಕವಾಗಿ ತಮ್ಮ ಅಸ್ತಿತ್ವವನ್ನು ಕಾಯಿದುಕೊಳ್ಳುವದು ಸೂಕ್ತವೂ ಶಕ್ಯವೂ ಅಲ್ಲವೆಂಬುದನ್ನು ಅರಿತು ಭಾರತ ದೇಶದ ಅನೇಕ ಸಂಸ್ಥಾನಗಳು ಈಗಾಗಲೇ ಸ್ವತಂತ್ರ ಹಿಂದುಸ್ತಾನದ ನೆರೆಯ ಪ್ರಾಂತದಲ್ಲಿ ವಿಲೀನವಾದುದನ್ನು ಅರಿತು ತೀರ ಚಿಕ್ಕ ಸಂಸ್ಥಾನವಾದ ಸೊಂಡೂರಿನ ಅಧಿಪತಿಗಳು ಈವರೆಗೆ ವಿಲೀನಕರಣಕ್ಕೆ ಸಿದ್ಧವಾಗದೆ ಪ್ರತಿಗಾಮಿ ಮನೋವೃತ್ತಿಯನ್ನು ತಳೆದಿರುವದು ತೀರಾ ಹಾಸ್ಯಾಸ್ಪದವೂ ವಿಷಾದಕರವೂ ಆಗಿದೆ. ಅಲ್ಲದೆ ಸೊಂಡೂರ ಸಂಸ್ಥಾನದ ವಿಲೀನೀಕರಣಕ್ಕೆ ಸಂಸ್ಥಾನ ಪ್ರಜೆಗಳ ಒಪ್ಪಿಗೆ ಇಲ್ಲವೆಂದು ಮೇಲಿಂದ ಮೇಲೆ ನುಡಿಯುತ್ತಿರುವದು ಸಂಪೂರ್ಣ ಅಸತ್ಯವೆಂದು ಈ ಪರಿಷತ್ತು ಸಾರುತ್ತದೆ. ಚಿಕ್ಕ ಪುಟ್ಟ ಸಂಸ್ಥಾನಗಳನ್ನು ನೆರೆಯ ಪ್ರಾಂತದಲ್ಲಿ ಲೀನಗೊಳಿಸುವ ಬಗ್ಗೆ ವಿಶೇಷತಃ ಸೊಂಡೂರ ಸಂಸ್ಥಾನವು ಲೀನವಾಗಲೇ ಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗ್ಗೆ ಹಿಂದುಸ್ತಾನ ಸರಕಾರದ ಸಂಸ್ಥಾನ ಶಾಖೆಯ ಧೋರಣೆಯನ್ನು ಈ ಪರಿಷತ್ತು ಸ್ವಾಗತಿಸುತ್ತದೆ. ಸ್ವತಂತ್ರ ಘಟಕವಾಗಿ ಬಾಳಲು ಸರ್ವವಿಧದಿಂದ ಅನರ್ಹವಾದದ್ದೂ ಹಾಗೂ ದುರಾಡಳಿತೆಯ ಬಗ್ಗೆ ಹೆಸರಾದದ್ದೂ ಆದ ಈ ಸಂಸ್ಥಾನವು ಲೀನವಾಗಲೇಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿ ಹಿಂದುಸ್ತಾನ ಸರಕಾರವು ಈ ಸಂಸ್ಥಾನದ ಆಡಳಿತೆಯನ್ನು ಕೂಡಲೇ ವಹಿಸಿಕೊಳ್ಳಲು ಕೇಳಿಕೊಳ್ಳುತ್ತಿದೆ.

ಗೊ. ನಂ. ೩:—ಸೊಂಡೂರ ಸಂಸ್ಥಾನದ ಸ್ಥಾವರ ಅಥವಾ ಜಂಗಮ ಆಸ್ತಿಗಳು ನೀತಿ ಹಾಗೂ ಕಾಯಿದೆಗೆ ಒಪ್ಪದ ರೀತಿಯಲ್ಲಿ ಈಗಾಗಲೇ ಅರಸರ ಸ್ವಂತ ಒಡೆತನಕ್ಕೆ ಸೇರಿಸಲ್ಪಟ್ಟಿರುವವೆಂದೂ ಮತ್ತು ಸೇರಿಸಲ್ಪಡಹತ್ತಿರುವವೆಂದೂ ಈ ಪರಿಷತ್ತಿಗೆ ಖಚಿತವಾಗಿ ತಿಳಿದು ಬಂದಿರುವ ಕಾರಣ ಹಿಂದುಸ್ತಾನ ಸರಕಾರದ ಸಂಸ್ಥಾನ ಶಾಖೆಯವರು ಕೂಡಲೇ ನಿಃಸ್ಪಕ್ಷಪಾತತನದಿಂದ ಚವಕಶಿ ಮಾಡಬೇಕೆಂದೂ ಮತ್ತು ಯೋಗ್ಯಕ್ರಮ ಕೊಳ್ಳಬೇಕೆಂದೂ ಸರಕಾರಕ್ಕೆ ಈ ಪರಿಷತ್ತು ಬಿನ್ನಯಿಸಿಕೊಳ್ಳುತ್ತದೆ.

ಗೊ. ನಂ. ೪:—ಈ ಗೊತ್ತುವಳಿಗಳನ್ನು ಕಾರ್ಯಕಾರೀ ಮಾಡುವದಕ್ಕಾಗಿ ಕೆಳಗಿನ ಸಮಿತಿಯನ್ನು ನಿಯಮಿಸುತ್ತದೆ.

1) ಅಧ್ಯಕ್ಷರು, 2) ಶ್ರೀ ಶರಣಯ್ಯನವರು 3) ಶ್ರೀ ಸೋಮನಗೌಡ. 4) ಹರಳಕಲ್ಲ ನಾಗಲಿಂಗಪ್ಪ, 5) ಶ್ರೀ ಗಿರಿಮಲ್ಲಪ್ಪ, 6) ಶ್ರೀ ಗುರುಶಾಂತಯ್ಯ 7) ಐಕಳ್ಳಿ ಗುರುಸಿದ್ಧಪ್ಪ, 8) ಶ್ರೀ ಕೆ. ಎಲ್. ಶ್ರಾಫ್ 9) ಶ್ರೀ ಕುಮಾರಯ್ಯ.

ಅಧ್ಯಕ್ಷರು ಅವಶ್ಯಕಂಡಲ್ಲಿ ಇನ್ನು ಮೂರು ಜನರನ್ನು ಸಹಕರಿಸಿಕೊಳ್ಳಲಿಕ್ಕೆ ಅಧಿಕಾರ ಕೊಟ್ಟಿದೆ.

## ಸಿಮೆಂಟ್ - ನೇಗಿಲು ಕುಳ.

"ಸಿಮೆಂಟ್ ಸಂಗ್ರಹಮಾಡಿ, ಮಾರಲು ಸರ್ಕಾರದಿಂದ ಅಧಿಕೃತರಾದ ಅಂಗಡಿ ಮಾಲೀಕರು ತಮಗೆ ಬಂದ ಭಾಗದಲ್ಲಿ ನಾಲ್ಕನೆ 1/4 ರಷ್ಟು ಮಾರಿಕೊಳ್ಳಬಹುದು. ಮತ್ತೆ ನಾಲ್ಕನೆ ಭಾಗ 1/4 ಸಂಬಂಧಿಸಿದ ತಾಲೂಕು ತಹಸೀಲ್ದಾರರು ಅಗತ್ಯವಿದ್ದವರಿಗೆ ಕೊಡಿಸಬಹುದು. ಉಳಿದರ್ಧಭಾಗವನ್ನು ಪ್ರಾಂತೀಯ ನಿಯಂತ್ರಣಾಧಿಕಾರಿಗಳು (Provincial Cement Controller 199 Mount Road, Madras) ದೊಡ್ಡ ದೊಡ್ಡ ಕೆಲಸಗಳನ್ನು ನಡೆಸುವವರಿಗೆ ಕೊಡುವರು. ಹೀಗೆ ಬೇಕಿದ್ದವರು ಈ ಮಾರ್ಗಗಳಿಂದ ಸಿಮೆಂಟ್ ಪೊಂದಬಹುದು"—

"ನೇಗಿಲು - ಕುಳ - ಅಳಿ ವಗೈರೆ ಕಬ್ಬಿಣ ಉಕ್ಕಿನ ಸಾಮಾನುಗಳನ್ನು ವ್ಯವಸಾಯ ಇಲಾಖೆಯವರಿಂದ ಯಥಾಪ್ರಕಾರ ಹಂಚಿಸಲಾಗುತ್ತಿದೆ"

ಸರ್ಕಾರದ ಈ ವ್ಯವಸ್ಥೆಯಲ್ಲಿ ಏನಾದರೂ ತಪ್ಪುಗಳಿದ್ದರೆ ನಮಗೆ ತಿಳಿಸಿರಿ— ನಾವು ಸರಿಪಡಿಸುತ್ತೇವೆ ಎಂದು ಮದ್ರಾಸ್ ಔದ್ಯೋಗಿಕ ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರು ನ ವ ಭಾ ರ ತ ಸಂಪಾದಕರಾದ ಶ್ರೀ ಕೇಶವರಾಯರಿಗೆ ಕಳೆದವಾರ ಮದ್ರಾಸಿನಲ್ಲಿ ತಿಳಿಯಪಡಿಸಿದರು.

## ಗಾಂಧೀಜಿಯವರ ಭಸ್ಮ

### ಉತ್ತರ ಹಿಮಾಲಯದ ಜನಗಳ ಬೇಡಿಕೆ.

ಟಿಬೆಟ್‌ಗೆ ಹೊಂದಿಕೊಂಡಿರುವ ಉತ್ತರ ಹಿಮಾಲಯದ ಜನಗಳು ಪಂಡಿತ ಜವಹರಲಾಲ್‌ನೆಹರು ಮತ್ತು ದೇವದಾಸ್‌ಗಾಂಧಿ ಯವರಿಗೆ ಒಂದು ತಂತಿಕಳುಹಿಸಿ ಅದರಲ್ಲಿ ಮಹಾತ್ಮ ಗಾಂಧಿಯವರ ಭಸ್ಮದ ಸ್ವಲ್ಪ ಭಾಗವನ್ನು ಕೈಲಾಸದ ಮಾನಸರೋವರದಲ್ಲಿ ನಿಮಜ್ಜನಗೊಳಿಸಲು ಒದಗಿಸಿ ಕೊಡಬೇಕೆಂದು ಕೇಳಿಕೊಂಡಿದ್ದಾರೆ

ಕೇತವಾಸಮಿತಿಯ ಸದಸ್ಯರಾದ ಪಂಡಿತ ಹರಗೋವಿಂದ ಪಂತರು ಕೆಲವು ಮಿತ್ರರೊಂದಿಗೆ ಜೂನ ತಿಂಗಳ ಮಧ್ಯದಲ್ಲಿ ಭಸ್ಮತೆಗುದುಕೊಂಡು ಹೋಗಲಿರುವರೆಂದು ತಿಳಿದು ಬರುತ್ತದೆ.

—●—

## ಹೈದರಾಬಾದವಿಷಯವಾಗಿ ಡಿಲ್ಲಿಯಲ್ಲಿ ಮಾತು ಕತೆ.

ನೈಜಾಮುನ ಸಲಹಗಾರರಾದ ಸರ್ ವಾಲ್ಟರ್ ಮಾಂಕ್‌ಟನ್‌ರವರು ಮೌಂಟ್‌ಬ್ಯಾಟನ್ ಮತ್ತು ಪಂಡಿತ ಜವಹರಲಾಲ ರೊಂದಿಗೆ ಮಾತುಕತೆ ನಡೆಯಿಸಿ ಡಿಲ್ಲಿಯಿಂದ ನಿನ್ನೆ ಹೈದರಾಬಾದಿಗೆ ಮರಳಿ ಬಂದರು.

ಅವರು ಹದಿನೇಳು ಪುಟಗಳ ಒಂದು ಉತ್ತರವನ್ನು ಇಂಡಿಯಾ ಸರಕಾರಕ್ಕೆ ಕೊಟ್ಟಿರುವರೆಂದೂ ಮತ್ತು ಇಂಡಿಯಾ ಸರಕಾರವು ಆ ವಿಷಯವಾಗಿ ವಿಚಾರ ಮಾಡಲು ಸ್ವಲ್ಪಸಮಯವನ್ನು ತೆಗೆದುಕೊಳ್ಳಬಹುದೆಂದು ತಿಳಿದು ಬರುತ್ತದೆ.

ಪರಿಸ್ಥಿತಿಯಲ್ಲಿ ಏನುವ್ಯತ್ಯಾಸವಿಲ್ಲ ಹೈದರಾಬಾದಿನ ವಿಷಯವಾಗಿ ಅಷ್ಟೇನು ಆಶಾದಾಯಕವಾದ ಪರಿಸ್ಥಿತಿಯೂ ಆಗಿರುವುದಿಲ್ಲ ಲೆಂದು ಡಿಲ್ಲಿಯಲ್ಲಿನ ರಾಜಕೀಯ ರಂಗದಿಂದ ಕಂಡುಬರುತ್ತದೆ.

178

# The Rayalaseema Bank Ltd., H. O. Bellary.

—— )0( ——

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

——]0[——

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ**
**ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
| **ಬೆಂಗಳೂರು :** ರುಕ್ಮಿಣಿ ,ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
**ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.**

**ಒಂದು ವರ್ಷ** 3¼% —— **ಎರಡು ವರ್ಷ** 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

**ಹೆಚ್. ಲಿಂಗಾರೆಡ್ಡಿ,** ಬಿ. ಎ., ಬಿ. ಎಲ್.,
**ಛೇರ್ಮನ್—ಬೋರ್ಡ್ ಆಫ್ ಡೈರೆಕ್ಟರ್ಸ್.**

**ಬಿ. ವಿ. ಶೇಷಗಿರಿರಾವ್, ಬಿ. ಕಾಂ.,**
ಕಾರ್ಯದರ್ಶಿ.


# NAVA BHARAT BELLARY.


Reg.NoM. 4746


**ನವ ಭಾರತ ಬಳ್ಳಾರಿ.**
(Nationalist Weekly)

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri……………………………………
……………………………………
……………………………………


Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್.

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಬಳ್ಳಾರಿ ಏಪ್ರೆಲ್ ೨೬ ಸೋಮವಾರ ೧೯೪೮

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

## The Socialist Party Bellary
## ಬಳ್ಳಾರಿ ಜಿಲ್ಲಾ ಸಮಾಜವಾದಿಪಕ್ಷ

ನಾಸಿಕ್‌ನಲ್ಲಿ ಕೂಡಿದ ಅಖಿಲ ಭಾರತ ಸಮಾಜವಾದಿ ಪಕ್ಷದಲ್ಲಿ ನಿರ್ಣಯವಾದಂತೆ ಬಳ್ಳಾರಿ ಜಿಲ್ಲೆಯಲ್ಲೂ ಕೂಡ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟು ಸಮಾಜವಾದಿ ಪಕ್ಷದ ಮೂಲಕವಾಗಿಯೇ ಕೆಲಸಮಾಡಲು ಯುವಕರು ಸಿದ್ಧರಿರುವರು. ಕರ್ನಾಟಕ ಪ್ರಾಂತೀಯ ಸೋಷಿಯಲಿಸ್ಟ ಪಾರ್ಟಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಭಾಸ್ಕರ ಗೋವಿಂದ ಗೋಖಲೆಯವರು ಕಳೆದವಾರ ಬಳ್ಳಾರಿಗೆ ಬಂದು ಸಮಾಜವಾದಿ ಪಕ್ಷದ ಉದ್ದೇಶ-ಧ್ಯೇಯ ನೀತಿಗಳನ್ನು ರುಹಿ ಮಹಾತ್ಮ ಗಾಂಧಿಯವರಿಗೆ ಪ್ರಿಯವಾದ ಕಿಸಾನ ಮಜದೂರ್ ಪ್ರಜಾರಾಜ್ಯ ಭಾರವನ್ನು ನಿರ್ಮಿಸುವುದೇ ಪಕ್ಷದ ಉದ್ದೇಶವೆಂದರು. ಬಹು ಸಂಖ್ಯಾಕ ಕಾಂಗ್ರೆಸ್‌ಗೆ ಸಾಕಷ್ಟು ರಚನಾತ್ಮಕ ವಿರೋಧವಿಲ್ಲದಿದ್ದರೆ (Healthy opposition) ಅದು ತಪ್ಪುದಾರಿ ಹಿಡಿಯುವ ಸಂಭವವಿದೆಯೆಂದರು.

ಕಳೆದ 19 ವರ್ಷಗಳಿಂದ ಕಾಂಗ್ರೆಸ್‌ಗೆ ದುಡಿದು 1940 ರಿಂದ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾಗಿದ್ದ ಶ್ರೀ ಅಸುಂಡಿ ತಿರುಮಲರಾಯರೇ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾಗುವ ಆಶೆಯಿದೆ.

ಈ ಕೆಳಗಿನ ಮಹನೀಯರು ಇದುವರೆಗೆ ಪಕ್ಷದ ಸದಸ್ಯರಾಗಿರುವರೆಂದು ನಮಗೆ ತಿಳಿದುಬಂದಿದೆ

| | |
|---|---|
| ಶ್ರೀ ಟಿ. ಬಿ. ಕೇಶವರಾವ್ | ಬಳ್ಳಾರಿ |
| ,, ರಮೇಶ್, ಬಿ. ಎ. ಬಿ. ಇಡಿ., | |
| ,, ರಿಯಾಜುದೀನ್, ಬಿ. ಎ., ಬಿ. ಎಲ್., | ,, |
| ,, ಕೆ. ಚನ್ನಬಸಪ್ಪ ಬಿ. ಎ. ಎಲ್. ಎಲ್. ಬಿ. | ,, |
| ,, ಭೀಮಸೇನಾಚಾರ್ | ,, |
| ,, ಭಕ್ತವತ್ಸಲನಾಯುಡು | ,, |
| ,, ರಾಮದಾಸ್ | ,, |
| ,, ಶೇಷಗಿರಿಯಾಚಾರ್ | ,, |
| ,, ಬಸವರಾಜ್ | ,, |

ಈ ಕೆಳಗಳ ಸಂಘಗಳು ಸೋಶಿಯಲಿಸ್ಟ ಪಾ... ಯ ನಾಯಕತ್ವಕ್ಕೆ ಒಳಪಟ್ಟವು.

1 ಜಿಲ್ಲಾ ಮೋಟಾರ ಕೆಲಸಗಾರರ ಸಂಘ.
2 ಮುನಿಸಿಪಲ್ ಅಲ್ಪವೇತನದ ನೌಕರರ ಸಂಘ
3 ಬಳ್ಳಾರಿ ಬೀಡಿ ಕೆಲಸಗಾರರ ಸಂಘ
4 ಬಳ್ಳಾರಿ ಹೋಟಲ ಕೆಲಸಗಾರರ ಸಂಘ
5 ಬಳ್ಳಾರಿ ಫ್ಯಾಕ್ಟರಿ ವರ್ಕರ್ಸ ಸಂಘ
6 ಬಳ್ಳಾರಿ ಸ್ಟೂಡೆಂಟ್ಸ್ ಕಾಂಗ್ರೆಸ್

(ಉಳಿದ ವ್ಯಕ್ತಿ ಮತ್ತು ಸಂಘಗಳ ಹೆಸರು ಬರು... ವಾರ ಪ್ರಕಟವಾಗಲಿವೆ).

## MAY DAY

ಅಂತರಾಷ್ಟ್ರೀಯ ಕೆಲಸಗಾರರ ದಿನವಾದ ಮೇ ... ನೆಯ ದಿನ ಬಳ್ಳಾರಿ ನಗರದ ಸಕಲ ಸಂಘಗಳ ಕೆಲ... ಗಾರರು ಸಾಂಬಮೂರ್ತಿ ಮೈದಾನದಲ್ಲಿ ಸಭೆ ಕೂಡು... ರು. ಮುಖ್ಯ ಉಪನ್ಯಾಸಗಳಾಗಲಿವೆ.

THE NAVA BHARAT
ನವಭಾರತ
ಸಂಪಾದಕ-ಟಿ.ಬಿ.ಕೇಶವರಾವ್

ಏಪ್ರೆಲ್ 26 ಸೋಮವಾರ 1948.

# ನವಕರರು-ರಾಜಕೀಯ ಜನರು

ಮದ್ರಾಸ್ ಪ್ರಧಾನ ಮಂತ್ರಿಗಳಾದ ಶ್ರೀ ಓ. ಪಿ. ರಾಮಸ್ವಾಮಿರೆಡ್ಡಿಯಾರರು ಒಂದು ಹೇಳಿಕೆ ಕೊಟ್ಟು ಸರ್ಕಾರಿ ನವಕರರನ್ನು ಒತ್ತಾಯಗೊಳಿಸಿ ರಾಜಕೀಯ ಜನರು ತಮ್ಮ ಉದ್ಯೋಗಗಳನ್ನು ನೆರವೇರಿಸಿಕೊಳ್ಳುವ ಸಲುವಾಗಿ ಸರ್ಕಾರಿ ಜನರ ಕರ್ತವ್ಯಭಾಗದಲ್ಲಿ ವ್ಯಥಾ ಕೈಹಾಕುತ್ತಿರುವರೆಂದೂ, ಅವರು ನಿರಾಕರಿಸುವುದಾದರೆ ಅವರಿಗೆ ಬೆದರಿಕೆ ಹಾಕುತ್ತಿರುವರೆಂದೂ ಸೂಚಿಸಿರುವರು ಸರ್ಕಾರಿ ನವಕರರು ಯಾರಿಗೂ ಸೊಪ್ಪು ಹಾಕದೆ ಸರ್ಕಾರದ ನಿಯಮ ನಿರ್ಣಯಗಳಿಗನುಸಾರವಾಗಿ ತಮ್ಮ ಕರ್ತವ್ಯ ಕರ್ಮದಲ್ಲಿ ಮಗ್ನರಾದರೆ ಯಾರಿಗೂ ಹೆದರಬೇಕಿಲ್ಲವೆಂದು ಅಭಯವನ್ನು ಸಹ ಇತ್ತಿರುವರು.

ಇದರಲ್ಲಿ ಗಮನಿಸಬೇಕಾದ ಕೆಲ ಮುಖ್ಯಾಂಶಗಳಿವೆ. ಸರ್ಕಾರಿ ನವಕರರನ್ನು ಒತ್ತಾಯಗೊಳಿಸಿ ಅವರನ್ನು ಹೆದರಿಸಿ ಅವರಿಂದ ಕೆಲಸ ಮಾಡಿಸಿಕೊಳ್ಳಬೇಕಾದರೆ, ಅಂಥ ವ್ಯಕ್ತಿಯು ಪ್ರತಿಭಾಶಾಲಿಯಾಗಿರಬೇಕು. ಅಂಥವನಿಗೆ ಮಂತ್ರಿಗಳ ಗಾಢ ಸ್ನೇಹವಾಗಲಿ ಸಂಬಂಧವಾಗಲಿ ಇರಬೇಕು. ಅಂಥಹ ವ್ಯಕ್ತಿಯ ಮಾತುಕೇಳಿ ಸಂಬಂಧಿಸಿದ ಅಧಿಕಾರಿಗಳನ್ನು ವಿಚಾರಣೆಗೆ ಗುರಿಪಡಿಸುವ ಇಲ್ಲವೇ ವರ್ಗಾಯಿಸುವ ಕೆಲಸವನ್ನು ಮಂತ್ರಿಗಳೇ ಮಾಡಿರುವ ಕಾರಣ ಇದಕ್ಕೆ ಕಾರಣರ್ಯಾರೆಂಬುದನ್ನು ಕಂಡುಹಿಡಿಯುವುದು ಅಷ್ಟೊಂದು ಕಷ್ಟವಲ್ಲ.

ಮದ್ರಾಸ್ ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲಿ ಇಂಥಾ ಪ್ರತಿಭಾವಂತರಾದ ರಾಜಕೀಯ ಜನರಿದ್ದಾರೆಂದು ನಂಬುವುದು ಸಾಧ್ಯವಿಲ್ಲ. ಆದರೆ ಪ್ರತಿಯೊಂದು ಜಿಲ್ಲೆಯಲ್ಲೂ ಜನತೆಯಿಂದಾರಿಸಲ್ಪಟ್ಟ ಕಾಂಗ್ರೆಸ್ ಹೆಸರಿನಿಂದ ಹೋದ ಪ್ರತಿನಿಧಿಗಳೇ ತಮ್ಮ ಹಿಂಬಾಲಕಟ್ಟಿಕೊಂಡು ಒಂದು ಆಫೀಸದಿಂದ ಮತ್ತೊಂದು ಆಫೀಸಿಗೆ ತಿರುಗುತ್ತಿರುವರು ಮದ್ರಾಸಿನ ಸೆಕ್ರೆಟರಿಯೇಟದಲ್ಲಿ ಯಾವ ಆಫೀಸಿಗೆ ಹೋದರೂ ಈ ಜನರೇ ತುಂಬಿರುವರು. ಕಾರ್ ಪರ್ಮಿಟ್, ಲಾರಿ ಪರ್ಮಿಟ್, ಪೆಟ್ರೋಲ್ ಪರ್ಮಿಟ್, ಬಟ್ಟೆ ಲೈಸನ್ಸ್, ಯಾರನ್ ಲೈಸನ್ಸ್ ಕೋಟಾಗಳಿಗಾಗಿ ಓಡಾಡಿದವರ್ಯಾರು? ಓಡಾಡುತ್ತಿರುವವರಾರು? ಈ ಶಾಸನಸಭ್ಯರು ತಮ್ಮ ಹೆಸರಲ್ಲಲ್ಲವಾದರೆ ತಮ್ಮ ಬಂಧುಗಳ ಮತ್ತು ಸ್ನೇಹಿತರ ಹೆಸರಿನಿಂದ ಅನೇಕ ಸ್ವಾರ್ಥ ಕೆಲಸಗಳನ್ನು ಮಾಡಿರುವರೆಂದೂ ಮಾಡುತ್ತಿರುವರೆಂದೂ ಆಂಧ್ರ ದೇಶದ ವೃದ್ಧ ಪಿತಾಮಹ ಕಾಂಗ್ರೆಸ್ ನಾಯಕರಾದ ಶ್ರೀ ಕೊಂಡಾ ವೆಂಕಟಪ್ಪಯ್ಯನವರು ಮಹಾತ್ಮ ಗಾಂಧಿಯವರಿಗೆ ಪತ್ರ ಬರೆದದ್ದೂ ಗಾಂಧೀಜೀಯವರು ಅದನ್ನು ಪ್ರಕಟಿಸಿದ್ದೂ ಎಲ್ಲಾ ಭಾರತೀಯರಿಗೂ ಗೊತ್ತಿದೆ. ಎಲ್ಲಾ ಶಾಸನಸಭ್ಯರೂ ತಪ್ಪುದಾರಿ ತುಳಿದಿರಲಿಕ್ಕಿಲ್ಲ. ಆದರೆ ಬಹು ಸಂಖ್ಯಾಕರು ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರೆ ಎಲ್ಲರಿಗೂ ಒಂದೇ ಪರಕೆಯ ಬಡಿತ ಬೀಳಬೇಕಾಗುತ್ತದೆ ಇದು ಸ್ವಾಭಾವಿಕ.

ಆಗಸ್ಟ 15 ರ ನಂತರ ದೇಶದ ಜನಜೀವನದಲ್ಲಿ ಆಡಳಿತದ ಕುರೀತಿಯ ಬಗ್ಗೆ ಜಿಗುಪ್ಸೆಯೂ ಅಸಹ್ಯವೂ ಹುಟ್ಟಿದೆ. ಈ ಕುಚಕ್ರದಲ್ಲಿ ಎಲ್ಲರೂ ಸಿಕ್ಕುಬಿದ್ದಿರುವರು. ನ್ಯಾಯ, ನಿಷ್ಪಕ್ಷಪಾತ, ಪ್ರಾಮಾಣಿಕತನದಿಂದ ಯಾವ ಶಾಖೆಯಲ್ಲೂ ಕೆಲಸ ನಡೆಯುವುದು ಕಷ್ಟವಾಗಿ ಹೋಗಿದೆ. ಜನರಿಗೆ ಉಪದೇಶವನ್ನು ಹೇಳುವವರು ತಮ್ಮ ಅಂತಃಸ್ಥಳವನ್ನು ಶೋಧಿಸಿ ಪರರಿಗೆ ಉಪದೇಶಿಸಿದರೆ ಅದರಿಂದ ಪರಿಣಾಮವಾದೀತು. ಮಂತ್ರಿಗಳೆಲ್ಲಾ ಐಕ್ಯಮತದಿಂದ ಖಂಡಿತವಾದಿಗಳಾಗಿ ಪ್ರಜಾಸೇವೆಯೇ ತಮ್ಮ ನಿಷ್ಠೆಯೆಂದು ವರ್ತಿಸಿ ಯಾವ ಬಲೆಗೂ ಬೀಳದಿದ್ದರೆ ಐ. ಸಿ. ಯಸ್. ಸೆಕ್ರಟರಿಗಳ, ಐ. ಸಿ. ಯಸ್. ಕಲೆಕ್ಟರರ ರಾಜ್ಯಭಾರವು ಅಂತವಾಗುತ್ತದೆ 200 ವರ್ಷಗಳ ಬ್ರಿಟಿಷ್ ರಾಜ್ಯಭಾರ ಯಂತ್ರವೇ ಈಗಲೂ ಸಾಗಿದ್ದು ಅದಕ್ಕೆ ಎಣ್ಣೆ ಹಾಕಿ ಅದನ್ನು ಚನ್ನಾಗಿ ನಡೆಸುವದರಲ್ಲಿ ಮಾತ್ರ ನಮ್ಮ ಮಂತ್ರಿಗಳು ತೊಡಗಿದ್ದಾರೆ.

# In the Court of the District Munsif of Hospet.

O. S. 20 of 1941, E. P. 155 of 1947.

**ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

Between:—

ಚಿಗವ್ವನವರ ಗಂಗವ್ವ ಪ್ರೋತಿ ಈಕೆಯಿಂದ ಟ್ರಾನ್ಸಫರ್ ಹೊಂದಿದ ಎಂ. ಪಿ. ಕೊಟ್ರಗೌಡು ತಂದೆ ವೀರಭದ್ರಗೌಡು ಜಂಗಂ, ಜಿರಾಯ್ತಿ ಸಾ॥ ಬಲ್ಲಾಹುಣಿಸಿ ....ಟ್ರಾನ್ಸಫರ್ ಡಿಕ್ರೀ ಹೋಲ್ಡರ್,

Vs.

ಸುಬ್ಬಿ ಫಕೀರವ್ವ ಗಂಡ ರುದ್ರಪ್ಪ ಮೋಜರು ಲಿಂಗಾಯಿತು, ಜಿರಾಯ್ತಿ, ಸಾ॥ ಮಾಗಳ ಹಾಲಿ ವಸ್ತಿ, ಕಡಪಟ್ಟಿ, ಶಿರಹಟ್ಟಿ ಸಂಸ್ಥಾನ. ....ಪ್ರತಿವಾದಿ.

ಮೇಲಿನ ನಂಬರಿನಲ್ಲಿ ಪ್ರೋತಿಯಾದ ಚಿಗವ್ವನವರ ಗಂಗವ್ವಗೆ ವಾರಸು ಚಿಗವ್ವನವರ ಬಿಡ್ತಪ್ಪ ತಂದೆ ಹನುಮಪ್ಪ ಬಾರಿಗ, ಜರಾಯ್ತಿ, ಸಾ॥ ತಿಪ್ಪಾಪುರ ತಾ॥ ಹಡಗಲಿ ಈತನನ್ನು ವಾರಸು ಆಗಿ ಆಕೆಯ ಬದಲು ಸೇರಿಸುವದಾಗಿ ಅರ್ಜಿದಾಖಲು ಮಾಡಿರುತ್ತಾನೆ. ಅದಕ್ಕೆ ತಕರಾರು ಇದ್ದಲ್ಲಿ 3—6—1948ನೆಯ ತೇದಿ ಹಾಜರಾಗಿ ತಕರಾರು ತಿಳಿಯುಪಡಿಸತಕ್ಕದ್ದು.

ಹೊಸಪೇಟೆ 20-4-48

ಎಂ. ರಂಗನಾಥಾಚಾರ್, ಡಿಕ್ರೀ ಹೋಲ್ಡರ್‌ರ ವಕೀಲರು.

## ಉರವಕೊಂಡ ಜಗದ್ಗುರುಗಳ ಬಳ್ಳಾರಿ ಜಿಲ್ಲಾ ಸಂಚಾರ

ಶ್ರೀ ಉರವಕೊಂಡ ಜಗದ್ಗುರುಗಳಾದ ಕರಿಬಸವ ರಾಜೇಂದ್ರರು 18ನೆಯ ತಾ॥ ಆದವಾನಿಯನ್ನು ತಲಪಿದರು. ಅಲ್ಲಿ ಅವರನ್ನು ನಗರ ಬೀದಿಗಳಲ್ಲಿ ವೈಭವದಿಂದ ಮೆರವಣಿಗೆಯಲ್ಲಿ ಒಯ್ಯಲಾಯಿತು. ಅನೇಕ ಸಂಘ ಸಂಸ್ಥೆಗಳ ಪರವಾಗಿ ಸ್ವಾಗತವಾಗಿ ಪುರಜನರ ಮಾನಪತ್ರ ಅರ್ಪಣೆಯಾಯಿತು. ಸ್ವಾಮಿಗಳು ಉತ್ತರ ರೂಪವಾಗಿ ಗಡಿನಾಡಿನ ಕನ್ನಡಿಗರು ಜಾಗೃತರಾಗಬೇಕೆಂದೂ [illegible] ಅದನ್ನು 1948ರಲ್ಲಿ ಒಪ್ಪತಕ್ಕದ್ದಲ್ಲವೆಂದೂ, ಜನರ ಭಾಷೆ ಸಂಸ್ಕೃತಿಗಳಿಗನುಸಾರವಾಗಿ ಪ್ರಾಂತರಚನೆಯಾಗಬೇಕೆಂದೂ ಹೇಳಿದರು. ಜನರ ಅಜ್ಞಾನ, ಬಡತನ, ಇತರ ಕಷ್ಟ ಪರಂಪರೆಗಳ ನಿರ್ಮೂಲಕ್ಕಾಗಿ ಕನ್ನಡ ಪ್ರಾಂತರಚನೆಯಾಗಲಿದೆಯೆಂದರು. ತೆಲುಗರು ಅಲ್ಪಸಂಖ್ಯಾಕರಾಗಿ ಕನ್ನಡಿಗರ ಹಕ್ಕುಗಳನ್ನು ಅಧಿಕಾರ ದರ್ಪದಿಂದ ಕಡೆಗಾಣಿಸುತ್ತಿರುವುದು ವಿಷಾದಕರ. ಕನ್ನಡಿಗರು ಮೈಮರೆಯಬಾರದು ಎಂದು ಎಚ್ಚರಿಕೆಯಿತ್ತರು. ಎಮ್ಮಿಗನೂರಲ್ಲಿ ಕರ್ನಾಟಕ ಸಂಘ ಮತ್ತು ವಾಚನಾಲಯಗಳವರು ಪ್ರತ್ಯೇಕ ಮಾನಪತ್ರವನ್ನರ್ಪಿಸಿ ಕನ್ನಡನಾಡ ನುಡಿಗಳಿಗೆ ಸಲ್ಲಿಸುತ್ತಿರುವ ಸ್ವಾಮೀಜೀಯವರ ಸೇವೆಯನ್ನು ಪ್ರಶಂಸಿಸಿ ಕೃತಜ್ಞತೆಯನ್ನರ್ಪಿಸಿದರು:

ಶರಣರ ವಚನಗಳಿಂದ ನುಡಿಯ ಅಮೃತವನ್ನುಣ್ಣಿಸಿ ಸಾಂಸ್ಕೃತಿಕ ದೃಷ್ಟಿಯಿಂದ ಈ ಭಾಗವೆಲ್ಲಾ ಕನ್ನಡ ನಾಡಿನಲ್ಲೇ ಸೇರಬೇಕೆಂದೂ ಇದು ಮಾತುಗಳ ಕಾಲವಲ್ಲ ಕೃತಿಯ ಕಾಲವೆಂದೂ ಆದೇಶವಿತ್ತರು. ಆಲೂರು ತಾಲೂಕು ಹೊಳಗುಂದಿ ಭಾಗ, ಆದವಾನಿ ತಾಲೂಕು ಬದನೆಹಾಳು, ಕೌತಾಳ, ಕೋಸಗಿ ಭಾಗಗಳಲ್ಲಿ ಸ್ವಾಮೀಜೀಯವರು ಸಂಚರಿಸಿ ಅಲ್ಲಿ ಮಾನಪತ್ರಗಳನ್ನು ಸ್ವೀಕರಿಸಿ ಉಚಿತ ಉಪದೇಶವಿತ್ತು ಕನ್ನಡಿಗರಲ್ಲಿ ಅದ್ಭುತಕ್ರಾಂತಿಯನ್ನು ಮಾಡಿ ಉರವಕೊಂಡಕ್ಕೆ ಮರಳಿದರು

## ಕಾಶ್ಮೀರ.

ಕಾಶ್ಮೀರನ ಜನಮತವನ್ನು ದೊರಕಿಸಲು ಭದ್ರತಾಮಂಡಳದವರು ಮತ್ತೆ ಹೊಸ ಸೂಚನೆಗಳನ್ನು ಮಾಡಿರುವರು, ಇವು ಪಾಕಿಸ್ತಾನಕ್ಕೇ ಅನುಕೂಲವಿರುವ ಕಾರಣ ಅವುಗಳನ್ನು ಭಾರತ ಪ್ರತಿನಿಧಿ ಮಂಡಳವು ನಿರಾಕರಿಸಿದೆ.

## ರಾಕ್ಷಸರ ಕೃತ್ಯ

ಕಾಶ್ಮೀರದಲ್ಲಿ ರಾಜೌರಿ ಎಂಬ ನಗರದಿಂದ ಕಾಲ್ತೆಗೆಯಬೇಕಾದರೆ ನಗರವನ್ನೆಲ್ಲಾ ಸುಟ್ಟು ಬೂದಿಮಾಡಿ, ಸಾವಿರಾರು ಸ್ತ್ರೀಯರನ್ನು ದಾಳಿಗಾರರು ಕದ್ದೊಯ್ದಿರುವರು. ಈ ವಿಷಯವನ್ನು ಸಹ ಭದ್ರತಾಮಂಡಳದಲ್ಲಿ ನಿವೇದಿಸಲಾಯಿತು.

# ಸಾಥೀ ಜಯಪ್ರಕಾಶ ನಾರಾಯಣರ ಎಚ್ಚರಿಕೆ.

### ಸೋಶಿಯಲಿಸ್ಟ್ - ಕಮ್ಯೂನಿಸ್ಟರಿಗಿರುವ ಭೇದ.

## ಸೋಶಿಯಲಿಸ್ಟರ ನೀತಿ ಧ್ಯೇಯ ತತ್ವಗಳು

### ಎಡಪಕ್ಷಗಳ ಒಕ್ಕಟ್ಟು

ಎಡಪಕ್ಷಗಳ ಒಕ್ಕಟ್ಟಿನ ಪ್ರಶ್ನೆಯ ಬಗ್ಗೆ ನಾನು ಕೆಲ ಮಾತು ಹೇಳಬಯಸುವೆ. ಪಾರ್ಟಿಯ ಪುನರ್ನಿರ್ಮಾಣವಾದನಂತರ ಎಷ್ಟೋ ಪಾರ್ಟಿ ಸಭೆಗಳಲ್ಲಿ ಈ ಮಾತು ಎದ್ದಿದೆ, ಅಲ್ಲದೆ ನಮ್ಮ 'ಸಿದ್ಧಾಂತ ನಿರೂಪಣೆ'ಯಲ್ಲಂತೂ ಕಮ್ಯೂನಿಸ್ಟ್ ಪಾರ್ಟಿಯೊಡನೆ ನಮ್ಮ ಸಂಬಂಧದ ಬಗ್ಗೆ ಸ್ಪಷ್ಟ ನಿರ್ದೇಶವೇ ಇದೆ. ಇತ್ತೀಚೆಗೆ ಪಟ್ನಾದಲ್ಲಿ ಸುಮಾರು ಹದಿನೆಂಟು ಎಡಪಕ್ಷಪಂಗಡಗಳ ಸಭೆಯೊಂದು ನಡೆದು ಒಂದು ರೀತಿಯ ಐಕ್ಯವೂ ಆಯಿತಂತೆ ಅಂತಲೇ ಈ ಪ್ರಶ್ನೆ ಮತ್ತೆ ಎದ್ದಿದೆ ಮತ್ತು ನಮ್ಮ ಪಾರ್ಟಿಯ ಸದಸ್ಯರಿಗಂತೂ ತಮ್ಮ ನಿಲುವೆಯ ಬಗ್ಗೆ ನಿರ್ದೇಶ ಇಲ್ಲವಾಗಿದೆ. ನಾನು ಈ ಎಡಪಕ್ಷಗಳ ಒಕ್ಕಟ್ಟಿನ ಪ್ರಶ್ನೆಯನ್ನು ಎರಡು ವಿಭಾಗ ಮಾಡಿ ವಿವೇಚಿಸಲಿಚ್ಛಿಸುವೆ: 1) ಕಮ್ಯುನಿಸ್ಟ ಪಾರ್ಟಿಯೊಡನೆ ಐಕ್ಯ 2) ಮತ್ತು ಉಳಿದ ಎಡಪಂಗಡಗಳೊಡನೆ ಐಕ್ಯ.

ಕಮ್ಯುನಿಸ್ಟ ಪಾರ್ಟಿಯ ಮಟ್ಟಿಗೆ ಹೇಳುವುದಾದರೆ ನಮ್ಮ ಧೋರಣೆ ನಿಸ್ಸಂದಿಗ್ಧವೇ ಇದೆ. ನಮ್ಮ ನೀತಿಯ ತಳದಲ್ಲಿ ಜಗತ್ತಿನ ಘಟನೆಗಳೇ ಅಡಿಗಲ್ಲಾಗಿವೆ. ಕಮ್ಯುನಿಸ್ಟ ಪಾರ್ಟಿಗಳೆಲ್ಲ ರಷ್ಯಾದ ಅಧೀನ ಸಂಸ್ಥೆಗಳೆಂಬುದಕ್ಕಂತೂ ಇಂದಿನ ಇತಿಹಾಸವೇ ಸಾಕ್ಷಿ—ಜೆಕೋಸ್ಲೋವಾಕಿಯದ ಘಟನೆಗಳಿಂದಲೂ ಕಣ್ಣು ತೆರೆಯಲಾಗದಿದ್ದವರು ತಿಳಿದೂ ತಿಳಿದೂ ಕಮ್ಯುನಿಸ್ಟರ ಕೈಗೊಂಬೆಗಳೇ ಸರಿ.

### ರಷ್ಯದ ಏಜೆಂಟರು

ಪರದೇಶವೊಂದರ ಪಂಚಮದಳದವರೊಡನೆ ಐಕ್ಯತೆ ಬೆಳೆಸುವುದು ಸಾಧ್ಯವೇ? ಪರದೇಶದೊಡನೆ ಬೇಕಿದ್ದರೆ ಅತ್ಯಂತ ಹೆಚ್ಚಿನ ಸೌಹಾರ್ದ ಬೆಳೆಸೋಣ, ಆದರೆ ಪರದೇಶದ ಏಜೆಂಟರ ಗೌರವ, ಪ್ರಭಾವ ಬೆಳೆಸಲು ನಾವು ಕಾರಣರಾದೆವೆಂದರೆ ನಮ್ಮ ದೇಶದ ಸ್ವಾತಂತ್ರ್ಯವನ್ನೇ ಮಾರಿಕೊಂಡಂತೆ.

### ಕಮ್ಯುನಿಸ್ಟ್ ಪ್ರಜಾತಂತ್ರ

ಜಗತ್ತಿನ ಇತ್ತೀಚಿನ ಘಟನೆಗಳು ಕಮ್ಯುನಿಸ್ಟರ "ಪ್ರಜಾತಂತ್ರ"ದ ಸವಿಯನ್ನೂ ನಮಗೆ ನೀಡಿವೆ. ನಾವು ಕಮ್ಯುನಿಸ್ಟರೊಡನೆ ನಿಷ್ಠೆಯ ಪ್ರಶ್ನೆಯೊಂದರ ಮಟ್ಟಿಗಷ್ಟೇ ಅಲ್ಲದೆ, ಧ್ಯೇಯದ ಕಲ್ಪನೆಯಲ್ಲಿಯೂ ಬೇರೆಯೆಂದು ನಮ್ಮ 'ಸಿದ್ಧಾಂತ ವಿವೇಚನೆ'ಯಲ್ಲಿ ಸ್ಪಷ್ಟಪಡಿಸಿದ್ದೇವೆ. ನಮ್ಮ ಗುರಿ ಪ್ರಜಾತಾಂತ್ರಿಕ ಸಮಾಜವಾದವಾದರೆ ಕಮ್ಯುನಿಸ್ಟರದು ನಿರಂಕುಶ ಏಕತಂತ್ರಾಧಿಕಾರ. ಹೀಗೆಂದು ಹೇಳಿದಲ್ಲಿ ಕಮ್ಯುನಿಸ್ಟರು ತಮ್ಮದೇ ಬೇರೆ ರೀತಿಯ ಪ್ರಜಾತಂತ್ರವಿದೆಯೆಂದು ವಾದಿಸುತ್ತಾರೆ. ಆ ಪ್ರಜಾತಂತ್ರದ ವಿರಾಟ್ ಸ್ವರೂಪ ಎಂಥದೆಂಬುದು ಜೆಕೋಸ್ಲೋವಾಕಿಯಾದಲ್ಲಿ ಮತ್ತೊಮ್ಮೆ ಬೆಳಗತೊಡಗಿದೆ. ಪ್ರೊ. ಲಾಸ್ಕಿ ತಮ್ಮ ಆಶಾಭಂಗವಾದುದನ್ನು ನೋಡಿಕೊಳ್ಳುತ್ತ ಈ 'ಪ್ರಜಾತಂತ್ರ' (!)ದ ಮಾದರಿಯನ್ನು ವರ್ಣಿಸಿದ್ದಾರೆ, ಮತ್ತು ಕಾಲಚಕ್ರದ ಓಟದಿಂದಲೂ ಎಲ್ಲವೂ ಬಟ್ಟಬಯಲಾಗಿ ಕಾಣತೊಡಗಿದೆ. ಕಮ್ಯುನಿಸ್ಟರ ಪ್ರಜಾತಂತ್ರದಲ್ಲಿ ಜಾನ್ ಮಸಾರಿಕ್‌ರಂಥ ಪ್ರಜಾತಂತ್ರವಾದಿಗೂ ಅದರ ದುರ್ಗಂಧ ತಡೆಯದಷ್ಟು ಪರಿಪೂರ್ಣತೆ ತುಂಬಿದೆ! ರಾಷ್ಟ್ರಾಧ್ಯಕ್ಷ ಬೆನೆಸ್‌ರಂಥವರೂ ಸ್ವತಂತ್ರರಾಗಿರುವುದು ಶಕ್ಯವಿಲ್ಲ!

ಸೋಷಲಿಸ್ಟ ಮತ್ತು ಕಮ್ಯುನಿಸ್ಟ ಪಾರ್ಟಿಗಳ ನಡುವಿನ ಅಂತರ ಮತ್ತೊಂದೂ ಉಂಟು. ಅದು ಸಾಧನ ಅಥವಾ ಮಾರ್ಗಗಳಿಗೆ ಸಂಬಂಧಿಸಿದುದ, ನಮ್ಮ ಸಿದ್ಧಾಂತ ವಿವೇಚನೆಯಲ್ಲಿ ಇದನ್ನೂ ತಿಳಿಸಿದ್ದೇವೆ.

ಮತ್ತು ಜೆಕೊಸ್ಲೊವಾಕಿಯಾದ ಉದಾಹರಣೆಗೆ ಹೊರಳಿದಲ್ಲಿ ಅಲ್ಲಿ ಕಮ್ಯೂನಿಸ್ಟರ ತಂತ್ರ, ವಿಧಾನಗಳು ಕಣ್ಣಿದ್ದವರಿಗೆಲ್ಲಾ ಕಂಡುಬರದಿರದು. ನಮ್ಮ ದೇಶದಲ್ಲಿಯೂ ಅದೇ ವಿಧಾನಗಳೇ ಬಯಲಿಗೆ ಬರಹತ್ತಿವೆ. ನಮ್ಮ ಪಾರ್ಟಿಯ ಬಗ್ಗೆ ಕಮ್ಯೂನಿಸ್ಟರ ಪತ್ರಿಕೆಗಳಲ್ಲಿಯೂ ಅವರ ಇತರ ಕ್ಷೇತ್ರಗಳಲ್ಲಿಯೂ ಸುಳ್ಳುಪ್ರಚಾರದ ಕಾರ್ಯಭಾರ ಭರದಿಂದ ಸಾಗಹತ್ತಿವೆ. ರೇಲ್ವೆ ಕೆಲಸಗಾರರ ಫೆಡರೇಶನ್ನಿನ ಅಧ್ಯಕ್ಷನಾಗಿರುವ ನನಗಂತೂ ಇಂಥ ಅಪಪ್ರಚಾರದ ಪೂರ್ಣ ಸವಿ ಸಿಕ್ಕಿದೆ. ಕಮ್ಯೂನಿಸ್ಟರು ಎಂದಿನವರೆಗೆ 'ನೆಹರೂ ಸರ್ಕಾರ್ ಜಿಂದಾಬಾದ' ಎಂದು ಕೂಗುತ್ತಿದ್ದರೋ ಅಂದಿನವರೆಗೆ ರೇಲ್ವೆ ಬೋರ್ಡಿನೊಡನೆ ಆದ ಪ್ರತಿಯೊಂದು ಒಪ್ಪಂದವನ್ನೂ ಭಾರಿ ವಿಜಯವೆಂದು ಸ್ವಾಗತಿಸುತ್ತಿದ್ದರು. ಈಗ ಅವರ ನೀತಿಯೆಲ್ಲಾ ತಲೆಕೆಳಗಾಗಿ ಬಿದ್ದಿರುವುದರಿಂದ ಹಿಂದ್ ರಾಷ್ಟ್ರದ ಬುಡಕ್ಕೇ ಕೊಡಲಿಪೆಟ್ಟು ಹಾಕುವ ಯತ್ನದಲ್ಲಿದ್ದಾರೆ. ಹಿಂದಿನ ಒಪ್ಪಂದಗಳಿಗಿಂತ ಕಡಿಮೆ ಉದಾರವಲ್ಲದ ಒಪ್ಪಂದಗಳನ್ನೂ ಕಾರ್ಮಿಕರ ದ್ರೋಹವೆಂಬುದಾಗಿಯೂ, ರೇಲ್ವೆ ಬೋರ್ಡಿನವರು ನನ್ನನ್ನು ಲಂಚದಿಂದ ಕೊಂಡುಕೊಂಡುಬಿಟ್ಟಿರುವರೆಂಬುದಾಗಿಯೂ ಅಪಪ್ರಚಾರ ಮಾಡುತ್ತಿದ್ದಾರೆ. ಎಡಪಕ್ಷಗಳ ಒಕ್ಕಟ್ಟಿನ ಕೂಗನ್ನು ಕೂಗುವುದೊಂದೆಡೆ, ಇಂಥ ಅಪಪ್ರಚಾರ ಮತ್ತೊಂದೆಡೆ— ಇದೇ ಕಮ್ಯೂನಿಸ್ಟ ಪಾರ್ಟಿಯ ನೀತಿ! ನಮ್ಮ ತಂತ್ರಕ್ಕೂ ಕಮ್ಯೂನಿಸ್ಟರ ತಂತ್ರಕ್ಕೂ ಏನೊಂದೂ ಸಾಮಾನ್ಯ ಅಂಶ ಇರುವುದು ಸಾಧ್ಯವಿಲ್ಲ.

ಸೋಶಲಿಸ್ಟ ಪಾರ್ಟಿಯು ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರಾತ್ಮಕ ಸಮಾಜವಾದದಲ್ಲಿ ಅಚಲನಿಷ್ಠೆ ಇಟ್ಟಿರುವುದೇ ಆದಲ್ಲಿ ಕಮ್ಯೂನಿಸ್ಟ ಪಾರ್ಟಿಯೊಡನೆ ಐಕ್ಯ ಬೆಳೆಸುವ ವಿಚಾರವನ್ನಂತೂ ಮರುಮಾತಿಲ್ಲದೆ ಕಠೋರವಾಗಿ ತಳ್ಳಿಹಾಕಿಬಿಡಬೇಕೆಂಬುದೇ ನನ್ನ ನಿರ್ಣಯ.

## ಎಚ್ಚರಿಕೆ!

ಈ ಸಂದರ್ಭದಲ್ಲಿ ನಿಮಗೆ ನನ್ನದೊಂದು ಎಚ್ಚರಿಕೆ, ಕಮ್ಯೂನಿಸ್ಟರು ನಮ್ಮ ಪಾರ್ಟಿಯ ಪ್ರಜಾತಂತ್ರ ರಚನೆಯನ್ನು ದುರುಪಯೋಗಪಡಿಸಿಕೊಂಡು ನಮ್ಮ ಪಾರ್ಟಿಯೊಳಗೆ ಒಳಹೋಗುವ ಸಂಭವವುಂಟು. ಒಳಹೊಕ್ಕು ತಮ್ಮ ಕೈಗೊಂಬೆಗಳಾದವರನ್ನು ಇಲ್ಲಿ ನೆಲೆಗೊಳಿಸಬಹುದು, ನಮ್ಮ ಪಾರ್ಟಿಯಲ್ಲಿ ಒಡಕು ಹುಟ್ಟಿಸಿಯಾರು, ಕೊನೆಯದಾಗಿ ಬೇಧಿಸಿ ಪುಡಿಪುಡಿಮಾಡಿಬಿಟ್ಟಾರು, ಎಚ್ಚರಿಕೆ! ನೀವು ಎಚ್ಚರ ತಪ್ಪಿದಲ್ಲಿ, ಅವರ ಪಾದಸರಣಿಗೆ ಮೋಸಹೋದಲ್ಲಿ, ಅವರ ಪ್ರಾಮಾಣಿಕತನದಲ್ಲಿ ನಿಮಿಷ ಮಾತ್ರವಾಗಲೀ ವಿಶ್ವಾಸವಿಟ್ಟಿದ್ದಾದರೆ ನೀವು ನಮ್ಮ ಪಾರ್ಟಿಯ ವಿನಾಶದ ಮಹಾದ್ವಾರವನ್ನು ಮುಕ್ತಮಾಡಿದಂತೆಯೇ ಸರಿ. ನಿಮ್ಮಲ್ಲಿ ಪ್ರತಿಯೊಬ್ಬರೂ ಎಚ್ಚರದಿಂದಿರಿ, ಜನತೆಗೆ ಕಮ್ಯೂನಿಸ್ಟರ ವಿಪತ್ತನ್ನು ಮನಗಾಣಿಸಿಕೊಡಿ. ಅವರು ಪೂರ್ವದೇಶಗಳ 'ಕೋಮಿನ್‌ಫಾರ್ಮ್" ರಚಿಸುವ ಚಿಹ್ನೆಗಳಿವೆ. ಆದರಿಂದಾಗಿ ಕಮ್ಯುನಿಸ್ಟ ಗಂಡಾಂತರ ಇನ್ನೂ ಹೆಚ್ಚು ಇದೆಯೆಂದೇ ತಿಳಿಯಿರಿ.

ಆಗಸ್ಟ 15 ರ ತರುವಾಯ ನಮ್ಮ ಪಾರ್ಟಿಯ ಕಾರ್ಯ ಪ್ರಧಾನವಾಗಿ ನಿರ್ಮಾಣಕಾರ್ಯ. ನಾವೊಂದು ನೂತನ ಭಾರತವನ್ನು ಕಟ್ಟಬೇಕಾಗಿದೆ. ಆದರೆ ಕಮ್ಯೂನಿಸ್ಟರಾದರೋ ಯಾವುದನ್ನೂ ಕಟ್ಟುವುದರಲ್ಲಿ ಆಸ್ಥೆಯುಳ್ಳವರಲ್ಲ, ದಂಗೆ, ದೊಂಬಿಗಳೆಬ್ಬಿಸಿ ತಮ್ಮ ಪಾರ್ಟಿಯನ್ನು ಮುಂದೆ ತರುವುದೊಂದೇ ಅವರ ಉದ್ದೇಶ. ಭಾರತ ರಾಷ್ಟ್ರವನ್ನು ದುರ್ಬಲಗೊಳಿಸುವುದೇ ಅವರ ಗುರಿ. ಶಕ್ತಿಶಾಲೀ ಭಾರತ ರಾಷ್ಟ್ರವೊಂದು ಜಗತ್ತಿನ ಮೂರನೆಯ ಪ್ರಬಲ ಗುಂಪಿನ ಕೇಂದ್ರಸ್ಥಾನವಾಗುವುದು ಕಮ್ಯೂನಿಸ್ಟರಿಗೆ ಬೇಕಾಗಿಲ್ಲ, ಅಂತಲೇ ಅವರು ದೇಶದ ಪುನರ್ನಿರ್ಮಾಣವನ್ನು ತಡೆಗಟ್ಟಲು ತಮ್ಮಿಂದ ಸಾಧ್ಯವಿದ್ದುದನ್ನೆಲ್ಲ ಎಸಗುತ್ತಾರೆ. ಕಮ್ಯೂನಿಸ್ಟರ ಬಗ್ಗೆ ಇಷ್ಟು ಸಾಕು.

## ಉಳಿದ ಪಕ್ಷ—ಪಂಗಡಗಳು

ಉಳಿದ ಎಡಪಕ್ಷಪಂಗಡಗಳ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಗುಂಪಿನ ಕಾರ್ಯಕ್ರಮಗಳನ್ನೂ, ಧೋರಣೆಯನ್ನೂ ವಿಮರ್ಶಿಸಿದ ಮೇಲೆಯೇ ಒಕ್ಕಟ್ಟಿನ ಪ್ರಶ್ನೆ ಬಿಡಿಸಲಾದೀತು. ದೇಶದಲ್ಲಿಯಾದರೋ ಕೆಲವು ಎಡಪಕ್ಷಗಳು ಕಮ್ಯೂನಿಸ್ಟರೊಡನೆ ನಾಮಮಾತ್ರದಿಂದ ವಿಭಿನ್ನವಿರುವ ಪಕ್ಷಗಳಾಗಿವೆ. ಈ ಗುಂಪುಗಳೂ ನಿರಂಕುಶಾಧಿಕಾರದ ಗುರಿಯನ್ನೂ ಕಮ್ಯೂನಿಸ್ಟರ ನೀತಿಗೇಡಿ ಸಾಧನಗಳನ್ನೂ ಪೂರಾ ಸಮರ್ಥಿಸುತ್ತವೆ. ಕಮ್ಯೂನಿಸ್ಟರಿಗೂ ಅವರಿಗೂ ಇರುವ ಒಂದೇ ಅಂತರವೆಂದರೆ ಅವರು ಸ್ಟಾಲಿನ್ನನನ್ನು ತಮ್ಮ ದೇವರೆಂದು ಪೂಜಿಸುವುದಿಲ್ಲ, ಆದರೆ ಇವುಗಳಿಗೂ ಬೇರೆ ಬೇರೆ ಅಧಿದೇವತೆಗಳು ಇದ್ದೇ

ಇವೆ. ರಷ್ಯಾದೊಡನೆ ಇವುಗಳ ಧೋರಣೆಯಾದರೂ ಗುಲಾಮಗಿರಿಗಿಂತ ಸ್ವಲ್ಪ ಕಡಿಮೆಯಾದುದು—ಅಷ್ಟೆ. ಇದೂ ಅಲ್ಲದೆ ನಮ್ಮ ದೇಶದ ಇಂದಿನ ಪರಿಸ್ಥಿತಿಯ ವಿವೇಚನೆಯ ವಿಷಯದಲ್ಲಿಯೂ ನಮ್ಮ ಪಾರ್ಟಿಯ ಧೋರಣೆಯಿಂದ ಈ ಪಾರ್ಟಿಗಳು ಮೂಲಭೂತವಾಗಿಯೇ ಭಿನ್ನವಾಗಿವೆ. ಉದಾಹರಣೆಗಾಗಿ ಈ ಪಂಗಡಗಳು ನೆಹರೂ ಸರಕಾರ "ಕೆರೆನ್ಸ್ಕಿ" ಸರಕಾರವಿದ್ದಂತೆಂದೂ, ಅದನ್ನು ಹಿಂಸಾತ್ಮಕ ಸಾಧನಗಳಿಂದ ಉರುಳಿಸಬೇಕೆಂದೂ ಪ್ರತಿಪಾದಿಸುತ್ತಿವೆ—ಆ ಕಾರ್ಯದಲ್ಲಿ ತೊಡಗಿಯೂ ಇವೆ. ಅಂದಮೇಲೆ ಇಂಥ ಗುಂಪುಗಳೊಡನೆ ಐಕ್ಯ ಎಂತು ಸಾಧ್ಯ?

## ಒಕ್ಕಟ್ಟಿನ ಒಂದೇದಾರಿ

ಎಡಪಕ್ಷಗಳೆಲ್ಲ ಒಂದಾಗಿ ಬಲ ಪಕ್ಷಗಳನ್ನು ಇದುರಿಸಿ ಸೋಲಿಸುವಷ್ಟು ಶಕ್ತಿಗಳಿಸಬೇಕಾದರೆ ಮತ್ತು ರಾಷ್ಟ್ರದ ರಾಜಕಾರಣದಲ್ಲಿ ಯಶಸ್ವೀ ಪಾತ್ರ ವಹಿಸಬೇಕಾದರೆ ಒಂದೇ ಒಂದು ಮಾರ್ಗವಿದೆಯೆಂದು ನಾನು ಎಂದಿನಿಂದಲೂ ನಂಬಿದ್ದೇನೆ, ಆ ಅಭಿಪ್ರಾಯ ಬದಲಾಗಲು ಇಂದೂ ಏನೂ ಕಾರಣಗಳಿಲ್ಲ. ಅನೇಕ ಹೆಸರಿನ ಗೊಡ್ಡು ತತ್ವಗಳ ಸಡಿಲವಾದ ಕಲಸು ಮೇಲೋಗರದಿಂದಾಗಿ ಜನತೆಗೆ ಬೇಕಾದ ಐಕ್ಯತೆಯ ದಿಗ್ದರ್ಶನ ಸಿಕ್ಕಲಾರದು. ಹಾಗಾದಲ್ಲಿ ಮತಭೇದಗಳೂ, ಅಸಹನೆಯೂ ಹೆಚ್ಚಾಗಿ ಎಂದೆಂದಿಗೂ ದೌರ್ಬಲ್ಯದ ಕಾರಣವಾಗಿ ಉಳಿದೀತು. ಯಾವುದೇ ಮೂಲಭೂತ ತತ್ವದಿಂದಾದರೂ ಐಕ್ಯಭಂಗವಾಗಿ ಹೋದೀತು, ಎಡ ಪಕ್ಷಗಳು ನಿಜವಾಗಿಯೂ ರಾಜಕೀಯ ಶಕ್ತಿಯಾಗಬೇಕಾದರೆ ಒಂದೇ ಒಂದು ಪಾರ್ಟಿಯ ಆಶ್ರಯದಲ್ಲಿ ಒಂದುಗೂಡುವುದು ಅಗತ್ಯ. ಅಂಥ ಪಕ್ಷಕ್ಕೆ ಜನತೆಯನ್ನು ಒಂದೇ ವಿಚಾರಧಾರೆಯ ಮತ್ತು ಕಾರ್ಯಕ್ರಮದ ಪ್ರಕಾರ ನಡೆಸಿಕೊಂಡು ಹೋಗುವ ಸಾಮರ್ಥ್ಯ ಇರತಕ್ಕದ್ದು. ಯಾವುದೇ ಬಗೆಯ ಪಕ್ಷಪಾತವಿಲ್ಲದೆ, ಸತ್ಯ ಸಂಗತಿಯನ್ನು ಪ್ರಕಟಿಸಬೇಕಾದರೆ ಸೋಷಲಿಸ್ಟ್ ಪಾರ್ಟಿಯೊಂದೇ ಅಂಥ ಪಾತ್ರ ನಿರ್ವಹಿಸಬಲ್ಲುದು. ನಾವು ಸ್ವತಂತ್ರ ಪಕ್ಷವಾಗಿ ಹೊರಬೀಳಲಿರುವ ಈ ಸನ್ನಿವೇಶದಲ್ಲಿ ನಮ್ಮ ಪಾರ್ಟಿಯ ಮೂಲಭೂತ ಸಿದ್ಧಾಂತಗಳನ್ನು ಒಪ್ಪುವ ಎಲ್ಲ ಎಡ ಪಕ್ಷಗಳನ್ನೂ ಪಂಗಡಗಳನ್ನೂ ಆಹ್ವಾನಿಸಿ ದೇಶದಲ್ಲಿ ಏಕೈಕ ಶಕ್ತಿಶಾಲೀ ಸಮಾಜವಾದೀ ಚಳುವಳಿಯನ್ನು ನಿರ್ಮಿಸಲು ನೆರವಾಗಿರೆಂದು ಬೇಡಿಕೊಳ್ಳಬಹುದು, ನಮ್ಮೊಡನೆ ಐಕ್ಯವಾಗಲಿಚ್ಛಿಸುವ ಎಲ್ಲ ಎಡಪಕ್ಷದವರನ್ನೂ ತೆರೆದ ತೋಳುಗಳಿಂದ ಸೋಷಲಿಸ್ಟ್ ಪಾರ್ಟಿ ಸ್ವಾಗತಿಸುವುದರಲ್ಲಿ ಸಂಶಯವಿಲ್ಲ.

## ಉಪಸಂಹಾರ

ನಾನು ನಿಮ್ಮ ಮುಂದ ನೂತನ ಪಾರ್ಟಿಯ ರಚನೆಯ ಬಗ್ಗೆ ಕೆಲ ಸೂಚನೆಗಳನ್ನಿಡಬೇಕೆಂದು ಬಯಸಿದ್ದೆ ಆದರೆ ಅದು ಸಾಧ್ಯವಾಗಲಿಲ್ಲ. ಇಡೀ ಪಾರ್ಟಿಯ ಅಂಗರಚನೆಯೇ ಬದಲಾಗಬೇಕೆಂದು ಮಾತ್ರ ಇಲ್ಲಿ ಹೇಳುವೆ ಆ ಬದಲಾವಣೆಯಿಂದಾಗಿ ನಮ್ಮ ಪಾರ್ಟಿ ಜನತೆಯ ಪಾರ್ಟಿಯಾಗಬೇಕು, ಸಂಘಟಿತ ಜನತೆಯ ಪೂರ್ಣ ಪ್ರತಿನಿಧಿ ಆದಾಗಬೇಕು. ಈ ವಿಷಯದಲ್ಲಿ ಕೈಕೊಳ್ಳಬೇಕಾದ ಕ್ರಮಗಳನ್ನು ನೀವು ಸೂಚಿಸಿರಿ, ಹಾಗೂ ಪಾರ್ಟಿಗೊಂದು ನೂತನ ಅಂಗರಚನೆಯನ್ನು ಸಿದ್ಧಗೊಳಿಸೋಣ.

ರಾಷ್ಟ್ರದ ಸಮಸ್ಯೆಗಳನ್ನಾಗಲೀ, ನಮ್ಮ ಧೋರಣೆಯನ್ನಾಗಲೀ ಚರ್ಚಿಸಲು ನಾನಿಲ್ಲಿ ಎಳಸಿಲ್ಲ ಈ ಅಧಿವೇಶನದ ಮುಂದೆ ಬರುವ ನಿರ್ಣಯಗಳಲ್ಲಿ ಅವುಗಳ ಚರ್ಚೆ ನಡೆದೀತು. ನಾನು ನನ್ನ ಮತವನ್ನು ಕೇಳಿಸಿರುವ ಅಂಶಗಳ ಬಗ್ಗೆ ಮಾತ್ರ ವಿವೇಚಿಸಿದ್ದೇನೆ. ನನ್ನ ಭಾವನೆಗಳನ್ನೂ ನಿಮ್ಮೆದುರಿಗೆ ತೋಡಿಕೊಂಡಿದ್ದೇನೆ ನಾ ಹೇಳಿರುವುದನ್ನೆಲ್ಲಾ ನೀವು ಸಮರ್ಥಿಸೀರೆಂಬುದಾಗಿ ಹೇಳುವುದು ನನಗೆ ಎಟುಕದ ಕೆಲಸ, ಆದರೂ ನಿಮ್ಮ ಮುಂದೆ ತೆರೆದಿಟ್ಟಿರುವ ವಿಚಾರಗಳಿಗೆ ತಕ್ಕಷ್ಟು ಪರ್ಯಾಲೋಚನೆ ಸಿಕ್ಕೀತೆಂದು ಮಾತ್ರ ನಾನು ಆಶಿಸುತ್ತೇನೆ

---

—ಹೈದರಾಬಾದ ಸಂಸ್ಥಾನವನ್ನು ಭಾರತ ಪಕ್ಕೂಟದಲ್ಲಿ ಸೇರಿಸಿ ಆಯಾ ಭಾಗಗಳನ್ನು ಆಂಧ್ರ-ಕನ್ನಡ-ಮಹಾರಾಷ್ಟ್ರ ಭಾಗಗಳಲ್ಲಿ ಹಂಚಬಡಬೇಕೆಂದು ಸಮಾಜವಾದಿ ಮುಖಂಡರಾದ ಜಯಪ್ರಕಾಶ ನಾರಾಯಣರು ಮದ್ರಾಸಿನ ಭಾಷಣವೊಂದರಲ್ಲಿ ಹೇಳಿದರು.

**ಒರಿಸ್ಸಾ ರಾಜಧಾನಿ 90 ಅಡಿ ಗಾಂಧಿ ಪ್ರತಿಮೆ**

—ಒರಿಸ್ಸಾ ರಾಜಧಾನಿ ಭುವನೇಶ್ವರದಲ್ಲಿ ಒಂದೇ ಕಲ್ಲಿನಲ್ಲಿ ಕೊರೆಯಲ್ಪಟ್ಟ 90 ಅಡಿ ಎತ್ತರದ ಮಹಾತ್ಮರ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಈ ರಾಜಧಾನಿ ಮತ್ತು ವಿಗ್ರಹದ ಶಂಕುಸ್ಥಾಪನೆಯನ್ನು ಪಂ: ನೆಹರೂರವರು ನೆರವೇರಿಸಿದರು.

# ನಮಗೆ "ಸುರಾಜ್ಯ" ಬೇಕು

ಲೇ:—"ವಿಚಾರಿ"

"ರೈತರ ರಾಜ್ಯ ಸ್ಥಾಪಿಸುವುದು ಹೇಗೆ?" ಎಂಬ ಬಗ್ಗೆ ಶ್ರೀ ಮಣಿಲಾಲ ನಾನಾವಟ್ಟಿಯವರ ವಿಚಾರಗಳು ಪ್ರಸಿದ್ಧವಾಗಿವೆ.

ಜಗತ್ತಿನ ಯಾವ ಭಾಗದಲ್ಲಿಯೇ ನೋಡಲಿ, ಇತಿಹಾಸದ ಯಾವ ಪುಟವನ್ನೇ ತಿರುವಿ ಹಾಕಲಿ, ಜನತೆಗೆ ಇಂಥ ಒಂದು ವರ್ಗದ ಅಥವಾ ಜಾತೀಯ ಅಥವಾ ವಯಸ್ಸಿನ ಅಥವಾ ಲಿಂಗದವರಿಂದಲೇ ನಡೆಸಲ್ಪಡುವ ರಾಜ್ಯಕಾರಭಾರವು ಬೇಕೆಂಬ ಬಗ್ಗೆ ಕೂಗು ಎಲ್ಲಿಯೂ ಕೇಳಬರುವದಿಲ್ಲ. ಜನತೆಗೆ ಬೇಕಾದುದು ಸುರಾಜ್ಯ. ಎಲ್ಲರಿಗೂ ಅನ್ನ, ವಸ್ತ್ರ, ಆರೋಗ್ಯ, ಶಿಕ್ಷಣ, ಸಾಮಾಜಿಕ ಸ್ಥಾನ, ಶಾಂತಿ, ಸುರಕ್ಷಿತತೆಗಳನ್ನು ಕೊಡಲು ಸಮರ್ಥವಿರುವ ಸರಕಾರವು ಬೇಕು. ರೈತರ ರಾಜ್ಯ ಸ್ಥಾಪಿಸಬೇಕು. ಕೂಲಿಕಾರ ರಾಜ್ಯ ಸ್ಥಾಪಿಸಬೇಕು, ಹರಿಜನರ ರಾಜ ಸ್ಥಾಪಿಸಬೇಕು, ಅಲ್ಪಸಂಖ್ಯಾಕರ ರಾಜ್ಯ ಸ್ಥಾಪಿಸಬೇಕು, ಇವೇ ಮುಂತಾದ ಕಲ್ಪನೆಗಳಲ್ಲಿ ವಿಶೇಷ ತಥ್ಯಾಂಶವಿರುವದಿಲ್ಲ. ಅಂತರಿಕ ಆಡಳಿತವನ್ನು ಸುಸೂತ್ರವಾಗಿಯೂ, ಸಮರ್ಥತೆಯಿಂದಲೂ ಸಾಗಿಸಿಕೊಂಡು, ಪರಚಕ್ರ ದಾಳಿಯಾಗವಂತೆ ನೋಡಿಕೊಳ್ಳುವಷ್ಟು ಪುರುಷಾರ್ಥವಿದ್ದ ಮುಖಂಡರ ಕಡೆಗೆ ರಾಜ್ಯಲಕ್ಷ್ಮಿಯು ಒಲಿಯುವಳು. ಅವರೇ ರಾಜ್ಯ ಶಕಟವನ್ನು ಸಾಗಿಸಲು ಅರ್ಹರು "ಒಕ್ಕಲುತನ ಕೃತಜ್ಞ" ರಾದ ಶ್ರೀ ನಾನಾವಟ್ಟಿಯವರು ಕೆಲವು ಸೂಚನೆಗಳನ್ನು ಆ ಬರೆಹದಲ್ಲಿ ಮಾಡಿರುವರು ಅವುಗಳಲ್ಲಿ ಅವರ ಮುಖ್ಯೋಷವು ಜಮೀನದಾರರ ಮೇಲಿರುವಂತೆ ಕಾಡುಬರುತ್ತದೆ ಈ ವರ್ಗದವರನ್ನು ಕೇವಲ ನಾಮಶೇಷ ಮಾಡುವುದಷ್ಟೇ ಅಲ್ಲ, ಅವರಿಗೆ ದೊರೆಯಬಹುದಾದ ಪರಿಹಾರವನ್ನು ಸಹ ಕೂಡಲೇ ಕೊಡಬಾರದಂತೆ "ಜಮೀನದಾರಿಯು ನಷ್ಟವಾದನಂತರ ಬರುವ ಕಂದಾಯಗಳ ಕೊಡುವಿಕೆಯಿಂದ ಸರಕಾರದವರು ಪ್ರತಿವರ್ಷ ಕಂತುಗಳಿಂದ ಹಣ ಸಲ್ಲಿಸುವುದು ಪರಿಹಾರಕೊಡುವ ವ್ಯಾವಹಾರಿಕ ಪದ್ಧತಿಯಾಗುವದು" ಎಂದು ಸೂಚಿಸಿರುವರು. ಹೊಲದೊಡೆಯನ ಹೊಲವನ್ನು ಮಾತ್ರ ಕೂಡಲೇ ಸ್ವಾಧೀನ ಪಡಿಸಿಕೊಳ್ಳಬೇಕು. ಅದರ ಪ್ರತಿಫಲವನ್ನು ಪಡೆಯಬೇಕಾದರೆ ಪಾಪ! ಜಮೀನದಾರನು ತಾಲೂಕ ಕಚೇರಿಯ ಬಾಗಿಲು ಕಾಯಬೇಕು, ಅದೂ ಸಹ ಅನೇಕ ವರ್ಷಗಳವರೆಗೆ, ಸ್ತುತ್ಯ ಸೂಚನೆ.

ಇನ್ನು, "ಉಳುವವನೇ ಆಳುವವನಾಗುವ ಪದ್ಧತಿ" ಯನ್ನು ಪ್ರಸ್ಥಾಪಿಸಿ ಭದ್ರಗೊಳಿಸುವದೆಂತು? ಎಂಬ ಚಿಂತೆಯಲ್ಲಿ ಶ್ರೀಮಾನ್ ನಾನಾವಟ್ಟಿಯವರು ಮಗ್ನರಾಗಿರುತ್ತಾರೆ. ಪ್ರತ್ಯಕ್ಷ ರೈತನೆಂದರೆ ಎರಡು ಎತ್ತುಗಳ ಗಳೆಯನ್ನು ಸ್ವತಃ ಹೊಡೆಯುವ ರೈತನು ಎಂದರ್ಥವಾಗುತ್ತದೆ, ಅಂದಮೇಲೆ ಇವರ ವ್ಯಾಖ್ಯೆಯ ಮೇರೆಗೆ ರೈತನು ಎರಡಕ್ಕಿಂತ ಹೆಚ್ಚು ಎತ್ತುಗಳನ್ನಿಟ್ಟು ಒಕ್ಕಲತನವನ್ನು ಸಾಗಿಸಲಾರನು ಏಕೆಂದರೆ ಒಡೆಯ ರೈತನು ಇನ್ನೊಂದು ಜೋಡಿ ಎತ್ತಿಗೆ ಒಬ್ಬ ಕಮತದ ಆಳನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಆಗ ಈ ಕಮತದ ಆಳು ಪ್ರತ್ಯಕ್ಷ ಉಳುವ ರೈತನಾಗುತ್ತಾನೆ. ಹೆಚ್ಚಿನ ಹೊಲಗಳ ಮೇಲಿರುವ ಈ ರೈತರ ಒಡೆತನವು ಕಮತದ ಆಳಿಗೆ ಹೋಗಲಿಕ್ಕೇ ಬೇಕಲ್ಲವೇ? ಅಂತೂ ಎಲ್ಲಿ ನೋಡಿದರೂ ಒಂದು ಜೋಡಿ ಎತ್ತಿನ ಕಮತವೇ ಕಂಡು ಬರುವಂತಾಗುವದು, ರೈತನು ಮುಪ್ಪಿನವನಾದರೆ ಅಥವಾ ನಾಲ್ಕಾರು ವರ್ಷ ಬೇನೆಹತ್ತಿ ರಂಟೇ ಹೊತ್ತು ಸಾಗುಮಾಡಲು ಅವನಿಗೆ ಶಕ್ಯವಾಗದಿದ್ದರೆ ಅವನು ಪ್ರತ್ಯಕ್ಷ ರೈತನಾಗಲಾರನು. ಅವನ ಹೊಲವು ಅವನ ಕಮತದ ಆಳಿಗೇ ಹೋಗಬೇಕಾಗುವದು, ರೈತರ ಮಗನು ವಿದ್ಯೆ ಕಲಿತು ಎರಡನೆಯ ಕಡೆಗೆ ಹೊಟ್ಟೆಯ ಪಾಡಿಗೆ ಹೋಗಬೇಕಾದರೆ ಅವನು ತನ್ನ ಪೂರ್ವಾರ್ಜಿತ ಹೊಲದ ಆಶೆಬಿಟ್ಟೇ ಹೋಗಬೇಕು, ಅದು ಅವನ ಕಮತದ ಆಳಿನ ಪಾಲಾಗುವದು ಹೊಲದ ಕ್ರಯದ ಪರಿಹಾರವು ಬೇಕಾದರೆ ತಾಲೂಕ ಕಚೇರಿಯ ಬಾಗಿಲನ್ನು ಕಾಯಬೇಕು, ಹೊಲದ ಬೆಲೆ ಗೊತ್ತು ಪಡಿಸುವವರು ಅಧಿಕಾರಸ್ತರು ಅಂದಮೇಲೆ ಅದರ ಕ್ರಯವೂ ಎಷ್ಟರಮಟ್ಟಿಗೆ ಯೋಗ್ಯವಾಗಬಹುದೆಂಬುದು ಮೇಲೆಯೇ ಕಾಣುತ್ತದೆ.

ಈ ಎಲ್ಲ ಖಟಾಟೋಪವನ್ನು ನೋಡಿ ಕೇವಲ ಖುರ್ಚಿಯ ಮೇಲೆ ಕುಂತು, ಇಲೆಕ್ಟ್ರಿಕ್ ಫ್ಯಾನಿನ ಗಾಳಿಯಲ್ಲಿ ತೂಕಡಿಸುತ್ತ ಕಲ್ಪನಾ ಸಾಮ್ರಾಜ್ಯದಲ್ಲಿ ಬಂದ ಹಲಕೆಲವು "ವಿಚಾರ"ಗಳನ್ನು ಪ್ರಸಿದ್ಧಿಸುವ ಹವ್ಯಾಸಕ್ಕೆ ಅನೇಕ "ತಜ್ಞರು" ಬೀಳುವ ಪರಿಪಾಠವು ಇತ್ತೀಚಿಗೆ ನಮ್ಮ ಪ್ರದೇಶದಲ್ಲಿ ಹೆಚ್ಚಾಗಿರುತ್ತದೆ. ಯಾವುದೋ ಹೊಲ ಯಾರಿಗೋ ಕೊಡಿಸಿ ಶಾಬ್ಬಾಸಕೀ ತೊಗೊಂಡರಾಯಿತೆಂಬ ಮನೋವೃತ್ತಿಯು ನಮ್ಮಲ್ಲಿಯ ಅನೇಕ ಸ್ವಯಂಮಾನ್ಯ "ಮುಖಂಡ"ರಲ್ಲಿ ಬೆಳೆಯುತ್ತಿದೆ

ನಮಗೆ ಮುಖ್ಯಬೇಕಾದುದು ಹೆಚ್ಚು ಬೆಳೆ-ಹೆಚ್ಚು ಹುಟ್ಟುವಳಿ-ಹೆಚ್ಚು ಆಹಾರ ಧಾನ್ಯಗಳು, ಅವುಗಳನ್ನು ಹುಟ್ಟಿಸಲು ಬೇಕಾಗುವ ಸಾಧನ ಸಾಮುಗ್ರಿಗಳು. ಗೊಬ್ಬರ, ಶ್ರೇಷ್ಠತರಗತಿಯ ಬೀಜಗಳು, ಸುಧಾರಿಸಿದ ಕೃಷಿಪದ್ಧತಿ, ಬೆಳೆ ನಾಶಮಾಡುವ ಪಿಡುಗುಗಳನ್ನು ಎದುರಿಸುವಿಕೆ, ಕಾಲುವೆ, ನೀರಾವರಿ.... ...ಮುಂತಾದ ಅನೇಕಾನೇಕ ವಿಧಾನಗಳ ಕಡೆಗೆ ಲಕ್ಷ್ಯಪೂರೈಸುವದು ಅವಶ್ಯವಿದೆ. ಭೂಮಿಗಳನ್ನು ಯೋಗ್ಯಬೆಲೆಗೆ ಕೊಳ್ಳಲು ಸರಕಾರವು ಸಿದ್ಧವಾದರೆ ಅನೇಕಾನೇಕ ದೊಡ್ಡ ಜಮೀನದಾರರೂ ತಮ್ಮ ಹೊಲಗಳನ್ನು ಸರಕಾರಕ್ಕೆ ನಗದು ಹಣಕ್ಕೆ ಮಾರಬಹುದು, ಹೀಗೆ ಕೊಂಡು ಕೊಂಡ ಹೊಲಗಳನ್ನು ಸರಕಾರದವರು ರೈತನಿಗೆ ಬೇಕಾದರೆ ತಮ್ಮ ಹೊಣೆಗಾರಿಕೆಯಮೇಲೆ ಕಂತಿನಿಂದ ಮಾರಬಹುದು. ಈ ಕಂತಿನ ಹಣವು ರೈತನಿಂದ ಎಷ್ಟು ಸುಸೂತ್ರವಾಗಿ ಮುಟ್ಟಬಹುದೆಂಬುದನ್ನು ಕೋ-ಆಪರೇಟಿವ್ ಕ್ರೆಡಿಟ್ಸ್ ಸೊಸೈಯಿಟಿಗಳಿಂದ ತಿಳಿದುಕೊಳ್ಳಬಹುದು, ಮತ್ತು ನಂತರ ಅವನಿಗೆ ಉತ್ತಮಬೀಜ ಗೊಬ್ಬರ ಮುಂತಾದವುಗಳನ್ನು ಸೋವಿದರದಿಂದ ಸರಕಾರವು ಪೂರೈಸಿ ಯೋಗ್ಯಬೆಳೆ ಬರುವಂತೆ ಅವಶ್ಯಕವಾದ ಸಹಾಯ ಮಾಡಬೇಕು. ಜಮೀನದಾರನಿಗೆ ಪರಿಹಾರ ದ್ರವ್ಯವನ್ನು ಕೂಡಲೇ ಕೊಡಲು ಸರಕಾರದಲ್ಲಿ ಸಧ್ಯಕ್ಕೆ ಸಾಮರ್ಥ್ಯವಿರದಿದ್ದರೆ ಅಂಥ ಸಾಮರ್ಥ್ಯವು ಬರುವವರೆಗೆ ಇಂಥ ಉಪದ್ವ್ಯಾಪಗಳನ್ನು ಮುಂದುವರಿಸಬೇಕು. "ಸರಕಾರವು ಬಾಂಡುಗಳ ರೂಪದಲ್ಲಿ ಜಮೀನದಾರರಿಗೆ ಪರಿಹಾರ ಕೊಡಬೇಕೆಂದು ಹಲವರು ಹೇಳುತ್ತಾರೆ, ಆದರೆ ಹೀಗೆ ಮಾಡಿದಲ್ಲಿ ಎರಡುಮೂರು ನೂರು ಕೋಟಿ ಬಾಂಡನ್ನು ಸರಕಾರವು ಕೊಡಬೇಕಾದೀತು. ಮೊದಲೇ ಸಾಲ ತರಬೇಕಾದ ಪ್ರಾಂತಿಕ ಸರಕಾರಗಳಿಗೆ ಇದು ತೀರ ಭಾರವಾದೀತು. ನೀರಾವರಿಯೋಜನೆ, ಜಲಶಕ್ತಿ ಬೆಳವಣಿಗೆ, ಪಡಭೂಮಿಗಳ ಸಾಗುವಳಿ ಮುಂತಾದ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಹಣವೆಚ್ಚ ಮಾಡುವದನ್ನು ಬಿಟ್ಟು ಜಮೀನದಾರರ ಸಾಲವನ್ನು ತೀರಿಸುತ್ತ ಕೂಡಬೇಕಾಗುವದು, "ಎಂದು ಮುಂತಾಗಿ ಶ್ರೀ ನಾನಾವಟ್ಟಿಯವರು ಉಸಿರಿದ್ದಾರೆ. ಇದೇನು ಮುಂದಿನ ಇಲೆಕ್ಷನ್ನದ ಸಂಚಗಾರವೋ, ಅಧಿಕಾರದ ದರ್ಪವೋ? ಸರಕಾರದಲ್ಲಿ ಹಣಕೊಡಲು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೆ ಇಂಥ ಅನವಶ್ಯಕ ಯೋಜನೆಗಳ ವಿಚಾರವೇಕೆ? ಇಂಥ ಹಣವನ್ನು ಜಮೀನುದಾರರು ದುಂದುಗಾರಿಕೆಯಲ್ಲಿ ತೊಡಗಿಸುವ ಹೆದರಿಕೆಯೂ ಉಂಟಂತೆ

ಒಟ್ಟಾರೆ ನೋಡಲಾಗಿ ಈ ಎಲ್ಲ ಖಟಾಟೋಪದ ಬುಡದಲ್ಲಿ ಹೊಲನೊಡೆಯರ ವರ್ಗವನ್ನು ಸಮೂಲ ನಾಶಮಾಡಬೇಕೆಂಬುವ ಕಲ್ಪನೆಯು ಸ್ಪಷ್ಟವಿದೆ. ಇಂದು ಒಬ್ಬರು ಪ್ರತ್ಯಕ್ಷ ರೈತರಿದ್ದರೆ ನಾಳೆ ಅವರೇ ಹೊಲಕ್ಕೆ ಮತ್ತೊಬ್ಬ ರೈತನಾಗಬಹುದು, ಇದೇ ಮೇರೆಗೆ ಈ ಪ್ರಶ್ನೆಯು ಆದಿ ಅಂತ್ಯವಿಲ್ಲದೆ ಚಕ್ರತಿರುಗುವಂತೆ ತಿರುಗುವದು. ಇದಕ್ಕೆ ಪ್ರತ್ಯಕ್ಷ ಅನುಭವಜ್ಞಾನ ಬೇಕಲ್ಲದೆ ಒಂ-ಯು ಮೇಲೆ ಕುಳಿತು ಕುಂಕಾಯ್ದರೆ ನಡೆಯಲಾರದು. ಈ ಬಗ್ಗೆ ಸಾರ್ವಜನಿಕರ ವಿಚಾರಗಳನ್ನು ತಿಳಿದುಕೊಳ್ಳುವದವಶ್ಯ.

ತೋರಮುಕ್ಕೆ ಇಂಥ ಕಾಯಿದೆಯು ಬೆವರು ಸುರಿಸದೆ ಬಾನಬೇಡುವ ಉಂಡಾಡಿಗ ಕಸುಬಿನ ಅಳಿಗೆ ಒಳ್ಳೇ ಲಾಭದಾಯಕವೆಂದು ಕಂಡುಬಂದು ಅದುಮಾತ್ರ ಆನಂದದಿಂದ ಜಗಿದಾಡಬಹುದಲ್ಲದೆ ಯಾವರೈತನಾಗಲಿ ಹೊಲದೊಡೆಯನಾಗಲಿ ಇಂಥ ಶೋಚನೀಯ ಮನೆಮುರುಕ ಕಲ್ಪನೆಗೆ ಎಂದೂ ಬೆಂಬಲಕೊಡಲಾರನು. ಪ್ರಚಲಿತವಿರುವ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಯತ್ನಿಸುವುದರಲ್ಲಿಯೇ ಪುರುಷಾರ್ಥವಿರದೆ ಅದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಸಾವಧಾನದಿಂದ ಜನಮತವನ್ನನುಸರಿಸಿ, ದೂರಪಡಿಸಲು ಯತ್ನಿಸುವದು ಯೋಗ್ಯವಾಗಿರುತ್ತದೆ.

ಒಕ್ಕಲುತನದ ಹುಟ್ಟುವಳಿಯಷ್ಟೇ ಗಿರಣಿ ಕಾರಖಾನೆಗಳ ಹುಟ್ಟುವಳಿಗೂ ಮಹತ್ವವಿದೆ. ಕೇವಲ ಭೂಮಿಯೊಡೆಯರನ್ನು ಮಾತ್ರ ರಸಾತಳಕ್ಕೆ ಮೆಟ್ಟಲು ಸಲಹ

ಕೊಡುವ ಶ್ರೀ ನಾನಾವಟ್ಟಿಯವರು ಮುಂಬೈ ಅಹಮ್ಮದಾಬಾದ ಮೊದಲಾದ ಕಡೆಗಿರುವ ಗಿರಣಿ-ಫ್ಯಾಕ್ಟರಿಗಳನ್ನು ಸರಕಾರವು ಕೂಡಲೇ ವಶಪಡಿಸಿಕೊಂಡು, ಅವುಗಳನ್ನು ಅಲ್ಲಿ ಪ್ರತ್ಯಕ್ಷ ಕೆಲಸಮಾಡುವ ಕೂಲಿಕಾರರಿಗೆ ಈಗಲೇ ಕೊಟ್ಟುಬಿಟ್ಟು, ಗಿರಣಿ-ಫ್ಯಾಕ್ಟರಿಗಳ ಒಡೆಯರಿಗೆ ಆಯಾಸಂಸ್ಥೆಗಳ ಕ್ರಯವನ್ನು ಸಾವಿರಾರು ವರ್ಷಗಳಲ್ಲಿ ಚಿಕ್ಕ ಚಿಕ್ಕ ಕಂತುಗಳಲ್ಲಿ ಕೊಡುವಂತೆ ಒತ್ತಾಯವನ್ನೇಕೆ ಮಾಡಲೊಲ್ಲರು? ಇವರಿಗೂ ಒಮ್ಮೆಲೇ ಹಣ ಕೊಟ್ಟರೆ ಇವರೂ ಮುಂದುಗಾರಿಕೆಯಲ್ಲಿ ಹಣವನ್ನು ಹಾಳು ಮಾಡಬಹುದಲ್ಲವೇ?

ಇಂಥ "ತಜ್ಞ"ರ ಸಲಹೆಗಳನ್ನು ಮಂಡಿಸಿ, ಸಾಗಬಹುದಾದ ರೈತರಾಜ್ಯವು ಜನತೆಗೆ ಸರ್ವಥಾ ಬೇಕಿಲ್ಲ. ದೇಶದಲ್ಲಿ ಇಲ್ಲಿಯವರೆಗೆ ನಡೆದ ಅಲ್ಲೋಲ ಕಲ್ಲೋಲಗಳು ಸಾಕು ಸಾಕಾಗಿವೆ ನಮಗೆ ಬೇಕಾದುದು ಸ್ವರಾಜ್ಯ, ಶಾಂತಿ, ಸಮಾಧಾನ ಸಾಮರ್ಥ್ಯಗಳುಳ್ಳ ಜನಸಾಮಾನ್ಯರರಾಜ್ಯ, ರಾಜ್ಯದಾಡಳಿತವು ಯಾವದೇ ವಿಶಿಷ್ಟ ವರ್ಗದ ಸ್ವತ್ತಾಗಲಾರದು, ಸಾಮಾನ್ಯಜನತೆಯು ಒಟ್ಟಾರೆ ವಿಚಾರಮಾಡಿ ಸಾಗಿಸುವ ಸರಕಾರವೇ ನಮ್ಮ ಸರಕಾರವು, ಸುರಾಜ್ಯವು.

## ಗೇಟಿನವ ಹೋದ ದೇವರಿಗೆ ತೆಂಗಿನಕಾಯಿ

ಸೀದಾ (ರೇಷನ್) ಪ್ರದೇಶಗಳಲ್ಲಿ ದಿಕ್ಕು ದಿಕ್ಕಿಗೆ ಕಾವಲಿಗಾಗಿಡಲ್ಪಟ್ಟಿದ್ದ ಗೇಟಿನ ಕಾವಲುಗಾರರು ಮಾಯವಾದ್ದು ಹಳ್ಳಿಗಳಿಂದ ಬರುವ ಬಡರೈತರಿಗೆಷ್ಟೋ ಆನಂದದಾಯಕವಾಗಿದೆ. ಎಷ್ಟೋ ಹಳ್ಳಿಯವರು ದೇವರಿಗೆ ತೆಂಗಿನಕಾಯಿ ನೈವೇದ್ಯ ಸಮರ್ಪಿಸಿದರಂತೆ. ಪಟ್ಟಣಕ್ಕಾಗಿ ಬರುವವರ ಬುತ್ತಿಯನ್ನು ಕೂಡ ಶೋಧಿಸುತ್ತಿದ್ದರು, ಈ ಮೂರ್ಖರು. ಒಂದುಸಲ 4 ಸೇರು ಜೋಳ ತರುತ್ತಿದ್ದವನು ಮಾಮೂಲು ಕೊಡದ ಕಾರಣ ವಿಚಿತ್ರ ಹಿಂಸೆಗೆ ಗುರಿಯಾಗಿ ಶಿಕ್ಷೆಯನ್ನನುಭವಿಸಬೇಕಾಯಿತು. ನ್ಯಾಯವಾಗಿ ಎಲ್ಲಾ ನಡೆದಿದ್ದರೆ ಯಾರಿಗೇನೂ ಆಕ್ಷೇಪಣೆಯಿದಿಲ್ಲ. ಆದರೆ ಗಾಡಿಗಳೇನು? ಮೂಟೆಗಳೇನು? ಕತ್ತೆ ಹೊರೆಗಳೇನು? ಬ್ಲಾಕ್ ಮಾರ್ಕೆಟಿನವರ ನಿರಂತರ ವ್ಯವಹಾರವೇನು? ಗೇಟಿನ ನಾಯಿಗೆ ತುಣುಕು ಹಾಕಿದರಾಯಿತು. ಗುರ್ರೆನ್ನುತ್ತಿರಲಿಲ್ಲ. ಕೆಲ ಗೇಟುಗಳವರು ಸಾವಿರಗಟ್ಟಲೆ ಸಂಪಾದಿಸಿಕೊಂಡರೆಂಬ ಸುದ್ದಿಯಲ್ಲಿ ಹೆಚ್ಚಿನ ಉತ್ಪ್ರೇಕ್ಷೆ ಇಲ್ಲ.

ಧಾರಾಳವಾದ ವ್ಯಾಪಾರದಲ್ಲಿ (Free Trade) ಧಾರಣೆವಾಸಿಗಳಲ್ಲಿ ಹೆಚ್ಚು ಕಡಮೆಯಾದರೂ ಪರವಾ ಇಲ್ಲ. ಜನರು ಶಕ್ತ್ಯಾನುಸಾರ ಸಹಿಸಬಹುದು, ಆದರೆ ಮಾಲೇ ದೊರಕದಂತಾದರೆ ಏನುಮಾಡಬೇಕು? ಎಲ್ಲಿಯವರೆಗೆ ಕಳ್ಳಬಾಜಾರಕ್ಕೆ ಹೋಗಬೇಕು?

ಮಹಾತ್ಮ ಗಾಂಧಿಯವರ ಪುಣ್ಯದಿಂದ ನಿಯಂತ್ರಣವು ರದ್ದಾಯಿತು. ಯುದ್ಧ ಕಾಲದಲ್ಲಿ ಜಾರಿಗೆತಂದ ಈ ಬಂಧನವು ಮಹಾತ್ಮರಿಂದಲೇ ಮುರಿಯಿತು. ಇನ್ನು ಮೇಲೆ ಸಕಲರಿಗೂ ಸುಖವೊರೆಯಲೆಂದು ಆಶಿಸುತ್ತೇವೆ.

## ವಿಮಾನದಾಳಿಯಿಂದ ಸಂರಕ್ಷಣೆ

### ಇಂಡಿಯಾ ಸರ್ಕಾರದ ಏರ್ಪಾಟು

"ರಾಡರ್" ಎಂಬ ಯಂತ್ರ ಸಹಾಯದಿಂದ 150 ಮೈಲಿದೂರದಿಂದ ಬರುತ್ತಿರುವ ವಿಮಾನಗಳನ್ನು ಮೊದಲೇ ಕಂಡುಹಿಡಿಯಬಹುದು. ಇಂತಿಷ್ಟು ದೂರದಲ್ಲಿ ಇಷ್ಟೇ ಎತ್ತರದ ಮೇಲೆ ಬರುತ್ತಿವೆಯೆಂಬುದನ್ನೂ, ಅವುಗಳ ಚಲನವಲನಗಳನ್ನೂ ಈ "ರಾಡರ್" ಯಂತ್ರವು ಪರ್ದೆಯಮೇಲೆ ಚಿತ್ರಿಸುತ್ತದೆ. ಯುದ್ಧಕಾಲದಲ್ಲಿ ಈ ರಾಡರ್ ಯಂತ್ರದ ಹತ್ತಿರವಿರುವವರು ರೇಡಿಯೋ ಟೆಲಿಫೋನದಿಂದ ತಮ್ಮ ವಿಮಾನದವರಿಗೆ ಸೂಚನೆಗಳನ್ನು ಕೊಡುತ್ತಾ ಇಂಥಾ ದಿಕ್ಕಿಗೆ ಹೋಗಿ ಹೀಗೆ ಎದುರಿಸಬೇಕೆಂದು ತಿಳಿಸಬಹುದು.

ರಾಯಲ್ ಇಂಡಿಯನ್ ಏರಫೋರ್ಸದಲ್ಲಿ ಉಪಯೋಗಕ್ಕಿರುವ ಈ ರಾಡರ್ ಯಂತ್ರದ ಉಪಯೋಗದಲ್ಲಿ ಚನ್ನಾಗಿ ಶಿಕ್ಷಣ ಪಡೆದು ಬರಲು ಇಂಡಿಯಾ ಸರ್ಕಾರವು ಕೆಲ ಅಧಿಕಾರಿಗಳನ್ನು ಇಂಗ್ಲೆಂಡಿಗೆ ಕಳುಹಿಸಲಿವೆ.

## ಸಂಗನಕಲ್ಲಿನಲ್ಲಿ ಕರ್ನಾಟಕದ ಪ್ರಾಚೀನತೆ

### ೬೦೦೦ ವರ್ಷಗಳ ಹಿಂದಿನ ಉಪಕರಣಗಳು

ಪೂಣೆಯ ಡೆಕ್ಕನ್ ಕಾಲೇಜಿನ ಶ್ರೀ ಬಿ. ಸುಬ್ಬರಾಯರು ಬಳ್ಳಾರಿಗೆ ಸಮೀಪವಿರುವ ಸಂಗನಕಲ್ಲ ಎಂಬ ಹಳ್ಳಿಯಲ್ಲಿ ಕೆಲ ಸಣ್ಣ ಉಪಕರಣಗಳನ್ನು ಅಗೆದು ತೆಗೆದಿದ್ದಾರೆ. ಅವು ಸುಮಾರು 6 ಸಾವಿರ ವರ್ಷಗಳ ಹಿಂದಿನವಿರಬಹುದೆಂದು ಊಹಿಸಲಾಗಿದೆ. ಇದರಿಂದ ದಕ್ಷಿಣ ಹಿಂದುಸ್ತಾನದ ಇತಿಹಾಸವು ಕ್ರಿ. ಪೂ. 3 ಸಾವಿರ ವರ್ಷಗಳ ಹಿಂದಿನದೆಂದು ಸಿದ್ಧವಾಗುವ ಸಂಭವವಿದೆ, ಶ್ರೀ ಸುಬ್ಬರಾಯರು ಅ. ಪ್ರೆ. ಗೆ ಈ ಬಗೆಯಾಗಿ ಅರುಹಿದರು.

ಈ ಉಪಕರಣಗಳು ಯಾವ ಕಾಲದವೆಂಬುದನ್ನು ನಿಶ್ಚಿತ ಹೇಳಲಿಕ್ಕಾಗದು, ಅವು 6 ಸಾವಿರ ವರ್ಷಗಳ ಹಿಂದಿನವೆಂದು ನನಗನಿಸುತ್ತದೆ. ಇವುಗಳನ್ನು ಕೇಂಬ್ರಿಜ ವಿಶ್ವವಿದ್ಯಾಲಯದ ಪುರಾತನ ವಸ್ತುಶಾಸ್ತ್ರಜ್ಞರ ಬಳಿಗೆ ಕಳಿಸಲಾಗಿದ್ದು ಅವರ ವರದಿಯ ಹಾದಿಯನ್ನೇ ನೋಡುತ್ತಿದ್ದೇನೆ.

ಬಳ್ಳಾರಿಯಿಂದ 30 ಮೈಲು ದೂರದಲ್ಲಿರುವ ಬಹ್ಮಗಿರಿಯಲ್ಲಿ ಕೆಲವು ಪುರಾತನ ವಸ್ತುಗಳು ದೊರೆತದ್ದರಿಂದ ಸಂಗನಕಲ್ಲಿನಲ್ಲಿ ಸಂಶೋಧನೆ ನಡೆಸಬೇಕೆಂದು ಶ್ರೀ ಸುಬ್ಬರಾಯರಿಗೆ ಅನಿಸಿತ್ತು ಕಳೆದ ಡಿಸೆಂಬರದಲ್ಲಿ ಅವರು 100 ಅಡಿ ಎತ್ತರದ ಒಂದು ದಿಬ್ಬವನ್ನು ಅಗಿಯಲು ಪ್ರಾರಂಭಿಸಿದರು. ಎರಡು ಅಡಿ ಅಗಿವಷ್ಟರಲ್ಲಿ ಅವರಿಗೆ 3 ಸಾವಿರ ವರ್ಷಗಳ ಹಿಂದಿನ ಕಲ್ಲಿನ ಕೊಡಲಿ ಮೊದಲಾದ ಉಪಕರಣಗಳಿಗೆ ಸಾಣೇ ಹಿಡಿಯುವ ಕಾರ್ಖಾನೆ ದೊರೆಯಿತು. ಕಲ್ಲಿನ ಉಳಿ, ಕೊಡಲಿ, ಸುತ್ತಿಗೆ ಮೊದಲಾದವುಗಳೂ ಅವುಗಳನ್ನು ಮಾಡುವ ಸಾಧನಗಳೂ ಸಿಕ್ಕವು. ಮುಂದೆ ಹತ್ತು ಅಡಿ ಅಗೆವಷ್ಟರಲ್ಲಿ ಕಲ್ಲಿನ ಉಪಕರಣಗಳನ್ನು ಮಾಡುವ ಉಪಯೋಗಿಸಲ್ಪಟ್ಟ ಹರಳು ಮೊದಲಾದವು ದೊರೆತವು. ಪ್ರಾಥಮಿಕ ಪರಿಶೀಲನೆ ನಡೆಸಿದ ಮೇಲೆ ಅವುಗಳನ್ನು ಕೇಂಬ್ರಿಜ ವಿಶ್ವವಿದ್ಯಾಲಯಕ್ಕೆ ಕಳಿಸಬೇಕೆಂದು ಗೊತ್ತಾಗಿ ಹಾಗೆ ಕಳಿಸಿ ಈಗ ಅಲ್ಲಿಯ ತಜ್ಞರ ಅಭಿಪ್ರಾಯಗಳನ್ನು ನಿರೀಕ್ಷಿಸಲಾಗಿದೆ.

## ಹೊಸಪೇಟೆ.

10ನೆಯ ತಾ|| ಸಾಯಂಕಾಲ 25 ಗುಡಿಸಲುಗಳು ಅಗ್ನಿನಾರಾಯಣನಿಗೆ ಆಹುತಿಯಾದವು. ಪುರಜನರು ಶಾಲಾ ವಿದ್ಯಾರ್ಥಿಗಳು ಸಹಾಯಮಾಡಿದರು. ಸಾರ್ವಜನಿಕರಿಂದ ಚಂದಾ ವಸೂಲಿ ಮಾಡಲಾಗುತ್ತಿದೆ.

12ನೆಯ ತಾ|| ವ್ಯಾಯಾಮಶಾಲಾ ಕ್ಲಬ್ಬಿನ ಉದ್ಘಾಟನೆಯನ್ನು ರೆವಿನ್ಯೂ ಬೋರ್ಡ ಮೆಂಬರರಾದ ಶ್ರೀ ರುದ್ರರವರು ನೆರವೇರಿಸಿದರು.

ನಾಸಿಕ ಸಮಾಜವಾದಿ ಸಮ್ಮೇಳನದ ನಿರ್ಣಯದಂತೆ ಶ್ರೀಗಳಾದ ಆಸುಂಡಿ ತಿರುಮಲರಾವ್, ಲಕ್ಷ್ಮಣಮೂರ್ತಿ, ಆರ್. ವಿ ದೇಶಾಯಿ, ಎಸ್. ವಿ. ದೇಶಾಯಿ, ಕೃಷ್ಣಪ್ಪಯ್ಯ, ಚಂದ್ರಶೇಖರಗೌಡ, ನಾಗಮಲ್‌ಸಿಂಗ್, ಶ್ರೀಶೈಲಪ್ಪ, ವರ್ಧಮಾನ, ಯಂ. ರಘುಪತಿ (ವಕೀಲರು) ಇವರು ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟು ಸೋಶಿಯಲಿಸ್ಟ ಪಾರ್ಟಿಗೆ ಸೇರಿದ್ದಾರೆ.

## ಹೈದರಾಬಾದು

ಈವಾರ ನೈಜಾಮರ ರಾಜಕೀಯ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟನ್ ಮತ್ತು ಹೈದರಾಬಾದ ಪ್ರಧಾನರಾದ ಲಾಯಕ್ ಅಲಿಯವರು ಡೆಲ್ಲಿಗೆ ಹೋಗಿ ಮಾತುಕತೆ ನಡೆಸಿದರು, ಪರಿಣಾಮದ ವಿಷಯವೇನೆಂಬುದು ಗೊತ್ತಾಗದಿದ್ದರೂ, ಇಂಡಿಯಾ ಸರ್ಕಾರದವರು ಹೈದರಾಬಾದಿಗೆ ಸೂಚನೆಗಳನ್ನು ಕಳುಹಿಸಿ ಜವಾಬ್ದಾರಿಯುತ ಪ್ರಜಾ ಸರ್ಕಾರದ ಏರ್ಪಾಟು ಮಾಡಿ ರಜಾಕಾರರ ಹಾವಳಿಯನ್ನು ಕೂಡಲೇ ತಪ್ಪಿಸಬೇಕೆಂದು ಆದೇಶವಿತ್ತಿದ್ದಾರೆಂಬುದು ನಂಬಲರ್ಹವಾದ ಕಡೆಗಳಿಂದ ಗೊತ್ತಾಗಿದೆ.

### ಬ್ರಾಹ್ಮಣರಿಗೆ ಪರಿಹಾರ

ಕೊಲ್ಲಾಪುರ, ಮೀರಜ್, ಸಾಂಗ್ಲಿ ಮತ್ತು ಬೊಂಬಾಯಿ ಇಲಾಖೆಯ ಇತರ ಭಾಗಗಳಲ್ಲಿ ಗಾಂಧೀಜಿ ಮರಣಾನಂತರ ಬ್ರಾಹ್ಮಣರನ್ನು ಹಿಂಸಿಸಿ ಅವರ ಆಸ್ತಿ ಪಾಸ್ತಿಗಳ ಹಾನಿ ಮಾಡಲಾಗಿದ್ದಿತು. ಈಗ ಅವರ ಪರಿಹಾರ ನಿಧಿಗೆ ಗವರ್ನರರು 500 ರು. ಕೊಟ್ಟಿದ್ದಾರೆ.

Please Note
**Narasepalli Workshops**
BELLARY.
— UNDERTAKE —
Turning, Electric Welding & Tempering
OF
SPARE PARTS OF ALL KINDS.
☞ **Reasonable Charges**
TRIAL SOLICITED.
T legrams
OIL MILLS.
Telephone
57.



## ಕಾಂಗ್ರೆಸ್ ಅಧ್ಯಕ್ಷ ಬಾಬೂ ರಾಜೇಂದ್ರ ಪ್ರಸಾದರು.

### ಗಾಂಧಿ ಸ್ಮಾರಕ ನಿಧಿಯ ಉಪಯೋಗ.

ಕಾಂಗ್ರೆಸ್ ಅಧ್ಯಕ್ಷರಾದ ಬಾಬೂರಾಜೇಂದ್ರರು ಗಾಂಧಿ ಸ್ಮಾರಕ ನಿಧಿಯ ಉಪಯೋಗವನ್ನು ಕುರಿತು ಈ ಕೆಳಗಿನಂತ ಹೇಳಿರುವರು. "ಗಾಂಧೀಜಿ ಆಶಯಗಳನುಸಾರವಾಗಿ ರಚನಾತ್ಮಕ ಕಾರ್ಯವನ್ನು ಆಯಾ ಪ್ರದೇಶಗಳಲ್ಲಿ ನಡೆಸುವುದು - ದೇಶದಾದ್ಯಂತ ವಿವಿಧ ಭಾಷೆಗಳಲ್ಲಿ ಗಾಂಧೀಜಿಯವರ ಭಾಷಣ ಲೇಖನಗಳನ್ನು ಪ್ರಕಟಿಸುವುದು - ಜನಸಾಮಾನ್ಯರ ಅಭಿವೃದ್ಧಿ ಮುಂತಾ ಸಾಮಾಜಿಕ ಕೆಲಸ ಕಾರ್ಯಗಳಿಗಾಗಿ ಈ ನಿಧಿಯ ಉಪಯೋಗವಾಗುವದಿದ್ದು ನೂರಕ್ಕೆ 75 ರಷ್ಟನ್ನು ನಿಧಿ ಸಂಗ್ರಹವಾದ ಸ್ಥಳಗಳಲ್ಲೇ ವಿನಿಯೋಗಿಸಲಾಗುವುದು. ಉಳಿದ 25 ರಷ್ಟನ್ನು ಕೇಂದ್ರ ನಿಧಿಗೆ ಸೇರಿಸಿಕೊಳ್ಳಲಾಗುತ್ತದು.

—●—

## ಮಲತಾಯಿಯನ್ನೋಡಿಸಿಕೊಂಡು ಹೋದ

ಲಕ್ನೋ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಲತಾಯಿಯನ್ನೋಡಿಸಿಕೊಂಡು ಹೋದ ಯುವಕನೊಬ್ಬನು ತನ್ನ ಪ್ರೇಯಸಿಯೊಂದಿಗೆ ಬಂಧಿಸಲ್ಪಟ್ಟು ವಿಚಾರಣೆಗೆ ಗುರಿಯಾಗಿದ್ದಾನೆ. ತಂದೆಯು ತನ್ನ ಇಳಿವಯಸ್ಸಿನಲ್ಲಿ ಮೂರನೆಯ ಸಲ ಒಬ್ಬ ಚಿಕ್ಕ ಹುಡುಗಿಯನ್ನು ಮದುವೆಯಾದುವರ ಪ್ರತಿಫಲವೇ ಇದಾಗಿದೆ. ಮಗನು ಮೊದಲನೆಯ ಹೆಂಡತಿಯ ಮಗ. ವಯಸ್ಸಾದ ಮೇಲೆ ಮದುವೆಯಾಗುವವರು ಹಿಂದು ಮುಂದಾಲೋಚಿಸಬೇಕು

# The Rayalaseema Bank Ltd., H. O. Bellary

)0(

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

]0[

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಖಿಲ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | ಮದ್ರಾಸು : ೩೦೧ ಲಿಂಗಶೆಟ್ಟಿ ಬೀದಿ.
ಶಾಖೆಗಳು | ಬೆಂಗಳೂರು : ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ $3\frac{1}{4}$% —— ಎರಡು ವರ್ಷ $3\frac{1}{2}$%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಕೆ. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.



# NAVA BHARAT BELLARY.

Reg.No.M. 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri.........................................................
.........................................................
.........................................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ವರ್ಷ ೧೧ | ಸಂಚಿಕೆ ೧೬ | ಬಳ್ಳಾರಿ ಮೇ ೩ ಸೋಮವಾರ ೧೯೪೮

ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## ಹೈದರಾಬಾದ್

### ನೆಹರೂ ಹೇಳಿಕೆ-ರಜವಿ ಪ್ರತ್ಯುತ್ತರ

"ಹೈದರಾಬಾದ್ ವಿಷಯಕ್ಕೆ ಇಂಡಿಯಾ ಸರ್ಕಾರದ ತಾಳ್ಮೆ ಮೀರುತ್ತಲಿದೆ. ಹೈದರಾಬಾದಿನಲ್ಲಿ ರಾಜ್ಯಭಾರ ನಡೆಸುವವರು ನಿಜಾಮರೋ ರಜಾಕಾರರೋ ಗೊತ್ತಿಲ್ಲ ಆದರೂ ಹೊಣೆಗೆಟ್ಟ ಹೇಳಿಕೆಗಳು ಮಜಲಿಸ್ ಮುಖಂಡರಿಂದ ಬರುತ್ತಲಿವೆ. ಅಲ್ಲಿ ಇಂಡಿಯಾ ಸರ್ಕಾರಕ್ಕೆ ವಿರೋಧವಾದ ಕೃತ್ಯಗಳು ನಡೆಯುತ್ತಲಿವೆ. ಇವು ನಿಲ್ಲಬೇಕು. ಇವು ನಿಲ್ಲದಿದ್ದರೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತೆ. ಹೈದರಾಬಾದಿನ ಮುಂದೆ ಎರಡೇ ಪ್ರಶ್ನೆಗಳುದಿವೆ. ಯುದ್ಧ ಇಲ್ಲವೆ; ಭಾರತ ಒಕ್ಕೂಟಕ್ಕೆ ಸೇರುವುದು ಯುದ್ಧವೆಂಬುದು ದೀರ್ಘಕಾಲದ ಕಾರ್ಯ. ಈ ಕಾರಣ ಸಾಧ್ಯವಾದಷ್ಟು ಮಟ್ಟಿಗೆ ಶಾಂತಿಯಿಂದಲೇ ಈ ಸಮಸ್ಯೆಯನ್ನು ಬಗೆಹರಿಸಲು ನಿಶ್ಚಯಿಸಿದ್ದೇವೆ. ಶ್ರೀ ವಲ್ಲಭಭಾಯಿ ಪಟೇಲರು ಹೇಳಿದಂತ ಗೌರವಯುತ ಒಪ್ಪಂದವೇ ಬೇಕು" ಎಂದು ಭಾರತ ಪ್ರಧಾನಿಗಳಾದ ಪಂಡಿತ ಜವಹರಲಾಲ್ ನೆಹರೂರವರು ಬೊಂಬಾಯಿಯ ವಿವಿಧ ಸಭೆಗಳಲ್ಲಿ ಕೊಟ್ಟ ಹೇಳಿಕೆಗಳ ಸಾರಾಂಶವಿದು.

ಹೈದರಾಬಾದ್ ಮುಖ್ಯಮಂತ್ರಿಗಳಾದ ಲಾಯಿಕ್ ಅಲಿಯವರು ಉತ್ತರವೀಯುತ್ತಾ "ನಾವು ಅನೇಕ ಸಲ ಗೌರವಯುಕ್ತ ಒಪ್ಪಂದಕ್ಕೆ ಪ್ರಯತ್ನಪಟ್ಟೆವು ಅದು ವ್ಯರ್ಥವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಪಾಕಿಸ್ತಾನಕ್ಕಾಗಲಿ, ಭಾರತಕ್ಕಾಗಲಿ ಸೇರದೆ ಹೈದರಾಬಾದು ಸ್ವತಂತ್ರವಾಗಿ ಉಳಿಯಬೇಕೆಂದು ನೈಜಾಮರು ನಿಶ್ಚಯಿಸಿರುವರು. ಹೈದರಾಬಾದನ್ನು ಸರಿಯಾಗಿ ನಡೆಸಿಕೊಂಡಿದ್ದರೆ ಪೂರ್ವ, ಪಶ್ಚಿಮ ಪಂಜಾಬ್‌ಗಳಲ್ಲಿನ ಹತ್ಯಾಕಾಂಡವು ನಿಲ್ಲಬಹುದಿತ್ತು. ಭಾರತ ಸರ್ಕಾರದ ಬಲಪ್ರಯೋಗ ಮಾಡಿದರೆ ಹೈದರಾಬಾದು ಅನಿವಾರ್ಯ ಪಕ್ಷದಿಂದ ಅದನ್ನೆದುರಿಸಬೇಕಾಗುತ್ತದೆ ಎಂದು ಹೇಳಿದರು.

## ರಜ್ವಿ ಬೊಬ್ಬಾಟ

ಭಗವಂತನು ಯಾರಿಗೆ ಜಯವನ್ನು ಬರೆದಿಟ್ಟಿರುವನೋ ಅವರನ್ನು ಸೋಲಿಸಲು ಯಾರಿಂದ ಸಾಧ್ಯ. ಈ ದಿನ ನೆಹರೂರವರು ಹೇಳಿದುದನ್ನು ನಾಳೆ ಉಪಪ್ರಧಾನಿಗಳು ಅಲ್ಲಗಳೆಯುತ್ತಾರೆ. ಇವರಿಬ್ಬರ ಗೊಡ್ಡು ಬೆದರಿಕೆ ಇಂಡಿಯಾ ಸರ್ಕಾರವು ದೊಡ್ಡ ಪರ್ವತದಂತಿರಬಹುದು ಆದರೆ ಅಂಥಾ ಪರ್ವತವನ್ನು ಸಣ್ಣ ಹಳ್ಳಗಳು ನೀರಿಗೆ ಹೋಗುವುವು ಇದನ್ನು ನೆಹರೂರವರು ಮರೆಯದಿರಲಿ" ಎಂದು ಹೇಳಿದರು.

—ಪಾಲಿಸ್ತಾನದಲ್ಲಿ ಯಹೂದಿಗಳು ಮುಖ್ಯ ಪಟ್ಟಣಗಳನ್ನಾಕ್ರಮಿಸಿಕೊಳ್ಳಲು ಯುದ್ಧವನ್ನು ಸಾರುವರು ಅತ್ತ ಅರಬ್ ರಾಷ್ಟ್ರಗಳೂ ಯಹೂದಿಗಳ ಮೇಲೆ ಯುದ್ಧ ಸಾರಲಿವೆ. ಹೈಫಾ ನಗರದಿಂದ ಅರಬರೆಲ್ಲಾ ಹೊರಹೊರಟಿದ್ದಾರೆ.

## CORRESPONDENCE

### Public Safety Act & Madras Government's Duty

*To*

*The Editor Nava Bharat, Bellary*

The exercise of the powers under the Madras maintenance of the Public Safety Act by our benign National Government, one would have hoped would be characterised by due circumspection, befitting the dignity of a free nation This hope I regret to note has proved in vain in regard to the arrest of Sri Nippani Ranga Rao at Rayadrug. The graveman of the charge against him seems to be that he is a Communist Accustomed as we were to the rule by the rod under the foreign yoke not long ago, I must confess my aversion to any dictatorial powers exercised by the Government. Civil liberties in the new set up of free India ought to be held inviolable and sacred. I am glad to note Pandit Nehru's reference to the Bombay union journalists that "The Provincial Government's measures were directed against certain individual communists who were planning sabotage of communications or collecting arms but were not directed against either Communism or the Communist Pary as such" (Hindu 28th April 48) To quote the Hindu editorial "Surely the correct preceedure would be to take action under the existing Criminal law. That is the democratic way, for, it is only when things are done openly that public oppinion supports the actions of the Government". The remarks of the Hindu addressed in the context of the liberty of pres are applicable with equal force to the arrest of Sri Nippani Ranga Rao. Judged by the standard prescribed by Pandit Nehru, detention of a person is warranted only in case he was planning damage to property or persons Knowing as we do Sri Nippani, I trust that the Govt. would be justified in looking into the case and revise the executive order if need be.

(A Congress Worker.)

### ಭಾಷಾವಾರ ಪ್ರಾಂತರಚನೆಯು ಬೇಡ
### ಶ್ರೀ ಲಿಂಗಾರೆಡ್ಡಿಯವರ ತಾರು

ರಾಯಲಸೀಮ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಶೇಖ್, ಲಿಂಗಾರೆಡ್ಡಿಯವರು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಭಾರತ ಪ್ರಧಾನಿಗಳಾದ ಪಂಡಿತ ನೆಹರು, ಕಾಂಗ್ರೆಸ್ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರಿಗೆ ಈ ಪ್ರಕಾರ ತಂತಿ ಕೊಟ್ಟಿದ್ದಾರೆ

> "ಭಾಷಾವಾರ ದೃಷ್ಟಿಯಿಂದಾಗಲಿ ಇತರ ಕಾರಣಗಳಿಂದಾಗಲಿ ದೇಶವನ್ನು ವಿಭಜಿಸಿದರೆ ಸ್ವಾತಂತ್ರ್ಯಕ್ಕೇ ಧಕ್ಕೆ ತಟ್ಟುವುದು. ಮದ್ರಾಸ್ ಪ್ರಾಂತವನ್ನು ವಿಂಗಡಿಸಬೇಕೆನ್ನುವವರು ಸ್ವಾರ್ಥವಾದಿಗಳಿದ್ದಾರೆ. ಪೂರ್ಣ ಪರೀಕ್ಷೆಯಿಲ್ಲದೆ ರಾಯಲಸೀಮೆಯ ಹಿತಗಳಿಗೆ ಹಾನಿಕರವಾದ ಈ ವಿಭಜನೆಯನ್ನು ಮಾಡಬೇಡಿರಿ. ಶೀಘ್ರ ಕೃತ್ಯವು ಒಳ್ಳೆಯದಲ್ಲ ನಮ್ಮ ಅಭಿಪ್ರಾಯವನ್ನೂ ಕೇಳಿಕೊಳ್ಳಿರಿ"

193

## ದೆಹಲಿಯಲ್ಲಿ
## ಆಹಾರ ಸಚಿವರ ಸಮ್ಮೇಳನ

**ಪಂಡಿತ** ನೆಹರೂರವರು ಈ ಸಮ್ಮೇಳನದ ಪ್ರಾರಂಭವಾಡುತ್ತಾ ಹೀಗೆ ಹೇಳಿದರು.

"ಆಹಾರ ಗಂಡಾಂತರದಿಂದ ನಾವು ಪಾರಾಗಿದ್ದರೂ ನಮ್ಮ ಪ್ರಯತ್ನಗಳನ್ನು ಬಿಡಲು ಬಿಡಬಾರದು. ಕಳೆದ ವರ್ಷ ಸಾಕಷ್ಟು ಉತ್ಪಾದನೆಯಾಗಿಲ್ಲ. ಹೆಚ್ಚು ಧಾನ್ಯ ಬೆಳೆಸುವುದರಿಂದ ನಮ್ಮ ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತವೆ. ನಮ್ಮ ಅನೇಕ ನೀರಾವರಿ ಯೋಜನೆಗಳ ಫಲವನ್ನುಣ್ಣಬೇಕಾದರೆ ಇನ್ನೂ ಕೆಲ ವರ್ಷಗಳು ಬೇಕು. ಇದಕ್ಕಿಂತಲೂ ಶೀಘ್ರವಾಗಿ ಆಹಾರಧಾನ್ಯಗಳನ್ನುತ್ಪತ್ತಿ ಮಾಡುವ ಮಾರ್ಗಗಳನೇಕವಿವೆ. ಇವಕ್ಕೆ ಎಲ್ಲರ ಸಹಕಾರ ಬೇಕು.

### ಆಹಾರ ಮಂತ್ರಿ ಜಯರಾಂದಾಸ್ ದೌಲತರಾಂ

ನಮ್ಮ ಆಹಾರ ಪರಿಸ್ಥಿತಿ ಅಷ್ಟೇನೂ ಕೆಟ್ಟಿರುವುದಿಲ್ಲ. ಕೊರತೆಯಿದ್ದ ಎಲ್ಲ ಪ್ರದೇಶಗಳಿಗೂ ಆಹಾರಧಾನ್ಯ ಕಳುಹಿಸಿದ್ದೇವೆ. ಮದ್ರಾಸ್ ಪ್ರಾಂತ್ಯದಲ್ಲಿ ಮಳೆಬಾರದೆ ಮೂರು ತಿಂಗಳ ಹಿಂದೆ ಕೊರತೆಯಾಯಿತು. ಹೆಚ್ಚು ಬೆಳೆದ ಪ್ರದೇಶದವರ ಸಹಕಾರದಿಂದ ನಾವು ಪಾರಾದೆವು.

1947-48 ರಲ್ಲಿ ನಾವು ಒಟ್ಟಿಗೆ 9 ಲಕ್ಷ ಟನ್ ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆದಿರುತ್ತೇವೆ. ನಾವು ದೇಶದ ಬೇಡಿಕೆಯನ್ನು ಇನ್ನೂ ಪೂರೈಸುವಂತಿಲ್ಲ. ಪರದೇಶಗಳಿಂದ ತರಿಸುವುದನ್ನು ಸಾಕಷ್ಟು ನಿಲ್ಲಿಸೋಣ. ಧಾನ್ಯಗಳ ಧಾರಣೆ ಇಳಿಸಲು ಪ್ರಯತ್ನಿಸೋಣ. ಇಂದು ನಮಗೆ 25 ಲಕ್ಷ ಟನ್ ಆಹಾರ ಬಂದಿತು. ಮದ್ರಾಸ್ ಬೊಂಬಾಯಿಗಳಲ್ಲಿ ಹೆಚ್ಚುತ್ತಿರುವ ಧಾರಣೆಯನ್ನು ತಗ್ಗಿಸಬೇಕಾಗಿದೆ. ಪ್ರಾಂತ ಪ್ರಾಂತದಿಂದ ಸಾಗಾಟಕ್ಕೆ ತೊಂದರೆ ಇರಬಾರದೆಂದು ಕೆಲವರು ಸೂಚಿಸಿರುವರು. ಎಲ್ಲಾ ಆಹಾರ ಧಾನ್ಯಗಳ ವಿನಿಯಂತ್ರಣ ಮಾಡಲು ಕೆಲವರು ಸೂಚಿಸಿದ್ದಾರೆ. ನಿಮ್ಮ ಸಲಹೆ ಸೂಚನೆಗಳು ಬೇಕು ಎಂದರು.

---

## ರಾಜಕೀಯ ಜನರಿಗೆ ಭೂಮಿ

ಈ ಹಿಂದೆ ಸ್ವಾತಂತ್ರ್ಯೋದ್ಯಮಗಳಲ್ಲಿ ಭಾಗವಹಿಸಿ ಜೈಲಿನ ಶಿಕ್ಷೆಯನ್ನು ಭೋಗಿಸಿದ ರಾಜಕೀಯ ಜನರಿಗೆ ಮದ್ರಾಸ್ ಸರ್ಕಾರದವರು 5 ಎಕರೆ ತರಿ ಅಥವಾ 10 ಎಕರೆ ಖುಷ್ಕಿ ಕೊಡಲು ನಿಶ್ಚಯಿಸಿರುವರಷ್ಟೆ. ಈಗ 10,000 ರಾಜಕೀಯ ಜನರು ಅರ್ಜಿ ಇಟ್ಟಿರುವರೆಂದು ಗೊತ್ತಾಗಿದೆ. ಜಿಲ್ಲೆ ಜಿಲ್ಲೆಗೂ ಅನಧಿಕಾರೀ ಸಮಿತಿಗಳನ್ನೇರ್ಪಡಿಸಿ ಅವರ ಸಲಹೆ ಮೂಲಕ ಕಲೆಕ್ಟರವರು ಭೂದಾನ ಮಾಡುವರೆಂದು ಕೇಳಲಾಗಿದೆ. ಈ ಕೆಳ ಸಮಿತಿಗಳು ಸರ್ಕಾರಿಂದ ಪ್ರಕಟವಾಗಿವೆ.

ಬಳ್ಳಾರಿ (ಕರ್ನಾಟಕ ಭಾಗ :

ಶ್ರೀ ಟಿ. ಸುಬ್ರಹ್ಮಣ್ಯ; ಶ್ರೀ ಬಿ. ಅನಂತಾಚಾರಿ ಶ್ರೀ ಇಡಾರಿ ಶಿವನಪ್ಪ

ಬಳ್ಳಾರಿ (ಆಂಧ್ರ ಭಾಗ):—

ಶ್ರೀ ಎ ವೆಂಕಟರೆಡ್ಡಿ. ಶ್ರೀ ಬಾಲಾರಾಮಸಿಂಗ್

---

## ಗ್ರಾಮೋದ್ಯೋಗಗಳಿಗೆ ಸರ್ಕಾರದ ಸಹಾಯ

ದೇಶದ ಆರ್ಥಿಕ ಪ್ರಗತಿಗೆ ಸಾಧಕವಾದ ಯಾವ ಗ್ರಾಮೋದ್ಯೋಗಗಳಲ್ಲಿ ತೊಡಗಿರುವವರೂ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ರವರಿಗೆ ಅರ್ಜಿ ಹಾಕಿ 500 ಗಳನ್ನು ಸಾಲದ ರೂಪದಿಂದಾಗಲಿ ಗ್ರ್ಯಾಂಟಿನ ರೂಪದಿಂದಾಗಲಿ ಪಡೆಯಬಹುದು.

## ಕೈಮಗ್ಗದ ಬಟ್ಟೆ
## ಪರಪ್ರಾಂತಗಳಿಗೆ ಕಳುಹಿಸಬಹುದು

ಭಾರತ ಒಕ್ಕೂಟದಲ್ಲಿ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಮತ್ತು ಸಂಸ್ಥಾನಗಳಿಗೆ ಕೈಮಗ್ಗದ ಬಟ್ಟೆ ಕಳುಹಿಸಲು ಇಲ್ಲಿಯವರೆಗಿದ್ದ ಪ್ರತಿಬಂಧವನ್ನು ಈಗ ತೆಗೆದುಹಾಕಲಾಗಿದೆ, ಆದರೆ ಮಿಲ್ ಮತ್ತು ಖಾದಿ ಬಟ್ಟೆಗಳನ್ನು ಹೊರಗೆ ಕಳುಹಿಸಲು ಬರುವಂತಿಲ್ಲ.

## ಇಂದಿನ ಜಗತ್ತು

# ಅಂಕುಶವಿಲ್ಲದ ಆನೆ

—— )()( –

ಇಂದು ಜಗತ್ತಿನ ಯಾವದೇ ಭಾಗವನ್ನು ನೋಡಿದರೂ ಜಗಳ, ತಂಟೆ, ಕಾದಾಟ ಇವೇ ಕಾಣುತ್ತಿವೆ, ಅವುಗಳನ್ನು ನಿಲ್ಲಿಸುವ ಇಲ್ಲವೆ ಬಗೆಹರಿಸುವ ಬಗ್ಗೆ ಸರ್ವರಾಷ್ಟ್ರಗಳು ಕೂಡಿಕೊಂಡು ಆಗಾಗ್ಗೆ ವಿಚಾರಮಾಡುತ್ತಿವೆ. ಆದರೆ ಆ ವಿಚಾರಗಳಿಂದ ಏನೂ ಪ್ರಯೋಜನವಾಗುತ್ತಿಲ್ಲ ಒಂದು ವೇಳೆ ಇಂತಹ ಸಭೆಗಳಲ್ಲಿ ಏನಾದರೂ ನಿರ್ಣಯವಾದರೆ ಅವುಗಳು ಕಾರ್ಯದಲ್ಲಿ ಬರುವುದೇ ಅಸಾಧ್ಯವಾಗುತ್ತದೆ. ಆ ನಿರ್ಣಯದಿಂದ ತನಗೆ ಅನುಕೂಲವಾಗುವುದು ಎಂದು ತಿಳಿದ ರಾಷ್ಟ್ರವು ಅದನ್ನು ಒಪ್ಪಿಕೊಳ್ಳುತ್ತಿದೆ ಅದು ತನಗೆ ಪ್ರತಿಕೂಲ ಪರಿಸ್ಥಿತಿಯನ್ನು ಹುಟ್ಟಿಸುವುದು ಎಂದು ತಿಳಿದ ರಾಷ್ಟ್ರವು ಆ ನಿರ್ಣಯವನ್ನು ಬದಿಗಿರಿಸಿ ಮುಂದೆ ಸಾಗುವುದು,

ಈ ರೀತಿಯ ಪರಿಸ್ಥಿತಿಯು ಹುಟ್ಟಲು ಕಾರಣವೇನು ಎಂಬುದು ಸರ್ವರಿಗೂ ಗೊತ್ತಿದೆ. ಪ್ರಬಲ ರಾಷ್ಟ್ರಗಳಾದ ರಶಿಯಾ, ಅಮೇರಿಕೆ, ಇಂಗ್ಲಂಡಗಳಿಗೆ ಕೂಡ ಈ ಸಂಗತಿಯು ಚನ್ನಾಗಿ ತಿಳಿದದ್ದಾಗಿದೆ. ತಮ್ಮ ಅಸಹಾಯತನಕ್ಕಾಗಿ ಇಂದು ಇವು ಮನಸ್ಸಿನೊಳಗೇ ಬೊಟ್ಟು ಕಚ್ಚಿಕೊಳ್ಳುತ್ತಿವೆ.

“ ಬಿತ್ತಿದ್ದನ್ನು ಬೆಳೆದುಕೋ ” ಎಂಬುದೊಂದು ಗಾದೆಯು ನಮ್ಮಲ್ಲಿ ಇದೆಯಷ್ಟೆ. ಅದೇ ಬೀಜ ಮಾತಿನ ಫಲವನ್ನು ಇಂದು ಜಗತ್ತು ಉಣ್ಣುತ್ತಿದೆ. ಎರಡನೇ ದೇಶಗಳನ್ನು ತಮ್ಮ ಜಾಲದಲ್ಲಿ ಅಥವಾ ಅಂಕಿತದಲ್ಲಿ ಹಿಡಿದುಕೊಂಡು ಮೆರೆಯಬೇಕೆನ್ನುವ ಈ ರಾಷ್ಟ್ರಗಳು ಇಂದು ಹಗಲು ರಾತ್ರಿ ನಿದ್ರೆ ನೀರಡಿಕೆಗಳ ಪರಿವೆಯಿಲ್ಲದೆ ಜಾಗರಣೆಮಾಡಬೇಕಾಗಿದೆ. ಇತರರಲ್ಲಿ ಪರಸ್ಪರ ದ್ವೇಷಾಸೂಯೆಗಳನ್ನು ಹುಟ್ಟಿಸಿ ಅದರ ಲಾಭವನ್ನು ಈ ತಲೆನಾಯಕ ದೇಶಗಳು ಪಡೆದವು. ಇಂದು ಆ ದ್ವೇಷ ಅಸೂಯೆಗಳ ಕಾರಣದಿಂದಲೇ ತಾನೇ ಇಂದು ಮಣ್ಣು ಮುಕ್ಕಬೇಕಾಗಿ ಬಂದಿದೆ.

ರಾಜನೀತಿಯೆಂದರೆ ಮೋಸ, ವಿಶ್ವಾಸ ಘಾತಕಗಳ ಆಗರವೆಂಬ ಮಟ್ಟಿಗೆ ಇವರು ಮೇಲ್ಪಂಕ್ತಿಯನ್ನು ಹಾಕಿ ಬಿಟ್ಟರು ಇಡೀ ಜಗತ್ತನ್ನು ಈ ನಂಜಿನಿಂದ ಬಳಿದು ಬಿಟ್ಟರು ಪ್ರತಿಯೊಂದು ರಾಷ್ಟ್ರವು ಒಂದಿಲ್ಲೊಂದು ಪಕ್ಷಕ್ಕೆ ಸೇರುವಂತೆ ಮಾಡಿ ಬಿಟ್ಟರು. ಹೀಗಾಗಿ ಇಂದು ಜಗಳಾಡುವ ಎರಡು ದೇಶಗಳನ್ನು ಒತ್ತಟ್ಟಿಗೆ ಕೂಡಿಸಿ ಅವುಗಳಿಗೆ ಉಪದೇಶಮಾಡಿ ಗಂಡಾಂತರವನ್ನು ತಪ್ಪಿಸಲು ಬೇಕಾದ ನಿಃ ಪಕ್ಷಪಾತತನವು ಮತ್ತು ಶಕ್ತಿಯು ಯಾವ ದೇಶದಲ್ಲಿಯೂ ಇಂದು ಇಲ್ಲದಾಗಿದೆ.

ಪ್ರಬಲ ರಾಷ್ಟ್ರಗಳೇ ನಿಜವಾಗಿ ನೋಡಿದರೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು, ಜಗತ್ತಿನಲ್ಲಿ ಅವಿಚಾರತನ, ಜಗಳಮಾಡುವ ಮನೋವೃತ್ತಿ ಇವುಗಳನ್ನು ನಿಲ್ಲಿಸಲು ಉಪಯೋಗಿಸುವ ಪರಿಸ್ಥಿತಿಯನ್ನು ಇಟ್ಟುಕೊಂಡಿರಬೇಕಾಗಿತ್ತು. ಅವೇ ಇಂದು ಒಂದೊಂದು ಪಕ್ಷವನ್ನು ವಹಿಸಿಬಿಟ್ಟವೆ. ಅಂದ ಬಳಿಕ ಜಗಳವನ್ನು ತೀರಿಸುವವರಾರು ?

ಮತ್ತು ಒಂದುವೇಳೆ ಈ ತಂಟೆಯನ್ನು ತೀರಿಸುವ ಇಚ್ಛೆಯು ಯಾವವೇ ಸಣ್ಣ ಪುಟ್ಟ ದೇಶಗಳಿಗೆ ಅಥವಾ ವ್ಯಕ್ತಿಗಳಿಗೆ ಉಂಟಾದರೆ ಅವರಿಗೆ ಆ ಕಾರ್ಯವು ಆಗುವುದಾದರೂ ಹೇಗೆ ? ನಿರ್ಣಯ ಹೇಳುವವನು ನಿರ್ಣಯ ಕೇಳುವವರಿಗಿಂತ ಸಬಲನಾಗಿರಬೇಕಾಗುತ್ತದೆ ಅಂದರೆ ಮಾತ್ರ ಆ ಪಕ್ಷಗಳು ಆ ನಿರ್ಣಯಕ್ಕೆ ಬದ್ಧವಾಗಿ ನಡೆಯುತ್ತವೆ. ಇಲ್ಲದಿದ್ದರೆ ಅದನ್ನು ಬದಿಗೆ ಸರಿಸಿ ತಮ್ಮ ಮನಸ್ಸಿಗೆ ಬಂದಂತೆ ವರ್ತಿಸಲು ಸಿದ್ಧವಾಗುತ್ತಿವೆ.

ಬರಲಿರುವ ಯುದ್ಧವನ್ನು ನಿಲ್ಲಿಸುವ ಯತ್ನವನ್ನು ಇಂದು ಉಳಿದ ದೇಶಗಳು ಮಾಡುವುದೆಂದರೆ ಜಗಳಾಡುವ ಸಮುದ್ರಗಳನ್ನು ದಾರಿಗೆ ತರಲು ನದಿಗಳು ಯತ್ನಿಸಿದಂತೆ ಇದೆ, ಆದ್ದರಿಂದ ರಶಿಯಾ ಅಮೇರಿಕೆಗಳೇ ಇಂದು ಈ ಅನಿಷ್ಟ ಸ್ಥಿತಿಯನ್ನು ತಪ್ಪಿಸಲು ಸಮರ್ಥವಾಗಿವೆ. ಆ ಕಾರ್ಯವನ್ನು ಅವು ಮಾಡದಿದ್ದರೆ ಏನಾಗಲಿದೆ, ಅದು ಆಗಿಯೇ ಹೋಗಲಿ ಎನ್ನಬೇಕಾಗುತ್ತದೆ.

ಹೀಗಾಗಿ ಇಂದು ಪ್ರಪಂಚದ ಯಾವ ಭಾಗದಲ್ಲಿ ನಡೆದ ಜಗಳ ತಂಟೆಗಳೂ ತೀರದೆ ಹಾಗೆಯೇ ವಿಕೋಪ

ದ ಸ್ಥಿತಿಗೆ ಮುಟ್ಟುತ್ತಿದೆ. ಎರಡು ಪಕ್ಷಗಳಲ್ಲಿ ಯಾವುದು ಹೆಚ್ಚು ಬಲಶಾಲಿಯಾಗುವುದೋ ಅದು ಜಯಿಸುತ್ತದೆ, ಕಡಿಮೆ ಶಕ್ತಿಯುಳ್ಳದು ಬಂದದ್ದನ್ನು ಅನುಭೋಗಿಸುತ್ತ ಕೂಡುತ್ತಿದೆ.

ಪಾಲಿಸ್ತಾನದಲ್ಲಿ ಇಂದು ನಡೆದಿರುವ ಪರಿಸ್ಥಿತಿಯನ್ನು ನೋಡಿದರೆ ಅದು ಇಡೀ ಜಗತ್ತಿನಲ್ಲಿ ಏನು ನಡೆದಿದೆ ಎಂಬುದರ ಚಿತ್ರವನ್ನೇ ತೋರಿಸುತ್ತದೆ ಅಲ್ಲಿ ಇದುವರೆಗೆ ಬ್ರಿಟಿಶರ ಅಧಿಕಾರವಿತ್ತು, ಬ್ರಿಟಿಶರೇ ಮಾಡಿದ ಘೋಷಣೆಯ ಪ್ರಕಾರ ಗೆ ನಾಳಿನ ಮೇ 15ನೇ ತಾರೀಖಿಗೆ ಅವರು ಅಲ್ಲಿಂದ ಕಾಲುಕಿತ್ತುಕೊಂಡು ಹೋಗಬೇಕು ಆ ದಿವಸದಿಂದ ಮುಂದೆ ಪಾಲಸ್ತಾನವು ಸ್ವತಂತ್ರವಾಗುವುದಿದೆ ಆದರೆ ಅಲ್ಲಿ ನಡೆದ ಇಂದಿನ ಕೋಲಾಹಲವನ್ನು ನೋಡಿದರೆ ಬ್ರಿಟಿಶರು ಇನ್ನೂ ಕೆಲವು ದಿವಸ ಅಲ್ಲಿ ಇದ್ದು ಆ ಪರಿಸ್ಥಿತಿಯು ಶಾಂತವಾದ ಬಳಿಕ ಅಲ್ಲಿಂದ ಕಾಲುಕಿತ್ತುವುದು ಯೋಗ್ಯವೆಂದು ಅಂತರರಾಷ್ಟ್ರೀಯ ಮುತ್ಸದ್ದಿಗಳು ಹೇಳುತ್ತಿದ್ದಾರೆ.

ಅಂತರ ರಾಷ್ಟ್ರೀಯ ಅಭಿಪ್ರಾಯಕ್ಕೆ ಇಂದು ಏನೂ ಬೆಲೆಯಿಲ್ಲದಾಗಿದೆ. ಪಾಲಿಸ್ತಾನವನ್ನು ಇಬ್ಭಾಗಿಸಬೇಕು ಎಂದು ರಾಷ್ಟ್ರ ಸಂಘದವರು ನಿರ್ಣಯ ಮಾಡಿದರು. ಆದರೆ ಆ ನಿರ್ಣಯದ ಮೂಲಕವೇ ಇಂದು ಪಾಲಿಸ್ತಾನದಲ್ಲಿ ಕ್ರಾಂತಿಯು ಎದ್ದು ಹೋಗಿದೆ, ಜ್ಯೂ ಮತ್ತು ಅರಬರು ಪ್ರಾಣಾಂತಿಕ ಯುದ್ಧದಲ್ಲಿ ತೊಡಗಿದ್ದಾರೆ,

ಏನಾದರೂ ಮಾಡಿ, ಪಾಲಿಸ್ತಾನದಲ್ಲಿ ಶಾಂತಿಯನ್ನು ಉಂಟುಮಾಡಬೇಕೆಂದು ಪ್ರಬಲ ರಾಷ್ಟ್ರಗಳಲ್ಲಿ ಇಚ್ಛೆಯಿದ್ದರೆ ಅವುಗಳಲ್ಲಿ ಈಗ ಮೂರು ದಾರಿಗಳಿವೆ.

ಒಂದನೆಯದೆಂದರೆ ಅರಬ ಮತ್ತು ಜ್ಯೂಗಳಲ್ಲಿ ಒಡಂಬಡಿಕೆ ಮಾಡಿಸಿ ಶಾಂತಿಯನ್ನು ಹುಟ್ಟಿಸುವುದು. ಇಷ್ಟು ಹಾನಿಯಾದ ನಂತರ ಅವರು ತಮ್ಮ ತಮ್ಮಲ್ಲಿ ಈ ವಿಷಯವನ್ನು ಬಗೆಹರಿಸಿಕೊಳ್ಳಲು ಸಿದ್ಧರಿದ್ದಾರೆಂದೂ ಕಾಣುತ್ತಿದೆ.

ಎರಡನೆಯದೆಂದರೆ ಅವರಿಬ್ಬರನ್ನೂ ತಲೆಬಡೆಯುವಂತಹ ಪರಿಸ್ಥಿತಿಯನ್ನು ಹುಟ್ಟಿಸಿ ಆ ವಿಷಯವನ್ನು ಬಗೆಹರಿಸಬೇಕು. ಅಂದರೆ ಅಂತಹ ಸೈನ್ಯಶಕ್ತಿಯೊಡನೆ ಅಲ್ಲಿಗೆ ಹೋಗಿ ಅವರನ್ನು ಬೊಗ್ಗಿಸಬೇಕಾಗುವುದು.

ಮೂರನೆಯ ದಾರಿಯೆಂದರೆ ಅವರಿಬ್ಬರನ್ನು ಕೈ ಬಿಟ್ಟುಬಿಟ್ಟು ನಿಮ್ಮ ನಿಮ್ಮ ಧೈರ್ಯ ಬಗೆಹರಿಸಿಕೊಳ್ಳಿರಿ ಎಂದು ಹೇಳಿಬಿಡಬೇಕು.

ಹಿರಿಯ ಹುದ್ದರಿಗಳಿಂದ ಈ ಮೂರೂ ಕಾರ್ಯಗಳು ಆಗುವಂತಿಲ್ಲ. ಏಕೆಂದರೆ ಅವರಲ್ಲಿ ಒಡಂಬಡಿಕೆ ಮಾಡಿಸಲು ಆ ನೈತಿಕ ಶಿದ್ಧತೆಯೆಲ್ಲಿದೆ? ಇವರು ಕೂಡ ಉರಿಯಲ್ಲಿ ಎಣ್ಣೆಯನ್ನು ಹಾಕುವವರೇ ಆಗಿದ್ದಾರೆಯೋ ಹೊರತು ಇಂತಹ ಜಗಳಗಳನ್ನು ನಂದಿಸಬೇಕೆಂದು ಇವರು ಇಚ್ಛಿಸುತ್ತಿಲ್ಲ

ಸೈನ್ಯ ಬಲದಿಂದ ಅಂತಹ ಪರಿಸ್ಥಿತಿಯನ್ನು ದಾರಿಗೆ ತರಬೇಕೆಂದರೆ ಹಿರಿರಾಷ್ಟ್ರಗಳಲ್ಲಿ ಒಕ್ಕಟ್ಟಿಲ್ಲ. ಯಾರಾದರೂ ಒಂದು ಪಕ್ಷಕ್ಕೆ ಹೊರಟರೆ ಅಥವಾ ಎರಡೂ ಪಕ್ಷಗಳನ್ನು ಹಾದಿಗೆ ತರಲು ಹೋದರೆ ಮತ್ತೊಂದು ರಾಷ್ಟ್ರವು ಒಂದು ಪಕ್ಷದ ಬೆಂಬಲಕ್ಕೆ ನಿಲ್ಲದೆ ಇರಲಾರದು. ಆ ಪ್ರಸಂಗದಲ್ಲಿ ನಾಳಿನ ಮೂರನೆಯ ಯುದ್ಧದ ಪ್ರಾರಂಭೋತ್ಸವವು ಅಲ್ಲಿಯೇ ಆಗುವುದು

ಅವರಷ್ಟಕ್ಕೆ ಅವರನ್ನೇ ಬಿಟ್ಟು, ಬಿಡಲೂ ಇವರ ಸಿದ್ಧತೆಯಿಲ್ಲ. ಬಿಟ್ಟು ಬಿಟ್ಟರೆ ಉಳಿದವರು ಬಂದು ತಮ್ಮ ವರ್ಚಸ್ಸನ್ನು ಕೂಡಿಸಿಕೊಂಡಾರು ಎಂಬ ಸಂಶಯ ಇಷ್ಟೇ ಅಲ್ಲದೆ ಒಂದು ಪಕ್ಷವನ್ನು ವಹಿಸಿ ಅಲ್ಲಿಯ ಪರಿಸ್ಥಿಯ ಲಾಭವನ್ನು ಹೊಂದುವ ಹವ್ಯಾಸವು ಇವರಲ್ಲಿ ಇನ್ನೂ ಇದ್ದೇ ಇದೆ.

ಮುಖ್ಯವಾಗಿ ದ್ವೇಷ, ಅಸೂಯೆ, ಮತ್ಸರ ಕೆ. ಸ್ವಾರ್ಥಗಳ ಮೇಲೆ ಇಂದು ಜಗತ್ತು ಮೊದಲಿನಿಂದ ಕಡೆತನಕ ನಿಂತಿರುವುದರಿಂದ ಯಾವುದಕ್ಕೂ ಯಾರೂ ಹೇಳು ಕೇಳುವ ಪರಿಸ್ಥಿತಿ ಇಲ್ಲದಂತಾಗಿದೆ ಅಂಕುಶವಿಲ್ಲದಾಗ ಆನೆಯು ಕಂಡಕಂಡಲ್ಲಿ ನುಗ್ಗುವಂತೆ ಜಗತ್ತು ಇಂದು ಉನ್ಮಾದದಿಂದ ಕುಣಿಯುತ್ತಿದೆ. ಈ ಪರಿಸ್ಥಿತಿಯಲ್ಲಿ ಮುಂಗೈಯಲ್ಲಿ ಬಲವಿದ್ದವನು ಮಾತ್ರ ಬದುಕುವನು,

(ಜಯಹಿಂದ್)

# ಕಮ್ಯೂನಿಸ್ಟರ ಧ್ಯೇಯವೇನು?

ಕಮ್ಯೂನಿಸ್ಟರ ಬಗ್ಗೆ ಇಡೀ ಜಗತ್ತಿನಲ್ಲಿ ಇಂದು ಗದ್ದಲವೆದ್ದಿದೆ. ಅವರು ಶಾಂತಿ ಸಮಾಧಾನಗಳನ್ನು ಕೆಡಿಸಿ ಜನತೆಯಲ್ಲಿ ಪಕ್ಷ ಪಂಗಡಗಳನ್ನು ಹುಟ್ಟಿಸಿ ಅವುಗಳ ನಡುವೆ ದ್ವೇಷ ಅಸೂಯೆಗಳನ್ನು ಬಿತ್ತುತ್ತಿದ್ದಾರೆಂದು ಅವರ ಕಡೆಗೆ ಜಾಗತಿಕ ಸರ್ವ ರಾಷ್ಟ್ರಗಳು ಕಣ್ಣಲ್ಲಿ ಎಣ್ಣೆಹಾಕಿಕೊಂಡು ನೋಡುತ್ತಿವೆ.

ರಶಿಯದ ಉಪದೇಶದಂತೆ ಕಮ್ಯೂನಿಸ್ಟರು ನಡೆಯುತ್ತಿದ್ದುದು, ಅವರ ಬಗ್ಗೆ ಹುಟ್ಟಿರುವ ವಿರೋಧಕ್ಕೆ ದೊಡ್ಡ ಕಾರಣವಾಗಿದೆ. ಜಾಗತಿಕ ಕ್ಷೇತ್ರದಲ್ಲಿ ರಶಿಯಾವು ಒಂದು ಪಕ್ಷವಾಗಿರುವುದರಿಂದ ಅದರ ಮತ್ತು ಅದರ ಸ್ನೇಹಸಂಪಾದಿಸಿ ನಡೆಯುತ್ತಿರುವವರ ಚಟುವಟಿಕೆಗಳು ಉಳಿದವರಿಂದ ಸಂಶಯಯುಕ್ತವಾದ ದೃಷ್ಟಿಯಿಂದ ನೋಡಲ್ಪಡುತ್ತಿವೆ.

ಹಿಂಸಗೆಬಿದ್ದು ಬೇಕಾದ ರೀತಿಯಿಂದ ತಮ್ಮ ಕೈವಾಡವನ್ನು ನಡೆಸಿ ಜಗತ್ತಿನಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಲು ರಶಿಯಾವು ಇಂದು ಯತ್ನಿಸುತ್ತಿರುವುದರಿಂದ ಅದರ ಕಾರ್ಯಕ್ರಮಕ್ಕೆ ಸಂಘಟಿತ ವಿರೋಧವು ಇಂದು ಹುಟ್ಟಿದೆ.

ಭರತಖಂಡದಲ್ಲಿಯೂ ಕಮ್ಯೂನಿಸ್ಟರ ಅಸ್ತಿತ್ವವಿದೆ ಅವರೂ ರಶಿಯಾದ ದಿಗ್ದರ್ಶನದಂತೆ ನಡೆಯುತ್ತಿದ್ದಾರೆ ಅದಕ್ಕಾಗಿ ಇವರು, ನಮ್ಮದೇಶಗಳ ಜನರಿಗೆ ವಿಶ್ವಾಸಪೂರ್ಣವಾದ ಕಾಂಗ್ರೆಸ್ಸಿನ ವಿರೋಧವನ್ನು ಕಟ್ಟಿಕೊಂಡರು

ಉಳಿದ ದೇಶಗಳಲ್ಲಿ ನಡೆದಂತೆ ದೇಶದ ಸರಕಾರವನ್ನೇ ವ್ಯಾಪಿಸಿ ಬಿಡುವುದಕ್ಕೆ ಇವರಿಗೆ ಹಿಂದುಸ್ತಾನದಲ್ಲಿ ಬ್ರಿಟಿಷರು ಇರುವವರೆಗೆ ಸಾಧಿಸಲಿಲ್ಲ, ಸ್ವಾತಂತ್ರ್ಯ ಕೊಟ್ಟು ಅವರು ಇಲ್ಲಿಂದ ಹೋದ ಬಳಿಕ, ಅಸ್ತಿತ್ವದಲ್ಲಿ ಬಂದ ಕಾಂಗ್ರೆಸ ಸರಕಾರದ ಕಾಲದಲ್ಲಿ ಇವರು ತಮ್ಮ ಕೈವಾಡವನ್ನು ಹೆಚ್ಚಾಗಿ ನಡೆಸಿದ್ದಾರೆ, ಈ ಸರಕಾರವನ್ನೇ ಉರುಳಿಸಿ ಬಿಡುವ ಯತ್ನವನ್ನು ಅವರು ಮಾಡಿದರೆಂದೂ ಆ ಪ್ರಯತ್ನದಲ್ಲಿ ಅವರು ಹಿಂಸೆಯನ್ನು ಧಾರಾಳವಾಗಿ ಉಪಯೋಗಿಸುವ ಸಿದ್ಧತೆಯನ್ನು ಮಾಡುತಿದ್ದರೆಂದೂ, ನೆಹರೂ ಸರಕಾರಕ್ಕೆ ಗೊತ್ತಾಯಿತು.

ಆದ್ದರಿಂದ ಇಂದು ನಮ್ಮಲ್ಲಿ ಈ ಸಂಸ್ಥೆಯ ಮೇಲೆ ಸರಕಾರವು ನಿರ್ಬಂಧ ಹಾಕಿದೆ. ಇವರಿಗೆ ಬಹಿರಂಗವಾಗಿ ಏನನ್ನೂ ಮಾಡುವ ಪರಿಸ್ಥಿತಿಯು ಈಗ ಉಳಿದಿಲ್ಲ. ಅಂತರಂಗದಲ್ಲಿ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲುಮಾತ್ರ ಈಗ ಯತ್ನಿಸುತ್ತಿರುವರೆಂದು ಹೇಳಬಹುದಾಗಿದೆ.

ಇವರ ಧ್ಯೇಯವೇನಿದೆ? ಏಕೆ ಇವರಿಗೂ ಈಗಿನ ಸರಕಾರದ ಕಾರ್ಯಕ್ರಮಗಳಿಗೂ ಸರಿಬರುತ್ತಿಲ್ಲ? ಎಂಬ ಬಗ್ಗೆ ಅನೇಕರಿಗೆ ಸಾಕಷ್ಟು ಕಲ್ಪನೆಯಿದೆ. ಆದರೂ ಅದನ್ನು ಜನತೆಗೆ ಸಾಕಷ್ಟು ವಶಪಡಿಸುವುದಕ್ಕಾಗಿ ಮುಂಬಯಿ ಕ್ರಾನಿಕಲ್ ಪತ್ರದ ಓರ್ವ ಪ್ರತಿನಿಧಿಯು ಹೊಸ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಯಾದ ಶ್ರೀ ಬಿ. ಟಿ ರಣದಿವೆ ಇವರನ್ನು ಈ ವಿಷಯವಾಗಿ ಹೇಳಿಕೆ ಕೊಡಲು ಕೇಳಲಾಗಿ ಅವರು ಈಕೆಳಗಿನಂತೆ ಹೇಳಿದ್ದಾರೆ

"ಕಳೆದ ಕೆಲವು ತಿಂಗಳುಗಳಲ್ಲಿ ನಡೆದ ಘಟನೆಗಳನ್ನು ನೋಡಿದರೆ, ಲಾರ್ಡ ಮೌಂಟಬ್ಯಾಟನ್ನರು ಕೊಟ್ಟದ್ದು ಸ್ವಾತಂತ್ರ್ಯವಾಗಿರದೆ, ಹೊಸ ಸ್ವರೂಪದ ದಾಸ್ಯವೇ ಆಗಿದೆಯೆಂದು ಕಮ್ಯೂನಿಸ್ಟ ಸಂಸ್ಥೆಗೆ ಎನಿಸುತ್ತಿದೆ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಘೋಷಣೆ ಮತ್ತು ಹೊಸದಾಗಿ ಸಿದ್ಧಪಡಿಸಲ್ಪಟ್ಟ ಘಟನೆ ಇವುಗಳನ್ನು ನೋಡಿದರೆ ಅವುಗಳ ಮೂಲಕ ದೇಶದ ಸಾರ್ವಜನಿಕರ ಕೈಯಲ್ಲಿ ಅಧಿಕಾರವು ಬರುವುದರ ಸ್ಥಳದಲ್ಲಿ ಅದು ಶ್ರೀಮಂತರ ಕೈಗೆ ಹೋಗುತ್ತಲಿದೆಯೆಂದು ಕಂಡು ಬರುತ್ತದೆ. ಲಾರ್ಡ ಮೌಂಟ್ ಬ್ಯಾಟನ್ನರು ಮಾಡಿಕೊಟ್ಟ ವ್ಯವಸ್ಥೆಯಿಂದ ನಮ್ಮ ದೇಶದ ಮುಂದಾಳುಗಳ ಶಕ್ತಿಯು ಕಡಿಮೆಯಾಗಿ ಅವರ ಪ್ರಯತ್ನದ ಫಲವು ನಮ್ಮಲ್ಲಿಯ ಧನವಂತರಿಗೆ ಮತ್ತು ಬ್ರಿಟಿಶ ಸಾಮ್ರಾಜ್ಯವಾದಕ್ಕೆ ಮುಟ್ಟುವಂತಾಗಿದೆ. ಹಿಂದುಸ್ತಾನ ಸರಕಾರವು ಸಂಸ್ಥಾನೀ ಅನುಸಂಗಿಕ ರಾಜ ಮಹಾರಾಜರನ್ನು ಅಸ್ತಿತ್ವದಲ್ಲಿಡಲು ಸಹಾಯಮಾಡುತ್ತಿದೆ, ಮತ್ತು ಅವರ ಏಕಸತ್ತಾಪದ್ಧತಿಯನು ಮುಂದುವರಿಸಲು ನೆರವಾಗುತ್ತಿದೆ, ರಾಷ್ಟ್ರದ ಪುನರ್ರಚನೆಯನ್ನು ಮಾಡುವ ಸೋಗಿನಲ್ಲಿ ಕೆಲಸಗಾರರ ಹಿತಕ್ಕೆ ಧಕ್ಕೆ ಮಾಡಲಾಗುತ್ತಿದೆ. ಧನವಂತರ ಲಾಭಬಡಕತನವನ್ನು ಎದುರಿಸುವ ಕೆಲಸಗಾರರ ಶಕ್ತಿಯನ್ನು ಕುಂಠಿತಗೊಳಿಸುತ್ತಿದ್ದಾರೆ. ಮತ್ತು ಧನವಂತರು ಯಥೇಷ್ಟ ಲಾಭವನ್ನು ಹೊಂದಬಹುದಾ

ದ ಪರಿಸ್ಥಿತಿಯನ್ನು ಹುಟ್ಟಿಸುತ್ತಿದ್ದಾರೆ. ದೇಶದ ಆರ್ಥಿಕ ಪುನರ್ರಚನೆಯ ಕಾರ್ಯವು ಕಡೆಗಣಿಸಲ್ಪಡುತ್ತಿದೆ. ಆನುವಂಶಿಕ ಕೋಟ್ಯಾಧೀಶರ ವರ್ಗದ ನಾಶವನ್ನು ಮಾಡುವುದನ್ನು ಬಿಟ್ಟು ಅವರಿಗೆ ಪರಿಹಾರ ಕೊಡುವುದೇ ಮೊದಲಾದ ಸಂಗತಿಗಳನ್ನು ಗಮನಿಸುತ್ತಿದ್ದಾರೆ. ಹೀಗೆ ಕೊಡಲ್ಪಡಬಹುದಾದ ಪರಿಹಾರವು ರೈತರ ಮೇಲೆ ಭಾರ ಹಾಕುವುದೆಂದು ಬೇರೆ ಹೇಳಬೇಕಾಗಿಲ್ಲ".

ಈ ಮೇರೆಗೆ ಕಮ್ಯೂನಿಸ್ಟರು ರಶಿಯಾದ ಸಮತಾವಾದವನ್ನು ಇಲ್ಲಿ ಬೆಳಗಾಗುವುದರೊಳಗೆ ತರಬೇಕು ಎಂದು ಇಚ್ಛಿಸುತ್ತಿದ್ದಾರೆ. ಆದರೆ ಅವರು ಈ ರೀತಿಯಲ್ಲಿ ರಶಿಯಾದಲ್ಲಿ ಆದ ಕಾರ್ಯದ ವಿಮರ್ಶೆಯನ್ನು ಮಾಡುತ್ತಿಲ್ಲವೆಂಬಂತೆ ತೋರುವ ಯಾವುದೇ ಕೆಲಸವನ್ನು ಒಮ್ಮೆಲೇ ಮಾಡುವುದರಿಂದ ಏನು ತೊಂದರೆಯಾಗುವುದೆಂಬುದು ಕಮ್ಯೂನಿಸ್ಟರಿಗೆ ತಿಳಿಯದಿದ್ದುದು ದುರ್ದೈವದ ಸಂಗತಿಯಾಗಿದೆ.

ರೈತರ ಮತ್ತು ಕೂಲಿಕಾರರ ಬಗ್ಗೆ ನೆಹರೂ ಸರಕಾರದವರು ಮತ್ತು ಪ್ರಾಂತಿಕ ಸರಕಾರಗಳು ಮಾಡುತ್ತಿರುವ ಸುಧಾರಣೆಗಳು ದೇಶದ ಮುಂದೆ ಸ್ಪಷ್ಟವಾಗಿವೆ. ಇವೇ ಕಾರ್ಯಗಳನ್ನು ಇನ್ನೂ ವೇಗವಾಗಿ, ಅಂದರೆ ದೇಶದ ಶಾಂತಿ ಸಮಾಧಾನಗಳಿಗೆ ಧಕ್ಕೆ ತರದಂತೆ ಮಾಡುವ ದಾರಿಗಳನ್ನು ಕಮ್ಯೂನಿಸ್ಟರು ತೋರಿಸಿದರೆ ಅದನ್ನು ನಮ್ಮ ಸರಕಾರದವರು ಆನಂದದಿಂದ ಸ್ವೀಕರಿಸುವುದರಲ್ಲಿ ಸಂಶಯವಿಲ್ಲ

ಕೇವಲ ತಮ್ಮ ಮನಸ್ಸಿನಲ್ಲಿದ್ದುದು ತಮ್ಮದೇ ಆದ ದಾರಿಯಿಂದ ಹಾಹಾ ಅನ್ನುವುದರೊಳಗೆ ಕಾರ್ಯದಲ್ಲಿ ಬರಬೇಕೆಂದು ಕಮ್ಯೂನಿಸ್ಟರು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಅದರಿಂದ ದೇಶದಲ್ಲಿ ಆಗುವ ಗೊಂದಲ ಮತ್ತು ನಮ್ಮ ಪ್ರಗತಿಗೆ ಆಗುವ ಆತಂಕ ಇವುಗಳ ಕಡೆಗೆ ಕೂಡ ಅವರು ನೋಡುತ್ತಿಲ್ಲ. ಕಾಯಿದೆ ಬದ್ಧ ರೀತಿಯಲ್ಲಿ ದೇಶದ ಮತವನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಲು ಅವರು ಯತ್ನಿಸಿದ್ದರೆ ಅಡ್ಡಿ ಇದ್ದಿಲ್ಲ. ಸಾಮಾಜಿಕ ಶಾಂತಿಯನ್ನೇ ಹಿಡಿದದ್ದರಿಂದ ಅವರ ಚಟುವಟಿಕೆಗಳಿಗೆ ಹಿಂದುಸ್ತಾನ ಸರಕಾರವು ಇಂದು ನಿರ್ಬಂಧ ಹಾಕಿದೆ. (ಜಯಹಿಂದ್)

# ಸಂಕುಚಿತ ಪ್ರಾಂತೀಯತೆ

(ಹರಿಜನರ ಪತ್ರಿಕೆಯ ಲೇಖನ)

ಪಂಡಿತ ಜವಾಹರಲಾಲ ನೆಹರೂ ಮತ್ತು ಇತರ ಪ್ರಮುಖರು ಈಚೆಗೆ ಕೆಲ ವರ್ಷಗಳಿಂದ ನಮ್ಮ ದೇಶದಲ್ಲಿ ರೂಪುಗೊಳ್ಳುತ್ತಿರುವ ಸಂಕುಚಿತ ಪ್ರಾಂತೀಯತೆಯು ಕಡೆಗೆ ಸಾರ್ವಜನಿಕ ಗಮನವನ್ನು ಸೆಳೆದಿದ್ದಾರೆ.

ಕಡಿಮೆಯೆಂದರೆ 1933 ರಿಂದಲೂ ಈ ಭಾವನೆಯ ಬೆಳವಣಿಗೆಯನ್ನು ನಾನು ಲಕ್ಷಿಸಿದ್ದೇನೆ. ಮುಂದೆ ಗಾಂಧೀ ಸೇವಾ ಸಂಘದ ಅಧ್ಯಕ್ಷನಾದ ನಂತರ ಅದನ್ನು ಹತ್ತಿರದಿಂದ ಅಭ್ಯಸಿಸುವ ಹೇರಳ ಅವಕಾಶ ಸಿಕ್ಕಿತ್ತು. 1938 ರಲ್ಲಿ ದೇಲಂಗ (ಒಡಿಸಾ) ದಲ್ಲಿ ಸೇರಿದ ಸಂಘದ ಸಮ್ಮೇಲನದಲ್ಲಿ ನನ್ನ ಸೂಚನೆಯನ್ವಯ, ಗಾಂಧೀಜಿಯ ಬೆಂಬಲದಿಂದ ಈ ಪ್ರಶ್ನೆಯನ್ನು ಸ್ವಲ್ಪ ಮಟ್ಟಿಗೆ ಚರ್ಚಿಸಿದುದುಂಟು. ಶ್ರೀ ರಾಜೇಂದ್ರ ಪ್ರಸಾದ, ಡಾ. ಪ್ರಫುಲ್ಲ ಘೋಷ ಹಾಗು ಶ್ರೀ ಶಂಕರರಾವ ದೇವ ಇವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಸಮ್ಮೇಲನ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಿತ್ತು.

"ದೇಶದಲ್ಲಿ ಸಂಕುಚಿತ ಪ್ರಾಂತೀಯತೆಯ ದುಷ್ಟ ಭಾವನೆಗಳು ಹಬ್ಬುತ್ತಿರುವದನ್ನು ಸಂಘ ವಿಷಾದದಿಂದ ಗಮನಿಸಿದೆ. ಪ್ರಾಂತೀಯ ಪ್ರವೃತ್ತಿಗಳಲ್ಲಿ ಸಂಘದ ಸದಸ್ಯರ ಕರ್ತವ್ಯ ಜಾತೀಯತೆಯ ವಿಷಯದಲ್ಲಿದ್ದಂತೆಯೇ ಇದೆಯೆಂದು ಈ ಸಮ್ಮೇಲನದ ಅಭಿಪ್ರಾಯ. ಅರ್ಥಾತ್ ವಿವಿಧ ಪ್ರಾಂತಗಳ ಹಾಗೂ ಭಾಷೆಗಳ ಜನರಲ್ಲಿ ಪರಸ್ಪರ ಪ್ರೀತಿಯನ್ನು ಅಭಿವೃದ್ಧಿಗೊಳಿಸಬೇಕು. ಹಿಂದುಸ್ತಾನವೆಲ್ಲ ಒಂದು ಮತ್ತು ಪ್ರತಿಯೊಬ್ಬ ಹಿಂದೀಯನಿಗೂ ಬೇಕಾದ ಪ್ರಾಂತದಲ್ಲಿ ನೆಲಸಿದರೂ ನಾಗರಿಕ ಹಕ್ಕುಗಳುಂಟೆಂದು ಈ ಸಮ್ಮೇಲನ ಅಭಿಪ್ರಾಯಪಡುತ್ತದೆ. ಅವನಾಗಲಿ ಅವನ ಪೂರ್ವಜರಾಗಲಿ ಇನ್ನೊಂದು ಪ್ರಾಂತದಿಂದ ಬಂದು ನೆಲಸಿದವರೆಂಬ ಕಾರಣದಿಂದ ಅವನ ಈ ಹಕ್ಕುಗಳನ್ನು ಅಪಹರಿಸುವದಾಗಲಿ ಅವನ ವಿರುದ್ಧ ಪಕ್ಷಪಾತ ಮಾಡುವದಾಗಲಿ ಸಲ್ಲದು. ಅದರೆ, ತಾವು ಯಾವ ಪ್ರಾಂತದಲ್ಲಿ ನೆಲೆಸಿರುವರೋ ಆ ಪ್ರಾಂತದ ಜನಜೀವನಗಳಲ್ಲಿ ಸಂಪೂರ್ಣ ಸಮರಸರಾಗಿ, ಅವರ ಸುಖದುಃಖಗಳಲ್ಲಿ ಪಾಲುಗಾರರಾಗಿ, ಆ ಪ್ರಾಂತದ ಅಭಿವೃದ್ಧಿ

ಹಿತಸಾಧನೆ, ಸುಖಗಳಿಗಾಗಿ ಅದೇ ಪ್ರಾಂತದ ಜನರಂತೆ ದುಡಿಯುವದು ಹೊರಗಿಂದ ಬಂದು ನೆಲಸಿದವರ ಕರ್ತವ್ಯ.”

ಸ್ವತಃ ನನಗೆ, ಭಾಷಾನ್ವಯ ಪ್ರಾಂತರಚನೆ ಮತ್ತು “ಅಲ್ಪಸಂಖ್ಯಾಕರ” ಭಾಷಾತ್ಮಕ ಹಕ್ಕುಗಳನ್ನು ಕುರಿತು ಕರಾಚಿ ಗೊತ್ತುವಳಿ ಅಷ್ಟೇನೂ ಜಾಣತನದ್ದೆಂದು ಎಂದೂ ಅನಿಸಿದ್ದಿಲ್ಲ. ವ್ಯವಹಾರವಾದಷ್ಟು ಮಟ್ಟಿಗೆ ಒಂದೇ ಭಾಷೆಯನ್ನಾಡುವ ಜನರನ್ನೆಲ್ಲ ಒಂದೇ ಆಡಳಿತ ಘಟಕದಲ್ಲಿ ಕೂಡಿಸಬೇಕೆಂಬ ಮಾತು ಬೇರೆ, ಅನೇಕ ಭಾಷೆಗಳನ್ನೊಳಗೊಂಡ ಪ್ರಾಂತಗಳೇ ಬೇಡೆಂಬ ಮಾತು ಬೇರೆ. ಮೊದಲನೆಯದು ಜನರಿಗೂ ಆಡಳಿತ ಯಂತ್ರಕ್ಕೂ ಅನುಕೂಲವಾಗಿ ಸ್ವೀಕಾರಾರ್ಹವಾಗಿದೆ. ಎರಡನೆಯದು ಬೇಕೆಂದು ಹಟಹಿಡಿಯುವದು ಹಾಗಿದೆಯೆಂದು ಹೇಳಲಾಗದು. ಅದರಿಂದ ಭೇದ ಬುದ್ಧಿ ಬೆಳೆಯುವದು. ಮುಖ್ಯ ಭಾಷೆಯ ಹಕ್ಕುಗಳಿಗೆ ಭಂಗ ಬಾರದಂತೆ ಅನೇಕ ಭಾಷಾಪ್ರಾಂತಗಳನ್ನು ನಡೆಸಿಕೊಂಡು ಹೋಗುವದು ಸರ್ವಥಾ ಅಸಾಧ್ಯವೆಂದಾಗಲಿ ಅನನುಕೂಲವೆಂದಾಗಲಿ ಹೇಳಬರುವದಿಲ್ಲ “ಒಂದು ಭಾಷೆ ಒಂದು ಪ್ರಾಂತ” ಎಂಬ ಛಲದಿಂದ ಅದರ ಪುರಸ್ಕರ್ತರು ಅದನ್ನು ಸಾಧಿಸುವದರಲ್ಲಿರುವ ತೊಡಕುಗಳನ್ನು ನಿವಾರಿಸಲು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಪ್ರಜಾ ಸ್ಥಾನಾಂತರವಾಗುವಂತ ಬಲಾತ್ಕಾರ ಮಾಡಲಿಕ್ಕಿಲ್ಲೆಂದು ಯಾರು ಹೇಳಬಲ್ಲರು? ವಾತಾವರಣದಲ್ಲಿ ದುಷ್ಟ ಸತ್ವ ಹಬ್ಬಿರುವಾಗ ಅದು ಸಿಕ್ಕವರಲ್ಲೆಲ್ಲ ಅನಿಷ್ಟವಾಗುತ್ತದೆ.

ತನ್ನ ಭಾಷೆಗಾಗಲಿ ಲಿಪಿಗಾಗಲಿ ಸರಕಾರದ ಅಂಗೀಕಾರ ದೊರಕುವಂತೆ ಮಾಡಲು ಯಾವುದೊಂದು ಗುಂಪಿಗೆ ಇರುವ ಅಧಿಕಾರಕ್ಕೆ ಕೂಡ ವಿಶಾಲ ದೃಷ್ಟಿಯಿಂದ ಅರ್ಥ ಹಚ್ಚಬೇಕು. ಮಾತೃ ಭಾಷೆಯಲ್ಲಿ ಶಿಕ್ಷಣದೊರಕಬೇಕೆನ್ನುವದು ಶೈಕ್ಷಣಿಕ ದೃಷ್ಟಿಯಿಂದ ಯೋಗ್ಯವಾದ ಪ್ರಮೇಯವೇ. ಆದರೆ ವರ್ಧಾದಲ್ಲಿ ವಾಸಿಸುತ್ತಿರುವ ನಾನು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಗುಜರಾತಿ ಭಾಷೆಯ ಮೂಲಕವೇ ವ್ಯವಸ್ಥೆಯಾಗಬೇಕೆಂದು ಹಟ ತೊಡಬಹುದೆ? ಅಂಥ ಹಕ್ಕನ್ನು ಸರಕಾರ ಅಂಗೀಕರಿಸಲಾರದೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಬದಲಿಗೆ, ನನ್ನ ಮಕ್ಕಳು ಗುಜರಾಥಿ ಕಲಿಯಲಿ ಬಿಡಲಿ, ಪ್ರಾಂತಿಕ ಭಾಷೆಯಾದ ಮರಾಠಿಯನ್ನು ಕಲಿತೀರಬೇಕೆಂದು ಸರಕಾರ ಒತ್ತಾಯಪಡಿಸಬಲ್ಲದು. ನಾನು ನನ್ನ ಮಕ್ಕಳಿಗೂ ಗುಜರಾಥಿ ಕಲಿಸಿದರೆ ಸರಕಾರ ಅದನ್ನು ತಡೆಯಲಾರದು. ಆದರೆ ಅದು ತಾನು ಗುಜರಾಥಿ ಕಲಿಸುವ ಹೊಣೆ ಹೊರಲಾರದು. ಎಲ್ಲ ಶಿಕ್ಷಣವನ್ನೂ ಗುಜರಾಥಿಯಲ್ಲೆ ಕೊಡಿಸುವ ಮಾತಂತೂ ದೂರ ಉಳಿಯಿತು. ತದ್ವಿರುದ್ಧವಾಗಿ, ಅನ್ಯಪ್ರಾಂತದಿಂದ ಬಂದು ನೆಲಸಿದವನು, ಸುಮಾರು 20 ವರ್ಷಗಳೊಳಗೆ, ಸ್ಥಾನಿಕ ಭಾಷೆಯನ್ನು ತನ್ನದಾಗಿ ಮಾಡಿಕೊಳ್ಳಲೇಬೇಕೆಂದು ಅಪೇಕ್ಷಿಸುವ ಅಥವಾ ಒತ್ತಾಯ ಕೂಡ ಮಾಡುವ ಹಕ್ಕು ಸರಕಾರಕ್ಕಿದೆ.

ವರ್ಧಾ. ಕಿ. ಘ. ಮಶ್ರುವಾಲಾ

# ಹೊಸಪೇಟೆ

## ಹಂಪಿ ರಥೋತ್ಸವ

(ಸ್ವಂತ ಸುದ್ದಿಗಾರ)

ಈ ಸಾಲೆ 23—4—48 ಹಂಪಿ ಶ್ರೀ ವಿರುಪಾ[illegible] ರಥೋತ್ಸವಕ್ಕೆ ಅನೇಕ ಕಾರಣಗಳಿಂದ ಜನರು ವಿಶೇಷವಾಗಿ ಬಂದಿರಲಿಲ್ಲ. ಜಾತ್ರೆಯು ಸುಸೂತ್ರವಾಗಿ ಜರಗಿತು. ಜಾತ್ರೆಯ ಕಾಲದಲ್ಲಿ ಪೋಲೀಸು ಬಂದೋಬಸ್ತು ಆರೋಗ್ಯ ಖಾತೆಯವರ ಏರ್ಪಾಡು ದೇವಾಲಯದ ಅಧಿಕಾರಿಗಳ ಏರ್ಪಾಡುಗಳು ಸುವ್ಯವಸ್ಥಿತವಾಗಿದ್ದವ[illegible]

## ಮೇ 1

ಅಂತರಾಷ್ಟ್ರೀಯ ಕೂಲಿಕಾರ ದಿನವಾದ ಮೇ 1 ನೆಯ ತಾ॥ ಸಾರ್ವಜನಿಕ ರಜಾದಿನವನ್ನಾಗಿ ಭಾವಿಸಲು ಶ್ರೀ ಲಕ್ಷ್ಮಣಮೂರ್ತಿಯವರು ಕೇಳಿಕೊಂಡಿದ್ದ[illegible]ದು ಮಾನ್ಯವಾಗಲಿಲ್ಲ

## ಸಿಡಿಲುಬಡಿತದಿಂದ ಮೂವರ ಮರಣ

ತಾ॥ 26 4-48 ಬೆಳಗ್ಗೆ 8-30 ಯಿಂದ 11 ಗಂ. [illegible] ಸುಮಾರು 2 ಇಂಚು ಮಳೆ ಅಕಸ್ಮಾತ್ತಾಗಿ ಬಂದಿತು. ಇಲ್ಲಿಯ ತುಂಗಭದ್ರಾ ಪ್ರಾಜೆಕ್ಟಿನ ಹತ್ತಿರ ಕೆಲಸಗಾರರು ಕೆಲಸ ಮಾಡುತ್ತಿರುವಾಗ ಒಮ್ಮಿಂದೊಮ್ಮೆ [illegible] ಎರಗಿ ಅದರ ಬಡಿತದಿಂದ ಇಬ್ಬರು ಗಂಡಸರೂ, ಒಬ್ಬ ಹುಡುಗಿಯೂ ಮರಣ ಹೊಂದಿರುತ್ತಾರೆ. [illegible] ಗಾಯಗಳಾಗಿರುತ್ತವೆ. ಗಾಯಗಳನ್ನು [illegible]

ತ್ರೆಗೆ ಸಾಗಿಸಲಾಗಿದೆ, ತಕ್ಷಣವೇ ಅಲ್ಲಿಯ ಇಂಜಿನಿಯರರು ಆದ ಶ್ರೀ ವೆಂಕಟಸುಬ್ಬಯ್ಯ ಯೆಂಬುವವರು ಹೋಗಿ ಗಾಯಾಳುಗಳ ಮತ್ತು ಸತ್ತವರ ವ್ಯವಸ್ಥೆಯ ಏರ್ಪಾಡುಗಳನ್ನು ಮಾಡಿದರು

## ದೊಡ್ಡಹರಿವಾಣ
### ಶ್ರೀಗಳ ಏಕೀಕರಣ ಪ್ರಚಾರಕಾರ್ಯ

ಇಲ್ಲಿಯ ಗ್ರಾ. ಕೇ. ಕ. ಸಂಘದ ಆಹ್ವಾನಕ್ಕೆ ಒಪ್ಪಿಕೊಟ್ಟು ಉರವಕೊಂಡದ ಶ್ರೀಮನ್ನಿರಂಜನ ಜಗದ್ಗುರು ಕರಿಬಸವರಾಜೇಂದ್ರ ಸ್ವಾಮಿಗಳು 21ನೆಯ ದಿನಾಂಕ ಸಯಂಕಾಲ ಘಟನಾ ಸಮಿತಿ ಸದಸ್ಯರಾದ ಶ್ರೀ ಮುನಸಪ್ಪ ಮತ್ತು ಶ್ರೀ ದೊಡ್ಡನಗೌಡರು ಜೋಳಗಿ ... ಮತ್ತು ಸಮಸ್ತ ಪರಿವಾರದೊಡನೆ ಬಂದರು. ವಾದ್ಯವೈಭವಗಳಿಂದ ಸಾವಿರಾರು ಜನರು ಅವರನ್ನು ಸ್ವಾಗತಿಸಿದರು.

ಶ್ರೀ ದೊಡ್ಡನಗೌಡರು ಮತ್ತು ಬಾಲಿಕೆಯರಿಂದ ಪ್ರಾರ್ಥನೆಯಾದ ನಂತರ ಶ್ರೀ ದೊಡ್ಡಯ್ಯನವರು ಏ. ಸಂಘದ ಪರವಾಗಿ ಶ್ರೀಗಳಿಗೆ ಮಾನಪತ್ರವನ್ನರ್ಪಿಸಿ ಮತ್ತು ತಮ್ಮಿಂದ ವಿರಚಿತವಾದ ಸನ್ಮಾನ ಪದ್ಯಗಳನ್ನೋದಿದರು. ಘಟನಾಸಮಿತಿ ಸದಸ್ಯರಾದ ಶ್ರೀ ಮುನಸಪ್ಪಯವರು ಕರ್ನಾಟಕ-ನಾಡ-ನುಡಿಗಳ ಹಿರಿಮೆಯ ಬಗ್ಗೆ ಗಂಭೀರ ಭಾಷಣವನ್ನಿತ್ತರು. ಶ್ರೀಗಳವರು ತಮ್ಮ ಅಸ್ಖಲಿತವಾಣಿಯಿಂದ ಕರ್ನಾಟಕ ಏಕೀಕರಣದ ಆವಶ್ಯಕತೆ. ಆಡಳಿತ ಭಾಗದಲ್ಲಿ ಕನ್ನಡ ಸಂಸ್ಕೃತಿಯ ರಕ್ಷಣೆಗಾಗಿ ಕನ್ನಡಿಗರು ವಹಿಸಬೇಕಾದ ಹೊಣೆ, ಕಾರ್ಯಾಸಕ್ತರಾಗಿ ದ್ವೇಷಭಾವವಿಲ್ಲದೆ ಎಲ್ಲರೊಡನೆ ಸೌಹಾರ್ದಭಾವದಿಂದ ಕಲೆತು ಉದ್ದೇಶ ಸಾಧನೆ ಮಾಡಬೇಕಾದ ವಿಧಾನಗಳನ್ನು ಹೃದಯಂಗಮವಾಗಿ ತಿಳಿಯಹೇಳಿದರು. ಸಾವಿರಾರು ಸಭಿಕರು ಚಿತ್ರ ಪ್ರತಿಮೆಗಳಂತೆ ಕೂತು ಉಪದೇಶಾಮೃತವಾಣಿಯನ್ನು ಸವಿದು ಸ್ವಾಮಿಗಳ ಆದೇಶದಂತೆ ಸಭೆಯಲ್ಲಿಯೇ ಕರ್ನಾಟಕ ಏಕೀಕರಣಕ್ಕಾಗಿ 254 ರೂಗಳನ್ನು ಕೂಡಿಸಿ ಅರ್ಪಿಸಿದರು ಶ್ರೀ ದೊಡ್ಡನಗೌಡರ ಕಾವ್ಯಗಾಯನ ಹಾಳು ಹಂಪೆಯ ಗತವೈಭವ ಪಠನದ ನಂತರ ಮಂಗಳದಿಂದ ಸಭೆಯಂತ್ಯವಾಯಿತು.

## ತಂಬ್ರಹಳ್ಳಿ

ಈ ಕೇಂದ್ರದ ನೂಲಿನ ಲೈಸನ್ಸ್ ದಾರರು ಕಂಟ್ರೋಲ್ (ನಿಯಂತ್ರಣ) ತೆಗೆದಿರುವದರಿಂದ ಮಾರ್ಚಿ ಏಪ್ರೆಲ್ ತಿಂಗಳ ನೂಲನ್ನು ಇಲ್ಲಿಗೆ ತಾರದೆ ತಮಗೆ ಬೇಕಾದೆಡೆಗಳಲ್ಲಿ ಬಹಳ ಹೆಚ್ಚಿನ ಬೆಲೆಗೆ ಮಾರಿದ್ದಾರೆ. ಈ ಕಾರಣ ನೆಯ್ಕಾರರಿಗೆ ಉದ್ಯೋಗವಿಲ್ಲದೆ ವ್ಯಥೆಪಡುವ ಕಾಲವೊದಗಿದೆ. ಇಲ್ಲಿಯ ಅಡ್ವೈಜರಿ ಕಮಿಟಿಯವರು ಸರ್ಕಾರಕ್ಕೆ ಈ ವಿಷಯವನ್ನು ತಿಳಿಸಿರುವರು, ಇನ್ನು ಮೇಲಾದರೂ ನೆಯ್ಕಾರರಿಗೆ ಸರ್ಕಾರದವರು ಸರಿಯಾಗಿ ನೂಲು ಒದಗಿಸುವರೆಂದು ನಂಬಲಾಗಿದೆ,

### ಶ್ರೀ ನಿಶಾಣಿ ರಂಗರಾವ್.

ರಾಯದುರ್ಗದ ತಾಲೂಕು ಕಮ್ಯೂನಿಸ್ಟ ಕಾರ್ಯಕರ್ತರಾದ ಶ್ರೀ ನಿಶಾಣಿ ರಂಗರಾವ್‌ರು ಮದ್ರಾಸ್‌ನಿಂದ ಒರುತ್ತಿರಬೇಕಾದರೆ ಬಳ್ಳಾರಿ ಸ್ಟೇಷನ್ ಪ್ಲಾಟ್‌ಫಾರಂದಲ್ಲಿ ಬಂಧಿತರಾದರು. ಪೋಲೀಸರ ವರದಿಯನ್ನು ನಂಬಿ ಜಿಲ್ಲಾ ಮ್ಯಾಜಿಸ್ಟ್ರೇಟರು ಆತನ ಮೇಲೆ ವಾರಂಟು ಹೊರಡಿಸಿದ್ದರು. ಬಳ್ಳಾರಿ ತಾಲೂಕು ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀ ರಾಮಕೋಟಿ ರೆಡ್ಡಿಯವರು ನಿಶಾಣಿಯವರನ್ನು ರಾಯದುರ್ಗಕ್ಕೆ ಹೋಗುವ ಮುಂಚೆಯೇ ಬಂಧಿಸಿದರು ಅವರನ್ನು ಅನಿಯಮಿತ ಅವಧಿಯವರೆಗೆ ಸ್ಥಾನಬದ್ಧತೆಯಲ್ಲಿಡುವರೆಂದು ತಿಳಿದುಬಂದಿದೆ.

## ಕೋಸಿಗಿ

25ನೆಯ ದಿನಾಂಕ ತೆಲಂಗಾಣಾ ರೈತರು ಹೈದರಾಬಾದ್ ರಾಕ್ಷಸೀ ಸರ್ಕಾರದ ವಿರುದ್ಧವಾಗಿ ನಡೆಸಿದ ಹೋರಾಟಕ್ಕೆ ಸಾನುಭೂತಿಯನ್ನರ್ಪಿಸುವ ತೀರ್ಮಾನವು ಇಲ್ಲಿಯ ಸಭೆಯಲ್ಲಾಯಿತು. ಶ್ರೀಗಳಾದ ವೀರಣ್ಣ ಮತ್ತು ಇತರ ಮಹನೀಯರು ಮಾತಾಡಿದರು

### ಅಪಹೃತ ಸ್ತ್ರೀಯರು

ಪೂರ್ವ ಪಂಜಾಬ್ ಡೆಲ್ಲಿ ಪ್ರದೇಶಗಳಿಂದ ಪಶ್ಚಿಮ ಪಂಜಾಬಿಗೆ 5 ಸಾವಿರ ಸ್ತ್ರೀಯರು ಪಶ್ಚಿಮ ಪಂಜಾಬದಿಂದ ಪೂರ್ವ ಭಾಗಕ್ಕೆ 4 ಸಾವಿರ ಕಳುಹಿಸಲ್ಪಟ್ಟಿರುವರು. ಇವರೆಲ್ಲಾ ಅಪಹೃತರಾಗಿ ಕ್ರೂರಿಗಳ ದಾಳಿಗೊಳಗಾದವರು.

## ದೇವಸ್ಥಾನ ಪ್ರವೇಶ

### ಹರಿಜನರ ಹಕ್ಕು ಹಿಂದೂಗಳಷ್ಟೇ

ಸವರ್ಣೀಯರಾದ ಹಿಂದೂಗಳು ಹಿಂದೂ ದೇವಾಲಯಗಳಲ್ಲಿ ಪೂಜೆಗಾಗಿ ಎಲ್ಲಿಯವರೆಗೆ ಹೋಗುತ್ತಿರುವರೋ ಅಷ್ಟೇ ದೂರ ಹರಿಜನರೂ ಹೋಗತಕ್ಕದ್ದೆಂದು ಗದಗಿನ ಶಿವಿಲ್ ಜಡ್ಜರು ತಮ್ಮ ತೀರ್ಪನ್ನು ಕೊಟ್ಟಿರುವರು. ಅಲ್ಲಿಯ ಸುಪ್ರಸಿದ್ಧ ವೀರನಾರಾಯಣ ದೇವಸ್ಥಾನದಲ್ಲಿ ಹರಿಜನರು ಗರ್ಭಗುಡಿಯನ್ನು ಹೊಕ್ಕು ದೇವರನ್ನು ಪೂಜೆ ಮಾಡಿದರು. ಆದರೆ ಪೂಜಾರರು ಕಟ್ಲೆ ನಡೆಸಿ ಪೂಜಾರರಿಗೆ ಮಾತ್ರ ಗರ್ಭ ಗುಡಿಯಲ್ಲಿ ಪ್ರವೇಶಿಸಿ ಪೂಜೆಮಾಡುವ ಹಕ್ಕಿದೆಯೆಂದು ವಾದಿಸಿದ್ದರು

## ಚಲಚಿತ್ರ ಮಂದಿರಗಳಲ್ಲಿ ರಾಷ್ಟ್ರಗೀತೆ

ಬೊಂಬಾಯಿ ಆಧಿಪತ್ಯದ ಚಲಚಿತ್ರ ಮಂದಿರಗಳಲ್ಲಿ ರಾಷ್ಟ್ರಗೀತೆ ಪೂರ್ಣವಾಗಿ ಹಾಡಿ ಮುಗಿಯುವವರೆಗೆ ಬಾಗಿಲು ಹಾಕಬಾರದೆಂದು ಬೊಂಬಾಯಿ ಸರಕಾರವು ಆಜ್ಞಾಪಿಸಿದೆ. ಮದ್ರಾಸ್ ಸರ್ಕಾರದವರೂ ಹೀಗೇಕೆ ಮಾಡಬಾರದು

---

## ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಕಿತ್ತೂರರ ಸಂಚಾರ

ಕರ್ನಾಟಕ ಏಕೀಕರಣ ಮಹಾಸಮಿತಿಯ ಬಿನ್ನಹದ ಮೇರೆಗೆ ಶ್ರೀ ಎ. ಎ. ಕಿತ್ತೂರರವರು ಬಳ್ಳಾರಿ ಜಿಲ್ಲೆಯಲ್ಲಿ 8 5—48 ರಿಂದ ಸಂಚರಿಸಲಿರುವ, ಇವರ ಸಂಚಾರ ಕಾರ್ಯಕ್ರಮವನ್ನು ಶ್ರೀ ಬ ರಂಗನಗೌಡರು ಬಳ್ಳಾರಿಯ ಕ. ಏ. ಸಂಘದಧಿಕಾರಿಗಳೂ ನಿಶ್ಚಯಿಸುವರು. ಈ ಕಾರ್ಯಕ್ರಮದಲ್ಲಿ ಎಲ್ಲರೂ ಸಹಕರಿಸಿ ಕಾರ್ಯಕ್ರಮವನ್ನು ಯಶಸ್ವಿಮಾಡಲು ಕೋರಿಕೆ. ಮುಸ್ಲಿಂ ಜನತೆಯನ್ನು ಕರ್ನಾಟಕ ಏಕೀಕರಣಕ್ಕಾಗಿ ಮನಒಲಿಸುವ ಇದೊಂದು ಸುಸಂಧಿ.

ಕಾರ್ಯದರ್ಶಿ
ಕ ಏ. ಮಹಾಸಮಿತಿ, ಹುಬ್ಬಳ್ಳಿ.

## ಮೇ ದಿನ

ಬಳ್ಳಾರಿ ಸೋಶಿಯಲಿಸ್ಟ್ ಪಾರ್ಟಿಯವರು ಮೇ ದಿನವನ್ನು ವೈಭವದಿಂದ ನೆರವೇರಿಸಿದರು. ಪ್ರಾತಃಕಾಲ ವಕ್ಕೂಟ ರಾಷ್ಟ್ರಧ್ವಜ ಸೋಶಿಯಲಿಸ್ಟ್ ಪಾರ್ಟಿ ಧ್ವಜಾರೋಹಣ ಧ್ವಜವಂದನೆ ಆಯಿತು. ಸಾಯಂಕಾಲ ಕೂಲಿಕಾರರ ಮೆರವಣಿಗೆಯ ನಂತರ ಸಭೆಯಲ್ಲಿ ಪಾರ್ಟಿ ಮಹತ್ವ ರಾಜ್ಯಭಾರ ರಚನೆಯ ರೂಪರೇಶ ಕಿಸಾನ ಕೂಲಿಕಾರರ ಸಂಘಟನೆಯ ಬಗ್ಗೆ ಭಾಷಣಗಳಾದವು

## ಸಿರುಗುಪ್ಪ ಪತ್ರ

ಇಲ್ಲಿ ಹೈದರಾಬಾದ್ ಕಡೆಯಿಂದ ರಜಾಕಾರರು ಬರುತ್ತಿರುವದಾಗಿಯೂ ಸ್ಥಾನಿಕ ಮುಸಲ್ಮಾನರಲ್ಲಿ ಕೆಲವರು ಇವರಿಗೆ ಪ್ರೋತ್ಸಾಹ ಕೊಡುತ್ತಿರುವಂತೆಯೂ ಒಬ್ಬ ಸುದ್ದಿಗಾರರು ಬರೆದಿದ್ದಾರೆ. ಈ ವಿಷಯ ಸಂಬಂಧಿಸಿದವರಿಗೆ ತಿಳಿಸಲಾಗಿದೆ.

(ಸಂಪಾದಕ - ನವಭಾರತ)

## ಹಿರಿಯೂರು

ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಶ್ರೀ ಕೆ. ಚನ್ನಬಸಪ್ಪನವರ ಆಧ್ಯಕ್ಷತೆಯಲ್ಲಿ ನೆರವೇರಿತು. ಹೆ. ಮಾ. ರವರು ವರದಿಯನ್ನೋದಿದ ನಂತರ ಶ್ರೀ ಗಳಾದ ಕೃಷ್ಣಾಚಾರ್ಯ ಮತ್ತು ಜಗನ್ನಾಥರಾಯರು ಪೋಷಕ ಸಂಘವನ್ನು ಕುರಿತು ಮಾತಾಡಿದರು. ತಮಾಷೆಯ ಆಟಗಳ ನಂತರ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಕೊಡಲಾಯಿತು

---

## ಪತ್ರಿಕೋದ್ಯೋಗಿಗಳ ಮರಣ

ಪೂನಾನಗರದ 'ಜ್ಞಾನ ಪ್ರಕಾಶ' ದ ಸಂಪಾದಕರಾದ ಶ್ರೀ ಲಿಮೆ ಇಂಡಿಯನ್ ಸೋಶಿಯಲ್ ರಿಫಾರ್ಮರ್ ಸಂಪಾದಕರಾದ ಶ್ರೀ ಕೆ. ನಟರಾಜನ್‌ರವರು ಈ ವಾರ ತೀರಿಕೊಂಡರು.

## ಅಮೆರಿಕಾವು ತುರ್ಕಿಯಲ್ಲಿ ತಳವೂರಿತು

ರಷ್ಯಾದ ಪ್ರತಿಭೆಯನ್ನು ತಡೆಯಲು ಅಮೇರಿಕವು ತುರ್ಕಿಗೆ ಸಹಾಯದ ಆಶ್ವಾಸನವಿತ್ತಿದೆ. ಈ ತುರ್ಕಿಗೆ 2500 ಟನ್ ಮಿಲಿಟರಿ ಪೂರೈಕೆಯು ಬಂದಿ. ಇದರಲ್ಲಿ ಟ್ಯಾಂಕು, ಜೀಪ್, ಬಂದೂಕ ಲಾರಿ ಮುಂತಾದವುಗಳಿವೆ.

Please Note

**Narasepalli Workshops**
BELLARY

— UNDERTAKE —

**Turning, Electric Welding & Tempering**
OF
SPARE PARTS OF ALL KINDS.

☞ **Reasonable Charges**

TRIAL SOLICITED.

Telegrams:
OIL MILLS.

Telephone
57.

## ಮಹಾತ್ಮ ಗಾಂಧಿ

ಪಾರತಂತ್ರ್ಯವನೇ ಹರಿದು । ಭಾರತವ ಪೊರೆದು । ಹರಿ
ಹರರಿಗಸದಳದ । ಶಾಂತಿಯ ತಳೆದು ॥
ಬಹುಕಾಲ ಸೆರೆಮನೆಯ । ಸಂಕಟವನೇ ಹರಿದು । ಆಹಾ
ರಪಾನಗಳನೆಲ್ಲ ತೊರೆದು ॥
ಜಾತಿಭೂತದ ನೃತ್ಯ । ಪೇರ್ಚಿತೂ ಪ್ರತಿನಿತ್ಯ । ಕಂಡ
ನೀತರ ಕೃತ್ಯ । ಸಕಲಜನಸ್ತುತ್ಯ ॥
ಸತ್ಯಸಂಧಾನನೂ । ಮಿಥ್ಯದೇಹವ ತಾನು । ಅರ್ಪಿಸಿದ
ನಿದಕಾಗಿ । ಸತ್ಯವಿನ್ನೂ ॥
ಪಾಶ್ಚಿಮಾತ್ಯರುಗೈದ । ಪಾಪಮಯ, ಕಂಟ್ರೋಲ, ಪರಿ
ಹರಿಸಿತಾ, ಕಾಯ್ದು ॥
ಪರಮಪುರುಷಾ । ಯಂತು ಬಣ್ಣಿಸಲಹುದು, ಈ ಶಾಂತ
ತನವನ್ನು, ಕಂತುಪಿತನವತಾರ, ಮುಗಿಯಿತಿನ್ನೂ ॥

ದಾಸರ ಶೇಷಪ್ಪನವರು, ಕುಡತಿನಿ.

## ವಿದ್ಯಾರಣ್ಯ ವಿಜ್ಞಾನ ಸಮಿತಿ ಹಂಪಿ.

ಈ ಸಮಿತಿಯು ದ್ವಿತೀಯ ವಾರ್ಷಿಕೋತ್ಸವವು ಹಂಪಿಯಲ್ಲಿ ಭಾನುವಾರ (2—5—48) ಸಾಯಂಕಾಲ ಡಾಕ್ಟರ್ ಆರ್. ಯಸ್. ಪಂಚಮುಖಿ [ಕರ್ನಾಟಕ ಸಾಹಿತ್ಯ ಸಂಶೋಧಕ ಸಂಸ್ಥೆ ಧಾರವಾಡ) ಇವರಧ್ಯಕ್ಷತೆಯಲ್ಲಿ ನೆರವೇರಿತು.

—ಸಿಂಧ ಪ್ರಾಂತದ ಮುಖ್ಯ ಮಂತ್ರಿಗಳಾದ ಖುರೋರವರನ್ನು ಅಲ್ಲಿಯ ಗವರ್ನರರು ಜಿನ್ನಾರ ಮಾತಿನಂತೆ 'ಡಿಸ್ಮಿಸ್' ಮಾಡಿರುತ್ತಾರೆ. ಮತ್ತೊಬ್ಬ ಮಂತ್ರಿಗಳಾದ ಪೀರ್ ಎಲಾಹಿ ಬಕ್ಷರವರು ಮುಖ್ಯ ಮಂತ್ರಿಗಳಾಗಬಹುದು.

—ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ನೂತನ ಕಾಂಗ್ರೆಸ್ ಘಟನೆಯು ಸ್ವೀಕೃತವಾಯಿತು. ದೇಶದ ಆರ್ಥಿಕ ವಿಧಾನವನ್ನು ಪುನರ್ವ್ಯವಸ್ಥೆಗೊಳಿಸಲು ಒಂದು ಸಮಿತಿಯು ನಿರ್ಮಿತವಾಯಿತು.

# The Rayalaseema Bank Ltd., H. O. Bellary.

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,

ಸ್ಥಾಪಿತ—193

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

**ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.**

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ
**ಬೆಂಗಳೂರು :** ರುಕ್ಮಿಣಿ ಬಿಲ್ಡಿಂಗ್ಸ್ ಚಿಕ್ಕಪೇಟೆ

ಇವಲ್ಲದೆ ರಾಯಲಸೀಮೆಯ ಎಲ್ಲಾ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳವೆ.
ಸ್ಥಾಯಿ **ಠೇವಣಿಗಳು** (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಸನ್ ಡಿಪಾಜಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಕೆ. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

---

# NAVA BHARAT BELLARY.

Reg. No M, 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..............................................
..............................................
..............................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ಸಂ ೧೧ | ಸಂಚಿಕೆ ೧೭ — ಬಳ್ಳಾರಿ ನೋ ೧೦ ಸೋಮವಾರ ೧೯೪೮ — ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.


## ಸಾಮ್ಯವಾದಿ ಪಕ್ಷದ ಧ್ಯೇಯಧೋರಣೆ

—)0(—

ಗುಜರಾತ ಪ್ರಾಂತದ ಸಾಮ್ಯವಾದಿ ಪಕ್ಷದ ಮೊದಲನೇ ಅಧಿವೇಶನದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಶ್ರೀ ಪುರುಷೋತ್ತಮ - ತ್ರಿಕಾಮದಾಸರು ಹೀಗೆ ಹೇಳಿದರು. “ಸ್ವರಾಜ್ಯಗಳಿಸುವ ಗಾಂಧೀಜೀಯ ಉದ್ದೇಶವು ಈಡೇರಿತಾಗಲಿ ಪೂರ್ಣ ಸ್ವರಾಜ್ಯ ಸ್ಥಾಪನೆಯ ಅವರ ಗುರಿಯು ಹಾಗೆಯೇ ಉಳಿದಿದೆ. ದೇಶದಲ್ಲಿ ಪರಕೀಯರಧಿಕಾರವು ಅಂತವಾಗಿರುವ ಕಾರಣ ಪುನರ್ನಿವೇಶನಾಕಾರ್ಯವನ್ನು ಎಲ್ಲರೂ ಕೈಗೊಳ್ಳಬೇಕು. ನೆಹರೂ - ಅಜಾದರನ್ನು ಬಿಟ್ಟರೆ ಕಾಂಗ್ರೆಸ್ ಸಂಕುಚಿತ ಪಕ್ಷದ ಧೋರಣೆ (ಕನ್ಸರ್ವೇಟಿವ್) ಅನುಸರಿಸುತ್ತಲಿದೆ. ಅಲ್ಲಿ ಸಾಮ್ಯವಾದಿಗಳಿಗೆ ಸ್ಥಳವೇ ಇಲ್ಲ. ಕೇಂದ್ರ ಸರ್ಕಾರದಲ್ಲಿ ಬಂಡವಲಗಾರರ ಪ್ರತಿನಿಧಿಗಳು ತುಂಬಿದ್ದಾರೆ. ಬಡವರ ಪ್ರತಿನಿಧಿಗಳಿಲ್ಲದ ಕಾರಣ ಮೂಲಭೂತ ಹಕ್ಕುಗಳನ್ನೇ ಅಲ್ಲಗಳೆಯುವ ಘಟನೆಯನ್ನು ಘಟನಾಸಮಿತಿಯು ಸಿದ್ಧಪಡಿಸಿದೆ. ಕಾಂಗ್ರೆಸ್ ಮಂತ್ರಿ ಮಂಡಲಗಳು ಜಾತೀಯ ಪದ್ಧತಿ ಮೇಲಿಂದ ಸ್ಥಾಪಿತವಾಗಿವೆ.

ಸಾಮ್ಯವಾದಿಗಳು ವ್ಯರ್ಥ ಟೀಕಾಕಾರರಲ್ಲ ವಿರೋಧ ಪಕ್ಷವನ್ನು ರಚಿಸಿ ಕಿಸಾನ್ - ಮಜದೂರ್ ಪ್ರಜೆಗಳಿಗೆ ಅಧಿಕಾರ ದೊರಕಿಸಲಿದೆ ಕಾಂಗ್ರೆಸ್ ದೇಶದಲ್ಲೆಲ್ಲಾ ಸಂಘಟನೆಯ ಕಾರ್ಯಮಾಡಲಿ.

## ಜಿನ್ನಾ-ಖಾದಿ ಪ್ರಚಾರ

ಪಾಕಿಸ್ತಾನದಲ್ಲಿನ ಬಟ್ಟೆಯ ಕೊರತೆಯನ್ನು ನೀಗಿಸಲು ಕೈನೂಲು ಕೈಮಗ್ಗದ ಬಟ್ಟೆಯನ್ನು ತಯಾರಿಸದಿದ್ದರೆ ಬೇರೆ ಮಾರ್ಗವಿಲ್ಲೆಂದು ಈಗ ಕಂಡಿದಾರೆ. ಖಾದಿಯನ್ನು ಅಲ್ಲಗಳೆಯುತ್ತಿದ್ದ ಜಿನ್ನಾರವರು ಖಾದಿ ಪ್ರಚಾರ ಕೈಗೊಳ್ಳುವವರಿದ್ದಾರೆ.

**ಕಾಶ್ಮೀರ....**

ಈ ಸಂಬಂಧ ಭದ್ರತಾ ಸಮಿತಿಯವರು ಮಾಡಿದ ತೀರ್ಮಾನವನ್ನು ಇಂಡಿಯಾ - ಪಾಕಿಸ್ತಾನಗಳು ಒಪ್ಪಿಲ್ಲ. ಮುಂದೇನಾಗುವುದೋ ನೋಡಬೇಕು. ಕಾಶ್ಮೀರದಲ್ಲಿ ಭಾರತ ಸೇನೆಗಳಿಗೆ ಜಯವಾಗುತ್ತಲಿದೆ.

**ಹೈದರಾಬಾದ್**

ಯುದ್ಧದ ತಯಾರಿ ಮಾಡುತ್ತಿರುವರೆಂದು ಎಲ್ಲಾ ಕಡೆಯಿಂದಲೂ ಸುದ್ದಿಗಳು ಬರುತ್ತಲಿವೆ. ಸಮಾಧಾನಕರ ಒಪ್ಪಂದವಿಲ್ಲದಿದ್ದರೆ ಯುದ್ಧ ನಿಶ್ಚಯವೆಂದು ನೆಹರುರವರು ಹೇಳಿದ್ದಾರೆ. ಹೈದರಾಬಾದಿನ ಪುಂಡ ಜನರು ಸೋಲಾಪುರದ ಭಾಗಗಳಲ್ಲಿ ದಾಳಿ ಮಾಡುತ್ತಲಿರುವರು ಭಾರತದ ಜನರು ಆತ್ಮ ರಕ್ಷಣೆಯ ವ್ಯವಸ್ಥೆ ಮಾಡಿದ್ದಾರೆ.

— ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಸಿ. ರಾಯ್‌ರು ರಾಜೀನಾಮೆ ಕೊಟ್ಟು ಮತ್ತೆ ಮಂತ್ರಿಮಂಡಲವನ್ನು ರಚಿಸಿದರು.

THE NAVA BHARAT
ನವಭಾರತ
ಸಂಪಾದಕ-ಟಿ.ಟಿ. ಕೇಶವರಾವು

ಮೇ 10 ಸೋಮವಾರ 1948

## ರಜಾಕಾರರ ಒಳಸಂಚು.

ಹೈದರಾಬಾದಿನಲ್ಲಿ ಕಳೆದ ಆಗಸ್ಟ 15 ರಿಂದ ಹಿಂದುಗಳ ಮೇಲೆ ಅಮಾನುಷ ಅತ್ಯಾಚಾರವನ್ನು ನಡೆಸಿ ಕೊಲೆ ಸುಲಿಗೆಗಳಿಗೆ ಹೆಸರಾದ್ದ ರಜಾಕಾರರು ಕಮ್ಯೂನಿಷ್ಟರೊಂದಿಗೆ ಇತ್ತೀಚಿಗೆ ಸ್ನೇಹ ಬೆಳೆಸಿರುವರೆಂಬ ಸುದ್ದಿಯಿಂದ ಅತ್ಯಾಶ್ಚರ್ಯವಾಗಿದೆ.

### ರಜಾಕಾರರ ಧ್ಯೇಯ

ಜವಾಬ್ದಾರಿ ಸರಕಾರಕ್ಕೆ ಪೂರ್ಣ ವಿರೋಧ ಮುಸಲ್ಮಾನ ರಾಜ್ಯ; ಅದರಲ್ಲಿಯೂ ಅಸಫ ಜಾಹಿ ಕುಟುಂಬಕ್ಕೆ ಸೇರಿದ ನಿಜಾಮ ವಂಶಸ್ಥರ ಶಾಶ್ವತ ಆಳಿಕೆ. ಸರಕಾರ ನವಕರಿ ಮತ್ತು ಶಾಸನ ಸಭೆಗಳಲ್ಲಿ ಮುಸಲ್ಮಾನರ ಬಹುಮತ. ಈ ಧೋರಣೆಗಳನ್ನಿಟ್ಟುಕೊಂಡು ಅಧಿಕ ಸಂಖ್ಯಾಕರಾ ಹಿಂದೂಗಳನ್ನು ಹಿಂಸಿಸಿ ಬೆದರಿಸಿ ಕೊಲೆ ಸುಲಿಗೆ ಮಾಡಿ ದೇಶಬಿಟ್ಟು ಓಡಿಸುವ ಕಾರ್ಯಕ್ರಮವನ್ನು ರಜಾಕಾರರಿಟ್ಟಿರುವರು.

### ಕಮ್ಯೂನಿಷ್ಟರ ಧ್ಯೇಯ

ಹಿಂಸೆಯ ಬಲದಿಂದ ಯಾಂಥಾ ಸರ್ಕಾರವನ್ನಾದರೂ ಉರುಳಿಸಿ ಸಮಾಜವಾದಿ ತತ್ವದ ಮೇಲೆ ರಾಜ್ಯಭಾರವನ್ನು ಸ್ಥಾಪಿಸಿ ಖಾಸಗಿ ಆಸ್ತಿಯೇ ಇಲ್ಲದಂತೆ ಮಾಡಿ ರಾಜ್ಯಭಾರ ಸೂತ್ರಗಳನ್ನು ಸರ್ವಾಧಿಕಾರೀ ತತ್ವದಂತೆ ಜನತಾ ಪ್ರತಿನಿಧಿಗಳ ಮೂಲಕ ನಡೆಸಲು ಕಮ್ಯೂನಿಷ್ಟರು ಜಗತ್ತಿನ ಎಲ್ಲಾ ಕಡೆಗಳಲ್ಲೂ ಯತ್ನಿಸಿರುವರು. ಇವರಿಗೆ ಧರ್ಮವಿಲ್ಲ ದೇವರಿಲ್ಲ. ಇವರು ಭಂಡವಲಗಾರರ ಪರಮ ಶತ್ರುಗಳು. ರಾಜತ್ವದ ಕಟ್ಟು ವಿರೋಧಿಗಳು.

ಹೀಗಿರಲು ರಜಾಕಾರರಿಗೂ ಕಮ್ಯೂನಿಷ್ಟರಿಗೂ ಸ್ನೇಹವೆಂದರೆ ನಂಬುವುದೇ ಅಸಾಧ್ಯವಾಗಿದೆ. ರಜಾಕಾರರಿಗೆ ಧರ್ಮವಿದೆ ಕಮ್ಯೂನಿಷ್ಟರಿಗೆ ಧರ್ಮ ದೇವರುಗಳಿಲ್ಲ. ರಜಾಕಾರರಿಗೆ ರಾಜ್ಯತ್ವ ಬೇಕು, ಕಮ್ಯೂನಿಷ್ಟರು ರಾಜತ್ವದ ಶತ್ರುಗಳು ನಿಜಾಮರು ಜಗತ್ತಿನ ಶ್ರೀಮಂತರಲ್ಲಿ ಮೂರನೆಯವರೋ ನಾಲ್ಕನೆಯವರೋ ಇರಬೇಕು.

ಹೈದರಾಬಾದು ಸಂಸ್ಥಾನವು ಹೇಗಿದ್ದರೂ ಕೈಬಿಟ್ಟು ಹೋಗುವುದೆಂಬ ಅರಿವಾಗಿ ಹೋಗಬೇಕಾದರೆ ಸಮಾಜ ಶತೃಗಳ ವಶಕ್ಕಾದರೂ ಅರ್ಪಿಸಿ ಹೋಗಬೇಕೆಂದು ಈ ಘಾತಕ ಮತ್ತು ಅನೀತಿಕರ ಒಳಸಂಚನ್ನು ಹೂಡಿರಬೇಕೆಂದು ಅರ್ಥವಾಗುತ್ತದೆ ಹಿಂದೂಸ್ಥಾನದಲ್ಲೆಲ್ಲಾ ಕಮ್ಯೂನಿಷ್ಟರು ಮಾಡುತ್ತಿರುವ ದಾಂಧಲೆಗಳನ್ನು ಎಲ್ಲರೂ ಬಲ್ಲರು. ಈ ಹಿಂಸಾಕೃತ್ಯಗಳ ಖಂಡನಾರೂಪವಾಗಿ ಸರ್ಕಾರದವರು ಎಲ್ಲಾ ತರಹ ಕಾರ್ಯಗಳನ್ನು ಕೈಗೊಳ್ಳುತ್ತಿರುವರು. ನೆಹರು ಸರ್ಕಾರವು ಭಂಡವಲಗಾರರ ಸರ್ಕಾರವೆಂದೂ, ಹೈದರಾಬಾದು ಸ್ವತಂತ್ರ ಉಳಿಯಬೇಕೆಂದೂ ಕಮ್ಯೂನಿಷ್ಟರು ಪ್ರಕಟನೆಯನ್ನು ಹೊರಡಿಸುವ ಹಿನ್ನೆಲೆಯನ್ನು ಈ ದೃಷ್ಟಿಯಿಂದ ನಾವು ಪಡಿಸಿಕೊಳ್ಳಬೇಕಾಗಿದೆ. ಇದರಿಂದ ಯಾರೂ ಮೋಸ ಹೋಗುವಂತಿಲ್ಲ

---

## ಕರ್ನಾಟಕ ಪ್ರಾಂತೀಯ ಸಾಮ್ಯವಾದಿ ಸಮ್ಮೇಳನ

### ಶ್ರೀ ಅಸುಂಡಿ ತಿರುಮಲರಾಯರ ಅಧ್ಯಕ್ಷತೆಯಲ್ಲಿ

ಇದುವರೆಗೆ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದ - ಶ್ರೀ ಅಸುಂಡಿ ತಿರುಮಲರಾಯರ (ಹೊಸಪೇಟೆ) ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾಂತೀಯ ಸೋಸಿಯಲಿಸ್ಟ್ ಪಾರ್ಟಿ ಪ್ರಥಮಾಧಿವೇಶನವು - ಬೆಳಗಾವಿ ಜಿಲ್ಲಾ ಖಾನಾಪುರದಲ್ಲಿ ಈ ತಿಂಗಳು ೨೭-೨೮ಕ್ಕೆ ಸಮಾವೇಶವಾಗಲಿದೆ, ೨೮ ತಾ।। ರಿಂದ ಭಾರತದ ಸಾಮ್ಯವಾದೀ ಪಕ್ಷದ ಕಾರ್ಯಕಾರೀ ಸಮಿತಿಯ ಸಭೆ ಬೆಳಗಾವಿಯಲ್ಲಿ ಸಮಾವೇಶವಾಗಲಿರುವದರಿಂದ ಸಾಥೀ ಜಯಪ್ರಕಾಶ - ಕಮಲಾದೇವಿ - ಅಚುತ ಪಟವರ್ಧನ ಅಶೋಕ ಮೇಥಾ ವಗೈರೆ ಧುರೀಣರೆಲ್ಲಾ ಅಲ್ಲಿ ಹಾಜರಿರುವರು.

# The Madras Devadasis (Prevention of dedication.) ACT 1947.

**Act No. XXXI of 1947.** **17th January 1947.**

*An act to prevent the dedication of women as devadasis in the Province of Madras.*

Whereas the practice still prevails in certain parts of the Province of Madras of dedicating women as 'devadasis' to Hindu deities, idols, objects of worship, temples and other religious institutions:

And whereas such practice, however ancient and pure in its origin, leads many of the women so dedicated to a life of prostitution;

And whereas it is necessary to put an end to the practice. It is hereby enacted as follows:—

**Short title and extent**

1 (1) This Act may be called The Madras Devadasis (Prevention of Dedication) Act 1947.

(2) It extends to the whole of the Province of Madras.

**Definitions**

2 In this Act, unless there is anything repugnant, in the subject of context

(a) "dedication" means the performance of any ceremony, by whatever name called, by which a woman is dedicated to the service of a Hindu deity, idol, object of worship, temple or other religious institution and includes "Pottukattu" "Gajjepuja" "Mudri" and dancing by "Kumbhaharathy".

(b) "Devadasi" means any woman so dedicated;

(c) "Woman" means a female of any age.

3 (1) The dedication of a woman as a devadasi, whether before or after the commencement of this Act and whether she has consented to such dedication or not, is hereby declared unlawful and void; and any woman so dedicated shall not thereby be deemed to have become incapable of entering into a valid marriage.

Nothing contained in this Sub-section shall be deemed to affect the operation of Section 44 A of the **Madras Hindu Religious Endowments Act 1926** or the rights to which a devadasi is entitled under that section.

(2) Any custom or usage prevailing in any Hindu Community such as the Bogum, Kalavanthula, Sani Nagavasalu, Devadasi and Kurmapulu, that a woman of that community who gives or takes part in any melan (nautch), dancing or music performance in the course of any procession or other is thereby regarded as having adapted a life of prostitution and becomes incapable of entering into a valid marriage and the performance of any Ceremony or act in accordance with any such custom or usage, whether before or after the commencement of this Act and whether the woman concerned has consented to such performance or not, or hereby declared unlawful and void

(4) Dancing by a woman, with or without Kumbhaharathy, in the precincts of any temple or other religious institution, or in any procession of a Hindu deity, idol or object of worship, is hereby declared unlawful.

**Penalty:-**

4 (1) Any person having attained the age of sixteen years who after the commencement of this Act performs, permits, takes parts in, or abets the performance of any ceremony, or act for dedicating a woman as a devadasi or any ceremony or act of the nature referred to in Section 3, Sub-section (2 shall be punishable with simple imprisonment for a term which may extend to six mohts or with fine which may extend to five hundred rupees or with both *Explanation*:-- The person referred to in this section shall include the woman in respect of whom such ceremony or act is performed.

(2) Any person having attained the age of sixteen years who dances in contravention of the provisions of Section (3), or who abets dancing in contravention of the said provisions, shall be punishable with simple imprisonment for a term which may extend to six months or with fine which may extend to five hundred rupees or with both.

## Cognizance and trial of offences.

5 No court inferior to that of a Presidency Magistrate or a Magistrate of the First Class shall enquire into or try any offence punishable under Section 4.

# ಮದ್ರಾಸ್ ದೇವದಾಸಿ [ಬಸವಿ] ನಿರೋಧಕ ಶಾಸನ.

[ಆಕ್ಟ್ ೩೧—೧೯೪೭] —(0(— ೧೭ ಜನವರಿ ೧೯೪೭.

(ಮದ್ರಾಸ್ ಸರ್ಕಾರದವರು ವೇಶ್ಯಾವೃತ್ತಿಯನ್ನು ಪ್ರತಿಬಂಧಿಸಲು ಮೇಲ್ಕಾಣಿಸಿದ ಶಾಸನವನ್ನು ಮಾಡಿರುತ್ತಾರೆ. ಅದು ಜನವರಿ ತಿಂಗಳಿಂದ ಇಡೀ ಪ್ರಾಂತದಲ್ಲಿ ಜಾರಿಯಲ್ಲಿ ಬಂದಿರುತ್ತದೆ. ಈ ಶಾಸನವು ಜಾರಿಗೆ ಬರುವ ಪೂರ್ವದಲ್ಲಿ 'ಬಸ್ವಿ' ಬಿಟ್ಟಿದ್ದರೂ ಅದು ಕಾಯ್ದೆಗೆ ವಿರೋಧವಾಗುತ್ತದೆ. ಅಂತಹ ಸ್ತ್ರೀಯರು ಪುನಃ ಶಾಸ್ತ್ರೀಯವಾಗಿ ಮದುವೆಯಾಗಲು ಯಾವ ಅಡ್ಡಿ ಆತಂಕಗಳೂ ಇಲ್ಲ. 'ಬಸ್ವಿ' ಯಾ 'ದೇವದಾಸಿ' ಬಿಟ್ಟ ಮೇಲೆ ಅಂತಹ ಸ್ತ್ರೀಯರು ಮದುವೆಯಾಗುವುದನ್ನು ಸರ್ಕಾರವು ಮಾನ್ಯಮಾಡಿ ಅವರ ಸಂತಾನಗಳಿಗೆ ಎಲ್ಲಾ ತರದ ಹಕ್ಕುಗಳನ್ನೂ ಸ್ಥಿರಪಡಿಸುವುದು. ಈ ಶಾಸನವು ಎಲ್ಲಾ ಜಾತಿಗಳವರಿಗೂ ಅನ್ವಯಿಸುತ್ತದೆ. ವ್ಯಭಿಚಾರ ಮಾಡುವ ಸ್ತ್ರೀಯರು ಅವರೆಷ್ಟೇ ವಯಸ್ಸಿನವರಿರಲಿ ಅವರನ್ನು ಅಂಥಾ ದೇವದಾಸಿ ವೃತ್ತಿಗೆ ಬಿಟ್ಟು ದೇವಸ್ಥಾನ - ನಾಚ್‌ಪಾರ್ಟಿ - ಮೆರವಣಿಗೆಗಳಲ್ಲಿ ಪ್ರೇರೇಪಿಸಿದವರು ಆರು ತಿಂಗಳ ಶಿಕ್ಷೆ ಯಾ 500 ರೂ. ದಂಡಕ್ಕೆ ಗುರಿಯಾಗುತ್ತಾರೆ. ಆ ವೃತ್ತಿಗಿಳಿದವರು ಸಹ ಇಷ್ಟೇ ಶಿಕ್ಷೆಗೆ ಗುರಿಯಾಗುತ್ತಾರೆ. ಶಾಸನದ ಪೂರ್ಣ ಭಾಗವನ್ನು ಕನ್ನಡದಲ್ಲಿ ಭಾಷಾಂತರಿಸಿ ಈ ಕೆಳಗೆ ಕೊಡಲಾಗಿದೆ.)

ಹಿಂದೂ ದೇವ ದೇವತೆಯರಿಗೆ ದೇವಸ್ಥಾನ - ಮಠಗಳಿಗೆ ಇತರ ಹಿಂದೂ ಆರಾಧ್ಯ ಚಿಹ್ನೆಗಳಿಗೆ ಮದ್ರಾಸ್ ಪ್ರಾಂತ್ಯದಲ್ಲಿ ಸ್ತ್ರೀಯರನ್ನು ದೇವದಾಸಿ (ಬಸ್ವಿ) ಯರಾಗಿ ಬಿಡುವ ಪದ್ಧತಿಯು ರೂಢಿಯಲ್ಲಿರುವ ಕಾರಣ

ಇಂಥಾ ಪದ್ಧತಿಯು ಎಷ್ಟೇ ಪುರಾತನ - ಶುದ್ಧವಿದ್ದರೂ ಸಹ ಹಾಗೆ ಬಿಟ್ಟ ಅತ್ಯಧಿಕ ಸಂಖ್ಯಾಕರಾದ ಸ್ತ್ರೀಯರ ಜೀವನವು ವ್ಯಭಿಚಾರದ್ದಾಗುವದಾದ ಕಾರಣ

ಅಂಥಾ ಪದ್ಧತಿಯನ್ನು ನಿರ್ಮೂಲ ಮಾಡಲು ಅವಶ್ಯಕವಿರುವದರಿಂದ ಈ ಕೆಳಗಿನಂತೆ ಶಾಸನವನ್ನು ಮಾಡಲಾಗಿದೆ.

**ನಾಮಾಂಕಿತ - ಮರ್ಯಾದೆ—**

1 ಈ ಶಾಸನವು ಮದ್ರಾಸ್ ದೇವದಾಸಿ (ಅರ್ಪಣೆಯ ನಿರೋಧ) ಶಾಸನ 1942 ಎಂದು ಕರೆಯಲಾಗುವುದು.

2 ಇದು ಇಡೀ ಮದ್ರಾಸ್ ಪ್ರಾಂತಕ್ಕೆಲ್ಲಾ ಅನ್ವಯಿಸುವುದು.

**ಸೂತ್ರಗಳು;—**

ಈ ಶಾಸನದಲ್ಲಿ ವಿಷಯಕ್ಕೆ ವಿರೋಧವಾದ ಅಥವಾ ಅಸಂಬದ್ಧವಾದ್ದುದನ್ನು ಬಿಟ್ಟು

(ಎ) ಅರ್ಪಣೆ ಅಥವಾ ದೇವದಾಸಿ ಬಸ್ವಿ ಬಿಡುವದೆಂದರೆ ಯಾವ ಶಾಸ್ತ್ರೀಯ ಪದ್ಧತಿಯಿಂದಾಗಲಿ ಹಿಂದೂ ದೇವತೆ - ವಿಗ್ರಹ ಇತರ ಪೂಜಾ ಚಿಹ್ನೆಗಳಿಗೆಂದು ಕಾದಿಟ್ಟು, ಮುದ್ರೆವತ್ತಿಸುವದಾಗಲಿ ಉಚಿತ ನರ್ತನಗಳಿಂದ 'ಕುಂಭಹಾರತಿ' ಮಾಡಿಸುವದಾಗಲಿ ಪೊತ್ತುಕಟ್ಟು - ಗೆಜ್ಜೆಪೂಜೆ ವಗೈರೆ ಮಾಡಿಸುವುದಾಗಲಿ ಎಂದರ್ಥ.

(ಬಿ). "ದೇವದಾಸಿ" ಎಂದರೆ ಯಾವ ಸ್ತ್ರೀಯನ್ನೇ ಆಗಲಿ ಅಂಥ ಪದ್ಧತಿಯಿಂದ ಅರ್ಪಿಸುವದೆಂದರ್ಥ.

(ಸಿ) ಇಲ್ಲಿ "ಸ್ತ್ರೀ" ಎಂದರೆ ಎಷ್ಟೇ ವರ್ಷದವಳಾಗಲಿ ಎಂದರ್ಥ

3 (1) ದೇವದಾಸಿಯಾಗಿ ಬಿಟ್ಟದ್ದು ಈ ಶಾಸನ ಬಂದಮೇಲಾಗಲಿ ಬರುವ ಪೂರ್ವದಲ್ಲಾಗಲಿ ಆಕೆಯ ಒಪ್ಪಿಗೆಯಿಂದಾಗಲಿ, ಒಪ್ಪಿಗೆಯಿಲ್ಲದಾಗಲಿ, ಅದರೂ ಸಹ ಅದು ಶಾಸನ ವಿರೋಧವೂ, ಸಲ್ಲದಿರುವುದೂ ಆಗುತ್ತದೆ. ಅಂಥಹ ಸ್ತ್ರೀಯು ಪುನಃ ಶಾಸ್ತ್ರೀಯ ಮದುವೆಯಾಗಲು ಯಾವ ಅನರ್ಹತೆಯನ್ನೂ ಪಡೆದವಳಾಗುವುದಿಲ್ಲ. ಈ ಉಪನಿಯಮದಿಂದ ಮದ್ರಾಸ್ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಆಕ್ಟ್ 1926 ಸೆಕ್ಷನ್ 44 ಎ ಗೆ ಬಾಧೆಬರುವುದಿಲ್ಲ. ಇದರ ಪ್ರಕಾರಕ್ಕೆ ದೇವದಾಸಿಗಿರುವ ಹಕ್ಕುಗಳಿಗೂ ಬಾಧೆ ಬರುವುದಿಲ್ಲ

ಬೋಗಂ - ಕಲಾವಂತುಲ ಸಾನಿ - ನಾಗವಾಸಲು - ದೇವದಾಸಿ - ಕರ್ಮಪುಲು ವಗೈರೆ ಹಿಂದೂ ಧರ್ಮದ ಯಾವ ಕುಲಕ್ಕೇ ಸೇರಿರಲಿ

(2) ಈ ಕಾಯ್ದೆಯು ಜಾರಿಗೆ ಪೂರ್ವದಲ್ಲಿ ಮಾಡಿದ ಅಥವಾ ಜಾರಿಗೆ ಬಂದ ಮೇಲೆ ಮಾಡುವ ಯಾವುದೇ ಕೃತಿ ಅಂದರೆ - ಕುಣಿತ - ನಾಚು ಅಥವಾ ಯಾವುದೇ ಮೆರವಣಿಗೆಯ ಮುಂದೆ ಅಥವಾ ಇನ್ನಿತರ ಸ್ಥಳಗಳಲ್ಲಿ ಮಾಡುವ ಕೃತಿ - ಸಂಗೀತ ಮತ್ತು ಯಾವುದರಿಂದ ಅಂಥಾ ಸ್ತ್ರೀಯು ವ್ಯಭಿಚಾರೀ ಜೀವನವನ್ನವಲಂಬಿಸಿರುವಳೆಂದು ಅರ್ಥವಾಗುವುದೂ ಆ ಸ್ತ್ರೀಯು ಅಂಥ ಕೃತ್ಯಕ್ಕೆ ಒಪ್ಪಲಿ ಬಿಡಲಿ ಅದು ಶಾಸನವಿರೋಧದ್ದೂ ಅನ್ಯಾಯದ್ದೂ ಆಗುವುದಲ್ಲದೆ ಅದು ಶಾಸನ ಪ್ರಕಾರ ಸಲ್ಲುವುದಿಲ್ಲ.

(4) ಹಿಂದೂ ವಿಗ್ರಹ - ರಥೋತ್ಸವ - ಮೆರವಣಿಗೆ - ಗುಡಿ ಗುಂಡಾರಗಳ ಮುಂದೆ ಎಲ್ಲೇ ಆಗಲಿ ಯಾ ಯಾವಸ್ತ್ರೀಯೂ ಕುಂಭಾರತಿಯಿಂದ ಅಥವಾ ಅದಿಲ್ಲದೆ - ಕುಣಿತ - ನರ್ತನ ಮಾಡಬಾರದು. ಅದು ಶಾಸನ ವಿರೋಧವಾಗಿದೆ.

4 (1) ಹದಿನಾರು ವರ್ಷ ವಯಸ್ಸಿಗೆ ಬಂದ ಯಾವ ವ್ಯಕ್ತಿಯೇ ಆಗಲಿ ಈ ಕಾಯ್ದೆಯು ಜಾರಿಗೆ ಬಂದ ನಂತರ ಸ್ತ್ರೀಯರನ್ನು ದೇವದಾಸಿ ಅಥವಾ ಬಸವಿ ಬಿಡುವ ಕಾರ್ಯದಲ್ಲಿ ಪೌರೋಹಿತ್ಯ ವಹಿಸಿದರೆ ಅಥವಾ ಭಾಗವಹಿಸಿದರೆ ಅಥವಾ ಒಳಗೋಳಗೆ ಸೆಕ್ಷನ್ 3 ಸಬ್ ಸೆಕ್ಷನ್ [2] ರಲ್ಲಿ ತೋರಿಸಿದ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟರೆ [2] ಆರು ತಿಂಗಳ ಸಾದಾ ಶಿಕ್ಷೆ ಅಥವಾ ಐನೂರು ರೂಪಾಯಿ (ರೂ 500) ದಂಡ ಎರಡಕ್ಕೂ ಗುರಿಯಾಗಬೇಕಾಗುತ್ತದೆ. ಇಲ್ಲಿ ವ್ಯಕ್ತಿಯೆಂದರೆ ಮುದ್ರೆ ವತ್ತಿಸಿಕೊಂಡ ಅಥವಾ ದೇವದಾಸಿ ಬಸ್ವಿಯಾದವಳೂ ಕೂಡ ಮಿಳಿತವಾಗುತ್ತಾಳೆ (ಶಿಕ್ಷಾರ್ಹವಾಗುತ್ತಾಳೆ)

(2) ಸೆಕ್ಷನ್ 2 ಸಬ್ ಸೆಕ್ಷನ್ (3)ರ ನಿಯಮಗಳ ವಿರೋಧವಾಗಿ ಯಾವ ವ್ಯಕ್ತಿಯಾಗಲಿ ವರ್ತಿಸಿದರೆ ನರ್ತನಮಾಡಿದರೆ - ಕುಣಿದರೆ (3) ಅಥವಾ ಅಂಥ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟರೆ ಆರು ತಿಂಗಳ ಸಾದಾಶಿಕ್ಷೆ, 500 ರೂ ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳಿಗೆ ಗುರಿಯಾಗಬೇಕಾಗುತ್ತೆ.

**ಅಪರಾಧದ ಸ್ವೀಕಾರ ಮತ್ತು ವಿಚಾರಣೆ—**

5 ಮದ್ರಾಸ್ ನಗರದಲ್ಲಾದರೆ ಪ್ರೆಸಿಡೆನ್ಸಿ ಮಾಜಿಸ್ಟ್ರೇಟರು ಇನ್ನುಳಿದ ಸ್ಥಳಗಳಲ್ಲಾದರೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಸೆಕ್ಷನ್ ನಾಲ್ಕರ ಪ್ರಕಾರದ ಅಪರಾಧವನ್ನು ವಿಚಾರಿಸಿ ಶಿಕ್ಷೆ ಕೊಡಲು ಅರ್ಹರಿದ್ದಾರೆ.

# ಜವಾಹರರ ಜಾಜ್ವಲತೆ

**ಯಾವದೇ** ಒಂದು ವ್ಯಕ್ತಿಯು ಪ್ರಭಾವವು ಜನತೆಯ ಮೇಲೆ ಬೀಳಬೇಕಾದರೆ ಅದಕ್ಕೆ ಅನುಪಮ ತ್ಯಾಗವೂ, ಪ್ರಪಂಚದ ಸೇವಾಭಾವವೂ, ಸತ್ಯ ಪ್ರೀತಿಗಳ ಜಾಜ್ವಲತೆಯೂ ಇರಬೇಕಾಗುತ್ತದೆಂಬ ಮಾತು ಮೊನ್ನೆ ಮುಂಬಯಿಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ ಅಧಿವೇಶನದಲ್ಲಿ ನಡೆದ ಸಂಗತಿಯೊಂದರಿಂದ ನಿಚ್ಚಳವಾಗಿ ತಿಳಿದು ಬರುತ್ತದೆ. ಪ್ರಜಾಪ್ರಭುತ್ವ ಪ್ರಜಾಪ್ರಭುತ್ವವೆಂದು ಕೂಗಾಟವೆಬ್ಬಿಸಿ, ಕೇವಲ ಜನಸಂಖ್ಯೆಯ ಬಾಹುಳ್ಯದ ಬಹುಮತದಿಂದ ಅನ್ಯಾಯವನ್ನು ನಡೆಸಬೇಕೆಂದರೆ ಅದು ಸಾಧ್ಯವಿಲ್ಲ.

ಕಾಂಗ್ರೆಸಿನ ಹೊಸಘಟನೆಯು ಸ್ವೀಕೃತವಾದ ಬಳಿಕ, ಆ ಘಟನೆಯನ್ನು ಮಂಡಿಸಿದ ಆಚಾರ್ಯ ಕಿಶೋರರು, ಆ ಹೊಸಘಟನೆಯು ಕಾರ್ಯರೂಪದಲ್ಲಿ ಬರಲು ಅನುಕೂಲ ಪತ್ತುವದರಿಂದ ಎಲ್ಲ ಕಾಂಗ್ರೆಸ ಸಮಿತಿಗಳ ಕಾರ್ಯವಾಹಕರು ತ್ಯಾಗಪತ್ರವನ್ನು ಸಲ್ಲಿಸಬೇಕೆಂದೂ ಹೊಸ ಆಯ್ಕೆ ನಡೆದು ಕಾರ್ಯವಾಹಕರನ್ನು ಗೊತ್ತುಪಡಿಸಬೇಕೆಂದೂ ಒಂದು ಗೊತ್ತುವಳಿಯನ್ನು ಮಂಡಿಸಿದರು. ಈ ಆಯ್ಕೆಯ ವ್ಯವಸ್ಥೆಯು ಕೇವಲ ಅಖಿಲ ಭಾರತೀಯ ಕಾಂಗ್ರೆಸ ಸಮಿತಿಯ ಸದಸ್ಯರ ಪುನರಾಯ್ಕೆಯಾಗಬೇಕಲ್ಲದೆ ಪ್ರಾಂತಿಕ, ಜಿಲ್ಲಾ ಹಾಗೂ ತಾಲೂಕ ಸಮಿತಿಗಳದಲ್ಲ. ಈ ಗೊತ್ತುವಳಿಯನ್ನು ಮತಕ್ಕೆ ಹಾಕಲಾಗಿ ಪರವಾಗಿ ಐವತ್ತೆಂಟು ಮತಗಳೂ ವಿರುದ್ಧವಾಗಿ ಅರವತ್ತುಮೂರು ಮತಗಳೂ ಬಿದ್ದವು. ಅದ್ದರಿಂದ ಆ ಗೊತ್ತುವಳಿಯು ಬಿದ್ದುಹೋಯಿತು. ಅದರಲ್ಲಿ ಪಂಡಿತ ಜವಾಹರಲಾಲರು ಅನುಕೂಲ ಮತ ಕೊಟ್ಟಿದ್ದರು. ಫಲಿತಾಂಶವು ಸಾರಲ್ಪಟ್ಟ ಕೂಡಲೇ ಪಂಡಿತ ಜವಾಹರಲಾಲರು ವ್ಯಾಸಪೀಠದ ಬಳಿಗೆ ಹೋಗಿ "ಗೊತ್ತುವಳಿಯನ್ನು ನಿರಾಕರಿಸಲು ಸಭೆಗೆ ಅಧಿಕಾರವಿದೆ. ಆದರೆ ಪುನರಾಯ್ಕೆಯಾಗದೆ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಸದಸ್ಯನಾಗಿ ಉಳಿಯುವುದು ಅನ್ಯಾಯವೆನಿಸುತ್ತದೆ. ಆದ್ದರಿಂದ ನನ್ನ ಸದಸ್ಯತ್ವಕ್ಕೆ ನಾನು ತ್ಯಾಗಪತ್ರವನ್ನು ಸಲ್ಲಿಸುತ್ತೇನೆ. ನನ್ನೊಡನೆ ಉಳಿದವರೂ ತ್ಯಾಗಪತ್ರ ಸಲ್ಲಿಸುವರೆಂದು ಅಪೇಕ್ಷಿಸುತ್ತೇನೆ" ಎಂದು ಹೇಳಿದರು.

ಅವರ ಭಾಷಣವಾದ ಬಳಿಕ ಈ ಗೊತ್ತುವಳಿಯ ಮೇಲೆ ಗುಂಪೀಕರಣವನ್ನು ಬೇಡಲಾಗಿ ವ್ಯಾಸಪೀಠದ ಮೇಲಿನ ವರಿಷ್ಠರು ಜವಾಹರರೊಡನೆ ಗೊತ್ತುವಳಿಗೆ ಅನುಕೂಲ ಗುಂಪಿನಲ್ಲಿ ಸೇರಿದರು. ಗುಂಪೀಕರಣದಲ್ಲಿ ಗೊತ್ತುವಳಿಯು ಅನುಕೂಲ ಒಂದು ನೂರು ಮೂರು ಮತ್ತು ವಿರುದ್ಧ ಅರುವತ್ತಾರು ಮತಗಳಿಂದ ಸ್ವೀಕೃತವಾಯಿತು.

ಬಿದ್ದು ಹೋದ ಗೊತ್ತುವಳಿಯು ಪುನಃ ಸ್ವೀಕೃತವಾಗಬೇಕಾದರೆ ಅದರ ನ್ಯಾಯಾನ್ಯಾಯದ ವಿಮರ್ಶೆಯನ್ನು, ಯೋಗ್ಯತಾ ಸಂಪನ್ನ ತ್ಯಾಗಮೂರ್ತಿಯಾದ ಭಾರತದ ನಿಜ ಸೇವಕರೊಬ್ಬರಾದ ಪಂಡಿತ ಜವಾಹರಲಾಲರು ಮಾಡಿದ ಬಳಿಕ, ಜನರ ಮನಸಿನಲ್ಲಿಯ ವಿರೋಧವು ಹೇಗೆ ಗಕ್ಕನೆ ಮಾಯವಾಗಿ ಬಹುಮತ ದೊರೆಯಿತೆಂಬದನ್ನು ಅವಲೋಕಿಸಿದರೆ ಜವಾಹರರ ಜಾಜ್ವಲತೆಯು ಅನುಭವವಾಗದೆ ಇರದು.

ಕಾಂಗ್ರೆಸಿನಲ್ಲಿ, ಅಧಿಕಾರ ಸ್ವೀಕಾರದ ನಂತರ, ಅಧಿಕಾರ ಲಿಪ್ಸುತೆಗಳ ಮೋಹಕ್ಕೆ ಬಲಿಬಿದ್ದು ಖಾದಿಧಾರಿಗಳಾಗಿ ಬಹಳಷ್ಟು ಜನ ತಾವು ಕಾಂಗ್ರೆಸಿಗರೆಂದು ಹೇಳಿಕೊಳ್ಳುತ್ತ ಕಾಂಗ್ರೆಸಿನಲ್ಲಿ ಕೊಳೆಯನ್ನು ದಿನ ದಿನಕ್ಕೆ ಹೆಚ್ಚಿಸುತ್ತಲಿದ್ದರೆಂಬದು. ಪಂಡಿತ ಜವಾಹರಲಾಲ ದಿವಂಗತ ಪೂಜ್ಯ ಬಾಪೂಜಿ ಅವರ ಆಗಾಗಿನ ಮಾತುಗಳನ್ನು ಕೇಳಿದ ಜನಕ್ಕೆ ವಿದಿತವಾದ ವಿಷಯವೇ ಆಗಿದೆ. ಮೊದಲಿಗೆ ಕೇವಲ ತ್ಯಾಗವೂ ಸೇವಾಭಾವವೂ ಕಾಂಗ್ರೆಸಿಗರ ಮೂಲ ಗುಣಗಳಾಗಿದ್ದವು. ಆಗಿನ ಕಾಲದಲ್ಲಿ ಸ್ವಾತಂತ್ರ್ಯ ಸಂಪಾದನೆಯೊಂದೇ ಗುರಿಯಿದ್ದು ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತಿದ್ದಿತು. ಆಗ ಕಾಂಗ್ರೆಸಿಗರೆಂದು ಹೇಳಿಕೊಳ್ಳುವ ಜನ ಬಹಳ ಕಡಿಮೆಯಿತ್ತು. ಮುಂದೆ ಅಧಿಕಾರ ಸ್ವೀಕಾರದ ನಂತರ ಕಾಂಗ್ರೆಸಗರೆಂದರೆ ಬಹಳ ಮರ್ಯಾದೆಯುಂಟು. ದೇಶದ ನಿಜವಾದ ಸೇವಕರೆಂಬ ಮಾನವೂ, ಅಲ್ಲದೆ ಅಧಿಕಾರ ನಡೆಸುವ ಆಡಳಿತ ಸಾಗಿಸುವ, ಹೊಣೆಯೂ ಅವರನ್ನು ಬಹಳ ಉತ್ತಮ ಮಟ್ಟಕ್ಕೇರಿಸಿದೆ ಅವರನ್ನು ಉತ್ತಮ

ರೆಂದು ಜನತೆಯು ಭಾವಿಸುತ್ತದೆ. ಜನತೆಯ ಈ ಭಾವನೆಯದುರುಪಯೋಗ ಮಾಡಿಕೊಂಡು ತಮ್ಮನ್ನು ಮೆರೆಯಿಸಿಕೊಳ್ಳಬೇಕೆಂದೇ ಕೆಲವು ಜನ ಹೊಸದಾಗಿ ಕಾಂಗ್ರೆಸಿಗರೆಂದು ಹೇಳಿಕೊಳ್ಳುತ್ತ ದೇಶದ ತುಂಬ ಪ್ರಚಾರ ನಡೆಸಿ ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರು. ಸುದೈವದಿಂದ ಈ ಗುಂಪು ಕಡಿಮೆ ಸಂಖ್ಯೆಯಲ್ಲಿತ್ತು. ಇಲ್ಲದಿದ್ದರೆ ಪ್ರಜಾಪ್ರಭುತ್ವದ ದುರುಪಯೋಗ ಬಹುಮತದ ಗೊಂದಲದಿಂದ ಈ ಗುಂಪು ಏನೇನು ಅನಾಹುತ ಮಾಡಿಬಿಡುತಿತ್ತೋ?

ಇದರದೇ ಒಂದು ಝುಳುಕು ಮೊನ್ನಿನ ಕಾಂಗ್ರೆಸಿನ ಅಧಿವೇಶನದಲ್ಲಿ ಹೊಸ ಆಯ್ಕೆ ನಡೆದು ಸದಸ್ಯರಾಗಬೇಕೆಂದು ಬಂದ ಗೊತ್ತುವಳಿಯ ವಿರೋಧದಿಂದ ಕಂಡುಬರುತ್ತದೆ. ದೇಶದ ಮತ್ತು ಜನತೆಯ ಕಲ್ಯಾಣದ ಕಡೆಗೆ ಲಕ್ಷ್ಯಗೊಡದೆ ಕೇವಲ ತಮ್ಮ ಸ್ಥಾನಮಾನಗಳನ್ನು ಕಾಯ್ದುಕೊಳ್ಳಬೇಕೆನ್ನುವ ಈ ಗುಂಪೇ ಆ ಗೊತ್ತುವಳಿಯನ್ನು ವಿರೋಧಿಸಲಿಕ್ಕೆ ಸಾಕು ಆದರೆ ಈ ಗುಂಪಿನ ಕಣ್ಣಿನಲ್ಲಿ ಪಂಡಿತ ಜವಾಹರಲಾಲರು ಚನ್ನಾಗಿ ಅಂಜನ ಹಾಕಿದ್ದಾರೆ. ತ್ಯಾಗ ನಿಸ್ವಾರ್ಥ, ಸೇವ ಜನ ಕಲ್ಯಾಣ ಬುದ್ಧಿಯ ಜಾಜ್ವಲತೆಯ ಎದುರು ಪ್ರಜಾಪ್ರಭುತ್ವದ ಬೂಟಾಟಿಕೆಯು, ಸ್ವಾರ್ಥಿಗಳ ವಿರೋಧವೂ, ಸೂರ್ಯನ ಮುಂದೆ ಮಂಜು ಕರಗಿಹೋಗುವಂತೆ ಹೇಗೆ ಕರಗುವದೆಂಬ ಮಾತನ್ನು ಪ್ರತ್ಯಕ್ಷ ಉದಾಹರಣೆಯಿಂದ ತೋರಿಸಿಕೊಟ್ಟಿದ್ದಾರೆ. ಕೇವಲ ಐವತ್ತೆಂಟು ಮತಗಳ ಅನುಕೂಲವು ಜವಾಹರರ ಜಾಜ್ವಲತೆಯ ಪ್ರಭಾವದಿಂದ ಕೂಡಲೆ ಒಂದು ನೂರಾ ಮೂರಾಗಿ ಪರಿಣಮಿಸಿದದು ಸಾಮಾನ್ಯ ಮಾತಲ್ಲ. ದೇಶ ಪ್ರೇಮದ, ದೇಶಬಾಂಧವರ ಕಲ್ಯಾಣದ, ನಿಸ್ವಾರ್ಥತ್ಯಾಗೀ ಬುದ್ಧಿಯ ಜಾಜ್ವಲತೆಯ ಪರಿಣಾಮವೇ ಅದು. ಅದಕ್ಕೇ ಪೂಜ್ಯ ಬಾಪೂಜಿಯವರು ಆಗಾಗ್ಗೆ ಪ್ರಸಂಗ ಬಂದಾಗ್ಗೆ ಪಂಡಿತ ಜವಾಹರಲಾಲರೇ ನನ್ನ ಉತ್ತರಾಧಿಕಾರಿ ಎಂದು ನುಡಿಯುತ್ತಿದುದು ಎಷ್ಟು ನಿಜವಾದ ಮಾತೆಂಬುದು ತಿಳಿದು ಬರುವಂತಿದೆ.

ಭಾರತದ ಶಾಂತಿ ಸುಖ ಸಮೃದ್ಧಿಗಾಗಿ ಸರ್ವಸ್ವವನ್ನೂ ಮೀಸಲಿಟ್ಟ ಧುರೀಣರ "ರತ್ನ ಖಣಿ"ಯಲ್ಲಿ ಪಂಡಿತ ಜವಾಹರಲಾಲರು ನಾಯಕರತ್ನ! ಕೋಹಿನೂರು! ಜವಾಹಿರ! ಇವರಿಂದಲೇ ಭಾರತ ಭವಿಷ್ಯವು ಭವ್ಯ ದಿವ್ಯವಾಗಿ ಬೆಳಗುವದರಲ್ಲಿ ಸಂದೇಹವಿಲ್ಲ.

# 'ಹರಿಜನ'ದ ಲೇಖನಗಳು

ಕಳೆದ ಎಪ್ರಿಲ 4ನೇ ತಾರೀಕಿಗೆ ದಿಲ್ಲಿಯಲ್ಲಿ ಕೂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಶ್ರೀ ವಿನೋಬಾ ಭಾವೆಯವರನ್ನು ಆಮಂತ್ರಿಸಿದ್ದರು. ಅವರಿಗೆ ಕೇಳಲ್ಪಟ್ಟ ಕೆಲ ಪ್ರಶ್ನೆಗಳಿಗೆ ಶ್ರೀ ವಿನೋಬಾ ಇವರು ಕೊಟ್ಟ ಉತ್ತರಗಳ ಭಾಷಾಂತರವನ್ನು ಕೆಳಗೆ ಕೊಡಲಾಗಿವೆ.

## ಹರಿಜನರ ವಿಶೇಷ ಸಂಸ್ಥೆಗಳು

ಪ್ರಶ್ನೆ ೧— ಹರಿಜನರ ವಿಶೇಷ ಸಂಸ್ಥೆಗಳು ಮತ್ತು ಪರಿಷತ್ತುಗಳು ಏಕೆ ಇರತಕ್ಕದ್ದು? ಹರಿಜನರು ಮತ್ತು ಹರಿಜನೇತರರು ಎಂಬ ಭೇದವು ಸಂಪೂರ್ಣವಾಗಿ ಏಕೆ ಅಳಿಯಲ್ಪಡಬಾರದು?

ಉತ್ತರ- ಈ ಭೇದಭಾವನೆ ಹೋಗಲಿಕ್ಕೆಬೇಕೆಂಬುದನ್ನು ನಾನು ಒಪ್ಪುತ್ತೇನೆ ಮತ್ತು ವಿಶೇಷ ಸಂಸ್ಥೆಗಳಿರುವ ಅವಶ್ಯಕತೆಯಿಲ್ಲೆಂಬುವದಕ್ಕೂ ನನ್ನ ಒಪ್ಪಿಗೆ. ಆದರೆ ಹರಿಜನರೆಂದು ಕರೆಯಲ್ಪಡುವವರು ಸಮಾಜದಲ್ಲಿ ಸಂಪೂರ್ಣವಾಗಿ ಲೀನವಾಗಿ ಹೋದುದಾದರೆ ಮಾತ್ರ ಇದು ಶಕ್ಯವಿದೆ. ಹರಿಜನರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆಗೆಯುವದರ ಬದಲು ಮತ್ತು ಅವರಿಗೆ ಶಿಷ್ಯವೃತ್ತಿಗಳನ್ನು ಕೊಡುವದರ ಬದಲು ಪ್ರತಿಯೊಬ್ಬ ಕಾರ್ಯಕರ್ತ ತನ್ನ ಮನೆಯಲ್ಲಿ ಹರಿಜನ ವಿದ್ಯಾರ್ಥಿಗೆ ಪ್ರವೇಶಕೊಟ್ಟು ತನ್ನ ಮಕ್ಕಳೊಡನೇ ಅವನಿಗ ವಿದ್ಯಾಭ್ಯಾಸ ಮಾಡಿಸಬೇಕೆಂದು ನಾನು ಸೂಚಿಸುತ್ತೇನೆ. ಪರಿಷತ್ತು ಮುಂತಾದವುಗಳನ್ನು ಕೂಡಿಸುವದರಿಂದ ಪಡೆವ ಲಾಭಕ್ಕಿಂತ ಹೀಗೆ ಮಾಡುವದರಿಂದ ಹೆಚ್ಚು ಪ್ರಯೋಜನವನ್ನು ನೀವು ಪಡೆಯಬಲ್ಲಿರಿ ಆದರೆ ನಿಮ್ಮ ಮನೆಯಲ್ಲಿಯ ಜನರು ಇವಕ್ಕೆ ಸಿದ್ಧರಿಲ್ಲೆಂದು ನೀವು ಹೇಳುವಿರಿ, ಪರಿಸ್ಥಿತಿ ಈ ರೀತಿಯಿದೆ. ಆದರೆ ನಾನು ಸೂಚಿಸಿದಂತೆ ನೀವು ಮಾಡಿದ್ದಾದರೆ ಪರಮಾತ್ಮನ ಅನುಗ್ರಹ ನಿಮ್ಮ ಮೇಲೆ ಆಗುವದಲ್ಲದೆ, ನೀವು ಮಾಡುವ ಉಳಿದ ಎಲ್ಲ ಬಗೆಯ ಸಾರ್ವಜನಿಕ ಕಾರ್ಯಗಳಿಗಿಂತ ಹೆಚ್ಚು ಸೇವೆಯನ್ನು ನೀವು ಸಲ್ಲಿಸಿದಂತಾಗುವದು.

## ಕಲಂಕಿತ ದುಡ್ಡು

ಪ್ರಶ್ನೆ ೨– ಸಾರ್ವಜನಿಕ ನಿಧಿಗಾಗಿ ನಾವು ಪಡೆಯುತ್ತಿರುವ ಎಷ್ಟೋ ಹಣ ಕಾಣಿಕೆ ಕೊಡುವವರು ಎರಡನೆಯವರನ್ನು ಸುಲಿದು ಸಂಪಾದಿಸಿದ್ದಾಗಿದೆ. ಆದುದರಿಂದ ನಮ್ಮ ಸಾರ್ವಜನಿಕ ಚಟುವಟಿಕೆಗಳೆಲ್ಲ ಕಲಂಕಿತ ಹಣದಿಂದ ಸಾಗಿಸಲ್ಪಟ್ಟಂತೆ ಆಗುವದಿಲ್ಲವೆ? ಹೀಗೆ ಮೂಲದಲ್ಲಿಯೇ ಕಲಂಕವಿರುವದರಿಂದ ಅವು ಅತ್ಯುಚ್ಚ ನೈತಿಕ ಮಟ್ಟದಲ್ಲಿ ಉಳಿಯಬಲ್ಲವೆಂತು?

ಉತ್ತರ: ಇದೊಳ್ಳೆ ಯೋಗ್ಯ ಪ್ರಶ್ನೆ. ಪ್ರಾರಂಭದಲ್ಲಿಯೇ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಬಯಸುತ್ತೇನೆ. ತನ್ನ ಎಲ್ಲ ಚಟುವಟಿಕೆಗಳು ಮುಖ್ಯವಾಗಿ ಸಾರ್ವಜನಿಕ ಹಣದಿಂದಲೇ ನಡೆಯತಕ್ಕದ್ದೆಂದು ಯಾರಿಗಾದರೂ ಅನಿಸಿದರೆ, ಚಟುವಟಿಕೆಗಳನ್ನು ಎಂತು ಸಾಗಿಸಬೇಕೆಂಬುದೆ ಅವನಿಗೆ ಗೊತ್ತಿಲ್ಲೆಂದು ನನಗನಿಸುತ್ತದೆ. ಉದ್ಯಮ ಮತ್ತು ಜ್ಞಾನ ಅಂದರೆ ಪರಿಶ್ರಮ ಮತ್ತು ಬುದ್ಧಿಶಕ್ತಿಯೇ ಸೇವೆ ಮಾಡುವಾಗ ಮುಖ್ಯವಾಗಿ ಬೇಕಾದ ಸಾಧನಗಳು. ಹಣ ಕೆಲಮಟ್ಟಿಗೆ ಮಾತ್ರ ಸಹಾಯಕನಾಗುವದು. ಆದರೆ ತನ್ನ ಎಲ್ಲ ಭಾರವನ್ನು ಯಾವನೊಬ್ಬನು ಹಣದ ಮೇಲೆಯೇ ಹಾಕಬಾರದು. ಕಾರ್ಯವು ತನ್ನ ಸ್ವಂತ ನೈತಿಕ ಶಕ್ತಿಯನ್ನೇ ಅವಲಂಬಿಸತಕ್ಕದ್ದು. ಅದರ ಮೇಲೆಯೆ ನಿಲ್ಲತಕ್ಕದ್ದು. ಹಣವು ಬಂದರೆ ಬೇಕು. ಆದರೆ ಹಣ ಬಾರದಿದ್ದರೆ ನಿಃಸಹಾಯಕನಾಗದಂತೆ ಅವನ ಯೋಜನೆಗಳು ಮತ್ತು ಮಾನಸಿಕ ಸ್ಥೈರ್ಯ ಬಲಿಷ್ಠವಾಗಿರತಕ್ಕದ್ದು.

ಎರಡನೆಯದಾಗಿ ನನಗೆ ಕಾಣಿಕೆ ಕೊಟ್ಟವನು ತನ್ನ ಹಣವನ್ನು ನ್ಯಾಯ ಮಾರ್ಗದಿಂದ ಸಂಪಾದಿಸಿರುವನೊ ಇಲ್ಲವೆ ಅನ್ಯಾಯದಿಂದಲೊ ಎಂಬದನ್ನು ನಿರ್ಣಯಿಸುವ ಅಧಿಕಾರ ನನ್ನದಲ್ಲ. ತಾನು ಕೊಡುವ ಕಾಣಿಕೆಯಿಂದ ತನಗೆ ಸ್ವಲ್ಪ ಲಾಭವಾಗಬೇಕೆಂದು ಅವನು ಕರಾರು ಹಾಕಿದರೆ ನಾನು ಆ ಕಾಣಿಕೆಯನ್ನು ನಿರಾಕರಿಸಬಹುದು. ಉದಾಹರಣಾರ್ಥವಾಗಿ ಒಮ್ಮೆ ಒಬ್ಬನು ಹರಿಜನರಿಗಾಗಿ ಬಾವಿಯನ್ನು ತೋಡಿಸಲು ನನಗೆ ಹಣಕೊಡಮಾಡಿದನು. ಆದರೆ ಆ ಬಾವಿಯ ಮೇಲೆ ತನ್ನ ಹೆಸರು ಹಾಕಬೇಕೆಂದು ಅವನು ವಿಧಿಸಿದನು. ಬಾವಿಯಲ್ಲಿ ಮುಳುಗುವ ಹಕ್ಕು ಇಟ್ಟುಕೊಳ್ಳಬೇಕೆಂದು ನೀನು ಈ ಕರಾರು ಹಾಕುವಿಯಾ ಎಂದು ನಾನು ಅವನಿಗೆ ಕೇಳಿದೆನು. ಇಲ್ಲದಿದ್ದರೆ ಬಾವಿಯ ಮೇಲೆ ಹೆಸರು ಹಾಕಿಕೊಳ್ಳುವಲ್ಲಿ ಅರ್ಥವೇನಿದೆ? ಕಾಣಿಕೆಯನ್ನು ಸ್ವೀಕರಿಸಬೇ ಬಾರದೊ ಎಂಬುದನ್ನು ವಿಮರ್ಶಿಸಲು ಇದೊಂದು ಒರೆ. ಉದಾಹರಣೆಯನ್ನು ಕೊಟ್ಟು ಇನ್ನೊಂದು ನಿಕಷವನ್ನು ನಾನು ಕೊಡಬಯಸುವೆ. ಒಮ್ಮೆ, ನಾಟಕ ಕಂಪನಿಯ ಒಡೆಯನೊಬ್ಬನು ನಾಟಕದಿಂದ ಬಂದ ವೆಚ್ಚ ಹೋಗಿ ಉಳಿದ ಹಣವನ್ನು ಕೊಡಲು ನನ್ನೆಡೆಗೆ ಬಂದನು. ಈ ಹಣವನ್ನು ಸಂಪಾದಿಸಿದ್ದೆಂತು ಎಂಬುದನ್ನು ಹೇಳದೆ ಅದನ್ನು ನನಗೆ ಕೊಟ್ಟಿದ್ದರೆ ಬೇರೆ ಪ್ರಶ್ನೆ ಮಾಡದೆ ನಾನು ಅದನ್ನು ನಾನು ಸ್ವೀಕರಿಸುತ್ತಿದ್ದೆ ಎಂದು ನಾನು ಅವನಿಗೆ ಹೇಳಿದೆ. ಆದರೆ ಅವನು ಆ ಹಣ ಎಂತು ಬಂದಿತೆಂಬುದನ್ನು ಹೇಳಿದ್ದರಿಂದ ನಾನು ಅದನ್ನು ಸ್ವೀಕರಿಸಲಾರದಂತಹ ಪ್ರಸಂಗ ಪ್ರಾಪ್ತವಾಯಿತು. ನಾನು ಅದನ್ನು ಸಂಪಾದಿಸುವದಕ್ಕೆ ನಾನು ಪ್ರೋತ್ಸಾಹನೆಯನ್ನು ಕೊಟ್ಟಂತಾಗುತಿತ್ತು. ನೀವು ಸ್ವೀಕರಿಸುವ ಕಾಣಿಕೆಯಿಂದ, ಅನ್ಯಾಯದಿಂದ ಹಣ ಸಂಪಾದಿಸುವದಕ್ಕೆ ನೀವು ಒಂದು ಬಗೆಯ ಪ್ರೋತ್ಸಾಹನೆ ಕೊಟ್ಟಂತಾಗುವದು. ಒಪ್ಪಿಗೆ ಕೊಟ್ಟಂತಾಗುವದು. ಅನ್ಯಾಯದಿಂದ ಸಂಪಾದಿಸಿದ ಹಣವನ್ನು ಒಂದು ಬಗೆಯ ಪ್ರಾಯಶ್ಚಿತ್ತವೆಂದು ಕೊಡುವದಾದರೆ ಮತ್ತು ಮುಂದೆ ಆ ಬಗೆಯ ಅನ್ಯಾಯದಿಂದ ಹಣ ಸಂಪಾದಿಸುವ ಮಾರ್ಗವನ್ನು ಬಿಟ್ಟುಕೊಡುವದಾದರೆ ಮಾತ್ರ ಅಂಥ ಹಣವನ್ನು ಸ್ವೀಕರಿಸಬಹುದು ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಇಷ್ಟನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ನಾವೆಲ್ಲ ಒಳ್ಳೆ ಪುಣ್ಯ ಕಾರ್ಯಗಳ ಕೂಡ ಪಾಪ ಕಾರ್ಯಗಳನ್ನೂ ಮಾಡುವ ಸಂಭವವಿದ್ದುದರಿಂದ ಎರಡನೆಯವರ ಕೃತ್ಯಗಳನ್ನು ನಿರ್ಣಯಿಸುವ ಗೊಡವೆಗೆ ನಾವು ಹೋಗುವದು ಬೇಡ.

ಗಾಂಧೀ ಸ್ಮಾರಕ ನಿಧಿಗೆ ಸಹಾಯ ಸಲ್ಲಿಸುವವರಲ್ಲಿ ಧನಿಕರೂ ಇರುವರು ಬಡವರೂ ಇರುವರು. ಶ್ರೀಮಂತರಿಗಿಂತ ಬಡವರೇ ಹೆಚ್ಚು ಜನ ಇರುವರು. ಗಾಂಧೀಜಿ ಬಡವರಿಂದಲೂ ಹಣವನ್ನು ಸಂಪಾದಿಸುತ್ತಿದ್ದರು ಮತ್ತು ಶ್ರೀಮಂತರಿಂದ ದೊರೆತ ಸಾವಿರಗಟ್ಟಲೆ ರೂಪಾಯಿಗಳಿಗಿಂತ ಬಡವರಿಂದ ದೊರೆತ ಆಣೆ ಪೈಗಳಿಗೇ ಅವರು ಹೆಚ್ಚು ಗೌರವ ಕೊಡುತಿದ್ದರು. ಅಲ್ಲದೆ

*Please Note*

**Narasepalli Workshops**

BELLARY.

— UNDERTAKE —

Turning, Electric Welding & Tempering
OF
SPARE PARTS OF ALL KINDS.

☞ **Reasonable Charges**

TRIAL SOLICITED.

Telegrams
OIL MILLS.

Telephone
57.

ಶ್ರೀಮಂತರಿಂದ ಕೊಡಲ್ಪಟ್ಟ ಹಣವಾದರೂ ಕೊನೆಗೆ ಬಡವರಿಂದಲೆ ಬರುವದು. ಬಡವರನ್ನು ಸುಲಿದು ಅವರು ಹಣವನ್ನು ಸಂಪಾದಿಸಿದ್ದಾದರೆ ಆ ಬಡವರ ಕಲ್ಯಾಣಕ್ಕಾಗಿಯೇ ನಾನು ಅಹಿಂಸಾ ಮಾರ್ಗದಿಂದ ಅವರಿಂದ ಆ ಹಣವನ್ನು ಸೆಳೆಯ ಬಯಸುತ್ತೇನೆ.

ಹಣದ ವಿನಿಯೋಗವನ್ನು ನಾವು ಎಂತು ಮಾಡುವೆವೆಂಬುದು ಹೆಚ್ಚು ಮಹತ್ವದ್ದಾಗಿದೆ. ನಾವು ಯೋಗ್ಯ ರೀತಿಯಿಂದ ಮತ್ತು ಸದುದ್ದೇಶಕ್ಕಾಗಿ ಹಣವನ್ನು ಉಪಯೋಗಿಸಿದ್ದಾದರೆ ನಾವು ಆ ಹಣವನ್ನು ವಿಶುದ್ಧಗೊಳಿಸುತ್ತೇವೆ. ಅಮೇಧ್ಯದಿಂದಲಾದರೂ ಕಾಂಚನವನ್ನು ತೆಗೆದುಕೊಳ್ಳಬೇಕೆಂದು ವೇದದಲ್ಲಿ ಹೇಳಿದೆ. ಪ್ರತಿಯೊಬ್ಬನು ಸ್ವಪ್ರೇರಣೆಯಿಂದ ಕೊಟ್ಟ ಹಣವನ್ನು ಸದುದ್ದೇಶಕ್ಕಾಗಿ ವಿನಿಯೋಗಿಸಿದ್ದಾದರೆ ಅದು ಪಾಪದ ಪರಿಹಾರವನ್ನೂ ಮಾಡಬಲ್ಲದು. ಗಿರಣಿಗಾರನ ಹಣದಿಂದ ಖಾದಿ ಪ್ರಚಾರವನ್ನು ನಾನು ಮಾಡಿದ್ದಾದರೆ ಅವರ ಹಣದಿಂದಲೆ ನಾನು ಅವರ ಉದ್ಯೋಗವನ್ನು ಅಭಿಯೋಗಿಸಿದಂತಾಗುವದು. ಜವಳಿ ಉದ್ಯೋಗವನ್ನು ರಾಷ್ಟ್ರೀಕರಿಸಬೇಕೆಂದು ನಮ್ಮ ಸಾಮ್ಯವಾದಿ ಬಾಂಧವರು ಹೇಳುವದುಂಟು. ಆದಕ್ಕೆ ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಕಾಲವಿಲಂಬವಾಗುವದು. ಅಲ್ಲಿಯವರೆಗೆ ನಾವು ಏನು ಮಾಡತಕ್ಕದ್ದು? ಗಿರಣಿಗಳಲ್ಲಿ ತಯಾರಾದ ಬಟ್ಟೆಗಳನ್ನುಪಯೋಗಿಸಿ ಅವರಿಗೆ ಸಹಾಯ ಮಾಡುತ್ತ ಸಾಗಬೇಕೆ? ನಾವು ಖಾದಿಯನ್ನು ಉತ್ಪಾದಿಸಿ ಧರಿಸಹತ್ತಿದರೆ ಗಿರಣಿಗಾರರು ತಾವಾಗಿಯೆ ತಮ್ಮ ಗಿರಣಿಗಳನ್ನು ರಾಷ್ಟ್ರಕ್ಕೆ ಒಪ್ಪಿಸಿಕೊಡುವರೆಂದು ನಾನು ಹೇಳಬಯಸುತ್ತೇನೆ. ಆ ಗಿರಣಿಗಳಿಂದ ನಾವೇನು ಮಾಡತಕ್ಕದ್ದೆಂಬದನ್ನು ನಾನು ಈಗಲೆ ಹೇಳುವ ಕತೆಯಿಲ್ಲ.

## ಹಾಲ್ವಿ ಹಾಗು ಕೋಶಿಗಿಯಲ್ಲಿ ಏಕೀಕರಣ ಸಂಘ

(ಕ. ಏ. ಮಹಾಸಮಿತಿ ಪ್ರಕಟನೆ).

ಪೂರ್ವ ಕರ್ನಾಟಕ ಗಡಿ ತಾಲೂಕುಗಳಲ್ಲಿ ಸಂಚಾರವನ್ನಿಟ್ಟುಕೊಂಡಿದ್ದ ಉರವಕೊಂಡ ಜಗದ್ಗುರುಗಳು ಕೋಶಿಗೆ ದಯಮಾಡಿಸಿ ಇಲ್ಲಿ ಸೇರಿದ್ದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಏಕೀಕರಣದ ಅವಶ್ಯಕತೆಯನ್ನು ಸಾಧಾರವಾಗಿ ಸ್ಪಷ್ಟಗೊಳಿಸಿದರು. ವಿಶೇಷ ಆಂಧ್ರ ಪ್ರಭಾವಕ್ಕೆ ಒಳಗಾಗಿರುವ ಈ ಗ್ರಾಮಕ್ಕೆ ಕನ್ನಡಿಗರು ಯಾರೂ ಬಾರದೆ ಇರುವುದರಿಂದಾಗಿ ಆ ಗುತ್ತಿ ರುವ ಕುಂದರೆಗಳನ್ನೆಲ್ಲ ಅಲ್ಲಿನ ಪ್ರಮುಖರು ಸಭೆಯಲ್ಲಿ ವಹಿಸಿದರು.

ಮತ್ತು ಇನ್ನು ಮುಂದೆ ಕ್ರಮವಾಗಿ ಕನ್ನಡಾಭಿವೃದ್ಧಿ ಆಗುವುದಕ್ಕೆಂದು ಏಕೀಕರಣ ಸಂಘ ಸ್ಥಾಪಿತವಾಗಿದ್ದು ಎಮ್ಮಿಗನೂರಲ್ಲಿ ನಡೆಯಲಿರುವ ಪರಿಷತ್ತಿಗೆ ಪೂರ್ಣ ಧನ ಸಹಾಯ ನೀಡಲು ಗ್ರಾಮಸ್ಥರು ಒಪ್ಪಿಕೊಂಡಿದ್ದಾರೆ.

ಮರುದಿನ ಹಾಲ್ವಿಗೆ ಶ್ರೀ ಜಗದ್ಗುರುಗಳು ದಯಮಾಡಿಸಿ ಅಲ್ಲಿ ಒಂದು ಸಂಘ ಸ್ಥಾಪಿಸಿ ತರುಣರನ್ನು ಕಾರ್ಯಪ್ರವೃತ್ತರಾಗುವಂತೆ ಎಚ್ಚರಿಸಿದರು. ಆ ದಿನ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿ ಎಮ್ಮಿಗನೂರ ಪರಿಷತ್ತಿನ ವೆಚ್ಚಕ್ಕಾಗಿ ಹಾಲ್ವಿ ಗ್ರಾಮಸ್ಥರು 315 ರೂ. ಗಳನ್ನು ಸಮರ್ಪಿಸಿದರು. ಹೀಗೆ ಈ ಭಾಗದಲ್ಲೆಲ್ಲಾ ನಾಡ ಚಳವಳಿ ಬಹಳ ಪ್ರಬಲವಾಗುತ್ತಿರುವುದು ನಾಡಿನ ಶುಭಸೂಚನೆಯಾಗಿದೆ.

## ಗ. ಕೋಡಿಹಳ್ಳಿ

ಪಾ. ಚ. ಗೌಡರ ಆಹ್ವಾನದಂತೆ ಶ್ರೀ ಕೀರ್ತನ ಕೇಸರಿ ಜಯರಾಮಾಚಾರ್ಯರು ಇಲ್ಲಿ ಬಂದು ಕಳೆದ ಗುರು, ಶುಕ್ರವಾರ ಅಮೋಘ ಕೀರ್ತನೆಗಳನ್ನು ಮಾಡಿ ಕರ ಶೋಷಣೆ ರೈತರು ಸ್ವಾವಲಂಬಿಗಳಾಗಿರಬೇಕಾದ ಅವಶ್ಯಕತೆ ಶಾಂತಿ ಶಿಸ್ತುಗಳ ಜೀವನ ಮಗ್ಗೆ ತತ್ವ ಸೂತ್ರಗಳನ್ನು ಪರಿಣಾಮಕರ ರೀತಿಯಲ್ಲಿ ಬೋಧಿಸಿದರು

## ಎಮ್ಮಿಗನೂರು (ಆದವಾನಿ)

ಬಳ್ಳಾರಿ ಜಿಲ್ಲಾ ಪೂರ್ವ ತಾಲೂಕುಗಳ ಏಕೀಕರಣ ಪರಿಷತ್ತು ಇಲ್ಲಿ ಸೇರಬೇಕೆಂದು ನಿಶ್ಚಯಿಸಲಾಗಿದೆ. ಉರವಕೊಂಡ ಜಗದ್ಗುರುಗಳು ಈ ವಿಷಯದಲ್ಲಿ ಬಹಳ ಆಸ್ಥೆಯನ್ನು ತಳೆದಿರುವರು. ಈ ಊರಲ್ಲಿಯೇ ಇದಕ್ಕಾಗಿ ಸುಮಾರು 800 ರೂ ಗಳ ಧನ ಸಂಗ್ರಹವಾಗಿದೆ

## ಉರವಕೊಂಡ ಜಗದ್ಗುರುಗಳು

ಬಿಜಾಪುರ ಜಿಲ್ಲೆಯ ಚಡಚಣದಲ್ಲಿನ ನಡೆಯುವ ಬಸವ ಜಯಂತಿ ಮಹೋತ್ಸವದಲ್ಲಿ ಭಾಗವಹಿಸಿ 8ನೆಯ ತಾ॥ ನಿಂದ ಬಿಜಾಪುರ ಜಿಲ್ಲೆಯ ಸಂಚಾರವನ್ನು ಕೈಗೊಂಡಿರುವರು. ಕನ್ನಡಿಗರ ಸಂಘಟನೆ ಏಕೀಕರಣ ಗುರಿಯನ್ನು ಸಾಧಿಸುವ ನಿಮಿತ್ತವಾಗಿಯೇ ಸ್ವಾಮಿಗಳ ಸಂಚಾರವೇರ್ಪಟ್ಟಿರುವುದು

## ಶ್ರೀ ಸುಬ್ಬಾಶಾಸ್ತ್ರಿಗಳ ನಿಧನ

ಮೈತ್ರೇಯ ಲಾಡ್ಜ ವ್ಯವಸ್ಥಾಪಕ, ಬಳ್ಳಾರಿ ತತ್ವಜ್ಞಾನ ಸಮಾಜದ ಉಪಾಧ್ಯಕ್ಷರಾದ ಶ್ರೀ ಚಿಂತಕುಂಟೆ ಸುಬ್ಬಾಶಾಸ್ತ್ರಿಗಳು ತಮ್ಮ 64ನೆಯ ವಯಸ್ಸಿನಲ್ಲಿ ಮೃತಪಟ್ಟರು. ಇವರು ಜೀವನದ ಬಹುಭಾಗವನ್ನು ಸ್ತ್ರೀ ಸಮಾಜದಲ್ಲಿ ತತ್ವಜ್ಞಾನ ಪ್ರಸಾರ ಮಾಡಲು ಕಳೆದು ಜಾತೀಯ ಭಾವಗಳನ್ನು ಸಂಪೂರ್ಣವಾಗಿ ದೂರಮಾಡಿದ್ದರು,

— ಗ್ರೀಸ್‌ನಲ್ಲಿ ಒಂದು ಸಾವಿರ ಕಮ್ಯೂನಿಸ್ಟರನ್ನು ಗಲ್ಲಿಗೇರಿಸುವದಾಗಿ ಈಗಿನ ಸರ್ಕಾರದವರು ನಿಶ್ಚಯಿಸಿರುತ್ತಾರಂತೆ. ಇಂಥಾ ಭೀಷಣ ಹತ್ಯಾಕಾಂಡದಿಂದ ಯೂರೋಪದಲ್ಲಿ ಯುದ್ಧವೇ ಆರಂಭವಾದೀತು.

—ಬ್ರಿಟಿಶ ಪಾರ್ಲಿಮೆಂಟಿನ ಹೈದರಾಬಾದು ಬೆನ್ನು ತಟ್ಟುವ ಕಾರ್ಯವು ವಿರೋಧೀ ಪಕ್ಷದ ಉಪಧುರೀಣ ಬಟ್ಲರರಿಂದಾಯಿತು. ಕಾಶ್ಮೀರದ ವಿಷಯಕ್ಕೆ ಭದ್ರತಾಮಂಡಲದ ತೀರ್ಮಾನವು ನ್ಯಾಯವಾದುದೆಂದು ಸಾರಲಾಯಿತು.

# The Rayalaseema Bank Ltd., H. O. Bellary.

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—19[illegible]

### ಮುಖ್ಯ ಕಾರ್ಯಾಲಯ—ಬಳ್ಳಾರಿ.

]0[

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ
ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.

ಶಾಖೆಗಳು | **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
**ಬೆಂಗಳೂರು :** ರುಕ್ಮಿಣಿ ,ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½

ಸೀಸನ್ ಡಿಪಾಜಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಜೆ. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.
ಕಾರ್ಯದರ್ಶಿ.


# NAVA BHARAT BELLARY.


Reg. No M. 4746[illegible]

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..........................................
..........................................
..........................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

ಜೈ ಹಿಂದ್.

# ನವ ಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

೧೧ | ಬಳ್ಳಾರಿ ಮೇ ೧೭ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ

ಕೆ ೧೮ | | ಟಿ. ಬಿ. ಕೇಶವರಾವ್.

## ಕಣ್ಣಿನ ದಾನ

ಮದ್ರಾಸ್ ಎಗ್ಮೋರ್ ಕಣ್ಣಾಸ್ಪತ್ರೆಯಲ್ಲಿ ಕಣ್ಣಿಲ್ಲದವರಿಗೆ ಕಣ್ಣುದಾನ ಮಾಡುವ ವ್ಯವಸ್ಥೆಯಾಗುತ್ತಲಿವೆ. ಈಗ ನಡೆದಿರುವ ಶಸ್ತ್ರ ಚಿಕಿತ್ಸೆಯಲ್ಲಿ ಶೇಕಡ 50 ಭಾಗ ಯಶ ಸಿಕ್ಕಿದೆ. ಕುರುಡರ ಅನವಶ್ಯ ಕಪ್ಪು ಗುಡ್ಡೆ ತೆಗೆದು ಹಾಕಿ ಆಗ ತಾನೇ ಸತ್ತವರ ಕಣ್ಣಿನಿಂದ ಕಪ್ಪು ಗುಡ್ಡೆಯನ್ನು ತೆಗೆದು ಕಣ್ಣಿನಲ್ಲಿ ಸೇರಿಸುವ (Transplantation) ಶಸ್ತ್ರ ಚಿಕಿತ್ಸೆಯು ಸದರಿ ಆಸ್ಪತ್ರೆಯಲ್ಲಿ ನಡೆಯುತ್ತಲಿದೆ. ಸತ್ತ ಮನುಷ್ಯನ ಕಣ್ಣನ್ನು ತೆಗೆದು ರೆಫ್ರಿಜರೇಟರ್‌ನಲ್ಲಿ (ಅಂದರೆ ವಸ್ತುಗಳನ್ನು ತಂಪಾಗಿಡುವ ಲೋಹದ ಪೆಟ್ಟಿಗೆ) ಇಡುತ್ತಾರೆ. ಅದನ್ನು ಒಂದೆರಡು ದಿನಗಳಿಗಿಂತಲೂ ಹೆಚ್ಚಾಗಿಡಬಾರದು.

'ಕಣ್ಣಿನ ಬ್ಯಾಂಕು' ಈಗ ಎಗ್ಮೋರ್ ಆಸ್ಪತ್ರೆಯಲ್ಲಿ ಪ್ರಾರಂಭವಾಗಿದೆ. ಉದಾರೀ ಜನರು ತಮ್ಮ ಮರಣಾನಂತರ ತಮ್ಮ ಕಣ್ಣುಗಳನ್ನು ತೆಗೆದುಕೊಳ್ಳಬಹುದೆಂದು ಮರಣ ಶಾಸನದಲ್ಲಿ ಬರೆದುಕೊಡಬೇಕು.

---

## ಕಾಶ್ಮೀರ ಸ್ವಾತಂತ್ರ್ಯ ದಿನೋತ್ಸವ

ಕಾಶ್ಮೀರ ಸ್ವಾತಂತ್ರ್ಯ ದಿನೋತ್ಸವವು ಒಂದುವಾರ ನಡೆಯಿತು. ಪಂಡಿತ ಜವಾಹರಲಾಲ ನೆಹರೂರವರು ಅಲ್ಲಿಗೆ ಹೋಗಿ ಮಹೋತ್ಸವದಲ್ಲಿ ಭಾಗವಹಿಸಿ ಕಾಶ್ಮೀರಿಗಳನ್ನು ರಕ್ಷಿಸುವ ವಾಗ್ದಾನಮಾಡಿದರು. ಸರ್ದಾರ ಪಟೇಲ್ ಮತ್ತು ಇತರ ಮಂತ್ರಿಗಳು ಸಂದೇಶ ಕಳುಹಿಸಿದ್ದರು. ನೆಹರೂ ಶೇಕ್ ಅಬ್ದುಲ್ಲಾರನ್ನು ಅಲಂಕರಿಸಿದ ನಾವೆಯಲ್ಲಿ ಮೆರವಣಿಗೆಯಿಂದ ಕೊಂಡೊಯ್ದರು.

---

### ಅಖಿಲ ಭಾರತ ಸೋಶಿಯಲಿಸ್ಟ್ ಪಾರ್ಟೀ

---

## ಪಾರ್ಟಿಯ ರಾಷ್ಟ್ರೀಯ ಕಾರ್ಯಸಮಿತಿಯ ಸಭೆ

### ಮೇ ೨೪ ರಿಂದ ೨೬ರ ವರೆಗೆ ಬೆಳಗಾವಿಯಲ್ಲಿ

---

ಸಮಾಜವಾದೀ ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿಯು 24 ರಿಂದ ಮೂರು ದಿನಗಳ ಕಾಲ ಬೆಳಗಾಂವದಲ್ಲಿ ಸಭೆ ಸೇರುತ್ತದೆ. ಶ್ರೀ ಜಯಪ್ರಕಾಶ್ ನಾರಾಯಣ, ಆಚಾರ್ಯ ನರೇಂದ್ರದೇವ, ಡಾ. ರಾಮಮನೋಹರ ಲೋಹಿಯಾ, ಅಚ್ಯುತ್ ಪಟವರ್ಧನ, ಅಶೋಕ ಮೆಹತಾ, ಶ್ರೀಮತಿ ಕಮಲಾದೇವಿ ಮುಂತಾದ ಸಮಾಜವಾದೀ ಮುಖಂಡರೆಲ್ಲ ಸಭೆಗಾಗಿ ಬರುತ್ತಾರೆ. ಸಮಾಜವಾದೀ ಪಕ್ಷದ ರಾಷ್ಟ್ರೀಯ ಕಾರ್ಯ ಸಮಿತಿ ಕರ್ನಾಟಕಕ್ಕೆ ಬರುತ್ತಿರುವುದು ಇದೇ ಮೊದಲನೆಯ ಸಾರಿ.

# ಕೈಲಾಗದವರ ಮಾತು

ಸಾರ್ವಜನಿಕ ಕಾರ್ಯ ಮಾಡುವುದು ಎಷ್ಟು ಮಹತ್ವದ್ದಾಗಿದೆಯೋ ಅಷ್ಟೇ ಕಠಿಣವೂ ಆಗಿದೆ. ಅದಕ್ಕಾಗಿ ಇಳಿಯುವವರು ಮೊದಲು ಅದನ್ನು ನಿರ್ವಹಿಸುವುದಕ್ಕೆ ತಮ್ಮಲ್ಲಿ ಸಾಕಷ್ಟು ಯೋಗ್ಯತೆಯು ಇದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಿಕೊಳ್ಳಬೇಕಾಗುತ್ತದೆ. ಆ ಯೋಗ್ಯತೆಯೆಂದರೆ, ಕೇವಲ ಜನಹಿತ ಮಾಡುವ ಕಲ್ಪನೆಯಿಂದ ತ್ಯಾಗ ಪೂರ್ವಕವಾಗಿ ಕಾರ್ಯ ಮಾಡುವುದಾಗಿದೆ. ಅದನ್ನೆಲ್ಲ ಬಿಟ್ಟು ತಮ್ಮ ಯಾವುದೋ ಸ್ವಾರ್ಥವನ್ನು ಸಾಧಿಸುವುದರ ಉದ್ದೇಶದಿಂದ ಇಲ್ಲವೆ ಯಾರದೋ ದ್ವೇಷ ಸಾಧಿಸುವ ಇಚ್ಛೆಯಿಂದ ಕಾರ್ಯ ಮಾಡಹತ್ತಿದರೆ ಅದರಿಂದ ಜನತೆಯ ಹಿತವಂತೂ ಸಾಧಿಸುವುದೇ ಇಲ್ಲ. ಅಂತಹ ಕಾರ್ಯಕರ್ತರ ಅವನತಿಯೂ ಅದರಿಂದ ಸಂಭವಿಸುತ್ತದೆ.

ದ್ವೇಷಾಸೂಯೆಗಳನ್ನು ಜನತೆಯಲ್ಲಿ ಬಿತ್ತುವುದು ಸುಲಭಕಾರ್ಯವಾಗಿದೆ. ಮನುಷ್ಯನಲ್ಲಿ ಮೂಲಭೂತವಾಗಿ ಇರುವಂತಹ ಗುಣಗಳು, ಸ್ವಲ್ಪ ಆಸ್ಪದ ಸಿಗುತ್ತಲೇ ಬಹು ಸುಲಭವಾಗಿ ಬೆಳೆಯಬಲ್ಲವಾಗಿವೆ. ಚಲೋ ಮಾರ್ಗಕ್ಕೆ ಜನರನ್ನು ಹಚ್ಚುವ ಕಾರ್ಯವು ಕಠಿಣವಾಗಿದೆಯೋ ಹೊರತು ಅಡ್ಡಮಾರ್ಗಕ್ಕೆ ಹಚ್ಚುವುದು ದುಸ್ತರವಾಗಿಲ್ಲ.

ಅಡ್ಡದಾರಿಯನ್ನು ತುಳಿಯಲು ಜನರನ್ನು ಹಚ್ಚುವವರು ಮೊದಲು ತಾವೇ ಆ ಮನಸ್ಥಿತಿಗೆ ಇಳಿಯಬೇಕಾಗುತ್ತದೆ. ಒಮ್ಮೆ ಜನತೆಯನ್ನು ಈ ಮಾರ್ಗಗಳಿಗೆ ಹಚ್ಚಿಬಿಟ್ಟರೆ ಆ ಬಳಿಕ ಅದನ್ನು ಅದರಿಂದ ಪರಾವರ್ತ ಮಾಡುವುದಕ್ಕೆ ಆ ಕಾರ್ಯಕರ್ತರಿಗೆ ಆಗುವುದೇ ಇಲ್ಲ. ಮತ್ತು ಅಡ್ಡ ದಾರಿಯ ಪ್ರವೃತ್ತಿಯು ಒಮ್ಮೆ ಬೆಳೆಯಿತೆಂದರೆ ಅದು ಕೊನೆಗೆ ಕಾರ್ಯಕರ್ತರಲ್ಲಿಯೇ ಕಾರ್ಯ ಮಾಡಿ ಅವರನ್ನು ನಿಷ್ಕ್ರಿಯರನ್ನಾಗಿ ಮಾಡದೆ ಬಿಡದು.

ಜನ ಸೇವೆಯು ಯಾರ ಗುತ್ತಿಗೆಗೂ ಸೇರಲಾರದು. ಅಲ್ಲದೆ ಜನರ ಬೆಂಬಲವನ್ನು ಒತ್ತಾಯದಿಂದ ಸ್ವೀಕರಿಸಬೇಕೆಂದರೆ ಅದು ಸಿಗುವುದಿಲ್ಲ. ಮುಖಂಡತ್ವವು ದ್ವೇಷಾಸೂಯೆಗಳಿಂದ ದೊರೆಯುವಂಥದಿಲ್ಲ. ಯೋಗ್ಯತೆಯಿದ್ದರೆ ಅದು ತಾನಾಗಿಯೇ ಬರುವುದು. ಮತ್ತು ಪ್ರೇಮ ವಿಶ್ವಾಸಗಳಿಗೆ ಅರ್ಹನಾದ ಮನುಷ್ಯನಿಗೇ ಜನತೆಯು ತನ್ನ ಮುಖಂಡತ್ವವನ್ನು ಕೊಡವಹಿಸಬಲ್ಲದು.

ಕೇವಲ ದ್ವೇಷ ಅಸೂಯೆಗಳ ಕಾರ್ಯವು ಇತ್ತಕಡೆಗೆ ಕಾಂಗ್ರೆಸ್ಸಿಗರಿಂದ ಕೂಡ ನಡೆದ ಪ್ರಸಂಗಗಳ ಅನುಭವವುಂಟಾಗಿದೆ. ಹೀಗಾದುದು ಕಾಂಗ್ರೆಸ್ಸಿನ ಶಕ್ತಿ ಮತ್ತು ಯೋಗ್ಯತೆಯು ಶಿಥಿಲವಾದುದಕ್ಕೆ ಕಾರಣವಾದ ಸಂಗತಿಗಳಲ್ಲಿ ಒಂದಾಗಿದೆ. ಈ ದೃಷ್ಟಿಯಲ್ಲಿ ಕಾಂಗ್ರೆಸಿಗರು ಸಾವಧಾನತೆಯನ್ನು ವಹಿಸದಿದ್ದರೆ ಅದರ ಶಕ್ತಿಯು ಇಂದಿಲ್ಲ ನಾಳೆ ಸೋಲುವುದರಲ್ಲಿ ಸಂಶಯವಿಲ್ಲ. ಕಾಂಗ್ರೆಸ ಶಕ್ತಿಯನ್ನು ನಿರ್ನಾಮಮಾಡಲು ಈಗ ಕೆಲವರು ಟೊಂಕಕಟ್ಟಿದ್ದು ಅವರಿಗೆ ಬರಬರುತ್ತ ಶಕ್ತಿ ಸಂಪಾದನೆಯಾಗುತ್ತಿದ್ದುದಕ್ಕೆ, ನಮ್ಮಲ್ಲಿಯ ಕೆಲವರ ಅವಿಚಾರ ಕೃತಿಗಳೇ ಕಾರಣವಾಗಿವೆಯೆಂಬುದನ್ನು ನಾವು ಮರೆಯುವಂತಿಲ್ಲ

ಉಳಿದ ಕೆಲವು ದ್ವೇಷ ಪಕ್ಷಗಳು ಇಂದು ದೇಶದಲ್ಲಿ ಕೋಲಾಹಲವನ್ನು ನಡೆಸಿದುದನ್ನು ನೋಡಿದರೆ ಅವು ಕೂಡ ಸರಿ ದಾರಿಯನ್ನು ಹಿಡಿದಿಲ್ಲವೆಂದು ಹೇಳಬೇಕಾಗುತ್ತದೆ.

ಕಮ್ಯುನಿಸ್ಟರು ಒಂದು ರೀತಿಯಿಂದ ಮುಂದೆ ಸಾಗಿದ್ದಾರೆ. ಅವರಿಗೆ ಹಿಂಸೆ ಅಹಿಂಸೆಗಳ ಪರಿವೆಯು ಕೂಡ ಇಲ್ಲ. ಮಲಬಾರ (ಕೇರಳ) ದಲ್ಲಿ ಅವರ ಪ್ರಾಬಲ್ಯ ಬಹಳ, ಸುಲಿಗೆ, ದಾಳಿ, ಸ್ತ್ರೀಯರಮೇಲೆ ಏರಿಹೋಗುವುದು ಮುಂತಾದ ಹೀನಕೃತ್ಯಗಳಿಗೆ ಕೂಡ ಅವರು ಕೈಹಾಕಿರುವರೆಂದು ಅಲ್ಲಿ ಕೂಡಿದ ಸಮಾಜವಾದಿಗಳ ಪ್ರಥಮ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಶ್ರೀ ಅಚ್ಯುತ ಪಟವರ್ಧನರು ಹೇಳಿದ್ದಾರೆ.

ಡಾ. ಅಂಬೇಡಕರರು ಇಟ್ಟುಕೊಂಡಿರುವ ಮಾರ್ಗ ಪ್ರತಿಗಾಮೀ ಸ್ವರೂಪದ ದಾರಿಗಳಲ್ಲಿ ಒಂದಾಗಿದೆ. ಹಿಂದುಳಿದವರ ಏಳ್ಗೆಯನ್ನು ಇಂತಹ ಮಾರ್ಗಗಳಿಂದ ಮಾಡಬೇಕೆಂದು ಅವರು ಬಯಸುತ್ತಿರುವುದರಿಂದ ತಮ್ಮ ಘಾತವನ್ನು ತಾವೇ ಮಾಡಿಕೊಳ್ಳಲು ಹೊರಟ್ಟಿದ್ದರೆಂದು ಹೇಳಬಹುದಾಗಿದೆ. ಅವರದು ವಿಧಾಯಕ ಮಾರ್ಗವಾಗಿರದೆ ವಿನಾಶಕವಾಗಿದೆ. ಅದರಿಂದ ಹಿಂದುಳಿದವರ ಹಿತವಾಗದು ಅಷ್ಟೇ ಅಲ್ಲದೆ ಅವರ ಸ್ಥಿತಿಯು ಮತ್ತಿಷ್ಟು ಚಿಂತಾಜನಕವಾಗುವುದರಲ್ಲಿ ಸಂಶಯವಿಲ್ಲ ಇಂತಹ ಮುಖಂಡರ ಬೆನ್ನುಹತ್ತಿದ ಹಿಂದುಳಿದ ವರ್ಗದ

ವರು ದುರ್ದೈವಿಗಳೇ ಸರಿ. ಹಿಂದುಳಿದವರು ಇನ್ನು ಮುಂದೆ ಅವರ ಬೆನ್ನು ಹತ್ತಲು ಎಷ್ಟರ ಮಟ್ಟಿಗೆ ಸಿದ್ಧವಾಗುವುದೆಂಬುದು ಒಂದು ಪ್ರಶ್ನೆಯೇ ಆಗಿದೆ. ಮತ್ತು ಡಾ. ಅಂಬೇಡಕರರು ಮುಖಂಡತ್ವ ಇದರಿಂದ ನಾಶವಾಗುವುದೆಂದು ಕೂಡ ಹೇಳಿದರೆ ತಪ್ಪಾಗುವಂತಿಲ್ಲ.

ಹೈದರಾಬಾದದಲ್ಲಿ ನಡೆದ ರಜಕಾರರ ಹಾವಳಿಯು ಅವಿಚಾರೀ ಕೃತಿಗಳಲ್ಲಿ ಸೇರುವ ಮತ್ತೊಂದು ಉದಾಹರಣೆಯಾಗಿದೆ. ಕಲ್ಲು ಮೇಲೆ ಗಿಡ ಬೆಳೆಸುವ ಕಾರ್ಯಕ್ಕೆ ಅವರು ಕೈಹಾಕಿದ್ದಾರೆ. ಅಸಂಭವನೀಯ ಮಾತನ್ನು ಸಂಭವನೀಯವಾಗಿ ಮಾಡಲು ಅವರು ಈಗ ಯುಕ್ತಿಸುತ್ತಿದ್ದಾರೆ.

ನಿಜಾಮ ಸಾಹೇಬರು ಈ ಅಸಂಭದ್ಧತೆಯನ್ನು ತಡೆದುಕೊಳ್ಳಲಾರರು, ಆದರೆ ಅದನ್ನು ತಡೆಯುವ ಶಕ್ತಿ ಇಲ್ಲದ ಸ್ಥಿತಿಗೆ ಇಳಿದಿದ್ದು, ಇದರಿಂದ ಹುಟ್ಟುವ ಭಾವೀ ಚಿತ್ರವನ್ನು ಕಲ್ಪಿಸಿಕೊಂಡು ಆ ಸ್ಥಳದಿಂದಲೇ ಓಡಿ ಹೋಗಬೇಕೆಂದು ಸಿದ್ಧತೆ ನಡೆಸಿದ್ದಾರೆಂದು ಸುದ್ದಿ ಬಂದಿದೆ.

ಯುದ್ಧವನ್ನು ಹಿಂದುಸ್ಥಾನ ಸರಕಾರವು ಈ ತಿಂಗಳ ಕೊನೆಯೊಳಗಾಗಿ ಹೈದರಾಬಾದದ ವಿರುದ್ಧವಾಗಿ ಸಾರಬೇಕಾಗುವುದೆಂದು ಕೆಲವು ಅನುಭವಿಕರು ಸಾರಿ ಹೇಳಿದ್ದಾರೆ. ಇವೆಲ್ಲ ಸಂಗತಿಗಳನ್ನು ನೋಡಿದರೆ ರಜಕಾರರು ಸುಳ್ಳು ಕನಸುಗಳು ಮಾಯವಾಗುವ ದಿನಗಳು ಇನ್ನು ಬಹಳ ದೂರವಿಲ್ಲವೆಂಬ ಮಾತನ್ನು ಹೇಳಲು ಏನೂ ಅತ್ಯಂತರವು ತೋರುವುದಿಲ್ಲ.

ಈ ವಾತಾವರಣವನ್ನು ನೋಡಿದರೆ ಹೀಗೆ ಅಡ್ಡ ಹೋಗುತ್ತಿದ್ದವರ ಕೃತಿಗಳು ಅವರ ಕೈಲಾಗದ ಲಕ್ಷಣವನ್ನು ಮಾತ್ರ ತೋರಿಸುತ್ತಿವೆಯೆಂದು ಕಂಡುಬರದೆ ಇರಲಾರದು. ಇಂತಹ ಚಟುವಟಿಕೆಗಳಿಂದ ಹಿಂದೆ ಯಾರಿಗೂ ಜಯವಾಗಿಲ್ಲ. ಮುಂದೆ ಆಗುವ ಸಂಭವವೂ ಇಲ್ಲ. ಒಂದೊಮ್ಮೆ ತಾತ್ಕಾಲಕ್ಕೆ ಇಂತಹ ಕೆಲವು ಚಟುವಟಿಕೆಗಳಿಗೆ ಯಶವು ಸಿಗುವುದೂ ಉಂಟು. ಆದರೆ ಆ ಯಶವು ಬಹುದಿವಸ ಬಾಳುವಂಥದಲ್ಲ.

ತನ್ನ ನಿಃಸ್ವಾರ್ಥ ಮತ್ತು ತ್ಯಾಗಮಯ ದಾರಿಯಿಂದ ಕಾಂಗ್ರೆಸು ಹಿಂದುಸ್ಥಾನದಲ್ಲಿ ಅಜೇಯ ಮತ್ತು ಏಕಮೇವಾದ್ವಿತೀಯ ಸಂಸ್ಥೆಯಾಗಿ ಮಾರ್ಪಟ್ಟಿದೆ. ಅದರ ಶಕ್ತಿಯನ್ನು ಕುಗ್ಗಿಸುವುದು ಕೃತ್ರಿಮ ಮಾರ್ಗಗಳಿಂದ ಸಾಧ್ಯವಿಲ್ಲ. ಆದರೆ ಹೆಚ್ಚಿನ ನಿಃಸ್ವಾರ್ಥತೆ ಮತ್ತು ತ್ಯಾಗಗಳಿಂದ ದುಡಿದವರಿಗೆ ಜನತೆಯು ಬೆಂಬಲವನ್ನು ಕೊಡಬಹುದು.

ಹೀಗೆ ಯಾವ ಪಕ್ಷವಾದರೂ ಕಾರ್ಯಮಾಡುತ್ತ ಮುಂದೆ ಬಂದಲ್ಲಿ ಇದರಿಂದ ಕಾಂಗ್ರೆಸಿಗರಿಗಾದಷ್ಟು ಆನಂದವು ಇನ್ನಾರಿಗೂ ಆಗಲಿಕ್ಕಿಲ್ಲ. ಯಾವದೇ ಪುಣ್ಯದಿಂದ ಆಗಲೊಲ್ಲದೇಕೆ? ದೇಶದ ಹಿತವಾಗಬೇಕೆಂಬುದೇ ನಿಜವಾದ ಕಾಂಗ್ರೆಸಿಗರ ಇಚ್ಛೆಯಾಗಿದೆ. ಇಂದು ಅಧಿಕಾರದಲ್ಲಿದ್ದ ಕಾಂಗ್ರೆಸಿಗರು ತಾವು ಜನತೆಯ ಬೆಂಬಲದ ತಳಹದಿಯ ಮೇಲೆಯೇ ಅಲ್ಲಿ ಇರುವರೆಂಬುದನ್ನು ದೃಢವಾಗಿ ನಂಬಿದಂಥವರಾಗಿದ್ದಾರೆ. ಈ ಬೆಂಬಲ ವಿಶ್ವಾಸಗಳು ಇಲ್ಲದ ಮರುದಿವಸ ಅವರು ಅಲ್ಲಿ ಇರುವ ಇಚ್ಛೆಯನ್ನು ಇಟ್ಟುಕೊಳ್ಳಲ್ಲ ಮತ್ತು ಇಟ್ಟುಕೊಂಡರೂ ಅದರ ಪ್ರಯೋಜನವಾಗಲಾರದು.

ಅಧಿಕಾರ ಪ್ರಾಪ್ತಿಯ ಮಾರ್ಗವು ಈ ರೀತಿಯಾಗಿ ಸ್ಪಷ್ಟವಾಗಿರುವಾಗ ಸುಮ್ಮನೆ ತಪ್ಪುದಾರಿಯಿಂದ ದೇಶದ ರಾಜ್ಯಸೂತ್ರಗಳನ್ನು ಅಥವಾ ದೇಶ ನಡೆಸುವ ಸ್ಥಾನಗಳನ್ನು ಆಕ್ರಮಿಸಲು ಹೊರಟ ಕೆಲವು ಪ್ರತಿಗಾಮೀ ಶಕ್ತಿಗಳ ಕುಣಿದಾಟವನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಗಿದೆ. ಇವೆಲ್ಲವೂ "ಕೈಲಾಗದವರ ಕ್ರಿಯೆಗಳು" ಎಂದೆನ್ನುತ್ತ ನಡೆಯುವುದೆಲ್ಲವನ್ನು ನಿರೀಕ್ಷಿಸುತ್ತ ಕೂಡ್ರುವುದೇ ನಿಜವಾದ ದೇಶ ಹಿತಚಿಂತಕರ ಇಂದಿನ ಕರ್ತವ್ಯವಾಗಿದೆ.

## ಬಳ್ಳಾರಿಯಲ್ಲಿ ಸೈನಿಕರ ಮೆರವಣಿಗೆ

ಭಾರತ ಸರ್ಕಾರದ ಸೈನಿಕರಲ್ಲಿ ಘೂರ್ಕಾ ಸೈನಿಕರ ಪಡೆಯೊಂದು ಇಲ್ಲಿಗೆ ಬಂದು ಮುನಿಸಿಪಲ್ ಹೈಸ್ಕೂಲಿನಲ್ಲಿ ಬಿಡಾರ ಮಾಡಿಲಾ 14ನೆಯ ದಿನಾಂಕ ಶುಕ್ರವಾರ ಪ್ರಾತಃಕಾಲ ನಗರ ಬೀದಿಗಳಲ್ಲಿ ಈ ಸಶಸ್ತ್ರ ದಳದವರ (ಮಿಲಿಟರಿ ಬ್ಯಾಂಡಿನೊಂದಿಗೆ) ಮೆರವಣಿಗೆಯಾಯಿತು. ಕಲೆಕ್ಟರ್, ಡೆ. ಕಲೆಕ್ಟರ್, ತಹಶೀಲ್ದಾರ್ ಡಿ. ಯಸ್. ಪಿ. ವಗೈರೆ ಅಧಿಕಾರಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

# ಐದು ವರ್ಷಗಳಲ್ಲಿ ಇಂಗ್ಲೀಷಕ್ಕೆ ಅರ್ಧಚಂದ್ರ

## ಬೋಧಭಾಷಾ ಸಮಿತಿಯ ನಿರ್ಣಯ

ವಿಶ್ವವಿದ್ಯಾಲಯ ಶಿಕ್ಷಣದ ಬೋಧಭಾಷಾ ಸಮಿತಿಯು ತಾ|| 2ರಂದು, ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಇಂಗ್ಲೀಷನ್ನು ಕಿತ್ತಿಹಾಕಿ ಅದರ ಬದಲು ಪ್ರಾಂತಭಾಷೆಯನ್ನೂ ರಾಷ್ಟ್ರಭಾಷೆಯನ್ನೂ ಪ್ರಾರಂಭಿಸಲು ಇನ್ನು ಐದು ವರ್ಷಗಳ ಅವಕಾಶ ಕೊಡಬೇಕೆಂದೂ ಅವರೆಗೆ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷೇ ಬೋಧಭಾಷೆಯಾಗಿರಬೇಕೆಂದೂ ವಿಶ್ವವಿದ್ಯಾಲಯ ಪರೀಕ್ಷೆಗಳೆಲ್ಲ ಇಂಗ್ಲೀಷಿನಲ್ಲಿಯೇ ನಡೆಯಬೇಕೆಂದೂ ನಿರ್ಧರಿಸಿತು. ಈ ಸಮಿತಿಯು ಡಾ. ತಾರಾಚಂದರ ಅಧ್ಯಕ್ಷತೆಯಲ್ಲಿ ಸೇರಿ ಎರಡು ದಿನ ದೀರ್ಘ ಚರ್ಚಾನಂತರ ತನ್ನ ತೀರ್ಮಾನಗಳನ್ನು ಕೈಕೊಂಡಿತು. ಆ ತೀರ್ಮಾನಗಳ ಮುಖ್ಯಾಂಶಗಳು ಹೀಗಿವೆ—

ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದಲ್ಲಿ ರಾಷ್ಟ್ರಭಾಷೆಯ ಪರೀಕ್ಷೆ ಇರಬೇಕು. ರಾಷ್ಟ್ರಭಾಷೆಯನ್ನೇ ಐಚ್ಛಿಕ ವಿಷಯವಾಗಿಟ್ಟುಕೊಂಡು ಕಲಿಯಬಯಸಿದ ವಿದ್ಯಾರ್ಥಿಗೆ ವಿಶ್ವವಿದ್ಯಾಲಯವು ಅನುಕೂಲ ಒದಗಿಸಿಕೊಡಬೇಕು

ರಾಷ್ಟ್ರಭಾಷೆಯ ಲಿಪಿಯಲ್ಲಿ ಘಟನಾ ಸಮಿತಿಯು ಒಪ್ಪಿದನ್ನೇ ಎಲ್ಲ ವಿಶ್ವವಿದ್ಯಾಲಯಗಳೂ ಅಂಗೀಕರಿಸಬೇಕು. ಬೇರೆ ಬೇರೆ ಪ್ರಾಂತದಲ್ಲಿ ರಾಷ್ಟ್ರಭಾಷೆ ಒರೆವಾಗ ಅಲ್ಲಿಯವರು ತಮ್ಮ ಪ್ರಾಂತ ಭಾಷೆಯ ಲಿಪಿಯನ್ನಾಗಲೀ ಬಳಸಬಹುದು.

ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ರಾಷ್ಟ್ರಭಾಷೆಯು ಕಡ್ಡಾಯದ ವಿಷಯವಾಗಬೇಕು.

ಈ ನಿರ್ಣಯದಂತೆ ಪಠ್ಯಪುಸ್ತಕಗಳನ್ನು ಅದರಲ್ಲಿಯೂ ವಿಜ್ಞಾನ ಶಾಸ್ತ್ರದ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವಾಗ ಸರಕಾರದ ಮೇಲ್ವಿಚಾರಣೆಯಲ್ಲಿಯೇ ಕೆಲಸ ಜರಗಬೇಕು. ಇತರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ಕೇಂದ್ರವು ಪ್ರಾಂತಿಕ ಸರಕಾರಗಳಿಗೆ ಬೇಕಾದರೆ ಆವಶ್ಯಕ ಸಹಕಾರ ನೀಡಬಹುದು.

ಹಿಂದುಸ್ಥಾನದ ಭಾಷೆಗಳಿಗೆಲ್ಲ ಒಂದೇಬಗೆಯ ಪಾರಿಭಾಷಿಕ ಶಬ್ದಗಳನ್ನು ಕಂಡುಹಿಡಿಯುವದಕ್ಕಾಗಿ ಭಾಷಾಶಾಸ್ತ್ರಜ್ಞರ ಹಾಗೂ ವಿಜ್ಞಾನಿಗಳ ಒಂದು ಸಮಿತಿಯನ್ನು ನೇಮಿಸಬೇಕು. ಸಮಿತಿಗೆ ಬೇಕಾಗುವ ಧನ ಸಹಾಯವನ್ನೆಲ್ಲ ಕೇಂದ್ರ ಸರಕಾರವೇ ಕೊಡಬೇಕು. ಈ ಸಮಿತಿಯು ಐದು ವರ್ಷಗಳಲ್ಲಿ ತನ್ನ ಕೆಲಸವನ್ನು ಪೂರೈಸಬೇಕು.

ಬೇರೆ ಬೇರೆ ಪ್ರಾಂತಗಳಲ್ಲಿರುವ ಭಾಷಾವಾರ ಅಲ್ಪಸಂಖ್ಯಾಕರ ಸಮಸ್ಯೆಗಳನ್ನು ಬಗೆಹರಿಸುವದಕ್ಕೆ ಕೇಂದ್ರ ಸರಕಾರವು ಪ್ರಾಂತಗಳಿಗೆ ವಿಶೇಷಪ್ರಾದೇಶಿಕ ಅಧಿಕಾರಗಳನ್ನು ಕೊಡಬೇಕು.

ಫೆಡರಲ್ ಪಬ್ಲಿಕ್ ಸರ್ವೀಸ ಕಮೀಶನ್ನಿನ ಪರೀಕ್ಷೆಗಳು ಆಯಾ ವಿದ್ಯಾರ್ಥಿಗಳ ಪ್ರಾಂತಿಕ ಭಾಷೆಯಲ್ಲಿ ನಡೆಯಬೇಕು ಆದರೆ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ರಾಷ್ಟ್ರಭಾಷೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.

---

## In the Court of the District Munsif, Hospet.

## ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S. C 59/48.

**ವಾದಿ;—**

ವೈದ್ಯ ರಾಮಾಚಾರ್.

**ಪ್ರತಿವಾದಿ; –**

ಆರ್. ರಹಿಮತುಲ್ಲಾ ಸಾಬು ಸಾ|| ಕೊಟ್ಟೂರ.

ಮೇಲಿನ ನಂಬರಿನಲ್ಲಿ ವಾದಿ ನಿನ್ನ ಮೇಲೆ ರೂ. 240/- ಕ್ಕೆ ದಾಖಲು ಮಾಡಿರುತ್ತಾನೆ. ಸದರಿ ನಂಬರು ವಾಯಿದಾ 29—5—1948 ಕ್ಕೆ ಇರುತ್ತದೆ. ಆಕ್ಷೇಪಣೆ ಇದ್ದಲ್ಲಿ ಸದರಿ ದಿವಸ ಹಾಜರಾಗಬೇಕು. ಇಲ್ಲದಿದ್ದಲ್ಲಿ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

ಹೊಸಪೇಟೆ **ಹೆಚ್. ಗೋವಿಂದಾಚಾರ್**

**ಅಡ್ವೋಕೇಟ್.**

# ಮಧುಮೇಹಕ್ಕೆ ಮದ್ದು

ಅಮೇರಿಕದಲ್ಲಿ 10 ಲಕ್ಷಕ್ಕಿಂತ ಹೆಚ್ಚು ಜನರು ಮಧುಮೇಹ (Diabetirs) ದಿಂದ ನರಳುತ್ತಿದ್ದಾರೆ. ಈ ರೋಗಕ್ಕೆ ಸರಿಯಾದ ಮದ್ದನ್ನು ಈ ವರೆಗೆ ಯಾರೂ ಕಂಡುಹಿಡಿದಿಲ್ಲ. ಇವರೆ ಇತ್ತೀಚಿನ ಶೋಧದಿಂದ ಈ ಕೆಳಗಿನ ಸಂಗತಿಗಳು ಗೊತ್ತಾಗಿವೆ ಎಂದು ಶ್ರೀ ಜಿ ಬಿ ಲಾಲ್ಲರು ಬರೆಯುತ್ತಾರೆ.

ಕಾಲ ಕಾಲಕ್ಕೆ ಜನರನ್ನು ಕುಟುಂಬ ವೈದ್ಯರು ವೈದ್ಯಕೀಯ ಪರೀಕ್ಷೆಗೆ ಗುರಿಪಡಿಸಿದರೆ ಮಧುಮೇಹದ ಮುಂಗುರುಹುಗಳನ್ನು ಕಾಣಬಹುದು, ಆಗ ಮೊದಲೇ ಔಷಧ ಪ್ರಯೋಗ ಮಾಡಲು ಅವಕಾಶ ಸಿಕ್ಕಿ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲಾಗುತ್ತದೆ. ಕೆಲ ರೋಗಿಗಳಿಗೆ ಕೆಲ ಅನ್ನಾಂಗಗಳನ್ನು (Vitamin) ಕೊಡುತ್ತಿರುವಂತೆ ಅವರ ದೇಹವು ಸಕ್ಕರೆಯ ಅಂಶವನ್ನು ನಿಯಂತ್ರಿಸುವ ಶಕ್ತಿಯನ್ನು ಮತ್ತು "ಇನ್‌ಸುಲಿನ್" ಎಂಬ ರಸದ ವಿಶೇಷ ಮಿಶ್ರಣದ ಪಾನದಿಂದ ಎಷ್ಟೋ ಜನರಿಗೆ ಆರೋಗ್ಯ ಲಾಭವಾಗುವುದು.

ಇನ್‌ಸುಲಿನು ಅನೇಕ ರೋಗಿಗಳಿಗೆ ಜೀವದಾನ ಮಾಡಿರುವುದು ನಿಜ: ಆದರೆ ಅದು ಕೊಡುವ ಗುಣ ಪಾಕ್ಷಿಕವಾದದ್ದು. ಪ್ರಾಣಿಗಳಲ್ಲಿ ಪ್ರಾಯೋಗಿಕವಾಗಿ ಮಧುಮೇಹವನ್ನು ಹುಟ್ಟಿಸಿದಾಗ ಅವುಗಳ ಅನ್ನಕೋಶದ ಹತ್ತಿರವಿರುವ Pancreas ಎಂಬ ಗ್ರಂಥಿಯು ದುರ್ಬಲವಾಗಿ ಅದು ಸುರಿಸುವ ಜೀರಕ ರಸವಾದ "ಇನ್‌ಸುಲಿನ್" ಕಡಿಮೆಯಾಗಿ ಮಧುಮೇಹ ಹುಟ್ಟುತ್ತದೆ. ಆಗ ಇನ್‌ಸುಲಿನ್ ಇಂಜೆಕ್ಷನ್ ಕೊಟ್ಟು ಆ ಗ್ರಂಥಿಯನ್ನು ಬಲಪಡಿಸಿದರೆ ರೋಗವಾಸಿಯಾಗುತ್ತದೆಯೆಂದು ಕಂಡು ಬಂದಿದೆ. ಗ್ರಂಥಿಯು ತೀರ ದುರ್ಬಲವಾಗಿ ಹೋಗಿದ್ದರೆ ಇಂಜೆಕ್ಷನ್ನಿನಿಂದ ಯಾವ ಪ್ರಯೋಜನವೂ ಆಗಲಾರದು. ಆದುದರಿಂದ ಅತಿಯಾದ ನೀರಡಿಕೆ ಪದೇ ಪದೇ ಹೆಚ್ಚು ಹೆಚ್ಚು ಮೂತ್ರಾಶಯದ ದ್ರವ ಹೋಗುವುದು ತೂಕ ಕಡಿಮೆ. ತಿಂದರೂ ಅಶಕ್ತಿ ಚರ್ಮ ಒಣಗಿ ಹುರಿಸೇಳುವದು, ತಲೆನೋವು ತಲೆ ತಿರುಗುವುದು, ಬೇರೆ ಬೇರೆ ನೋವುಗಳು, ಉರಿ ಇವು ತಲೆದೋರಿದರೆ ಕೂಡಲೆ ಅವು ಮಧುಮೇಹದ ಚಿಹ್ನೆಗಳೆಂದು ತಿಳಿಯತಕ್ಕದ್ದು.

ಭಾವಾವೇಶ, ಗ್ರಂಥಿಗಳ ಕಾರ್ಯದಲ್ಲಿ ಅಕ್ರಮ, ಬಸಿರು, ಕೆಟ್ಟ ಕಾಹಿಲೆ ಹಿಡಿಯುವುದು, ಅವಘಡ ಮತ್ತು ಮಿದುಳು ಕಾಯುವುದು ಇವುಗಳಿಂದ ಮಧುಮೇಹ ಬಹುಬೇಗ ಉತ್ಕರ್ಷ ಹೊಂದುತ್ತದೆ. ಡಾ॥ ಹರ್ಬರ್ಟ್ ಮಿಲ್ಲರರ ಪ್ರಕಾರ 10 ರತ್ತಲ. ಮತ್ತು ಅದಕ್ಕಿಂತ ಹೆಚ್ಚು ತೂಕದ ಮಗುವನ್ನು ಹಡೆದ ತಾಯಂದಿರಿಗೆ ಬಹುಬೇಗ ಮಧುಮೇಹ ಪ್ರಾಪ್ತವಾಗಬಹುದು

ಸಕ್ಕರೆಯ ಅಂಶವನ್ನು ಶರೀರವು ಸರಿಯಾಗಿ ಬಳಸಿಕೊಳ್ಳಲಾರದುದೇ ಮಧುಮೇಹಕ್ಕೆ ಜನಕವಾಗಿ ಪರಿಣಮಿಸುತ್ತದೆ. ಸರಿಯಾಗಿ ಉಪಯುಕ್ತವಾಗದೆ ರಕ್ತ ಮತ್ತು ಮೂತ್ರಕೋಶಗಳಲ್ಲಿ ಸಕ್ಕರೆ ನಿಂತರೆ ಅದರಿಂದ ರೋಗಿಗಳು ಅದನ್ನು ಕಳೆದುಕೊಂಡು ದಿನೇ ದಿನೇ ನಿಃಶಕ್ತರಾಗುತ್ತ ಹೋಗುವರು. ಇನ್‌ಸುಲಿನ್ ಎಂಬುದು ಸರಿಯಾಗಿ ಒಸರುತ್ತಿದ್ದರೆ ಅದು ಈ ಸಕ್ಕರೆಯ ಅಂಶವನ್ನು ಜೀರ್ಣಿಸಿಕೊಳ್ಳಲು ಶರೀರಕ್ಕೆ ಸಹಾಯ ಮಾಡುವುದು.

# ಎಮ್ಮಿಗನೂರು (ಆದವಾನಿ) ಶಿಶುರಕ್ಷಣಾ ಕೇಂದ್ರ

1930 ರಿಂದ ನಡೆದುಕೊಂಡು ಬರುತ್ತಿದ್ದ ಶಿಶುರಕ್ಷಣಾ ಕೇಂದ್ರವು ಸರ್ಕಾರದ ಸಹಾಯವಿಲ್ಲದೆ 1942 ರಲ್ಲಿ ಮುಚ್ಚಲಾಯಿತು. ಬಡಜನರ ಮಕ್ಕಳಿಗೆ ಈ ಕೇಂದ್ರವು ಅನೇಕ ವಿಧಗಳಿಂದ ಉಪಯುಕ್ತವಿದ್ದಿತು. ಹಾಲನ್ನು ಉಚಿತವಾಗಿ ಹಂಚಲಾಗುತ್ತಿತ್ತು. ಸ್ಥಾನಿಕ ಡಾಕ್ಟರರು ತಮ್ಮ ಸಿಬ್ಬಂದಿಯೊಂದಿಗೆ ಈ ಕೇಂದ್ರದಲ್ಲಿನ ಮಕ್ಕಳ ಪೋಷಣೆ ವಿಚಾರಣೆ ತೆಗೆದುಕೊಳ್ಳುತ್ತಿದ್ದರು. ಸರ್ಕಾರದ ಸಹಾಯ ಸ್ಥಾನಿಕ ಕಾರ್ಯಕರ್ತರ ಸಹಕಾರದಿಂದ ಈ ಸಂಸ್ಥೆಯು ಸುವ್ಯವಸ್ಥೆಯಿಂದ ನಡೆಯುತ್ತಲಿತ್ತು. ಪ್ರಾಂತದಲ್ಲಿ ಇತರ ಕೇಂದ್ರಗಳಿದ್ದರೂ ಎಮ್ಮಿಗನೂರಂಥ ಹಿಂದುಳಿದ ಮತ್ತು 16000 ಜನ ಸಂಖ್ಯೆಯ ಕೇಂದ್ರದಲ್ಲಿ ಇಂಥಾ ಶಿಶುರಕ್ಷಣಾಕೇಂದ್ರದ ಆವಶ್ಯಕತೆಯನ್ನು ಬೇರೆ ಹೇಳಬೇಕಾಗಿಲ್ಲ. ಸ್ವರಾಜ್ಯ ಪ್ರಾಪ್ತವಾದನಂತರ ಇಂಥಾ ಕೇಂದ್ರಗಳ ಪ್ರಗತಿಯನ್ನು ಎಲ್ಲರೂ ನಿರೀಕ್ಷಿಸುತ್ತಿದ್ದರು. ಇಂಥಾ ಚರ್ಯೆಯನ್ನು ತೆಗೆದು

ಕೊಳ್ಳುವರಬಹುದಿತ್ತು. ಆರೋಗ್ಯಶಾಖೆಯವರು ಇದನ್ನು ಮುಚ್ಚಿದ್ದು ವಿಷಾದಕರ. ದೇಶದ ಆರೋಗ್ಯ ದೃಷ್ಟಿಯಿಂದ ಆರೋಗ್ಯ ಮಂತ್ರಿಗಳು ಇಂಥಾ ಕೇಂದ್ರಗಳನ್ನು ಪುನರುದ್ಧರಿಸುವರೆಂದು ಆಶಿಸುತ್ತೇನೆ.

ಜಿ. ಯಂ. ಗಂಗಣ್ಣ, ಎಮ್ಮಿಗನೂರು

---

## ಆದವಾನಿ ನಗರದಲ್ಲಿ ಏಕೀಕರಣ ಸಂಘ ಸ್ಥಾಪನೆ.

(ಕ. ಏ. ಮಹಾಸಮಿತಿಯ ಪ್ರಕಟನೆ.)

ಉರವಕೊಂಡ ಶ್ರೀ ಜಗದ್ಗುರುಗಳೊಡನೆ ಪೂರ್ವಗಡಿಯಲ್ಲಿ ಏಕೀಕರಣ ಪ್ರಚಾರಕ್ಕಾಗಿ ದಯಮಾಡಿಸಿದ್ದ ಕನ್ನಡ ಮುಖಂಡರು ಆದವಾನಿಯ ಪ್ರಬಲ ಹಾಗು ಸರ್ವಜನಾದರಣೀಯ ಮಾನ್ಯರು ಕೆಲಸ ಸಾಗಿಸುವ ಏಕೀಕರಣ ಸಂಘವನ್ನು ನಗರದಲ್ಲಿ ಸ್ಥಾಪಿಸಿದ್ದು ಈ ಕೆಳಗಿನವರು ಅಧಿಕೃತವಾಗಿ ಆರಿಸಲ್ಪಟ್ಟಿದ್ದಾರೆ.

1) ಡಾ. ಬಿ. ನರಸಿಂಗರಾವ, ಎಂ. ಬಿ. ಬಿ. ಎಸ್. (ಅಧ್ಯಕ್ಷರು)
2) ಡಾ. ಲಕ್ಷ್ಮಣರಾವ (ಉಪಾಧ್ಯಕ್ಷರು)
3) ಶ್ರೀ ಜಿ. ಬಸಣ್ಣನವರು (ಕೋಶಾಧಿಕಾರಿ)
4) ಡಾ. ಎಚ್. ಎಂ. ಚಾಜೋಟಯ್ಯನವರು (ಪ್ರಧಾನ ಕಾರ್ಯದರ್ಶಿಗಳು)
5) ಶ್ರೀ ಎಚ್. ಸತ್ಯನಾರಾಯಣರಾವ (ಸಹಾಯಕ ಕಾರ್ಯದರ್ಶಿಗಳು)

— ಸದಸ್ಯರು —

6) ಶ್ರೀ ಕೆ. ಮಹದೇವಪ್ಪನವರು
7) ,, ಜಿ. ರಾಚಣ್ಣನವರು
8) ,, ಎಂ. ವೆಂಕಟಯ್ಯನವರು
9 ,, ಕೆ ವೀರಪ್ಪನವರು
10 ,, ನೆಟ್ಟಕಲ್ಲು ಸಣ್ಣವೀರಪ್ಪನವರು
11 ಜನಾಬ್ ಓ. ಕೆ. ಅಹಮ್ಮದ ಹುಶೇನಸಾಬ್
12 ಶ್ರೀ ಈಡಿಗ ಕರಿಯಪ್ಪನವರು
13 ,, ಎಂ. ರಾಚಯ್ಯನವರು
14 ,, ಆರ್ದಿಗೆರೆ ಸೀತಾರಾಮರೆಡ್ಡಿಯವರು
15 ,, ಮಾಟಸೂಗೂರ ಬಸಂಣನವರು

## ಹಿಂದಿ ಭಾಷೆಯ ಮಹತ್ವ

ಹಿಂದಿಯು ರಾಷ್ಟ್ರಭಾಷೆ ಇದನ್ನು ಎಲ್ಲರೂ ಕಲಿಯುವುದು ಸರ್ವ ದೃಷ್ಟಿಗಳಿಂದ ಮಾನ್ಯವಾಗಿದೆಯೆಂದು ಪ್ರಚಾರಾತ್ಮಕ ಲೇಖನವನ್ನು ಎಮ್ಮಿಗನೂರು ಶ್ರೀ ಜಿ. ಎಂ. ಗಂಗಣ್ಣನವರು ಬರೆದಿದ್ದಾರೆ.

(ಹಿಂದಿಯ ಬಗ್ಗೆ ಪ್ರಚಾರಾತ್ಮಕ ಲೇಖನಗಳನ್ನು ಬರೆಯುವಕಾಲ 1930 ರ ಪೂರ್ವಕ್ಕಿದ್ದಿತು. ಯಾವ ಭಾರತೀಯನೂ ರಾಷ್ಟ್ರಭಾಷೆ ಬೇಡವೆಂದೂ ಬಹುಸಂಖ್ಯಾಕರಿಂದ ಬಳಸಲ್ಪಡುತ್ತಿರುವ ಹಿಂದಿಯು ರಾಷ್ಟ್ರಭಾಷೆಯಾಗಲಾರದೆಂದೂ ಹೇಳಲಾರನು. ಇದಕ್ಕಾಗಿ ಈಗ ಪ್ರಚಾರವು ಅನಾವಶ್ಯಕ ಯಾವ ವೃತ್ತ ಪತ್ರಿಕೆ, ಮಾಸಪತ್ರಿಕೆಗಳಾಗಲಿ ಹಿಂದಿಗೆ ವಿರೋಧ ಅಥವಾ ಪರವಾಗಿ ಬರೆಯುವುದಿಲ್ಲ. ಭಾರತದಲ್ಲಿ ಎಲ್ಲಾ ಪ್ರಾಂತೀಯ ಸರಕಾರಗಳೂ ಶಾಲೆಗಳಲ್ಲಿ ಹಿಂದಿಯ ಶಿಕ್ಷಣಕ್ಕೆ ಏರ್ಪಡಿಸಿವೆ. ಅನೇಕ ಕಡೆಗಳಲ್ಲಿ ಉಪಾಧ್ಯಾಯರು ದೊರೆಯದೆ ತೊಂದರೆಯಾಗಿದೆ. ಈ ಕಾರಣ ಹಿಂದೀ ಪ್ರೇಮಿಗಳೆಲ್ಲಾ ಹಿಂದಿಯನ್ನು ಕಲಿತು ಸರ್ಕಾರದ ಶಿಕ್ಷಣ ಸಂಸ್ಥೆಗೆ ಸಹಾಯ ಮಾಡುವುದರಿಂದ ರಾಷ್ಟ್ರ ಭಾಷೆಯ ನಿಜವಾದ ಸೇವೆಯಾದಂತಾಗುತ್ತದೆ.)

ಸಂಪಾದಕ—ನವಭಾರತ

---

## ಬಟ್ಟೆಗಳ ಬೆಲೆ

ನಿಯಂತ್ರಣವನ್ನು ತೆಗೆದಮೇಲೆ ಬಟ್ಟೆಗಳ ಬೆಲೆ ಎಂಟರಷ್ಟು ನೂರರಷ್ಟು ಹೆಚ್ಚಿದೆ. ಈ ಬೆಲೆ ಹೆಚ್ಚಲು ವ್ಯಾಪಾರಿಗಳ ಕಳ್ಳಪೇಟೆಯೇ ಕಾರಣವಾಗಿದೆಯೆಂದೂ ಇವನ್ನು ಹತ್ತಿಕ್ಕಲು ಸರಕಾರವು ಉಗ್ರಚರ್ಯೆ ತೆಗೆದುಕೊಳ್ಳಬೇಕೆಂದೂ ಸೂಚಿಸಲಾಗಿದೆ.

## ಪಾಲಿಸ್ತಾನದಲ್ಲಿ ಯುದ್ಧಸಿದ್ಧತೆ

ಅರಬ್ ರಾಷ್ಟ್ರಗಳಾದ ಟ್ರಾನ್ಸಜೋರ್ಡಾನ್ ಈಜಿಪ್ಟ ಸಿರಿಯಾ ಮತ್ತು ಲೆಬನಾನ್ ದೇಶಗಳು ಪಾಲಿಸ್ತಾನವನ್ನೆಲ್ಲಾ ಆಕ್ರಮಿಸಲು ಸನ್ನಾಹ ನಡೆಸುತ್ತಲಿವೆ. ಅತ್ತ ಜ್ಯೂ ಜನರೂ ಸಹ ಯುದ್ಧಕ್ಕೆ ತಯಾರಿ ನಡೆಸಿದ್ದಾರೆ

# 'ಹರಿಜನ' ಪತ್ರಿಕೆಯಿಂದ ಮಹಾತ್ಮ ಗಾಂಧಿ – ಒಂದು ಅವತಾರ.

ಮರಣಾನಂತರ ಎಲ್ಲ ಮಹಾತ್ಮರುಗಳ ಸುತ್ತ ನಾನಾವಿಧ ಕಾಲ್ಪನಿಕ ಕಥೆಗಳು ಬೆಳೆದಂತೆ ಈ ನಮ್ಮ ಮಹಾತ್ಮನ ಸುತ್ತಲೂ ಹುಟ್ಟುತ್ತಿವೆ

ಪುರಾಣಗಳ ರೀತಿಯಲ್ಲಿ ಗಾಂಧೀಜಿಯೊಂದು ಅವತಾರವೆಂದು ನಂಬುವದಕ್ಕೆ ಅವರು ಸರ್ವಥಾ ಒಪ್ಪಿಗೆ ಕೊಡುತ್ತಿದ್ದಿಲ್ಲ. ಅವರು ಎಂದೆಂದೂ ತಮ್ಮಲ್ಲಿ ದೇವತ್ವವನ್ನು ಆರೋಪಿಸಿಕೊಂಡಿದ್ದಿಲ್ಲ. ತಮ್ಮ ಸತ್ಯ ಅಹಿಂಸೆಗಳು ಕೂಡ ಪರಿಪೂರ್ಣವಾಗಿದ್ದವೆಂದು ಅವರು ಹೇಳಿಕೊಳ್ಳುತ್ತಿದ್ದಿಲ್ಲ ಆಧುನಿಕ ಕಾಲದಲ್ಲಿ ಈ ಗುಣಗಳಲ್ಲಿ ಅವರೊಡನೆ ಸ್ಪರ್ಧಿಸಬಲ್ಲವರಾರೂ ನಮಗೆ ತಿಳಿದ ಮಟ್ಟಿಗೆ ಇದ್ದಿಲ್ಲವೆಂಬ ಮಾತು ಬೇರೆ

ಒಂದು ದೃಷ್ಟಿಯಿಂದ ಎಲ್ಲ ಮಹಾಮಹಿಮರೂ ಪ್ರವಾದಿಗಳೂ ಅವತಾರಿಗಳೆ "ಮಹತ್ತಾದುದು ಉದಾತ್ತವಾದುದು ಉತ್ಕೃಷ್ಟವಾದುದು ಏನಿದೆಯೋ ಅದರಲ್ಲೆಲ್ಲ ನನ್ನ ತೇಜಸ್ಸಿನ ಅಂಶವಿದೆಯೆಂದು ತಿಳಿ" ಎಂದು ಗೀತೆಯಲ್ಲಿ ಹೇಳಿದೆ. ಜಗತ್ತಿನಲ್ಲಿರುವ ಎಲ್ಲ ವಿಭೂತಿಯುಕ್ತ ವಸ್ತುಗಳನ್ನು ಬಣ್ಣಿಸಿದ ನಂತರ ಪರಮಾತ್ಮನು ಈ ಮಾತನ್ನು ಇನ್ನೂ ವಿಸ್ತರಿಸಿ "ನಾನು ನನ್ನೊಂದು ಅಂಶಮಾತ್ರದಿಂದ ವಿಶ್ವವನ್ನು ವ್ಯಾಪಿಸಿ ಧರಿಸಿದ್ದೇನೆ" ಅವತಾರದ ತರ್ಕಶುದ್ಧ ಅರ್ಥ ಹೀಗೆ ಮಾತ್ರ ಇರಬಲ್ಲದು. ಪ್ರತಿಯೊಂದು ಹುಲ್ಲು ಕಡ್ಡಿಯೂ ಕಪ್ಪೆಯೂ ಹಲ್ಲಿಯೂ ಆ ಪರಮಾತ್ಮನ ರೂಪಗಳಾಗಿರುವಾಗ ಮಾನವ ಕುಲಕ್ಕಾಗಿಯೇ ದುಡಿದು ಕೆಲಸಮಾಡಿದ ಮಹಾತ್ಮಕ್ಕೆ ಅವತಾರತ್ವವನ್ನೇಕೆ ಅಲ್ಲಗಳೆಯಬೇಕು?

ಆದರೆ ಜನರು ಪೌರಾಣಿಕ ರೀತಿಯಲ್ಲಿ ಗಾಂಧೀಜಿಯನ್ನು ಕುರುಡು ನಂಬಿಕೆಯಿಂದ ಅವತಾರವೆಂದು ನಂಬುವುದು ಬೇರೆ ಇದು ಬೇರೆ

18—3—48 ಧರ್ಮಾಭ್ಯಾಸಿ

# ಗಾಂಧೀ ಮೂರ್ತಿಗಳು

ಮೂರ್ತಿ ಪೂಜೆಯನ್ನಿಸಿಕೊಳ್ಳಬಹುದಾದ ರೀತಿಯಿಂದ ಗಾಂಧೀಜಿಯ ಸ್ಮಾರಕವನ್ನು ರಚಿಸುವುದು ಯುಕ್ತವಲ್ಲವೆಂದು ಪಂಡಿತ ಜವಾಹರಲಾಲ ನೆಹರು ಮತ್ತು ಸರದಾರ ಪಟೇಲರು ನಮ್ಮ ನಾಡಿಗರನ್ನು ಕೇಳಿಕೊಂಡಿರುವುದು ಬಹಳ ಯೋಗ್ಯವಾಗಿದೆ.

ಗಾಂಧಿಯವರ ಪ್ರತಿಬಿಂಬವನ್ನು ಬಣ್ಣದ ಚಿತ್ರ ಮತ್ತು ಮೂರ್ತಿಗಳಲ್ಲಿ ಮೂಡಿಸಿ ವಸ್ತು ಸಂಗ್ರಹಾಲಯಗಳಲ್ಲಿ ಇಲ್ಲವೆ ಸಾರ್ವಜನಿಕ ಸ್ಥಳಗಳಲ್ಲಿ ಇಡಬಹುದು. ಆದರೆ ಮೂರ್ತಿ ಪೂಜೆಗೆ ಮಾತ್ರ ಎಡೆಗೊಡಬಾರದು. ಗಾಂಧಿಯವರು ಮೂರ್ತಿ ಪೂಜಾವಿರೋಧಿಗಳಾಗಿದ್ದರೆಂದು ನಾನ ಬಲ್ಲೆ ಅವರು ಸತ್ಯ ಮತ್ತು ಚೈತನ್ಯಗಳನ್ನು ಆರಾಧಿಸಿದರು,

ವೇದಗಳು, ಉಪನಿಷತ್ತುಗಳು ಗೀತೆ ಇವು ಮೂರ್ತಿಪೂಜೆಯನ್ನು ಮಾಡಹೇಳುವುದಿಲ್ಲ. ಪ್ರಚ್ಛನ್ನ ವಾಕ್ಯಗಳಲ್ಲಿ ಪುರಾಣಗಳು ಕೂಡ ದೇವತಾ ಮೂರ್ತಿಗಳು ಕಲ್ಪಿತವೆಂದು ಹೇಳಿವೆ. ನಾವು ಗಾಂಧಿಯವರನ್ನು ದೇವತ್ವಕ್ಕೇರಿಸುವುದು ಬೇಡ, ಆದರೆ ಅವರ ನೆನಪನ್ನು ಗೌರವಿಸೋಣ

ಅವರ ನೆನಪಿಗಾಗಿ ದೇವಾಲಯಗಳನ್ನೂ ಮೂರ್ತಿಗಳನ್ನೂ ರಚಿಸುವುದರಲ್ಲಿ ನಮ್ಮ ನಾಡಿನ ಅಲ್ಪ ಐಶ್ವರ್ಯವನ್ನು ವ್ಯರ್ಥ ಮಾಡದಿರೋಣ ನಮ್ಮ ರಾಷ್ಟ್ರೀಯ ಕಾಣಿಕೆಗಳನ್ನು ಜನರ ಏಳಿಗೆಗಾಗಿ ಬಳಸೋಣ.

ಓರ್ವ ಧರ್ಮಾಭ್ಯಾಸಿ

# ಯಹೂದಿ-ಅರಬ ಸಂಘರ್ಷಣೆ

ಮೇ 15ರ ನಂತರ ಪಾಲಿಸ್ತಾನವನ್ನು ಬ್ರಿಟಿಶರು ತೆರವು ಮಾಡುವರು. ಕೂಡಲೇ ಯಹೂದಿಗಳು ಅಲ್ಲಿ ತಮ್ಮ ರಾಷ್ಟ್ರವನ್ನು ಸ್ಥಾಪಿಸುವರು ಹಾಗೆಯೇ ಅರಬರೂ ಸಹ ತಮ್ಮ ರಾಷ್ಟ್ರವನ್ನು ಸ್ಥಾಪಿಸುವರು ಅರಬ್ ರಾಷ್ಟ್ರಗಳಾದ ಈಜಿಪ್ಟ, ಸೌದಿ, ಅರೇಬಿಯಾ, ಸುಡಾನ್ ಟ್ರಾನ್ಸಜೋರ್ಡಾನದಿಂದ ಅರಬ್ ಸೈನ್ಯಗಳು ಹೊರಟವೆ. ಶುಕ್ರವಾರ ಮಧ್ಯರಾತ್ರಿ ಬ್ರಿಟಿಶರು ಹೊರಹೊರಟರು

## ಸ್ವೀಕಾರ-ವಿಮರ್ಶೆ.

**ಜ್ವಾಲ (ರಾಷ್ಟ್ರೀಯ ವಾರ ಪತ್ರಿಕೆ. ಕರ್ನೂಲು.)**

ಜನ್ಮದಿನ ಸಂಚಿಕೆಯು ನಮ್ಮ ಕೈಸೇರಿದೆ. 143 ಪುಟಗಳ ಡೆಮಿ ಚಿಕ್ಕ ಆಕಾರದ್ದಾಗಿ ಪ್ರಥಮ ಪುಟವು ಸುಂದರವಾದ ಮಹಾತ್ಮ ಗಾಂಧಿ, ಅಶೋಕ ಸ್ತಂಭದಿಂದ ಸುಶೋಭಿತವಾಗಿ ಆರ್ಟ ಪತ್ರದ ಮೇಲೆ ಕಂಗೊಳಿಸುತ್ತದೆ. ನುರಿತ ಲೇಖಕರು ದೇಶಹಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ವಿಜ್ಞಾನ ಪೂರ್ಣ ಲೇಖನಗಳನ್ನು ಬರೆದಿರುವರು. ಜನ್ಮತಾಳಿದ ಒಂದು ವರ್ಷದಲ್ಲಿಯೇ 'ಜ್ವಾಲ' ತನ್ನ ಜ್ವಾಲೆಗಳನ್ನು ಎಲ್ಲಾ ಕಡೆಗೂ ಹಬ್ಬಿ ಜನ ಪ್ರಿಯವಾಗಿರುವುದು ವೃತ್ತ ಪತ್ರಿಕಾ ಪ್ರಪಂಚದಲ್ಲಿ ಗಮನಾರ್ಹವಾದ ಅಂಶ. ಇದರ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸುತ್ತೇವೆ.

**ಕಳೆದ ಪುಟಗಳು.**

ಸೈಜ್ 1/3 ಕ್ರೌನ್ 68 ಪುಟ, ಬೆಲೆ 1-4-0

'ರಾಮಚಂದ್ರ ವಿನೀತ' ಎಂದರೆ ಕರ್ನಾಟಕಸ್ಥರಿಗೆ ಅಪರಿಚಯಸ್ಥ ಸಾಹಿತ್ಯನಾಮ, ಜಯಕರ್ನಾಟಕದ ಬೆಳಗಾವಿ ರಾಮಚಂದ್ರರಾಯರೆಂದರೆ ಸಾಕು. ಕರ್ನಾಟಕದ ಯಾವ ಭಾಗದಲ್ಲೂ ಇವರನ್ನು ಅಪ್ರತ್ಯಕ್ಷವಾಗಿ ಅರಿಯದವರಿಲ್ಲ ವಿನೀತರ ಸಾಹಿತ್ಯ ಪ್ರೇಮ, ಅವರ ಆಳವಾದ ಅಭ್ಯಾಸ, ಪರಮಾರ್ಥ ವೃತ್ತಿಯನ್ನು ಇಲ್ಲಿವರ ಸಂಖ್ಯೆಯು ಅಲ್ಪವಾದರೂ ಆ ವೃಂದದಲ್ಲಿ ಅವರು ಬಲವಾದ ಪ್ರತಿಭೆಯನ್ನು ಬೀರಿರುವರು.

ಅವರ ಈ ಕೃತಿಯ ಬಗ್ಗೆ ಶ್ರೀ ದ. ರಾ. ಬೇಂದ್ರೆಯವರು ಬರೆದ ಮುನ್ನುಡಿಯಿಂದ ಈ ಮುಕ್ತಾಫಲಗಳನ್ನು ಆರಿಸುತ್ತೇವೆ

"............ ... ಜೀವನದ ವೀರೋತ್ಸಾಹವನ್ನು ವ್ಯಕ್ತಗೊಳಿಸುವ ಯಾವ ವಚನವೂ ಸಾಲೂ, ಮಾತೂ ಗತಕ್ಕೆ ಸೇರಲಾರದು ಅದು ಭವಿಷ್ಯತ್ತಿನ ಪಲ್ಲವಿ ಪ್ರತಿಯೊಬ್ಬರ ಜೀವನದ ಕೆಚ್ಚಿನಲ್ಲಿ ಒಂದು ಬೆಳಕಿದೆ. ಅದಕ್ಕೆ ವಂಚಿತರಾಗಿ ನಾವು ಕೆಲ ಕಾಲ ಬಾಳಬಹುದು. ಆದರೆ ಅದು ನಮ್ಮನ್ನು ವಂಚಿಸುವುದಿಲ್ಲ. ಅದು ತನ್ನ ಕಾಲವನ್ನು ಕಾಯ್ದು ತೆರೆಮರೆಯ ಸಿದ್ಧತೆಯಲ್ಲಿರುತ್ತದೆ. ಶ್ರೀ ರಾಮಚಂದ್ರರಾಯರು ಈ ಕೃತಿಯಿಂದ ತೆರೆಮರೆಸರಿಸಿ ಸಾಹಿತ್ಯರಂಗದಲ್ಲಿ ತಮ್ಮ ಪುಷ್ಪಾಂಜಲಿಯನ್ನು ಎರಚಿದ್ದಾರೆ. ರಸಿಕಲೋಕವು ಅದನ್ನು ಉಚಿತ ಸಹೃದಯತೆಯಿಂದ ಸ್ವಾಗತಿಸುವದು ಎಂದು ತಿಳಿಯುತ್ತೇನೆ"

---

## ಸಾರ್ವಭೌಮಾಧಿಪತಿಗಳು ರಾಜರುಗಳಲ್ಲ

### ಅಚ್ಯುತಪಟವರ್ಧನರ ಹೇಳಿಕೆ.

ಯರನಾಕುಲಂ "ಸಮತಾವಾದಿಗಳು ನವೀನ ಸಮಾಜ ರಚನೆಯ ಸ್ಥಾಪನೆಗಾಗಿ ತಳಹದಿ ಹಾಕಲಿದ್ದಾರೆ. ಸಮತಾವಾದಿಗಳು ಸ್ಥಾಪಿಸಬೇಕೆಂದಿರುವ ಈ ಹೊಸ ಸಮಾಜರಚನೆಗೆ ಕೆಲವು ವಿಷಯಗಳು ಅಡ್ಡಬಂದಿವೆ. ಬ್ರಿಟೀರನ್ನು ಇಂಡಿಯಾದಿಂದ ಹೊರದೂಡಲು ಸಮತಾವಾದಿಗಳು ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಿದರು" ಎಂಬುದಾಗಿ ಸಮತಾವಾದ ಮುಖಂಡರಾದ ಶ್ರೀ ಅಚ್ಯುತಪಟವರ್ಧನರು ಇಲ್ಲಿಯ ಪತ್ರಿಕಾ ಸಮ್ಮೇಳನದಲ್ಲಿ ಭಾಷಣಮಾಡುತ್ತ "ಕಾಂಗ್ರೆಸ್ಸಿನೊಡನೆ ನಮ್ಮ ಭಿನ್ನಾಭಿಪ್ರಾಯವಿದ್ದಾಗ್ಯೂ ಈಗ ತಾನೆ ಸ್ಥಾಪಿತವಾಗಿರುವ ಹೊಸ ಸರಕಾರವನ್ನೂ ಬಲಪಡಿಸಿ, ಅದು ರಕ್ಷಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ. ಈಗಿನ ಸರಕಾರದ ಆರ್ಥಿಕ ಧೋರಣ ಬಂಡವಾಳಗಾರರಿಗೆ ಅನುಕೂಲವಾಗಿದೆ. ದೇಶದಲ್ಲಿನ ಕೂಲಿಕರರೂ ಹಾಗೂ ಜನಸಾಮಾನ್ಯರು ಸಂಘಟಿತರಾಗದ ಹೊರತು ಸರಕಾರದ ಆರ್ಥಿಕಧೋರಣೆ ಬದಲಾಯಿಸುವುದಿಲ್ಲ" ಎಂದು ಹೇಳಿದರು.

ಸಂಸ್ಥಾನಗಳ ಸಮಸ್ಯೆಗಳ ಬಗ್ಗೆ ಮಾತಾಡುತ್ತ ಬ್ರಿಟಿಷರು ಹೊರಟುಹೋದ ಮೇಲೆ ಸಾರ್ವಭೌಮತ್ವಕ್ಕೆ ಪ್ರಜೆಗಳೇ ಅಧಿಕಾರಿಗಳೇ ಹೊರತು ರಾಜರುಗಳಲ್ಲ ರಾಜರುಗಳಿಗೆ ಯಾವ ರಾಜಕೀಯ ಮಾನ್ಯತೆಯಿಲ್ಲ" ಎಂದು ಹೇಳಿದರು

---

## ಕಾಶ್ಮೀರದ ದಾಳಿಗಾರರ ಓಟ

ಕಾಶ್ಮೀರದಲ್ಲಿ ಭಾರತ ಸೈನಿಕರ ಹೊಡೆತಕ್ಕೆ ತಾಳಲಾರದೆ ದಾಳಿಗಾರರು ದಿಕ್ಕಾಪಾಲಾಗಿ ಓಡುತ್ತಿರುವರು. ಅವರಲ್ಲಿ ನೀತಿಯೇ ಇಲ್ಲವಾಗಿದೆ. ರಷ್ಯಾ ದಾಯಭಾರಿ ಕಚೇರಿಯವರು ಕಾಶ್ಮೀರದಲ್ಲಿ ದಾಳಿಗಾರರಿಂದಾದ ನಷ್ಟವನ್ನು ಪರಿಶೀಲಿಸಲು ಬಂದಿದ್ದಾರೆ.

*Please Note*

**Narasepalli Workshops**

BELLARY

— UNDERTAKE —

**Turning, Electric Welding & Tempering**

OF

SPARE PARTS OF ALL KINDS.

☞ **Reasonable Charges**

TRIAL SOLICITED.

Telegrams OIL MILLS.

Telephone 57.

## ಸಮಾಜವಾದಿ ಪಕ್ಷ

(ಕರ್ನಾಟಕ)

ಕರ್ನಾಟಕ ಪ್ರಾಂತೀಯ ಸೋಶಿಯಲಿಸ್ಟ ಸಮಾವೇಶವು ಮೇ 26-27ಕ್ಕೆ ಬೆಳಗಾವಿ ಜಿಲ್ಲೆ ಖಾನಾಪುರದಲ್ಲಿ ಸೇರುತ್ತದೆ. ಪ್ರಸಿದ್ಧ ಸಮಾಜವಾದೀ ಧುರೀಣರಾದ ಆಚಾರ್ಯ ನರೇಂದ್ರದೇವರು ಅಧಿವೇಶನದ ಉದ್ಘಾಟನೆ ಮಾಡುವರು ಹೊಸಪೇಟೆಯ ಸಾಥೀ ಅಸುಂಡಿ ತಿರುಮಲರಾಯರು ಅಧ್ಯಕ್ಷತೆ ವಹಿಸುವರು ಸಾಥೀ ಜಯಪ್ರಕಾಶ್, ಲೋಹಿಯಾ, ಅಶೋಕ ಮೇಥಾ, ಕಮಲಾದೇವಿ ಅರುಣಾ ಇವರೆಲ್ಲರೂ ಸಮಾವೇಶದಲ್ಲಿ ಭಾಗವಹಿಸುವ ಸುಸಂಧಿ ಒದಗಿದೆ

22-5-48ನೆಯ ದಿನ ಹೊಸಪೇಟೆಯಲ್ಲಿ ಜಿಲ್ಲಾ ಸಮಾಜವಾದೀ ಕಾರ್ಯಕರ್ತರ ಸಮ್ಮೇಳನವೂ ರೈತ ಸಂಘಟನೆಯನ್ನು ಕುರಿತು ಭಾಷಣಗಳೂ ಆಗಲಿವೆ. ಬಿಹಾರ ಪ್ರಾಂತದ ಪ್ರಸಿದ್ಧ ಸಮಾಜವಾದೀ ಧುರೀಣರಾದ ಸಾಥೀ ರಮಾನಂದ ಮಿಶ್ರರು ಅಂದು ಹಾಜರಿರುವರು

---

## ರಶಿಯಾಕ್ಕೆ ಅಮೇರಿಕಾದ ಶಾಂತಿಬೇಡಿಕೆ.

ಅಮೇರಿಕಾವು ರಶಿಯಾದೊಂದಿಗೆ ಮಾತುಕತೆಗಳನ್ನಾಡಲು ಸೂಚಿಸಿತ್ತು. ಆದರೆ ರಶಿಯಾದ ವಿದೇಶಾಂಗ ಮಂತ್ರಿಗಳ ಪ್ರಕಟನೆಯಿಂದ ರಶಿಯಾದೊಂದಿಗೆ ಶಾಂತಿ ಸಭೆಯನ್ನು ನಡೆಸಲು ಸಾಧ್ಯವಿಲ್ಲೆಂದು ಅಮೇರಿಕಾದ ಸೆಕ್ರೆಟರಿ ಜಾರ್ಜ ಮಾರ್ಶಲ್‌ರವರು ಇದರಿಂದ ಜಗತ್ತಿನಲ್ಲಿ ಇರುವ ಟೀಕೆಗೊಳಗಾಗಿದ್ದಾರೆ.

224


# The Rayalaseema Bank Ltd., H. O. Bellary.

)0(

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—193

**ಮುಖ್ಯ ಕಾರ್ಯಾಲಯ—ಬಳ್ಳಾರಿ.**

]0[

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ
ಅಧಿಕ ಅರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.

ಶಾಖೆಗಳು | ಮದ್ರಾಸು : ೩೦೧ ಲಿಂಗಚೆಟ್ಟಿ ಬೀದಿ.
ಬೆಂಗಳೂರು : ರುಕ್ಮಿಣಿ ,ಬಿಲ್ಡಿಂಗ್ಸ್ ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರಿ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.
ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% —— ಎರಡು ವರ್ಷ 3½%

ಸೀಸನ್ ಡಿಪಾಝಿಟ್‌ಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ದಂತೆ ತೆಗೆದುಕೊಳ್ಳುತ್ತೇವೆ.
ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.
ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಹೆಚ್. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.



## NAVA BHARAT BELLARY.

Reg. No M. 4740

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ...............................................
...............................................
...............................................

Printed at Vittal Press, Q H No B-24 For (Q H No B-5)
Edited & Published by T. B. Keshava Rao.

225

ಜೈ ಹಿಂದ್.

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ವರ್ಷ ೧೧ ಸಂಚಿಕೆ ೧೯ | ಬಳ್ಳಾರಿ ಮೇ ೨೪ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

## ಹೈದರಾಬಾದು

ಮದ್ರಾಸು, ಬೊಂಬಾಯಿ, ಮಧ್ಯಪ್ರಾಂತದ ಗಡಿಗಳಲ್ಲಿ ರಜಾಕಾರ ಮತ್ತು ನೈಜಾಂ ಮಿಲಿಟರಿಯವರ ಹಾವಳಿ ಹೆಚ್ಚುತ್ತಲಿದೆ. ಭಾರತೀಯರ ಮೇಲೆ ಈ ಭಾಗದ ಹಳ್ಳಿಗಳ ಮೇಲೆ ದಾಳಿಯಾಗುತ್ತಲಿದೆ. ಕೊಲೆ ಸುಲಿಗೆ ಅತ್ಯಾಚಾರಗಳು ನಡೆದಿವೆ. ಭಾರತದ ವೈಸ್ರಾಯರಾದ ಲಾರ್ಡ ಮೌಂಟಬ್ಯಾಟನ್ನರ ಕಡೆಯಿಂದ ಜಾನ್ಸನ್‌ರೆಂಬುವರು ಹೈದರಾಬಾದಿಗೆ ಬಂದು ವೈಸ್ರಾಯರ ಪತ್ರವನ್ನು ಅವರಿಗೆ ಕೊಟ್ಟರು. ಈಗ ಜಾನ್ಸನ್ನರು ಡೆಲ್ಲಿಗೆ ಹಿಂತಿರುಗಿದ್ದಾರೆ. ಇಂಡಿಯಾ ಸರ್ಕಾರದ ತಾಳ್ಮೆ ತೀರುತ್ತಲಿವೆ. ಇವರು ಸೈನಿಕ ಚರ್ಯೆಯನ್ನು ತೆಗೆದುಕೊಳ್ಳುವ ಲಕ್ಷಣಗಳು ಕಾಣುತ್ತಲಿವೆ.

### ಹೈದರಾಬಾದು ಹರಿಜನರ ಮತಾಂತರ

ಹೈದರಾಬಾದು ಪ್ರಾಂತ್ಯದಲ್ಲಿ ಮಜಲಿಸ್ ತುರುಕರು ಹರಿಜನರನ್ನು ತುರುಕರಾಗಲು ಒತ್ತಾಯದಿಂದ ಮತಾಂತರಗೊಳಿಸುತ್ತಿರುವದನ್ನು ಖಂಡಿಸಿ ಅಖಿಲ ಭಾರತ ಹರಿಜನ ಲೀಗ್‌ದವರು ಡೆಹಲಿಯಲ್ಲಿ ಸಮಾವೇಶವಾಗಿ ಒಂದು ತೀರ್ಮಾನ ಮಾಡಿದರು. ಈ ಒತ್ತಾಯದ ಮತಾಂತರ ನಿಲ್ಲದಿದ್ದರೆ ತಾವು ಸತ್ಯಾಗ್ರಹ ಹೂಡುವದಾಗಿ ಹೇಳಿದ್ದಾರೆ. ಹೈದರಾಬಾದು ಜವಾಬ್ದಾರಿ ಸರ್ಕಾರವನ್ನು ಪ್ರಜೆಗಳಿಗೆ ಕೊಡಬೇಕು.

### ಹುಟ್ಟಿದ ಮಕ್ಕಳಿಗೆ ನಾಥುರಾಂ ಎಂಬ ಹೆಸರಿಡಬೇಡಿರಿ

ಗಾಂಧೀಜೀಯವರ ಕೊಲೆಗಡಕನ ಹೆಸರು 'ನಾಥುರಾಂ' ಇವನ ಹೆಸರನ್ನು ಹುಟ್ಟುವ ಮಕ್ಕಳಿಗಾರಿಗೂ ಇಡಬಾರದೆಂದೂ ಈಗ ಆ ಹೆಸರಿನವರ್‍ಯಾರಾದರೂ ಇದ್ದರೆ ಅಂಥಾ ಹೆಸರನ್ನು ತೆಗೆದು ಹಾಕಿ ಬೇರೆ ಹೆಸರನ್ನು ಇಟ್ಟುಕೊಳ್ಳಬೇಕೆಂದೂ ಅಖಿಲಭಾರತ ಹರಿಜನ ಲೀಗಿನವರು ಒಂದು ತೀರ್ಮಾನ ಮಾಡಿ ಹರಿಜನರಿಗೆಲ್ಲಾ ತಿಳಿಸಿದ್ದಾರೆ.

### ಅಜ್ಮೀರ ಮುಸಲ್ಮಾನರ ಹರ್ಷ ಪಂಡಿತ ನೆಹರೂರವರಿಗೆ ವಂದನೆ

ನೆಹರೂ ಸರ್ಕಾರದವರು ಅಜ್ಮೀರ್ ಉರ್ಸನ್ನು ಶಾಂತಿಯುತವಾಗಿ ನಡೆಯಲು ಏರ್ಪಡಿಸಿದುದಕ್ಕೆ ಅಲ್ಲಿನ ಮುಸಲ್ಮಾನರು ವಂದನೆಗಳನ್ನರ್ಪಿಸಿ ನೆಹರೂರವರನ್ನು ತಾರಿನ ಮುಖಾಂತರ ವಂದಿಸಿರುವರು.

### ಪಂಡಿತ ನೆಹರೂರವರಿಗೆ ನಿಧಿ ಸಮರ್ಪಣೆ

ಭಾರತದ ಮುಖ್ಯ ಪ್ರಧಾನರಾದ ಪಂಡಿತ ಜವಹರಲಾಲ ನೆಹರೂರವರು ಪೂರ್ವ ಏಶಿಯಾದ ವಿಜ್ಞಾನ ಸಮ್ಮೇಳನವನ್ನು ಆರಂಭಿಸಲು ನೀಲಗಿರಿಗೆ ಬಂದಾಗ ಕೊಯಂಬತೂರಿನ ಗಿರಣಿ ಮಾಲೀಕರು ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗಾಗಿ 10 ಲಕ್ಷ ರೂ. ಥೈಲಿ ಸಮರ್ಪಣೆ ಮಾಡಲಿರುವರೆಂದು ಪ್ರಕಟವಾಗಿದೆ.

THE ... BHARAT
ಸಂಪಾದಕ-...ಕೇಶವರಾವ್

ಸೋಮವಾರ 24 ಮೇ 1948

## ಪಾಲಿಸ್ತಾನದಲ್ಲಿ ಭಯಂಕರ ಹೋರಾಟ ಇದರ ರಹಸ್ಯ

ಪಾಲಿಸ್ತಾನವು ಭೂಮಧ್ಯ ಸಮುದ್ರದಲ್ಲಿನ ಚಿಕ್ಕ ದೇಶ. ಇದರಲ್ಲಿ ಯಹೂದಿಗಳೂ, ಅರಬರೂ ಇರುವರು. ಅರಬರು ಅತ್ಯಧಿಕ ಸಂಖ್ಯಾಕರಾಗಿರುವರು. ಯಹೂದಿಗಳು ಯೂರೋಪ್, ಅಮೇರಿಕಾ ಖಂಡಗಳಲ್ಲಿ ವ್ಯಾಪಾರಿಯವರಂತಿದ್ದು ತಮ್ಮ ಅಪಾರ ಸಂಪತ್ತಿಯನ್ನು ಎಲ್ಲಾ ಉದ್ಯೋಗಗಳಲ್ಲಿಯೂ ಇರುಕಿಸಿ ವಿದ್ಯೆ ವಿಜ್ಞಾನ, ಕಲೆ, ಸಂಸ್ಕೃತಿಯಲ್ಲಿ ಬಹಳ ಮುಂದುವರಿದಿರುವರು. ಜರ್ಮನಿಯಲ್ಲಿ ಇವರ ಪ್ರಾಬಲ್ಯವು ಹೆಚ್ಚುವುದೆಂದು ಹಿಟ್ಲರನು ಇವರನ್ನು ಹೊರಗಟ್ಟಿದನು. ಜಗತ್ತಿನಲ್ಲಿರುವ ಯಾವ ದೇಶವೂ ಇವರ ಮಾತೃಭೂಮಿಯೆಂದೆನಿಸಿಕೊಳ್ಳುವ ಅರ್ಹತೆಯನ್ನು ಪಡೆದಿಲ್ಲ. ಅಮೇರಿಕಾದ ಪೂರ್ಣ ಸಹಾನುಭೂತಿಯು ಯಹೂದಿಗಳಿಗಿದೆ. ಯಹೂದಿ-ಅರಬ್ ಸಂಘರ್ಷಣೆಯಲ್ಲಿ ಅಮೇರಿಕನರು ಇವರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಲೇ ಇರುವರು.

ಇತ್ತ ಅರಬರು ತಮ್ಮ ಸಂಖ್ಯೆಗಿಂತಲೂ ಹೆಚ್ಚಿನ ಜನರು ತಮ್ಮ ಮಾತೃಭೂಮಿಯಾದ ಪಾಲಿಸ್ತಾನದಲ್ಲಿ ನೆಲೆಸಲು ಅವಕಾಶ ಕೊಡಬಾರದೆಂದು ಯಹೂದಿಗಳನ್ನು ವಿಚಿತ್ರಹಿಂಸೆಗೆ ಗುರಿಮಾಡುತ್ತಿರುವರು. ಪಾಲಿಸ್ತಾನವು ಅರಬರಿಗೂ ಯಹೂದಿಗಳಿಗೂ ಯಾತ್ರಾಸ್ಥಳ. ಈ ಕಾರಣ ಅಂತರಾಷ್ಟ್ರೀಯ ಭದ್ರತಾ ಮಂಡಳದಲ್ಲಿ ಪಾಲಿಸ್ತಾನವನ್ನು ವಿಭಜಿಸಬೇಕೆಂಬ ತೀರ್ಮಾನಕ್ಕೆ ಪುಷ್ಟಿ ದೊರೆಯಿತು. ಪಾಲಿಸ್ತಾನದಲ್ಲಿ ಯಹೂದಿಗಳ ಪ್ರತ್ಯೇಕ ಸ್ಥಾನವನ್ನು ಅರಬರು ಒಪ್ಪುವಂತೆಯೇ ಇಲ್ಲ.

ಇಂಗ್ಲೀಷರು ಪ್ರಪ್ರಥಮದಿಂದಲೂ ಅರಬರಿಗೆ ಸಹಾಯನೀಡುತ್ತಾ ಬಂದಿರುವರು. ಈಜಿಪ್ಟ, ಸಿರಿಯಾ ಲೆಬನಾನ್, ಟ್ರಾನ್ಸಜೋರ್ಡಾನ್ ಸೌದಿ ಅರೇಬಿಯಾ ವಗೈರೆ ಸಣ್ಣ ಪುಟ್ಟ ರಾಷ್ಟ್ರಗಳನ್ನು ಸೇರಿಸಿ ಅರಬ್ ಲೀಗ್ ಸಂಸ್ಥೆಯ ನಿರ್ಮಾಣವನ್ನು ಮಾಡಿದವರೇ ಇವರು ಈ ತಿಂಗಳ 15ನೆಯ ತಾ॥ ಗೆ ಪಾಲಿಸ್ತಾನದಲ್ಲಿ ಇಂಗ್ಲೀಷರ ಅಧಿಕಾರವು ಮುಗಿದು ಅವರ ಸೈನ್ಯಗಳು ಸ್ವದೇಶಕ್ಕೆ ಮರಳಿದವು.

ಈಗ ಅರಬ್ ಲೀಗ್ ದೇಶಗಳೆಲ್ಲಾ ಪಾಲಿಸ್ತಾನದ ಮೇಲೆ ದಂಡೆತ್ತಿಹೋಗಿವೆ. ಜರೂಸಲೇಮ ಪವಿತ್ರ ನಗರವು ಈಜಿಪ್ಟ ವಿಮಾನಗಳ ಬಾಂಬುದಾಳಿಗೆ ಗುರಿಯಾಗಿದೆ. ಬ್ರಿಟಿಷರ ನಿರ್ಗಮನಾನಂತರ ಯಹೂದಿ ಜನರ ಉತ್ತರ ಭಾಗದಲ್ಲಿ ತಮ್ಮ ರಾಷ್ಟ್ರನಿರ್ಮಾಣವಾಯ್ತೆಂತ ಸಾರಿದರು. ಅದಕ್ಕೆ ಇಸ್ರಾಯಿಲ್ ಎಂದು ಹೆಸರು. ಈ ರಾಷ್ಟ್ರಕ್ಕೆ ಕೂಡಲೇ ಅಮೆರಿಕಾದ ರಷ್ಯಾದ ಮನ್ನಣೆ ದೊರೆಯಿತು. ಜಗತ್ತಿನಲ್ಲೇ ಬಲಾಢ್ಯ ರಾಷ್ಟ್ರಗಳೆಂದುಳಿದ ಅಮೆರಿಕಾ ರಷ್ಯಾಗಳ ಮನ್ನಣೆ ಸಹಾಯ ಸಹಕಾರಗಳು ದೊರೆತನಂತರ ಯಹೂದಿಗಳ ಸ್ಥಾನವು ಪಾಲಿಸ್ತಾನದಲ್ಲಿ ಭದ್ರವಾಗಿರುವದು ಸಂಶಯವೇ ಇಲ್ಲ. ಈಗ ಅರಬರ ಕೈಮೇಲಾಗಿದೆ. ಇದು ಶಾಶ್ವತವಾಗಿ ಉಳಿಯುವದು ಸಾಧ್ಯವಿಲ್ಲ. ಭದ್ರತಾಮಂಡಳದಲ್ಲಿ ಅಮೆರಿಕೆಯು ಒಂದು ತೀರ್ಮಾನವನ್ನು ಮಂಡಿಸಿ ಯುದ್ಧವನ್ನು ಕೂಡಲೇ ನಿಲ್ಲಿಸಲು ಕೇಳಿದೆ. ಇನ್ನು ಕೆಲ ದಿನಗಳಲ್ಲೇ ನಿಶ್ಚಿತ ಪರಿಣಾಮವು ಜಗತ್ತಿಗೆ ವಿದಿತವಾಗುವುದು.

---

### ... ರಜಾ ...

ಕರ್ನಾಟಕ ಪ್ರಾಂತೀಯ ಸೋಶಿಯಲಿಸ್ಟ (ಸಮಾಜವಾದಿ) ಸಮ್ಮೇಳನದ ಸಲುವಾಗಿ 31-5-48ರ ಸಂಚಿಕೆ ಹೊರಡುವುದಿಲ್ಲ. 7-6-48ಕ್ಕೆ ದಿನ ಹೊರಡುವುದು.

ವ್ಯವಸ್ಥಾಪಕ

## ಸರ್ದಾರರ ಆರೋಗ್ಯ ಬೇಗನೆ ಉತ್ತಮವಾಗಲಿ

ಮಹಾತ್ಮರ ಸಾವಿನಿಂದ ಉದಿಸಿದ ದುಃಖದಿಂದಲೇ ಭಾರತದ ಉಕ್ಕಿನ ವ್ಯಕ್ತಿ ಸರ್ದಾರ ವಲ್ಲಭಭಾಯಿ ಇವರ ದೇಹಾರೋಗ್ಯವು ಕುಗ್ಗಲಾರಂಭಿಸಿದೆ. ಇತ್ತೀಚಿಗೆ ಮಸೂರಿಯಲ್ಲಿ ಇವರ ಪ್ರಕೃತಿ ಸುಧಾರಿಸುತ್ತ ಬಂದಿತ್ತು. ಇಲ್ಲಿ ಇವರು ಪೂರ್ಣ ಶಾರೀರಿಕ ಮಾನಸಿಕ ವಿಶ್ರಾಂತಿ ಪಡೆದಿದ್ದರೆ ಹೃದಯಕ್ರಿಯೆ ಪಚನ ಕ್ರಿಯೆ ಉತ್ತಮಗೊಳ್ಳುವ ಲಕ್ಷಣ ಕಂಡುಬರುತ್ತಿತ್ತು. ಆದರೆ ಇವರು ಈಗೀಗ ಕಾರ್ಯಪ್ರವೃತ್ತರಾಗತೊಡಗಿದಂತೆ ಈಗ ಸಂಪೂರ್ಣ ವಿಶ್ರಾಂತಿ ಅವಶ್ಯಕವಾಗಿ. ಆದಕ್ಕಾಗಿ ಇವರು ಪುನಃ ಡೆಹರಾಡೂನಿಗೆ ಹಿಂದಿರುಗುವ ಸಂಭವವಿದೆ

ರಾಜಕೀಯ ವ್ಯವಹಾರವನ್ನು ಲೀಲಾಜಾಲವಾಗಿ ನಡೆಸಿಕೊಂಡು ಹೋಗುತ್ತ ಹಿಮಾಲಯದಂತಹ ಅಚಲ ಸಮಸ್ಯೆಗಳನ್ನು ನುಂಗಿ ನೀರುಕುಡಿದ ಈ ಅಪ್ರತಿಮ ರಾಜಕೀಯ ಮೇಧಾವಿ ಯಾವುದಕ್ಕೂ ಜಗ್ಗದ, ಕುಗ್ಗದ ತಮ್ಮ ವಜ್ರ ಶರೀರವನ್ನು ಇಂದು ಮಹಾತ್ಮರ ಸಾವಿನ ನೋವಿಗೀಡುಮಾಡಿ ಆರೋಗ್ಯ ಹೀನವಾಗುತ್ತಿರುವುದು ದೇಶವನ್ನು ಚಿಂತೆಗೀಡುಮಾಡಿದೆ. ಯಾವ ಬಗೆಯ ಚಿಂತೆಗೂ ಆಸ್ಪದವಿಲ್ಲ. ವಿಶ್ರಾಂತಿಯಿಂದ ಎಲ್ಲವೂ ಪರಿಹೋಗುವುವು ಎಂಬ ವದಿಯು ನಿನ್ನೆದಿ ಜನತೆಗೆ ತುಸು ನೆಮ್ಮದಿಯಾಗಿದೆ. ಭಾರತ ಹಿತಕ್ಕಾಗಿ ಸರ್ದಾರ ದೇಹ ಕಾಯಕಲ್ಪವಾಗಲಿ. ದೇವರು ಚಿರಾರೋಗ್ಯವನ್ನು ಕೊಡಲಿ.

ಮಸೂರಿಯಲ್ಲಿ ಮೌನವಾಂತು ಸರ್ದಾರರು ವಿಶ್ರಾಂತಿಗೆ ಕುಳಿತರೂ, ಅಲ್ಲಿಯೇ ಉಪಪ್ರಧಾನ ಮಂತ್ರಿಗಳ ಕಚೇರಿಯಾಯಿತು. ನರೇಂದ್ರರು, ಧುರೀಣರು, ಮಂತ್ರಿಗಳು, ಮುಖ್ಯ ಮಂತ್ರಿಗಳು ಎಡಬಿಡದೆ ಹೋಗಿ ಕಾಡಿಸುತ್ತಿದ್ದರು. ಈ ಘಳಿಗೆಯಲ್ಲಿ ಹೈದರಾಬಾದು ಸಮಸ್ಯೆ. ಇನ್ನೊಂದು ಘಳಿಗೆಯಲ್ಲಿ ಕಾಶ್ಮೀರದ ಕಾಠಿಣ್ಯತೆ. ಮಗದೊಂದು ಘಳಿಗೆಯಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯ ವಿಷಮತೆ ಇವುಗಳನ್ನೆಲ್ಲಾ ಬಲವಂತಾಗಿ ತಲೆಗೊತ್ತಿಕೊಳ್ಳಬೇಕಾದ ಸಮಯದಲ್ಲಿ ಶಾರೀರಕ ವಿಶ್ರಾಂತಿ ಹೇಗೆ ಸಿಕ್ಕೀತು. ಕೆಲವು ದಿನಗಳಾದರೂ ಸರ್ದಾರರಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡಲಿ. ಇದರಿಂದಾಗಿ ಬಹುಬೇಗ ಇವರಿಗೆ ಯೆಂದಿನಂತೆ ಕಾರ್ಯ ಜರುಗಿಸಲು ಸಹಾಯಮಾಡಿದಂತಾಗುವುದು.

ಸರ್ದಾರರು ಬಹುಬೇಗ ಎಂದಿನಂತೆ ವಜ್ರದೇಹಿಗಳಾಗಲಿ, ಎಂಬುದು ನಮ್ಮ ಪ್ರಾರ್ಥನೆ.

( ಪಾಂಡೇಶ್ವರ್ )

---

## ಭಾಷಾವಾರ ಪ್ರಾಂತ ರಚನೆ
### ಘಟನಾ ಸಮಿತಿ ಅಧ್ಯಕ್ಷರ ಸೂಚನೆ

ಭಾಷಾವಾರು ಪ್ರಾಂತರಚನೆಯ ವಿಷಯಕ್ಕೆ ಒಂದು ಸಮಿತಿಯನ್ನು ನಿರ್ಮಿಸುವ ವಿಚಾರ ಕುರಿತು ಘಟನಾ ಸಮಿತಿಯ ಅಧ್ಯಕ್ಷರಾದ ಡಾಕ್ಟರ್ ರಾಜೇಂದ್ರ ಪ್ರಸಾದರು ಮದ್ರಾಸ್ ಮುಖ್ಯ ಮಂತ್ರಿಗಳಿಗೆ ಬರೆದಿರುವರು. ಪ್ರಾಂತಗಳ ರಚನೆಯ ಬಗ್ಗೆ ವರದಿಮಾಡಲು ಅಧ್ಯಕ್ಷರು ನಿರ್ಮಿಸುವ ಸಮಿತಿಗೆ ಸಹಾಯ ಮಾಡಲು ಮದ್ರಾಸ್ ಸರ್ಕಾರದವರು ಕೆಲ ಹೆಸರುಗಳನ್ನು ಸೂಚಿಸಬೇಕೆಂದು ಪ್ರಸಾದರು ಕೇಳಿದರು. ಮಹಾರಾಷ್ಟ್ರ ಕರ್ನಾಟಕ, ಆಂಧ್ರ, ಕೇರಳ ಪ್ರಾಂತ ರಚನೆಯ ಆಗತ್ಯವನ್ನು ಕುರಿತು ಸಮಿತಿಯವರ ಶಿಫಾರ್ಸಬೇಕು.

ಪ್ರಸಾದರು ಮೂವರು ಸದಸ್ಯರುಳ್ಳ ಸಮಿತಿಯನ್ನು ರಚಿಸುವರು. ಅವರಿಗೆ ಸಹಾಯಕ್ಕೆಂದು ಈ ಪ್ರಾಂತಗಳಿಗೆ ಸಂಬಂಧಿಸಿದ 6 ಜನ ಸದಸ್ಯರು ಸೂಚಿತವಾಗಬೇಕು. ಗುಜರಾತು, ತಮಿಳು ನಾಡುಗಳಲ್ಲದೆ 4 ಪ್ರಾಂತಗಳಿಂದ ನಾಲ್ವರು ಸದಸ್ಯರು ಸೂಚಿತವಾಗಬೇಕು. ಅವರು ಸಲಹೆಗಾರರಂತೆ ವರ್ತಿಸಿ ತಮ್ಮ ಅನುಭವವನ್ನು ಅವರ ಮುಂದಿಡಬೇಕು. ಸಮಿತಿಯ ಮೂಲ ಸದಸ್ಯರು ಮೂವರು ಪರಪ್ರಾಂತದವರಿರಬೇಕು. ಮದ್ರಾಸಿನ ಮುಖ್ಯ ಮಂತ್ರಿಗಳು ಈ ಕೆಳಹೆಸರುಗಳನ್ನು ಸೂಚಿಸಿರುವಂತೆ ಗೊತ್ತಾಗಿದೆ.

ತಮಿಳುನಾಡು, ಆಂಧ್ರ ಕೇರಳ—

ಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ್.
,, ಎಂ. ನಾರಾಯಣ ಮೆನನ್.
,, ಆರ್. ಬಿ. ರಾಮಕೃಷ್ಣರಾಜು, ಅಧ್ಯಕ್ಷ ಲೆಜಿಸ್ಲೇಟಿವ್ ಕೌನ್ಸಿಲ್

ಶ್ರೀ ಟಿ ಸುಬ್ರಹ್ಮಣ್ಯಂ. ಈ ಸಮಿತಿಯವರು ಶೀಘ್ರವಾಗಿ ಕಾರ್ಯಾಸಕ್ತರಾಗುವರೆಂದು ಗೊತ್ತಾಗಿದೆ.

# ಕಾಂಗ್ರೆಸ್ ಸೋಶಿಯಲಿಸ್ಟ್ ಭೇದ

(ಡಾಕ್ಟರ್ ಕೆ. ಬಿ. ಮೆನನ್‌ರು ಅಖಿಲ ಭಾರತೀಯ ಸಮಾಜವಾದೀ ಪಕ್ಷದ ಕಾರ್ಯದರ್ಶಿ ಕಾಸರಗೋಡಿನ ಸಮ್ಮೇಳನದಲ್ಲಿ ಇವರು ಮಹತ್ವ ಪೂರ್ಣ ಭಾಷಣ ಮಾಡಿದರು. ಅದನ್ನು ಈ ಕೆಳಗೆ ಕೊಡಲಾಗಿದೆ.)

"ಕಾಂಗ್ರೆಸ್ಸು ಬಿಟ್ಟುಕೊಟ್ಟ ಧ್ಯೇಯಗಳ ಸಾಧನೆಗಾಗಿ ನಾವು ಹೋರಾಡುತ್ತಿದ್ದೇವೆ....ಡಾ|| ಕೆ. ಬಿ. ಮೆನನ್.

## ಕಾಂಗ್ರೆಸ್ಸಿನ ಅರ್ಥ

ಕಾಂಗ್ರೆಸ್ಸಿನಿಂದ ಸೋಷಲಿಸ್ ಪಕ್ಷವು ಏಕೆ ಹೊರಬರಬೇಕಾಯಿತೆನ್ನುವ ಮೊದಲು ನಾವು ಕಾಂಗ್ರೆಸ್ಸಿನ ಪ್ರಾರಂಭ ಮತ್ತು ಪರಿವರ್ತನೆಗಳ ವಿಚಾರ ಆಲೋಚಿಸಬೇಕು. ಕಾಂಗ್ರೆಸ್ಸು 1885 ರಲ್ಲಿ ಪ್ರಾರಂಭವಾದಾಗ ಅದು ಸರಕಾರದ ಛತ್ರಛಾಯೆದಡಿಯಲ್ಲಿ ಪ್ರಾರಂಭವಾಯಿತು. ಆಗ ಅದರಲ್ಲಿ ಇದ್ದವರೂ ಸರಕಾರದ ದೊಡ್ಡ ದೊಡ್ಡ ಅಧಿಕಾರಿಗಳು, ಮತ್ತು ವಿದ್ಯಾವಂತರಾದ ಕೆಲವು ಶ್ರೀಮಂತ ವ್ಯಕ್ತಿಗಳು. ಮಹಾತ್ಮಾಜಿಯವರು ಕಾಂಗ್ರೆಸ್ಸಿನ ಮುಂದಾಳುತನ ವಹಿಸುವವರೆಗೂ ಕಾಂಗ್ರೆಸ್ಸು ಬರೇ ಚರ್ಚೆಗಳನ್ನು ಮಾಡಿ ಸರಕಾರವನ್ನು ಬೇಡುವ ನಿರ್ಜೀವಿ ಸಂಸ್ಥೆಯಾಗಿಯೇ ಇತ್ತು. ಗಾಂಧೀಜಿಯವರು ಕಾಂಗ್ರೆಸ್ಸನ್ನು ಒಂದು ಹೋರಾಡುವ ಶಕ್ತಿಯನ್ನಾಗಿ ಬೆಳೆಸಿದರು. ಅದು ಪರದೇಶಿ ಆಳ್ವಿಕೆಯನ್ನು ದೇಶದಲ್ಲಿ ಕೊನೆಗೊಳಿಸಿ ದೇಶವನ್ನು ಸ್ವತಂತ್ರ ಮಾಡುವುದನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ಮುಂದೆ ಸಾಗಿದುದರಿಂದ ದೇಶದ ಎಲ್ಲಾ ಶಕ್ತಿಗಳೂ, ಕಾರ್ಮಿಕರೂ ಭಂಡವಾಳಗಾರರೂ ಕಾಂಗ್ರೆಸ್ಸನ್ನು ಸೇರಿದರು. ಕಾಂಗ್ರೆಸ್ಸು ಎಲ್ಲಾ ವರ್ಗಗಳಿಂದ ಕೂಡಿದ ಒಂದು ಸಂಸ್ಥೆಯಾಗಿ ಬೆಳೆಯಿತು. ಇಂದು ಆ ಮುಖ್ಯ ಧ್ಯೇಯವಾದ ಪರದೇಶೀ ಸರಕಾರವನ್ನು ಕೊನೆಗೊಳಿಸುವುದನ್ನು ಕಾಂಗ್ರೆಸ್ ಸಾಧಿಸಿದೆ. ಆ ಕಾರ್ಯಸಾಧನೆಯಾದ ಕೂಡಲೇ ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ಸನ್ನು ಕೊನೆಗೊಳಿಸಬೇಕೆಂದು ನಾವು ಕೇಳಿದೆವು. ಮಹಾತ್ಮಾಜೀಯವರೂ ಕಾಂಗ್ರೆಸ್ಸನ್ನು ಕೊನೆಗೊಳಿಸಿ "ಲೋಕಸೇವಕ ಸಂಘ" ವನ್ನು ರಚಿಸಬೆಕೆಂದು ಅವರ ಜೀವನದ ಅಂತ್ಯದ ಕೆಲವು ಗಂಟೆಗಳ ಮೊದಲು ನಮ್ಮ ಕೇಳಿಕೆಯನ್ನು ಸಮರ್ಥಿಸಿದರು.

## ಕಾಂಗ್ರೆಸ್ ಸನಾತನಿಗಳು

ಅಲ್ಲಿಯ ತನಕ ಹೋರಾಡುವ ಶಕ್ತಿಯಾಗಿದ್ದ ಕಾಂಗ್ರೆಸ್ ಆಗಸ್ಟ್ 15ರ ನಂತರ ಮಂತ್ರಿ ಪದವಿಗೋಸ್ಕರ ಹೋರಾಡುವ, ಹಾತೊರೆಯುವವರ ಮುಖ್ಯವಾಗಿರುವ ಒಂದು ಸಂಸ್ಥೆಯಾಗಿ ಪರಿಣಮಿಸಿದೆ. ಈಗ ಕಾಂಗ್ರೆಸ್ಸಿನಲ್ಲಿರುವವರು ಕಾಂಗ್ರೆಸ್ ಸನಾತನಿಗಳು."

ಮೌಂಟ್ ಬಾಟನ್ ಯೋಜನೆಯಿಂದಾಗಿ ಸರಕಾರದ ಪದವಿಗಳಿಗೆ ಹಾತೊರೆಯುತ್ತಿದ್ದವರಿಗೆಲ್ಲ ಅವರ ಕಾರ್ಯ ಸಾಧನೆಯಾಯಿತು. ಜಾತೀಯವಾದಿಗಳು ಭಂಡವಾಳಶಾಹಿಗಳು ಮತ್ತು ಸಾಮ್ರಾಜ್ಯಶಾಹಿ ಬ್ರಿಟಿಷ ಸರಕಾರಕ್ಕೆ ಬೆಂಬಲವಿತ್ತ ಮಂದಿಗಳೆಲ್ಲ ಸ್ವತಂತ್ರ ಭಾರತದ ಮಂತ್ರಿಮಂಡಳವನ್ನು ಸೇರುವಂತಾಯಿತು.

## ಪ್ರತಿಗಾಮೀ ಕಾಂಗ್ರೆಸ್

ಕಾಂಗ್ರೆಸ್ ಹೀಗೆ ಪರಿವರ್ತನೆ ಹೊಂದಿದ ಮೇಲೆ ನಾವು ದೇಶದ ಹಿತಸಾಧಿಸುವುದಕ್ಕಾಗಿ, ಜನತೆಗೆ ಸರಿ

ಯಾದ ಮಾರ್ಗ ತೋರಿಸುವುದಕ್ಕಾಗಿ, ಕಾಂಗ್ರೆಸ್ಸಿನಲ್ಲಿ ದುಡಿದು ಜನತೆಗೆ, ಅವಿಶ್ರಾಂತ ಶ್ರಮವಹಿಸಿ, ಸೇವೆಸಲ್ಲಿಸಿದ ಆಚಾರ್ಯ ನರೇಂದ್ರದೇವ, ಜಯಪ್ರಕಾಶನಾರಾಯಣ, ಅಚ್ಯುತ ಪಟ್ವರ್ಧನರೇ ಮೊದಲಾದವರೆಲ್ಲರೂ ಕಾಂಗ್ರೆಸ್ಸಿನ ಹೊರಬಂದ ಪರಿಸ್ಥಿತಿಯನ್ನು ಸ್ಪಷ್ಟಪಡಿಸಿದರು. ಇವರೆಲ್ಲ ಹೊರಬಂದ ಮೇಲೆ, ಬರಿದಾದ ಸ್ಥಳವನ್ನು ತುಂಬಿದವರಾರು? ಅಂಬೆಡ್ಕರ್, ಮುಖರ್ಜಿಗಳಂತಹ ಮನಃಪೂರ್ವಕವಾದ ಸೇವೆಸಲ್ಲಿಸದ ಭಂಡವಳಶಾಹಿ ಶಣ್ಮುಖಂಚೆಟ್ಟಿ, ಗೋಪಾಲಸ್ವಾಮಿ ಅಯ್ಯಂಗಾರರುಗಳು. ಇದು ಆಗಸ್ಟ 15ರ ನಂತರ ಆದ ಬದಲಾವಣೆ.

ಯಾವ ಧ್ಯೇಯಸಾಧನೆಗಳಿಗಾಗಿ ಕಾಂಗ್ರೆಸ್ಸು ಹೋರಾಡುವದೆಂದು ಅದು ಉದ್ಘೋಷಿಸಿತ್ತೋ ಅವೆಲ್ಲ ಮಾತಿನಲ್ಲೇ ಉಳಿದಿವೆ. ಬಡತನದಲ್ಲಿ ನಮ್ಮ ದೇಶಕ್ಕೆ ಗಟ್ಟು ದೇಶವೆಂದರೆ ಚೈನಾದೇಶ ಮಾತ್ರ. ಚೈನವನ್ನುಳಿದು ಜಗತ್ತಿನಲ್ಲಿ ಅತಿ ಬಡದೇಶವೆಂದರೆ ನಮ್ಮ ದೇಶಭಾರತ! ಉಡಲು ಬಟ್ಟೆಯಿಲ್ಲದ, ಉಣಲು ಅನ್ನವಿಲ್ಲ ಇರಲು ಮನೆಯುಲ್ಲದಿರುವ ನಮ್ಮ ಬಡ ರೈತಮಜೂರರಿಗೆ ಸ್ವಾತಂತ್ರ್ಯದ ಅರ್ಥವೇ ಇನ್ನೂ ತಿಳಿದಿಲ್ಲ. ಆವರಿಗದರಿಂದ ಯಾವ ಒಳ್ಳೆಯ ಪರಿಣಾಮಗಳೂ ಕಂಡು ಬರಲಿಲ್ಲ. ಮೇಲೆ ಹೇಳಿದ ವಸ್ತುಗಳು ನಮಗೊದಗುವಂತೆ ನಿರಕ್ಷರರಾದ ನಮ್ಮ ಜನರಿಗೆ ವಿದ್ಯೆ ಒದಗಿಸುವ ಯಾವ ಯೋಜನೆಗಳನ್ನೂ ನಮ್ಮ ಸರಕಾರ ಕಾರ್ಯರೂಪಕ್ಕೆ ತರಲಿಲ್ಲ. ಬಿಳಿದೊರೆಗಳ ಬದಲು ಕರಿದೊರೆಗಳು ಇಂದು ಅಧಿಕಾರದಲ್ಲಿರುವರು ನಮಗೆ ಕಂಡು ಬರುವ ಬದಲಾವಣೆ ಇದು ಮಾತ್ರ. ಇದು ಮೌಂಟಬ್ಯಾಟನ್ ಯೋಜನೆಯನ್ನು ಒಪ್ಪಿದ ಪರಿಣಾಮ. ನಾವು ಸಂಘಟಿತರಾಗಿ ಬಲಪ್ರಯೋಗದಿಂದ ಪರದೇಶೀ ಸರಕಾರವನ್ನುರುಳಿಸಲು ಹೆದರಿದೆವು; ಇದರಿಂದಾಗಿ ನಾವು ಸಾವಿರಗಟ್ಟಲೆ ಜೀವಗಳನ್ನು ಜಾತೀಯತೆಯ ದಳ್ಳುರಿಗೆ ನಿರರ್ಥಕವಾಗಿ ಆಹುತಿ ಮಾಡಿದೆವು. ಇದರಿಂದ ಸಂದರ್ಭಸಾಧಕ ಭಂಡವಳಶಾಹೀ ವಿದ್ರೋಹಿಗಳ, ರಾಜಮಹಾರಾಜರ, ಸನಾತನರ ಸ್ಥಾನ ಬಲವಾಯಿತು, ಕೈಮೇಲಾಯಿತು. ಈ ಪಾತಕೀ ಶಕ್ತಿಗಳೆಲ್ಲ ಎಲ್ಲೆಡೆಗಳಿಂದಲೂ ತಲ್ಲೆಕಿರಿಯುವದನ್ನು ನಾವು ಈಗ ಕಾಣುತ್ತಿರುವೆವು. ಈ ಎಲ್ಲ ಪರಿಸ್ಥಿತಿಗಳ ಒತ್ತಡದಿಂದಾಗಿ ನಮ್ಮ ಕರ್ತವ್ಯ ಸರ್ವಹತೆಗಾಗಿ ನಾವು ಕಾಂಗ್ರೆಸ್ಸಿನಿಂದ ಹೊರಬಂದೆವು

## ಪ್ರಜಾತಂತ್ರಕ್ಕೆ-ಸೊನ್ನೆ ಚೀನದ ಮಾದರಿ

ಕಾಂಗ್ರೆಸ್ಸಿನ ಹೊಸಘಟನೆಯು ಏಕಪಕ್ಷೀಯ ಧೋರಣೆಯನ್ನೊಪ್ಪುವವರಿಗೆ ಮಾತ್ರ ಆಸ್ಪದ ಕೊಡುವುದಾಗಿದೆ. ಪ್ರಜಾತಂತ್ರ ಧೋರಣೆಗೆ ಮಹತ್ವವಿಲ್ಲವಾಗಿದೆ. ಇದರ ಪರಿಣಾಮವಾಗಿ ಕಾಂಗ್ರೆಸ್ ಒಂದು ಸರ್ವಾಧಿಕಾರಿ ಫ್ಯಾಸಿಸ್ಟ ಸಂಸ್ಥೆಯಾಗಿ ಬೆಳೆಯುವುದು. ಚೈನದ ಚರಿತ್ರೆಯತ್ತ ಕಡೆ ನೋಡಿದರೆ ಇದಕ್ಕೆ ಸಮರ್ಥನೆ ಸಿಗುವುದು. ಸೋಶಲಿಸ್ಟ ಕಾರ್ಯಕ್ರಮವನ್ನು ಕಾಂಗ್ರೆಸ್ ಸಾಧಿಸುವುದೆಂದು ಶಂಕರರಾವ ದೇವ, ಆಚಾರ್ಯ ಕೃಪಾಲಿನಿಯವರು ಪ್ರತಿಪಾದಿಸುತ್ತಾರೆ. ಇವರಿಗೆ ನಮ್ಮ ಉತ್ತರವಾಗಿ ನಾವು ಚೈನಾದ ಉದಾಹರಣೆಯನ್ನು ಕೊಡುತ್ತೇವೆ. ಚೈನಾದೇಶದ ನೇತರಾಗಿದ್ದ ಸನ್‌ಯಾತ್‌ಸೇನರು ನಮ್ಮ ದೇಶಕ್ಕೆ ಮಹಾತ್ಮಾಜೀಯವರಿದ್ದಂತೆ. ಸನ್‌ಯಾಟ್ ಸೇನರೂ ದಲಿತವರ್ಗದವರ ಮೇಲ್ಮೆಗಾಗಿ ತಮ್ಮ ಜೀವನವಿಡೀ ದುಡಿದವರಾಗಿರುತ್ತಾರೆ. ಇಂದಿನ ಕಾಂಗ್ರೆಸ್ ಮತ್ತು ಕೋಮಿಂಟಾಂಗ್ ಒಂದನ್ನೊಂದು ಹೋಲುತ್ತವೆ. ಚಿಯಾಂಗ್ ಕೈಶೇಕರು ಸನ್‌ಯಾಟ್‌ಸೇನರ ಮುಖ್ಯ ಶಿಷ್ಯರು; ಗಾಂಧಿಜೀಯವರಿಗೆ ನೆಹರೂ ಇದ್ದಂತೆ. ಚೈನಾದಲ್ಲಿನ ಚಿಯಾಂಗರ ಮುಂದಾಳುತನದಲ್ಲಿ ಕೋಮಿಂಟಾಂಗ್ ಅಧಿಕಾರ ವಹಿಸಿದ ಮೇಲೆ ಅದಕ್ಕೆ ಅಲ್ಲಿ ವಿರೋಧೀಪಕ್ಷವೊಂದೂ ಇರಲಿಲ್ಲ. ಆದುದರಿಂದ ಚೈನಾವು ಇಂದು ಈ ಪರಿಸ್ಥಿತಿಗಳಿದಿದೆ. ಚಿಯಾಂಗರೂ ಸೋಶಲಿಸ್ಟ ಧೋರಣೆಯನ್ನೆತ್ತಿಹಿಡಿವವರೆಂದು ಮೊದಲು ಜನರೆನ್ನುತ್ತಿದ್ದರು. ಆದರೆ ಇಂದು ಅವರೇ ಸರ್ವಾಧಿಕಾರಿಯೆನಿಸಿಕೊಂಡಿರುವ ಅಮೇರಿಕದ ಕೈಗೊಂಬೆಯಾಗಿರುವರು. ನಮ್ಮ ದೇಶದಲ್ಲಿ ಯುದ್ಧಪೂರ್ವಕ್ಕಿಂತ ಸಾಧಾರಣ 300% ದಷ್ಟು ಜೀವನ ವೆಚ್ಚವು ಹೆಚ್ಚಾಗಿದೆ. ಈಗಾಗಲೇ ನಾವು ಅದರ ಬಿಸಿಯನ್ನು ಅನುಭವಿಸುತ್ತಿರುವೆವು. ಚೈನಾದಲ್ಲಿ ಅಂತರ್ಯುದ್ಧವೇ ಮೊದಲಾದ ಕಾರಣಗಳಿಂದ ಕೋಮಿಂಟಾಂಗ್ ಆಡಳಿತವು ಸಂಪೂರ್ಣ ಕೆಟ್ಟು ಹೋಗಿರುವುದರಿಂದ, ಅಮೇರಿಕಾವು ಚೈನಾವನ್ನು ತನ್ನ ಕೈವಾಡಕ್ಕೊಳಗಾಗಿ ಮಾಡಿರುವುದರಿಂದ ಅಲ್ಲಿ ಈಗ ಹಣಕ್ಕೆ (Currency) ಬೆಲೆಯಿಲ್ಲದಾಗಿದೆ. ಒಂದು (Bread) ಕೊಂಡುಕೊಳ್ಳಬೇಕಾದರೆ ನೋಟಿನ ಒಂದು ಕಟ್ಟನ್ನೇ ಕೊಡಬೇಕಾಗುವದು. ಜೀವನೋಪಯೋಗೀ ಸಾಮಗ್ರಿಗಳಿಗೆಲ್ಲ ಹಲವು ಪಾಲು

ಷ್ಟು ಬೆಲೆಯೇರಿದೆ. ಚೈನಾ ದೇಶದ ಕಾರ್ಮಿಕ ಬಂಧುಗಳ ಜೀವನವು ಎಷ್ಟು ಕಷ್ಟತರದ್ದಿರಬಹುದೆಂದು ನೀವೇ ಊಹಿಸಿರಿ. ನಾನು ಹೀಗೆ ಹೋಲಿಕೆ ಮಾಡುವಾಗ ಪ್ರಸ್ತುತಃ ನೆಹರೂ ಸರಕಾರವು ಕೊಮಿಂಟಾಂಗ ಸರಕಾರದಷ್ಟು ಹದಗೆಟ್ಟಿದೆಯೆಂದೇನೂ ಅರ್ಥವಲ್ಲ. ಆದರೆ ಸರಕಾರೀ ಪಕ್ಷವನ್ನು ವಿರೋಧಿಸುವ ಒಂದು ಪಕ್ಷವಿಲ್ಲವಾದರೆ ಆ ಪಕ್ಷವು ಆಗಾಗ ಸರಕಾರದ ಧೋರಣೆಗಳನ್ನು ತಿದ್ದಿ, ಜನೋಪಯೋಗೀ ಸುಧಾರಣೆಗಳು ಕಾರ್ಯರೂಪಕ್ಕೆ ಬರುವಂತೆ ಮಾಡದಿದ್ದರೆ ಈಗಿನ ಕಾಂಗ್ರೆಸ್ ಸರಕಾರವೇ ಕೊಮಿಂಟಾಂಗ್ ಸರಕಾರವಾಗಿ ಪರಿಣಮಿಸಬಹುದು ಅಷ್ಟೆ. ನಾವು ನಮ್ಮ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ಮಾಡುವೆವಲ್ಲದೆ ಬರೇ ಘೋಷಣೆಯುಲ್ಲಲ್ಲ. ಇದಕ್ಕಾಗಿ ನಾವು ಈಗ ರೈತ ಕೂಲಿಗಾರರನ್ನು ಸಂಘಟಿಸುತ್ತಿರುವುದು. ಇದು ನಮಗೂ ಕಾಂಗ್ರೆಸ್ಸಿಗೂ ಇರುವ ಭೇದ.

## ಘೋಷಣೆ ಕೃತಿ

ಈಗ ಕೇಂದ್ರ ಸರಕಾರ, ಪ್ರಾಂತ ಸರಕಾರಗಳು, ಸಂಸ್ಥಾನಗಳಲ್ಲಿನ ಸರಕಾರಗಳು ಈ ಎಲ್ಲ ಕಡೆಗಳಲ್ಲಿ ಅಧಿಕಾರಗಳಲ್ಲಿರುವ ಹೆಚ್ಚಿನ ಕಾಂಗ್ರೆಸ್ಸಿಗರ ಜನತೆಯ ಹಿತಸಾಧಿಸುವೆವಾಗಿ ಘೋಷಿಸುತ್ತ ತಮ್ಮ ಸ್ವಂತ ಹಿತವನ್ನೇ ಸಾಧಿಸುವವರಾಗಿದ್ದಾರೆ. ಪರಿಸ್ಥಿತಿಯು ಹೀಗಿರುವಾಗ ನೆಹರೂರವರು ಏನು ಮಾಡಬಲ್ಲರು? ಸಂಘಟಿತ ಜನತೆ ಅವರು ಪ್ರಗತಿಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಡ್ಡಿ ತರುವ ದುಷ್ಟ ಸ್ವಾರ್ಥಪರ ಶಕ್ತಿಗಳನ್ನು ಹತ್ತಿಕಲು ಮುಂದಾಗಬೇಕು. ಮದರಾಸು ಸರಕಾರದ ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿನ ಮಂತ್ರಿಮಂಡಲದವರು ತಮ್ಮ ಸಂಬಂಧಿಗಳಿಗೆ ಸರಕಾರೀ ಉದ್ಯೋಗಗಳನ್ನು ತೆಗೆಸಿಕೊಡುವ ಪ್ರಯತ್ನದಲ್ಲೇ ಮಗ್ನರಾಗಿರುತ್ತಾರೆ. ಮದ್ಯಪಾನ ನಿಷೇಧ ಮಸೂದೆಗಿಂತಲೂ ಆವಶ್ಯಕತೆಯಿದ್ದ ಎಷ್ಟೋ ಮಸೂದೆಗಳ ಗೋಜಿಗೇ ಅವರು ಹೋಗಲಿಲ್ಲ. ಕೆಳತರಗತಿಯ ನೌಕರರ (N G G. O S) ಮುಷ್ಕರದ ವಿಚಾರಮಾಡಿರಿ. ಅವರು ಬರೇ 50-60 ರೂಪಾಯಿ ಮಾಸಿಕ ವೇತನದಿಂದ ಈ ದಿವಸಗಳಲ್ಲಿ ಜೀವನ ನಿರ್ವಹಿಸಲು ಸಾಧ್ಯವೇ? ಆದರೆ ಆದೇ ಕಾಲಕ್ಕೆ ಗವರ್ನರ I. C. S ಆಫೀಸರರ, ಅಷ್ಟೇ ಅಲ್ಲ, ನಮ್ಮ ಮಂತ್ರಿಗಳ ವೇತನ ಭತ್ತಿಗಳ ಕಡೆಗೆ ನೋಡಿದರೆ ಅಷ್ಟು ಅಧಿಕ ವೇತನವನ್ನು ನಮ್ಮ ಬಡ ಜನತೆ ತರಬಲ್ಲುದೆ? ನಾವು ನಮ್ಮ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮಾಸಿಕ ಉತ್ಪನ್ನ ಅಥವಾ ವೇತನ, ಅವನು ನೌಕರನಿರಲಿ, ವಿಜ್ಞಾನಿಯಿರಲಿ, ಮಜೂರನಿರಲಿ, ಮ್ಯಾಲೀಕನಿರಲಿ, ರೈತನಿರಲಿ, ರೂ. 100ಕ್ಕಿಂತ ಕಡಿಮೆಯಿರದು ಎನ್ನುತ್ತೇವೆ, ತಕ್ಕವ್ಯವಸ್ಥೆ ಮಾಡಿದರೆ ಈಗಲಾದರೂ ಈ ಮಟ್ಟದ ವೇತನವನ್ನು ತೆರಬಲ್ಲೆವು. ಈ ಮಟ್ಟದ ಮೇಲೆ ನಮ್ಮ ದೇಶದ ಆರ್ಥಿಕ ಪುನರ್ವ್ಯವಸ್ಥೆಯಾಗಬೇಕು. ನಾವು ಅಧಿಕಾರಕ್ಕಾಗಿ ಹಾತೊರೆಯುವದಿಲ್ಲ.

## ಸಿರಿವಂತಿಕೆ ಇಳಿಯಬೇಕು

ಅಧಿಕ ಪ್ರಮಾಣದ ಮರಣ ತೆರಿಗೆಯಿಂದಾಗಿ (Death Duty) ಇಂಗ್ಲಂಡಿನ ಶ್ರೀಮಂತರು ನಿಧಾನವಾಗಿ ಮಧ್ಯಮ ತರಗತಿಯ ಮಟ್ಟಕ್ಕಿಳಿಯುತ್ತಿದ್ದಾರೆ. ಇದನ್ನು ನಾವು ಇಲ್ಲಿಯೂ ಕಾರ್ಯರೂಪಕ್ಕೆ ತರಬೇಕು. ಷಣ್ಮುಖಂ ಚೆಟ್ಟಿಯ ಅಂದಾಜು ಪಟ್ಟಿ (Budget) ಬಡವನಿಗೇನೂ ಹಿತವನ್ನುಂಟು ಮಾಡುವಂತಹುದಲ್ಲ. ಇಂದು ಶ್ರೀಮಂತ ಭಂಡವಲ ಶಾಹಿ ವರ್ಗಕ್ಕೆ ಪ್ರಯೋಜನ ತರುವುದಾಗಿದೆ. ಇದನ್ನೆಲ್ಲ ನೋಡುವಾಗ ಕಾಂಗ್ರೆಸ್ಸ ನೂರಾರು ಸಂದರ್ಭಗಳಲ್ಲಿ ನಮಗೆ ನಿರಾಶೆಯನ್ನು ತಂದೊಡ್ಡಿದೆ.

## ಜಾತೀಯತೆ—ಸಂಕುಚಿತ ಪ್ರಾಂತೀಯತೆ

ನಾನು ಇನ್ನೊಂದು ಮುಖ್ಯ ವಿಷಯಕ್ಕೆ ಬಂದಿರುವೆ. ಈಗ ಎಲ್ಲೆಡೆಗಳಿಂದಲೂ ಕೇಳಿಬರುವ, ಜಾತೀಯತೆ, ಪ್ರಾಂತೀಯತೆ ಮತ್ತು ಸಂಸ್ಥಾನಗಳವರು ಇವು ನಮ್ಮ ದೇಶಕ್ಕೆ ದೊಡ್ಡ ಹಾನಿಯನ್ನುಂಟುಮಾಡುವವು. ನಮ್ಮ ರಾಷ್ಟ್ರಪಿತ ಬಾಪೂಜಿಯವರು ಇದಕ್ಕೆ ಬಲಿಯಾದರು. ಸಾಮಾನ್ಯ ರೀತಿಯ ಮರಣವು ಅವರಿಗೆ ಸಂಭವಿಸಿದ್ದರೆ ನಮಗಿಷ್ಟು ದುಃಖವಾಗುತ್ತಿದ್ದಿಲ್ಲ. ಅವರ ಬಲಿದಾನಕ್ಕಾಗಿ ಅವರಿಗೆ ಗುಂಡು ಹೊಡೆದ ಒಬ್ಬ ವ್ಯಕ್ತಿಯೇ ಕಾರಣವಲ್ಲ. ನಾವು ಒಬ್ಬೊಬ್ಬರೂ ಅದಕ್ಕಾಗಿ ಜಗತ್ತಿನಲ್ಲಿ ಇಂದು ತಲೆತಗ್ಗಿಸಬೇಕಾಗಿದೆ. ಜಾತೀಯತೆಯನ್ನು ನಾವು ನಿರ್ಮೂಲಗೊಳಿಸಲೇಬೇಕು. ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಚುನಾವಣೆಯ ಕಾಲದಲ್ಲಿ ಬ್ರಾಹ್ಮಣ—ಅಬ್ರಾಹ್ಮಣರೆಂಬ

ದೊಡ್ಡ ಬೊಬ್ಬೆ ಎದ್ದಿರುವುದೆಂದ ಮೇಲೆ ಜಾತೀಯತೆ ಅದೆಷ್ಟು ನಮ್ಮಲ್ಲಿ ಬೇರುಬಿಟ್ಟದೆಯೆಂದು ನಾವು ಊಹಿಸಬಹುದು. ಇದೂ, ಕಾಂಗ್ರೆಸ್ಸಿಗರಲ್ಲಿ ಇಷ್ಟು ಕೀಳು ಭಾವನೆಯಿದೆಯೆಂದಾದ ಮೇಲೆ ಅದು ನಮ್ಮ ದೇಶಕ್ಕೆಷ್ಟು ಹಾನಿಕರ? ಇದು ಹಳೆಪದ್ಧತಿಯನ್ನು ಎತ್ತಿಹಿಡಿಯಲು ಸಹಾಯಕವಾಗಿರುವುದರಿಂದ (Feudalism) ಕಾರ್ಮಿಕರಿಗೆ ಹಾನಿಯುಂಟುಮಾಡುವುದಾಗಿರುವುದರಿಂದ ಆ ಭಾವನೆಯನ್ನು ನಿರ್ಮೂಲ ಮಾಡಬೇಕು. ಈ ಸ್ವಾರ್ಥಪರ ದುಷ್ಟ ಶಕ್ತಿಗಳನ್ನು ಬೆಳೆಸುವುದಕ್ಕೆ, ಭಂಡವಳಗಾರರು, ಜಮೀನುದಾರರು ರಾಜ-ಮಹಾರಾಜರು-ಈ ಲಾಭಬಡಕರೆಲ್ಲ ಧನಸಹಾಯವೇ ಮೊದಲಾದ ಎಲ್ಲ ರೀತಿಯ ಸಹಾಯ ಮಾಡುತ್ತಾರೆ ನಾವು ರೈತ ಕೂಲಿಕಾರರನ್ನು ಸಂಘಟಿಸುತ್ತಿರುವುದು ಇಂತಹ ಸುಲಿಗೆಗಾರರಿಗೆ ಹಾನಿಕರ

# ಒರಿಸ್ಸಾ ಜಮೀನದಾರರೊಬ್ಬರ ಹೃದಯ ಪರಿವರ್ತನೆ.

ಒರಿಸ್ಸಾ ಪ್ರಾಂತದ ಕಟಕ್‌ದ ಜಮೀನದಾರ ವಕೀಲರಾದ ಶ್ರೀ ಕ್ಷಿತೀಶ್ ಚಂದ್ರರಾಯ್ ಚೌದರಿ ಎಂಬವರು ಈ ಕೆಳಗಿನಂತೆ ಸಾರಿದ್ದಾರೆ —

1947 ರ ಪ್ರಾರಂಭದಲ್ಲಿ, ನಮ್ಮ ತಂದೆಯವರ ಮರಣದ ನಂತರವೇ ತಂದೆಯವರ ಕೊನೆಯ ಇಚ್ಛೆಯ ಪ್ರಕಾರ ನಾನು ಜನತೆಯ ಸೇವೆಗೆ ನನ್ನ ಜೀವನವನ್ನು ಮುಡುಪಾಗಿಡಲು ನಾನು ಸಮಾಜವಾದೀ ಪಕ್ಷದ ಒರಿಸ್ಸಾ ಶಾಖೆಯ ಸದಸ್ಯತ್ವಕ್ಕಾಗಿ ಅರ್ಜಿ ಮಾಡಿಕೊಂಡೆ ಆದರೆ ನಾನು ಅಖಿಲ ಒರಿಸ್ಸಾ ಜಮೀನದಾರ ಸಂಘದ ಕಾರ್ಯದರ್ಶಿಯಾಗಿದ್ದರಿಂದ, ಒರಿಸ್ಸಾದ ಸಮಾಜವಾದೀ ಪಕ್ಷದ ಕಾರ್ಯದರ್ಶಿ ಸಾಥೀ ಸುರೇಂದ್ರ ದ್ವಿವೇದಿಯವರ, ಆಗ ನನ್ನ ಸದಸ್ಯತ್ವವನ್ನು ಸ್ವೀಕರಿಸುವುದಕ್ಕಾಗಲಿ, ನಿರಾಕರಿಸುವುದಕ್ಕಾಗಲೀ ಅಧಿಕಾರವಿಲ್ಲೆಂದು ನಿಷ್ಠುರವಾಗಿಯೇ ಹೇಳಿಬಿಟ್ಟರು.

"ಅವಾಗಿನಿಂದ ಈ ಪ್ರಶ್ನೆಯ ಬಗೆಗೆ ನಾನು ಎಲ್ಲ ದೃಷ್ಟಿಯಿಂದಲೂ ದೀರ್ಘವಾಗಿಯೇ ವಿಚಾರಿಸುತ್ತಿದ್ದು, ಆ ಬಗೆಗೆ ನನ್ನ ಪತ್ನಿ ಹಾಗು ಇತರ ಸಂಬಂಧಿಕರೊಂದಿಗೂ ಈ ಮಾತೆತ್ತಿದ್ದೇನೆ. ನಾನು ಸಮಾಜವಾದೀ ಪಕ್ಷದ ಹಳ್ಳಿಗಾಡಿನ ಧೋರಣೆಯನ್ನು ಓದಿಕೊಂಡಿದ್ದೇನೆ ಅದನ್ನು ನಾನು ಸಂಪೂರ್ಣವಾಗಿಯೇ ಒಪ್ಪಿಕೊಳ್ಳುತ್ತೇನೆಂದು ಸಾರಲು ನನಗೆ ಯಾವುದೇ ಬಗೆಯ ಅನುಮಾನವೆನಿಸುವುದಿಲ್ಲ. ನನ್ನ ಈ ಹಿಂದಿನ ಅಭಿಪ್ರಾಯವೇನೇ ಇದ್ದರೂ, ಈಗ ನಾನು ಪರಿಹಾರ ರಹಿತವಾಗಿ ಜಮೀನದಾರಿ ನಿರ್ಮೂಲನದ ವಿಚಾರವನ್ನು ಎತ್ತಿಹಿಡಿಯುತ್ತೇನೆ ಜಮೀನದಾರರ ಸಂಘದ ಕಾರ್ಯದರ್ಶಿತ್ವಕ್ಕೆ ನಾನು ರಾಜೀನಾಮೆ ಕೊಟ್ಟಿದ್ದೇನೆ. ಅಲ್ಲದೆ ನನ್ನ ಆಸ್ತಿಯನ್ನೆಲ್ಲ ಸಮಾಜವಾದೀ ಪಕ್ಷವೇ ತೆಗೆದುಕೊಂಡು, ನನ್ನ ಹಾಗು ನನ್ನ ಕುಟುಂಬಕ್ಕೆ ಹತ್ತುವ ಬರೇ ಜೀವನ ವೆಚ್ಚವನ್ನು ಕೊಟ್ಟು ಆಸ್ತಿಯ ಉತ್ಪನ್ನವನ್ನೆಲ್ಲ ಪಕ್ಷವೇ ಉಪಯೋಗಿಸಿಕೊಳ್ಳಬೇಕೆಂದು ನಾನು ಪಕ್ಷದ ಕಾರ್ಯದರ್ಶಿಗೆ ವಿನಂತಿಸಿಕೊಂಡಿದ್ದೇನೆ. ಇದು ವ್ಯವಹಾರ್ಯವಾಗದಿದ್ದಲ್ಲಿ ಜಮೀನದಾರಿಯ ನಿರ್ಮೂಲನವು ನಿರ್ಧಾರವಾದ ಸಂಗತಿಯಾಗಿದ್ದರಿಂದ ಜಮೀನದಾರಿಯು ನಿರ್ಮೂಲವಾಗುವವರೆಗೆ ನಾನು ಗಾಂಧೀಜೀಯವರ ವಿಶ್ವಸ್ಥ ತತ್ವದಂತೆ ನನ್ನ ಒಡೆತನದಿಂದ ಮುಕ್ತನಾಗಲು ಸಿದ್ಧನಿದ್ದೇನೆ ಜಮೀನದಾರಿಯು ನಾನು ಸ್ವಂತವಾಗಿ ಸಂಪಾದಿಸದ್ದಾಗಿರದೆ, ನನ್ನ ಪಿತ್ರಾರ್ಜಿತವಾದುದಾಗಿದೆ. ಸಮಾಜದ ಆರ್ಥಿಕ ಪ್ರಗತಿಗೆ ಜಮೀನದಾರಿಯ ಪದ್ಧತಿಯು ಅತಿ ದೊಡ್ಡದಾದ ಬಂಡೆಗಲ್ಲಾಗಿದೆಯೆಂಬುದು ನನಗೀಗ ಸಂಪೂರ್ಣವಾಗಿ ಮನವರಿಕೆಯಾಗಿದೆ.

ನನ್ನೀ ಹೇಳಿಕೆಯಿಂದಾಗಿ, ನನ್ನ ಸ್ನೇಹಿತರಿಗೂ ಸಂಬಂಧಿಕರಿಗೂ ಹಿತಚಿಂತಕರಿಗೂ, ವಿಶೇಷವಾಗಿ ನನ್ನ ಜಮೀನದಾರಿ ಬಂಧುಗಳಿಗೂ ಆಶ್ಚರ್ಯವೆನಿಸದಿರದು. ನಿಜವಾಗಿಯೂ ನಾನು ಸಮಾಜದ ಒಳ್ಳಿತು ಬಯಸುವ್ರುದಾದರೆ, ನಮ್ಮ ಮುಂದೆ ಇದೊಂದೇ ಮಾರ್ಗವಿದೆಯೆಂದೂ ನನಗೆ ಅನಿಸುತ್ತದೆ. ನಾನು ನನ್ನ ಜನತೆಯ ಸೇವೆಗೈಯಲು ಸಮಾಜವಾದೀ ಪಕ್ಷವು ನನಗೊಂದು ಸಂದರ್ಭ ಒದಗಿಸಿ ಕೊಟ್ಟೀತೆಂದು ಆಶಿಸುತ್ತೇನೆ.''

---

## ಆಹಾರ ಬಟ್ಟೆಗಳ ಬೆಲೆ ಯೇರಿಕೆ

)0(

### ಕಠೋರ ಉಪಾಯಗಳು ಬೇಕು

ನಮ್ಮ ದೇಶದಲ್ಲಿ ಆಹಾರ ಧಾನ್ಯಗಳು ಬಟ್ಟೆ ಇವುಗಳ ಬೆಲೆಯು ಮಿತಿಮೀರಿ ಬೆಳೆದಿರುವುದರಿಂದ ಈಗ ಸರ್ವ ಕಡೆಗೆ ಹಾಹಾಕಾರವೆದ್ದಿದೆ. ಅದಕ್ಕಾಗಿ ಸರಕಾರದವರು ಸಾಧ್ಯವಿದ್ದ ಉಪಾಯಗಳನ್ನು ಕೈಕೊಳ್ಳಲು ಮುಂದೆ ಬಂದಿದ್ದಾರೆ.

ಧಾನ್ಯಗಳ ಬೆಲೆಗಳನ್ನು ಹಿಡಿತದಲ್ಲಿ ತರಲು ಅಗ್ಗದರದ ಅಂಗಡಿಗಳನ್ನು ತೆರೆಯಲಾಗುವುದೆಂದು ತಿಳಿಯುತ್ತದೆ. ಬಟ್ಟೆಯ ಮಾರಾಟದ ಬಗ್ಗೆ ಕೆಲವು ನಿಯಂತ್ರಣವನ್ನು ಹಾಕಿ ಅದರ ಬೆಲೆಗಳನ್ನೂ ಕೆಳಮಟ್ಟಕ್ಕೆ ತರಲು ಯತ್ನಿಸುವವರಿದ್ದಾರೆ.

ಅದರೆ ಒಂದು ಸೇರು ಅಕ್ಕಿಗೆ 1 ರೂ. ಆದರೂ ಇನ್ನೂ ಜನರು ಮರುಮಾತಾಡದೆ ಯಥಾಶಕ್ತಿ ಅವುಗಳನ್ನು ಕೊಳ್ಳುತ್ತ ಜೀವನ ಸಾಗಿಸಿದ್ದಾರೆಂಬ ಮಾತು ಆಶ್ಚರ್ಯಕರವಾಗಿದೆ, ವ್ಯಾಪಾರಿಗಳು ಈ ಆಶ್ಚರ್ಯವನ್ನು ವ್ಯಕ್ತಮಾಡುವುದುಂಟು.

ಜನತೆಯು ಬಹಳ ಕಷ್ಟಕೀಡಾದುದು ನಿಃಸಂಶಯದ ಮಾತಾಗಿದೆ. ಆದರೆ ಈ ಕಷ್ಟವನ್ನು ನಿವಾರಿಸಿಕೊಳ್ಳುವ ಶಕ್ತಿಯು ಸರ್ವರಲ್ಲಿ ಇರುವುದಿಲ್ಲ. ಅದಕ್ಕಾಗಿ ಕೆಲವೇ ಜನರು ಮುಂದೆ ಬರಬೇಕಾಗುತ್ತದೆ. ಅವರೆಲ್ಲರೂ ಕೂಡಿ ಸರಕಾರದವರನ್ನು ಎಚ್ಚರಿಸಿ ಯೋಗ್ಯ ಉಪಾಯವನ್ನು ಮಾಡಲು ಒತ್ತಾಯ ಪಡಿಸಬೇಕಾಗುತ್ತದೆ.

ಆಹಾರ ಧಾನ್ಯಗಳು ನಮ್ಮ ಪ್ರಾಂತದಲ್ಲಿ ಈಗ ಸಾಕಷ್ಟಿವೆಯೆಂದು ಸರಕಾರದವರು ಹೇಳಿದ್ದಾರೆ. ದೇಶದ ಸ್ಥಿತಿಯು ಈ ಸಂಬಂಧವಾಗಿ ಸಮಾಧಾನಕರವಿರುವುದಾಗಿ ಹೇಳಲ್ಪಟ್ಟಿದೆ. ಪರದೇಶದಿಂದ ಬಹಳ ಧಾನ್ಯವು ಬಂದದ್ದರಿಂದ ಅದನ್ನು ಇಳಿಸಿದ ಬೆಲೆಗೆ ಸರಕಾರದವರು ಮಾರುವ ವಿಚಾರವನ್ನು ಇಟ್ಟುಕೊಂಡಿದ್ದಾರೆ.

ನಮ್ಮಲ್ಲಿ ಇಷ್ಟು ಬೆಲೆಯೇರುವಷ್ಟು ಕಾಳಿನ ಅಭಾವವುಂಟಾಗಿದೆಯೆಂದು ಯಾರೂ ಹೇಳಲಾರರು. ಕಾಳು ಇದೆ. ಆದರೆ ಲಾಭಬಡಕರ ಕೈವಾಡವು ಈ ಸ್ಥಿತಿಯನ್ನು ಉಂಟುಮಾಡಿದೆಯೆನ್ನಲು ಏನೂ ಅಭ್ಯಂತರವಿಲ್ಲ.

ಬಟ್ಟೆಯ ದೃಷ್ಟಿಯಿಂದ ನೋಡಿದರೂ ನಮ್ಮಲ್ಲಿ ಇಷ್ಟು ಕೊರತೆಯಾಗುವ ಕಾರಣ ಇಲ್ಲ. ನಮ್ಮ ದೇಶಕ್ಕೆ ಬೇಕಾದದ್ದರಕ್ಕಿಂತ ಕಡಿಮೆ ಬಟ್ಟೆಯು ನಮ್ಮಲ್ಲಿ ಹುಟ್ಟುತ್ತಿದೆ ಯೆಂದು ಸರಕಾರೀ ಲೆಕ್ಕವು ಹೇಳುತ್ತಿದೆ. ಆದರೆ ನಿಯಂತ್ರಣದ ಕಾಲದಲ್ಲಿದ್ದ ಬೆಲೆಗಳಿಗಿಂತ ಇಂದು ಇರುವ ಬೆಲೆಗಳು ಇಷ್ಟು ಏರುವುದು ಲೆಕ್ಕತಪ್ಪಿದ ಮಾತಾಗಿದೆ.

ಕೂಲಿಯವರು ಹೆಚ್ಚು ಕೂಲಿ ಬೇಡುವದರಿಂದ ಮತ್ತು ಬೆಲೆ ಏರಿದ್ದರಿಂದ ಅರಿವೆಯ ಬೆಲೆಯು ಏರಬೇಕಾಯಿತು ಎಂದು ಹೇಳಲಾಗುತ್ತಿದೆ. ಹಾಗೆ ಸ್ವಲ್ಪ ಏರಬಹುದಾಗಿತ್ತೇ ಹೊರತು ಇಷ್ಟು ಬೆಲೆ ಏರಲು ಕಾರಣವಿದ್ದಿಲ್ಲ.

ಗಿರಣಿ ಒಡೆಯರು 1940 ರಿಂದ 1946ರ ವರೆಗಿನ ಆರು ವರ್ಷಗಳಲ್ಲಿ ಹುಟ್ಟಿಸಿದ ಅರಿವೆ ಅದರ ಬೆಲೆ ಮತ್ತು ಅದರ ಮಾರಾಟದಿಂದ ಅವರಿಗೆ ಬಂದ ಲಾಭ ಇವು ಆಶ್ಚರ್ಯವನ್ನುಂಟುಮಾಡುವಂಥವಿವೆ. ಈ ಅವಧಿಯಲ್ಲಿ ಅವರು 1150 ಕೋಟಿ ರೂ. ಬೆಲೆಯ ಅರಿವೆಯನ್ನು ಉತ್ಪನ್ನಮಾಡಿದರು. ಅದನ್ನು 1934 ಕೋಟಿ ರೂ. ಗಳಿಗೆ ಮಾರಿದರು. ಅದರಲ್ಲಿ ಮಧ್ಯಸ್ಥರಿಗೆ 40 ಕೋಟಿ ರೂ. ಯ ಕಮೀಶನ್ನು ದೊರೆಯಿತು. ಗಿರಣಿ ಒಡೆಯರಿಗೆ 327 ಕೋಟಿ ರೂ. ಗಳ ಲಾಭವಾಯಿತು.

ಕೇವಲ ಗಿರಣಿ ಒಡೆಯರಿಗಾದ ಲಾಭವು ಅಷ್ಟಾಯಿತು. ಆ ಅರಿವೆಯು ಜನರ ಕೈಗೆ ಹೋಗಿ ಮುಟ್ಟು

ದ ಹೊತ್ತಿಗೆ ಅದರ ಮೇಲೆ ಬಿದ್ದ ಲಾಭದ ಲೆಕ್ಕವು ಹತ್ತಲು ಕಠಿಣವೇ ಸರಿ.

ಹೀಗೆ ಇಂದು ಬಟ್ಟೆ ಮತ್ತು ಆಹಾರ ಧಾನ್ಯಗಳ ಬೆಲೆಗಳು ಮಿತಿಮೀರಿ ಏರುವುದಕ್ಕೆ ದೊಡ್ಡ ಪ್ರಮಾಣದ ವ್ಯವಹಾರಸ್ಥರೇ ಕಾರಣರಾಗಿದ್ದಾರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಸರಕಾರದವರು ಈ ಪ್ರಸಂಗದಲ್ಲಿ ಏನು ಮಾಡಬೇಕೆಂಬುದೂ ಒಂದು ಪ್ರಶ್ನೆಯೇ ಆಗಿದೆ. ಕಾಯಿದೆಯಂತೆ ಅವರು ಹೋಗಬೇಕಾಗುತ್ತದೆ. ನಿಯಂತ್ರಣವು ಹೋದ ಮೇಲೆ ಯಾರು ಹೇಗೆ ಮಾರಿದರೂ ಆ ಬಗ್ಗೆ ಏನನ್ನು ಕ್ರಮ ತೆಗೆದುಕೊಳ್ಳಲು ಸರಕಾರದವರಿಗೆ ಬರುವುದಿಲ್ಲ. ಈಗಿರುವ ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲು ಅವರು ಪುನಃ ಕೆಲವು ನಿಯಂತ್ರಣದ ಉಪಾಯಗಳನ್ನು ಯೋಚಿಸಬಹುದಾಗಿದೆ.

ಅಗ್ಗದರದ ಸರಕಾರೀ ಅಂಗಡಿಗಳನ್ನು ತೆರೆದು ಜನರಿಗೆ ಈ ಸಾಮಗ್ರಿಗಳನ್ನು ಪೂರೈಸುವುದು ಯೋಗ್ಯ ಉಪಾಯವಾಗಿದೆ. ಆಗ ಪೇಟೆಯ ಬೆಲೆಗಳು ತಾವಾಗಿಯೇ ಇಳಿಯುವದರಲ್ಲಿ ಸಂಶಯವಿಲ್ಲ

ಜನತೆಗೆ ಬಹಳ ಕಾಲದವರೆಗೆ ಸಾಕಷ್ಟು ಸಾಮಗ್ರಿಯನ್ನು ಕೊಡುವದಕ್ಕಾಗಿ ಸಾಕಷ್ಟು ಸಂಗ್ರಹವು ಬೇಕು. ಅದಾಗದಿದ್ದರೆ ಉಳಿದ ಸಂಗ್ರಹಕಾರರನ್ನು ಕೆಲವೇ ದಿವಸ ಸುಮ್ಮನಿರಿಸಿದಂತಾಗುತ್ತದೆ. ಅವರು ಈ ಅಂಗಡಿಗಳ ಕಡೆಗೇ ಲಕ್ಷವಿಟ್ಟು ಕೊಂಡು ಕುಳಿತಿರುತ್ತಾರೆ. ಇಲ್ಲಿಯ ಸಂಗ್ರಹವು ಇರುವವರೆಗೆ ಅವರು ತಮ್ಮ ವ್ಯಾಪಾರವನ್ನು ಬಿಗಿ ಹಿಡಿದಿರುತ್ತಾರೆ. ಇವರಲ್ಲಿ ಕಾಳು ತೀರಿದವು ಎಂದ ಕೂಡಲೆ ಅವರು ತಮ್ಮ ಸಂಗ್ರಹವನ್ನು ಹೊರಗೆ ತೆಗೆದು ಮನಸ್ಸಿಗೆ ಬಂದ ಬೆಲೆಯಿಂದ ಮಾರಲು ಪ್ರಾರಂಭಿಸುತ್ತಾರೆ.

ಈ ಪರಿಸ್ಥಿತಿಯನ್ನು ತಪ್ಪಿಸುವದಕ್ಕಾಗಿ ಹೆಚ್ಚು ಸಂಗ್ರಹವನ್ನು ಸರಕಾರದವರು ಕೂಡಿಸಿಕೊಳ್ಳುವುದು ತೀರ ಅಗತ್ಯದ ಮಾತಾಗಿದೆ. ಇದರ ಬಗ್ಗೆ ಅವರು ಏನು ಉಪಾಯ ಮಾಡಬೇಕೆನ್ನುತ್ತಾರೋ ಅದು ಇನ್ನೂ ತಿಳಿದಿಲ್ಲ.

ಅಧಿಕಾರ ವರ್ಗದ ಅಸಮರ್ಥತೆಯ ಮೂಲಕ ಮತ್ತು ಲಂಚಗುಳಿತನದ ಮೂಲಕ ಸಂಗ್ರಹ ಕೆಲಸವು ಇದುವರೆಗೆ, ನಿಯಂತ್ರಣದ ಕಾಲದಲ್ಲಿ ಕೂಡ ಚನ್ನಾಗಿ ಆಗಲಿಲ್ಲ. ಆದ್ದರಿಂದ ನಿಯಂತ್ರಣವು ಪ್ರಯೋಜನವು ಜನತೆಗೆ ಸಾಕಷ್ಟು ಆಗದೆ ಹೋಯಿತು.

ನಿಷ್ಠುರವಾಗಿ ಸಂಗ್ರಹ ಮಾಡುವ ಉಪಾಯಗಳನ್ನು ಸರಕಾರವು ಕೈಕೊಳ್ಳದಿದ್ದರೆ ಅವರ ಉದ್ದೇಶವು ಸಫಲವಾಗುವುದು ಶಕ್ಯವೇ ಇಲ್ಲ.

(ಜಯಹಿಂದ್)

---

## ನೋರಿಗೆರೆಯಲ್ಲಿ
## ಬಸವ ಜಯಂತಿ.

ದಿನಾಂಕ 11ರಲ್ಲಿ ಪ್ರಭಾತಫೇರಿ ಶ್ರೀ ಭಾವಿಬಸಪ್ಪನವರಿಂದ ಧ್ವಜವಂದನೆ ಶ್ರೀ ಚಂದ್ರಶೇಖರಗೌಡರಿಂದ ಭಾಷಣ, ವ್ಯಾಯಾಮದ ಪಂದ್ಯಾಟಗಳು, ಚಡುಗುಡು ವಗೈರೆ ವಿನೋದದಿಂದ ಇಲ್ಲಿ ಬಸವಜಯಂತಿಯು ವೈಭವದಿಂದ ನೆರವೇರಿತು

---

## ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ

ಈ ಸಮಿತಿಯ ಸಾಧಾರಣ ಸಮಾವೇಶವು 23ನೆಯ ತಾ॥ ಭಾನುವಾರ ಮಧ್ಯಾಹ್ನ 1-30 ಗಂಟೆಗೆ ಹೊಸಪೇಟೆ ಅಗಳ ಕಾಂಪೌಂಡದಲ್ಲಿ ಸಮಾವೇಶವಾಯಿತು. ಹೊಸ ಘಟನೆಯಂತೆ ಜಿಲ್ಲಾ ಸಮಿತಿ ಪ್ರಾಂತೀಯ ಸಮಿತಿಗಳ ಸಭ್ಯರು ತಮ್ಮ ಸಕ್ರಿಯ ಸದಸ್ಯತ್ವವನ್ನು ಒಪ್ಪಿ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡಿದ ನಂತರ ಅವರನ್ನು ಸದಸ್ಯರೆಂದು ಸ್ವೀಕಾರಮಾಡಲು ಪ್ರಾಂತೀಯ ಸಮಿತಿಗೆ ತಿಳಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾಗಿ ಇದುವರೆಗಿದ್ದ ಶ್ರೀ ಅನಂತಿ ತಿರುಮಲರಾವ್, ಆರ್. ವಿ ದೇಸಾಯಿ, ಲಕ್ಷ್ಮಣಮೂರ್ತಿ ವಗೈರೆ ಮಿತ್ರರು ಸಮಾಜವಾದಿ ಪಕ್ಷದಲ್ಲಿ ಸೇರಲು ರಾಜೀನಾಮೆಗಳನ್ನು ಕೊಟ್ಟ ಕಾರಣ ಅವರ ರಾಜೀನಾಮೆಗಳನ್ನಂಗೀಕರಿಸಿ ಅವರ ಹಿಂದಿನ ಸೇವೆಯನ್ನು ಪ್ರಶಂಸಿಸಿ ಪುಸ್ತಕಗತಮಾಡಲಾಯಿತು.

---

— ಪೋಲಂಡ ದೇಶವು ನೂತನವಾಗಿ ರಚಿತವಾದ ಯಹೂದೆರಾಷ್ಟ್ರ 'ಇಸ್ರಾಯಿಲ್' ಗೆ ಮನ್ನಣೆ ಇತ್ತಿದೆ.

*Please Note*

**Narasepalli Workshops**
BELLARY.

— UNDERTAKE —

**Turning, Electric Welding & Tempering**
OF
SPARE PARTS OF ALL KINDS.

**Reasonable Charges**

TRIAL SOLICITED.

Telegrams
OIL MILLS.

Telephone
57.

## ಬಳ್ಳಾರಿ ಜಿಲ್ಲಾ ಮೋಟಾರ ಕೆಲಸಗಾರರ ಸಂಘ

(ಇದು ಮದ್ರಾಸ್ ಪ್ರಾಂತದ ಸಭೆಗೆ ಸಂಬಂಧಿಸಲಾಗಿವೆ

ಮೋಟಾರ ಕೆಲಸಗಾರರ ಸಂಬಳ ಅಲೋಯನ್ಸ್ ಮತ್ತು ಇತರ ಕುಂದುಕೊರತೆಗಳನ್ನು ತೃಪ್ತಿಕರವಾಗಿ ಇತ್ಯರ್ಥ ಪಡಿಸಲು ಸರ್ಕಾರದ ಪರವಾಗಿ ಒಬ್ಬ ನ್ಯಾಯಾಧೀಶರು ನಮ್ಮ ಪರವಾಗಿ ಫೆಡರೇಶನ್ ಅಧ್ಯಕ್ಷ ಶ್ರೀ ಯಂ ಶೀತಾರಾಮನಾಯಿಡು ಇವರನ್ನು ನಿಯಮಿಸಿದರು. ಇವರು ಒಂದು ನಿರ್ಣಯಕ್ಕೆ ಬಂದು ಅದು 1-6-48 ರಿಂದ ಜಾರಿಯಲ್ಲಿ ಬರಲಿದೆ ಈ ನಿರ್ಣಯದ ಪರಿಶೀಲನೆಗೆ ಮದ್ರಾಸಿನಲ್ಲಿ ಸಭೆ ಸೇರಿತು.

ನಮ್ಮ ಸಂಘದಲ್ಲಿ 492 ಸಭ್ಯರಿದ್ದು ನಿತ್ಯನಿತ್ಯವೂ ಅಭಿವೃದ್ಧಿಗೆ ಬರುತ್ತಲಿದೆ. ಈ ಜಿಲ್ಲೆಯ ಮೋಟಾರ ಕೆಲಸಗಾರರು 30-5-48ರ ದಿನ ಯಾವಕಡೆ ಎಂಥಾ ಉದ್ಯೋಗದಲ್ಲಿರುವುದು ಸಂಬಳ ಅಲೋಯನ್ಸ್ ಮತ್ತು ಇತರ ಕಷ್ಟ ತಿಳಿಸಿದರೆ ತಕ್ಕ ಚರ್ಯೆ ತೆಗೆದುಕೊಳ್ಳಲಾಗುವುದು.

ಟಿ. ಆರ್. ಅಯ್ಯರ್,
ಅಧ್ಯಕ್ಷ.

ಬಿ. ಬಿ. ಆಚಾರ್ಯ,
ಪ್ರಧಾನ ಕಾರ್ಯದರ್ಶಿ.

---

ಎಚ್ಚರಿಕೆ—

ತುಂಗಭದ್ರಾ ತೀರ ಪ್ರದೇಶದ ಹಳ್ಳಿಗಳಲ್ಲಿ ಅಧಿಕಾರಿ ಮತ್ತು ಇತರ ಜನರ ಸಹಕಾರದಿಂದ ಗೃಹರಕ್ಷಕದಳಕ್ಕಾಗಿ ಸ್ವಯಂಸೇವಕರ ಸಂಘಟನೆಯಾಯಿತು. ಇವರಿಗೆ ಶೀಘ್ರದಲ್ಲೇ ಶಿಕ್ಷಣದ ವ್ಯವಸ್ಥೆಯಾಗಲಿದೆ

## ಶಾಲಾಕಟ್ಟಡಗಳಿಗೆ ಅರ್ಧ ಗ್ರಾಂಟು

ಆಟದ ಮೈದಾನ ಶಾಲಾಕಟ್ಟಡಗಳನ್ನು ಕಟ್ಟಿಸಲು ಸರ್ಕಾರದವರು ಅರ್ಧ ಗ್ರಾಂಟನ್ನು ಕೊಡುವದಾಗಿ ವಿದ್ಯಾಶಾಖಾ ಮಂತ್ರಿಗಳಾದ ಶ್ರೀ ಅವಿನಾಶಿಲಿಂಗಂರವರು ಹೇಳಿದರು.

## In the Court of the District Munsif, Hospet.

### ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S. C. No. 463/47

ವಾದಿ:—ಸೊಕ್ಕಿ ಶಿದ್ದವೀರಪ್ಪ,

ಪ್ರತಿವಾದಿ:—ಕೋನಾಪುರ ಮಠದ ಜಾವಕ್ಕಳ ವೀರಭದ್ರಯ್ಯ

ಮೇಲಿನ ನಂಬರಿನಲ್ಲಿ ವಾದಿಯು ಪ್ರತಿವಾದಿ ಮೇಲೆ ರೂ. 60 ಕ್ಕೆ ದಾವಾ ಮಾಡಿರುತ್ತಾನೆ 28-5-48ಕ್ಕೆ ವಾಯಿದಾ ಇರುತ್ತದೆ ಪ್ರತಿವಾದಿಯು 28—5—48 ಕ್ಕೆ ಖುದ್ದಾಗಲಿ ವಕೀಲರ ದ್ವಾರ ಆಗಲಿ ಕೋರ್ಟಿಗೆ ಹಾಜರಾಗದಿದ್ದರೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆಯೆಂದು ಈ ಮೂಲಕ ತಿಳಿಯಪಡಿಸಲಾಗಿದೆ

ಹೊಸಪೇಟೆ ಎ ಆರ್ ಕೃಷ್ಣರಾವ್.
21—5—48 ವಾದಿ ಅಡ್ವೊಕೇಟರು

---

## ಹರಿಜನ ವಿದ್ಯಾರ್ಥಿ ನಿಲಯ ಹೊಸಪೇಟೆ

ಕಳೆದ ವರ್ಷ ಜುಲೈದಲ್ಲಿ ಸ್ಥಾಪಿತವಾದ ಈ ವಿದ್ಯಾರ್ಥಿ ನಿಲಯಕ್ಕೆ ಒಂದು ಸ್ಥಾಯೀ ಸಮಿತಿಯು ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಏರ್ಪಟ್ಟಿತು. ಕಾರ್ಯಕಾರೀ ಸಮಿತಿ ಅಧ್ಯಕ್ಷರು ಮುರಾರಿ ವೆಂಕಟಸ್ವಾಮಿ, ಉಪಾಧ್ಯಕ್ಷರು, ದಳವಾಯಿ ಅಂಬಣ್ಣ, ಕಾರ್ಯದರ್ಶಿ ಶ್ರೀ ಎನ್. ಲಕ್ಷ್ಮಣಮೂರ್ತಿ, ಉಪಕಾರ್ಯದರ್ಶಿ ಬಳ್ಳಾರಿ ದುರುಗಯ್ಯ, ಮೇನೇಜರು ಡಿ. ನರಸಿಂಹದಾಸು ಕಾರ್ಯಕಾರೀ ಸಮಿತಿಯಲ್ಲಿ ಮುಖ್ಯರಾದ ಹತ್ತು ಜನ ಸದಸ್ಯರಿರುವರು. ಈ ಸಮಿತಿಯನ್ನು ಜಿಲ್ಲಾ ಸಂಘಕ್ಕೆ ಸಂಬಂಧಿಸಿ ಸರ್ಕಾರದಿಂದ ಗ್ರಾಂಟು ಬೇಡತಕ್ಕದ್ದೆಂದು ತೀರ್ಮಾನಿಸಲಾಯಿತು

### ಹರಿಜನರ ಸುಧಾರಣೆ ಪ್ರಚಾರಕಾರ್ಯ

ಜಿಲ್ಲಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು, ದಳವಾಯಿ ಅಂಬಣ್ಣ ಹೊಸಪೇಟೆ ಕೌನ್ಸಿಲರ್ ದುರುಗಪ್ಪ, ಬಿ ದುರುಗಯ್ಯ, ನರಸಿಂಹದಾಸ್ ಹರಿಜನ ಪ್ರಚಾರಕ ನೆಸ್ಟಿ ಕೊಟ್ರಪ್ಪ ಇವರೊಡನೆ ಹೊಸಪೇಟೆ, ಅನಂತಶಯನಗುಡಿ, ಮಲಪನಗುಡಿ, ನಾಗೇನಹಳ್ಳಿ ಈ ಊರುಗಳಲ್ಲಿ ಪ್ರಚಾರಕಾರ್ಯ ಮಾಡಿದರು. ಮೂರು ಊರುಗಳಲ್ಲಿ ದೊಡ್ಡ ಸಭೆಗಳಾಗಿ ಹರಿಜನರು ಕೆಟ್ಟ ಪ್ರವೃತ್ತಿಗಳನ್ನು ಬಿಡಲು ವಾಗ್ದಾನ ಮಾಡಿದರು.

---

## ಸಂಡೂರು ಲೀನವಾಗಬೇಕು

ಘಟನಾ ಸಮಿತಿ ಸದಸ್ಯರಾದ ಶ್ರೀ ಮಾನವಳ್ಳಿಯವರ ಸಂಡೂರಿನ ಪ್ರಜಾಪರಿಷತ್ತಿನ ಸಭೆಯಲ್ಲಿ ಸಂಡೂರಿನ ಲೀನವಾಗುವದನ್ನು ಕುರಿತು ಪ್ರಭಾವಾತ್ಮಕ ಭಾಷಣ ಕೊಟ್ಟರು. ಎತ್ತಿನಹಟ್ಟಿ, ಹೊಸಹಳ್ಳಿಗಳಿಂದ ಜನರು ವಿಶೇಷವಾಗಿ ಬಂದಿದ್ದರು.

---

## ದಾವಾ ನೋಟೀಸು.

### ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ಹೊಸಪೇಟೆ.

O. S. No. 64/48.

ವಾದಿ;—

ನೀಲಕಂಠಗೌಡ್ರ ಬಸವನಗೌಡ ಸಾ|| ಕೋಗಳಿ.

Vs,

ಪ್ರತಿವಾದಿ;—

ಜವಳಿ ರುದ್ರಪ್ಪ ಸಾ|| ಅರಸಿಕೇರೆ ತಾ|| ಹರಪನಹಳ್ಳಿ

ತಾ|| 1—7—38ರಲ್ಲು ಪ್ರತಿವಾದಿ ಮತ್ತು ಆತನ ಅಣ್ಣ ಸಂಗಪ್ಪ ಕಲೆತು ವಾದಿಗೆ ಬರಕೊಟ್ಟ ಪ್ರಾಮಿಸರಿ ನೋಟಿನ ಬಾಬತು ಬಾಕಿ ರೂ. 162—4—0 ಗಳನ್ನು ಕೋರ್ಟು ಖರ್ಚು ಮುಂದಿನ ಬಡ್ಡಿ ಸಹಿತ ಜಮಾ ಮಾಡಿಕೊಳ್ಳಲು ವಾದಿಯು ದಾವಾ ದಾಖಲು ಮಾಡಿದ್ದು ತಾ|| 31—5—48ಕ್ಕೆ ವಾಯಿದಾ ಇರುತ್ತದೆ. ಅದಕ್ಕೆ ಏನಾದರೂ ತಕರಾರು ಇದ್ದಲ್ಲಿ ಪ್ರತಿವಾದಿ ಸದ್ರಿ ವಾಯಿದಾ ದಿನ ಹಗಲು $10\frac{1}{2}$ ಗಂಟೆಗೆ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದು. ತಪ್ಪಿದಲ್ಲಿ ನಂಬರು ಯಕ್ಸ್ ಪಾರ್ಟಿಯಾಗಿ ತೀರ್ಮಾನವಾಗುತ್ತದೆ. ಖಂಡಿತ ತಿಳಿಯಬೇಕು.

ಎಂ. ತಿರುಮಲಾಚಾರ್,
ಹೊಸಪೇಟೆ. ವಕೀಲ್,

# The Rayalaseema Bank Ltd., H. O. Bellary.

236

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,

ಸ್ಥಾಪಿತ—1939

### ಮುಖ್ಯ ಕಾರ್ಯಾಲಯ—ಬಳ್ಳಾರಿ.

)0(

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ
೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

**ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.**

| | | |
|---|---|---|
| 3 ರಿಂದ 6 ತಿಂಗಳವರಿಗೆ ಇಡುವ ಹಣಕ್ಕೆ | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ ,, | ರೂ. 3½% | ,, |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,, | ರೂ. 4% | ,, |

ಚಾಲ್ತಿ ಖಾತೆ ( urrent Account) 00 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು ಮೂರು ವರ್ಷಗಳನಂತರ ಪೂರಾ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

---

# NAVA BHARAT BELLARY.

Reg. No M. 4746

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri ..........................................
..........................................
..........................................

Printed at Vittal Press, Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ವರ್ಷ ೧೧ | ಸಂಚಿಕೆ ೨೦ | ಬಳ್ಳಾರಿ ಜೂನ್ ೭ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ ... ಬಿ. ಕೇಶವರಾವ್.

## ಹೈದರಾಬಾದು.

### ಪಾಕಿಸ್ತಾನದ ಅಭಿಪ್ರಾಯ.

ಹೈದರಾಬಾದಿಗೆ ನಮ್ಮ ಸಂಪೂರ್ಣ ಸಹಾನುಭೂತಿ ಇದೆ. ಅದನ್ನು ಹಿಂದೀ ಒಕ್ಕೂಟದಲ್ಲಿ ಸೇರುವಂತೆ ಏಕೆ ಒತ್ತಾಯ ಪಡಿಸಲಾಗುತ್ತಿದೆಯೋ ಕಾರಣ ತಿಳಿಯದಾಗಿದೆ ಎಂದು ಪಾಕಿಸ್ತಾನದ ವಿದೇಶ ಮಂತ್ರಿಗಳಾದ ಸರ್ ಜಫರುಲ್ಲಾರವರು ಹೇಳಿದರು. ಹೈದರಾಬಾದು ಸರ್ವತಂತ್ರ ಸಂಸ್ಥಾನದ ಸ್ವತಂತ್ರವಾಗಿರಬೇಕೊ ಭಾರತ ಒಕ್ಕೂಟವನ್ನು ಸೇರಬೇಕೊ ಎಂಬ ಪ್ರಶ್ನೆ ಅದಕ್ಕೆ ಸಂಬಂಧಿಸಿದುದು. ಹಿಂದೂಸ್ಥಾನವು ಸೇರ್ಪಡೆಗೆ ಬಲಪ್ರಯೋಗವಮಾಡಬಾರದು ಅವರಿಂದ ಸೀಕಿ ಸ್ನಾಯಗಳಿಗೆ ದ್ರೋಹವಾಗುವುದು ಎಂಬ ಜಿನ್ನಾರವರ ಅಭಿಪ್ರಾಯ ಪಟ್ಟರೆಂದು ಒಂದು ಪ್ರಕಟನೆಯಲ್ಲಿ ಹೇಳಲಾಗಿದೆ.

### ರಜವಿಯವರ ಕೂಗಾಟ.

ನಮಗೆ ಸೋಗಿನ ಜವಾಬ್ದಾರ ಸರಕಾರ ಬೇಕಿಲ್ಲ. ಹಿಂದೂಸ್ಥಾನಕ್ಕೆ ನಮ್ಮನ್ನು ಹೀಗೆಯೇ ಮಾಡಬೇಕೆಂದು ಕೇಳುವ ಅಧಿಕಾರವು ಇಲ್ಲ. ಹೋರಾಟಗಾರ ಸರಕಾರ ಜನಗಳ ಮುಕಗಣನೆಗೆ ನಾನು ಮೊದಲಿನಂತೆ ವಿರೋಧಿಸುವೆನು.

## ಒಪ್ಪಂದದ ಮಾತುಕತೆಗಳು.

ಇದರ ಪರಿಣಾಮವು ಹೊರಬಿದ್ದಿಲ್ಲ. ಇಂಡಿಯಾ ಸರ್ಕಾರದ ಸೂಚನೆ ಬಗ್ಗೆ ಖಚಿತವಾಗಿ ಹೈದರಾಬಾದು ಏನನ್ನೂ ಹೇಳಿಲ್ಲ.

### ಕಾಶ್ಮೀರ

ಕಾಶ್ಮೀರದಲ್ಲಿ ಶಾಂತಿಯಾಗುತ್ತಿರುವದರಿಂದ ಪಾಕಿಸ್ತಾನಕ್ಕೆ ಹೋಗುತ್ತಲಿದ್ದ ಮುಸ್ಲಿಮರು ಜಮ್ಮು ಪ್ರಾಂತಕ್ಕೆ ತಿರುಗಿಬರುತ್ತಿರುವರು. ಇಂಡಿಯಾ ಸೈನ್ಯಗಳಿಗೆ ಜಯವು ದೊರೆಯುತ್ತಲಿದ್ದು ಶತೃಗಳು ಓಡಿಸಲ್ಪಡುತ್ತಿರುವರು.

### ಪಾಕಿಸ್ತಾನದಲ್ಲಿ ಚರಖಾ ಕೇಂದ್ರಗಳು

ಸಿಂಧದಲ್ಲಿ 1,50,000 ಪೂರ್ವ ಪಾಕಿಸ್ತಾನ ಸರಹದ್ದಲ್ಲಿ 50,000, ಭಾವಲ್ಪುರ, ಖೈರಪುರ, ಖಲಾತ್, ಲಾಸ್ಪೆಲ, ಖಾರನ್ ಮತ್ತು ಸಂಸ್ಥಾನ (ಪಾಕಿಸ್ತಾನ) ಇವುಗಳೊಂದೊಂದರಲ್ಲಿ -0,000 ಚರಖಾಗಳನ್ನು ಕೊಟ್ಟಿರುವರು. ಬಟ್ಟೆಗಳ ಪೂರೈಕೆಗೆ ಪಾಕಿಸ್ತಾನ ಸರಕಾರವು ಗಾಂಧಿ ತತ್ವಕ್ಕೆ ಶರಣು ಹೋಗಬೇಕಾಯಿತು.

---

--ಕಡಪ, ಮಧುರಾ, ತೂತುಕುಡಿ ಮತ್ತು ಕೊಯಂಬತ್ತೂರುಗಳಲ್ಲಿ ನಾಲ್ಕು ಹೊಸ ಕಾಲೇಜುಗಳನ್ನು ಈ ವರ್ಷ ತೆರೆಯಲಿರುವರು. ಕಡಪಾದಲ್ಲಿ ಗವರ್ನಮೆಂಟ್‌ರವರೇ ಕಾಲೇಜನ್ನು ಪ್ರಾರಂಭಿಸಲಿದ್ದಾರೆ.

# ಎಮ್ಮಿಗನೂರು ಗುಂಡಿನ ಪ್ರಕರಣ

## ಸವರ್ಣ ಹಿಂದೂ ಮತ್ತು ಹರಿಜನರ ಸೌಹಾರ್ದಭಾವ

---

ಬಳ್ಳಾರಿ ತಾಲೂಕ ಎಮ್ಮಿಗನೂರಲ್ಲಿ 1947 ನೇ ಅಕ್ಟೋಬರ್ ತಿಂಗಳಲ್ಲಿ ಮಹರ್ನವಮಿಯ ದಿನ ಹರಿಜನರ ಮೆರವಣಿಗೆಗೆ ಅಡ್ಡಿಯಾಗಿ ಪೋಲೀಸರು ಗುಂಡು ಹಾರಿಸಬೇಕಾದ ಪ್ರಸಂಗ ಒದಗಿ ಗ್ರಾಮದ 77 ಜನರ ಮೇಲೆ ಕ್ರಿಮಿನಲ್ ಕೇಸ್ ಹೂಡಲಾಗಿದೆ. ಗ್ರಾಮದ ಸಮಸ್ತ ಪಂಗಡಗಳವರಲ್ಲಿ ಏಕಮತ್ಯ ಪರಸ್ಪರ ಸೌಹಾರ್ದಭಾವನೆಗಳಗತ್ಯವೆಂದು ಮುಖ್ಯರೆಲ್ಲಾ ಆಲೋಚಿಸಿದರು ತಪ್ಪು ತಿಳುವಳಿಕೆ ಮತ್ತು ಅಚಾತುರ್ಯದಿಂದಾದ ಹಿಂದಿನ ಘಟನೆಗಳನ್ನೆಲ್ಲಾ ಮರೆತ, ಗ್ರಾಮದ ಸ್ನೇಹಮಯ ವಾತಾವರಣವನ್ನು ಪುನರುದ್ಧರಿಸಲು ಮುಖಂಡರು ಬದ್ಧಕಂಕಣರಾದರು. 3. 5-48ರ ದಿನಾಂಕ ಎಮ್ಮಿಗನೂರಿಗೆ ಸುವರ್ಣಾಕ್ಷರದಿಂದ ಬರೆದಿಡಬೇಕಾದ ದಿನ. ಅಂದು ಗ್ರಾಮದ ವಿವಿಧ ಮುಖಂಡರೆಲ್ಲಾ ಕಲೆತು ಮಾತಾಡಿ ಪರಸ್ಪರ ತಪ್ಪುತಿಳುವಳಿಕೆ ದೂರಮಾಡಿ ಇನ್ನು ಹರಿಜನರ ಹಕ್ಕುಗಳನ್ನೆಲ್ಲಾ ಸ್ಥಿರಪಡಿಸಲು ಊರಿನ ಎಲ್ಲಾ ವಿಷಯಗಳಲ್ಲೂ ಒಮ್ಮತದಿಂದ ವರ್ತಿಸಲು ಲೇಖೀ ಒಪ್ಪಂದ ಮಾಡಿ ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ ಶ್ರೀ ಟಿ. ಬಿ. ಕೇಶವರಾಯರಿಗೆ ಕೊಟ್ಟರು.

### ಹರಿಜನರ ಮದುವೆ ಮೆರವಣಿಗೆ

ಎಮ್ಮಿಗನೂರು ಹರಿಜನರ ಕೇರಿಯಲ್ಲಿ 9 ಮದುವೆಗಳು 3 6-48ರ ದಿನಾಂಕ ನೆರವೇರಿ ಗ್ರಾಮದ ಧುರೀಣರ ನೇತೃತ್ವದಲ್ಲಿ ಗ್ರಾಮ ಬೀದಿಗಳಲ್ಲಿ ಅತಿ ವೈಭವದಿಂದ ಮೆರವಣಿಗೆಯಾಯಿತು. ಗ್ರಾಮದ ಧುರೀಣರ ಈ ಸೌಹಾರ್ದಭಾವನೆಯನ್ನು ಪ್ರಶಂಶಿಸುತ್ತಾ ಜಿಲ್ಲಾ ಹರಿಜನಸೇವಕ ಸಂಘದ ಅಧ್ಯಕ್ಷ ಶ್ರೀ ಟಿ. ಜಿ. ಸತ್ಯನಾರಾಯಣ, ಕಾರ್ಯದರ್ಶಿ ಶ್ರೀ ಟಿ. ಬಿ. ಕೇಶವರಾಯರು "ಹಿಂದಿನ ದುರ್ಘಟನೆಗಳನ್ನು ಮರೆಯಿರಿ. ಇನ್ನು ಮುಂದೆ ಸರ್ವ ಸಮತ್ವಭಾವದಿಂದ ಅಣ್ಣ ತಮ್ಮಂದಿರಂತೆ ಕಲೆತು ಗ್ರಾಮದ ಸರ್ವಾಭಿವೃದ್ಧಿಗೂ ಸಹಾಯ ಮಾಡಿರಿ. ನಿಮಗೆ ಸಂಘದ ಪರವಾಗಿ ಮತ್ತು ಹರಿಜನರ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳು" ಎಂದು ಮೆರವಣಿಗೆಯಲ್ಲಿ ನೆರೆದ ಹಿಂದೂ - ಹರಿಜನ ಬಾಂಧವರಿಗೆ ಹೇಳಿದರು.

**ಶ್ರೀ ಯಜಮಾನ್ ಶಾಂತರುದ್ರಪ್ಪನವರು:-** ದೀನರೂ ಹಿಂದುಳಿದವರೂ ಆದ ನಿಮ್ಮ ಏಳಿಗೆಗೆ ಸಕಲರೂ ಸಹಾಯಮಾಡಬೇಕಾದುದು ಪ್ರಥಮ ಕರ್ತವ್ಯ ಹರಿಜನ ಸೇವಕ ಸಂಘದವರೂ ಊರವರೂ ನಿಮ್ಮ ಹಿತವನ್ನು ಮಾಡುವ ಕಾರ್ಯದಲ್ಲಿ ನೀವೆಲ್ಲಾ ಸಹಕರಿಸಿ ಅವರ ಯತ್ನಗಳಿಗೆ ಯಶಸ್ಸನ್ನೀಯಬೇಕು ಎಂದು ಹೇಳಿದರು.

ಪರಊರುಗಳಿಂದ ಬಂದ ನೂರಾರು ಹರಿಜನರಿಗೆ ಕೇರಿಯವರೇ ಊಟ ಉಪಚಾರಗಳ ವ್ಯವಸ್ಥೆಮಾಡಿದ್ದರು. ಛಾಯಾಚಿತ್ರ ಚಹಪಾನದ ನಂತರ ಬಳ್ಳಾರಿಯ ಅತಿಥಿಗಳು ತೆರಳಿದರು.

ಇದಕ್ಕಾಗಿ ಗ್ರಾಮದ ಪ್ರಮುಖರಾದ ಶ್ರೀಮಾನ್ ಬೆಟಗೇರಿ ಸೂಗಪ್ಪ, ಬೆಂಗ ಬಸವನಗೌಡ, ಸಿದ್ಧಮ್ಮನಹಳ್ಳಿ ವೀರಾರೆಡ್ಡಿ, ಕೊತ್ತಲಚಿಂತ ದೇವರೆಡ್ಡಿ, ಲಿಂಗಾರೆಡ್ಡಿ ಮತ್ತು ಗ್ರಾಮದ ಇನ್ನೂ ಅನೇಕ ಮಹನೀಯರು ಕೃತಜ್ಞತಾಪಾತ್ರರು.

### — ಅಭಿಪ್ರಾಯಗಳು —

**ಶ್ರೀ ಟೇಕೂರು ಸುಬ್ರಹ್ಮಣ್ಯಂ:—** ಅಧ್ಯಕ್ಷ ಜಿಲ್ಲಾ ಕಾಂಗ್ರೆಸ್ ಸಮಿತಿ ಇವರು ಹಿಂದೂಗಳಲ್ಲಿ ಒಪ್ಪಂದಕ್ಕೆ ಸಂತೃಪ್ತಿ ವ್ಯಕ್ತಪಡಿಸಿದರು. "ನನಗೆ ಮಹದಾನಂದವಾಗಿದೆ. ಅವರ ಕಷ್ಟಗಳು ಶೀಘ್ರವಲ್ಲೇ ದೂರವಾಗಲಿ" ಶ್ರೀ ವೈ. ಮಹಾಬಲೇಶ್ವರಪ್ಪನವರು ಅಧ್ಯಕ್ಷ ವೀರಶೈವ ವಿದ್ಯಾವರ್ಧಕ ಸಂಘ "ಈ ಸುದ್ದಿ ಕೇಳಿ ನನಗೆ ಬಹಳ ಸಂತೋಷವಾಗಿದೆ. ಈ ಸದ್ಭಾವವು ಶಾಶ್ವತವಾಗಿ ಉಳಿಯಲಿ" ಎಂದರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಹೆಚ್. ಬಸವನಗೌಡ ಮತ್ತು ಕಲ್ಗುಣಿ ಶಿವರುದ್ರಪ್ಪನವರು ಒಂದು ಹೇಳಿಕೆ ಕೊಟ್ಟು ಇದಕ್ಕೆ ಹರ್ಷವನ್ನು ವ್ಯಕ್ತಪಡಿಸಿ ಜಿಲ್ಲೆಯ ಇತರ ಗ್ರಾಮಗಳಿಗೆ ಇದು ಮಾದರಿಯಾಗಲಿ ಎಂದು ಹೇಳಿರುವರು.

---

## ಬಳ್ಳಾರಿ ವೀರಶೈವ ಕಾಲೇಜು ಮನ್ನಣೆ ಹಿಂದೆಗೆದುಕೊಳ್ಳಲಾಯಿತು

ಯೂನಿವರ್ಸಿಟಿ ಸಿಂಡಿಕೇಟಿನವರು ಹಾಕಿದ ಶರ್ತುಗಳನ್ನು ಕಾಲೇಜ್ ಮ್ಯಾನೇಜ್‌ಮೆಂಟಿನವರು ಪಾಲಿಸದಿದ್ದ ಕಾರಣ ಮನ್ನಣೆಯನ್ನು ಹಿಂದೆಗೆದುಕೊಳ್ಳಲಾಗಿದೆ ಯೆಂದು ಪ್ರಕಟವಾಗಿದೆ. ಈ ವರ್ಷ ಹೊಸದಾಗಿ ಇಂಟರ್ಮೀಡಿಯೆಟ್ ಪ್ರಥಮ ವರ್ಗಕ್ಕೆ ವಿದ್ಯಾರ್ಥಿಗಳನ್ನು ಸೇರಿಸಬಾರದೆಂದೂ ಎರಡನೆಯ ವರ್ಗಕ್ಕಾಗಿ ಒಂದು ವರ್ಷ ಕಾಲೇಜು ನಡೆಸಿ ಮುಚ್ಚಬೇಕೆಂದು 1-6-48 ರ ಪ್ರಕಟನೆಯ ಅರ್ಥವಿದೆ. ಜೂನ್ 20 ರೊಳಗಾಗಿ ಮ್ಯಾನೇಜ್‌ಮೆಂಟ್‌ನವರು ಶರ್ತುಗಳನ್ನು ಪಾಲಿಸಿದಲ್ಲಿ ಸಿಂಡಿಕೇಟಿನವರು ಪುನರ್ವಿಚಾರ ಮಾಡುವರು.

## ಕವಯಿತ್ರಿ ಶ್ರೀಮತಿ ಜಾನಕಮ್ಮ ಶಾಸ್ತ್ರಿಯವರ ನಿಧನ.

ಕಳೆದ ವಾರ ಬಳ್ಳಾರಿಯ ಸುಪ್ರಸಿದ್ಧ ಕವಯಿತ್ರಿ ಶ್ರೀ ಜಾನಕಮ್ಮ ಕೃಷ್ಣಶಾಸ್ತ್ರಿಯವರ ನಿಧನದಿಂದ ಸಾಹಿತ್ಯಲೋಕಕ್ಕೆ ಅಪಾರನಷ್ಟವಾಗಿದೆ. ಸ್ತ್ರೀಯರಲ್ಲಿ ಸಾಹಿತ್ಯ ಪ್ರೇಮಿಗಳು ವಿರಳ ಅವರು ಮಾನವನ ಕೈಗೊಂಬೆಗಳಾಗಿ ಹಗಲಿರುಳು ಮನೆಯಲ್ಲಿ ದುಡಿಯುವ ಯಂತ್ರಗಳಾಗಿದ್ದಾರೆ. ನಿರಕ್ಷರತೆಯು ನಿರ್ಮೂಲವಾಗದ ಇಂಥಾ ಪರಿಸ್ಥಿತಿಯಲ್ಲಿ ಅತ್ಯಧಿಕ ಸಂಖ್ಯಾಕರು ಸ್ತ್ರೀಯರನ್ನು ಗುಲಾಮರಾಗಿಟ್ಟಿರುವದೇನೂ ಆಶ್ಚರ್ಯದ ಮಾತಲ್ಲ. ಶ್ರೀಮತಿ ಜಾನಕಮ್ಮನವರು ಮನೆಯ ಸಂಸಾರವನ್ನು ಸಾಗಿಸಿ ಮಕ್ಕಳನ್ನು ಪೋಷಿಸಿ ಅಲ್ಪಸ್ವಲ್ಪ ಕಾಲ ಶಬ್ದೋ ರತ್ನಾಗ ಸಾಹಿತ್ಯದ ಮಡುವಿನಲ್ಲಿಳಿದು ರತ್ನಗಳನ್ನಾಯ್ದು ಜನತೆಯ ಮುಂದಿಡುವ ಸಾಹಸಮಾಡಿದರು. ಸರಳಶೈಲಿ, ಭಾವಗರ್ಭಿತ ರಚನೆ, ಆಕರ್ಷಕ ವಸ್ತು ಆಧುನಿಕ ಮನೋರಂಗದ ಅವರ ಕೃತಿಗಳು ಕರ್ನಾಟಕ ಕವಿ ಸಾಮ್ರಾಟ ಬೇಂದ್ರೆಯವರ ಪ್ರಶಂಸೆಗೆ ಪಾತ್ರವಾದವು ಇವುಗಳನ್ನು ಪ್ರಕಟಿಸಿರೆಂದು ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಗ್ರಂಥ ಪ್ರಕಾಶನಕ್ಕೆ ಸಹಾಯ ಮಾಡಿದರು. ಶ್ರೀಮತಿಯವರ ಕೃತಿಗಳು ಮುಖ್ಯ ಮಾಸಪತ್ರಿಗಳಲ್ಲೆಲ್ಲಾ ಪ್ರಕಟವಾಗಿವೆ.

'ನವಭಾರತ' ಸಂಪಾದಕರಿಗೆ ಶ್ರೀಮತಿಯವರ ಕುಟುಂಬೀಕರೆಲ್ಲಾ ಬಾಲ್ಯದ ಪರಿಚಯಸ್ಥರಾಗಿ ಆತ್ಮೀಯರನ್ನು ಕಳೆದುಕೊಂಡಂತಾಗಿ ಅವರ ದುಃಖದಲ್ಲಿ ಸಹಭಾಗಿಗಳಾಗಿ ಮೃತರ ಚಿರಶಾಂತಿಯನ್ನು ಕೋರುವೆವು.

## ಬಳ್ಳಾರಿ ಜಿಲ್ಲೆ ಲೆವಿ ಕಾಳಿನ ಸಂಗ್ರಹ ವಿಲ್ಲ.

ಇನ್ನು ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟನ್ನೇ ಆಗಲಿ ಕಾಳಿನ ಸಂಗ್ರಹ ಮಾಡಬಾರದೆಂಬ ಆಜ್ಞೆಯು ಮದ್ರಾಸ್ ಸರ್ಕಾರದಿಂದ ಬಂದಿದೆ. ಕಾಳು ಸಂಗ್ರಹಾಧಿಕಾರಿಗಳು ರೆವಿನ್ಯೂ ಡಿಪಾರ್ಟಮೆಂಟಿಗೆ ವರ್ಗಾಯಿಸಲ್ಪಟ್ಟರು.

ಬಳ್ಳಾರಿ ಜಿಲ್ಲೆಯ ಈ ವರ್ಷದ S. S. L. C. ಪರೀಕ್ಷಾ ಪರಿಣಾಮಗಳು ತೃಪ್ತಿಕರವಾಗಿಲ್ಲ.

## ಬಟ್ಟೆ-ರಾಷ್ಟ್ರೀಕರಣ

ಬಟ್ಟೆಗಳನ್ನು ಉತ್ಪತ್ತಿ ಮಾಡುವವರಿಗೆ ಬುದ್ಧಿ ಬರದಿದ್ದರೆ ಬೆಲೆಗಳನ್ನಿಳಿಸದಿದ್ದರೆ ಈ ಬಟ್ಟೆ ಉದ್ಯೋಗವನ್ನೇ ರಾಷ್ಟ್ರೀಕರಣ ಮಾಡುವೆವು ಎಂದು ಪಂಡಿತ ನೆಹರೂರವರು ಕೊಯಂಬತೂರಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

## ಜಿನ್ನಾರ-ತುಲಾಭಾರ

ಬಿಲೂಚಿಸ್ತಾನದಲ್ಲಿ ಲೀಗೀ ಸದಸ್ಯರೊಬ್ಬರು ಜಿನ್ನಾರ ತುಲಾಭಾರ ಮಾಡಿ ಬೆಳ್ಳಿಯಲ್ಲಿ ಅವರನ್ನು ತೂಗಿ ಅದನ್ನು ಜಿನ್ನಾ ಪರಿಹಾರ ನಿಧಿಗೆ ಕೊಡುವದಾಗಿ ಜಿನ್ನಾರವರಿಗೆ ಬರೆದು ತಿಳಿಸಿದ್ದಾರೆ.

THE NAVABHARAT
ನವಭಾರತ
ಸಂಪಾದಕ-[illegible].ಕೇಶವರಾವ್

ಸೋಮವಾರ 7 ಜೂನ್ 1948

## ಬಳ್ಳಾರಿ ವೀರಶೈವ ಕಾಲೇಜು.

ಬಳ್ಳಾರಿ ವೀರಶೈವ ಕಾಲೇಜಿನ ಇಂಟರ್ಮೀಡಿಯೆಟ್ ಪರೀಕ್ಷೆ (ಮದ್ರಾಸ್ ವಿಶ್ವವಿದ್ಯಾಲಯ) ಯ 1948 ನೆಯ ಮಾರ್ಚ್ ಫಲಿತಾಂಶವು ಬೇರೊಂದೆಡೆಯಲ್ಲಿ ಪ್ರಕಟವಾಗಿದೆ. ಕಳೆದ ವರ್ಷದಂತೆ ಈ ವರ್ಷವೂ ತೃಪ್ತಿಕರವಾದ ರೀತಿಯಲ್ಲಿ ಕಾಲೇಜು ಯಶಸ್ಸನ್ನು ಗಳಿಸಿದೆ. ವಯಸ್ಸಿನಲ್ಲಿ ಕೂಸಾದರೂ, ಬೆಳೆದು ಸ್ಥಿಮಿತತ್ವಕ್ಕೆ ಬಂದ ಇತರ ಯಾವ ಕಾಲೇಜುಗಳಿಗೂ ಇದು ಹಿಂದೆ ಬಿದ್ದಿಲ್ಲ. ಎಲ್ಲಾ ವಿಷಯಗಳಿಗೂ ಸಂಬಂಧಿಸಿದ ಎಲ್ಲಾ ಉಪಾಧ್ಯಾಯರೂ ತಮ್ಮ ಕರ್ತವ್ಯಗಳನ್ನು ನೆರವೇರಿಸಿರುವರು. ವಿದ್ಯಾರ್ಥಿಗಳಲ್ಲೂ ದೋಷವಿಲ್ಲ.

ಕಾಲೇಜ್ 'ಮ್ಯಾನೇಜ್‌ಮೆಂಟ್' ನವರು ಈ ಕಷ್ಟಕಾಲದಲ್ಲಿ ಇಂಥಾ ಭಾರವನ್ನು ಹೊತ್ತು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದರೂ ಯೂನಿವರ್ಸಿಟಿ ಕಮೀಶನ್‌ನವರ ವರದಿಯಲ್ಲಿನ ಈ ಟೀಕೆಯಿಂದ ಮುಕ್ತರಾಗುವಂತಿಲ್ಲ

"The Commission regrets to note that, in spite of the previous promises made. The Veerasiva College Bellary, has not so far collected the endowment that was originally promised. It will be for Syndicate to decide the desirability or otherwise of the continuance of this College if the conditions accepted by the Management are not subsequently complied with".

ಈ ಹಿಂದೆ ಮಾಡಿದ ವಾಗ್ದಾನಗಳ ಪ್ರಕಾರಕ್ಕೆ ಬಳ್ಳಾರಿ ವೀರಶೈವ ಕಾಲೇಜಿನವರು ಬೇಕಾದ ನಿಧಿಸಂಗ್ರಹವನ್ನು ಮಾಡಿಲ್ಲವೆಂದು ಕಮೀಶನ್‌ನವರು ವಿಷಾದದಿಂದ ಸೂಚಿಸುತ್ತಾರೆ. ಮ್ಯಾನೇಜ್‌ಮೆಂಟಿನವರು ಒಪ್ಪಿಕೊಂಡ ಶರ್ತುಗಳನ್ನು ಪಾಲಿಸದಿದ್ದಲ್ಲಿ ಈ ಕಾಲೇಜಿಗೆ 'ಸ್ವೀಕೃತ ಮುದ್ರೆ' ಕೊಡಬೇಕೋ ಬೇಡವೋ ಎಂಬುದನ್ನು ಸಿಂಡಿಕೇಟಿನವರು ನಿರ್ಣಯಿಸಬೇಕಾಗುತ್ತದೆ"

ಈ ಸಂದರ್ಭದಲ್ಲಿ ನಮ್ಮದೊಂದು ಸೂಚನೆ. ವೀರಶೈವ ಕಾಲೇಜಿನಲ್ಲಿ ವೀರಶೈವರಿಗಷ್ಟೇ ಅಲ್ಲದೆ ಎಲ್ಲಾ ಜಾತಿಯವರಿಗೂ ಶಿಕ್ಷಣ ಸೌಕರ್ಯವಿರುವುದರಿಂದ ಈ ಕಾಲೇಜನ್ನು ತಮ್ಮದೆಂದು ಸಾರ್ವಜನಿಕರು ಭಾವಿಸಬೇಕು. ಎಲ್ಲರೂ ಕೊಡುಗೈಯಿಂದ ಉದಾರ ಹೃದಯದಿಂದ ದಾನಕೊಟ್ಟು ಈ ಕಾಲೇಜನ್ನುಳಿಸಬೇಕು. ಇದು ಜಾತೀಯ ಸಂಸ್ಥೆಯಲ್ಲ. ಈ ಕಾರಣ ಇತರರೂ ಸಹಾಯಮಾಡಬೇಕು. ಕಾಲೇಜ್ ವ್ಯವಸ್ಥಾಪಕ ಮಂಡಳದಲ್ಲಿ ಇತರ ಪ್ರಮುಖರಿಗೂ ಸ್ಥಾನವನ್ನು ಕೊಟ್ಟು ಸಾಧ್ಯ ಮತ್ತು ಯುಕ್ತವೆಂದು ತೋರಿದರೆ ಈ ಹೆಸರನ್ನು ಬದಲಾಯಿಸಿ ಕಾಲೇಜನ್ನು ಸಾರ್ವಜನಿಕವಾಗಿ ಮಾಡಿ ಕೀರ್ತಿ ಪಡೆಯಲು ನಮ್ಮ ನಮ್ರ ಸಲಹೆ. ಈ ಜಿಲ್ಲೆಯಲ್ಲಿ ವೀರಶೈವರಲ್ಲಿ ಅಗಭ್ರ ಶ್ರೀಮಂತರು ಕೆಲವರಿದ್ದರೂ ಅಧಿಕ ಸಂಖ್ಯಾಕರು ಬಡವರು. ಒಂದೇ ಜಾತಿಯವರಿಂದ ಎಲ್ಲಾ ಹಣವನ್ನೂ ಗಳಿಸಬೇಕೆಂದರೆ ಕಷ್ಟಸಾಧ್ಯ.

ಈ ಕಾಲೇಜಿಗೆ ಕಟ್ಟಡಬೇಕು. ಸ್ಥಳದ ಕೊರತೆಯ ಸೂಚನೆಯು ಕಮೀಶನ್‌ದವರ ರಿಪೋರ್ಟಿನಲ್ಲಿದೆ. ಕಟ್ಟಡಕ್ಕೆ ಮೂರು ಲಕ್ಷ ರೂ. ಗಳಾದರೂ ಬೇಕು. ಈಗ ಸರ್ಕಾರದವರು ಗ್ರಾಂಟು ಕೊಡಲಿರುವರೆಂದು ಕೇಳಿ ಸಂತೋಷವಾಗಿದೆ. ಬಳ್ಳಾರಿಯನ್ನು ಮದ್ರಾಸ್ ಸರಕಾರದವರು ಎಲ್ಲಾ ವಿಧಗಳಿಂದಲೂ ನಿರ್ಲಕ್ಷಿಸಿದ್ದಾರೆ. ಇರುವ ಒಂದು ಕಾಲೇಜನ್ನಾದರೂ ಉಳಿಸುವುದು ಎಲ್ಲರ ಕರ್ತವ್ಯವೆಂದು ನಾವು ಆಗ್ರಹ ಪೂರ್ವಕವಾಗಿ ಸೂಚಿಸದಿರಲಾರೆವು.

# ಅದವಾನಿ, ಆಲೂರು, ಮತ್ತು ರಾಯದುರ್ಗ ತಾಲೂಕಗಳು ಕರ್ನಾಟಕಕ್ಕೆ ಸೇರಬೇಕು.

ಈ ಮೂರು ತಾಲೂಕಗಳು ಪ್ರಸ್ತುತ ಬಳ್ಳಾರಿ ಜಿಲ್ಲಾ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಕಮಿಟಿಗೆ ಸೇರಿರುವುದರಿಂದ ಆಂಧ್ರ ಪ್ರಾಂತಕ್ಕೆ ಸೇರಬೇಕೆಂದು ಇಲ್ಲಿಯ ಕೆಲವು ಆಂಧ್ರರು ಅನ್ನುತ್ತಿರುವರು. ಈ ಏರ್ಪಾಟು ಕೇವಲ ಕಾಂಗ್ರೆಸ್ ಸಂಸ್ಥೆಯ ಚಟುವಟಿಕೆಗಳಿಗಾಗಿ ಎಂಬುದು ಅವರು ಮರೆತಂತೆ ಕಾಣುತ್ತದೆ. ಮತ್ತು ಇವು ಆಂಧ್ರ ಪ್ರಾಂತೀಯ ಕಾಂಗ್ರೆಸ್ ಕಮಿಟಿಯಲ್ಲಿ ಸೇರಿದ್ದು 1921ರಲ್ಲಿ. ಶ್ರೀ ಕೇಳ್ಕರ್ ಅವಾರ್ಡಿನ ಪ್ರಕಾರ ಹತ್ತು ವರ್ಷಗಳ ನಂತರ ಅವಾರ್ಡಿಗೆ ಬೆಲೆಯಿಲ್ಲ. ಈಗ ಭಾಷಾವಾರ ಪ್ರಾಂತರಚನೆಯು ನಿಶ್ಚಯವಾದುದರಿಂದ ಈ ಮೂರು ತಾಲೂಕಿನ ಜನರು ಯಾವ ಪ್ರಾಂತಕ್ಕೆ (ಕರ್ನಾಟಕ ಅಥವಾ ಆಂಧ್ರ) ಸೇರಬೇಕೆನ್ನುವುದು ನಿರ್ಧರಿಸಬೇಕಾದ ಸಮಯಬಂದಿದೆ

ಚಾರಿತ್ರಿಕ ದೃಷ್ಟಿಯಿಂದ ಪರಿಶೋಧಿಸಿದರೂ, ಭೌಗೋಲಿಕ ವಿಚಾರದಿಂದ ಪರಿಶೀಲಿಸಿದರೂ, ವ್ಯಾಪಾರ ಮತ್ತು ಆಚಾರ ವಿಚಾರ ದೃಷ್ಟಿಯಿಂದ ನೋಡಿದರೂ, ಕನ್ನಡ ಜನ ಸಂಖ್ಯೆಯ ಎಣಿಕೆಯಿಂದ ಗುಣಿಸಿನೋಡಿದರೂ ಈ ಮೂರು ತಾಲೂಕಗಳು ಕರ್ನಾಟಕದ ಕೊನೆಯ ಅಂಗವೆಂದು ಕಂಡುಬರುತ್ತಿದೆ. ಬಳ್ಳಾರಿ ಜಿಲ್ಲೆಯು ಕನ್ನಡ ಅರಸರ ಅಂಕಿತದಲ್ಲಿದ್ದ ವಿಸ್ತಾರವಾದ ವಿಜಯನಗರ ರಾಜ್ಯದ ಮುಖ್ಯ ಪ್ರಾಂತವಾಗಿದ್ದಿತು. ಈ ಮೂರು ತಾಲೂಕಗಳಲ್ಲಿರುವ ಜನರ ವ್ಯಾಪಾರ ಸಂಬಂಧ ಬಳ್ಳಾರಿ, ಮೈಸೂರು ಪ್ರಾಂತ ಮತ್ತು ಮುಂಬಯಿ ಕರ್ನಾಟಕದಲ್ಲಿ ಹೆಚ್ಚಾಗಿದೆ. ಇನ್ನೂ ಕೊಡ ತೆಗೆದುಕೊಳ್ಳುವ ಸಂಬಂಧ, ಉಡುಪು ತೊಡುಪುಗಳು ಅಷ್ಟೇ. ಅದವಾನಿ ಮತ್ತು ರಾಯದುರ್ಗ ತಾಲೂಕಗಳು ಕನ್ನಡ ಪ್ರಾಂತಗಳಾದ ರಾಯಚೂರು ಮತ್ತು ಮೈಸೂರು ಪ್ರಾಂತಗಳಿಗೆ ಹೊಂದಿಕೊಂಡಿವೆ. ಇಂತಹ ಜಿಲ್ಲೆಯನ್ನು ಇಬ್ಭಾಗ ಮಾಡುವುದಕ್ಕೆ ಪ್ರಯತ್ನಿಸಿದರೆ ಇಲ್ಲಿಯ ಕನ್ನಡಿಗರ ಕಾರ್ಯೋತ್ಸಾಹವು ಇಮ್ಮಡಿಯಾಗುವುದರಲ್ಲಿ ಸಂಶಯವಿಲ್ಲ. ಈ ಪ್ರದೇಶಗಳಲ್ಲಿರುವ ಅನೇಕ ಗ್ರಾಮಗಳ ಹೆಸರುಗಳನ್ನು ಪರಿಶೀಲಿಸಿದರೂ ಕನ್ನಡ ಪ್ರಾಂತಕ್ಕೆ ಸೇರಿದವುಗಳೆಂದು ಹೇಳಬಹುದು. ಉದಾಹರಣೆಗಾಗಿ ಅದವಾನಿ ತಾಲೂಕಿನ ಗಡಿಯಲ್ಲಿರುವ ಗುಡಿಕಲ್ಲು, ಕೋಟೆಕಲ್ಲು, ನಂದವರ, ಯಮ್ಮಿಗನೂರು, ಆಲೂರು ತಾಲೂಕಿನಲ್ಲಿರುವ ಹೊಳಲಗುಂದಿ, ನಾಗನಾಥನಹಳ್ಳಿ, ಹಾಲಹರ್ವಿ, ವಿರುಪಾಪುರ, ಚಿಕ್ಕಹೋತೂರು, ರಾಯದುರ್ಗ ತಾಲೂಕಿನಲ್ಲಿ ಕಣೇಕಲ್ಲು, ಹಿರೇಹಾಳು ಇತ್ಯಾದಿ. ಈ ಮೂರು ತಾಲೂಕಗಳಲ್ಲಿ ಅನೇಕ ಕನ್ನಡ ಶಿಲಾಶಾಸನಗಳಿವೆ. ಬಯಲಾಟ ಮುಂತಾದವುಗಳು ಕನ್ನಡದಲ್ಲಿಯೇ ಪ್ರದರ್ಶಿಸಲ್ಪಡುತ್ತಿವೆ.

ಇನ್ನೂ ಈ ತಾಲೂಕಗಳು ಕರ್ನಾಟಕದಲ್ಲುಳಿಯುವುದರಿಂದಾಗುವ ಲಾಭಗಳು ವಿಚಾರಿಸುವ. ಕರ್ನಾಟಕದಲ್ಲಿ ಖನಿಜ ಮತ್ತು ಅರಣ್ಯ ಸಂಪತ್ತು ಹೇರಳವಾಗಿವೆ. ಜಗತ್ತಿನಲ್ಲೇ ಪ್ರಮುಖ್ಯ ಪಾತ್ರವಹಿಸಿದ 'ಎಲೆಕ್ಟ್ರಿಸಿಟಿ' ಕರ್ನಾಟಕದಲ್ಲಿ ಸಿಕ್ಕುವಂತೆ ಮತ್ತಾವ ಪ್ರಾಂತದಲ್ಲಿ ಸಿಕ್ಕುತ್ತಿಲ್ಲ. ವ್ಯವಸಾಯ ಗೃಹ ಪರಿಶ್ರಮಗಳು ಅತ್ಯುನ್ನತ ಸ್ಥಿತಿಗೆ ತರಲು ಸಾಕಷ್ಟು ಜಲಪಾತಗಳು ನಮ್ಮ ಕರ್ನಾಟಕದಲ್ಲಿವೆ. ಇವುಗರಿಂದ ನಾನಾವಿಧ ಕಾರ್ಖಾನೆಗಳು ಅಭಿವೃದ್ಧಿಗೊಳಿಸಬಹುದು. ವಿದೇಶ ವ್ಯಾಪಾರಕ್ಕೆ ಅನುಕೂಲವಾಗುವಂತಹ ಶ್ರೇಷ್ಠ ಬಂದರುಗಳುಳ್ಳ ಸುಮಾರು 300 ಮೈಲಿನ ಅರೇಬಿಯ ಸಮುದ್ರ ತೀರ ನಮ್ಮ ಕರ್ನಾಟಕಕ್ಕಿವೆ.

ಈ ಅಂಶಗಳನ್ನು ಎಲ್ಲಾ ಕನ್ನಡಿಗರು, ಜನನಾಯಕರು ಲಕ್ಷಿಸಿ ತಮ್ಮ ಶಕ್ತ್ಯಾನುಸಾರ ಕನ್ನಡ ತಾಯಿಯ ಸೇವೆ ಮಾಡಲು ಮುಂದುವರಿಯಬೇಕಾದ ಸಮಯ ಬಂದಿದೆ. ಇನ್ನು ಅಲ್ಪಾವಧಿಯಲ್ಲಿ ಭಾಷಾನುಗುಣ ಪ್ರಾಂತರಚನೆಯಾಗಲಿದ್ದು ಕರ್ನಾಟಕ ಪ್ರಾಂತವು ನಿರ್ಮಾಣವಾಗುವುದು. ಈ ಸ್ವತಂತ್ರ ಕರ್ನಾಟಕದಲ್ಲಿ ಇಡೀ ಬಳ್ಳಾರಿ ಜಿಲ್ಲೆಯು ಸೇರುವಂತೆ ನೋಡಿಕೊಳ್ಳುವ ಭಾರ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಕನ್ನಡಿಗರ ನ್ಯಾಯವಾದ ಈ ಬೇಡಿಕೆಗೆ ಬಾಧಕರುವಂತಹ ಚಟುವಟಿಕೆಗಳು ಈಗಾಗಲೇ ಮುಂದುವರಿದಿವೆ. ಅವುಗಳನ್ನು ಪ್ರತಿಭಟಿಸಲು ಸಕಾಲದಲ್ಲಿ ಜಾಗೃತರಾಗುವುದು ಅತ್ಯಂತ ಅವಶ್ಯಕವಾಗಿದೆ. ಅಲಕ್ಷಿಸಿದರೆ ದಕ್ಷಿಣ ಹಿಂದೂಸ್ಥಾನದಲ್ಲಿ ಮುಖ್ಯ ವ್ಯಾಪಾರಕೇಂದ್ರಗಳಲ್ಲೊಂದಾದ ಅದವಾನಿ, ಆಂಧ್ರರ ಆಡಳಿತೆಯಲ್ಲಿ ಹೋದೀತು! ಕನ್ನಡಿಗರ ಕ್ಷೆ

ಬಿಟ್ಟೀತು! ಇನ್ನಾದರೂ ಕರ್ನಾಟಕ ಏಕೀಕರಣ ಮಹಾ ಸಮಿತಿಯವರು, ಕರ್ನಾಟಕ ಸಂಘಗಳ ಕಾರ್ಯಕರ್ತರೂ, ಸಾಹಿತಿಗಳು ಈ ತಾಲೂಕಗಳಿಗೆ ಮತ್ತೆ ಮತ್ತೆ ಸಂದರ್ಶನವಿತ್ತು ಇಲ್ಲಿಯ ಜನಗಳಲ್ಲಿ ಕನ್ನಡದ ಅಭಿಮಾನವನ್ನು ಜಾಗೃತಗೊಳಿಸಲಿ.

ಎಂ. ಸಿದ್ದಯ್ಯ, ಎಮ್ಮಿಗನೂರು.

## ಕರ್ನಾಟಕ ಏಕೀಕರಣ ಪರಿಷತ್ತು

ಬಳ್ಳಾರಿ ಜಿಲ್ಲಾ ಪೂರ್ವ ತಾಲೂಕಗಳು ಆದವಾನಿ ಆಲೂರು, ರಾಯದುರ್ಗ ಕರ್ನಾಟಕ ಏಕೀಕರಣ ಪರಿಷತ್ತು ಎಮ್ಮಿಗನೂರಲ್ಲಿ (ಆದವಾನಿ] ಜೂನ್ 12ಕ್ಕೆ ಸೇರಲಿದೆ. ಶ್ರೀಮಾನ್ಯ ಕೆ. ಸಿ. ರೆಡ್ಡಿಯವರು, ಮೈಸೂರು ಮುಖ್ಯ ಮಂತ್ರಿಗಳು ಸಮ್ಮೇಳನದ ಪ್ರಾರಂಭೋತ್ಸವ ಮಾಡುವರು. ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷತೆ ವಹಿಸುವರು. ಅದವಾನಿ, ಆಲೂರು, ರಾಯದುರ್ಗ ತಾಲೂಕಗಲು ಕರ್ನಾಟಕಕ್ಕೆ ಸೇರಬೇಕೆಂಬ ಪರಿಷತ್ತಿನ ಧ್ಯೇಯಕ್ಕೊಪ್ಪುವ, ಈ ಮೂರು ತಾಲೂಕುಗಳಲ್ಲಿಯ ಪ್ರತಿಯೊಬ್ಬರು ಪ್ರತಿನಿಧಿಯಾಗಬಹುದು. ಪ್ರತಿನಿಧಿ ಚಂದಾ ರೂ 2-0 0 ಊಟ ಉಚಿತ.

ಎಲ್ಲರು ಎಲ್ಲ ವಿಧವಾಗಿ ಸಹಕರಿಸಲು ವಿನಂತಿ

ಆಹ್ವಾನ ಸಂಘದವರು.

## ಬಳ್ಳಾರಿ ವೀರಶೈವ ಕಾಲೇಜು.

1948 ನೆಯ ಮಾರ್ಚ್ ಇಂಟರ್ಮೀಡಿಯೆಟ್ ಪರೀಕ್ಷಾ ಫಲಿತಾಂಶ (ಮದ್ರಾಸ್ ಯೂನಿವರ್ಸಿಟಿ)

| ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ೭೫ | ಉತ್ತೀರ್ಣರಾದವರು ೨೮ |
|---|---|
| ತೆಲುಗು ವಿದ್ಯಾರ್ಥಿಗಳು 39 ರಲ್ಲಿ | 14 ಉತ್ತೀರ್ಣರಾಗಿ |
| ಕನ್ನಡ ... 27 ,, | 8 ,, (ದ್ವಾರಿ |
| ಉರ್ದು .... 6 ,, | 3 ,, |
| ಸಂಸ್ಕೃತ ... 3 ,, | 3 ,, |

### ಉತ್ತೀರ್ಣರಾದ ವಿದ್ಯಾರ್ಥಿಗಳ ಹೆಸರು.

#### ಪ್ರಥಮ ಶ್ರೇಣಿ.

1) ಹೆಚ್. ಜಯತೀರ್ಥಾಚಾರ್.
2) ಎಸ್. ಎಸ್. ಸನ್ಯಾಸಿರಾಜು.
3) ಟಿ. ಎಸ್. ಸೀತಾರಾಮನ್.
4) ಎಸ್. ವಿ. ಕೃಷ್ಣಮೂರ್ತಿ.
5) ಕೆ. ಟಿ. ಮನ್ನಾರ್.
6) ಅಬ್ದುಲ್ ರಾವುಫ್.
7) ಅಬ್ದುಲ್ ಸುಕ್ಕೂರ್.

#### ದ್ವಿತೀಯ ಶ್ರೇಣಿ

1) ಎಸ್. ಹನುಮಂತರಾವು.
2) ಸಿ. ಜಿ. ಪಟ್ಟಾಭಿಶೇಕರಾಮನ್.
3) ಬಿ. ರಾಧಾಕೃಷ್ಣ
4) ಎ. ರಾಮಚಂದ್ರನ್.
5) ಡಿ ರಮೇಶಚಂದ್ರಬಾಬು.
6) ಡಿ. ವೆಂಕೋಬರಾವ್.
7) ಜಿ. ಕೃಷ್ಣರಾವ್.
8) ರಾಮಚಂದ್ರಪ್ಪ
9) ಜಿ. ವೆಂಕೋಬರಾವ್
10) ಎನ್. ನರಸಿಂಹುಲು.
11) ಎಸ್. ನಾಗರಾಜನ್.
12) ಎನ್. ರಾಮಚಂದ್ರರಾವ್.
13) ಕೆ. ರಾಮಮೂರ್ತಿ.
14) ಕೆ. ಶ್ರೀನಿವಾಸಮೂರ್ತಿ.
15) ಹೆಚ್. ರಾಮದಾಸರೆಡ್ಡಿ.
16) ಖಾಜಾಮೊಹಿದೀನ್.
17) ಅನ್ನದಾನಪ್ಪ.
18) ವೈ. ಬಸವರಾಜ್.
19) ಬಿ. ಸದಾಶಿವ್
20) ಸಿದ್ದರಾಮಪ್ಪ
21) ಹೆಚ್ ಜಂಬನಗೌಡ

## ಮಹಾತ್ಮ ಗಾಂಧಿ ನಿಧಿ.

ಭಾರತದ ಮುಖ್ಯ ಉದ್ಯೋಗಿಕ ಪ್ರತಿನಿಧಿಗಳು ಸರ್ದಾರ ವಲ್ಲಭಭಾಯಿ ಪಟೇಲರ ಬಳಿ ಸಮಾವೇಶವಾಗಿ ತಮ್ಮ ಪರವಾಗಿ ಐದು ಕೋಟಿ ರೂಪಾಯಿಗಳಷ್ಟು ಸಂಗ್ರಹಿಸಲು ನಿಶ್ಚಯಿಸಿದರು. ಸೌರಾಷ್ಟ್ರದ ರಾಜಪ್ರಮುಖರು 30 ಲಕ್ಷ ರೂಪಾಯಿಗಳು ಸಂಗ್ರಹಿಸಲು ನಿರ್ಧರಿಸಿದರು.

## ಕರ್ನಾಟಕ ಮತ್ತು ಮೈಸೂರು ಮಹಾರಾಜರು

ಮೈಸೂರನ್ನೊಳಗೊಂಡ ಏಕತಂತ್ರ ಅಖಂಡ ಕರ್ನಾಟಕ ಪ್ರಾಂತವಾದ ಪಕ್ಷದಲ್ಲಿ ಮೈಸೂರು ಮಹಾರಾಜರನ್ನೆ ಶಾಸನಬದ್ಧ ಅರಸರನ್ನಾಗಿಟ್ಟುಕೊಳ್ಳಲು ಅಡ್ಡಿ ಇಲ್ಲ ಎಂಬ ಅಭಿಪ್ರಾಯವು ಈಗ ಬಲಗೊಳ್ಳುತ್ತಿದೆ. ಮೈಸೂರು ಕರ್ನಾಟಕ, ಯೂನಿಯನ್ ಕರ್ನಾಟಕ ಎಂಬ ಎರಡು ಪ್ರತ್ಯೇಕ ತುಂಡುಗಳನ್ನಿಟ್ಟುಕೊಳ್ಳಬೇಕೊ ಅಥವಾ ಮಹಾರಾಜರನ್ನು ಒಪ್ಪಿಯಾದರೂ ಒಂದೇ ಕರ್ನಾಟಕವನ್ನು ಮಾಡಬೇಕೋ ಎಂಬ ಪ್ರಶ್ನೆ ಎದುರಾದಾಗ ಪ್ರತಿಯೊಬ್ಬ ಕರ್ನಾಟಕನೂ ಎರಡನೆ ಮಾತಿಗೆ ಒಪ್ಪುವ ಪ್ರಸಂಗ ಬರುವದು ಸಾಧಾರಣವಾಗಿ ಸಮಬಲವಾದ ಎರಡು ಕರ್ನಾಟಕ ಪ್ರಾಂತಗಳನ್ನಿಟ್ಟುಕೊಂಡು (ಮೈಸೂರು ಮತ್ತು ಯೂನಿಯನ್ ಕರ್ನಾಟಕ) ಪರಸ್ಪರ ಮೇಲಾಟಗಳನ್ನು ಮಾಡುತ್ತ, ಮಧ್ಯವರ್ತಿ ಸರಕಾರದಲ್ಲಿ ಸಾಕಷ್ಟು ವರ್ಚಸ್ಸನ್ನು ಬೀರಲಾರದೆ, ಅಖಂಡ ಕರ್ನಾಟಕಕ್ಕಾಗಿ ಮಹಾಯೋಜನೆಗಳನ್ನು ಕೈಕೊಂಡ ಎರಡು ಕೋಟಿ ಕರ್ನಾಟಕರ ಹಿತವನ್ನು ಏಕಕಾಲಕ್ಕೆ ಸಾಧಿಸಲನುವಾಗದೆ, ಇರಬೇಕೊ ಅಥವಾ ಮಹಾರಾಜರನ್ನಿಟ್ಟುಕೊಂಡು ಏಕತಂತ್ರ ಕರ್ನಾಟಕವನ್ನು ಸಾಧಿ-ಬೇಕೋ ಎಂಬ ಸಮಸ್ಯೆ ಉಂಟಾದಾಗ ಶಾಸನಬದ್ಧ ಮಹಾರಾಜರನ್ನು ಇಟ್ಟುಕೊಂಡಾದರೂ ಏಕತಂತ್ರ ಕರ್ನಾಟಕವನ್ನು ಸಾಧಿಸುವದು ಹೆಚ್ಚು ಮಹತ್ವದ್ದೆಂಬುದು ಸ್ಪಷ್ಟವು.

ಮೇಲಾಗಿ ಕೇವಲ ಶಬ್ದಗಳಿಂದ ಯಾರೂ ಬೆದರಿ ಹೋಗುವ ಕಾರಣವಿಲ್ಲ. ಶಾಸನಬದ್ಧ ಅರಸರನ್ನಿಟ್ಟುಕೊಂಡ ಇಂಗ್ಲಂಡದಲ್ಲಿ ಪ್ರಜಾಪ್ರಭುತ್ವವು ಕಡಿಮೆ ಇದೆ ಫ್ರಾನ್ಸದೇಶದಲ್ಲಿ ಹೆಚ್ಚು ಇದೆ ಎಂದು ಯಾರೂ ಹೇಳಲಾರರು. ಮಹಾರಾಜನೇ ಆಗಲಿ, ಅರಸನೆ ಆಗಲಿ, ಯಾವದೇ ಒಂದು ರಾಷ್ಟ್ರದ ಪ್ರಮುಖನೆ ಆಗಲಿ, ಅವನಲ್ಲಿ ಅಧಿಕಾರವೆಷ್ಟು ಇದೇ ಮುಖ್ಯಮಾತು ಹೊರತು ಅವನ ಹೆಸರಿನಿಂದ ಯಾವ ಪ್ರಯೋಜನವೂ ಇಲ್ಲ. ಹಿಟ್ಲರನು ಮಹಾರಾಜನಿದ್ದಿಲ್ಲ, ಈಗ ಸ್ಟಾಲಿನ್ನನೂ ಮಹಾರಾಜನಲ್ಲ. ಆದರೆ ಅವರು ನಿರಂಕುಶರಾದುದರಿಂದ ಮಹಾರಾಜಾಧಿರಾಜರೆಂತ ಅವರನ್ನೆಲ್ಲ ಮೆಟ್ಟಿ ಹಾರುವಷ್ಟು ಅಧಿಕಾರವನ್ನು ನಡೆಸುವರು. ಹಿಟ್ಲರನಂತೂ ಅಂಥ ಅಧಿಕಾರವನ್ನು ನಡೆಯಿಸಿ ಜರ್ಮನಿಯ ನಾಶಕ್ಕೆ ಸಂಪೂರ್ಣ ಕಾರಣನಾದ!

ಇದಲ್ಲದೆ ಮೈಸೂರು ಮಹಾರಾಜರಾಗಲಿ ಜನತೆಯಾಗಲಿ ಅಷ್ಟೊಂದು ದಡ್ಡರೆಂದು ಯಾಕೆ ತಿಳಿದುಕೊಳ್ಳಬೇಕು? ಅನುಭೋಗರಾಜ್ಯಾಂಗ ರಚನೆಯ ಪ್ರಥಮ ಗೊತ್ತುವಳಿಯಲ್ಲಿಯೆ ಮಹಾರಾಜರನ್ನೊಪ್ಪಿಕೊಂಡಿರುವದೇನೊ ನಿಜ. ಆದರೆ ಪ್ರಜಾಸ್ವಾತಂತ್ರ್ಯದ (ಸಾವ್ಹರಿನ್ಟಿ ಆಫ ದಿ ಪೀಪಲ್) ತಳಹದಿಯ ಮೇಲೆ ಶಾಸನಬದ್ಧವಾಗಿ ಕೆಲಸ ಮಾಡಲೊಪ್ಪಿದ ಅರಸರನ್ನು ಅವರಿಟ್ಟುಕೊಂಡಿರುವರೆ ಹೊರತು ನಿರಂಕುಶ ರಾಜರನ್ನು ಅವರು ಒಪ್ಪಿಲ್ಲ. ಈ ಮಾತನ್ನು ಮರೆತು ಕೇವಲ ಅರಸರು ಮಹಾರಾಜರು ಎಂಬ ಶಬ್ದಗಳಿಂದ ಭಯಭೀತರಾಗುವದು ಜಾಣರ ಲಕ್ಷಣವಲ್ಲ. ಹುಲಿ, ಕರಡಿ, ಸಿಂಹ ಮುಂತಾದ ಮೃಗಗಳು ಭಯಾನಕವಾದವುಗಳೆಂಬಲ್ಲಿ ಸಂಶಯವಿಲ್ಲ. ಆದರೆ ಸರ್ಕಸ್ಸಿನೊಳಗಿನ ಹುಲಿ ಕರಡಿಗಳನ್ನು ಕಂಡು ಯಾರಾದರೂ ಓಡಲಾರಂಭಿಸಿದರೆ ಅವರಿಗೆ ಏನನ್ನಬೇಕು? (ದಿವಾಕರ್)

## ಭಾಷಾನುಗುಣ ಪ್ರಾಂತ ವಿಚಾರಣಾ ಸಮಿತಿ.

### ಮದ್ರಾಸ ಸರಕಾರದ ಸೂಚನೆ.

ಘಟನಾ ಸಮಿತಿಯ ಅಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರು ಪ್ರಾಂತಗಳನ್ನು ಭಾಷಾನುಗುಣವಾಗಿ ಪುನರ್ಘಟಿಸುವ ಬಗ್ಗೆ ಬೇಗ ಒಂದು ಸಮಿತಿಯನ್ನು ನಿಯಮಿಸಲಿದ್ದಾರೆ. ಆ ಸಮಿತಿಗೆ ಸಹಾಯಕ ಸಭಾಸದರೆಂದು ಮದ್ರಾಸ ಸರಕಾರದವರು ಮದ್ರಾಸ ಪ್ರಾಂತದ ಪ್ರತಿಯೊಂದು ಭಾಷಾನುಗುಣ ವಿಭಾಗದಿಂದ ಒಬ್ಬರಂತೆ ಕೆಳಗಿನ ಜನರನ್ನು ಸೂಚಿಸಿರುವರೆಂದು ತಿಳಿಯುತ್ತದೆ.

(1) ತಮಿಳುನಾಡಿಗಾಗಿ ಶ್ರೀ ಟಿ. ರಾಮಲಿಂಗಂ ಚೆಟ್ಟಿಯಾರು, ಎಂ. ಎಲ್. ಎ. (ಕೇಂದ್ರ) (2) ಆಂಧ್ರಕ್ಕಾಗಿ ಶ್ರೀ ಆರ್. ರಾಮಕೃಷ್ಣರಾಜು (ಮದ್ರಾಸು ವಿಧಿಮಂಡಳದ ಅಧ್ಯಕ್ಷರು) (3) ಕೇರಳಕ್ಕಾಗಿ ಶ್ರೀ ಎಂ. ನಾರಾಯಣ ಮೆನನ್ (ಮದ್ರಾಸ ವಿಧಿಮಂಡಳದ ಸದಸ್ಯರು) (4) ಕರ್ನಾಟಕಕ್ಕಾಗಿ ಶ್ರೀ ಟಿ. ಸುಬ್ರಹ್ಮಣ್ಯಂ ಒಳ್ಳಾರಿ

# ಇಲಿ, ಮಿಡಚಿಗಳ ಮೇಲೆ ರಾಮಬಾಣ

## ಕುರಿಗಳ ಒಳಗ ಹೆಚ್ಚಿಸುವ ಉಪಾಯ

### ಇಲಿಗಳ ಕಾಟಕ್ಕೆ ಉಪಾಯ

ಜೋಳದ ಹೊಲಗಳಲ್ಲಿ ಬಿತ್ತಿದೊಡನೆ ಇಲಿಗಳು ಬೀಜವನ್ನಾರಿಸಿ ತಿಂದು ಇಲ್ಲವೆ ಸಸಿಗಳನ್ನು ನಾಶಪಡಿಸಿ ರೈತನಿಗೆ ಕಾಟ ಕೊಡುವದುಂಟು. ಬಿತ್ತನೆಯು ತೀರ ಸಮೀಪಿಸಿದಂತೆ ರೈತಗೆ ಈ ಚಿಂತೆ ಸಹಜವಾಗಿ ಬರುತ್ತದೆ ಧಾರವಾಡ ಜಿಲ್ಲಾ ಒಕ್ಕಲತನ ಅಧಿಕಾರಿ ಶ್ರೀ ಬಿ. ವಿ. ಯಲಿಗಾರರು ಈ ಬಗ್ಗೆ ಕೆಲ ಸೂಚನೆಗಳನ್ನು ಕೊಟ್ಟಿದ್ದಾರೆ ಪ್ರತಿ ತಾಲೂಕಿನಲ್ಲಿರುವ ಅಗ್ರಿಕಲ್ಚರಲ್ ಅಸಿಸ್ಟಂಟ ಹಾಗು ಕಾರ್ಯಕರ್ತರಲ್ಲಿ "ಬೇರಿಯಂ ಕಾರ್ಬೋನೇಟ" ಎಂಬ ವಿಷದ ಪುಡಿ ಪೌಂಡಿಗೆ 0-10-6 ಯಂತೆ ಸಿಗುತ್ತದೆ. ಔಷಧ ಅಂಗಡಿಗಳಲ್ಲಿಯೂ ಬೇಕಾದರೆ ಕೊಳ್ಳಬಹುದು ಈ ಪುಡಿ 1 ಪಾಲು, ಬಿಳಿ ಜೋಳದ ಹಿಟ್ಟು 8 ಪಾಲು ಮತ್ತು ಕೆಂಗಾದ ಕಾಳಿನ ಪುಡಿ ಅರ್ಧ ಪಾಲು ಹೀಗೆ ಸೇರಿಸಿ ತುಸು ನೀರು ಬೆರಸಿ ಸಣ್ಣ ಗೋಲಿ ಗುಂಡಿನಷ್ಟು ಆಕಾರದ ಗುಳಿಗೆಯನ್ನು ಮಾಡಬೇಕು. ಹೊಲದಲ್ಲಿರುವ ಪ್ರತಿಯೊಂದು ಇಲಿಯ ಬಿಲದಲ್ಲಿ (ಗುದ್ದ) ಎರಡು ಮೂರು [illegible] ಗುಳಿಗೆಯಂತೆ ಹಾಕಬೇಕು. ಇದನ್ನು ತಿಂದ ಇಲಿಗಳೆಲ್ಲ ನಿಶ್ಚಯವಾಗಿ ನಾಶವಾಗುವವು ಬಿತ್ತುವ ಮೊದಲೇ ಈ ಉಪಾಯ ಮಾಡಿದರೆ ಪೀಕಿನಲ್ಲಿ ನೂರಕ್ಕೆ 5[illegible] ವರೆಗೂ ಆಗಬಹುದಾದ ಹಾನಿಯನ್ನು ಉಳಿಸಬಹುದು. ಒಟ್ಟಾರೆ, ಎಕರೆ ಹೊಲಕ್ಕೆ ಅರ್ಧ ಪೌಂಡು ವಿಷ ಪುಡಿ ಬೇಕಾದೀತು. ಇದು ಭಯಂಕರ ವಿಷವಾದ್ದರಿಂದ ಔಷಧ ತಯಾರಿಸಿದೊಡನೆ ಕೈಯನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು ಮಕ್ಕಳ ಕೈಗೆ ಗುಳಿಗೆಗಳ ಬೀಳದಂತೆ ಎಚ್ಚರಿಕೆಯಿರಲಿ.

### ಮಿಡಿಚಿಗಳಿಗೆ ರಾಮಬಾಣ

ಮಿಡಿಚಿಗಳೇನು ಜೋಳದ ಬೆಳೆಗಳಿಗೆ ಚಿಲ್ಲರೆ ಕೀಟಗಳಲ್ಲ ಅವುಗಳ ಹಾವಳಿಯನು ತಡೆಯಲು ಚೀಲಗಳನ್ನೆಳೆಯುವದೇ ಮೊದಲಾದ ಉಪಾಯಗಳನ್ನು ಈವರೆಗೆ ಕೈಕೊಳ್ಳಲಾಗುತ್ತಿತ್ತು ಆದರೆ ಅವು ಪೂರ್ಣ ಯಶಸ್ವಿಯಾಗಿರಲಿಲ್ಲ. ಕಳೆದ ಒಂದು ವರ್ಷದಿಂದ ಒಕ್ಕಲತನ ಖಾತೆಯವರು ಪ್ರಯೋಗನಡೆಸಿ ಮಿಡಚಿಗಳ ವಂಶವನ್ನೇ ನಾಶಮಾಡುವ ಹಾದಿಯನ್ನು ಕಂಡುಹಿಡಿದಿದ್ದಾರೆಂದು ಶ್ರೀ ಯಲಿಗಾರರು ಪ್ರಸಿದ್ಧಿಸಿದ್ದಾರೆ. ಯೋಗ್ಯ ವೇಳೆಯಲ್ಲಿ "ಹೆಕ್ಸ್ಯಾಕ್ಸ್" ಎಂಬ ವಿಷದ ಪುಡಿಯನ್ನು ಬೆಳೆಯ ಮೇಲೆ ಹೊಡೆದರೆ ಮಿಡಿಚಿಗಳು ನಾಶವಾಗಿ ಹೋಗುವವು. ಎಕರೆಗೆ 12 ಪೌಂಡ ಪುಡಿ ಬೇಕಾಗುತ್ತಿದ್ದು ಅದರ ಬೆಲೆ ಪೌಂಡಿಗೆ 0-4-10 ಇದ್ದರೂ ಧಾರವಾಡ ಜಿಲ್ಹೆಯಲ್ಲಿ ಮಿಡಿಚಿಗಳು ನಡೆಸುವ ಉಪದ್ರವವನ್ನು ಲಕ್ಷಿಸಿ ಸರಕಾರದವರು ಜಿಲ್ಹೆಯಲ್ಲಿ 10 ಕೇಂದ್ರಗಳನ್ನು ತೆರೆದು ರೂಪಾಯಿಗೆ 10 ಪೌಂಡಿನಂತೆ ಅಗ್ಗವಾಗಿ ಈ ಪುಡಿಯನ್ನು ಮತ್ತು ಅದನ್ನು ಹೊಡೆಯುವ ಡಸ್ಟರುಗಳನ್ನು ಆ ಕೇಂದ್ರಗಳಲ್ಲಿ ಎಕರೆಗೆ 0-10-0 ವೆಚ್ಚ ಹಿಡಿಯುವದು ರೈತರು ಒಬ್ಬೊಬ್ಬರಾಗಿ ಇದರ ಉಪಯೋಗ ಪಡೆವ ಬದಲು ಅಲ್ಲಲ್ಲಿ ಸಂಘಟಿತರಾಗಿ ಕೆಲಸ ನಡೆಸುವದು ಲಾಭಕರ ಪ್ರತಿ ಕೇಂದ್ರದಲ್ಲಿರುವ ಅಧಿಕಾರಿಗಳು ಅದನ್ನು ಉಪಯೋಗಿಸುವ ಕ್ರಮವನ್ನು ತೋರಿಸಿಕೊಡುವರು. ಬೇರೆ ಜಿಲ್ಹೆಯವರೂ ಈ ಪುಡಿಯ ಉಪಯೋಗವನ್ನು [illegible]ವಾಗಿ ಮಾಡಿ ಮಿಡಿಚೆಯನ್ನು ನಿರ್ನಾಮಮಾಡಬಹುದು.

### ಟ್ರ್ಯಾಕ್ಟರುಗಳ ಮೇಲೆ ದೂರು

ಯುರೋಪ ಮತ್ತು ಅಮೇರಿಕ ದೇಶಗಳಲ್ಲಿ ಟ್ರ್ಯಾಕ್ಟರುಗಳನ್ನು (ಉಳು ಯಂತ್ರ) ಉಪಯೋಗಿಸಿ ರೈತರು ಲಾಭ ಪಡೆದಂತೆ ನಾವೂ ಪಡೆಯಬೇಕೆಂದು ರೈತರಿಗೆ ಮೇಲಿಂದ ಮೇಲೆ ಉಪದೇಶ ಕೊಡಲಾಗುತ್ತಿದೆ. ಟ್ರ್ಯಾಕ್ಟರ ಉಳುಮೆಯಿಂದ ಹೊಲದ ಕಂಕೆ (ಕಳೆ) ನಾಶವಾಗುವದೆಂದು ಅದರ ಗುಣವನ್ನು ಬಣ್ಣಿಸುತ್ತಾರೆ.

ಆದರೆ ಕಾಲವಾಡದ (ಧಾರವಾಡ ಜಿಲ್ಲೆ) 40 ರೈತರು ಕಳೆದ ವರ್ಷ ಸರಕಾರದ ಟ್ರ್ಯಾಕ್ಟರದಿಂದ ಸುಮಾರು ಒಂದು ಸಾವಿರ ಎಕರೆ ಭೂಮಿಯ ಉಳುಮೆ ಮಾಡಿಸಿ ಬೇರೆಯ ಅನುಭವ ಪಡೆದರು. ಕರಿಕೆ ನಾಶವಾಗುವ ಬದಲು ಅದು ತಿರುಗಿ ಚಿಗಿತು 8-10 ಸಾವಿರ ರೂ. ಖರ್ಚು ಮಾಡುವ ಮೊದಲಿದ್ದ ಸ್ಥಿತಿಯಲ್ಲೇ ಹೊಲಗಳು ಉಳಿದವೆಂದು ಆ ರೈತರು ಸರಕಾರಕ್ಕೆ ದೂರಿಕೊಂಡಿದ್ದಾರೆ. ಟ್ರ್ಯಾಕ್ಟರು ಉಳುಮೆಯಲ್ಲೇ ಮೂಲಭೂತ ದೋಷಗಳಿವೆಯೆಂದು ತೋರುವದಿಲ್ಲ. ಆದರೆ 15 ಇಂಚಿನಷ್ಟು ಭೂಮಿಯಲ್ಲಿ ಇಳಿಯಬೇಕಾಗಿದ್ದ ನೇಗಿಲು 6 ರಿಂದ 10 ಇಂಚಿನ ವರೆಗೆ ಮಾತ್ರ ಇಳಿದದ್ದರಿಂದ ಕರಿಕೆ ಬೇರು ಸಹಿತ ಕಿತ್ತು ಬರಲಿಲ್ಲವೆಂದೂ ಆದರಿಂದ ಅದಕ್ಕೆ ತಿರುಗಿ ಚಿಗುರಲು ಅವಕಾಶದೊರೆಯಿತೆಂದು ಅವರು ಹೇಳುತ್ತಾರೆ. ಈ ಎಲ್ಲ ಸಂಗತಿಗಳು ಈ ಹೊಸ ಉಪಕರಣಗಳ ನಿರುಪಯುಕ್ತತೆಯನ್ನು ಸಿದ್ಧಮಾಡಿ ತೋರಿಸುವದಿಲ್ಲವಾದರೂ ಅನುಭವವಿಲ್ಲದವರು ಈ ಹೊಸ ಪ್ರಯೋಗಗಳಿಗೆ ಕೈಹಾಕಿದರೆ ಅವು ಯಶಸ್ವಿಯಾಗುವದು ಕಠಿಣವೆಂದು ಇದರಿಂದ ಗೊತ್ತಾಗುತ್ತದೆ. ಬೋರೇಗೌಡ ಸ್ವಭಾವಿಕವಾಗಿ ಇದ್ದಂತೆ ಇರಲಿ ಎಂಬ ಮನೋವೃತ್ತಿಯವ. ಎಲ್ಲ ಬದಲಾವಣೆಗಳನ್ನು ಅವನು ಹೊಸಪದ್ಧತಿಗೆ ಒಲಿಯಬೇಕಾದರೆ ಒಕ್ಕಲತನ ಶಾಖೆಯ ಕಾಗದದ ಕುದುರೆಗಳ ಓಡಾಟ ಸಲದು. ಯಾರಾದರೂ ಹೊಸ ಪದ್ಧತಿಗಳನ್ನು ಪ್ರಯೋಗದಲ್ಲಿ ತೋರಿಸಿ ಅವು ನಿಜವಾಗಿ ಹಳೆ ಪದ್ಧತಿಗಿಂತ ಹೊಸದು ಲಾಭಕರವೆಂದು ತೋರಿಸಿಕೊಡಬೇಕು. ನಮ್ಮ ಒಕ್ಕಲತನ ಕಾಲೇಜಿನಿಂದ ಹೊರಬೀಳುವ ವಿದ್ಯಾರ್ಥಿಗಳು ಸರಕಾರಿ ನೌಕರಿಗೆ ಕೈಚಾಚಿ "ಸಾಹೇಬಗಿರಿ" ನಡೆಸುವ ಹವ್ಯಾಸ ಬಿಟ್ಟು ಬಿಡಬೇಕು ಮತ್ತು ತಮ್ಮ ಹಳ್ಳಿಗಳಿಗೆ ಮರಳಿ ಸ್ವಂತ ಹೊಲಗಳಲ್ಲಿ ಹೊಸ ಪದ್ಧತಿಯನ್ನು ವ್ಯಾಪಾರಿ ದೃಷ್ಟಿಯಿಂದ ಉಪಯೋಗಿಸಿ ಅವುಗಳ ಯೋಗ್ಯತೆಯನ್ನು ಹಳೆ ಪದ್ಧತಿಗೆ ಕಟ್ಟುಬಿದ್ದವರಿಗೆ ತೋರಿಸಿಕೊಡಬೇಕು. ಇಲ್ಲದಿದ್ದರೆ ಒಕ್ಕಲತನದ ಸುಧಾರಣೆಯೇನೂ ಕಾಗದದಲ್ಲೇ ಉಳಿಯುವದು ನಿಶ್ಚಯ.

## ಕುರಿಗಳ ವಂಶಾಭಿವೃದ್ಧಿ

ಕುರಿಗಳ ಸಂಖ್ಯೆಯನ್ನು ಹೆಚ್ಚಿಸಲು ಒಂದು ಉಪಾಯವನ್ನು ರಶಿಯಾದ ಪ್ರೊ. ಝವಡೋಸ್ಕಿಯವರು ಕಂಡುಹಿಡಿದಿದ್ದಾರೆ. ನಮ್ಮ ಬಡ ಕುರುಬರಿಗೆ ಈ ಸಂಶೋಧನೆಗಳ ಉಪಯೋಗ ಸಿಗಬೇಕಾದರೆ ಎಷ್ಟು ವರ್ಷವೋ. ಆದರೂ ನಮ್ಮ ಕುರುಬರಿಗೆ ಇಂಥ ಸಂಗತಿಗಳು ರುಚಿಸಬಹುದೆಂದು ಇಲ್ಲಿ ಅವರ ಉಪಾಯದ ಸಾರವನ್ನು ಇಲ್ಲಿ ಕೊಡುವೆವು. ಹೆಣ್ಣು ಕುರಿ ಸಾಧಾರಣವಾಗಿ ಒಂದು ಬಾರಿಗೆ ಒಂದೇ ಮರಿ ಇಡುತ್ತದೆ. ಅಪರೂಪವಾಗಿ ಎರಡು ಮರಿ ಇಡುವದುಂಟು. ಸಂಯೋಗವಾಗುವಾಗ ಗರ್ಭಾಶಯದಲ್ಲಿದ್ದ ಬೆಳೆದ ಅಂಡಗಳ ಸಂಖ್ಯೆಯನ್ನೇ ಮರಿಗಳ ಸಂಖ್ಯೆ ಅವಲಂಬಿಸುತ್ತದೆ. ಈ ಬೆಳೆದ ಹೆಣ್ಣು ಕುರಿಯ ಚರ್ಮದೊಳಗೆ ಶ್ಲೇಷ್ಮದ ಇಂಜಕ್ಷನ (ಪ್ರಾಣಿಗಳಲ್ಲಿ ಬೆಳವಣಿಗೆಯನ್ನುಂಟು ಮಾಡುವಗೋಸ್ಕರ ತಲೆಯಲ್ಲಿರುವ ಒಂದು ಗ್ರಂಥಿಯಿಂದ ಶ್ಲೇಷ್ಮರಸ ಹೊರಡುತ್ತದೆ) ಕೊಟ್ಟರೆ ಕುರಿಯ ಗರ್ಭಾಶಯದಲ್ಲಿ ಅನೇಕ ಅಂಡಗಳು ಬೇಗನೆ ಬೆಳೆಯುವವು. ಆ ಮೇಲೆ ಅದರೊಡನೆ ಟಗರಿನ ಸಂಯೋಗ ಮಾಡಿಸಿದರೆ ಮೂರು, ನಾಲ್ಕು ಒಮ್ಮೊಮ್ಮೆ ಏಳು ಮರಿಗಳು ಹುಟ್ಟುವವು. ರಶಿಯಾದಲ್ಲಿ ಈ ಉಪಾಯವನ್ನು 20 ಲಕ್ಷ ಕುರಿಗಳ ಮೇಲೆ ಪ್ರಯೋಗಿಸಿ ಕನಿಷ್ಠ 5 ಲಕ್ಷ ಕುರಿಮರಿಗಳನ್ನು ಹೆಚ್ಚಿಸಲಾಗಿದೆ.

ಇಂಜಕ್ಷನ್ನಿಗೆ ಬೇಕಾದ ರಸವನ್ನು ಇಲಿಯಿಂದ ತೆಗೆಯಲಾಗುತ್ತದೆ.

(ಕರ್ಮವೀರ)

## ವೈಶ್ಯ ವಿದ್ಯಾರ್ಥಿಗಳಿಗೆ ವೇತನ

ಔದ್ಯೋಗಿಕ ಮತ್ತು ಯಾಂತ್ರಿಕ ಸಂಬಂಧವಾದ ಶಿಕ್ಷಣವನ್ನು ಹೊಂದಲು ಈ ದೇಶದಲ್ಲಾಗಲಿ ಪರದೇಶದಲ್ಲಾಗಲಿ ದ್ರವ್ಯಸಹಾಯವನ್ನಪೇಕ್ಷಿಸುವ ಬಡ ವೈಶ್ಯ ವಿದ್ಯಾರ್ಥಿಗಳು 15ನೆಯ ಜೂನ್‌ದೊಳಗಾಗಿ ನಮ್ಮಲ್ಲಿ ದೊರೆಯುವ ಛಾಪಿಸಿದ ಅರ್ಜಿಗಳ ಮೇಲೆ ನಮಗೆ ಬರೆದುಕೊಳ್ಳತಕ್ಕದ್ದು.

ಡಿ. ಯಲ್. ಗಂಗಾಧರಶೆಟ್ಟಿ,
ಪ್ರಧಾನ ಕಾರ್ಯದರ್ಶಿ,
ಮದ್ರಾಸ್ ಪ್ರಾಂತೀಯ ವೈಶ್ಯ ವಿದ್ಯಾನಿಧಿ ಸಂಘ
ಬಳ್ಳಾರಿ.

## ಭಾಷಾವಾರ ಪ್ರಾಂತಗಳು ಮತ್ತು ಭಾರತದ ಐಕ್ಯ

ಕಳೆದ ವಾರ "ಪ್ರಭಾತ" ಚಿತ್ರಮಂದಿರದಲ್ಲಿ ಸಮಾವೇಶವಾದ ಕೆಲ ಮಿತ್ರವರ್ಗದ ಸಭೆಯಲ್ಲಿ ಶ್ರೀ ಎನ್. ಮೃತ್ಯುಂಜಯಶಾಸ್ತ್ರಿಯವರು ಮೋಕ್ಷಾಣಿಸಿದ ಅಭಿದಾನದ ಮೇಲೆ ಒಂದುಪನ್ಯಾಸವಿತ್ತರು. ಅದು ದೀರ್ಘವಾಗಿದ್ದು ಅದರ ಮುಖ್ಯಾಂಶಗಳನ್ನು ಈ ಕೆಳಗೆ ಕೊಡಲಾಗಿದೆ.

ದೇಶದ ವಿಭಜನೆಯ ನಂತರ ಮತ್ತೆ ವಿಭಜಿಸಿ ಪ್ರಾಂತೀಕರಣ ಮಾಡುವುದು ನ್ಯಾಯವೂ ಯುಕ್ತವೂ ಆದೀತೇ ಎಂಬ ಬಗ್ಗೆ ಗವರ್ನರರಾದ ಕಾಟ್ಜುರವರ ಭಾಷಣವನ್ನು ನಾವು ಗಮನಿಸಬೇಕಾಗಿದೆ. ಅಲ್ಪ ಸಂಖ್ಯಾಕರು ಬಹು ಸಂಖ್ಯಾಕರು ಎಂಬುದನ್ನು ನಿರ್ಣಯಿಸಿ ಭಾಷಾವಾರ ದೃಷ್ಟಿಯಿಂದ ಪ್ರಾಂತಗಳನ್ನು ವಿಭಜಿಸುವುದು ಅಪಾಯಕಾರಕವೆಂದೂ ಈಗಾಗಲೇ ಭಾರತವು ವಿಭಜನೆಯಿಂದ ತಾಳಲಾರದ ನೋವನ್ನನುಭವಿಸುತ್ತಿರುವದೆಂದೂ ಕಾಟ್ಜುರವರು ಹೇಳಿದ್ದಾರೆ. ಪಂಡಿತ ನೆಹರೂ ವಗೈರೆ ಮುಖಂಡರೆಲ್ಲಾ ಪ್ರಾಂತೀಯತೆಯನ್ನು ಖಂಡಿಸಿರುವರು. ಭಾಷಾವಾರ ದೃಷ್ಟಿಯಿಂದ ಪ್ರಾಂತಗಳನ್ನು ವಿಭಜಿಸಿ ಕೆಲಸ ಸಾಗಿಸುತ್ತಿರುವ ಕಾಂಗ್ರೆಸ್ ಸಂಸ್ಥೆಯು ಸಂಬಂಧಿಸಿದ ಶಾಸನ ಸಭ್ಯರನ್ನು ಮಾತಾಡದಂತೆ ಬಂಧಿಸಿದೆ. ಈ ಕಾರಣ ಇಂಥವರ ಮತದಾನದಿಂದ ಶಾಸನಸಭೆಗಳಲ್ಲಿನ ನಿರ್ಣಯಗಳು ಆಗಿರುವ ಕಾರಣ ಅವು ಪ್ರಾತಿನಿಧಿಕವಾಗುವದಿಲ್ಲ. ಆರ್ಥಿಕ ಮತ್ತು ರಾಜಕೀಯ ತಳಹದಿಗಳ ಮೇಲೆಯೇ ಪ್ರಾಂತಗಳಾಗಬೇಕಲ್ಲದೆ ಭಾಷೆಯ ದೃಷ್ಟಿಯಿಂದಾಗಬಾರದು ಇದನ್ನು ಘಟನಾ ಸಮಿತಿಯವರು ಲಕ್ಷಿಸಬೇಕು.

ಚರಿತ್ರೆಯಲ್ಲಿ ಇಂಥಾ ಉದಾಹರಣೆಗಳೇ ಇಲ್ಲ. ಅಮೇರಿಕಾ ಮತ್ತು ಕೆನಡಾ ದೇಶದಲ್ಲಿ ಭಾಷಾವಾರ ವಿಭಜನೆಯೇ ಇಲ್ಲ. ರಷ್ಯಾ-ಜರ್ಮನಿ ದೇಶಗಳಲ್ಲಿ ಬಹು ಭಾಷಾಪ್ರದೇಶಗಳಿವೆ. ಅವರು ಆರ್ಥಿಕಕ್ಕೆ ಹೆಚ್ಚು ಮಹತ್ವ ಕೊಟ್ಟಿರುವರು. ಭಾರತವು ಒಂದು ದೇಶ, ಭೌಗೋಲಿಕ, ಚಾರಿತ್ರಾತ್ಮಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ನಾವು ಒಂದು ನಾಡಿಗೆ ಸೇರಿದವರು. ಹಿಂದೂ ಅರಸರ ಕಾಲದಲ್ಲಿ ಪ್ರಾಂತಗಳು ಆರ್ಥಿಕವಾಗಿ ಬಂಧಿಸಲ್ಪಟ್ಟಿದ್ದವು. ಪ್ರತ್ಯೇಕ ಮತದಾನ ಪದ್ಧತಿಯು ಕೆಲ ವಿಶಿಷ್ಟ ಜಾತಿಗಳಿಗಿರಬೇಕೆಂಬ ಕೆಟ್ಟ ತತ್ವವನ್ನೊಪ್ಪಿಕೊಂಡಂತೆ ಭಾಷಾವಾರ ಪ್ರಾಂತಗಳನ್ನೊಪ್ಪಿಕೊಂಡು ಕಾಂಗ್ರೆಸ್ ತಪ್ಪುಮಾಡಿತು. ಧರ್ಮ, ಭಾಷೆ, ಸಾಹಿತ್ಯ ವಿಷಯಗಳು ವ್ಯಕ್ತಿಗಳಿಗೆ ಸಂಬಂಧಿಸಿದ್ದು ಅವುಗಳ ರಕ್ಷಣೆಗೆ ಶಾಸನಗಳಾಗಬಹುದು. ಭಾಷಾ ದ್ವೇಷದಿಂದ ಅಲ್ಪ ಸಂಖ್ಯಾಕರನ್ನು ಬಾಯಿ ಮುಚ್ಚಿಸುವ ಉದಾಹರಣೆಗಳು ನಮ್ಮಲ್ಲೇ ನಡೆದಿವೆ.

ಕೇಂದ್ರದ ಕಾರ್ಯದ ಸರಳತೆ ಗೋಸ್ಕರ ಪ್ರಾಚೀನ ಕಾಲದ ವೈಭವಶಾಲೀ ವಿಜಯನಗರದಲ್ಲಿ ಉಪರಾಜಧಾನಿಯನ್ನು ಸ್ಥಾಪಿಸಬೇಕು.

---

## ಕರ್ನಾಟಕ ಏಕೀಕರಣ ಮಹಾಸಮಿತಿ, ಹುಬ್ಬಳ್ಳಿ.

### ಆಮಂತ್ರಣ.

ಕರ್ನಾಟಕ ಏಕೀಕರಣ ಕ್ರಿಯಾಸಮಿತಿಯ ಸಭೆಯು 14-6-48ಕ್ಕೆ ಮಧ್ಯಾನ್ಹ 3 ಗಂಟೆಗೆ ಹುಬ್ಬಳ್ಳಿಯಲ್ಲಿ ಮಹಾಸಮಿತಿಯ ಕಚೇರಿಯಲ್ಲಿ ಸೇರುವದು ಸದಸ್ಯರೂ ಆಮಂತ್ರಿತರೂ ಸಭೆಗೆ ಆಗಮಿಸಬೇಕೆಂದು ಬಿನ್ನಹವಿದೆ.

### ವಿಷಯ ಪಟ್ಟಿ

1) ದಿ 12-4-48 ರಿಂದ 14-[illegible]-48ರ ವರೆಗಿನ ಕಾರ್ಯದವರದಿ ಹಾಗೂ ಗಳಿಕೆ ಬಳಿಕೆಗಳ ಪಟ್ಟಿಯ ಸ್ವೀಕಾರ 2) ಮಹಾಸಮಿತಿಯ ಘಟನೆಯ ಸ್ವೀಕಾರ 3) ಭಾಷಾನ್ವಯ ಪ್ರಾಂತ ರಚನೆಯ ಬಗ್ಗೆ ಡಾ|| ರಾಜೇಂದ್ರ ಪ್ರಸಾದರವರು ನಿಯಮಿಸಲಿರುವ ಸಮಿತಿಯ ಕಾರ್ಯದ ಬಗ್ಗೆ ಪರಿಶೀಲನೆ 4) ಮೈಸೂರು ಸಂಸ್ಥಾನ ಸಮಿತಿಯ ಕಾರ್ಯದ ಪರಿಶೀಲನೆ 5) ಈ ಎರಡು ತಿಂಗಳ ಅವಧಿಯಲ್ಲಾದ ನಿಧಿ ಸಂಗ್ರಹದ ಬಗ್ಗೆ ಹಾಗೂ ಮುಂದೆ ಈ ದಿಶೆಯಲ್ಲಿ ಮಾಡಬೇಕಾದ ಕಾರ್ಯದ ವಿಚಾರ. 6) ಜತ್ತ ಸಂಸ್ಥಾನದಲ್ಲಿನ ಕನ್ನಡಿಗರು ಬಹು ಸಂಖ್ಯಾಕರಿದ್ದರೂ ಅಲ್ಪ ಸಂಖ್ಯಾಕರಿರುವರೆಂದು ಅಲ್ಲಿಯ ಅಡಳಿತಗಾರರು ವರದಿಮಾಡಿದ ವಿಷಯದ ಪರಿಶೀಲನೆ ಹಾಗೂ ಇತರ ಸಂಸ್ಥಾನಗಳಲ್ಲಿಯೂ ಹೀಗಾ

*Please Note*

**Narasepalli Workshops**

**BELLARY.**

— UNDERTAKE —

**Turning, Electric Welding & Tempering**

OF

SPARE PARTS OF ALL KINDS.

**Reasonable Charges**

TRIAL SOLICITED.

Telegrams
OIL MILLS.

Telephone
57.

ಗದಂತೆ ನೋಡಿಕೊಳ್ಳುವದಕ್ಕಾಗಿ ಕೈಕೊಳ್ಳಬೇಕಾದ ಉಪಾಯಗಳ ಆಲೋಚನೆ 7) ಬತ್ತಿಯ ಸ್ಟೇಟ ಹೈಸ್ಕೂಲನ್ನು ಮುಂಬಯಿಯ ಮರಾಠಾ ಎಜುಕೇಶನ್ ಸೊಸೈಟಿಗೆ ಒಪ್ಪಿಸಿದ ಬಗ್ಗೆ ವಿಚಾರಣೆ. 8) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರುವ ಇತರ ವಿಷಯಗಳು.

ದೊಡ್ಡಮೇಟಿ,
ಪ್ರಧಾನ ಗೌರವ ಕಾರ್ಯದರ್ಶಿ

ವಿ. ಸೂ:— ಕ್ರಿಯಾಸಮಿತಿಯ ಸಭೆಯನ್ನು ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿಯೂ, ಕರ್ನಾಟಕದ ಉತ್ತರ ಗಡಿಯಲ್ಲಿಯೂ ಕರೆಯಬೇಕೆಂದು ಹುಬ್ಬಳ್ಳಿಯಲ್ಲಿ ಕರೆಯದೆ ಬೇರೆಕಡೆಯಲ್ಲಿ ಕರೆಯಬೇಕೆಂದು ನಾವೂ ಆಶಿಸಿದ್ದೆವು. ಆದರೆ ಶ್ರೀ ನಿಜಲಿಂಗಪ್ಪನವರು ಎದ್ದು ಅಡ್ಡಾಡದ ಪರಿಸ್ಥಿತಿಯಲ್ಲಿದ್ದರೂ ಹುಬ್ಬಳ್ಳಿಯಲ್ಲಿ 13-6-48 ಕ್ಕೆ ಕೂಡುವ ಕೆ. ಪಿ. ಸಿ. ಸಿ. ಯ ಮಹತ್ವದ ಸಭೆಗೆ ಬರುವವರಿದ್ದಾರೆ. ಅವರೂ ಕ್ರಿಯಾ ಸಮಿತಿಯ ಸಭೆಗೆ ಬರುವದವಶ್ಯವು. ಇದರಿಂದ ಅವರ ಅನುಕೂಲತೆಗಾಗಿ ಈ ಸಲವೂ ಹುಬ್ಬಳ್ಳಿಯಲ್ಲಿಯೇ ಕರೆಯಬೇಕಾಗಿ ಬಂದ್ದು ಗಡಿನಾಡಿನ ಕನ್ನಡಿಗರನ್ನು ನಿರಾಶೆಗೊಳಿಸಿದ್ದಕ್ಕಾಗಿ ವಿಷಾದಿಸುತ್ತೇವೆ.

—

## ತುಂಗಭದ್ರಾತೀರ ಹಳ್ಳಿಗರು ರಕ್ಷಣೋಪಾಯಗಳು

“ನಮ್ಮ ಮೇಲೆ ರಜಾಕಾರರು ದಂಡೆತ್ತಿ ಬಂದರೆ ಒಂದು ಕೈ ನೋಡುವೆವು ಆದರೆ ಹಳ್ಳಿಗಳ ಮೇಲೆ ಆಕಸ್ಮಿಕ ದಾಳಿಮಾಡುವವರು ಗೂಂಡಾ ಜನರು ಲೂಟಿಗಾರರು ಅವರನ್ನೆದುರಿಸಲು 85 ಮೈಲಿ ತೀರ ಪ್ರದೇಶದಲ್ಲಿ ಸೈನ್ಯವನ್ನಿಡುವುದು ಸಾಧ್ಯವೇ ಇಲ್ಲ. ಹಳ್ಳಿಗರ ಸಹಕಾರ ಬೇಕೇ ಬೇಕು” ಎಂದು ಅಧಿಕಾರಿಗಳ ಪರವಾಗಿ ಒಬ್ಬರು ಹೇಳಿದರು. ಹಳ್ಳಿಗರಿಂದ ಸಾಕಷ್ಟು ಸಹಾಯ ದೊರೆಯಬಹುದೆಂದಾಶಿಸುತ್ತೇವೆ.

## The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

| | | |
|---|---|---|
| 3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ ,, | ರೂ. 3½% | ,, |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,, | ರೂ. 4% | ,, |

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಣಿಯಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು ಮೂರು ವರ್ಷಗಳನಂತರ ಪೂರಾ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಬಿ. ವಿ. ಶೇಷಗಿರಿರಾವ್, ಬಿ. ಎ.,
ಕಾರ್ಯದರ್ಶಿ.


---


## NAVA BHARAT BELLARY.

Reg.No.M. 4746

ನವ ಭಾರತ ಬಳ್ಳಾರಿ.
(Nationalist Weekly)

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri..........................................

..........................................

..........................................

Printed at Vittal Press, Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

[illegible] ೧೧ | [illegible]ಚಿಕೆ [illegible] | ಬಳ್ಳಾರಿ ಜೂನ್ ೧೪ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾ[illegible] ಟಿ. ಬಿ. ಕೇಶವರಾವ್.

## In the Court of the District Munsif Hospet.

### ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು

S. C 99/48

| | |
|---|---|
| ದಾಸಪ್ಪನವರ ಸಂಗಪ್ಪ<br>ಮತ್ತಿಹಳ್ಳಿ - ಹರಪನಹಳ್ಳಿ ತಾ\|\| | ವಾದಿ |
| ಈಡಿಗರ ಫಕೀರಪ್ಪ<br>ಬೆಣಕಲ್ಲು - ಕೂಡ್ಲಿಗಿ ತಾ\|\| | ಪ್ರತಿವಾದಿ |

19—3—45ನೆ ತೇದಿ ಪ್ರತಿವಾದಿ ಹೆಸರ್ಗೆ ರೂ 100ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು ಮತ್ತು ಬಡ್ಡಿಗಾಗಿ ರೂ. 119 ಕ್ಕೆ ದಾವಾಮಾಡಿರುತ್ತದೆ ಸದ್ರಿ ನಂಬರು 16-6 48 ಕ್ಕೆ ವಾಯಿದಾ ಇರುತ್ತದೆ. ಪ್ರತಿವಾದಿ ಆ ದಿವಸ ಹಗಲು 11 ಗಂಟೆಗೆ ಖುದ್ದಾಗಲಿ, ವಕೀಲರ ದ್ವಾರ ಆಗಲಿ ಕೋರ್ಟಿಗೆ ಹಾಜರಾಗದಿದ್ದರೆ ಪ್ರತಿವಾದಿ ಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

**ಎ. ಆರ್ ಕೃಷ್ಣರಾವ್,**
ವಾದಿಯ ಅಡ್ವೊಕೇಟರು.

ಹೈದರಾಬಾದು ಸ್ವತಂತ್ರವಾಗಿದ್ದರೆ ಹಿಂದೂಸ್ಥಾನಕ್ಕೆ ಗಂಡಾಂತರವು ತಪ್ಪಿದ್ದಲ್ಲವೆಂದು - ಇಂಡಿಯಾದ ಪ್ರಧಾನರಾದ ಪ. ಜವಹರಲಾಲರು ನೈನಿಟಾಲದ ಭಾಷಣದಲ್ಲಿ ಹೇಳಿದರು.

---

ಐರ್ಲಂಡಿನ ಪ್ರಧಾನಮಂತ್ರಿಗಳಾಗಿದ್ದ ಈಮನ್ ಡಿವೇಲರಾ ಇವರು ಹಿಂದೂಸ್ಥಾನಕ್ಕೆ ಬಂದು ಭಾರತ ಸರ್ಕಾರದ ಅತಿಥಿಗಳಾಗಿದ್ದರು.

---

## ೫೦ ಲಕ್ಷ ಗಾಂಧಿ ಸ್ಮಾರಕ ಸ್ಟಾಂಪುಗಳು

ಮುಂಬಯಿ ೧೪. “ಇಂಡಿಯಾದ ಅಂತರ್ರಾಷ್ಟ್ರೀಯ ವಿಮಾನು “ಮಲಬಾರ ಪ್ರಿನ್ಸೆಸ್” ನಲ್ಲಿ ಇಂದು ಜಿನೇವಾದಿಂದ ೫೦ ಲಕ್ಷ ಗಾಂಧಿಸ್ಮಾರಕ ಸ್ಟಾಂಪುಗಳನ್ನು ತರಲಾಗಿದೆ. ಈ ಸ್ಟಾಂಪುಗಳನ್ನು ಸ್ವಾತಂತ್ರ್ಯಪ್ರಾಪ್ತಿಯ ಮೊದಲನೆಯ ವಾರ್ಷಿಕೋತ್ಸವದ ದಿನ ಮಾರಾಟಕ್ಕಿಡಲಾಗುವದು. ಈ ಸ್ಟಾಂಪುಗಳಿಗೆ ದೇಶವಿದೇಶಗಳಿಂದ ತುಂಬಾ ಬೇಡಿಕೆ ಬರುವದೆಂದು ನಿರೀಕ್ಷಿಸಲಾಗಿದೆ.

# ಊಟಿಯಲ್ಲಿ ಪಂಡಿತ ನೆಹರೂರ ಭಾಷಣ

"ಜಗತ್ತಿನ ಮಹತ್ವದ ಸಮಸ್ಯೆಗಳ ಎಣಿಕೆಯಲ್ಲೇ ಏಶಿಯಾದ ಆರ್ಥಿಕ ಸಮಸ್ಯೆಯನ್ನವಲೋಕಿಸುವದು ಅವಶ್ಯವಿದೆ. ಆರ್ಥಿಕ ಸಮಸ್ಯೆಗಳನ್ನು ಮಾನವೀಯ ದೃಷ್ಟಿಕೋನದಿಂದ ನೋಡಬೇಕು. ಬರೇ ಅಂಕೆ ಸಂಖ್ಯೆಗಳ ಗದ್ದಲದಿಂದಲ್ಲ. ಈಗ ನಿಮ್ಮ ದೃಷ್ಟಿಯಲ್ಲಿರುವ ಜಗತ್ತಿನ ಈ ಭಾಗದಲ್ಲಿ ಕನಿಷ್ಟವೆಂದರೂ 100 ಕೋಟಿ ಜನರಿರುವರು ಈ ಶತಕೋಟಿ ಮಾನವ ಪ್ರಾಣಿಗಳ ದುಃಖ, ಕಷ್ಟ, ಕಠಿಣತೆಗಳನ್ನು ಮಾನವೀ ದೃಷ್ಟಿಯಿಂದ ನೋಡಿದಲ್ಲಿ ಅದು ಕೇವಲ ಒಂದು ಆರ್ಥಿಕ ಸಮಸ್ಯೆಯಾಗುಳಿಯದೆ ಅತಿ ಅವಶ್ಯವಾಗಿ, ಅತಿ ಶೀಘ್ರವಾಗಿ ಬಿಡಿಸಲೇಬೇಕಾದ ಸಮಸ್ಯೆಯೆಂಬುದು ದೃಷ್ಟಿಗೋಚರವಾಗದಿರದು" ಎಂದು ಯುಕ್ತರಾಷ್ಟ್ರದ ಏಶಿಯಾ, ಅತಿಪ್ರಾಚ್ಯ ದೇಶಗಳ ಆರ್ಥಿಕ ಸಮಿತಿಯ ಅಧಿವೇಶನಕ್ಕೆ ಬಂದ ಪ್ರತಿನಿಧಿಗಳನ್ನು, ಇಂಡಿಯಾ ಸರಕಾರದ ಪರವಾಗಿ ಸ್ವಾಗತಿಸುತ್ತಾ ಪಂಡಿತ ಜವಾಹರಲಾಲ ನೆಹರೂರವರು ಹೇಳಿದರು. ಅವರು ಮುಂದುವರಿಯುತ್ತಾ, ಈ ಸಭೆಯಲ್ಲಿರುವ ಸದಸ್ಯರಿಗೆನ ನಂದ ಮಾತುಗಳ ಮಹತ್ವವು ಅರಿಕೆಯಾಗಬಹುದು. ಏಶಿಯ್ಯದ ಆರ್ಥಿಕ ಸಮಸ್ಯೆಯನ್ನು ಕಡೆಗಣಿಸಿದಲ್ಲಿ ಸಂಯುಕ್ತ ರಾಷ್ಟ್ರಸಂಘದ ಇತರ ಆಕಾಂಕ್ಷೆಗಳು ವಿಫಲವಾಗಬಹುದಾಗಿವೆ ಎಂಬ ಮಾತೂ ಲಕ್ಷ್ಯದಲ್ಲಿಟ್ಟುಕೊಳ್ಳುವಂತಹದಾಗಿದೆ

ಏಶಿಯಾದಲ್ಲಿ ಆಹಾರ ಸಮಸ್ಯೆಯಿದೆ ಹಿಂದುಸ್ಥಾನ ಹಾಗೂ ಅದರಂಥ ಪ್ರಾಮುಖ್ಯವಾಗಿ ವ್ಯವಸಾಯದ ದೇಶಗಳಲ್ಲಿ ಕೂಡ ಆಹಾರ ಸಮಸ್ಯೆಯಿರುವುದು ತಪ್ಪೆನಿಸಿದರೂ ಸತ್ಯಮಾತ್ರವಾಗಿದೆ.

ಏಶಿಯಾದ ದೇಶಗಳಲ್ಲಿ ಔದ್ಯೋಗಿಕ ಅಭಿವೃದ್ಧಿಯಾಗಬೇಕೆಂದು ಎಲ್ಲೆಡೆಯಲ್ಲಿ ಒಪ್ಪಲಾಗುತ್ತಿದೆ. ಸಾಕಷ್ಟು ಸಲಕರಣೆಗಳು ಹಾಗೂ ತಜ್ಞರ ಅಭಾವವೇ ಉದ್ಯೋಗಗಳ ಪ್ರಗತಿ ಇಲ್ಲದಿರಲು ಕಾರಣವಾಗಿವೆ. ಇವು ಹೆಚ್ಚಿರುವ ದೇಶಗಳಿಂದ ಅವನ್ನು ಪೂರೈಸುವದೇ ಈ ಅಭಿವೃದ್ಧಿಯ ಮಾರ್ಗ.

ಆದರೆ ಹೀಗೆ ಸಹಾಯ ಮಾಡುವ ದೇಶಗಳು ಯಾವುದಾದರೊಂದು ಸ್ವಾರ್ಥ ದೃಷ್ಟಿಯಿಂದ, ಏಶಿಯಾದ ದೇಶಗಳ ಮೇಲೆ ಆರ್ಥಿಕಾಧಿಕಾರವನ್ನು ಪಡೆಯುವ ದೃಷ್ಟಿಯಿಂದ ಸಹಾಯಮಾಡುವದಾದರೆ ನಾವದನ್ನು ಸ್ವೀಕರಿಸಲು ಸಿದ್ಧರಿಲ್ಲ. ನಮ್ಮ ಪ್ರಗತಿಯು ತಡವಾದರೂ ಅಡ್ಡಿಯಿಲ್ಲ. ನಾವಂಥ ಅಧಿಕಾರಕ್ಕೆ ತಲೆಬಾಗೊಲ್ಲೆವು.

ಜಗತ್ತಿನ ಹಿತದೃಷ್ಟಿಯನ್ನುಳ್ಳ ಯಾವುದೇ ಧೋರಣಕ್ಕೂ ನಾವು ಸಹಕಾರವೀಯಲು ಸಿದ್ಧರಿದ್ದೇವೆ. ಸರ್ವಸಾಮಾನ್ಯವಾಗಿ ಬರುವ ಯಾವುದೊಂದು ವಿಚಾರದ ಶರಣಾಗತಿಗೂ ಕೂಡ ನಾವು ಒಪ್ಪಬಹುದು. ದೀರ್ಘ ಕಾಲದ ಪರಾಧೀನತೆಯಿಂದ ಕಂಗೆಟ್ಟ ಏಶಿಯಾದ ದೇಶಗಳು ಯಾವುದೇ ವಿಧವಾದ ಪರಾಧೀನತೆಯನ್ನು ಇನ್ನು ಮುಂದೆ ಸಹಿಸಲಾರವೆಂಬ ಮಾತನ್ನು ಸಕಲರೂ ನೆನಪಿನಲ್ಲಿಟ್ಟುಕೊಳ್ಳಬೇಕು

ಹಿಂದುಸ್ಥಾನದಲ್ಲಿ ವಿದ್ಯುತ್ಪೂರಿಕೆಗಾಗಿ ನಿಸರ್ಗಾನುಕೂಲತೆಗಳು ತುಂಬಾ ಇವೆ. ಅವನ್ನುಪಯೋಗಿಸಿಕೊಳ್ಳಲು ಸರಕಾರವು ಯತ್ನಿಸುತ್ತಿದೆ. ಅದರಂತೆ ಗಣಿ ಸಂಪತ್ತಿನ ವಿಚಾರ. ಏಶಿಯದ ಗಣಿ ಸಂಪತ್ತಿ(ನ) ಪ್ರಯೋಜನವನ್ನು ಸಂಪೂರ್ಣವಾಗಿ ಪಡೆಯಲಾಗು(ತ್ತಿ)ಲ್ಲ. ಸಲಕರಣೆಗಳು ತಜ್ಞರ ಸಹಾಯದಿಂದ (ಆ) ಪ್ರಯೋಜನ ಹೊಂದಲು ಸಾಧ್ಯವಿದೆ."

ಏಶಿಯಾದ ಜನಸಂಖ್ಯೆಯ ಶೇಕಡೆ 40 ರಷ್ಟು ಜನರು ಹಿಂದುಸ್ಥಾನದಲ್ಲಿರುವದರಿಂದಲೂ ಭೌಗೋಲಿಕ ದೃಷ್ಟಿಯಿಂದಲೂ ಹಿಂದುಸ್ಥಾನಕ್ಕೆ ತುಂಬಾ ಮಹತ್ವವಿದೆ. ಏಶಿಯಾದ ಅಭಿವೃದ್ಧಿ ಕಾರ್ಯದಲ್ಲಿ ಹಿಂದುಸ್ಥಾನವು ಸಂಪೂರ್ಣವಾಗಿ ಸಹಕರಿಸುವದೆಂಬುದು ನಿಜವಾದರೂ ಹಿಂದುಸ್ಥಾನವು ಏಶಿಯಾದ ಮುಂದಾಳಾಗುವದು ಎಂದು ಹಂಬ(ಲ) ಕಟ್ಟಿಕೊಳ್ಳುವದು ಸರಿಯಲ್ಲ. ಹೀಗೆ ಮುಂದಾಳುತನದ ಹೆಮ್ಮೆಗಾಗಿ ಈ ಪ್ರಶ್ನೆಯ ವಿಚಾರ ಮಾಡತಕ್ಕದ್ದಲ್ಲ. ಸಹಕಾರ ಬುದ್ಧಿಯಿಂದ ವಿಚಾರಿಸಬೇಕು. ಯಾವುದೊಂದು ದೇಶವು ಹೆಚ್ಚಿನ ಕಾರ್ಯಮಾಡಿದಲ್ಲಿ ಒಳ್ಳೆಯದೇ. ಆಗ ಅದಕ್ಕೆ ತಕ್ಕ ಗೌರವವೂ ದೊರೆಯುವದು. ಆದರೆ ತಾನು ಮುಂದಾಳೆಂದು ತಿಳಿದುಕೊಳ್ಳುವದು ಶೀ(ಘ್ರ) ದೊಡ್ಡಸ್ತನದ ಮಾತಾಗುವದು. ಸರ್ವರ ಹಿತಕ್ಕಾಗಿ ದುಡಿಯುವಾಗ ಉಚ್ಚ-ನೀಚ, ಹಿರಿಕಿರಿ ಭಾವನೆ ಇರಬಾರದು" ಎಂದು ಹೇಳಿದರು.

# ಪಾಕಿಸ್ತಾನದಲ್ಲಿ ವಿರುದ್ಧಪಕ್ಷ

ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗಿನ ಹೊರತು ಇನ್ನಾವ ಪಕ್ಷವೂ ಹುಟ್ಟಬಾರದು. ಹುಟ್ಟಿದರೆ ಬೆಳೆಯಬಾರದು ಎಂಬುದು ಅಲ್ಲಿಯ ಜಿನ್ನಾ ಸಾಹೇಬರ ಆಡಳಿತ ಮುಖ್ಯಗುರಿಯಾಗಿದೆ, ಮತ್ತು ಮುಸ್ಲಿಂ ಲೀಗಿನ ಆಡಳಿತದಲ್ಲಿ ಕೂಡ ಜಿನ್ನಾ ಸಾಹೇಬರ ಕಾರ್ಯಪದ್ಧತಿಯು ಎಂದಿನಿಂದಲೂ ಸರ್ವಾಧಿಕಾರದ ತತ್ವದಮೇಲೆ ನಡೆಯುತ್ತ ಬಂದಿದೆಯೆಂಬುದು, ಅಲ್ಲಿಯ ಕಾರ್ಯಕಲಾಪಗಳ ಬಗ್ಗೆ ಕೇಳಿ ತಿಳಿದುಕೊಂಡವರಿಗೆ ಗೊತ್ತಾಗಿದೆ. ಅವರು ಅಧ್ಯಕ್ಷರಿದ್ದಾಗ ತಮಗೆ ಮನಸ್ಸಿಲ್ಲದವರನ್ನು ಮಾತಾಡಗೊಡುವುದು ಇಲ್ಲ. ಮತ್ತು ತನ್ನ ವಿಚಾರ ಮತ್ತು ನಿರ್ಣಯಗಳನ್ನು ಇತರರ ಮೇಲೆ ಹೇರುವುದು ಅವರ ಸ್ವಭಾವವಾಗಿದೆ. ಬಹುಕ್ಷೀಣ ಪ್ರಕೃತಿಯವರಾದ ಅವರು ಬಹು ಬೇಗ ಸಿಟ್ಟಿಗೇಳುವರು. ಇತರ ಸಾಧನಗಳಿಂದ ಸಾಧಿಸಲಾರದ ಕಾರ್ಯಕಲಾಪಗಳನ್ನು ಅವರು ಸಿಟ್ಟಿನ ಸಹಾಯದಿಂದ ಸಾಧಿಸಿಕೊಳ್ಳುತ್ತಿರುತ್ತಾರೆ.

ಈಗ ಪಾಕಿಸ್ತಾನದಲ್ಲಿ ನಡೆದಿರುವ ಕಾರ್ಯಕಲಾಪಗಳನ್ನು ನೋಡಿದರೆ ಇದೇ ಮಾತು ಕಂಡು ಬರುತ್ತದೆ. ಜಿನ್ನಾ ಸಾಹೇಬರ ಬಗ್ಗೆ ಅಲ್ಲಿ ಅಪ್ರೀತಿಯು ಬೆಳೆಯುತ್ತಿದೆ. ಅವರ ಈ ಸರ್ವಾಧಿಕಾರಿತ್ವಕ್ಕೆ ಅನೇಕರು ಬೇಸತ್ತು ಹೋಗಿದಾರೆ. ಆದರೆ ಅನೇಕರು ಅವರ ವಿರುದ್ಧ ನಿಲ್ಲುವ ಧೈರ್ಯ ಶಕ್ತಿ ಇಲ್ಲದೆ ಒಳಗೇ ಕುದಿಯುತ್ತಿದ್ದಾರೆ, ಇನ್ನು ಕೆಲವರು ಮುಸಲ್ಮಾನ ಜನಾಂಗಕ್ಕೆ ಪಾಕಿಸ್ತಾನ ದೊರಕಿಸಿಕೊಟ್ಟ ಜಿನ್ನಾರವರ ಉಪಕಾರವನ್ನು ನೆನೆದು ಅವರು ಮಾಡಬಹುದಾದ ಹಲಕೆಲವು ತಪ್ಪುಗಳನ್ನು ನಾವು ಮರೆಯಬೇಕಾಗುವುದು ಎಂದು ಸುಮ್ಮನಿರುತ್ತಾರೆ.

ಆದರೆ ಎಲ್ಲರೂ ಹೀಗೆ ಕೈಕಟ್ಟಿಕೊಂಡು ಕೂಡ್ರುವುದು ಸಾಧ್ಯವೇ ಇಲ್ಲ. ಕೆಲವು ಮಿತಿಯವರೆಗೆ ಸುಮ್ಮನಿದ್ದು ಅದು ಮೀರಲ್ಪಟ್ಟಿತೆಂದರೆ ಅನಿವಾರ್ಯವಾಗಿ ಕೊಡವಿಕೊಂಡು ಏಳುವುದು ಕೆಲವರಿಗೆ ಅನಿವಾರ್ಯವಾಗುವುದು.

ಗಡಿನಾಡು ಪ್ರಾಂತದಲ್ಲಿ ಗಫಾರ ಖಾನ ಬಂಧುಗಳು ಜಿನ್ನಾರವರಂಥವರ ಬಲೆಗೆ ಬೀಳತಕ್ಕಂಥವರಲ್ಲ. ಅವರು ಸ್ವಯಂಪ್ರಕಾಶಿಗಳಾಗಿದ್ದಾರೆ. ಜಿನ್ನಾರವರ ದ್ವಿರಾಷ್ಟ್ರ ತತ್ವಕ್ಕೂ ಇವರಿಗೂ ಮೊದಲಿನಿಂದ ಮೂರು ಗಾವುದ ದೂರದ ಅಂತರವಿರುತ್ತ ಬಂದಿದೆ. ಪಾಕಿಸ್ತಾನದ ನಿರ್ಮಾಣವಾದಾಗ ಖಾನಬಂಧುಗಳು ಬಹುದುಃಖಪಟ್ಟರು. ಆ ಮೇಲೆ ಅವರು ಜಿನ್ನಾ ಸಾಹೇಬರ ಕೈವಾಡಕ್ಕೆ ಸಿಕ್ಕು ಬಂಧಿತರಂತೆ ಸುಮ್ಮನೆ ಕೂಡ್ರಬೇಕಾಗಿದ್ದಿತು. ಇವರೊಡನೆ ಒಪ್ಪಂದ ಮಾಡಿಕೊಳ್ಳಲು ಮತ್ತು ಇವರನ್ನು ತನ್ನ ಜಾತೀಯ ತಳಹದಿಗೆ ಎಳೆದುಕೊಳ್ಳಲು ಜಿನ್ನಾರವರು ಬಹಳ ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ.

ಖಾನಸಾಹೇಬರಂತೆಯೇ ಇನ್ನೂ ಕೆಲವು ಮುಖಂಡರು ಪಾಕಿಸ್ತಾನದಲ್ಲಿ ಜಿನ್ನಾರ ವಿರುದ್ಧ ಕಾರ್ಯಮಾಡಲು ಉದ್ಯುಕ್ತರಾಗಿದ್ದಾರೆ. ಈಗ ಖುರ್ರೋ ಇವರನ್ನು ತೆಗೆದು, ಹಾಗೆ ಸಿಂಧಪ್ರಾಂತದ ಮುಖ್ಯ ಮಂತ್ರಿಪದವನ್ನು ಬೇರೆಯವರಿಗೆ ಕೊಟ್ಟ ಮತ್ತು ಖುರ್ರೋರವರ ಮೇಲೆ ಅಪರಾಧ ಹೊರಿಸಿ, ಅವರ ವಿಚಾರಣೆಯನ್ನು ನಡೆಸುವ ಘಟನೆಯು ಜಿನ್ನಾರವರಿಂದ ನಡೆದದ್ದರಿಂದ ಅವರ ಬಗ್ಗೆ ವಿರೋಧವು ಪಾಕಿಸ್ತಾನದಲ್ಲಿ ಇನ್ನೂ ತೀವ್ರವಾಗಿ ಬೆಳೆಯುತ್ತಿದೆ.

ಪೀಪಲ್ಸ್ ಪಾರ್ಟಿ (ಜನತಾ ಪಕ್ಷ) ಎಂಬುದೊಂದು ಪಕ್ಷವು ಈಗ ಪಾಕಿಸ್ತಾನದಲ್ಲಿ ಪ್ರಾರಂಭವಾಗಿ ಹಿಂದಿನ ಐಕ್ಯದಲ್ಲಿ ಸಿಂಧದ ರಾಜಕೀಯ ರಂಗದಿಂದ ಹೊರಬೀಳಬೇಕಾದ ಶ್ರೀ ಜಿ. ಎಮ್. ಸಯ್ಯದ ಇವರು ಅಲ್ಲಿಯ ಬಡವರ್ಗದವರ ಬೆಂಬಲದಿಂದ ಈ ಪಕ್ಷವನ್ನು ಪ್ರಾರಂಭಿಸಿದರು. ಪಾಕಿಸ್ತಾನದ ಸರ್ವ ಪ್ರಾಂತಗಳ ಪ್ರತಿನಿಧಿಗಳು ಈ ಪಕ್ಷದ ಉದ್ದೇಶ ಪತ್ರಿಕೆ ಮತ್ತು ಧ್ಯೇಯಕ್ಕೆ ಅಂಕಿತಹಾಕಿ ಪ್ರಸಿದ್ಧಿಯನ್ನು ಕೊಟ್ಟರು.

( 4 ನೇ ಪುಟವನ್ನು ನೋಡಿರಿ )

ಜಿನ್ನಾರವರಿಗೆ ಇದರಿಂದ ತಳಮಳ ಹುಟ್ಟಿಕೊಂಡಿತು. ಅವರು ಈ ಪಕ್ಷದ ಗಡಿನಾಡಿನ ಪ್ರತಿನಿಧಿಯಾದ ಬಾದಶಹಾಖಾನರನ್ನು ಚಹಾಪಾನಕ್ಕೆ ಕರೆದು “ನೀವು ಹೀಗೆಲ್ಲ ಅಡ್ಡಹೋಗಬಾರದು. ಮುಸ್ಲಿಂಲೀಗಿಗೇ ಪಾಕಿಸ್ತಾನದಲ್ಲಿಯು ಸರ್ವರು ಬೆಂಬಲಕೊಟ್ಟು ಅದರ ಶಕ್ತಿಯನ್ನು ಬೆಳೆಸುವುದು ಅಗತ್ಯವಾಗಿದೆಯೆಂದು ಹೇಳಿದರು ಆದರೆ ಅವರ ಮಾತಿಗೆ ಬಾದಶಹಾಖಾನರು ಒಪ್ಪಲಿಲ್ಲ. ಮೊನ್ನೆ ಜಿನ್ನಾರವರು ಗಡಿನಾಡ ಪ್ರಾಂತಕ್ಕೆ ಹೋದಾಗ್ಗೆ ಪುನಃ ಈ ಬಗ್ಗೆ ಬಾದಶಹಾಖಾನರೊಡನೆ ಮಾತಾಡಿದರು. ಆಗ ಕೂಡ ಅವರ ಕಾರ್ಯವು ಸಾಧಿಸಲಿಲ್ಲ. ಇದರಿಂದ ನಿರಾಶರಾದ ಜಿನ್ನಾರವರು “ಪಾಕಿಸ್ತಾನದಲ್ಲಿ ಮುಸ್ಲಿಂಲೀಗಿನ ವಿರುದ್ಧ ಯಾವುದೇ ಶಕ್ತಿಯು ಸಹಿಸಲ್ಪಡುವುದಿಲ್ಲ” ಎಂಬರ್ಥದ ಘೋಷಣೆಯನ್ನು ಮಾಡಿದರು.

ಕಾಯಿದೆ ಮಂಡಲದ ಅಧಿವೇಶನಕ್ಕಾಗಿ ಪಾಕಿಸ್ತಾನದ ಸರ್ವ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಗಡಿನಾಡಿನ ಗಾಂಧಿಯವರಾದ ಖಾನ ಅಬ್ದುಲ ಗಫರ ಖಾನರೂ ಬಂದಿದ್ದರು. ಇದೇ ಸಂಧಿಯನ್ನು ಸಾಧಿಸಿ, ಈ ಜನತಾ ಪಕ್ಷದ ಬಗ್ಗೆ ಅನುಕೂಲಮತವಿದ್ದವರನ್ನೆಲ್ಲ ಕೂಡಿಸಿ ಅದರ ಕಾರ್ಯವನ್ನು ಮುಂದರಿಸಿದ್ದಾರೆ. ಈ ಪಕ್ಷದಲ್ಲಿ ಪಾಕಿಸ್ತಾನ ಸೋಶಾಲಿಸ್ಟರು, ಬಂಗಾಲ ಪ್ರಾಂತದ ಕಾಂಗ್ರೆಸ ಪಕ್ಷದವರಲ್ಲಿ ಕೆಲವರು ಮತ್ತು ಅನೇಕ ಇತರರು ಕೂಡಿದ್ದಾರೆ.

ಆ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಗಡಿನಾಡಿನ ಬಾದಶಹಾಖಾನರು ಉಪಸ್ಥಿತರಾಗಿದ್ದರು. ಅವರು ಹೇಳಿದ ಮಾತುಗಳ ಸಾರವು ಈ ರೀತಿಯಾಗಿತ್ತು :—

“ಇಂದು ಜಗತ್ತಿನಲ್ಲಿ ಅಶಾಂತತೆಯು ಹಬ್ಬಿದೆ. ಅದಕ್ಕೆ ತಡೆಹಾಕುವುದಾದರೆ ಪಾಕಿಸ್ತಾನವು ಭಲಾಢ್ಯ ಭಾಗವಾಗಬೇಕು, ಹಾಗಾಗುವುದಕ್ಕೆ ಹಿಂದುಸ್ಥಾನ ಮತ್ತು ಪಾಕಿಸ್ತಾನಗಳ ಸ್ನೇಹಸಂಬಂಧವು ದೃಢವಾಗಬೇಕು.

ಹಿಂದುಸ್ಥಾನವು ಇಬ್ಭಾಗವಾದುದು ದುರ್ದೈವದ ಸಂಗತಿಯಾಗಿದೆ. ಏನೇ ಇದ್ದರೂ ಆ ಕೆಲಸವು ಒಮ್ಮೆ ಆಗಿಹೋಯಿತು. ನಾವು ಪಾಕಿಸ್ತಾನಕ್ಕೆ ನಿಷ್ಠೆಯಿಂದಿರಲು ಸಿದ್ಧರಿದ್ದೇವೆ. ಆದರೆ ಆ ರಾಜ್ಯದಲ್ಲಿ ಮುಸ್ಲಿಂಲೀಗು ಒಂದೇ ಕಾರ್ಯಮಾಡಬಲ್ಲದು ಎಂಬ ಮಾತಿಗೆ ನಮ್ಮ ಒಪ್ಪಿಗೆಯಿಲ್ಲ. ಅದು ಕರ್ಮಠ ರಾಜಕಾರಣವಾಗುವುದು. ಪ್ರಜಾಸತ್ತೆಯು ಈಗಿನ ಯುಗದಲ್ಲಿ ಇಂತಹ ವಿಚಾರವು ನಡೆಯಲಾರದು. ಜನತೆಯ ಅಭಿಪ್ರಾಯವು ವ್ಯಕ್ತವಾಗುವುದಕ್ಕೆ ಯಾವುದೇ ತರಹದ ಅಡ್ಡಿ ಇರಕೂಡದು. ಮತ್ತು ವಿರೋಧಪಕ್ಷವು ಇದ್ದರೇನೇ ಯಾವುದೊಂದು ಆಡಳಿತವು ಎಚ್ಚರಿಕೆಯಿಂದ ನಡೆಯುವುದು.”

“ಜಿನ್ನಾರವರೊಡನೆ ನಾನು ಮಾತಾಡಿದಾಗ್ಗೆ ಸಂಪೂರ್ಣ ಸಹಕಾರವನ್ನು ಕೊಡುವುದಾಗಿ ಹೇಳಿದೆನು. ಆದರೆ ಅದಕ್ಕೆ ಒಂದು ಮಾತು ನಡೆಸಿಕೊಡಬೇಕೆಂದು ಅವರಿಗೆ ಕೇಳಿದೆನು. ಗವ್ಹರ್ನರ ಜನರಲ್ಲರಾದ ಅವರು ಯಾವುದೇ ಪಕ್ಷಕ್ಕೆ ಸೇರಕೂಡದು ಎಂಬುದು ನನ್ನ ಹೇಳಿಕೆಯಾಗಿತ್ತು. ಅದಕ್ಕೆ ಜಿನ್ನಾರವರು ಒಪ್ಪಲಿಲ್ಲ. ಈಗಿನ ಸೂಕ್ಷ್ಮ ಪರಿಸ್ಥಿತಿಯ ದೃಷ್ಟಿಯಿಂದ ಮುಸ್ಲಿಂಲೀಗಿನ ಶಕ್ತಿಯನ್ನು ಬೆಳೆಸದೆ ಗತ್ಯಂತರವಿಲ್ಲದಾಗಿದೆಯೆಂದು ಅವರು ಹೇಳಿದರು.

ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯನ್ನು ಮಾಡಬಲ್ಲ ಯಾವುದೇ ಪಕ್ಷವು ಇಂದು ಪಾಕಿಸ್ತಾನದಲ್ಲಿ ಇಲ್ಲದ್ದು ದುರ್ದೈವದ ಸಂಗತಿಯಾಗಿದೆ. ಧರ್ಮದ ದುರುಪಯೋಗವನ್ನು ಮಾಡುವ ಕಾರ್ಯವು ಯಥಾಪ್ರಕಾರವಾಗಿ ಸಾಗಿದೆ.”

ಖುದಾಯಿ ಖಿದ್ಮತಗಾರ ( ಕೆಂಪಂಗಿ ) ದಳನ್ನು ಅವರ ಮುಖಂಡರಾದ ಖಾನ ಅಬ್ದುಲ ಗಫರಖಾನರನ್ನು ಪಾಕಿಸ್ತಾನ ಸರಕಾರವು ಒಳ್ಳೇ ಸಂಶಯದಿಂದ ಇಂದು ನೋಡುತ್ತಿದೆ ಮತ್ತು ಈ ಪ್ರಜಾಪಕ್ಷದವರನ್ನು ಕೂಡ ಅದು ಒಳ್ಳೇ ಸಿಟ್ಟಿನಿಂದ ನೋಡುತ್ತಿದೆ.

ಆದರೆ ಪ್ರಜಾಪಕ್ಷದವರು ಇದರಿಂದ ಎದೆಗುಂದಿಲ್ಲ. ಈ ದಿವಸ ಮುಸ್ಲಿಂಲೀಗಿಗೆ ಇನ್ನೂ ಬಹಳ ಶಕ್ತಿಯಿದ್ದರೂ ನಾಳೆ ತಮಗೆ ಜನತಾ ಬೆಂಬಲವು ಸಿಗುವುದೆಂಬುದನ್ನು ಅವರು ದೃಢವಾಗಿ ನಂಬಿದ್ದಾರೆ. ಆದ್ದರಿಂದ ಅವರು ಈಗ ಆಯ್ಕೆ ರಾಜಕಾರಣ ಮೊದಲಾದ ಯಾವುದೇ ರಾಜ್ಯಕಾರಕ್ಕೆ ಸಂಬಂಧಪಟ್ಟ ಕಾರ್ಯಗಳಲ್ಲಿ ಕೈಹಾಕದೆ ಕೇವಲ ಜನರಲ್ಲಿ ಜಾಗ್ರತೆಯನ್ನುಂಟುಮಾಡಲು ನಿಶ್ಚಯಿಸಿದ್ದಾರೆ.

---

( 4 ನೇ ಪುಟದಿಂದ ಬಂದದ್ದು )

ಪಾಕಿಸ್ತಾನದ ಘಟನಾ ರೂಪವು ಸಿದ್ಧವಾದನಂತರ ರಾಜಕಾರಣದಲ್ಲಿ ಬೀಳುವ ವಿಚಾರವನ್ನು ಅವರು ಇಟ್ಟುಕೊಂಡಿದ್ದಾರೆ

ಮುಸ್ಲಿಂಲೀಗಿನ ಬಲವು ಅಲ್ಲಿ ಇನ್ನೂ ಬಹಳವಿದೆ ಅದನ್ನು ಎದುರಿಸುವ ಪರಿಸ್ಥಿತಿಯು ಅಲ್ಲಿ ಇನ್ನೂ ಯಾರಿಗೂ ಇಲ್ಲ.

ಇದೇ ಕಾಲಕ್ಕೆ ಕೂಡಿದ ಪಾಕಿಸ್ತಾನದ ಶಾಯಿವೆ ಮಂಡಲದಲ್ಲಿ ಏನು ಉತ್ಸಾಹವಿದ್ದಿಲ್ಲವಂತೆ ಸಾಕಷ್ಟು ಸಭಾಸದರೂ ಇರುತ್ತಿದ್ದಿಲ್ಲ. ಇದ್ದವರು ಆಸ್ಥೆವಹಿಸುತ್ತಿದ್ದಿಲ್ಲ. ಏನೋ ಬಲಾತ್ಕಾರದಿಂದ ಹಿಡಿದುಕೊಂಡು ಬಂದ ಪ್ರಾಣಿಗಳಂತೆ ಅವರಲ್ಲಿಯ ಅನೇಕರು ವರ್ತಿಸುತ್ತಿದ್ದರು

ಹೀಗೆ ಪಾಕಿಸ್ತಾನದಲ್ಲಿ ಇಂದು ಇಬ್ಬಣವು ತಲೆದೋರುತ್ತಿದೆ ಮತ್ತು ಜಿನ್ನಾರವರ ಸರ್ವಾಧಿಕಾರೀ ವ ನೋವೃತ್ತಿಯಬಗ್ಗೆ ಪ್ರತಿಭಟನೆಯು ಉಂಟಾಗುತ್ತಿದೆ. ಅದನ್ನು ದುರ್ಲಕ್ಷಿಸಿ ತಮ್ಮ ಹಟವನ್ನೇ ಸಾಧಿಸಲು ಜಿನ್ನಾರವರು ಮತ್ತು ಅವರ ಮುಸ್ಲಿಂಲೀಗ ಜನರು ಹಿಂದಿನಂತೆ ಮುಂದೆಯೂ ಯತ್ನಿಸಿದರೆ ಅವರ ಮನೆಯಲ್ಲಿಯೇ ಅವರಿಗೆ ಸೋಲು ಉಂಟಾಗದೆ ಇರದು

---

## ಪೂರ್ವ ತಾಲೂಕುಗಳ ಕರ್ನಾಟಕ ಏಕೀಕರಣ ಪರಿಷತ್ತು

ಎಮ್ಮಿಗನೂರ (ಆದವಾನಿ) ನಲ್ಲಿ ೧೨-೬-೪೮ ರ ದಿನ ನಡೆದ ಈ ಪರಿಷತ್ತಿನ ಸಮಗ್ರ ವೃತ್ತಾಂತವನ್ನು ಬರುವ ವಾರ ಕೊಡುತ್ತೇವೆ.

## ಹೈ ದ ರಾ ಬಾ ದು.

ಈ ಸಂಬಂಧ ಮಾತು ಕತೆಗಳು ವಿಫಲವಾಗಿ ಹೈದರಾಬಾದು ಪ್ರತಿನಿಧಿ ಮಂಡಲವು ಹಿಂದಕ್ಕೆ ಹೋಗಿದೆ. ಇನ್ನುಮೇಲೆ ಭಾರತ ಒಕ್ಕೂಟದಮೇಲೆ ದಾಳಿಯು ನಡೆದರೆ ಇಲ್ಲಿಯ ಸಶಸ್ತ್ರ ಪೋಲೀಸರೂ, ಸೈನಿಕರೂ, ಹೈದರಾಬಾದ್ ಒಳನುಗ್ಗಿ ಅವರನ್ನು ಬಡಿದು ಹೊಡೆಯಲಿದ್ದಾರೆ— ಹೈದರಾಬಾದ್ ಮೇಲೆ ಭಾರತ ಸರ್ಕಾರವು ಇನ್ನೇನು ಕಾರ್ಯಕ್ರಮ ತೆಗೆದುಕೊಳ್ಳುವುದೋ ಗೊತ್ತಿಲ್ಲ.

## ಮಹಾತ್ಮ ಗಾಂಧಿಯವರ ಅಸ್ಥಿ :-

ಕೊನೆಯ ಭಾಗದ ಅಸ್ಥಿಯು ದಕ್ಷಿಣ ಆಫ್ರಿಕಾಕ್ಕೆ ಒಯ್ಯಲ್ಪಡುವುದು. ಗಾಂಧೀಜಿ ಎರಡನೇ ಪುತ್ರರಾದ ಮಣಿಲಾಲಗಾಂಧಿಯವರು ಅದನ್ನು ಸ್ವೀಕರಿಸಿ ಮಂತ್ರಪೂರಿತವಾಗಿ ಸಮುದ್ರಕ್ಕೆ ಅರ್ಪಿಸುವರು. ಕೆದಾರನಾಥ ಬದ್ರಿನಾಥ ಕೈಲಾಸಕ್ಕೂ ಈ ಮುಂಚೆ ಒಯ್ಯಲಾಗಿ ಅಲ್ಲಿಯ ಪವಿತ್ರ ಕುಂಡಗಳಲ್ಲಿ ಅರ್ಪಿಸಲಾಗಿತ್ತು.

## ಪಾಲಿಸ್ತಾನದಲ್ಲಿ ತಿಂಗಳ ಶಾಂತಿ :-

ಅರಬರೂ, ಯಹೂದಿಗಳೂ ಪಾಲಿಸ್ತಾನದಲ್ಲಿ ಒಂದು ತಿಂಗಳವರೆಗೆ ಕಾದಾಡದಿರಲು ಒಪ್ಪಿರುತ್ತಾರೆ. ಇದು ೧೧ ನೆಯ ದಿನಾಂಕದಿಂದ ಜಾರಿಯಲ್ಲಿ ಬರಲಿದೆ.

ಪಂಡಿತ ಜವಹರಲಾಲರು ಬ್ರಿಟಿಷ್ ಪ್ರಧಾನ ಮಂತ್ರಿಗಳ ಆಹ್ವಾನವನ್ನು ಸ್ವೀಕರಿಸಿ ಹಿಂದೂಸ್ತಾನದಲ್ಲಿ ಶಾಂತಿಯಿದ್ದರೆ ಅಕ್ಟೋಬರದಲ್ಲಿ ಲಂಡನ್ನಿಗೆ ಹೋಗುವರು.

## ಬ ಳ್ಳಾ ರಿ.

ಆಂಧ್ರಮಹಾಸಭೆಯ ಶಾಖೆಯವರು ಸಭೆಗೂಡಿ ಯಮ್ಮಿಗನೂರು ಕನ್ನಡ ಏಕೀಕರಣ ಪರಿಷತ್ತು ಅನ್ಯಾಯದ್ದೆಂದೂ, ಆಂಧ್ರ ಭಾಗದಲ್ಲಿ ಇಂಥಾ ಸಭೆಯನ್ನು ನೆರವೇರಿಸಬಾರದಿತ್ತೆಂದೂ ಅಭಿಪ್ರಾಯ ಪಟ್ಟರು.

ಸೋಶಿಯಲಿಸ್ಟ್ ಪಾರ್ಟಿಯವರು ಠರಾವನ್ನು ಮಾಡಿ ಬೆಳೆಯುತ್ತಿರುವ ಪ್ರಾಂತೀಯ ಭಾವವನ್ನು ಖಂಡಿಸಿದರು. ಮುಸಲ್ಮಾನರು ಹೈದರಾಬಾದ ವಿಷಯಕ್ಕೆ ಭಾರತ ಸರ್ಕಾರಕ್ಕೆ ವಿಧೇಯರಾಗಿರಬೇಕೆಂದೂ ಅವರೊಡನೆ ಸಂಪರ್ಕ ಬೆಳೆಸಲು ರಿಯಾಜುದ್ದೀನ್, ಬಿ. ಬಿ. ಆಚಾರ್ಯರನ್ನು ನಿಯಮಿಸಬೇಕೆಂದೂ ಠರಾವು ಪಾಸಾಯಿತು.

# ಇಂಗ್ರಜಿ ಭಾಷೆಯ ಬವಿತವ್ಯ

ಸ್ವಾತಂತ್ರವು ಸಿಕ್ಕಬಳಿಕ ಹಿಂದುಸ್ಥಾನವು ಸರ್ವ ವಿಷಯಗಳಲ್ಲಿ ಸ್ವಾವಲಂಬಿಯಾಗಲು ಯತ್ನಿಸುತ್ತಿದೆ. ತನ್ನದೇ ಆದ ಒಂದು ಭಾಷೆಯು ಇರಬೇಕೆಂಬ ಬಗ್ಗೆಯೂ ಅದು ಆಲೋಚಿಸಿ "ಹಿಂದೀ ಭಾಷೆಯು" ಆ ಸ್ಥಾನವನ್ನು ಸ್ವೀಕರಿಸಬೇಕೆಂದು ನಿರ್ಧರಿಸಿದೆ.

ಹಿಂದೀಭಾಷೆಯು ನಮ್ಮ ಭಾಷೆಯಾಗಬೇಕೆಂಬ ಬಗ್ಗೆ ಕಾಂಗ್ರೆಸ ಸಂಸ್ಥೆಯು ಬಹಳ ದಿವಸಗಳಿಂದ ಯತ್ನಿಸುತ್ತ ಬಂದಿದೆ. ಅದು ನಾಳೆ ನಮ್ಮ ದೇಶದ ರಾಷ್ಟ್ರಭಾಷೆಯಾಗುವುದರಿಂದ ಅದನ್ನು ಸರ್ವರೂ ಕಲಿಯಬೇಕೆಂಬ ಬಗ್ಗೆ ಕಾಲ ಕಾಲಕ್ಕೆ ಎಚ್ಚರಿಕೆ ಕೊಡುತ್ತ ಕಾಂಗ್ರೆಸ್ಸು ಬಂದಿತ್ತು. ಮತ್ತು ಆ ಬಗ್ಗೆ ಒಂದು ಸಂಸ್ಥೆಯನ್ನು ಪ್ರಾರಂಭಮಾಡಿ ಅದರ ದ್ವಾರಾ ಭಾರತೀಯರಿಗೆ ಆ ಭಾಷೆಯ ಅಭ್ಯಾಸವನ್ನು ಮಾಡಿಸಿತು, ಇದಲ್ಲದೆ ಬೇರೆ ಕೆಲವು ಸಂಸ್ಥೆಗಳೂ ಈ ಕಾರ್ಯವನ್ನು ಬಹು ದಿವಸದಿಂದ ನಡೆಸುತ್ತ ಬಂದಿವೆ.

ಕಾಂಗ್ರೆಸ್ಸು ಇಷ್ಟಕ್ಕೆ ನಿಲ್ಲಲಿಲ್ಲ. ತನ್ನ ಸರ್ವ ಕಾರ್ಯಕಲಾಪಗಳನ್ನು ಸಾಧ್ಯವಿದ್ದಮಟ್ಟಿಗೂ ಹಿಂದೀ ಭಾಷೆಯಲ್ಲಿ ನಡೆಸಹತ್ತಿತು. ಮಹಾತ್ಮಾಗಾಂಧೀ ಮೊದಲಾದ ಮುಖಂಡರು ಹಿಂದಿಯಲ್ಲಿಯೇ ಹೆಚ್ಚಾಗಿ ಮಾತಾಡಹತ್ತಿದರು.

ಇಷ್ಟಾದರೂ ಇನ್ನೂ ಹಿಂದಿಯನ್ನು ತಿಳಿಯದ ಅವರಲ್ಲಿ ಚನ್ನಾಗಿಮಾತನಾಡಲು ಬರೆಯಲು ಬರದ ಅನೇಕರು ಹಿಂದುಸ್ಥಾನದಲ್ಲಿ ಇದ್ದಾರೆ. ಕಾಂಗ್ರೆಸ ಅಧಿವೇಶನದಲ್ಲಿ ಕೂಡ ಇನ್ನೂ ಇಂಗ್ರೇಜಿಯಲ್ಲಿ ಭಾಷಣಗಳಾಗುವದು ಕಂಡು ಬರುತ್ತದೆ

ಒತ್ತಾಯದ ಪ್ರಸಂಗವಿಲ್ಲದಿದ್ದರೆ ಜನರು ಯಾವುದೇ ಕಾರ್ಯವನ್ನು ತಾವಾಗಿಯೇ ಕೈಕೊಂಡು ಮುಗಿಸುವುದು ಅಸಂಭವ. ಅದಕ್ಕಾಗಿಯೇ ಹಿಂದುಸ್ಥಾನ ಸರಕಾರದವರು ಕಾಯಿದೆಯಿಂದ ಈ ಭಾಷೆಯನ್ನು ಒತ್ತಾಯದಿಂದ ಕಲಿಸಲು ಮತ್ತು ಇಂಗ್ರೇಜಿ ಭಾಷೆಯನ್ನು ಮರೆಯಹಚ್ಚಲು ಮುಂದೆ ಬಂದಿದ್ದಾರೆ. ಅದರಲ್ಲಿಯೂ ಸಂಯುಕ್ತಪ್ರಾಂತ ಸರಕಾರವು ಈ ಕಾರ್ಯದಲ್ಲಿ ಬಹಳ ಮುಂದುವರಿದಿದೆ

ಯಾವುದೇ ಮಾತಿಗೆ ವಿವಿಧ ಅಡ್ಡಿ ಆತಂಕಗಳು ಇರುತ್ತವೆ. ಹಿಂದೀ ಭಾಷೆಯ ಪ್ರಸಾರಕ್ಕಾದರೂ ಈ ಮಾತು ಇದ್ದೇ ಇದೆ. ಹಿಂದೀಭಾಷೆಯು ಸಂಸ್ಕೃತ ಜನ್ಯವಾದದ್ದು ಆದ್ದರಿಂದ ಇತರ ಸಂಸ್ಕೃತ ಜನ್ಯಭಾಷೆಗಳನ್ನು ಮಾತೃಭಾಷೆಯಾಗಿ ಉಳ್ಳವರು ಈ ಭಾಷೆಯನ್ನು ಸಹಜವಾಗಿ ಕಲಿಯುತ್ತಾರೆ. ಹಾಗಿಲ್ಲದಲ್ಲಿ ಈ ಭಾಷೆಯನ್ನು ಕಲಿಯಲು ಜನರಿಗೆ ಹೆಚ್ಚಿನ ಶ್ರಮಪಡಬೇಕಾಗುತ್ತದೆ

ಉದಾಹರಣೆಯನ್ನು ಹೇಳುವುದಾದರೆ ಕನ್ನಡ, ತೆಲಗು, ತಮಿಳು ಮತ್ತು ಮಲೆಯಾಳಿ ಭಾಷೆಗಳ ಜನರಿಗೆ ಹಿಂದೀ ಭಾಷೆಯು ಜಡವೆನಿಸುತ್ತದೆ ಅದಕ್ಕಾಗಿಯೇ ಈ ಭಾಷಾ ಪ್ರಸಾರವನ್ನುಮಾಡುವ ಕಾರ್ಯವನ್ನು ದಕ್ಷಿಣದಲ್ಲಿ ಹಿಂದೀಭಾಷಾ ಪ್ರಸಾರಕರು ಮದ್ರಾಸ ಹಿಂದೀ ಪ್ರಚಾರಕ ಸಭಾ ಎಂಬ ಸಂಸ್ಥೆಯ ದ್ವಾರಾ ಬಹಳ ವರ್ಷಗಳಿಂದ ನಡೆಸಿದ್ದಾರೆ. ಆದರೂ ಈ ಬಗ್ಗೆ ದಕ್ಷಿಣದಲ್ಲಿ ಇನ್ನೂ ಅಜ್ಞಾನವು ಹೆಚ್ಚಾಗಿದೆ.

ಬಂಗಾಲ ಪ್ರಾಂತವು ನಿಜವಾಗಿ ನೋಡಿದರೆ ಹಿಂದೀ ಪ್ರಸಾರವನ್ನು ಹೆಚ್ಚಾಗಿ ಮಾಡಬೇಕಾಗಿತ್ತು; ಬಂಗಾಲಿ ಭಾಷೆಯು ಸಂಸ್ಕೃತಜನ್ಯಭಾಷೆ ಅಲ್ಲಿಯವರಿಗೆ ಹಿಂದಿಯು ಸಾಮಾನ್ಯವಾಗಿ ಬಂದೇ ಬರುತ್ತದೆ. ಆದರೂ ಹಿಂದೀ ಕಲಿಯಬೇಕೆಂಬ ಬಗ್ಗೆ ಮತ್ತು ಅದರಲ್ಲಿಯೇ ಮಾತಾಡಬೇಕೆಂಬ ಬಗ್ಗೆ ಅವರಲ್ಲಿ ಹೆಚ್ಚು ಆಸ್ಥೆ ಕಂಡು ಬರುವದಿಲ್ಲ ಅಲ್ಲಿಯ ಪ್ರಮುಖರು ಹೆಚ್ಚಾಗಿ ಇಂಗ್ರಜಿಯಲ್ಲಿ ಮಾತಾಡುವುದೇ ಬಹಳ.

ಭರತಖಂಡದ ಸರ್ವ ದೇಶಗಳಲ್ಲಿ ಹಿಂದೀ ಭಾಷೆಯ ಅಲ್ಪಸ್ವಲ್ಪ ಜ್ಞಾನವು ಇದ್ದೇ ಇದೆ. ಏಕೆಂದರೆ ಮುಸಲ್ಮಾನೀ ಭಾಷೆಯು ಸರ್ವ ಕಡೆಗೆ ಕೇಳುತ್ತಿರುವುದರಿಂದ ಅದರಲ್ಲಿ ಹರಕು ಮುರುಕು ಮಾತಾಡಲು ಅನೇಕರಿಗೆ ಬರುತ್ತಿರುತ್ತದೆ. ಅವರಲ್ಲಿ ಶಿಕ್ಷಣ ಮೂಲಕ ಸ್ವಲ್ಪ ಪ್ರಯತ್ನಮಾಡಿದರೆ ಹಿಂದೀ ಭಾಷೆಯ ಜ್ಞಾನವಾಗಲು ತಡವಾಗುವದಿಲ್ಲ.

ಏನೇ ಇರಲಿ ಇಂದುಮಾತ್ರ ಹಿಂದೀಭಾಷೆಯನ್ನು ಕಲಿಸುವುದು ಅನಿವಾರ್ಯವಾಗಿ ಬಂದಿದೆ. ಇಂಗ್ರಜಿ ಭಾಷೆಯ ಸ್ಥಳದಲ್ಲಿ ಹಿಂದಿಯು ಕ್ರಮೇಣ ಬರುವಂತೆ ಸರಕಾರದವರು ಯೋಜನೆಯನ್ನೇ ಪ್ರಾರಂಭಿಸಿಬಿಟ್ಟಿದ್ದಾರೆ. ಇನ್ನು ಐದು ವರ್ಷಗಳಲ್ಲಿ ಇಂಗ್ರಜಿ ಭಾಷೆಯು ಬಹಳವಾಗಿ ಕೇಳಬರದಿರುವಷ್ಟು ಪರಿಸ್ಥಿಯು ಹುಟ್ಟುವ ಸಂಭವವಿದೆ.

ಸಧ್ಯದ ಪೀಳಿಗೆಯು ಅಂದರೆ ಹಿರಿಯರು ಇರುವವರೆಗೆ ಇಂಗ್ರಜಿಯು ನಮ್ಮಲ್ಲಿ ಇರುವುದು ಮತ್ತು ಇಂದು ಇಂಗ್ರಜಿ ಕಲಿತ ವಿದ್ಯಾರ್ಥಿಗಳು ಇರುವವರೆಗೆ ಅದು ಕೇಳಿಸಬಹುದು. ಆಮೇಲೆ ಅದು ಹಿಂದುಸ್ಥಾನದಲ್ಲಿ ಇಂದು ಇರುವ ಜರ್ಮನ್, ಜಪಾನೀ, ಚೀನೀ, ಫ್ರೆಂಚ ಭಾಷೆಗಳು ಇರುವಷ್ಟು ಇರಬಹುದಾಗಿದೆ.

ಹಲಕೆಲವರು ಈ ಸ್ಥಿತ್ಯಂತರವನ್ನು ಕಂಡು ವಿವಂಚನೆಗೊಳಗಾಗಿದ್ದಾರೆ. ಇಂಗ್ರಜಿ ಭಾಷೆಯು ಇಂದು ಇರುವಂತೆಯೇ ಇರಲಿ ಎಂದು ಹೇಳಲು ಅವರಿಗೆ ಬರಲಾರದಾಗಿದ್ದರೂ ಅದನ್ನು ಸಂಪೂರ್ಣ ಕಳೆಯಬಾರದೆಂದು ಅವರು ಅನ್ನುತ್ತಿದ್ದಾರೆ. ಜಗತ್ತಿನ ಬಹುಭಾಗದಲ್ಲಿ ಮತ್ತು ಪ್ರಗತಿಪರ ರಾಷ್ಟ್ರಗಳಲ್ಲಿ ಇಂಗ್ರಜಿ ಭಾಷೆಯು ನಡೆಯುತ್ತಿದೆ, ಅವರೊಡನೆ ನಾವು ಅನೇಕ ಸಂದರ್ಭಗಳಲ್ಲಿ ಸಂಬಂಧವನ್ನಿಟ್ಟುಕೊಳ್ಳಬೇಕಾಗುವುದು, ಈ ಸಂಬಂಧಕ್ಕೆ ಬೇಕಾದ ಭಾಷಾಜ್ಞಾನವು ಇಂಗ್ರಜಿಯಲ್ಲಿರದಿದ್ದರೆ ನಮ್ಮ ಕೆಲಸವು ಕುಂಟುಬೀಳುವುದು ಎಂದು ಅವರು ಅಭಿಪ್ರಾಯಪಡುತ್ತಿದ್ದಾರೆ.

ಈ ವಿಷಯದಲ್ಲಿಯೂ ನಮ್ಮ ಸರಕಾರದವರು ವಿಚಾರಮಾಡದೆ ಇಲ್ಲ. ಅದಕ್ಕಾಗಿ ಒಂದು ವಿಶೇಷ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಹಾಗೆ ನೋಡಿದರೆ ಜಗತ್ತಿನ ಸರ್ವ ಭಾಷೆಗಳ ಜ್ಞಾನವಿರುವುದು ಹಾನಿಕರವಾಗಲಾರದು. ಆದರೆ ಅದರ ಮೋಹದಲ್ಲಿ ಸಿಕ್ಕು ನಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳಲು ಬರಲಾರದು. ಈ ಮಾತಿನಕಡೆಗೆ ಲಕ್ಷಗೊಟ್ಟು, ಪರದೇಶೀಯ ಸಂಬಂಧಗಳನ್ನು ಉಳಿಸಿಕೊಳ್ಳಲು ಅವಶ್ಯವಿದ್ದ ವ್ಯವಸ್ಥೆಗಳನ್ನು ನಾವು ಮಾಡಿಕೊಳ್ಳಬೇಕಾಗುವುದು.

ಪಾಶ್ಚಾತ್ಯ ಅಥವಾ ಪರದೇಶಗಳಿಗೆ ಹೋಗುವ ಪ್ರಸಂಗವು ಸ್ವಲ್ಪೇ ಜನರಿಗೆ ಬರುವುದು ಅಥವಾ ಪರದೇಶೀಯರ ಸಂಗಡ ವ್ಯವಹಾರಮಾಡುವ ಪ್ರಸಂಗವೂ ಸರ್ವರಿಗೆ ಬರುವುದಿಲ್ಲ. ಹೀಗಿರುವಾಗ ಎಲ್ಲರಿಗೂ ಇಂಗ್ರಜಿ ಕಲಿಸುವ ಅವಶ್ಯಕತೆಯಿಲ್ಲ. ಮಧ್ಯಮಿಕ ಶಿಕ್ಷಣದ ಕೊನೆಯ ಪರೀಕ್ಷೆ (ಇಂದಿನ ಮ್ಯಾಟ್ರಿಕ್ಯುಲೇಶನ್) ಯವರೆಗಂತೂ ಇಂಗ್ರಜಿ ಭಾಷೆಯ ಅವಶ್ಯಕತೆಯು ಇಲ್ಲವೇ ಇಲ್ಲ. ಉಚ್ಚ ಶಿಕ್ಷಣದ (ಕಾಲೇಜ) ವೇಳೆಯಲ್ಲಿ ಬೇಕಾದವರು ಇಂಗ್ರಜಿ ಭಾಷೆಯನ್ನು ಐಚ್ಛಿಕವಾಗಿ ಕಲಿಯ[illegible] [illegible] ಪರದೇಶಗಳ ಸಂಬಂಧವನ್ನಿಟ್ಟುಕೊಂಡು ನಾಳೆ [illegible] ವ್ಯವಹಾರವನ್ನು ಮಾಡಬೇಕೆನ್ನುವವರು ಮಾತ್ರ [illegible]ನ್ನು ಕಲಿಯಲು ಮುಂದೆ ಬರುವರು.

[illegible] ಯ ಸಂಬಂಧವಾಗಿ ಪರದೇಶಗಳಿಗೆ ಹೋಗಿ [illegible]ಬೇಕಾದ ಜನರ ಗುಂಪು[illegible] ಸರಕಾರವು ವಿಶೇಷ ರೀತಿಯಿಂದ ನಿರ್ಮಾಣಮಾಡ[illegible]ಬಹುದು. ಅದಕ್ಕಾಗಿ ಒಂದು ಶಿಕ್ಷಣ ಕ್ರಮವನ್ನೇ [illegible]ತ್ತು ಮಾಡಬೇಕಾಗಬಹುದು. ಆದರಿಂದ ಆ ಕಾರ್ಯಕ್ಕೆ ಬೇಕಾದವರನ್ನು ಅದು ದೊರಕಿಸಬೇಕಾಗುವುದು.

ಸಾರ್ವತ್ರಿಕವಾಗಿ ಇಂಗ್ರಜಿ ಕಲಿಸಿದ್ದರೆ ಇನ್ನೂ ಎಷ್ಟೋ ಜನರಲ್ಲಿದ್ದ ನೈಪುಣ್ಯವು ದೇಶಕ್ಕೆ ದೊರೆಯಬಹುದಾಗಿತ್ತು ಎಂದು ಕೆಲವರು ಹೇಳಬಹುದು. ಆದರೆ ಆ ಹಾನಿಯನ್ನು, ನಮ್ಮ ದೇಶದ್ದೇ ಆದ ಒಂದು ರಾಷ್ಟ್ರಭಾಷೆಯನ್ನು ಹುಟ್ಟಿಸಿಕೊಳ್ಳುವಂತಹ ಅವಶ್ಯಕ ಕಾರ್ಯವಮಾಡಬೇಕಾದವರು ಸಹಿಸುವುದು ಅನಿವಾರ್ಯವಾದ ಕಾರ್ಯವಾಗಿದೆ.

ಬಹು ದಿವಸದಿಂದ ಇದ್ದ ಇಂಗ್ರಜಿ ಭಾಷೆಯ ಮೋಹವನ್ನು ಬಿಡುವ ಪ್ರಸಂಗ ಬಂದಾಗ್ಗೆ ಮೇಲಿನಂತಹ ಸೂಚನೆಗಳು ಬರುವುದು ಸ್ವಾಭಾವಿಕವಾಗಿದೆ. ಸರಕಾರದವರು ಅವುಗಳಿಗೆ ಯೋಗ್ಯ ಲಕ್ಷಗೊಡುವುದೂ ಮತ್ತು ಅವುಗಳಿಂದ ತಮ್ಮ ಕಾರ್ಯಕ್ರಮಗಳಿಗೆ ಅಡ್ಡಿ ಬಾರದಂತೆ ನೋಡಿಕೊಂಡು ಮುಂದೆ ಸಾಗುವುದೂ ಅವಶ್ಯಕವಾದದ್ದಾಗಿದೆ.

# The' Rayalaseema Bank Ltd., H. O. Bellary

)0(

## ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—19

ಮುಖ್ಯ ಕಾರ್ಯಾಲಯ—ಬಳ್ಳಾರಿ.

)0(

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ 33 ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ

**ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

| | | |
|---|---|---|
| 3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ .. | ರೂ. 3½% | .. |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ .. | ರೂ. 4% | .. |

ಚಾಲ್ತಿ ಖಾತೆ (Current Account) 00 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕ… ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಣಿ… ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಕ… ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು ಮೂರು ವರ್ಷಗಳನಂತರ ಪೂರ… ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಬಿ. ವಿ. ಶೇಷಗಿರಿರಾವ್ ಬಿ. ಕಾಂ
ಕಾರ್ಯದರ್ಶಿ



# NAVA BHARAT BELLARY.

(14th 21st Jun48'.)

Reg.NoM. 4740

**ನವ ಭಾರತ ಬಳ್ಳಾರಿ.**

**(Nationalist Weekly)**

| ಚಂದಾದರಗಳು. | Subscription Rates |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri……………………………………
……………………………………
……………………………………

Printed at Vittal Press, Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

[illegible] ೧೧ | ಬಳ್ಳಾರಿ ಜೂನ್ ೨೧ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ
[illegible]ಕೆ ೨೨ | | ಟಿ. ಬಿ. ಕೇಶವರಾವ್.

## ಹೈದರಾಬಾದ ಸಂಧಾನ ವಿಫಲವಾಯಿತು.

ನವದೆಹಲಿಯಿಂದ ಹೈದರಾಬಾದ ಸಂಧಾನವು ವಿಫಲವಾಯಿತೆಂದು ೧೯ನೆಯ ದಿನಾಂಕ ಪ್ರಕಟನೆ ಹೊರಟಿದೆ. ಇಂಡಿಯಾ ಪ್ರಧಾನರಾದ ಪಂಡಿತ ನೆಹರೂರವರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿಕೆ ಕೊಡುತ್ತಾ ಸಂಧಾನದ ಶರ್ತುಗಳನ್ನು ನಿಜಾಮರು ಯಾವಾಗ ಬೇಕಾದರೂ ಒಪ್ಪಬಹುದೆಂದರು. ಅವರ ಮೇಲೆ ಎಂಥಾ ಚರ್ಯೆಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಿಶ್ಚಯಿಸಲಾಗುವುದೆಂದರು- ಮುಸಲ್ಮಾನೇತರರು ಹೈದರಾಬಾದು ಬಿಟ್ಟುಹೋಗಬಾರದೆಂದರು

## ಸೇವಾಮಂದಿರದಲ್ಲಿ ಶಿಕ್ಷಣ.

ಅನಂತಪುರದ ಜಿಲ್ಲಾ ಹಿಂದೂಪುರಕ್ಕೆ ೩ ಮೈಲಿ ದೂರದಲ್ಲಿರುವ ಸೇವಾಮಂದಿರದಲ್ಲಿ ಆಗಸ್ಟದಿಂದ ಪ್ರಾರಂಭವಾಗಲಿರುವ ಕಟ್ಟಿಗೆ ಆಟದ ಸಾಮಾನು ಮತ್ತು ಅರಗಿನ ಬಣ್ಣ ವಗೈರೆ ಇತರ ಉದ್ಯೋಗಗಳನ್ನು ಕಲಿಸುವ ಶಿಕ್ಷಣದ ಅವಧಿ ೧೦ ತಿಂಗಳು. ಇಬ್ಬರು ಬಾಲಕರಿಗೆ ಊಟಕ್ಕೆ ಸಾಕಾಗುವಷ್ಟು ವೇತನಕೊಡಲಾಗುವುದೆಂದೂ ಇತರ ಖರ್ಚುಗಳನ್ನು ಭರಿಸಲಾಗುವುದೆಂದೂ ಜಿ. ಕಾ. ಕಾರ್ಯದರ್ಶಿ ಶ್ರೀ ಬಸವನಗೌಡರು ತಿಳಿಸುತ್ತಾರೆ. ಶಿಕ್ಷಣಹೊಂದಿ ಬಂದವರು ಸುಖವಾಗಿ ಜೀವಿಸಲನುವಾಗುವ ಕಾರಣ ಉಮೇದುವಾರರು. ಅದರಲ್ಲೂ ಬಡಗಿಯವರು ತ್ವರೆಮಾಡಬೇಕು.

## ಎಮ್ಮಿಗನೂರಲ್ಲಿ ಆಂಧ್ರರ ಕರೆನಿಶಾನಿ.

ಎಮ್ಮಿಗನೂರಲ್ಲಿ ಆಂಧ್ರ ಸಮಿತಿಯವರು ಪೂರ್ವ ತಾಲೂಕುಗಳ ಕರ್ನಾಟಕ ಏಕೀಕರಣ ಪರಿಷತ್ತು ಸೇರಿದಾಗ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಕರೆಬಾವುಟಗಳ ಪ್ರದರ್ಶನಮಾಡಿದರು. ಶ್ರೀ ಹನುಮಂತರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಆಂಧ್ರ ಪ್ರದೇಶಗಳ ಮೇಲಣ ದುರಾಕ್ರಮಣವನ್ನು ಖಂಡಿಸಿದರು.

## ಅ. ಭಾ. ಚರಖಾಸಂಘದ ಖಾದಿವಸ್ತ್ರಾಲಯ, ಬಳ್ಳಾರಿ.

ಬಳ್ಳಾರಿ ನಗರದಲ್ಲಿ ಅ.ಭಾ.ಚ. ಸಂಘದ ಪ್ರಮಾಣಿತ ಖಾದಿಗೆ ಇಷ್ಟುದಿನ ಕೊರತೆ ಇದ್ದಿತು. ಶ್ರೀ ಕಲ್ಗಣ ಶಿವ[illegible]ನವರಿಗೆ ಈ ಪ್ರಮಾಣ ಪತ್ರವು ದೊರೆತು ಅವರು ಸರ್ಟಿಫೈಡ್ ಖಾದಿ ತಂದಿರುವರು. ಖಾದಿಧಾರಿಗಳು ಅವರಿಂದ ತಮಗೆ ಬೇಕಾದ ಬೇಡಿಕೆಗಳನ್ನು ಪಡೆಯಬಹುದು.

Please Note

**Narasepalli Workshops**
BELLARY

— UNDERTAKE —

Turning, Electric Welding & Tempering
OF
SPARE PARTS OF ALL KINDS.

**Reasonable Charges**

TRIAL SOLICITED.

Telegrams
OIL MILLS.

Telephone
57.

## ಹೈದರಾಬಾದಿಗೆ ಮುಂಕಿ ಶರೀಫರ ಬೆಂಬಲ

### ಗಡಿನಾಡಿನ ಪಡೆಗಳನ್ನು ಕಳಿಸಲು ಸಿದ್ಧತೆ

"ಇಸ್ಲಾಂ ಮತ್ತು ಅದರ ವಿರುದ್ಧವಿರುವ ದುಷ್ಟ ಶಕ್ತಿಗಳ ನಡುವೆ ಹೋರಾಟವು ಈಗಾಗಲೇ ಸುರುವಾಗಿದೆ. ಭೂಮಧ್ಯ ದ್ವೀಪದಂತಿರುವ ಹೈದರಾಬಾದವನ್ನು ನಾಶಮಾಡಲು ಹಿಂದುಸ್ತಾನ ಒಕ್ಕೂಟವು ಸುತ್ತಲೂ ಬೆಂಕಿ ಹೊತ್ತಿಸಿವೆ. ಹಿಂದುಸ್ತಾನ ಸರಕಾರವು ಸ್ವತಂತ್ರ ಹೈದರಾಬಾದಿನಮೇಲೆ ದಾಳಿಮಾಡಿದಲ್ಲಿ ನಮ್ಮ ಗುಡ್ಡಗಾಡ ಪ್ರದೇಶದಲ್ಲಿ ಜೀವಿಸುತ್ತಿರುವ ಪ್ರತಿಯೊಂದು ವ್ಯಕ್ತಿಯೂ ಅಸಾಫ ಜಾಹೀ ಮನೆತನದ ರಕ್ಷಣೆಗಾಗಿ ಹೂಡಲ್ಪಡುವ ಈ ಯುದ್ಧಕ್ಕೆ ಧುಮುಕುವದು" ಎಂಬುದಾಗಿ ಮುಂಕಿ ಶರೀಫದ ಪೀರ ಸಾಹೇಬರು ಈ ದಿನ ಪೇಶಾವರಕ್ಕೆ ಹೊರಡುವ ಮುನ್ನ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತ ಸಾರಿದರು.

## ದೇವಾಲಯ-ಗುರುದ್ವಾರಗಳಿಗೆ ಪಾಕಿಸ್ತಾನದ ಸಹಾಯ

ಮುಸ್ಲಿಮೇತರರಲ್ಲಿ ತನ್ನ ಸೌಹಾರ್ದವನ್ನು ಪ್ರಕಟಿಸಲು ಪಾಕಿಸ್ತಾನ ಸರಕಾರವು ೫೪ ದೇವಾಲಯಗಳನ್ನೂ ೬೧ ಗುರುದ್ವಾರಗಳನ್ನೂ ತನ್ನ ವೆಚ್ಚದಿಂದ ನಡೆಸಬೇಕೆಂದು ನಿಶ್ಚಯಿಸಿದ್ದು ವರ್ಷಂಪ್ರತಿ ೩೨೦೦೦ ರೂ. ಗಳನ್ನು ಅವುಗಳಿಗಾಗಿ ವ್ಯಯಿಸಲಿದೆಯೆಂದು ತಿಳಿದಿದೆ.

## ವಲ್ಲಭಭಾಯಿ ಪಟೇಲ ಮಹಾವಿದ್ಯಾಲಯ

ವಲ್ಲಭಭಾಯಿ ಪಟೇಲ ಮಹಾವಿದ್ಯಾಲಯದ ಸ್ತ್ರೀಯರ ವಸತಿಗೃಹದ ಉದ್ಘಾಟನೆಯನ್ನು ಮೌಂಟಬ್ಯಾಟನ್ನರು ನೆರವೇರಿಸಿದರು.

ಬಿರ್ಲಾ ಎಜ್ಯುಕೇಶನ್ ಟ್ರಸ್ಟಿನವರು ೨೫ ಲಕ್ಷ ರೂ. ಗಳನ್ನು, ಪಟೇಲ ಮಹಾವಿದ್ಯಾಲಯಕ್ಕೆ ದೇಣಿಗೆಯಾಗಿ ಕೊಟ್ಟರು.

## ಪೂರ್ವ ಕರ್ನಾಟಕ ಏಕೀಕರಣ ಪರಿಷತ್ತು, ಎಮ್ಮಿಗನೂರು.

ಬಳ್ಳಾರಿ ಜಿಲ್ಲೆಯ ಮೂರು ಪೂರ್ವ ತಾಲೂಕಗಳ ಕರ್ನಾಟಕ ಏಕೀಕರಣ ಪರಿಷತ್ತು ಜೂನ ೧೨ಕ್ಕೆ ಎಮ್ಮಿಗನೂರಿನಲ್ಲಿ ವೈಭವ ಮತ್ತು ಉತ್ಸಾಹಪೂರಿತವಾಗಿ ನಡೆಯಿತು. ಕನ್ನಡ ತರುಣರು ಸಮ್ಮೇಲನದ ಆವರಣವನ್ನು ರಕ್ಷಿಸುತ್ತಿದ್ದರು. ಮೈಸೂರು ಘಟನಾ ಸಭೆಯ ಅಧ್ಯಕ್ಷರಾದ ಶ್ರೀ ಟಿ. ಸುಬ್ರಮಣ್ಯಂರವರು ಸಮ್ಮೇಲನವನ್ನು ಆರಂಭಿಸಿದರು. ಇಂದಿನ ಸಮಾರಂಭದಲ್ಲಿ ಕನ್ನಡಿಗರು ತೋರಿಸಿದ ಶಿಸ್ತಿಗಾಗಿ ತಮ್ಮ ಮೆಚ್ಚುಗೆಯನ್ನು ಶ್ರೀ ಟಿ. ಸುಬ್ರಮಣ್ಯಂರವರು ವ್ಯಕ್ತಪಡಿಸಿದರು

## ಟಿ. ಸುಬ್ರಮಣ್ಯರವರ ಭಾಷಣ.

ಶ್ರೀ ಸುಬ್ರಮಣ್ಯಂರವರು ತಮ್ಮ ಆರಂಭ ಭಾಷಣದಲ್ಲಿ ಹೀಗೆ ಹೇಳಿದರು

"ಮೈಸೂರು ಸಂಸ್ಥಾನವು ಒಂದು ಗೂಡಿದ ಸಂಯುಕ್ತ ಕರ್ನಾಟಕವಾಗುವುದು ದೇವರ ಇಚ್ಛೆಯಾಗಿದೆ. ಮೈಸೂರು ಜನರಿಗೆ ಏಕೀಕೃತ ಕರ್ನಾಟಕ ಬೇಕಾಗಿದೆ. ಮೈಸೂರಿಲ್ಲದೆ ಕರ್ನಾಟಕದ ಪ್ರಾಂತವಾಗುವುದೆಂಬುದನ್ನು ಯೋಚಿಸುವುದೂ ಸಾಧ್ಯವಿಲ್ಲ ಮೈಸೂರೇತರರು ಮೈಸೂರು ಮಹಾರಾಜರನ್ನು ಘಟನಾತ್ಮಕ ಅರಸಾಗಿ ಒಪ್ಪಿಕೊಳ್ಳಬೇಕು. ಇದರಿಂದಾಗಿ ಏಕೀಕರಣ ದಾರಿಯಲ್ಲಿರುವ ಒಂದು ದೊಡ್ಡ ಅಡಚಣೆ ದೂರಾಗುವುದ. ಏಕೀಕೃತ ಕರ್ನಾಟಕಕ್ಕೆ ಭವ್ಯ ಭವಿಷ್ಯವಿದೆ ಎಲ್ಲರೂ ಏಕ ಮನಸ್ಸಿನಿಂದ ಏಕೀಕೃತ ಕರ್ನಾಟಕದ ರಚನೆಗಾಗಿ ಶ್ರಮಿಸಬೇಕು" ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

## ಕಾರಂತರ ಭಾಷಣ.

ಅನಂತರ ಸಮ್ಮೇಲನದ ಅಧ್ಯಕ್ಷರಾದ ಕೆ. ಆರ್. ಕಾರಂತರು (ಎಂ. ಎಲ್. ಎ. ಮದ್ರಾಸು) ತಮ್ಮ ಅಧ್ಯಕ್ಷ ಭಾಷಣದಲ್ಲಿ ಆಂಧ್ರರು ಈ ಸಭೆಯಲ್ಲಿ ಭಾಗವಹಿಸಿ ಸ್ನೇಹಭಾವದಿಂದ ವಿಷಯಗಳನ್ನು ಚರ್ಚಿಸದಿರುವುದಕ್ಕಾಗಿ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ಮತ್ತು ಹೀಗೆ ಹೇಳಿದರು. "ಭಾಷಾವಾರು ಪ್ರಾಂತ್ಯ ರಚನೆಯು ಆಂಧ್ರರಿಗೂ ಮತ್ತು ಕನ್ನಡಿಗರಿಗೂ ಸಮವಾದ ಬೇಡಿಕೆಯಾಗಿದೆ. ಒಬ್ಬರ ಬೇಡಿಕೆಯನ್ನು ಇನ್ನೊಬ್ಬರು ಅಲ್ಲಗಳೆಯುವಂತಹ ಘೋಷಣೆಗಳಿಂದಲೂ, ಮತಪ್ರದರ್ಶನಗಳಿಂದಲೂ ಇಬ್ಬರಿಗೂ ಹಿತವೆನಿಸದು, ಆದ್ದರಿಂದ ಇವುಗಳನ್ನು ನಿಲ್ಲಿಸಬೇಕು. ಪಂಡಿತ ನೆಹರೂರವರು ಆಂಧ್ರ ಪ್ರಾಂತೀಕರಣದ ಬಗ್ಗೆ ಕೊಟ್ಟಿರುವ ಎಚ್ಚರಿಕೆಯನ್ನು ಗ್ರಹಿಸಿ, ಸಹನೆಯಿಂದ, ಸಹಕಾರದಿಂದ ಸಹಾಯದಿಂದ ಸಾಧಿಸಬೇಕ, ಆದರೆ ಭಾಷಾವಾರು ಪ್ರಾಂತ ರಚನೆಯನ್ನು ತಡಮಾಡಬೇಕೆಂಬ ನೆಹರುರವರ ಅಭಿಪ್ರಾಯವನ್ನು ನಾನು ವಿರೋಧಿಸುವೆನು ಯಾರಿಗೆ ಗಾಯವಿದೆಯೋ ಅವರಿಗದರ ನೋವು ಗೊತ್ತಾಗುವುದು ಈಗಿನ ಕನ್ನಡನಾಡಿನ ದುರವಸ್ಥೆ ಅದಕ್ಕಾಗುತ್ತಿರುವ ಅನ್ಯಾಯ ಬೇಗ ಸುಧಾರಿಸಿದಷ್ಟು ಒಳ್ಳೆಯದು ಕೇಂದ್ರ ಸರ್ಕಾರದ ಮುಂದೆ, ಹೈದ್ರಾಬಾದು ಕಾಶ್ಮೀರದ ಸಮಸ್ಯೆಗಳು ಇರುವುದು ನಿಜ. ಆದರೆ ಇದಿದ್ದ ಮಾತ್ರಕ್ಕೆ, ಭಾಷಾವಾರು ಪ್ರಾಂತ್ಯರಚನೆಯನ್ನು ಅನಿಶ್ಚಿತ ಕಾಲ ಮೂಲೆಗೊತ್ತುವುದರಲ್ಲಿ ಅರ್ಥವಿಲ್ಲ ಗಡಿಪ್ರದೇಶಗಳಲ್ಲಿ ಜನಗಣನೆಯ ಕರಾರುವಾಕ ಮಾಹಿತಿಯನ್ನು ಸಂಗ್ರಹಿಸುವುದು ಅಗತ್ಯ ಹಿಂದೀ ಒಕ್ಕೂಟದ ಒಪ್ಪಿಗೆಗೆ ಒಳಪಡಿಸಿ ಮೈಸೂರು ಮಹಾರಾಜರನ್ನು ಘಟನಾತ್ಮಕ ಅರಸರನ್ನಾಗಿ ನೇಮಕ ಮಾಡಿಕೊಳ್ಳುವುದು ಅಗತ್ಯವಿಲ್ಲವಾದರೆ ಅನಂತಪುರ, ಸೇಲಂ, ಕೊಯಂಬತೂರು ನೀಲಗಿರಿ ಇವುಗಳು ಏಕೀಕೃತ ಕರ್ನಾಟಕ ಸೊತ್ತಾಗಲಾರವು. ಭಾವಿ ಕರ್ನಾಟಕದಲ್ಲಿ ಲಿಂಗಾಯತರಿಗಾಗಲಿ, ಒಕ್ಕಲಿಗರಿಗಾಗಲಿ ಅಥವಾ ಇನ್ನಾವ ಜಾತಿಗಾಗಲಿ ಪ್ರಾತಿನಿಧ್ಯ ದೊರಕುವುದೆಂಬುದು ಸುಳ್ಳು. ಕನಿಷ್ಠ ಅಲ್ಪಸಂಖ್ಯಾಕರಿಗೂ ಸರ್ವರಕ್ಷಣೆ ಇದೆ" ಎಂದು ಹೇಳಿದರು.

## ಮುಖ್ಯ ಗೊತ್ತುವಳಿಗಳು

ಈ ಪರಿಷತ್ತಿನಲ್ಲಿ ಮಂಜೂರಾದ ಮುಖ್ಯ ಗೊತ್ತುವಳಿಗಳ ಅಭಿಪ್ರಾಯವಿಂತಿದೆ, ಸಭೆಯು ಆರಂಭವಾಗುವ ಮೊದಲು ಸ್ಥಳಿಕರು, ಮೌನದಿಂದ ಎದ್ದು ನಿಂತು ಮಹಾತ್ಮರದ ಬಗ್ಗೆ ತಮ್ಮ ಅನುತಾಪವನ್ನು ಸೂಚಿಸಿದರು. ಜಾತೀಯತೆಯನ್ನು ನಿರ್ಮೂಲವಾಡುವುದೇ ಮಹಾತ್ಮರಿಗೆ ಯೋಗ್ಯ ಸ್ಮಾರಕವೆಂದು ಅದನ್ನು ನಿರ್ಮೂಲ ಮಾಡುವ ಪ್ರತಿಜ್ಞೆಯನ್ನು ಈ ಸಭೆ ಸ್ವೀಕರಿಸಿತು.

( 7 ನೇ ಪುಟವನ್ನು ನೋಡಿರಿ )

— ಸಿರಿಗನ್ನಡಂಗೆಲ್ಗೆ —

# ಬಳ್ಳಾರಿ ಜಿಲ್ಲಾ ಪೂರ್ವ ತಾಲೂಕಗಳ ಕರ್ನಾಟಕ ಏಕೀಕರಣ ಪರಿಷತ್ತು ಎಮ್ಮಿಗನೂರು.

ಸ್ವಾಗತಾಧ್ಯಕ್ಷ:- ಶ್ರೀ ಎಂ. ವೈ. ಸೋಮಪ್ಪನವರ ಭಾಷಣ.

ಸನ್ಮಾನ್ಯ ಅಧ್ಯಕ್ಷರೇ ಮತ್ತು ಕನ್ನಡ ಬಂಧು ಭಗಿನಿಯರೇ,

ಕರ್ನಾಟಕದ ಮೂಲೆ ಮೂಲೆಗಳಿಂದಲೂ, ಆದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕಗಳಿಂದ ಬಂದ ತಮ್ಮೆಲ್ಲರನ್ನು ನಮ್ಮೂರಿಗೆ ಸ್ವಾಗತಿಸುವ ಸದವಕಾಶವು ನಮಗೊದಗಿದುದಕ್ಕೆ ನಾವು ತುಂಬಾ ಸಂತೋಷಿಸುತ್ತೇವೆ. ರೈಲ್ವೆ ನಿಲ್ದಾಣಕ್ಕೆ ದೂರವಾಗಿರುವುದರಿಂದ ತಮ್ಮೆಲ್ಲರಿಗೂ ಮೋಟಾರಿನ ಪ್ರಯಾಣದಿಂದ ಪ್ರಯಾಸವಾಗಿರಬೇಕು. ಮತ್ತು ಕಾರ್ಯವು ದೊಡ್ಡದಾದುದರಿಂದಲು ಅನುಭವ ಅಭಾವದಿಂದಲೂ ಕೆಲವು ತೊಂದರೆಗಳಾಗಬಹುದು. ಎಷ್ಟು ಕುಂದು ಕೊರತೆಗಳಿದ್ದರೂ, ಕನ್ನಡನಾಡಿನಮೇಲೆ ಯಿರುವ ಭಕ್ತಿಯಿಂದ ಕನ್ನಡನಾಡು ಕಟ್ಟಬೇಕೆಂಬ ಉತ್ಸಾಹದಲ್ಲಿ ಇವುಗಳೆಲ್ಲವನ್ನು ಮರೆಯುತ್ತೀರೆಂದು ಆಶಿಸಿದ್ದೇನೆ. ಈ ಪರಿಷತ್ತಿಗೆ ಶ್ರೀಯುತರಾದ ಟಿ. ಸುಬ್ರಮಣ್ಯಂರವರು ಮತ್ತು ಕೆ. ಆರ್. ಕಾರಂತರು ಉದ್ಘಾಟಕರು. ಅಧ್ಯಕ್ಷರಾಗಿರುವುದು ನಮ್ಮ ಭಾಗ್ಯವೇ ಸೈ.

ಪೂಜ್ಯ ಗಾಂಧೀಜೀಯವರ ನಾಯಕತ್ವದಲ್ಲಿ ನಾವು ಸ್ವತಂತ್ರವನ್ನು ಪಡೆದು ಮೊದಲನೇಸಲ ಇಲ್ಲಿ ಸಮಾವೇಶವಾಗುತ್ತಿರುವೆವೆಂದು ತಿಳಿಸಲು ಸಂತೋಷವಾಗುತ್ತಿದ್ದರೂ ಭಾರತ ಜನಕನ ಕಳೆದುಕೊಂಡು ಅಭಾಗ್ಯ ಭಾರತೀಯರಾದ ನಾವು ಬಹಳ ಸಂತಾಪಕ್ಕೀಡಾಗಿದ್ದೇವೆ. ದಿವಂಗತ ಬಾಪೂಜೀಯವರು ತಮ್ಮ ಅವತಾರವನ್ನು ಮುಗಿಸುವ ಮುಂಚೆ ಭಾರತದ ಹಿತಕ್ಕಾಗಿ ಭಾಷಾನ್ವಯ ಪ್ರಾಂತರಚನೆಯಾಗುವುದವಶ್ಯವೆಂದು ಭಾರತ ನಾಯಕರಿಗೆ ಸಲಹೆ ಕೊಟ್ಟಿದ್ದಾರೆ. ಭಾರತ ಸರಕಾರವು ಇದಕ್ಕೆ ಒಪ್ಪಿಗೆ ಕೊಟ್ಟಿದೆ. ಘಟನಾಸಮಿತಿಯ ಅಧ್ಯಕ್ಷರು ಈಗಾಗಲೇ ಗಡಿನಿರ್ಣಯ ಸಮಿತಿಗಳನ್ನು ಕೂಡಾ ನಿಯಮಿಸಲಿದ್ದಾರೆಂದು ತಿಳಿದು ಬಂದಿದೆ. ಇದರ ಪರಿಣಾಮವಾಗಿ ದಕ್ಷಿಣ ಭಾರತದ ಇಂದಿನ ಪ್ರಾಂತಗಳ ರೂಪವೇ ಬದಲಾಗಿ ಅವುಗಳ ಸ್ಥಳದಲ್ಲಿ ಆಂಧ್ರ, ಕರ್ನಾಟಕ, ತಮಿಳ, ಕೇರಳ, ಮಹಾರಾಷ್ಟ್ರ ಮತ್ತು ಗುಜರಾಥವೆಂಬ ಹೊಸ ಪ್ರಾಂತಗಳು ನಿರ್ಮಾಣವಾಗಲಿವೆ. ಈ ಅವಕಾಶವನ್ನು ಪಡೆದು ಆಯಾ ಪ್ರಾಂತಗಳ ಮುಖಂಡರು ಮತ್ತು ಪ್ರಜೆಗಳು ತಮ್ಮ ತಮ್ಮ ಪ್ರಾಂತರಚನೆಗೆ ಪ್ರಯತ್ನಿಸುತ್ತಿರುವರು. ಆಂಧ್ರ ನಾಯಕರಂತೂ ಬೇರೆ ಪ್ರಾಂತಗಳ ನಿರ್ಮಾಣವಾಗಲಿ, ಆಗದಿರಲಿ ತಮ್ಮ ಪ್ರಾಂತರಚನೆ ಆಗಿಯೇ ತೀರಬೇಕೆಂದು ಭಗೀರಥ ಪ್ರಯತ್ನ ನಡೆಯಿಸಿ ಭಾರತ ಸರಕಾರದ ಮನ್ನಣೆ ಪಡೆದರು. ಈ ವಿಚಿತ್ರವಾದವು ನಮ್ಮ ಕನ್ನಡ ನಾಯಕರು ಕೇಳಿ ಆಂಧ್ರ ಪ್ರಾಂತ ನಿರ್ಮಾಣಕ್ಕಿಂತಲು, ವಿವಿಧ ಸರಕಾರಗಳ ಆಡಳಿತೆಯಲ್ಲಿ ಹರಿದು ಹಂಚಿಹೋದ ಕರ್ನಾಟಕ ಪ್ರಾಂತ ನಿರ್ಮಾಣವು ಅತ್ಯವಶ್ಯಕವೆಂತಲೂ, ಅಲ್ಲದೆ ಆಂಧ್ರ ಪ್ರಾಂತ ಮಾತ್ರ ನಿರ್ಮಾಣವಾದರೆ ಗಡಿಗಳಲ್ಲಿರುವ ಕನ್ನಡ ಭಾಗಗಳಿಗೂ, ಮುಖ್ಯವಾಗಿ ಬಳ್ಳಾರಿಜಿಲ್ಲೆಗೆ ಆಗಬಹುದಾದ ಅನ್ಯಾಯವನ್ನು ಭಾರತ ಪ್ರಭುತ್ವಕ್ಕೆ ವಿಶದಪಡಿಸಿದನಂತರ, ಭಾರತ ಸರಕಾರವು ಎಲ್ಲಾ ಪ್ರಾಂತಗಳು ಒಮ್ಮೆಯೇ ರಚಿಸಲ್ಪಡುವವೆಂದು ಹೇಳಿಕೆ ಕೊಟ್ಟಿರುವುದನ್ನು ಕೇಳಿ ನಾವು ಧೈರ್ಯಗೊಂಡಿದ್ದೇವೆ. ಈ ಪರಿಸ್ಥಿತಿಯಲ್ಲಿ ವಿವಾದಗ್ರಸ್ತವೆಂದು ಊಹಿಸಲ್ಪಡುತ್ತಿರುವ ಈ ಮೂರು ತಾಲೂಕಗಳ ಭವಿತವ್ಯವನ್ನು ಸ್ಪಷ್ಟವಾಗಿ ನಿಶ್ಚಯಿಸಬೇಕಾದ ಸಮಯಬಂದಿದೆ. ಕಾರಣ ಈ ಮೂರು ತಾಲೂಕಗಳ ಪರಿಷತ್ತು ಇಲ್ಲಿ ಕರೆಯಲಾಗಿದೆ.

ಈ ಮೂರು ತಾಲೂಕಗಳ ಪ್ರಸಂಗ ಬಂದಿರುವುದರಿಂದ ಇವುಗಳ ಹಿಂದಿನ ಚರಿತ್ರೆ ಸ್ವಲ್ಪದರಲ್ಲಿ ಹೇಳುವುದು ಅವಸರವಾಗಿದೆ. ದಿವಂಗತ 'ತಿಳಕ್ ಫಂಡ್' ವಸೂಲಿನಬಗ್ಗೆ ಆಂಧ್ರ ಕರ್ನಾಟಕ ನಾಯಕರಲ್ಲಿ ಉಂಟಾದ ಭಿನ್ನಾಭಿಪ್ರಾಯದ ಪರಿಣಾಮವಾಗಿ ಈ ಜಿಲ್ಲೆಯು ಅನ್ಯಾಯವಾಗಿ ಇಬ್ಭಾಗಮಾಡಲಾಯಿತು. ಇದಕ್ಕೆ ನಿದರ್ಶನ ಕೇಳ್ಕರರ ನಿರ್ಣಯಿಸಿದ ಕೆಲವು ವಾಕ್ಯಗಳಿಂದಲೇ

ಉದಹರಿಸಬಯಸುತ್ತೇನೆ "ಸಂಪೂರ್ಣ ಜಿಲ್ಲೆಯನ್ನು ಕರ್ನಾಟಕಕ್ಕೆ ಒಪ್ಪಿಸಿದ್ದರೆ ನಾನು ನ್ಯಾಯಮಾಡಿದಂತಾಗುತ್ತಿತ್ತು" ಮತ್ತು "ಕನ್ನಡಿಗರು ತಮಗಾದ ಅನ್ಯಾಯಕ್ಕೆ ತಾಪಗೊಂಡಿದ್ದಾರೆ" ಎಂಬುದಾಗಿ ಉದ್ಗಾರ ತೆಗೆದಿದ್ದಾರೆ. ಅಲ್ಲದೆ ಆಂಧ್ರರ ಭಾಷೆ ಈ ಜಿಲ್ಲೆಯಲ್ಲಿ ಒತ್ತಾಯದಿಂದ ಹೇಗೆ ಹೇರಲಾಯಿತೆಂಬುದು ವಿಶದವಾಗಿ ವಿವರಿಸಿದ್ದಾರೆ. ವಾಸ್ತವ ಪರಿಸ್ಥಿತಿ ಹೀಗಿದ್ದರೂ ಆಂಧ್ರರು ಬಳ್ಳಾರಿ ಜಿಲ್ಲೆಯ ಬಹು ಭಾಗವು ತಮಗೆ ಸೇರಬೇಕೆಂಬ ಹಟಮಾರಿತನಬಿಟ್ಟಿಲ್ಲ. ಕೆಲವರಂತು ಈ ಭಾಗಗಳಲ್ಲಿ ಕನ್ನಡಿಗರೇಯಿಲ್ಲವೆಂಬುವತನಕ ಹೋಗಿದ್ದಾರೆ.

ಈ ಮೂರು ತಾಲೂಕಿನವರ ಸಂಸ್ಕೃತಿ, ಚರಿತ್ರೆ, ವ್ಯಾಪಾರ, ಆಚಾರ-ವಿಚಾರ ಕೊಡತೆಗೆದುಕೊಂಬುವ ಸಂಬಂಧ, ಊಟಪಾಟ, ಶಿಲಾಶಾಸನ, ಭೌಗೋಲಿಕ ಅಂಕೆಸಂಖ್ಯೆಗಳ ಆಧಿಕ್ಯತೆ ಇತ್ಯಾದಿ ಇತ್ಯಾದಿಗಳು ಅಚ್ಚ ಕನ್ನಡತನವನ್ನೇ ಎತ್ತಿತೋರಿಸುತ್ತಿರುವುವು. ಉದಾಹರಣೆಗಾಗಿ ಊರುಗಳ ಹೆಸರುಗಳನ್ನು ಇಲ್ಲಿ ಕೊಡಬಯಸುತ್ತೇನೆ. ಆದವಾನಿ ತಾಲೂಕಿನಲ್ಲಿರುವ ಹರಿವಾಣ, ಹಾಲ್ವಿ, ನಾಗನಾಥನಹಳ್ಳಿ, ಸಿಂಗರಾಜನಹಳ್ಳಿ, ಗುಡಿಕಲ್ಲು, ಕೋಟೆಕಲ್ಲು, ಬದಿನೇಹಾಳು ಆಲೂರು ತಾಲೂಕಿನ ಅರಿಕೇರಿ, ಹೊಳಲಗುಂದಿ, ಮೆದೇಹಾಳು, ಬೊಮ್ಮಗುಂಡನಹಳ್ಳಿ, ಚಿಕ್ಕಹೋತೂರು, ಸಿದ್ದಾಪುರ, ವಿರುಪಾಪುರ ರಾಯದುರ್ಗ ತಾಲೂಕಿನ ಹಿರೇಹಾಳು, ಕಣೇಕಲ್ಲು, ಒಬಳಾಪುರ ಇತ್ಯಾದಿ ಗ್ರಾಮಗಳ ಹೆಸರುಗಳು ಏನನ್ನು ತೋರಿಸುತ್ತವೆ? ಇನ್ನು ಅಂಕೆ ಸಂಖ್ಯೆಗಳ ದೃಷ್ಟಿಯಿಂದ ನೋಡಿದರೂ ನಾವು ಬಹುಸಂಖ್ಯಾತರಾಗಿದ್ದೇವೆ. ಅಲ್ಲದೆ ಈ ಭಾಗಗಳ ಬಹುಜನ ಮುಸಲ್ಮಾನರ ಬೆಂಬಲವು ನಮಗೆ ಸಂಪೂರ್ಣವಾಗಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ. ವ್ಯವಸಾಯದನಂತರ ಮುಖ್ಯ ವೃತ್ತಿಯಾದ ನೇಕಾರತನದ ಜನರೆಲ್ಲರು ಕನ್ನಡಿಗರಾಗಿದ್ದಾರೆ. ಕನ್ನಡಿಗರಾದ ನಾವು ಈ ಸಮಯದಲ್ಲಿ ಬೊಮ್ಮಾಯಿ ಕಾಳೆತರ ಇಡೀ ದಕ್ಷಿಣ ಭಾರತದಲ್ಲಿ ಮುಖ್ಯ ವ್ಯಾಪಾರ ಕೇಂದ್ರಗಳಲ್ಲೊಂದಾದ ಆದವಾನಿ, ಅಖಂಡ ಭಾರತ ವರ್ಷದಲ್ಲಿ ಅಗ್ರಸ್ಥಾನ ವಹಿಸಿದ ನೇಕಾರ ಸಹಕಾರ ಸಂಘವುಳ್ಳ ಎಮ್ಮಿಗನೂರು ಮತ್ತು ಫಲವತ್ತಾದ ಭೂಭಾಗಗಳುಳ್ಳ ರಾಯದುರ್ಗ ಮತ್ತು ಆಲೂರು ಗಳನ್ನು ಕಳೆದುಕೊಳ್ಳುವೆವೆಂದು. ಇಲ್ಲಿ ನೆರೆದ ಕನ್ನಡ ಪ್ರತಿನಿಧಿಗಳನ್ನು ಎಚ್ಚರಿಸುತ್ತಿದ್ದೇನೆ.

ಇಲ್ಲಿ ನೆರೆದ ಕನ್ನಡ ಪ್ರತಿನಿಧಿಗಳಾದ ತಾವು ಅಖಂಡ ಕರ್ನಾಟಕ ನಿರ್ಮಾಣದಬಗ್ಗೆ ಕಾರ್ಯೋನ್ಮುಖರಾಗಲು ಬಿನ್ನವಿಸಿಕೊಳ್ಳುತ್ತೇನೆ. ಈ ಕಾರ್ಯಕ್ಕೆ ಹೇರಳ ಹಣಸಹಾಯ, ನುರಿತ ಕಾರ್ಯಕರ್ತರು ಎಷ್ಟಿದ್ದರು ಕಡಿಮೆಯೇಯೆಂದು ನಾನು ಹೇಳಬೇಕಾಗಿಲ್ಲ. ಇದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿ ಎಲ್ಲರ ಉದಾರ ದಾನಗಳನ್ನು ಸ್ವೀಕರಿಸಿ ಮುಖ್ಯ ಕಚೇರಿಯೊಂದನ್ನು ಆದವಾನಿಯಲ್ಲಿ ತೆಗೆದು, ತಾಲೂಕಾ ಸಂಘಗಳನ್ನು ಮತ್ತು ಗ್ರಾಮ ಸಂಘಗಳನ್ನು ಸ್ಥಾಪಿಸಿ ಕರ್ನಾಟಕ ಚಳುವಳಿಯನ್ನು ದ್ವಿಗುಣೀಕೃತ ಗೊಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ನಮ್ಮ ಕಾರ್ಯದಲ್ಲಿ ಕನ್ನಡನಾಯಕರು ಏಕೀಕರಣ ಮಹಾಸಮಿತಿಯವರು ಸಂಪೂರ್ಣ ಬೆಂಬಲ ಕೊಡುತ್ತಿರುವುದು ಸ್ತುತ್ಯವಾಗಿದೆ. ಮುಂದಾದರೂ ಹೆಚ್ಚು ಹೆಚ್ಚಾಗಿ ಈ ತಾಲೂಕುಗಳಲ್ಲಿ ಸಂಚರಿಸಿ ಕನ್ನಡ ಜನರನ್ನು ಜಾಗೃತ ಗೊಳಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಕನ್ನಡ ಜನತೆಯು ಕನ್ನಡನಾಡು, ನುಡಿಗಳ ಸೇವೆಗಾಗಿ ನಡುವುಕಟ್ಟಿ ಎಂತಹ ತ್ಯಾಗವನ್ನಾದರೂ ಮಾಡಲು ಸಿದ್ಧರಿರಬೇಕೆಂದು ಬೇಡಿಕೊಳ್ಳುತ್ತೇನೆ.

ನಮ್ಮೆಲ್ಲರ ಏಕೀಕೃತ ಚಳುವಳಿಯಿಂದ ಹರಿದು ಹಂಚಿಹೋದ ಕನ್ನಡನಾಡು ಅಖಂಡ ಕರ್ನಾಟಕದ ರೂಪದಲ್ಲಿ ನಿರ್ಮಾಣವಾಗಿ ನಾವು ಅದರಲ್ಲಿ ಸೇರುವೆವೆಂಬ ಭರವಸೆಯು ನಮಗಿದೆ. ಈ ಕಾರ್ಯದಲ್ಲಿ ಕನ್ನಡ ನಾಯಕರ ಮತ್ತು ಕನ್ನಡ ಜನತೆಯ ಸಂಪೂರ್ಣ ಬೆಂಬಲ ನಮಗಿದೆ ಯೆಂದು ನಂಬಿದ್ದೇನೆ. ಕನ್ನಡ ನಾಡಿನ ವಿವಿಧ ಭಾಗಗಳಿಂದಲೂ, ಈ ಮೂರು ತಾಲೂಕಿನ ಹಳ್ಳಿ ಹಳ್ಳಿಗಳಿಂದಲೂ, ಆಗಮಿಸಿದ ಪ್ರತಿನಿಧಿಗಳಾದ ತಾವು ಈ ಸಮ್ಮೇಳನದ ಉದ್ದೇಶವನ್ನು ಮತ್ತು ನಮಗೆ ಅನೇಕ ಮಹನೀಯರಿಂದ ಬಂದ ಸಂದೇಶಗಳ ಸಾರವನ್ನು ಕನ್ನಡ ಜನತೆಯಲ್ಲಿ ಬೀರಿ ಕನ್ನಡ ಚಳುವಳಿಯನ್ನು ಹೆಚ್ಚಾಗಿ ನಡೆಯಿಸಿ ಕರ್ನಾಟಕ ಏಕೀಕರಣವು ಅನತಿ ಕಾಲದಲ್ಲಿ ಸಾಧಿಸಲು ನೆರವಾಗುವಿರೆಂದು ನಂಬಿದ್ದೇನೆ. ಒಮ್ಮೆ ಕನ್ನಡಿಗರು ಕಾರ್ಯೋನ್ಮುಖರಾದರೆ ಕಾರ್ಯವು ಕೈಗೂಡುವತನಕ ಬಿಡುವವರಲ್ಲವೆಂದು ದೃಢವಾಗಿ ನಂಬಿ ಪ್ರಸ್ತುತ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಯಾಗಿ ಮಾಡಲು ತಮ್ಮನ್ನು ಪ್ರಾರ್ಥಿಸುತ್ತೇನೆ.

"ಜೈ ಹಿಂದ್"

## In the Court of the District Munsif Hospet.

### ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್

S. C 99/48

| | |
|---|---|
| ದಾಸಪ್ಪನವರ ಸಂಗಪ್ಪ<br>ಮತ್ತಿಹಳ್ಳಿ - ಹರಪನಹಳ್ಳಿ ತಾ॥ | ವಾದಿ |
| ಈಡಿಗರ ಫಕೀರಪ್ಪ<br>ಬೆಣಕಲ್ಲು - ಕೂಡ್ಲಿಗಿ ತಾ॥ | ಪ್ರತಿವಾದಿ |

19—3—45ನೆ ತೇದಿ ಪ್ರತಿವಾದಿ ಹೆಸರ್ಲೆ ರೂ 100ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು ಮತ್ತು ಬಡ್ಡಿಗಾಗಿ ರೂ. 119 ಕ್ಕೆ ದಾವಾಮಾಡಿರುತ್ತದೆ. ಸದ್ರಿ ನಂಬರು 28-6 48 ಕ್ಕೆ ವಾಯಿದಾ ಇರುತ್ತದೆ. ಪ್ರತಿವಾದಿ ಆ ದಿವಸ ಹಗಲು 11 ಗಂಟೆಗೆ ಖುದ್ದಾಗಲಿ, ವಕೀಲರ ದ್ವಾರ ಆಗಲಿ ಕೋರ್ಟಿಗೆ ಹಾಜರಾಗದಿದ್ದರೆ ಪ್ರತಿವಾದಿ ಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

**ಎ. ಆರ್ ಕೃಷ್ಣರಾವ್,**
ವಾದಿಯ ಅಡ್ವೊಕೇಟರು.

## In the Court of the District Munsif Hospet.

### ಹೊಸಪೇಟೆಯ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

S. C. 113/48

| | |
|---|---|
| ಪುರಾಣದ ಶ್ರೀನಿವಾಸಾಚಾರು,<br>ಹೊಸಪೇಟೆ | ವಾದಿ |
| Vs | |
| ಅಬ್ದುಲ್ ಸತ್ತಾರ್ ಖಾನ್,<br>ಹೊಸಪೇಟೆ. | ಪ್ರತಿವಾದಿ |

18—12 47ನೆಯ ತೇದಿ ವಾದಿ ಹೆಸರ್ಲೆ ಪ್ರತಿವಾದಿ ರೂ. 25/-ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು ಬಡ್ಡಿಗಾಗಿ ರೂ. 27-1-6 ಗೆ ದಾವಾ ಮಾಡಿರುತ್ತದೆ. ಸದ್ರಿ ದಾವಾ 2[illegible]-6-48 ಕ್ಕೆ ವಾಯಿದಾ ಇರುತ್ತದೆ ಆ ದಿನ ಹಗಲು 11 ಗಂಟೆಗೆ ಪ್ರತಿವಾದಿ ಖುದ್ದಾಗಲಿ ವಕೀಲರ ದ್ವಾರವಾಗಲಿ ಕೋರ್ಟಿಗೆ ಹಾಜರಾಗದಿದ್ದರೆ ಪ್ರತಿವಾದಿಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

ಹೊಸಪೇಟೆ
19-6-48

**ಎ. ಆರ್. ಕೃಷ್ಣರಾವು,**
ವಾದಿಯ ಅಡ್ವೊಕೇಟರು.

## ಪಾವಗಡ (ತುಮಕೂರು)

ಪಾವಗಡ ತಾಲೂಕು ವೈಶ್ಯ ಮಹಾ ಸಭೆಯು ಕಳೆದವಾರ ಇಲ್ಲಿ ಶ್ರೀ ಡಿ. ಯಲ್. ಗಂಗಾಧರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಾವೇಶವಾದಾಗ ಇಲ್ಲಿನ ವೈಶ್ಯ ವಿದ್ಯಾರ್ಥಿ ನಿಲಯಕ್ಕೆ ೧೦ ಸಾವಿರ ರೂ ವಾಗ್ದಾನವಾಯಿತು. ವೈಶ್ಯ ಸಮಾಜದ ಸರ್ವ ವಿಧ ಪ್ರಗತಿಯನ್ನು ಕುರಿತು ಸಭೆಯಲ್ಲಿ ತೀರ್ಮಾನಗಳಾದವು.

---

ಹೈದರಾಬಾದ. ಗಡಿಯಲ್ಲಿರುವ ಹಳ್ಳಿಗರು ರಜಾಕಾರ ಹಿಂಸೆಯನ್ನು ತಾಳಲಾರದೆ ಭಾರತವಕ್ಕೂಟ ಪ್ರದೇಶಗಳಿಗೆ ಬರುತ್ತಿರುವರೆಂದು ಗೊತ್ತಾಗಿದೆ

---

## ನವಭಾರತಕ್ಕೆ ಚಂದಾದಾರರಾಗಿರಿ.

## ರಾಜಕೀಯಕೈದಿಗಳಿಗೆ ಭೂದಾನ.

.... ಸಮಿತಿಯ ಕಾರ್ಯಕಲಾಪಗಳು ....

ಸರ್ಕಾರದಿಂದ ನಿಯುಕ್ತ ಸಮಿತಿಯು ಬಳ್ಳಾರಿ ಜಿಲ್ಲಾ ಕಲೆಕ್ಟರವರಧ್ಯಕ್ಷತೆಯಲ್ಲಿ 12 ಮತ್ತು 19 6 48 ಕ್ಕೆ ಕೂಡ್ಡಿ ರಾಜಕೀಯ ಕೈದಿಗಳಿಂದ ಬಂದ ಅರ್ಜಿಗಳೆಲ್ಲವನ್ನೂ ಪರಿಶೀಲಿಸಿದರು ಜೈಲಿಗೆ ಹೋಗದೆ ಹೊರಗಿದ್ದುಕೊಂಡು ಖಾದಿಧಾರಿಗಳಾಗಿ ಸ್ವತಂತ್ರೋದ್ಯಮಗಳಿಗೆ ಸಹಾಯಮಾಡಿದವರೂ ಅರ್ಜಿದಾರರಲ್ಲಿರುವರು. ಸರ್ಕಾರದವರು ವಿವಿಧ ತಾಲೂಕುಗಳಲ್ಲಿ ಸೂಚಿಸಿದ ಇಂತಹ ಭೂಮಿಬೇಕೆಂದು ಜುಲೈ 15 ನೆಯ ತಾ ವಳಗಾಗಿ ಅರ್ಜಿ ಇಡಬಹುದು. ಸದರಿ ಲೀಸ್ಟುಗಳು ಸರ್ವೆ ನಂಬರ್ ಸಮೇತವಾಗಿ ಸಂಬಂಧಿಸಿದ ತಾಲೂಕುಗಳಲ್ಲಿ ದೊರೆಯುತ್ತವೆ. ಸರ್ಕಾರದವರು ಸೂಚಿಸದೆ ಇರುವ ಭೂಮಿಗಳಿಗಾಗಿ ಬೇಡಿರುವ ಅರ್ಜಿಗಳನ್ನು ತಹಶೀಲ್ದಾರರಿಗೆ ಕಳುಹಿಸಿ ಪರಿಶೀಲನೆಮಾಡಬೇಕೆಂದು ನಿಶ್ಚಿತವಾಯಿತು.

# ಕಮ್ಯುನಿಸ್ಟರ ಗುಪ್ತ ಠಾಣೆಯ ಜಪ್ತಿ

ಮದ್ರಾಸ, ೧೪— ಉತ್ತರ ಮಲಬಾರದ ಪೆರಲಿ ಮಲಾಗು ಗುಡ್ಡಗಳಲ್ಲಿ ಕಮ್ಯುನಿಸ್ಟರು ಸ್ಥಾಪಿಸಿಕೊಂಡಿದ್ದ ಕಮ್ಯುನಿಸ್ಟ ಠಾಣೆಯೊಂದರ ಮೇಲೆ ಟೆಲ್ಲಿಚೇರಿಯ ಪೋಲೀಸ ಇನಸ್ಪೆಕ್ಟರರು ಸ್ಪೆಶಲ್ ಪೋಲೀಸರೊಂದಿಗೆ ದಾಳಿ ಮಾಡಿ ಬಂದೂಕ, ಮದ್ದುಗುಂಡು ಮೊದಲಾದವನ್ನು ಸ್ವಾಧೀನಪಡಿಸಿಕೊಂಡರು. ಟೊಲಂಪಾರಾದಲ್ಲಿ ನಡೆದ ದರೋಡೆಗಳ ಸಂಬಂಧದಲ್ಲಿ ಇಬ್ಬರು ಕಮ್ಯುನಿಸ್ಟರನ್ನು ಸೆರೆಹಿಡಿದದ್ದೇ ಈ ದಾಳಿ ನಡೆಯಲು ಕಾರಣವಾಯಿತೆಂದು ತಿಳಿದಿದೆ.

## ಮಧ್ಯಪ್ರಾಂತ - ಹೈದರಾಬಾದ ಗಡಿ ಸಂಚಾರ.

ನಾಗಪುರ ಮಧ್ಯಪ್ರಾಂತ ಮತ್ತು ಬಿರಾರ ಗೃಹರಕ್ಷಕದಲದ ಕಮಾಂಡಂಟ್ ಜನರಲ್ ಕರ್ನಲ್ ಗಂಗೂಲಿಯವರು ಜಿಲ್ಲಾಧಿಕಾರಿಗಳೊಂದಿಗೆ ಮಧ್ಯಪ್ರಾಂತ ಹೈದರಾಬಾದ ಗಡಿ ಪ್ರದೇಶದಲ್ಲಿ ೭೦೦ ಮೈಲು ಪ್ರವಾಸ ಮಾಡಿಬಂದರು. ಹಳ್ಳಿಗಳಲ್ಲಿಯ ಜನರು ಬಂದುದೆಲ್ಲವನ್ನು ಎದುರಿಸಲು ಧೈರ್ಯದಿಂದ ಸಿದ್ಧರಾಗಿರುವದು ಭೂಷಣಾಸ್ಪದವಾಗಿದೆಯೆಂದು ಅವರು ಹೇಳಿದರು. ಹಳ್ಳಿಗಳಲ್ಲಿ ಗೃಹರಕ್ಷಕ ದಲವನ್ನು ಸಿದ್ಧಪಡಿಸಲು ಶಿಕ್ಷಣವು ಭರದಿಂದ ನಡೆದಿದೆ. ಹಿಂದುಸ್ಥಾನ ಗಡಿಯಲ್ಲಿ ಅತ್ಯಾಚಾರ ಸಂಭವಿಸದಂತೆ ನೋಡಿಕೊಳ್ಳಲು ಸಂರಕ್ಷಣೆಗಾಗಿ ಸ್ಪೇಶಲ್ ಸಶಸ್ತ್ರ ಪೋಲೀಸ ದಲವನ್ನು ಗಡಿಯಲ್ಲಿ ಹೆಚ್ಚಿಸಲಾಗಿದೆ.

## ಎಲಿಮೆಂಟರಿ ಶಾಲೆಗಳಲ್ಲಿ ಇಂಗ್ಲೀಷ್ ಶಿಕ್ಷಣ - ನೂಲುವುದು.

೧೯೪೮-೪೯ ರಿಂದ ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ೭ ಮತ್ತು ೮ ನೆಯ ವರ್ಗಗಳಲ್ಲಿ ಮಾತ್ರ ಇಂಗ್ಲೀಷನ್ನು ಕಲಿಸಬೇಕೆಂದು ಸರ್ಕಾರದವರು ವಿಧಿಸಿದ್ದಾರೆ.

ಅನೇಕ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ನೂಲುವ ಮತ್ತು ನೆಯ್ಯುವ ಏರ್ಪಾಟಿದ್ದರೂ. ನೂಲು ಸಿಗದ ಕಾರಣ ಅವರು ಕೈನೂಲನ್ನಾದರೂ ಕೊಂಡು ಕೆಲಸ ಸಾಗಿಸಲು ವಿಧಿಸಿರುವರು.

( ೩ ನೇ ಪೇಜಿ ತರುವಾಯ )

ಬಳ್ಳಾರಿ ಜಿಲ್ಲೆಯಲ್ಲಿನ ಬಳ್ಳಾರಿ ಆಲೂರು ರಾಯದುರ್ಗ ತಾಲೂಕು ಕರ್ನಾಟಕಪ್ರಾಂತಕ್ಕೆ ಸೇರಬೇಕೆಂದೂ ಇದು ಭೌಗೋಲಿಕ ಆಡಳಿತ ಮತ್ತು ವಾಣಿಜ್ಯ ಸಾಂಸ್ಕೃತಿಗಳಿಂದ ಯೋಗ್ಯವೆಂದು ಈ ಸಭೆಯು ಅಭಿಪ್ರಾಯಪಟ್ಟಿತು. ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಮೈಸೂರಿನೊಂದಿಗೆ ಮಾಡಿದ ಸಂಧಾನದ ಬಗೆ ಈ ಸಭೆಯು ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ರಾಜೇಂದ್ರಪ್ರಸಾದರಿಂದ ನೇಮಕವಾಗಿರುವ ಭಾಷಾವಾರು ಪ್ರಾಂತ್ಯ ನಿರ್ಣಯ ಸಮಿತಿಗೆ ಮದ್ರಾಸು ಮುಖ್ಯ ಮಂತ್ರಿಗಳಿಂದ ನೇಮಕವಾಗಿರುವ ಸದಸ್ಯರಲ್ಲಿ ಸಾಕಷ್ಟು ವಿಶ್ವಾಸವಿಲ್ಲವೆಂದು ವ್ಯಕ್ತಪಡಿಸಿತು. ಈ ಬಗ್ಗೆ ಅಧಿಕಾರಯುತವೆನ್ನುವ ಸಂಸ್ಥೆಯಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಕಮಿಟಿಯೊಂದಿಗೆ ಸಮಾಲೋಚಿಸಿ ಈ ಸಮಿತಿಗೆ ಸದಸ್ಯರನ್ನು ನೇಮಿಸಬೇಕೆಂದು ಈ ಪರಿಷತ್ತು ಅಭಿಪ್ರಾಯಪಟ್ಟಿರುವದು.

ಮದ್ರಾಸಿನಿಂದ ಘಟನಾಸಭೆಗೆ ಮತ್ತು ಮೂವರನ್ನು ನೇಮಕಮಾಡಿ ಕಳಿಸಬೇಕೆಂದೂ ಈಗ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದೂ ಮದ್ರಾಸು ಕಾಂಗ್ರೆಸು ಪಕ್ಷವನ್ನು ಒತ್ತಾಯಮಾಡಬೇಕೆಂದು ಈ ಪರಿಷತ್ತು ಸೂಚಿಸಿತು. ಸೊಂಡೂರ ಸಂಸ್ಥಾನದ ವಿಲೀನೀಕರಣದ ಬಗ್ಗೆ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಸ್ಥಾನದ ರಾಜಗೆ ಸೂಚಿಸಬೇಕೆಂದು ತೀರ್ಮಾನಿಸಲಾಗಿದೆ.

ಜಿಲ್ಲಾ ಬೋರ್ಡ ಚುನಾವಣೆಗೆ ನಾಮಕರಣ ಪದ್ಧತಿಯನ್ನು ಅನುಸರಿಸುವುದನ್ನು ಈ ಸಭೆಯು ವಿರೋಧಿಸಿತು. ಇದರಿಂದ ಕನ್ನಡಿಗರ ಪ್ರಾತಿನಿಧ್ಯವನ್ನು ಇತರ ಭಾಷಾವಾರು ಸಂಗಡದವರು ಆಕ್ರಮಿಸಿಕೊಳ್ಳುವ ಭಯವಿದೆಯೆಂದು ಈ ಸಭೆಯು ಅಭಿಪ್ರಾಯಪಟ್ಟಿದೆ. ಕಾಗದಪತ್ರಗಳು ಈ ಮೂರು ಪೂರ್ವ ತಾಲೂಕುಗಳಲ್ಲಿ ಕನ್ನಡದಲ್ಲೇ ನಡೆಯಬೇಕೆಂದು ಈ ಪರಿಷತ್ತು ಸೂಚಿಸಿರುವುದು.

ತುಂಗಭದ್ರಾ ಪ್ರಾಜೆಕ್ಟ ಕರ್ನಾಟಕದ ಭಾಗದ ಮೂರು ತಾಲ್ಲೂಕುಗಳಿಗೆ ಪ್ರಯೋಜನಕಾರಿಯಾಗುವುದಿಲ್ಲವೆಂದು ಈ ಸಭೆಯು ಅಭಿಪ್ರಾಯಪಟ್ಟಿದೆ.

# The Rayalaseema Bank Ltd., H. O. Bellary.

)0(

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

)0(

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೩೩ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

**ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits)** ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

| | | | |
|---|---|---|---|
| 3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ | | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ | ,, | ರೂ. 3½% | ,, |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ | ,, | ರೂ. 4% | ,, |

**ಚಾಲ್ತಿ ಖಾತೆ** (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ. ಕೊಂಡು ಮೂರು ವರ್ಷಗಳನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

---

# NAVA BHARAT BELLARY.

(14th & 21st Jun48'.)

Reg.NoM. 4746,

**ನವ ಭಾರತ ಬಳ್ಳಾರಿ.**
**(Nationalist Weekly)**

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri.............................................

.............................................

.............................................

Printed at Vittal Press. Edited & Published by T. B. Keshava Rao.

ಜೈ ಹಿಂದ್

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ನಿಬೋಧತ.

| | | |
|---|---|---|
| ೧೧<br>೨೩ | ಬಳ್ಳಾರಿ ಜೂನ್ ೨೮ ಸೋಮವಾರ ೧೯೪೮ | ಸಂಪಾದಕ ಮತ್ತು ಪ್ರಕಾಶಕ<br>ಟಿ. ಬಿ. ಕೇಶವರಾವ್. |


## ರಾಜಾಜಿ-ಗವರ್ನರ ಜನರಲ್

ಇದುವರೆವಿಗೂ ಬ್ರಿಟಿಷ್ ವೈಸ್ರಾಯಿಗಳು ಭಾರತ ದಲ್ಲಿದ್ದರು. ಕೊನೆಯ ಬ್ರಿಟಿಷ ಗವರ್ನರ ಜನರಲ್ ಲಾರ್ಡ ಮೌಂಟ ಬ್ಯಾಟನ್‌ರ ನಿರ್ಗಮನದ ನಂತರ ಶ್ರೀ ರಾಜಗೋಪಾಲಾಚಾರಿಯವರು ವೈಸ್ರಾಯರಾಗಿದ್ದಾರೆ. ಅವರಿಗೆ ಅಭಿನಂದನಪರ ಸಂದೇಶಗಳು ಎಲ್ಲಾ ಕಡೆಯಿಂದಲೂ ಬಂದಿವೆ. ಹೈದ್ರಾಬಾದಿನ ಗೂಂಡಾರ ಮುಖಂಡ ಖಾಸಿಂ ರಜ್ವಿಕೂಡ ಸಂದೇಶವನ್ನು ಕಳುಹಿಸಿದ್ದಾನೆ.

## ರಾಜಾಜಿ-ನಿಜಾಮರ ತಾರು

ರಾಜಾಜಿಯವರು ಗವರ್ನರ್ ಜನರಲ್ ಆದ ಮೇಲೆ ನಿಜಾಮರು ಅವರನ್ನಭಿನಂದಿಸುವ ಸಂದೇಶವನ್ನು ತಾರಿನ ಮೂಲಕ ಕಳುಹಿಸಿದರೆಂತಲೂ ರಾಜಾಜಿಯವರು ಉತ್ತರ ರೂಪವಾಗಿ ತಾವು ವಿಶಾಲ ಶಾಂತಿಯನ್ನು ಬಯಸುತ್ತಿರುವದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವರೆಂತಲೂ ಗೊತ್ತಾಗಿದೆ.

---

## ಎಡೆಡ್ ವಿದ್ಯಾ ಸಂಸ್ಥೆಗಳ ನೌಕರರಿಗೆ ತುಟ್ಟಿ ಭತ್ತೆ

ಸರಕಾರಿ ನೌಕರರಿಗೆ 1-1-48 ರಿಂದ ಕೊಟ್ಟ ಭತ್ತೆಯು ಪರಿಷ್ಕೃತ ದರಗಳೇ ಎಡೆಡ್ ವಿದ್ಯಾ ಸಂಸ್ಥೆಗಳ ನೌಕರರಿಗೂ ದೊರೆಯಬೇಕೆಂದು ನಿಶ್ಚಯಿಸಿ, ಸರಕಾರವು ಆಂಥ ಸಂಸ್ಥೆಗಳ ಮೇನೇಜ್‌ಮೆಂಟಿನವರು 1-1-48 ರಿಂದ ಆ ರೀತಿ ಕೊಡುವಂತೆ ಒಪ್ಪಿಗೆ ಕೊಟ್ಟಿದೆ. ಅಲ್ಲದೆ ಪರಿಷ್ಕೃತ ದರಗಳಿಗೆ ಪೂರಾವಂತೆ ಭತ್ತೆ ಕೊಟ್ಟುದ್ದರಿಂದ ಆಗುವ ವೆಚ್ಚವನ್ನು 1948-49 ಕ್ಕೆ ಮತ್ತು ಆನಂತರದ ವರ್ಷಗಳಿಗೆ ಕೊಡುವ ಟೀಚಿಂಗ್ ಗ್ರಾಂಟುಗಳ ಲೆಕ್ಕದಲ್ಲಿ ಎಣಿಸಿಕೊಳ್ಳಲಾಗುವುದು. ಗ್ರಾಂಟು ವೆಚ್ಚದ ಅರ್ಧ ಅಂಕಕ್ಕೆ ಮೀರಲಾರದು. ಅಲ್ಲದೆ ನಷ್ಟದಲ್ಲಿ ನಡೆಯುವ ಸಂಸ್ಥೆಗಳಿಗೆ ಮಾತ್ರ ದೊರೆಯುವುದು.

---

## ನಮ್ಮ ಪ್ರಾಂತಕ್ಕೆ ಮಿಲ್ ಬಟ್ಟೆ

ಈ ವರ್ಷ ಫೆಬ್ರವರಿಯಿಂದ ಮೇ ತಿಂಗಳ ಅಂತ್ಯದ ವರೆಗೆ ಈ ಪ್ರಾಂತಕ್ಕೆ ದೊರೆಯಬೇಕಾದ ಗಿರಣಿ ಬಟ್ಟೆ 37,420 ಬೇಲ್‌ಗಳಷ್ಟು. ಆದರೆ 20-5-48 ರ ವರೆಗೆ 31,578 ಬೇಲ್‌ಗಳಷ್ಟು ಬಂದು ತಲ್ಪಿದೆ. ಇನ್ನೂ 10,688½ ಬೇಲುಗಳು ಇಲ್ಲಿಗೆ ಸಾಗಿಸಲ್ಪಡಲು ತಯಾರಿವೆ. ಇವು ತಲ್ಪಿದರೆ ಈ ಪ್ರಾಂತಕ್ಕೆ 4 ತಿಂಗಳುಗಳಿಗೆ 42,266½ ಬೇಲುಗಳು ದೊರೆತಂತಾಗುತ್ತವೆ. ಪರದೇಶಗಳಿಂದ ಆಮದು ಮಾಡಿದ ಬಟ್ಟೆ ಇದರಲ್ಲಿ ಸೇರಿಲ್ಲ. ಆದುದರಿಂದ ಬೊಂಬಾಯಿ ಉಳಿಕೆ ಪ್ರದೇಶದಿಂದ ಈ ಪ್ರಾಂತಕ್ಕೆ ಬಟ್ಟೆ ದೊರೆಯುವ ಕುರಿತು ಚಿಂತಿಸಬೇಕಾಗಿಲ್ಲ.

---

# ತುಂಗಭದ್ರಾ ಅಣೆಕಟ್ಟು

## ಒಬ್ಬೊಬ್ಬರಿಗೆ ನೂರು ನೂರೇ ಎಕರೆ ಜಮೀನು

ಮದ್ರಾಸು ಸರಕಾರವು ತುಂಗಭದ್ರಾ ಅಣೆಕಟ್ಟು ವ್ಯಾಪಾರದಲ್ಲಿ ಲಾಭಕೋರತನ ನಿಬಂಧದ ಕೆಲವು ಕರಡು ನಿಯಮಗಳನ್ನು ಪ್ರಕಟಿಸಿದೆ. ನಿಯಮಗಳು 10-6-48ಕ್ಕೆ ಜಾರಿಗೆ ಬಂದಿವೆ. ಒಂದು ತಿಂಗಳ ನಂತರ ಪರಿಶೀಲಿಸಲ್ಪಡುವುದ ಇಕ್ಕೆವ ಸೂಚನೆ ಆಕ್ಷೇಪಗಳಿದ್ದರೆ ಜಾರಿಗೆ ಬಂದ ತಿಂಗಳೊಳಗೆ ಕಳುಹಿಸಬೇಕು.

ಈ ನಿಯಮದಂತೆ ಅಣೆಕಟ್ಟಿನ ಸರಹದ್ದಿನಲ್ಲಿ 44 ರ ನಂತರ 50 ಎಕ್ರೆಗಿಂತ ಹೆಚ್ಚು ಜಮೀನು ಕೊಂಡಿರುವವರಿಗೆ ಒಂದು ತಿಂಗಳೊಳಗೆ ಹಾಜ ಂತೆಯೂ ಜಮೀನನ್ನು ಕೊಂಡುಕೊಂಡ ಬೆಲೆ ಆದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಾಕ್ಷಿ ವಂತೆಯೂ, ಸರಕಾರದ ಪರವಾಗಿ ಸ್ಥಳೀಕರರು ನೋಟೀಸು ಕೊಡುವರು. ಹಾಗೆ ನೋಟೀಸಿದವರು ಹಾಜರಾಗದಿದ್ದರೆ ಆಫೀಸರನು ಬೆಲೆಗಳ ಕುರಿತು ವಿಚಾರಣೆ ನಡೆಸುವನು. ಅಲ್ಲದೆ ಬೇಕಾದ ಜಮೀನಿನ ಬೆಲೆ ವಿವರಣೆಯನ್ನು ಸೂಚಿ ಕಾರಕ್ಕೆ ಪೂರಬೇಕೆಂದು ಅಪ್ಪಣೆ ಕೊಡುವನು. ಣೆಯ ಪ್ರತಿಯನ್ನು ಭೂಮ್ಯಾಲಿಕರಿಗೆ ಕಳುಹಿಸುವುದು. ಅಪ್ಪಣೆಯಲ್ಲಿ ಗೊತ್ತುಪಡಿಸಿದ ಭೂಮಿ ಲೆಯನ್ನು ಜಮೀನಿನ ಯಜಮಾನನಿಗೆ ಆದಷ್ಟು ಬೇಗನೇ ಕೊಟ್ಟು ಸ್ವತಃ ಅಥವಾ ರೆವಿನ್ಯೂ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಕಡಮೆಯಾಗದ ಆಫೀಸರರ ಮೂಲಕ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು. ಅಣೆಕಟ್ಟಿನ ಸರಿಹದ್ದಿನ ಜಮೀನನ್ನು ಕೊಂಡುಕೊಳ್ಳಲು ಪರ್ಮಿಟು ಕೊಡುವ ಏರ್ಪಾಟದೆ ಪರ್ಮಿಟು ಪ್ರಕಾರ ಈ ಪ್ರದೇಶದಲ್ಲಿ ಮೊದಲೇ ಸ್ವಾಧೀನದಲ್ಲಿರುವ ಜಮೀನು ಸೇರಿ ಮೂರು ಎಕ್ರೆಗೆ ಮೀರಕೂಡದು ಆದರೆ ಸರಕಾರದಿಂದ ಅಪ್ಪಣೆ ಪಡೆದು ಈ ಮಿತಿಯನ್ನು ಹೆಚ್ಚಿಸಿಕೊಳ್ಳಬಹುದು. ಪರ್ಮಿಟಿನ ಶರತುಗಳನ್ನು ಉಲ್ಲಂಘಿಸಿದರೆ 50 ರೂಪಾಯಿಗಳಿಗೆ ಮೀರದಷ್ಟು ಜುಲ್ಮಾನೆ ವಿಧಿಸಲು ಸ್ಥಳಿಕ ಆಫೀಸರನಿಗೆ ಅಧಿಕಾರವಿದೆ.

ಜಮೀನನ್ನು ಪರಭಾರೆ ಮಾಡಲು ಸ್ಥಳೀಕ ಆಫೀಸರ್ ಒಪ್ಪಿಗೆ ಕೊಡಬಹುದು. ಈ ಕೆಳಗಿನ ಶರತ್ತುಗಳ ಮೇಲೆ ಅಂತಹ ಪರಾಭಾರಗಳಿಗೆ ಸಮ್ಮತಿ ಕೊಡಲಾಗುವುದು:-

1) ನಿಜವಾದ ವ್ಯವಸಾಯಗಾರ ಅಥವಾ ಅಣೆಕಟ್ಟು ಪ್ರದೇಶವನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಹಣವನ್ನು ವಿನಿಯೋಗಿಸಲು ಇಚ್ಛಿಸುವ ಧನಿಕನು ಇವರಿಗಲ್ಲದೆ ಇತರರಿಗೆ ಕೊಡಕೂಡದು.

2) ಪರಭಾರೆ ಮಾಡುವವನು ಯಾವ ಹಿಂದು ಅವಿಭಕ್ತ ಕುಟುಂಬಕ್ಕೆ ಸೇರಿರುವನೋ ಅದೇ ಕುಟುಂಬಕ್ಕೆ ಸೇರಿದವನಿಗಾಗಲಿ, ಅವನ ಆಶ್ರಿತರಿಗಾಗಲಿ, ಕೆಲಸದವರಿಗಾಗಲಿ, ತಾನು ಪಾಲುಗಾರನಾಗಿ ಅಥವಾ ಸದಸ್ಯನಾಗಿರುವ ಕಂಪೆನಿ, ಸಂಘ, ಇತ್ಯಾದಿಗಳಿಗಾಗಲಿ ಪರಾಭಾರೆ ಮಾಡಕೂಡದು.

3) ಪರಾಭಾರೆ ಮಾಡುವ ಜಮೀನು ಒಮ್ಮೆಗೆ 5 ಎಕ್ರೆಗಿಂತ ಕಡಮೆಯಾಗಿರಬಾರದು.

4) ಜಮೀನಿನ ಮಾರಾಟದ ಬೆಲೆಯು ಅವನ್ನು ಕೊಂಡುಕೊಂಡ ಬೆಲೆಗೆ ಮೀರಕೂಡದು. ಆದರೆ ಸ್ಥಳೀಕ ಆಫೀಸರನು ಕೊಂಡುಕೊಂಡ ಬೆಲೆಯ ಮೇಲೆ ಬಡ್ಡಿ, ಕೃತದ ಪ್ರತಿಫಲ ಇತ್ಯಾದಿಗಳನ್ನು ಸೇರಿಸಿಕೊಳ್ಳಲು ಸಮ್ಮತಿ ಕೊಡಬಹುದು

5) ಪರಾಭಾರೆ ಮಾಡುವವನು ಪರಭಾರೆ ಮಾಡುವುದಕ್ಕೆ ಮೊದಲು ಆ ಭೂಮಿಯ ಪರವಾಗಿ ಸರಕಾರಕ್ಕೆ ಕೊಡಬೇಕಾದ ಕರ ಕೊಡಬೇಕು.

6) ಜಮೀನಿನೊಳಗಿಂದ ಹಾದು ಹೋಗುವ ನದಿ, ದಾರಿ, ರಸ್ತೆಗಳ ಮೇಲಿರುವ ಸರಕಾರದ ಹಕ್ಕು ಮತ್ತು ಖನಿಗಳಲ್ಲಿರುವ ಪಾಲು ಇವಕ್ಕೆ ಬಾಧಕವಾಗಬಾರದು.

# ಸಿಮೆಂಟ್ ವಿತರಣೆ.

ಕೇಂದ್ರ ಸರಕಾರದ ರೀಜನಲ್ ಹಾನರರಿ ಸಿಮೆಂಟ್ ಎಡ್ವಾಯಿಸರಾಗಿ ಈಗ ಮದ್ರಾಸ್‌ನಲ್ಲಿ ಇರುವ ಆಫೀಸರರನ್ನು ಮದ್ರಾಸ್ ಸರಕಾರವು ತನ್ನ ಹಾನರರಿ ಸಿಮೆಂಟ್ ಕಂಟ್ರೋಲರ್‌ಗಳನ್ನಾಗಿ ಈ ಕೆಳಗಿನ ಜಿಲ್ಲೆಗಳಿಗೋಸ್ಕರ ನೇಮಿಸಿದೆ:

1) ಶ್ರೀ ಆರ್. ಆರ್. ಶರ್ಮ, 199 ಮೌಂಟ್ ರೋಡ್, ಮದ್ರಾಸು—ಚೆಂಗಲ್ಪಟ್, ಮದ್ರಾಸು ನಗರ, ದಕ್ಷಿಣ ಆರ್ಕಾಟು, ಉತ್ತರ ಆರ್ಕಾಟು, ಚಿತ್ತೂರು, ನೆಲ್ಲೂರು, ಕಡಪ, ಕರ್ನೂಲು, ಅನಂತಪುರ, ಬಳ್ಳಾರಿ, ಗುಂಟೂರು, ಕೃಷ್ಣ, ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ ಮತ್ತು ವಿಶಾಖಪಟ್ಣ. 2) ಶ್ರೀ ಎ. ಷಣ್ಮುಗಂ, 33, ಅವನಾಶಿ ರೋಡ್, ಕೊಯಂಬತ್ತೂರು—ದಕ್ಷಿಣ ಕನ್ನಡ, ಮಲಬಾರ್, ತಿನ್ನೆವೆಲ್ಲಿ, ರಾಮನ್ನಾಡು, ಮಧುರ, ತಂಜಾವೂರು, ತಿರುಚಿರಪಳ್ಳಿ, ಸೇಲಂ, ಕೊಯಂಬತ್ತೂರು ಮತ್ತು ನೀಲಗಿರಿ

ಈ ಪ್ರಾಂತಕ್ಕೆ 17,300 ಟನ್ನುಗಳಷ್ಟು ಸಿಮೆಂಟು ಕೇಂದ್ರ ಸರಕಾರವು ಹಂಚಿ ಹಾಕಿರುತ್ತದೆ. ಹಾನರರಿ ಸಿಮೆಂಟ್ ಕಂಟ್ರೋಲರ್ ಅಥವಾ ಅವರಿಂದ ಅಧಿಕಾರ ಹೊಂದಿದವರಿಂದ ಪರ್ಮಿಟು ಪಡೆಯದೆ ಸಿಮೆಂಟ್ ಯಾರಿಗೂ ಕೊಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ನಿಜವಾಗಿ ಕೊಳ್ಳುವವರಿಗೆ ಪರ್ಮಿಟು ಇಲ್ಲದೆ ಒಬ್ಬನಿಗೆ 5 ಚೀಲಗಳು ಸಿಮೆಂಟು ಮಾರುವಂತೆ ಹಾನರರಿ ಸಿಮೆಂಟ್ ಕಂಟ್ರೋಲರ್ ಅವರು ರಿಜಿಸ್ಟರ್ಡ್ ವ್ಯಾಪಾರಿಗಳಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಅಂತಹ ಪ್ರತಿ ವಿಕ್ರಯದಲ್ಲಿ ಮಾರಾಟವು ನಿಯಂತ್ರಣಾಜ್ಞೆಗನುಸಾರವಾಗಿದೆಯೆಂಬ ಒಂದು ಸರ್ಟಿಫಿಕೇಟನ್ನು ವ್ಯಾಪಾರಸ್ಥನು ಕೊಳ್ಳುವವನಿಗೆ ಕೊಡಬೇಕಾಗಿದೆ. ಅಲ್ಲದೆ ವ್ಯಾಪಾರಸ್ಥನು ಆಯಾಯಾ ತಿಂಗಳಲ್ಲಿ ಪಡೆದ ಒಟ್ಟು ಪ್ರಮಾಣದ ಶೇಕಡ 25 ರಷ್ಟಕ್ಕಿಂತ ಹೆಚ್ಚು ಈ ರೀತಿ ಮಾರಕೂಡದು. ಸಣ್ಣ ಸಣ್ಣ ಅವಸರದ ಕೆಲಸಗಳಿಗೆ ಮುಖ್ಯವಾಗಿ ಗ್ರಾಮ ಪುನರ್ನಿರ್ಮಾಣ, ಹೆಚ್ಚು ಆಹಾರ ಬೆಳೆಯುವ ಯೋಜನೆಯೇ ಮೊದಲಾದ ಕೆಲಸಗಳಿಗೆ ಬೇಕಾಗಿ ಸಿಮೆಂಟು ಒದಗಿಸುವಂತೆ ಸರಕಾರವು ಪ್ರತಿ ಜಿಲ್ಲೆಯಲ್ಲಿ ತಹಸಿಲ್ದಾರರು ವ್ಯಾಪಾರಸ್ಥರಿಗೆ ಪರ್ಮಿಟು ಕೊಡುವಂತೆಯೂ ಅಧಿಕಾರ ಕೊಟ್ಟಿದೆ. ಅಂತಹ ಪ್ರತಿ ಪರ್ಮಿಟು 10 ಚೀಲುಗಳಿಗಿಂತ ಹೆಚ್ಚಿರಕೂಡದು. ಅಲ್ಲದೆ ಈ ರೀತಿ ಒಂದು ತಿಂಗಳಲ್ಲಿ ತಹಸಿಲ್ದಾರರು ಕೊಡುವ ಪರ್ಮಿಟುಗಳ ಸಿಮೆಂಟಿನ ಒಟ್ಟು ಪ್ರಮಾಣವು ಆ ತಿಂಗಳಲ್ಲಿ ವ್ಯಾಪಾರಸ್ಥನು ಪಡೆದ ಸಿಮೆಂಟಿನ ಶೇಕಡ 25 ರಷ್ಟು ಅಂಶವನ್ನು ಮೀರಕೂಡದು. ಈ ಅಂಶವು ವ್ಯಾಪಾರಸ್ಥರು ತಾವಾಗಿಯೇ ಮಾರಿದ ಶೇಕಡ 25 ರಷ್ಟಕ್ಕೆ ಸೇರಿಸಿಯಾಗಿರುತ್ತದೆ. ಹೆಚ್ಚಿಗೆ ಪ್ರಮಾಣಗಳಲ್ಲಿ ಸಿಮೆಂಟು ಆಫೀಸರರ—ಕಲೆಕ್ಟರ್, ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರ್, ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಆಫೀಸರ್ ಯಾ ಇತರ ಆಫೀಸರ್...ಮೂಲಕ ಅರ್ಜಿಗಳನ್ನು ಹಾನರರಿ ಸಿಮೆಂಟ್ ಕಂಟ್ರೋಲರ್‌ಗಳಿಗೆ ಕಳುಹಿಸಬೇಕು. ವಿದ್ಯಾ ಸಂಸ್ಥೆಗಳಿಗೆ ಸಿಮೆಂಟ್ ಬೇಕಾಗಿದ್ದರೆ ಅವರ ಅರ್ಜಿಗಳನ್ನು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಗೆ ಕಳುಹಿಸಬೇಕು. ಅವರು ಕಂಟ್ರೋಲರಿಗೆ ಕಳುಹಿಸುವರು. ಕೇಂದ್ರ ಸರಕಾರವು ಆಗಿಂದಾಗ ಸಿಮೆಂಟಿನ ಬೆಲೆಯನ್ನು ಗೊತ್ತುಪಡಿಸುತ್ತದೆ. ಅದನ್ನು ಮದ್ರಾಸ್ ಸರಕಾರವು ಫೋರ್ಟ್ ಸೈಂಟ್ ಜಾರ್ಜ್ ಗೆಜೇಟಿನಲ್ಲಿ ಪ್ರಕಟಿಸುತ್ತದೆ. ರೈಲ್ವೇ ಸಾರಿಗೆಯ ವೆಚ್ಚವೂ ಸೇರಿ ಈಗ ಟನ್ನಿಗೆ ಬೆಲೆ ರೂ 87-8-0 ಅಧಿಕೃತವಲ್ಲದ ವಿಕ್ರಯ, ಕೊಳ್ಳುವಿಕೆ, ನಿಯಂತ್ರಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ, ಇವು ಅಪರಾಧಗಳಾಗಿವೆ.

---

7) ಪರಾಭಾರೆಯಲ್ಲಿ, ತುಂಗಭದ್ರಾ ಆಣೆಕಟ್ಟಿನಲ್ಲಿ ನೀರು ದೊರೆಯುವ ತಾರೀಕಿನಿಂದ ಆ ರೀತಿ ಪಡೆಕೊಂಡವನು ವರ್ಷಕ್ಕೆ 5 ಎಕರೆಯಂತೆ ಪುಂಜ ಪೈರುಗಳನ್ನು 2 ಎಕರೆಯಂತೆ ನಂದ ಅಥವಾ ಬಾಗಾಯಿತಿ ಪೈರುಗಳನ್ನು ಸಾಗುವಳಿ ಮಾಡುವ ಶರತು ಇರಬೇಕು?

ಪರ್ಮಿಟಿಲ್ಲದೆ ಪರಭಾರೆ ಮಾಡಿದರೆ ಸಂಧುವಾಗುವುದಿಲ್ಲ.

THE NAVA BHARAT

ಸಂಪಾದಕ-ಟಿ.ಬಿ.ಕೇಶವಪ್ರಭಾಕ

ಜೂನ್ 28 ಸೋಮವಾರ 1948

# ಜನತೆಯ ಬೆಂಬಲಬೇಕು.

ಬ್ರಿಟಿಷ್ ಸರ್ಕಾರದ ನಿರ್ಗಮನಾನಂತರ ಕಾಂಗ್ರೆಸ್ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ದೊರೆಯುವುದೆಂದು ಆಶಿಸಲಾಗಿತ್ತು. ಆದರೆ ಜನರು ಸಾಕಷ್ಟು ಸಹಕಾರ ಮಾಡುತ್ತಿಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಇದಕ್ಕೆ ಕಾರಣಗಳುಂಟು. ಜನರ ಪರವಾಗಿ ಹೋದ ಪ್ರತಿನಿಧಿಗಳು ಸ್ವಾರ್ಥಿಗಳಾಗಿ ಸ್ವಾರ್ಥಲಾಭ ಕಾರ್ಯಗಳಲ್ಲಿ ತೊಡಗಿದ್ದೊಂದು ಸರ್ಕಾರದವರು ಜನಹಿತಕ್ಕೆಂದು ಪ್ರಕಟಿಸಿದ ಯೋಜನೆಗಳು ಕಾಗದದ ಮೇಲೆಯೇ ಉಳಿದದ್ದೊಂದು.

ಹಳ್ಳಿಗರಿಗೆ ಕುಡಿಯುವ ನೀರು, ವಿದ್ಯಾಭ್ಯಾಸ, ಋಣವಿಮೋಚನೆ, ವೈದ್ಯಸಹಾಯ ಗ್ರಾಮಸ್ವೈರ್ಮಲ್ಯ ಕಾರ್ಯಗಳನ್ನು ಕುರಿತು ಸೌಕರ್ಯಗಳು ಬೇಕು. ಜನಸಂಖ್ಯೆಯು ಹೆಚ್ಚಿರುವ ಕಾರಣ ಹೆಚ್ಚು ಆಹಾರ ಬೆಳೆಸುವ ಕಾರ್ಯಕಾರೀ ಯೋಜನೆಗಳು ರೂಪುಗೊಳ್ಳಬೇಕು ಗೊಬ್ಬರಕ್ಕೆ, ಎತ್ತುಗಳನ್ನು ಕೊಳ್ಳಲಿಕ್ಕೆ, ಭಾವಿಗಳನ್ನು ಅಗೆಸಲಿಕ್ಕೆ ಸರ್ಕಾರದವರು ಹೆಚ್ಚು ಧನ ವ್ಯಯ ಮಾಡಬೇಕಲ್ಲದೆ, ಸರ್ಕಾರದ ಅಧಿಕಾರಿಗಳು ಈ ದುಡಿಯುವ ರೈತರಿಗೆ ಮಂಜೂರಾದ ಹಣವನ್ನೆಲ್ಲಾ ಕೊಡುತ್ತಿರುವರೋ ಇಲ್ಲವೋ ಎಂಬುದಕ್ಕೂ. ಕಾರ್ಯಭಾಗವು ಸಾಗಿದೆಯೋ ಇಲ್ಲವೋ ಎಂಬುದಕ್ಕೂ ವಿಚಾರಣಾ ಸಂಸ್ಥೆಗಳು ಏರ್ಪಡಬೇಕು.

ಕಂಟ್ರೋಲ್ ಕಾಲದಲ್ಲಿ ಲಾಭಬಡುಕರಾದ ವರ್ತಕರಿಂದ, ದುರಾಶೆಯ ಸರ್ಕಾರಿ ನೌಕರರಿಂದ ಪ್ರಜೆಗಳಿಗೆ ಅಮಿತ ಕಷ್ಟಗಳುಂಟಾದವು. ವಿನಿಯಂತ್ರಣದ ನಂತರ, ಧರಗಳು ಬಹಳ ಹೆಚ್ಚಿವೆ ಇವುಗಳನ್ನು ತಗ್ಗಿಸುವ ಉಪಾಯಗಳಾಗಬೇಕು ಬಟ್ಟೆಯ ಬೆಲೆ ಒಂದಕ್ಕೆ ನಾಲ್ಕರಷ್ಟಾಗಿದೆ ಇದನ್ನು ಹಿಡಿತಕ್ಕೆ ತರಬೇಕು.

ಪ್ರಜೆಗಳ ಹಿತದೃಷ್ಟಿಯಿಂದ ವಿಧಾಯಕ ಕಾರ್ಯಕ್ರಮಕ್ಕಾಗಿ ಯೋಗ್ಯ ಶಾಸನಗಳೇರ್ಪಟ್ಟು, ಕಾರ್ಯರೂಪದಲ್ಲಿ ಬಂದಾಗ ಪ್ರಜೆಗಳಿಗೆ ಸರ್ಕಾರದ ಮೇಲೆ ವಿಶ್ವಾಸ ಹುಟ್ಟುತ್ತದೆ ಅರ್ಜಿಗಳನ್ನು ಹಾಕಿದರೆ ತಿಂಗಳುಗಟ್ಟಲೆ ಅದಕ್ಕೆ ಮರುತ್ತರವೇ ಬರುವುದಿಲ್ಲ. ಮಂತ್ರಿಗಳಾದವರೂ ತಮ್ಮ ಭೇಟಿಯಲ್ಲಿ ಪಟ್ಟಣಗಳಿಗೆ ಹೆಚ್ಚಾಗಿ ಹೋಗುವರು. ಹಳ್ಳಿಗಳನ್ನೂ ಸಂದರ್ಶಿಸಿ ಹಳ್ಳಿಗರ ಬಾಯಿಂದ ಅವರ ಕಷ್ಟಗಳನ್ನರಿತು ಶೀಘ್ರ ಪರಿಹಾರ ಒದಗಿಸಬೇಕು ಹೀಗಾದಲ್ಲಿ ಸರ್ಕಾರವು ನಿಜವಾಗಿಯೂ ಜನತಾ ಸರ್ಕಾರವಾಗುವುದು ಯಾವುದಾದರೊಂದು ಜನಹಿತ ಕಾರ್ಯವು ಪ್ರಕಟವಾದ ಮೂರು ತಿಂಗಳುಗಳೊಳಗಾದರೂ ಜಾರಿಯಲ್ಲಿ ತಂದರೆ ಒಳ್ಳೆಯದು.

# ಬಳ್ಳಾರಿಯಲ್ಲಿ ಮುಸ್ಲಿಂ ಗೂಂಡಾರ ಬಂಧನ.

ಬಳ್ಳಾರಿಯ ಕೌಲು ಬಜಾರ ಮತ್ತು ಲಾಲಾಕಮಾನು ಬೀದಿಗಳಲ್ಲಿ ಗದ್ದಲಮಾಡಿ ಚಿದರಿಕೆ ಹಾಕಿದರೆಂಬ ಕಾರಣದ ಮೇಲೆ ಕೆಲ ಮುಸಲ್ಮಾನ ತುಂಟರನ್ನು ಬಂಧಿಸಿ ತಕ್ಕ ಚರ್ಯೆ ತೆಗೆದುಕೊಳ್ಳಲಾಗುತ್ತಿದೆ.

## ಬಳ್ಳಾರಿಗೆ ಮಂತ್ರಿದ್ವಯರ ಭೇಟಿ

ಮದ್ರಾಸ್ ಔದ್ಯೋಗಿಕ ಮಂತ್ರಿಗಳಾದ ಶ್ರೀ ಹೆಚ್. ಶೀತಾರಾಮರೆಡ್ಡಿಯವರು 24ನೆಯ ದಿನ ಬಂದರು ಆ ದಿನ ರಾಯದುರ್ಗಕ್ಕೆ ಹೋಗಿ ಮಾರನೆಯ ಪ್ರಾತಃಕಾಲ ಬಂದರು 25ನೆಯ ತಾ॥ ಹಾಲಹರ್ವಿ ಹರ್ದಿಗೆರೆಗೆ ಹೋಗಿ ಬಂದರು. 26 ಬಳ್ಳಾರಿಯಲ್ಲಿ 27 ಹರಪನಹಳ್ಳಿ ಹೊಸಪೇಟೆಗಳನ್ನು ಸಂದರ್ಶಿಸಿದರು.

28ನೆಯ ತಾ॥ ಮುಖ್ಯ ಮಂತ್ರಿಗಳು ಹೊಸಪೇಟೆಗೆ ಬರುವರು. ತುಂಗಭದ್ರಾಸಾಗರ ನೋಡಿ ಅಂದು ಹೊಸಪೇಟೆಯಲ್ಲೇ ಇರುವರು. 29 ಸಿರುಗುಪ್ಪೆಯನ್ನು ನೋಡಿ ಕರ್ನೂಲಿನ ಪ್ರವಾಸಮಾಡುವರು

# ಪಾಕಿಸ್ತಾನವು ಉಡಿಯಲ್ಲಿ ಬೆಂಕಿ ಕಟ್ಟಿಕೊಂಡಿತು

ಗಡಿನಾಡುಗಾಂಧಿ ಎಂದು ಪ್ರಸಿದ್ಧರಾದ ಖಾನ ಅಬ್ದುಲ್ ಗಫರಖಾನರಿಗೆ, ಪಾಕಿಸ್ತಾನ ಸರಕಾರವು 3 ವರ್ಷ ಸಶ್ರಮ ಶಿಕ್ಷೆಯನ್ನು ಕೊಟ್ಟು ಸೆರೆಯಲ್ಲಿ ಇಟ್ಟಿತು ಎಂಬ ಸುದ್ದಿಯು ಬಂದಿದೆ. ತಾ॥ 15ನೇ ದಿವಸ ಅವರನ್ನು ಬಂಧಿಸಿದರೆಂದು ತಿಳಿಯಿತು ಮರುದಿವಸವೇ ಅವರಿಗೆ ಈ ತರಹದ ಉಗ್ರಶಿಕ್ಷೆಯು ಕೊಡಲ್ಪಟ್ಟದ್ದು ಪ್ರಸಿದ್ಧವಾಗಿದೆ. ಇಷ್ಟು ಅವಸರದಲ್ಲಿ ಅವರ ವಿಚಾರಣೆ ನಡೆದು ಕೂಡಲೆ ನಿರ್ಣಯವನ್ನೇ ಕೊಟ್ಟಿದ್ದು ತೀರ ಆಶ್ಚರ್ಯದ ಸಂಗತಿಗಳಲ್ಲೊಂದಾಗಿದೆ. ವಸ್ತುಸ್ಥಿತಿಯನ್ನು ನೋಡಿದರೆ ನಿರ್ಣಯ ಬರೆದಿಟ್ಟೇ ವಿಚಾರಣೆಗೆ ಪ್ರಾರಂಭಮಾಡಿದಂತೆ ತೋರುತ್ತದೆ.

ಅಬ್ದುಲ ಗಫರಖಾನರ ಮೇಲೆ ಹೊರಿಸಲಾಗಿದ್ದ ಅಪರಾಧದ ಬಗ್ಗೆ ಸರ್ವರೂ ಸುದ್ದಿ ಕೇಳಿದ್ದಾರೆ ಇಪಿ ಫಕೀರನ ಕೂಡ ಸಂಬಂಧ ಬೆಳೆಸಿಕೊಂಡು ಪಾಕಿಸ್ತಾನದಲ್ಲಿ ಆವನ ಸಹಾಯದಿಂದ ಬಂಡನ್ನೆಬ್ಬಿಸಲು ಅವರು ಯತ್ನಿಸುತ್ತಿದ್ದರೆಂಬ ಬಗ್ಗೆ ಅಲ್ಲಿಯ ಸರಕಾರಕ್ಕೆ ವಿಶ್ವಸನೀಯ ಸಾಕ್ಷಿಗಳು ದೊರೆತಿವೆಯಂತೆ.

ಏನೇ ಇರಲಿ ಈ ತರಹದ ಹೆಜ್ಜೆಯನ್ನು ಪಾಕಿಸ್ತಾನವು ಇಟ್ಟಿದ್ದು ಅದರ ಅನಿಷ್ಟ ಕಾಲದ ಸೂಚಕವೆಂದೇ ಹೇಳದೆ ಗತ್ಯಂತರವಿಲ್ಲ. ಏಕೆಂದರೆ ಗಡಿನಾಡ ಗಾಂಧಿಯವರಂತಹ ವ್ಯಕ್ತಿಯೊಡನೆ ವ್ಯವಹರಿಸುತ್ತಿದ್ದಾಗ ಪಾಕಿಸ್ತಾನ ಸರಕಾರವು ಹೆಚ್ಚು ವಿಚಾರ ಮಾಡಬೇಕಾಗಿತ್ತು.

ಮೊದಲಿನಿಂದಲೂ ಖಾನ ಅಬ್ದುಲಗಫರ ಖಾನರ ವ್ಯಕ್ತಿ ಪರಿಚಯ ಮತ್ತು ಅವರ ಕಾರ್ಯವಿಧಾನ ಇವುಗಳ ಬಗ್ಗೆ ಸರ್ವರಿಗೆ ಪರಿಚಯವಿದೆ. ಈ ಪರಿಚಯವು ಕಾಯಿದೇ ಆಜಂರವರಿಗೆ ಮತ್ತು ಅವರ ಇತರ ಸಹೋದ್ಯೋಗಿಗಳಿಗೆ ಇರಲಿಲ್ಲವೆಂದರೆ ನಡೆಯಲಾರದು. ಹೀಗಿರುವಾಗ ಅವರೊಡನೆ ಈ ತರಹದ ವಾತಾವರಣಕ್ಕೆ ಬಂದು ಮುಟ್ಟಿದುದು, ಪಾಕಿಸ್ತಾನೀ ಸರಕಾರದ ಮುತ್ಸದ್ದಿತನದ ಅಭಾವವನ್ನು ತೋರಿಸುತ್ತಿದೆಯೆಂದು ವ್ಯಸನದಿಂದ ಹೇಳಬೇಕಾಗುತ್ತದೆ

ಕಾಂಗ್ರೆಸ್ಸು ಮತ್ತು ಮಹಾತ್ಮಾಜಿಯವರ ಗರಡಿಯಲ್ಲಿ ಖಾನ ಅಬ್ದುಲ ಗಫರಖಾನರು ಸಿದ್ಧರಾಗಿದ್ದಾರೆ. ತಮ್ಮ ನಿಷ್ಕಪಟ ವೃತ್ತಿ, ಅಹಿಂಸಾನಿಷ್ಠೆ, ಕಾರ್ಯಶುದ್ಧಿ ಇವುಗಳ ಮೂಲಕ ಅವರು ಮಹಾತ್ಮಾಜಿಯವರ ಪ್ರಮಾಣಪತ್ರ ಪಡೆದವರಾಗಿದ್ದಾರೆ. ಅಂತೆಯೇ ಅವರಿಗೆ ಗಡಿನಾಡ ಗಾಂಧಿ ಎಂಬ ಹೆಸರು ಬಂದಿದೆ.

ಎರಡು ಭಾಗಗಳಲ್ಲಿ ಹಿಂದುಸ್ಥಾನವು ವಿಭಾಗಿಸಲ್ಪಡಕೂಡದು ಎಂದು ಮೊದಲಿನಿಂದಲೂ ಅವರು ಅಭಿಪ್ರಾಯಪಟ್ಟರು. ಅದು ಅನಿವಾರ್ಯದ ಮೇಲೆ ಅವರು ತಮ್ಮ ಪಠಾಣರ ಭಾಗದ ಸ್ವಾತಂತ್ರ್ಯದ ಬಗ್ಗೆ ಯತ್ನಿಸಿದರು. ಈ ಬಗ್ಗೆ ಜಿನ್ನಾ ಮತ್ತು ಅವರಲ್ಲಿ ಚರ್ಚೆಯು ಆಯಿತು. ಪಾಕಿಸ್ತಾನದ ಘಟನಾ ಸಮಿತಿಗೆ ಕೂಡ ಅವರು—ಖಾನ ಅಬ್ದುಲ ಗಫರಖಾನ ಹೋಗಿದ್ದರು.

ಯಾವುದೇ ತರಹದ ಮುಚ್ಚುಮರೆಯಿಲ್ಲದೆ ಅವರು ತಮ್ಮ ನಿಲುವಿನ ಬಗ್ಗೆ ಮಾತಾಡುತ್ತ ಬಂದಿದ್ದಾರೆ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸಿದರೆ ತಾವು ತಮ್ಮ ಅನುಯಾಯಿಗಳೊಂದಿಗೆ ಪಾಕಿಸ್ತಾನಕ್ಕೆ ನಿಷ್ಠೆಯಿಂದ ಇರುವುದಾಗಿ ಅವರು ಹೇಳಿದ್ದಾರೆ.

ಹೀಗಿರುವಾಗ ಅಂಥವರನ್ನು ಬಂಧಿಸಿ, ಶಿಕ್ಷೆ ಕೊಟ್ಟು ಅವರ ಮತ್ತು ತಮ್ಮ ನಡುವಿನ ಸಂಬಂಧವನ್ನು ಇನ್ನಿಷ್ಟು ಕೆಡಿಸಿಕೊಂಡದ್ದು ಪಾಕಿಸ್ತಾನ ಸರಕಾರಕ್ಕೆ ಹಿತಕಾರಿಯಾಗಿ ಪರಿಣಮಿಸಲಾರದೆಂಬುದನ್ನು ಯಾವನಾದರೂ ಹೇಳಬಹುದಾಗಿದೆ.

ಇಂದು ಪಾಕಿಸ್ತಾನದ ಅಂತರಿಕ ವಾತಾವರಣವು ತೃಪ್ತಿಕರವಾಗಿಲ್ಲ. ಅಂತಃಕಲಹಗಳು ಎಲ್ಲೆಡೆಗೆ ಏಳುತ್ತಿವೆ ಸುತ್ತುಮುತ್ತಲು ಕೂಡ ಪ್ರತಿಭಟನೆಗಳು ತಲೆದೋರುತ್ತಿವೆ.

ಖುರ್ರೋ ಇವರ ಪ್ರಕರಣವು ಇನ್ನು ಸುಲಭವಾಗಿ

ಲ್ಲ. ಅವರ ಬೇರುಗಳು ಬಹಳ ದೂರದವರೆಗೆ ಇಳಿದಂತೆ ಕಾಣುತ್ತಿದೆ. ಪಾಕಿಸ್ತಾನ್ನದ ದೌರ್ಬಲ್ಯದ ಲಾಭ ತೆಗೆದುಕೊಂಡು ಖುರ್ರೋ ಪ್ರಕರಣಕ್ಕೆ ಸಂಬಂಧ ಪಟ್ಟ ಶಕ್ತಿಗಳು ಕೂಡಿಸದೆ ಇರಲಾರವು. ಕರಾಚಿಯನ್ನು ಸಿಂಧದಿಂದ ಬೇರ್ಪಡಿಸುವ ವಿಚಾರವು ಅಲ್ಲಿ ಇಬ್ಬಣಗಳನ್ನು ಹುಟ್ಟಿಸಿದೆ. ಈ ಪಠಾಣಿಸ್ತಾನದ ಮಾತಂತೂ ಇನ್ನೂ ತೀಕ್ಷ್ಣ ಸ್ವರೂಪದ್ದಾಗಿದೆ. ಬಲೂಚಿಸ್ತಾನದ ಭಾಗದಲ್ಲಿ ಪಾಕಿಸ್ತಾನ ಸರಕಾರದ ಬಗ್ಗೆ ಸಂತೋಷವು ಕಂಡುಬರುತ್ತಿಲ್ಲ. ಅತ್ತ ಅಫಗಾಣಿಸ್ತಾನವು ಕಾಲು ಕೆದರುತ್ತಿದೆ ಈಗ ಪಾಕಿಸ್ತಾನದ ಭಾಗಗಳಾದ ಬಲೂಚಿಸ್ತಾನ ಮೊದಲಾದ ಭಾಗಗಳು ಹಿಂದಕ್ಕೆ ತನ್ನವಾಗಿದ್ದವೆಂದೂ ಇವುಗಳು ತಿರುಗಿ ತನಗೆ ಸಿಗಬೇಕೆಂದೂ ಅದು ವಿಚಾರ ನಡೆಸಿದೆ.

ತಾವಾಗಿಯೇ ಬಿತ್ತಿಕೊಂಡ ಮುಳ್ಳಿನೋಪಾದಿಯಲ್ಲಿ ಕಾಶ್ಮೀರ ಪ್ರಶ್ನೆಯು ಇಂದು ಪಾಕಿಸ್ತಾನದ ತಲೆಯನ್ನು ತಿನ್ನುತ್ತಿದೆ. ಸಾಲದ್ದಕ್ಕೆ ಜಿನ್ನಾಸಾಹೇಬರು ಹೈದರಾಬಾದದ ಪ್ರಶ್ನೆಗೆ ಸಂಬಂಧಪಟ್ಟ ತಮ್ಮ ಅಕ್ಕೀಕಾಳನ್ನ ಒಗೆಯುತ್ತಿದ್ದಾರೆ. ನಾಳೆ ಅಲ್ಲೇನಾದರೂ ಅನಿಷ್ಟ ಪ್ರಸಂಗವು ಬಂದರೆ, ಇವರ ಶಕ್ತಿಯ ಕೆಲವು ಭಾಗವು ಅದಕ್ಕಾಗಿ ಮೀಸಲಾಗಿರಬೇಕಾದ ಪ್ರಸಂಗವು ಬರಬಹುದು.

ಆಡಳಿತದ ವಿಷಯದಲ್ಲಿಯೂ ಪಾಕಿಸ್ತಾನವು ನೆಮ್ಮದಿಯನ್ನು ಹುಟ್ಟಿಸಿಕೊಂಡಿಲ್ಲ. ತಾನು ಕಲ್ಪಿಸಿದ ಪುಂಡವೃತ್ತಿಯು ತನ್ನ ವಿರುದ್ಧ ಪ್ರಯೋಗಿಸಲ್ಪಡುತ್ತಿರುವ ಪ್ರಸಂಗವು ಈಗ ಅದಕ್ಕೆ ಬಂದಿದೆ ಜೀವನ ಸರಕಾರೀ ಕೆಲಸಗಳು, ಉದ್ಯೋಗಗಳು, ಶಿಕ್ಷಣ, ಧರ್ಮ ಮೊದಲಾದ ಸರ್ವಕ್ಷೇತ್ರಗಳಲ್ಲಿ ಇಂದು ಅಲ್ಲಿ ಅವ್ಯವಸ್ಥೆಯುಂಟಾಗಿದೆ. ಸರಕಾರವು ಬರಿಗೈಯಿಂದ ಮೊಳಹಾಕುತ್ತಿದೆ

ತನ್ಮಧ್ಯೆ ಪಾಕಿಸ್ತಾನ ಸರಕಾರವು ಗಡಿನಾಡ ಗಾಂಧಿಯನ್ನು ಶಿಕ್ಷಿಸಿ, ಒಂದು ಹೊಸ ಸಮಸ್ಯೆಯನ್ನು ಹುಟ್ಟಿಸಿಕೊಂಡದ್ದು ತೀರ ಅದೂರ ದೃಷ್ಟಿಯು ಮಾತ್ರೇ ಆಗಿದೆ. ಅಲ್ಲಿಯ ಸರಕಾರವು ಹೇಳುವುದನ್ನೇ ನೋಡಿದರೆ ಇಪಿ ಫಕೀರನು ಪಾಕಿಸ್ತಾನದ ವಿರುದ್ಧ ತನ್ನ ಚಟುವಟಿಕೆಗಳನ್ನು ನಡೆಸಿರುವನೆಂಬುದು ಸ್ಪಷ್ಟವಿದೆ ಅದೊಂದು ಅವರ ದಾರಿಯಲ್ಲಿಯ ಹೊಸ ಮುಳ್ಳೇ ಆಗಿದೆಯೆಂದು ಹೇಳಬಹುದು.

ರಾಜಕಾರಣದ ದೃಷ್ಟಿಯಿಂದ ಪಾಕಿಸ್ತಾನದ ತೊಂದರೆಗಳನ್ನೂ ನಾವು ನೋಡಬೇಕಾಗುವುದು. ತನ್ನ ರಾಜ್ಯದ ಯಾವುದೊಂದು ಭಾಗವು ಸ್ವಾತಂತ್ರ್ಯವನ್ನು ಬೇಡಿದರೆ, ಅಥವಾ ವಿಶಿಷ್ಟ ಅಧಿಕಾರಗಳನ್ನು ಕೇಳಿದರೆ ಅದು ಅಸಾಧ್ಯಮಾತಾಗದೆ ಇರಲಾರದು. ಆದರೆ ಹೈದರಾಬಾದ ಸರಕಾರವು ಹಿಂದುಸ್ತಾನದಿಂದ ಸ್ವತಂತ್ರ ಉಳಿಯಬೇಕೆಂದು ಹೇಳುವಂತೆ, ಗಡಿನಾಡ ಪ್ರಾಂತದ ಪಠಾಣರು ತಮ್ಮ ಸ್ವಾತಂತ್ರ್ಯವನ್ನು ಪ್ರಸ್ಥಾಪಿಸಲು ಇಚ್ಛಿಸಲಿಲ್ಲವೆಂಬುದನ್ನು ಯಾರೂ ಅಲಕ್ಷಿಸಲಾರರು. ಮುಸ್ಲಿಂ ಲೀಗಿನ ಪ್ರತಿಗಾಮೀ ಮತ್ತು ಜಾತೀಯ ತಳಹದಿಯ ಮೇಲಿನ ಕಾರ್ಯಕ್ಕೇ ಅಲ್ಲಿಯ ಸರ್ವರೂ ಬೆಂಬಲ ಕೊಡಬೇಕೆಂದು ಪಾಕಿಸ್ತಾನದ ಸೂತ್ರಚಾಲಕರು ಹೇಳಿದುದಕ್ಕೆ ಖಾನ ಬಂಧುಗಳು ಮತ್ತು ಅವರ ಅನುಯಾಯಿಗಳು ಒಪ್ಪದೆ ಹೋದವು.

ಜಿನ್ನಾರವರು ಮತ್ತು ಮುಸ್ಲಿಂ ಲೀಗಿನವರ ಸರ್ವಾಧಿಕಾರೀ ಮನೋವೃತ್ತಿಯು ಇಂದು ಅವರ ಮನೆಯಲ್ಲಿಯೇ ಒಡಕುಗಳನ್ನು ಹುಟ್ಟಿಸುತ್ತಿದೆ. ಆ ವೃತ್ತಿಗೆ ತಿಲಾಂಜಲಿಕೊಟ್ಟು ಸರ್ವ ಸಮ್ಮತವಾದ ಮತ್ತು ಪ್ರಜಾಸತ್ತೆಯ ತತ್ವಗಳಿಗೆ ಒಪ್ಪುವಂತಹ ದಾರಿಗಳಲ್ಲಿ ಅವರು ಸಾಗಿದರೆ ಅವರ ಸ್ಥಿತಿಯು ಇದ್ದುದರಲ್ಲಿ ಸುಧಾರಿಸಬಹುದಾಗಿದೆ.

ಈ ದೃಷ್ಟಿಯಿಂದ ನೋಡಿದರೆ ಖಾನ ಅಬ್ದುಲ ಗಫರಖಾನರನ್ನು ಬಂಧಿಸಿ ಶಿಕ್ಷೆಕೊಟ್ಟುದು ಪಾಕಿಸ್ತಾನ ಸರಕಾರವು ಮಾಡಿದ ದೊಡ್ಡ ತಪ್ಪುಗಳಲ್ಲಿ ಒಂದಾಗಿದೆಯೆಂದು ಹೇಳಬಹುದು. ಇನ್ನು ಮೇಲಾದರೂ ಈ ವಿಷಯದಲ್ಲಿ ಸುಧಾರಿಸಿಕೊಳ್ಳುವುದು ಸಾಧ್ಯವಿದೆ, ಇಲ್ಲದಿದ್ದರೆ ಮಹಾತ್ಮಗಾಂಧಿಯವರ ದಾರಿಯಲ್ಲಿ ನುರಿತ ಖುದಾಯಿ ಖಿದ್ಮತ್‌ಗಾರರು ಅದೇ ಸ್ವರೂಪದ ಆಂದೋಲನವನ್ನು ಪಾಕಿಸ್ತಾನದ ಸರಕಾರದ ವಿರುದ್ಧ ಪ್ರಾರಂಭಿಸಿದರೆ ಅದರಿಂದ ಯಾರಿಗೂ ಆಶ್ಚರ್ಯವಾಗಲಿಕ್ಕಿಲ್ಲ. ಇಪಿ ಫಕೀರನ ಸಂಗಡ ಖಾನ ಅಬ್ದುಲ ಗಫರ ಖಾನರು ಸಂಚುನಡೆಸಿದ್ದು ನಿಜವೇ ಇದ್ದರೆ ಮಹಾತ್ಮಾ ಗಾಂಧಿಯವರ ದಾರಿಯು ಆಂದೋಲನವು ಅಹಿಂಸೆಯನ್ನು ಹೊರತು ಪಡಿಸಿ ನಡೆಯಬಹುದೋ ಏನೋ!

ಪರಿಸ್ಥಿತಿಯು ಹೀಗಿರುವಾಗ ಜಿನ್ನಾರವರು ಮತ್ತು

ಅವರ ಅನುಯಾಯಿಗಳು ತಮ್ಮ ಪ್ರತಿಗಾಮೀ ಮನೋವೃತ್ತಿಯನ್ನು ಇನ್ನು ಮೇಲಾದರೂ ಬಿಟ್ಟು ಕೊಡುವುದು ಮೊದಲು ಅವರ ದೃಷ್ಟಿಯಿಂದಲೇ ಅವಶ್ಯವಾಗಿದೆ. ಆದರಿಂದ ಅಪ್ರತ್ಯಕ್ಷವಾಗಿ ಇತರ ಎಡಬಲದ ರಾಜ್ಯಗಳಿಗೂ ಸುಗಮವಾಗಿ ಸಾಗಲು ಅವರು ಆಸ್ಪದ ಮಾಡಿಕೊಟ್ಟಂತಾದೀತು.

## ನಿಜಾಮರು ಹಗ್ಗ ಹರಿಯುವ ತನಕ ಜಗ್ಗಿದರು.

ಕೊನೆಗೊಮ್ಮೆ ಹೈದರಾಬಾದದ ಮಾತುಕತೆ ಮುಗಿದಂತಾಯಿತು. ಹಿಂದುಸ್ಥಾನ ಸರಕಾರವು ಒಪ್ಪಂದದ ಬಗ್ಗೆ ಕೊಟ್ಟ ಕೊನೆಯ ಕರಡಿನಲ್ಲಿ ಒಂದು ಶಬ್ದವನ್ನಾದರೂ ಹೆಚ್ಚು ಕಡಿಮೆ ಮಾಡುವದಿಲ್ಲೆಂದು ಸಾರಿತು. ಒಪ್ಪಂದ ಕೊನೆಯ ಕರಡನ್ನು ನಿಜಾಮರಾಗಲೀ ಅವರ ಸರಕಾರದವರಾಗಲೀ ಒಪ್ಪಿರುವದಿಲ್ಲವೆಂದು ಪಂಡಿತ ಜವಾಹರಲಾಲರು ಸುದ್ದಿಗಾರರು ಸಭೆಯಲ್ಲಿ ಹೇಳಿದರು.

ಜೂನ 17ನೆಯ ದಿನಾಂಕ ರಾತ್ರಿ ಹೊರಡಿಸಿದ ನಿಜಾಮ ಸರಕಾರದ ಪ್ರಕಟನೆಯಲ್ಲಿ "ಹಿಂದುಸ್ಥಾನದ ಏಕಾಧಿಪತ್ಯ, ಮತ್ತು ಬಲಾತ್ಕಾರ ಧೋರಣಗಳ ಮೂಲಕ ಹಿಂದ ಹೈದರಾಬಾದ ಮಾತುಕತೆಗಳು ಮುರಿದವು" ಎಂದು ತಿರುಬೊಟ್ಟೆ ಕಟ್ಟಲಾಗಿದೆ. ಮತ್ತು ಸಾರ್ವತ್ರಿಕ ಮತಗಣನೆಯ ಮೊದಲೇ ಹೈದರಾಬಾದದ ಸೇರ್ಪಡೆಯಾಗಬೇಕು. ಸಂಸ್ಥಾನದ ಅಂತರಿಕ ಆಡಳಿತದಲ್ಲಿ ಆಮೂಲಾಗ್ರ ಮಾರ್ಪಾಡು ಆಗಬೇಕು ಎಂದು ಹಿಂದುಸ್ಥಾನ ಸರಕಾರರವು ಹಟಹಿಡಿಯಿತು. ಮತ್ತು ಹೈದರಾಬಾದದ ಆರ್ಥಿಕ ಸ್ವಾತಂತ್ರ್ಯದ ಅಧಿಕಾರವನ್ನೂ ಅದು ಮನ್ನಿಸಲಿಲ್ಲ ಎಂದು ಆ ತಿರುಬೊಟ್ಟೆಯಲ್ಲಿ ಹೇಳಲಾಗಿದೆ.

ಅಂತೂ ಒಮ್ಮೆ ನಿಜಾಮರು ಒಪ್ಪಂದದ ಹಗ್ಗವನ್ನು ಹರಿದರೆಂದು ಹೇಳಬಹುದಾಗಿದ್ದರೂ, ಇನ್ನೂ ಅವರು ಮಾತುಕತೆ ಮುಂದರಿಸಲು ಸಿದ್ಧರಿದ್ದಾರೆಂದು ಹಿಂದುಸ್ಥಾನ ಸರಕಾರಕ್ಕೆ ತಿಳಿಸಿದ್ದಾರಂತೆ.

ಪಂಡಿತ ಜವಾಹರಲಾಲರು ಈ ಹೈದರಾಬಾದ ಸಮಸ್ಯೆಯ ಬಗ್ಗೆ ಸುದ್ದಿಗಾರರ ಸಭೆಯಲ್ಲಿ ತಮ್ಮ ಹೇಳಿಕೆಯನ್ನು ಕೆಳಗಿನಂತೆ ಕೊಟ್ಟಿದ್ದಾರೆ.

"ನಾವು ನಿಜಾಮರಿಗೆ ಸೂಚಿಸಿದ ಒಪ್ಪಂದದ ನಿಯಮಗಳು ಉದಾರವಾಗಿದ್ದು ಅದಕ್ಕಿಂತ ಹೆಚ್ಚು ಔದಾರ್ಯವನ್ನು ತೋರಿಸುವುದು ಸಾಧ್ಯವಿಲ್ಲ, ಮತ್ತು ಈಗಿನ ನಿಯಮಗಳನ್ನು ಇಳಿಸುವುದೂ ಸಾಧ್ಯವಿಲ್ಲ."

"ಹಿಂದುಸ್ಥಾನ ಸರಕಾರವು ಈ ಮಧ್ಯಂತರದ ಅವಧಿಯಲ್ಲಿ ಆರ್ಥಿಕ ದಿಗ್ಬಂಧನವನ್ನು ಬಿಗಿಗೊಳಿಸಿ, ಆವಶ್ಯವೆನಿಸಿದ ಸಂರಕ್ಷಣೋಪಾಯವನ್ನು ಕೈಕೊಳ್ಳುವದು".

## ಈಗ ಹೆದರುವುದೇಕೆ?

ಹೈದರಾಬಾದವು ಹಿಂದುಸ್ಥಾನದಲ್ಲಿ ಸೇರ್ಪಡೆ ಹೊಂದಲು ಒಪ್ಪದಾಗಿದೆ, ಆಧುನಿಕ ಹಿಂದುಸ್ಥಾನದಲ್ಲಿ ಮಧ್ಯಯುಗದ ಏಕತಂತ್ರಾಧಿಕಾರದ ಹೈದರಾಬಾದವು ಇದೇ ಪರಿಸ್ಥಿತಿಯಲ್ಲಿ ಬಹು ದಿನ ಉಳಿಯಲಾರದು ಕೆಲವರು ಹೈದರಾಬಾದು ವಿಷಯದಲ್ಲಿ ಹಿಂದುಸ್ಥಾನ ಸರಕಾರವು ಮೆತ್ತನ್ನ ಧೋರಣ ವಹಿಸಿದೆ ಎಂದು ದೂರುವರು. ಆದರೆ ನಾವು ಮೆತ್ತನೆಯ ಧೋರಣೆಯನ್ನೂ ವಹಿಸಿಲ್ಲ, ಉಗ್ರಧೋರಣೆಯನ್ನೂ ವಹಿಸಿಲ್ಲ. ನಾವು ಹೈದರಾಬಾದು ಸಮಸ್ಯೆಯನ್ನು ಜಾಗರೂಕತೆಯಿಂದ ಆದರೂ ದೃಢ ನಿರ್ಧಾರದಿಂದ ಬಗೆಹರಿಸಹತ್ತಿರುವೆವು. ಮದ್ರಾಸಿನ ಜನರು ಹೈದರಾಬಾದಿನ ವಿಷಯದಲ್ಲಿ ಆಸ್ಥೆ ವಹಿಸಿದ್ದು ನೋಡಿ ನನಗೆ ಸಂತೋಷವಾಗಿದೆ. ಆದರೆ ಅವರಿಗೆ ಶಾಂತರಾಗಿರಲು ನಾನು ಸೂಚಿಸುತ್ತೇನೆ. ಬ್ರಿಟಿಶರ ಸೈನ್ಯವು ಕಾಂಗ್ರೆಸ್ ವಿರುದ್ಧವಿದ್ದಾಗ ಬೆದರದ ಜನರು ಈಗ ಹೆದರುವದೇಕೆ?

ಪಂ. ಜವಹರಲಾಲ್ ನೆಹರು.

## ಮಹದೇವಪುರ.

ಕಡ್ಡಾಯ ಶಿಕ್ಷಣದ ಪ್ರಚಾರವು 15ನೇ ದಿನಾಂಕ ಊರಲ್ಲಿ ಬಾಲಕರ ಮೆರವಣಿಗೆಯಿಂದ ನೆರವೇರಿತು. ಕೂಡ್ಲಿಗಿ ರೇಂಜು ವಿದ್ಯಾಧಿಕಾರಿಗಳು R. I. ರವರು ಹಾಜರಿದ್ದು ಸರ್ಕಾರದ ನೀತಿನಿಯಮಗಳನ್ನು ಸ್ಪಷ್ಟಪಡಿಸಿದರು.

*Please Note*

**Narasepalli Workshops**

BELLARY.

— UNDERTAKE —

**Turning, Electric Welding & Tempering**

OF

SPARE PARTS OF ALL KINDS.

**Reasonable Charges**

TRIAL SOLICITED.

Telegrams **OIL MILLS.** Telephone **57.**

## ನಿಮಗೆ ಗೊತ್ತೇ?

ಮದ್ರಾಸು ಪ್ರಾಂತದ ಒಟ್ಟು ವಿಸ್ತೀರ್ಣವು ಬಂಗನಪಳ್ಳಿ, ಪುದುಕೋಟ ಸಂಸ್ಥಾನಗಳೂ ಸೇರಿ 127,768 ಚದರ ಮೈಲುಗಳಷ್ಟಿದೆ. ಪ್ರಾಂತದಲ್ಲಿ ಒಟ್ಟು 420 ಪಟ್ಟಣಗಳೂ 36,000 ಗ್ರಾಮಗಳೂ ಇವೆ.

ಪ್ರಾಂತದ ಉತ್ತರ ಗಡಿಯಿಂದ ದಕ್ಷಿಣ ಗಡಿಯವರೆಗೆ ಇರುವ ದೂರ 900 ಮೈಲು. ಮದ್ರಾಸು ನಗರದಿಂದ ಪ್ರಾಂತದ ಉತ್ತರ ಗಡಿಯವರೆಗೆ ಅತ್ಯಧಿಕ ದೂರ 500 ಮೈಲು.

ಪ್ರಾಂತದ ಒಟ್ಟು ಜನಸಂಖ್ಯೆ 49,840,564. ಮದ್ರಾಸು ನಗರ ಮತ್ತು ಇತರ 25 ಜಿಲ್ಲೆಗಳ ಮುಖ್ಯ ಠಾಣ್ಯಗಳೂ ಸೇರಿ ಸುಮಾರು 50 ಮುಖ್ಯ ಪಟ್ಟಣಗಳಿವೆ. ಜನಸಂಖ್ಯೆ ಮದ್ರಾಸು ನಗರದಲ್ಲಿ ಸುಮಾರು 12 ಲಕ್ಷ, ಇತರ ಸಣ್ಣ ಪಟ್ಟಣಗಳಲ್ಲಿ ಸುಮಾರು 50,000 ಕ್ಕಿಂತ ಹೆಚ್ಚೇ ಇದೆ

1941ನೇ ಖಾನೇಸುಮಾರಿ ಲೆಕ್ಕ ಪ್ರಕಾರ 41,879,082 ಜನರು ಹಳ್ಳಿಗಳಲ್ಲಿಯೂ 7,961,482 ಮಂದಿ ಪಟ್ಟಣಗಳಲ್ಲಿ ವಾಸಿಸುತ್ತಾರೆ.

ಪ್ರಾಂತದಲ್ಲಿ ಒಟ್ಟು 37,239 ಎಲಿಮೆಂಟರಿ ಶಾಲೆಗಳಿವೆ. 3,456,445 ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಕಲಿಯುತ್ತಾರೆ. ಸೆಕಂಡರಿ ಶಾಲೆಗಳ ಸಂಖ್ಯೆ 901. ಈ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳು 441,425 ಮಂದಿ.

ಟೆಕ್ನಿಕಲ್ ಕಾಲೇಜುಗಳೂ ಸೇರಿ ಒಟ್ಟು 103 ಕಾಲೇಜುಗಳಿವೆ ಈ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿ

# ವನಸ್ಪತಿ ತುಪ್ಪ

ಟಿ. ಬಿ. ಕೇಶವರಾವ್, ಬಳ್ಳಾರಿ.

ದ್ವಿತೀಯ ಮಹಾಯುದ್ಧಾರಂಭಾನಂತರ ವನಸ್ಪತಿ ತುಪ್ಪಗಳ ಪ್ರಚಾರವು ಹೆಚ್ಚಾಗಿ ಪಟ್ಟಣಿಗರಷ್ಟೇ ಅಲ್ಲದೆ ಹಳ್ಳಿಯವರು ಕೂಡ "ಡಾಲ್ಡಾ" ಡಬ್ಬಿಗಳನ್ನು ಕೊಂಡೊಯ್ಯುತ್ತಾರೆ. ಹೋಟಲ್‌ಗಳಲ್ಲಿ ತಿಂಡಿ ತಿನಸುಗಳ ತಯಾರಿಗೆ ಇದನ್ನು ಅಧಿಕವಾಗಿ ಬಳಸುತ್ತಿರುವರು. ಇದನ್ನು ಆಹಾರ ಪದಾರ್ಥಗಳಿಗಾಗಿ ಆಹಾರದೊಡನೆ ಉಪಯೋಗಿಸುವದರಿಂದ ಆಹಾರ ಜೀರ್ಣಯಂತ್ರವು ಕೆಟ್ಟು ಯಕೃತ್ ವ್ಯಾಧಿ (Lever Diseases) ಅಜೀರ್ಣ ಸಂಬಂಧೀ ರೋಗಗಳು ಹೆಚ್ಚಿ ಮನುಷ್ಯನು ನಿರ್ವೀರ್ಯನಾಗುವನೆಂದು ಅನೇಕ ತಜ್ಞರು ಅಭಿಪ್ರಾಯ ಪಟ್ಟಿರುವರು. "…… ………ವನಸ್ಪತಿ ಎಂದರೆ ಹೂವು, ಕಾಯಿ, ಹಣ್ಣುಗಳನ್ನು ಕೊಡುವ ಲತೆಯಾದರೆ ಏನೂ ಅಡ್ಡಿ ಇಲ್ಲ. ಇವಲ್ಲದೆ ಬೇರೆ ಯಾವುದನ್ನಾದರೂ, ವಿಷವೆಂದೇ ತಿಳಿಯಿರಿ. ಅದು ತುಪ್ಪವು ಹೇಗಾಗಬಲ್ಲದು? ಅದೇ ನಿಜವಾದ, ಶುದ್ಧವಾದ ತುಪ್ಪವಾದರೆ ನಮಗೆ ಪ್ರಾಕೃತಿಕವಾದ ಸ್ವಚ್ಛ ತುಪ್ಪವೇಕೆ ಬೇಕು? "ಈ ವನಸ್ಪತಿಯಿಂದ ದೇಶದ ಪಶುಸಂಪತ್ತಿಯು ನಶಿಸುವುದು. ಇದು ದೇಶ ಕ್ಷೇಮಕ್ಕೆ ದೊಡ್ಡ ಹೊಡೆತ. ಇದನ್ನು ನಿವಾರಿಸಲು ಸರ್ಕಾರವು ಯತ್ನಿಸಬೇಕು. ಮುಖ್ಯವಾಗಿ ಸರ್ಕಾರವು ಈ ವನಸ್ಪತಿ ಉದ್ಯೋಗವನ್ನು ಪೂರ್ಣವಾಗಿ ಅಡಗಿಸಲು ಅಸಮರ್ಥವಾದರೆ ಅದರ ಪ್ರೋತ್ಸಾಹವನ್ನು ನಿಲ್ಲಿಸಬೇಕು. ವನಸ್ಪತಿ ಉತ್ಪತ್ತಿದಾರರಿಗೆ ಲೈಸನ್ಸ ಕೊಡದೆ ಇದರ ಅಧಿಕೋತ್ಪತ್ತಿಯನ್ನು ತಡೆಯಬೇಕು. ವನಸ್ಪತಿಯೆಂದು ಗುರುತಿಸಲು ಬಣ್ಣವನ್ನು ಹಾಕಬೇಕು. ಶೇಕಡ 10 ಭಾಗ ತಿಲತೈಲವನ್ನು ಮಿಶ್ರಮಾಡಿದಲ್ಲಿ ಅದು ವನಸ್ಪತಿಯೆಂದು ಎಲ್ಲರಿಗೂ ಅರ್ಥವಾದೀತು. ಆಗ ಇದು ತುಪ್ಪವೆಂದು ವರ್ತಕರಿಗೂ ಕೂಡ ಮೋಸ ಮಾಡಲಾಗುವುದಿಲ್ಲ. ಈ ವನಸ್ಪತಿಯನ್ನು ಕುರಿತು ಎಂಥ ಪ್ರಕಟನೆಗಳೂ ಇರಬಾರದು. ವನಸ್ಪತಿ ಉತ್ಪತ್ತಿ ಗಷ್ಟೇ ಅಲ್ಲದೆ, ಅದರಿಂದ ಆಹಾರ ಪದಾರ್ಥಗಳನ್ನು ಕೂಡ ತಯಾರಿಸದಿರಲು ಶಾಸನದಿಂದ ಪ್ರತಿಬಂಧಿತವಾಗಬೇಕು. "ತುಪ್ಪ" ವೆಂಬ ಹೆಸರಿನಿಂದ ಅದು ಬಾಜಾರದಲ್ಲಿಯೇ ಬರಬಾರದು. ಹೀಗೆ ಬಹು ಜನರು ಮೋಸ ಹೋಗದಂತೆ, ಕಟ್ಟುನಿಟ್ಟುಮಾಡಿದಾಗಲೇ ನಾವು ಇದರ ಉತ್ಪನ್ನವನ್ನು ತಡೆಯಬಹುದು. ಖೋಟಾ ನಾಣ್ಯಗಳ ನಿರ್ಮಾತರನ್ನು ಸರ್ಕಾರವು ಶಿಕ್ಷಿಸುವುದು. ಹಾಗೆಯೇ ಶುದ್ಧ ತುಪ್ಪದ ಬದಲು ಖೋಟಾ ತುಪ್ಪದ ಉತ್ಪಾದಕರನ್ನೇಕೆ ಶಿಕ್ಷಿಸಬಾರದು?" ಎಂದು ಮಹಾತ್ಮ ಗಾಂಧಿಯವರು ಹೀಗೆ ಅಭಿಪ್ರಾಯ ಪಟ್ಟು ತಮ್ಮ ಪ್ರತಿಭಾಯುಕ್ತ ಪ್ರಚಾರವನ್ನಾರಂಭಿಸಿದಾಗಲೇ ಇಂಡಿಯಾ ಸರ್ಕಾರವು ಕಣ್ದೆರೆದು ಆಗ ಆಹಾರ ಶಾಖೆಯ ಮಂತ್ರಿಗಳಾಗಿದ್ದ ಡಾಕ್ಟರ್ ರಾಜೇಂದ್ರ ಪ್ರಸಾದರು ವನಸ್ಪತಿ ಡಾಲ್ಡಾಗಳ ಉಪಯೋಗವನ್ನು ಕಾಯ್ದೆಯ ಮೂಲಕ ನಿರ್ಬಂಧಿಸಿದರು.

ಆದರೆ ಅದೇಕೋ ಕೆಲ ತಿಂಗಳೊಳಗಾಗಿ ಸರ್ಕಾರದವರು ತಮ್ಮ ನಿರ್ಬಂಧಕಾಜ್ಞೆಯನ್ನು ಹಿಂದೆಗೆದುಕೊಂಡರು. ವನಸ್ಪತಿ ಗಿರಣಿಗಳ ಮಾಲೀಕರೆಲ್ಲಾ ದಿಲ್ಲಿಗೆ ಧಾವಿಸಿ, ತಜ್ಞರ ಸಹಾಯದಿಂದ ಅದು ವಿಷವಲ್ಲವೆಂದು ಸ್ಪಷ್ಟಪಡಿಸಿದರೆಂದೂ, ವನಸ್ಪತಿಯಲ್ಲಿ ಇಂತಿಷ್ಟು ಭಾಗ ಆಹಾರಾಂಶಗಳಿರಬೇಕೆಂಬ ತತ್ವವನ್ನು ಮಾನ್ಯಮಾಡಿ ಹಾಗೆ ತಯಾರಿಸಲು ಒಪ್ಪಿಕೊಂಡರೆಂದೂ ತಿಳಿದು ಬಂದಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯು ಜನತೆಗೆ ತಿಳಿದಿಲ್ಲ. ಹಿಂದೆ ತಯಾರಿಸುತ್ತಿದ್ದ ವನಸ್ಪತಿಗೂ ಈಗಿನದಕ್ಕೂ ಏನೂ ವ್ಯತ್ಯಾಸವು ಕಂಡು ಬರುತ್ತಿಲ್ಲ. ಅಲ್ಲದೆ ನಿರ್ಬಂಧ ಕಾಲದಲ್ಲಿ ಸಂಗ್ರಹದಲ್ಲಿದ್ದ (ಮಾರದೆ ಇದ್ದ) ಡಾಲ್ಡಾ ವನಸ್ಪತಿ ಡಬ್ಬಿಗಳನ್ನೆಲ್ಲ ಮತ್ತೆ ಮಾರಿದರು.

ಈ ಲೇಖನದಲ್ಲಿ ಇದರ ಸಂಬಂಧವಾದ ಅಂಶಗಳನ್ನು ಚರ್ಚಿಸಿ ಸುಪ್ರಸಿದ್ಧ ವೈದ್ಯರ ಅಭಿಪ್ರಾಯಗಳನ್ನು ಉಲ್ಲೇಖಿಸುವುದು ಅಪ್ರಸ್ತುತವಾಗಲಾರದು.

## ಉತ್ಪತ್ತಿ

ವನಸ್ಪತಿ ಡಾಲ್ಡಾ ವಗೈರೆ ಕೃತ್ರಿಮ ತುಪ್ಪವು ಸಾಧಾರಣವಾಗಿ ನೆಲಗಡಲೆ ಎಣ್ಣೆ ಹತ್ತೀಕಾಳೆಣ್ಣೆಗಳಿಂದ ಸಿದ್ಧವಾಗುತ್ತದೆ. ಆಧುನಿಕ ಯಂತ್ರಗಳಿಂದ ಚನ್ನಾಗಿ ಕಾಯಿಸಲ್ಪಟ್ಟು, ಪ್ರತ್ಯೇಕಿಸಲ್ಪಡುವ ಕಾರಣ ಬಣ್ಣ,

ರುಚಿ, ವಾಸನೆಗಳಿಲ್ಲದಂತಾಗುತ್ತೆ. ಹೈಡ್ರೊಜನೇಶನ್ ಎಂಬ ರಸಾಯನ ಕ್ರಿಯೆಯಿಂದ (Hydrogenation) ಈ ಎಣ್ಣೆಯು ಗಡ್ಡೆ ಕಟ್ಟುತ್ತದೆ. ಈ ಕ್ರಿಯೆಯಲ್ಲಿ ನಿಕಲ್ ಲೋಹವನ್ನು ಸಹಾಯಕಾರಿಯಾಗಿ ಬಳಸುತ್ತಾರೆ. ಇದು ನೋಡಲಿಕ್ಕೆ ತುಪ್ಪದಂತಿರುವದಾದರೂ, ತುಪ್ಪದ ರುಚಿ, ಸುವಾಸನೆಗಳನ್ನುಂಟಾಗಿರುವದಿಲ್ಲ. ತುಪ್ಪಕ್ಕಿರುವಂತೆ ಸಹಜವಾದ ಪುಷ್ಟ್ಯಾಣುಗಳು (Vitamins) ಇದರಲ್ಲಿಲ್ಲವಾದ ಕಾರಣ ಮತ್ತೊಂದು ರಸಾಯನ ಕ್ರಿಯೆಯು ನಡೆಯುತ್ತದೆ ಅದೇನೆಂದರೆ ಕಾಡ್, ಷಾರ್ಕ್, ಹಾಲಿಬಟ್ ವಗೈರೆ ಮೀನುಗಳಿಂದ ತೆಗೆದ ಸತ್ವ ಪದಾರ್ಥಗಳ ಅತ್ಯಧಿಕ ಭಾಗವನ್ನು ಗಟ್ಟಿ ಮಾಡಿದ ಅಲ್ಪಾಂಶದಿಂದ ಬೆರೆಸುವರು (In a concentrated form) 1937ರಲ್ಲಿ ಈ ಕೊಬ್ಬು ಪದಾರ್ಥವು ನಮ್ಮ ದೇಶದಲ್ಲಿ 26000 ಟನ್ನುಗಳಷ್ಟು ಉತ್ಪತ್ತಿಯಾಗಿ ಏಳು ವರ್ಷಗಳಲ್ಲಿ ಐದರಷ್ಟು ಅಂದರೆ 13700 ಟನ್ನುಗಳಿಗೆ ಏರಿತು. ಇವರಲ್ಲಿ ಶುದ್ಧವಾದ ಕೊಬ್ಬು ಶೇಕಡ 40 ರಷ್ಟಿರುವುದು. ಕೆಲ ಉತ್ಪತ್ತಿದಾರರು ಇವಕ್ಕೆ ತುಪ್ಪದ ವಾಸನೆ ಬರಲೆಂದು ಕೆಲ ಎಸೆನ್ಸುಗಳನ್ನು ಮಿಶ್ರಮಾಡುವರು ಇದನ್ನೇ ಡಬ್ಬಿಗಳಲ್ಲೂ, ಡಬ್ಬಾಗಳಲ್ಲೂ ಹಾಕಿ, ವನಸ್ಪತಿ ತುಪ್ಪ (Vegetable Ghee ಎಂಬ ಹೆಸರಿನಿಂದ ಬಾಜಾರದಲ್ಲಿ ಮಾರಲಿಕ್ಕಿಡುವರು.

**ಉಪಯೋಗ:— ಪರಿಶೋಧಕರ ಅಭಿಪ್ರಾಯ.**

ಇದರಲ್ಲಡಗಿರುವ ಆಹಾರ ವಸ್ತುಗಳ ಬೆಲೆಯನ್ನು ಕುರಿತು ಉತ್ಪತ್ತಿದಾರರ, ಉಪಯೋಗಿಸುವವರ ಮತ್ತು ಆಹಾರ ಶಾಸ್ತ್ರಜ್ಞರ ಅಭಿಪ್ರಾಯಗಳು ಭಿನ್ನವಾಗಿವೆ.

ಅಮೆರಿಕಾದ ಹಾಟ್ ಸ್ಪ್ರಿಂಗ್ಸ ನಗರದಲ್ಲಿ "ಆಹಾರ **ಪುಷ್ಟ್ಯಾಂಶಗಳ ಬೆಳವಣಿಗೆ**"ಯ ವಿಷಯಕ್ಕೆ ಮಹಾ ಸಭೆಯು ಕೂಡಿದಾಗ ಕಾಲ್ಶಿಯಂ, ಪೊಟಾಶಿಯಂ ಮತ್ತು ಫೆರ್ರಂ ಲೋಹ ವಸ್ತುಗಳು ವನಸ್ಪತಿಯಲ್ಲಿ ಪರಿಶುದ್ಧವಾದ ಎಣ್ಣೆಗಿಂತಲೂ ಕಡಮೆ ಪ್ರಮಾಣದಲ್ಲಿರುವವೆಂದೂ, ಪುಷ್ಟ್ಯಾಣುಗಳನ್ನು (Vitamins) ಎಷ್ಟೇ ಅಂಶದಲ್ಲಿ ಬೆರೆಸಿದರೂ, ಅದು ಆರೋಗ್ಯ ಭಂಗಕರವೆಂದೂ ಒಬ್ಬ ಸುಪ್ರಸಿದ್ಧ ವೈದ್ಯರು ಅಭಿಪ್ರಾಯ ಪಟ್ಟರು.

ಕೂನೂರು ನ್ಯೂಟ್ರಿಷನ್ ರೀಸರ್ಚ ಇನ್ಸ್ಟಿಟ್ಯೂಟದ ಡಾಯರೆಕ್ಟರ್ ಆದ ಡಾಕ್ಟರ್ ವಿ. ಯನ್. ಪಟ್ವರ್ಧನರವರು ಕಳೆದ ವರ್ಷ ಸಮಾವೇಶವಾದ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನಲ್ಲಿ ಮಾತಾಡುತ್ತ ವನಸ್ಪತಿಯನ್ನು ಕುರಿತು ಪರಿಶೋಧನೆಗಳು ಇಲಿ, ಕುಂಟಿಲಿ ಮುಂತಾದ ಪ್ರಾಣಿಗಳ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡಿರುವವೆಂದೂ, ಅವುಗಳ ಮರ್ಮಾವಯವಗಳ ಬೆಳವಣಿಗೆಯು ತಗ್ಗಿ ಸಂತಾನೋತ್ಪತ್ತಿ ಶಕ್ತಿಯೇ ನಶಿಸಿತೆಂದೂ ತಿಳಿಸಿದರು. ಮತ್ತೊಂದು ಪರಿಶೋಧನಾ ಸಂಸ್ಥೆಯವರು ಇಲಿಗಳ ಸಂತತಿಯ ಮೇಲೆ (ವನಸ್ಪತಿಯ ಉಪಯೋಗದಿಂದ) ಕೆಟ್ಟ ಪರಿಣಾಮವಾದುದನ್ನು ತಿಳಿಸಿದರು

"Chemistry of food and nutrition" ಎಂಬ ಗ್ರಂಥಕಾರರಾದ ಶೆರ್ಮನ್‌ರವರು ಆಸಿಡ್‌ಗಳ ವಿಷಯ ಚರ್ಚಿಸುತ್ತಾ ಯಾವ ಆಹಾರ ಪದಾರ್ಥದಲ್ಲಾಗಲಿ ಸಹಜ ಸ್ಥಿತಿಯಲ್ಲಿರುವ ವಿವಿಧ ರಸಗಳಿಂದಲೇ ಅದಕ್ಕೆ ಬೆಲೆಯುಂಟು ಕೃತ್ರಿಮ ರೂಪದಿಂದ ಬೆರೆಸಿದ ವಸ್ತುಗಳ ಸೇವನೆಯಿಂದ ಆಹಾರ ಜೀರ್ಣವಾಗುವದೇ ಕಷ್ಟವಾಗುವದೆಂದೂ ಇದರಿಂದ ಆರೋಗ್ಯಹಾನಿಯಾಗುವದೆಂದೂ ಉಲ್ಲೇಖಿಸಿರುವರು. ವನಸ್ಪತಿಯ ತುಪ್ಪದಲ್ಲಿ ಕೊಬ್ಬಿನ ಮಿಶ್ರಣವಾಗಿರುವದರಿಂದ ಅದು ಜೀರ್ಣವಾಗುವುದು ಕಷ್ಟ. ಇಷ್ಟರ ಮೇಲೆ ನಿಕಲ್‌ಲೋಹದ ಸೂಕ್ಷ್ಮ ಕಣಗಳು ಇದರಲ್ಲಿ ಬೆರೆಸಲ್ಪಟ್ಟು ಹೆಪ್ಪುಗಟ್ಟಿಸಲಾಗಿರುವದರಿಂದ ಸಕ್ರಮವಾಗಿ ಜೀರ್ಣಕೋಶವು ಕೆಟ್ಟು ಅನೇಕ ರೋಗಾದಿಗಳಿಗೆ ಕಾರಣವಾಗುತ್ತದೆ.

**ಇದು ಲಾಭಬಡಕರ ಉದ್ಯಮ.**

ಹೇರಳ ಧನ ಸಂಗ್ರಹವಿರುವ ಸಾಹುಕಾರರು ಇಲ್ಲವೇ ಶೇರುದಾರರ ಸಂಸ್ಥೆಯು ಯಂತ್ರವನ್ನು ಸ್ಥಾಪಿಸಿ, ಪೌಂಡಿಗೆ 7-8 ಆಣೆಗಳಂತೆ ಸುಲಭದರದಲ್ಲಿ ಎಣ್ಣೆಯನ್ನು ಕೊಂಡು ರಸಾಯನ ಕ್ರಿಯೆಗಳಿಂದ ಕಪ್ಪಿದ್ದನ್ನು ಬಿಳುಪುಮಾಡಿ, ಆಕರ್ಷಣೀಯವಾದ ಡಬ್ಬಿಗಳಲ್ಲಿ ತುಂಬಿ ಪೌಂಡಿಗೆ 1--[illegible]—0 ಯಂತೆ ಮಾರಿಸುತ್ತಾರೆ. ಇದರಿಂದ ಲಾಭವಾಗುವದು ಯಂತ್ರ ಸ್ಥಾಪಿಸಿದ ಮಾಲಿಕರಿಗೆ. ಅಥವಾ ಶೇರುದಾರರಿಗೆ ಆದರೆ ಇದರಿಂದ ದೇಶದ ಆರೋಗ್ಯವೇ ಕೆಟ್ಟು ಹೋಗುವುದು.

**ಶುದ್ಧ ತುಪ್ಪವನ್ನೇ ಪ್ರೋತ್ಸಾಹಿಸಿರಿ**

ಪ್ರಾಚೀನ ಭಾರತದ ಗೃಹೋದ್ಯೋಗಗಳಲ್ಲಿ

ತುಪ್ಪದ ಉತ್ಪನ್ನವು ಮುಖ್ಯವಾದುದಿತ್ತು. ಆದರೆ ಹಾಲು ಕೊಡುವ ದನಗಳೂ ಸಾಯುತ್ತ ಏಳುತ್ತ ಸರಾಸರಿ ಒಂದು ಪಾವು ಹಾಲು ಕೂಡ ಹೊತ್ತಿಗೆ ಕೊಡುವುದು ಕಷ್ಟತರವಾಗಿದೆ. ಭಾರತೀಯರು ಕ್ಷೀರಗೃಹಗಳನ್ನು (Diary forms) ಪ್ರೋತ್ಸಾಹಿಸುವಂತೆಯೇ ಇಲ್ಲಿ ಗೋರಕ್ಷಣೆಯ ವಿಷಯವಾಗಿ ಬರೆಯುತ್ತಾ "ತುಪ್ಪದಂಥ ಅಮೃತ ಸಮಾನ ಉತ್ಪನ್ನದ ಗೃಹೋದ್ಯೋಗವು ಕ್ಷೀಣಿಸುವಂತೆ ಮಾಡುವುದು, ಭಾರತದಂಥ ದೇಶಕ್ಕೆ ಶ್ರೇಯಸ್ಕರವಲ್ಲ" ಎಂಬುದಾಗಿ ಮಹಾತ್ಮ ಗಾಂಧಿಯವರು ಹೇಳಿರುವರು. ಭಾರತದಲ್ಲಿ ವರ್ಷಕ್ಕೆ 30 ಲಕ್ಷ ಮಣ ತುಪ್ಪ ಉತ್ಪನ್ನವಾಗುವುದು. ಇದರ ಬೆಲೆ 100 ಕೋಟಿ ರೂಪಾಯಿಗಳಿಗಿಂದಲೂ ಹೆಚ್ಚು. ತುಪ್ಪವನ್ನುಪಯೋಗಿಸುವವರು ಶೇಕಡ 5 ಮಂದಿ ಕೂಡ ದೊರೆಯುವುದು ಕಷ್ಟ. ಅಮೇರಿಕಾ ದೇಶದಲ್ಲಿ ಕೂಡ ಗೋಧನದ ಮಹತ್ವವನ್ನರಿತು ಗೋಪೋಷಣೆಗೆ ಅಮಿತವಾಗಿ ವ್ಯಯಮಾಡುತ್ತಿರುವರು.

ಶುದ್ಧ ತುಪ್ಪದಿಂದಾಗುವ ಲಾಭಗಳು ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ವಿಪುಲವಾಗಿ ವರ್ಣಿತವಾಗಿವೆ.

'ಶಸ್ತಂ ಧೀಸ್ಮೃತಿ ಮೇಧಾಗ್ನಿ ಬಲಾಯು ಶುಕ್ರಚಕ್ಷುಷಾಂ - ಬಾಲವೃದ್ಧ ಪ್ರಜಾ ಕಾಂತಿ ಸೌಕುಮಾರ್ಯ ಸ್ವರಾರ್ಥಿನಾಂ ಕ್ಷತಕ್ಷೀಣ ಪರಿಸರ್ಪ ಶಸ್ತ್ರಾಗ್ನಿಗ್ಲಪಿತಾತ್ಮನಾಂ ವಾತಪಿತ್ತ ವಿಷೋನ್ಮಾದ ಶೋಷಾಲಕ್ಷ್ಮೀ ಜ್ವರಾಪಹಂ ಸ್ನೇಹಾನಾ ಮುತ್ತಮಂ ಶೀತಂ ವಯಸಃ ಸ್ಥಾಪನಂ ಘೃತಂ ಸಹಸ್ರವೀರ್ಯಂ ವಿಧಿಭಿರ್ಘೃತಂ ಕರ್ಮ ಸಹಸ್ರಕೃತ್' (ಅ. ಹೃ. ಸೂ. ಅ 5-27)

ಬುದ್ಧಿ ಬಲ ಜ್ಞಾಪಕಶಕ್ತಿ ಮತ್ತು ಧಾರಣಾಶಕ್ತಿಗಳನ್ನು ಪ್ರಸಾದಿಸುವುದು. ಜಠರಾಗ್ನಿಯನ್ನು ವೃದ್ಧಿಗೊಳಿಸುವುದು. ಬಲ, ಆಯು, ಶುಕ್ರಗಳನ್ನು ಅಭಿವೃದ್ಧಿಗೊಳಿಸಿ ನೇತ್ರಕ್ಕೆ ಹಿತಮಾಡುವುದು. ಆಬಾಲವೃದ್ಧರಿಗೆ ಒಳ್ಳೆಯದು. ಸಂತಾನ, ಕಾಂತಿ, ಸೌಕುಮಾರ್ಯ, ಸುಕಂಠಗಳನ್ನು ಪ್ರದಾನ ಮಾಡುವುದು. ಗಾಯಗೊಂಡವರಿಗೆ, ಧಾತು ನಷ್ಟವಾದವರಿಗೆ, ವಿಸರ್ಪ ರೋಗಿಗಳಿಗೆ ಶಸ್ತ್ರವಿದ್ದಂತೆ ಬೆಂಕಿಯಿಂದ ಪೀಡಿತರಾದವರಿಗೆ ರಾಮಬಾಣ. ವಾತ, ಪಿತ್ತ, ವಿಷ, ಉನ್ಮಾದ, ಶೋಷ, ದಾರಿದ್ರ್ಯ, ಜ್ವರಗಳನ್ನು ಹೋಗಲಾಡಿಸುತ್ತದೆ. ಕೊಬ್ಬಿರುವ ಆಹಾರ ವಸ್ತುಗಳಲ್ಲೆಲ್ಲಾ ಇದು ಶ್ರೇಷ್ಠವಾದುದು. ಶೀತವೀರ್ಯ ವಿಶಿಷ್ಟವಾದುದು. ವೃದ್ಧಾಪ್ಯವು ಶೀಘ್ರವಾಗಿ ಬರದಂತೆ ಶರೀರವನ್ನು ಕಾಪಾಡುವುದು. ಸಾವಿರಾರು ವಿಧಗಳಿಂದ ಇದರ ಉಪಯೋಗವುಂಟು. ಇದು ಮಾಡದ ಕೆಲಸವಿಲ್ಲ.

ಈ ಕಾರಣ ಸರ್ವರು ಶುದ್ಧ ತುಪ್ಪವನ್ನೇ ಉಪಯೋಗಿಸಿ ಆರೋಗ್ಯ ಹಾನಿಗೆ ಕಾರಣವಾದ ವನಸ್ಪತಿ ಡಾಲ್ಡಾಗಳನ್ನು ತ್ಯಜಿಸಬೇಕು. ತುಪ್ಪವು ದೊರೆಯದಿದ್ದಲ್ಲಿ ಶುದ್ಧ ಎಣ್ಣೆಯನ್ನಾದರೂ ಉಪಯೋಗಿಸಬಹುದು.

## ಭಾಷಾವಾರ ಪ್ರಾಂತಗಳ ಪ್ರಶ್ನೆ

ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಕಾಂಗ್ರೆಸು ಅಂಗೀಕರಿಸಿದೆ. ಆದರೆ ಅನೇಕ ಮಹತ್ವದ ಸಮಸ್ಯೆಗಳನ್ನು ಕೂಡಲೇ ಬಿಡಿಸುವ ಪ್ರಸಂಗ ಬಿದ್ದ ಈ ಕಾಲದಲ್ಲಿ ಭಾಷಾವಾರ ಪ್ರಾಂತ ರಚನೆ ಪ್ರಶ್ನೆಯನ್ನು ಕೂಡಲೇ ಬಿಡಿಸಲು ಆಗ್ರಹ ತೊಡುವದು ಸರಿಯಲ್ಲ. ಹಿಂದುಸ್ಥಾನದ ಒಕ್ಕಟ್ಟಿಗೆ ಭಂಗತರುವ ಈ ಬೇರೆ ಯಾವ ಮನೋವೃತ್ತಿಗೆ ಅಗ್ರಸ್ಥಾನ ಕೊಡುವದು ಸರಿಯಲ್ಲ. ಈಗ ಹಿಂದುಸ್ಥಾನದ ಒಕ್ಕಟ್ಟು ಕಾಯ್ದುಕೊಳ್ಳುವದು ಅಗತ್ಯವಿದೆ. ಹಿಂದುಸ್ತಾನದ ಒಕ್ಕಟ್ಟಿಗೆ ವಿಘಾತವಾದ ಮನೋವೃತ್ತಿಗೆ ನಾವು ಈಗ ಪ್ರಾಶಸ್ತ್ಯ ಕೊಡುವದು ಗಂಡಾಂತರದ್ದೆಂದು ನನ್ನ ಅಭಿಪ್ರಾಯ.

ಪಂ. ಜವಹರಲಾಲ್ ನೆಹರು.

## ಸರಕಾರಿ ನೌಕರರಿಗೆ ತುಪಾಕಿಗಳ ಉಪಯೋಗ.

ಸರಕಾರದ ಗೆಜೆಟೆಡ್ ಆಫೀಸರಂತೆ ನಾನ್-ಗೆಜೆಟೆಡ್ ಆಫೀಸರಿಗೆ ಸಹ ಕೋವಿ, ತುಪಾಕಿ ಮುಂತಾದ ಆಯುಧಗಳನ್ನು ಉಪಯೋಗಿಸುವುದಲ್ಲಿ ತರಬೇತಿ ಕೊಡಬೇಕೆಂದು ಸರಕಾರವು ಅಪ್ಪಣೆ ಕೊಟ್ಟಿದೆ. ಮದ್ರಾಸ್ ನಗರದಲ್ಲಿ ಪೋಲೀಸ್ ಕಮಿಷನರೂ ಇತರ ಕಡೆಗಳಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರರೂ ಆಯಾಯ ಸ್ಥಳದ ಈಗಿನ ಸ್ಥಿತಿಗತಿಗಳನ್ನು ಆಲೋಚಿಸಿ ತರಬೇತಿಗೆ ಯೋಗ್ಯರಾದ ಆಫೀಸರರನ್ನು ಆರಿಸಬೇಕಾಗಿದೆ.

## The Rayalaseema Bank Ltd., H. O. Bellary

)0(

ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—

ಮುಖ್ಯ ಕಾರ್ಯಾಲಯ— ಬಳ್ಳಾರಿ.

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತ

| | | | |
|---|---|---|---|
| 3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ | | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ | ,, | ರೂ. 3½% | ,, |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ | ,, | ರೂ. 4% | ,, |

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಗೆ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ. ಕೊಂಡು ಮೂರು ವರ್ಷಗಳನಂತರ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು

ಬಿ ವಿ. ಶೇಷಗಿರಿರಾವ್, ಬಿ.
ಕಾರ್ಯದರ್ಶಿ.


---


## NAVA BHARAT BELLARY.

Reg.NoM. 47

**ನವ ಭಾರತ ಬಳ್ಳಾರಿ.**

**(Nationalist Weekly)**

| ಚಂದಾದರಗಳು. | Subscription Rates. |
|---|---|
| ವರ್ಷಕ್ಕೆ 5—0—0 | One Year 5—0—0 |
| 6 ತಿಂಗಳಿಗೆ 3—0—0 | Six months 3—0—0 |
| ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ | Subscription will not be accepted for less than 6 months. |

To
Sri............................................

............................................

............................................

Printed at Vittal Press, Edited & Published by T, B, Keshava Rao.

సంపుటి 6 ॥

నవయుగము

౧౯౪౮

సంచిక సంఖ్య 15-8-48

సంఖ్యలు ౨౧౦ లో ౪౮

సంఖ్య 45 వద్ద

పుటలు 1ంచి 188

ಸ್ವಾತಂತ್ರ್ಯ ದಿನೋತ್ಸವ—ವಿಶೇಷ ಸಂಚಿಕೆ

# ನವಭಾರತ

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

0-4-0

ವರ್ಷ ೧೧
ಸಂಚಿಕೆ ೨೯

೧೫ ಆಗಸ್ಟು ೧೯೪೮.

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್,

## ಸ್ವಾತಂತ್ರ್ಯೋತ್ಸವದ ಮುಡಿಪು.

---

ಕಾಲವನ ಕೈಯಿಂದ ಕಾಲನನು ಗೆದ್ದ ಭಾರತಿಯೆ. ಸುಸ್ವಾಗತವು
ಕಲೆ ಕಲಿ ಕವಿಗಳ ಒನಪೆ ಸಂಸ್ಕೃತಿಯ ನಿಲಯವೆ ಸುಸ್ವಾಗತವು
ನವಸೃಷ್ಟಿಯ ಶಿಲ್ಪಿಗಳೆನಿಸಿ ಖ್ಯಾತಿಗಳಿಸಿದ ಶಿಲ್ಪಿಯೆ
ಸುಸ್ವಾಗತವು
ಮಾನವ ಶಾಂತಿ ಜಗದ ಪ್ರಗತಿ ಕೋರುವ ಮಾತೆಯೆ
ಸುಸ್ವಾಗತವು

ಸ್ವಾತಂತ್ರ್ಯದ ಉಡುಗೆಯಲಿ ಸ್ವರ್ಣಲತೆ ಯಂದದಲಿ
ಶಾಂತಿ ಸುಖ ಸೌಭಾಗ್ಯ ಸಂದೇಶವಾಸೀಯುತಲಿ
ಸಂತಸದಿ ಸನಾತನ ಶ್ರೀದೇವಿ ಸ್ವರ್ಣ ವಸನದಲಿ
ಶಾಂತಿಯುಂ ನೀಡುತಲಿ ಕಳೆಗಳನು ಬೀರುತಲಿ

ಜಾತಿ ಮತ ಪಂಥಗಳ ಭೇದ ಭಾವಗಳಳಿದು
ನೀತಿ ನ್ಯಾಯಗಳ ಸತ್ಯ ಸಾಮ್ಯತೆಯು ತಳೆದು
ಖ್ಯಾತಿ ಪಡೆದ ಪೂರ್ವಪ್ರಸಿದ್ಧ ಚರಿತೆಯ ನೆನೆದು
ಭವ್ಯ ಭವಿಷ್ಯ ವರ್ತಮಾನ ಸಂಕ್ರಾಂತಿಯಲಿ ನಲಿದು

ಸ್ವಾತಂತ್ರ್ಯವೆನ್ನುವದು ಸವಿಯಾದ ಸಿಹಿಫಲವನ್ನು ಕೊಡುವಲ್ಲಿ
ಮರಣವಹ ಮುನ್ನನೆಗಳು ಬೇರೂರಿ ಬೆಳೆವುದಕೆ ಮೊದಲೆಯಲ್ಲಿ
ವೀರರಾರಕ್ತದಲಿ ಶೂರರ ಶಕ್ತಿಯಲಿ ತ್ಯಾಗಿಗಳ ತ್ಯಾಗದಲಿ
ಏಕತೆಯ ಭೂಮಿಯಲಿ ಬೇರೂರಿ ರಕ್ತದಿಂ ವೃದ್ಧಿಹೊಂದುವ
ಕಲ್ಪವೃಕ್ಷ

(ಕೊ. ದಾಸರೆಡ್ಡಿ).



## ನಮ್ಮ ಧ್ವಜ.

ನಸುನಗೆಯಾ ಮೊಗದಿಂದ
ಹೊಸತರದ ಬಾಳಿನಿಂದ
ಶಶಿಸೂರ್ಯರ್ ತಾರೆಗಳಾ
ಗಗನದಲಿ ಮೆರೆವವರೆಗೆ ಹಾರ್ ಸ್ವಾತಂತ್ರ್ಯಧ್ವಜವೆ ನೀಹಾರ್....

# NAVA BHARAT

# AUGUST 15.

## A Message For Freedom's First Anniversary.

"There will be no complete Freedom as long as there is starvation, hunger lack of clothing, lack of the necessaries of life and lack of the opportunity of growth for every single human being, man, woman and child in the country" JAWAHARLAL NEHRU.

In these words of our great Prime Minister our duty to our country is clearly outlined. Poverty and ignorance, hunger and want must be banished from our country. We can help in achieving this by saving all we can and banking it so that through the banks our savings are made available for trade and industry and for urgent tasks of National Reconstruction. Let one of your resolves for Freedom's Anniversary Day be to open Savings Bank Accounts in your name and for members of your family and to begin to save steadily. Our 84 branches are at your service. Call at the nearest branch where our officers will be of every assistance to you.

### LIST OF OFFICES

| | | | |
|---|---|---|---|
| Bombay | Hiriadka | Bezwada | Bellary |
| Kumta | Kemmanu | Mysore | Cuddapah |
| Sirsi | Kotcshwar | Tumkur | Anantapur |
| Ratnagiri | Manjeshwar | Arsikere | Kurnool |
| Dharwar | Nitte | Cochin | Guntur |
| Gadag | Panemangalore | Barkur | Bangalore City |
| Sholapur | Puttur | Byndoor | Shimoga |
| Udipi | Ullal | Gurpur | Chikmagalore |
| Coondapur | Karwar | Hungarcutta | Alleppey |
| Kasargod | Honnavar | Kumbla | Basrur |
| Taliparamba | Vengurla | Moodabidri | Farangipet |
| Hospet | Belgaum | Saligram | Hebri |
| Proddatur | Hubli | Ankola | Kaup |
| Hindupur | Bijapur | Bhatkal | Kokkarne |
| Nandyal | Madras | Malvan | Malpe |
| Coimbatore | Udipi, Car Street | Nipani | Mulki |
| Sagar | Brahamavar | Byadgi | Palimar |
| Davangere | Kanhangad | Bagalkot | Perdoor |
| Secunderabad | Cannanore | Mangalore | Shankernarayana |
| Bailur | Adoni | Kadekar | |
| Beltangadi | Jammalamadugu | Karkala | |
| Gangulli | Tadpatri | Payyanur | |

## The Canara Industrial & Banking Syndicate, Limited.,

ESTD : 1925

HEAD OFFICE - U D I P I, S. INDIA.

---

## ಆಗಸ್ಟ್ 15

### ಸ್ವಾತಂತ್ರ್ಯೋತ್ಸವದ ಪ್ರಥಮ ವಾರ್ಷಿಕ ಸಂದೇಶ.

"ಉಪವಾಸ, ಹಸಿವು, ವಸ್ತ್ರ ಹೀನತೆ ಮತ್ತು ಜೀವನಕ್ಕಗತ್ಯವಾದ ವಸ್ತುಗಳ ಕೊರತೆಯಿದ್ದು ಭಾರತದ ಪ್ರತಿಯೊಂದು ವ್ಯಕ್ತಿ ಅಂದರೆ ಸ್ತ್ರೀ ಪುರುಷ ಮಕ್ಕಳಿಗೆ ಪ್ರಗತಿ ಮಾರ್ಗಗಳು ಕುಂಠಿತವಾಗಿರುವವರೆಗೂ ನಮಗೆ ಸಂಪೂರ್ಣ ಸ್ವಾತಂತ್ರ್ಯವು ಲಭಿಸಿಲ್ಲವೆಂದೇ ಭಾವಿಸಬೇಕು ...... "

(ಜವಾಹರಲಾಲ ನೆಹರು.)

ನಮ್ಮ ಶ್ರೇಷ್ಠ ಪ್ರಧಾನ ಮಂತ್ರಿಗಳ ಈ ಮಾತುಗಳಿಂದ ನಮ್ಮ ಕರ್ತವ್ಯವು ಸ್ಪಷ್ಟವಾಗಿ ಸೂಚಿತವಾಗಿದೆ. ಅಜ್ಞಾನ ದಾರಿದ್ರ್ಯ, ಹಸಿವು ಮತ್ತು ಇತರ ಕೊರತೆಗಳು ನಮ್ಮ ದೇಶದಿಂದ ನಿರ್ಮೂಲವಾಗಬೇಕು. ಸಾಧ್ಯವಾದ ಮೊತ್ತವನ್ನು ಉಳಿಸಿ ಬ್ಯಾಂಕುಗಳಲ್ಲಿಟ್ಟು ತನ್ಮೂಲಕ, ವ್ಯಾಪಾರ, ಉದ್ಯಮಗಳಲ್ಲೂ, ನಾಡಿನ ರಚನಾತ್ಮಕ ಕಾರ್ಯದಲ್ಲೂ ವಿನಿಯೋಗಿಸುವುದರಿಂದಲೇ ನಾವು ಈ ಮಹತ್ಕಾರ್ಯವನ್ನು ಸಾಧಿಸಬಹುದು.

"ಈ ಸ್ವಾತಂತ್ರ್ಯ ಸಂಪಾದನೆಯ ಪ್ರಥಮ ವಾರ್ಷಿಕೋತ್ಸವದ ಶುಭ ದಿನದಲ್ಲಿ ನೀವೂ ನಿಮ್ಮ ಕುಟುಂಬದ ಜನರೂ ನಿಮ್ಮ ನಿಮ್ಮ ಹೆಸರುಗಳಲ್ಲಿ ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನಾರಂಭಿಸಿ ಬರಬರುತ್ತಾ ಸಾಧ್ಯವಾದಷ್ಟು ಹಣವನ್ನುಳಿಸುವ ಪ್ರತಿಜ್ಞೆ ಮಾಡಿರಿ."

ನಮ್ಮ 84 ಶಾಖೆಗಳು ನಿಮ್ಮ ಸೇವೆಗೆ ಸದಾ ಸಿದ್ಧವಿವೆ. ನಿಮಗೆ ಹತ್ತಿರವಿರುವ ನಮ್ಮ ಶಾಖೆಗೆ ಹೋಗಿರಿ ನಮ್ಮವರು ನಿಮಗೆ ಎಲ್ಲಾ ಮಾಹಿತಿಯನ್ನು ಕೊಟ್ಟು ಸಹಾಯಮಾಡುವರು

---

## ದಿ ಕ್ಯಾನರ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪಿತ:- 1925.

ಮುಖ್ಯ ಕಾರ್ಯಾಲಯ: ಉಡಿಪಿ-ದಕ್ಷಿಣ ಇಂಡಿಯಾ.

THE NAVA BHARAT
ನವಭಾರತ
ಸಂಪಾದಕ-ಟಿ.ಕೇಶವಶಾಸ್ತ್ರಿ

ಆಗಷ್ಟ 16 ಸೋಮವಾರ 1949

## ನೆಹರೂ ಸರ್ಕಾರಕ್ಕೆ ಬೆಂಬಲ ಕೊಡಿರಿ.

ಭಾರತಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾದ ಈ ಒಂದುವರ್ಷದಲ್ಲಿ ಕಟು ಅನುಭವವಾಗಿದೆ. ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಮತ್ತು ಕೆಲಪ್ರಾಂತಗಳಿಗೆ ಬಂದ ಸುಮಾರು ೫೦ ಲಕ್ಷ ನಿರಾಶ್ರಿತರ ಪ್ರಶ್ನೆ, ಪಂಜಾಬಿನ ಹತ್ಯಾಕಾಂಡ, ಪಾಕಿಸ್ಥಾನದ ಕುತಂತ್ರ ಕಾಶ್ಮೀರ ಹೈದರಾಬಾದ ಸಮಸ್ಯೆಗಳನ್ನು ಉಕ್ಕಿನಂಥ ಗಟ್ಟಿಶಕ್ತಿ ಸಾಮರ್ಥ್ಯಗಳುಳ್ಳ ಪಟೇಲರು, ಅನುಪಮಧೈರ್ಯ ಸಾಹಸ ಮತ್ತು ಸದಸದ್ವಿವೇಕವುಳ್ಳ ನೆಹರೂರವರು ತಮ್ಮ ಜಾಣಾಕ್ಷ ಸಹಯೋಗಿಗಳೊಂದಿಗೆ ಎದುರಿಸುತ್ತಿರುವರು. ಹೈದರಾಬಾದ ಕಾಂಡವು ತಲೆ ತಿನ್ನುತ್ತಲಿದೆ. ಅಂತರಾಷ್ಟ್ರೀಯ ಶಕ್ತಿಗಳು ತಮ್ಮ ಒಲವು ಸಹಾನುಭೂತಿಗಳನ್ನು ಪಾಕಿಸ್ತಾನಕ್ಕೀಯುತ್ತಲಿವೆ. ಹೈದರಾಬಾದ ಸಮಸ್ಯೆಯು ಶಾಂತಿಯುತವಾಗಿ ಬಗೆಹರಿಯದಿದ್ದರೆ ದಕ್ಷಿಣ ಹಿಂದೂಸ್ಥಾನದಲ್ಲೂ ಅಶಾಂತ ಲಕ್ಷಣಗಳು ತಲೆದೋರಬಹುದು.

ನೆಹರೂ ಪಟೇಲರು ತಮ್ಮಲ್ಲಿ ವಿಶ್ವಾಸವಿಟ್ಟು ಒಗ್ಗಟ್ಟಿನಿಂದ ವರ್ತಿಸಬೇಕೆಂದು ಭಾರತೀಯರನ್ನು ಕೇಳಿಕೊಂಡಿದ್ದಾರೆ. ಅವರು ನಮ್ಮ ಪ್ರತಿನಿಧಿಗಳಾಗಿ ನವಪ್ರಾಪ್ತ ಭಾರತ ಸ್ವಾತಂತ್ರ್ಯಕ್ಕೆ ಗಂಡಾಂತರವಿರುವ ಕಾರಣ! ಎಲ್ಲರೂ ಎಲ್ಲಾತರದ ಪಕ್ಷಭೇದಗಳನ್ನು ಮರೆತು ತಮ್ಮ ಸಂಪೂರ್ಣ ಸಹಾಯ ಸಹಕಾರಗಳನ್ನು ನೆಹರೂ ಸರಕಾರಕ್ಕೆ ನೀಡಬೇಕೆಂದು ಆಶಿಸುತ್ತೇವೆ

## ಬಳ್ಳಾರಿಯಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ ವಾರ್ಷಿಕೋತ್ಸವ

(16-8-48 ಸೋಮವಾರ)

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದ 15-16ನೆಯ ವಾರ್ಷಿಕೋತ್ಸವವು 16ನೇ ದಿನಾಂಕ ಸಾಯಂಕಾಲ ಶ್ರೀ ಎಸ್ ಪಾರ್ಥಸಾರಥಿ ಅಯ್ಯಂಗಾರ್ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಸೆಂಟ್ರಲ್ ರೇಂಜು ಇವರ ಅಧ್ಯಕ್ಷತೆಯಲ್ಲಿ ಕೋಟೆಯ ಹೆಡ್ ಪೋಸ್ಟಾಫೀಸ್ ಬಳಿ ಇರುವ ನಮ್ಮ ಹಾಸ್ಟಲ್ ಅಂಗಳದಲ್ಲಿ (ನರಸಪಲ್ಲಿ ಚನ್ನಪ್ಪ ಹಿಂದೂ ಬಾಯ್ಸ್ ಹೋಂ) ನೆರವೇರಿಸಲಾಗುವುದು ಜಿಲ್ಲೆಯಲ್ಲಿನ ಸಂಘದ ಸದಸ್ಯರೂ, ಹರಿಜನೋದ್ಧಾರದಲ್ಲಿ ಆಸಕ್ತಿ ಇರುವವರೂ ಬರಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

## ಬಳ್ಳಾರಿ ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಸದಸ್ಯರಾಗದಿದ್ದವರು ಸದಸ್ಯರಾಗಿ ನಮ್ಮ ಸಂಘಕ್ಕೆ ಬೆಂಬಲ ಕೊಡಿರಿ

ಬಿ. ಬಿ. ಆಚಾರ್.

## ವಿಶ್ವವಿದ್ಯಾಲಯಗಳಿಗೆ ಜಾತೀಯ ಹೆಸರು ಬೇಡ

ಅಲೀಘಡ ಮುಸ್ಲಿಂ ಯೂನಿವರ್ಸಿಟಿ ಬನಾರಸದ ಹಿಂದೂ ಯೂನಿವರ್ಸಿಟಿಗಳ ಮುಸ್ಲಿಂ ಮತ್ತು ಹಿಂದೂ ಶಬ್ದಗಳನ್ನು ತೆಗೆದುಹಾಕಲು ಸರ್ಕಾರವು ನಿಶ್ಚಯಿಸಿದೆ. ಟಾಗೋರರ ವಿಶ್ವಭಾರತಿಯನ್ನು ಇಂಡಿಯಾ ಸರ್ಕಾರವೇ ನಡೆಸಲು ನಿಶ್ಚಯಿಸಿದೆ. ಇದಕ್ಕಾಗಿ ಭಾರತ ಸರ್ಕಾರವು ಒಂದು ಯೂನಿವರ್ಸಿಟಿ ಕಮೀಶನ್ ನಿಯಮಿಸಲು ನಿಶ್ಚಯಿಸಿದೆ

**THE MEDICAL EMPORIUM**
**CHEMISTS & DRUGGISTS**
**Bangalore Road, BELLARY.**

*Stockists of all Medicines Allopathic & Ayurvedic Surgical instruments etc*

**Reasonable Rates** **Pronpt Delivery** **Trial Soliclcited**

ದಿ ಮೆಡಿಕಲ್ ಎಂಪೋರಿಯಂ
ಔಷಧ ವ್ಯಾಪಾರಿಗಳು,
**ಬೆಂಗಳೂರು ರಸ್ತೆ, ಬಳ್ಳಾರಿ.**

ನಮ್ಮಲ್ಲಿ ಆಯುರ್ವೇದ ಮತ್ತು ಇಂಗ್ಲೀಷ್ ವೈದ್ಯದ ಎಲ್ಲಾ ಔಷಧಗಳು ಸರಿಯಾದ ಮತ್ತು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಹೆಸರುವಾಸಿಹೊಂದಿದ ಮತ್ತು ಬಹುಮಾನ ಪ್ರಿಯವಾದ (*Standard*) ಔಷಧಗಳು, ಶಸ್ತ್ರಚಿಕಿತ್ಸೆಗೆ ಬೇಕಾದ ಶಸ್ತ್ರ ವಗೈರೆ ಕೂಡ ದೊರೆಯುತ್ತವೆ. ಅಡ್ವಾನ್ಸು ಕೊಟ್ಟಲ್ಲಿ ವಿ ಪಿ ಮೇಲೆ ಕಳುಹಿಸಲಾಗುತ್ತೆ.

## —ರೇಲ್ವೆಗಳಲ್ಲಿಯ

# ಪುಕ್ಕಟೆ ಪ್ರವಾಸ—

ರೇಲ್ವೆಗಾಡಿಗಳಲ್ಲಿ ಪುಕ್ಕಟೆ ಪ್ರವಾಸ ಮಾಡುವ ಜನರ ಸಂಖ್ಯೆಯು ಇತ್ತೀಚೆಗೆ ಹೆಚ್ಚಾದ್ದರಿಂದ ಭಾರತದ ರೇಲ್ವೆ ವಿಭಾಗಕ್ಕೆ ಪ್ರತಿವರ್ಷ ಕತ್ತ ಕೋಟಿ ರೂಪಾಯಿ ಹಾನಿಯಾಗುತ್ತಿದೆಯಂತೆ. ಇದು ... ದ ಹಾನಿಯಾಗಿದೆಯೆಂದೂ ಈ ... ವನ್ನು ನಿಲ್ಲಿಸಲು ಸರಕಾರವು ಕೈಕೊಳ್ಳುವ ಕಾರ್ಯದಲ್ಲಿ ಜನತೆಯು ಸಹಕರಿಸಬೇಕೆಂದೂ ಸರ್ಕಾರವು ಪ್ರಜೆಗಳಿಗೆ ವಿನಂತಿ ಮಾಡಿಕೊಂಡಿದ್ದಾರೆ

ಪಾಕಿಸ್ತಾನದಲ್ಲಿಯಂತೂ ಹೀಗೆ ಪುಕ್ಕಟೆ ಪ್ರವಾಸ ಮಾಡುವವರ ಸಂಖ್ಯೆಯು ಮಿತಿಮೀರಿ ಬಿಟ್ಟಿದೆಯೆಂದು ತಿಳಿಯುತ್ತಿದೆ ಇದಕ್ಕೆ ಕಾರಣವೆಂದರೆ, ಜನರಲ್ಲಿ ಸ್ವಾತಂತ್ರ್ಯದ ಪ್ರಾಪ್ತಿಯುಂಟಾದ ಉಚ್ಛೃಂಖಲ ವೃತ್ತಿಯು, ಪಾಕಿಸ್ತಾನದಲ್ಲಿ ಉಂಟಾದ ಸರಕಾರೀ ಶೈಥಿಲ್ಯದ ಮೂಲಕ ಹಾಗೆ ನಡೆಯುತ್ತದೆ

ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯನ್ನು ನೋಡಿದರೆ ಇಲ್ಲಿಯೂ ಜನರಲ್ಲಿ ಉಚ್ಛೃಂಖಲ ವೃತ್ತಿಯು ಬೆಳೆಯುತಿದೆಯೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು ಒಂದು ಸರಕಾರವು ಹೋಗಿ ಮತ್ತೊಂದು ಬರುತ್ತಿರುವವರ ಸಂಧಿಕಾಲದ ಲಾಭವನ್ನು ಜನರು ತೆಗೆದುಕೊಳ್ಳುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ ಆಹಾರ ಮತ್ತು ಬಟ್ಟೆಗಳ ವಿಷಯದಲ್ಲಿ ಇಂದು ಕಾಣುತ್ತಿರುವ ಅವ್ಯವಸ್ಥೆಗೆ ಈ ಧೋರಣವೇ ಕಾರಣವೆಂದು ಹೇಳಲು ಏನೂ ಅಡ್ಡಿಯಿಲ್ಲ ತನ್ನ ಮುಂದಿನ ಅನೇಕ ಸಮಸ್ಯೆಗಳಿಗೆ ಹಿಂದೂಸ್ಥಾನ ಸರಕಾರವು ಇಂದ ಪರಿಹಾರವನ್ನು ಕಲ್ಪಿಸಬೇಕಾಗಿರುವುದರಿಂದ, ಕೈತುಂಬ ಕೆಲಸವಿದ್ದ ಅದರ ಪರಿಸ್ಥಿತಿಯ ಲಾಭ ಮಾಡಿಕೊಂಡು ಸಾಧ್ಯವಾದಲ್ಲಿ ಕ್ರಮಗೆಟ್ಟು ನಡೆಯುವವರಲ್ಲಿ ಜನತೆಯು ತತ್ಪರವಾದದ್ದು ಕಂಡುಬರುತ್ತಿದೆ

ಪುಕ್ಕಟೆಯಾಗಿ ರೇಲ್ವೆ ಗಾಡಿಗಳಲ್ಲಿ ಪ್ರವಾಸ ಮಾಡುವವರನ್ನು ಹಿಡಿಯಲು ಕಂಪನಿಯ ಪೋಲೀಸರಿಗೆ, ಟಿಕೀಟು ನೋಡುವ ಅಧಿಕಾರಿಗಳಿಗೆ ಏಕೆ ಸಾಧ್ಯವಾಗುತ್ತಿಲ್ಲವೆಂಬುದನ್ನು ವಿಚಾರ ಮಾಡುವುದು ಅವಶ್ಯವಿದೆ ಇವರ ಸಂಖ್ಯೆಯು ಸ್ವಲ್ಪ ಇದ್ದರೆ ಅದನ್ನು ಬೆಳೆಸುವ ವ್ಯವಸ್ಥೆಯು ಮಾಡಲ್ಪಡಬೇಕು.

ಹೆಚ್ಚಿನ ತತ್ಪರತೆಯನ್ನು ಈ ಕಾರ್ಯದಲ್ಲಿ ತೆಗೆದುಕೊಳ್ಳುವುದೂ ಅವಶ್ಯವಿದೆ ಸ್ಟೇಶನ್ನುಗಳಲ್ಲಿ ಜನರು ಅನವಶ್ಯಕವಾಗಿ ಮತ್ತು ಪುಕ್ಕಟ ಪ್ರವಾಸ ಮಾಡುವ ಉದ್ದೇಶದಿಂದ ಬಂದಿರವುದನ್ನು ನಿಯಂತ್ರಿಸಲು ಆಯಾ ಸ್ಟೇಶನ್ನಿನ ಅಧಿಕಾರಿಗಳಿಗೆ ಸಾಧ್ಯವಿದೆ ಆದರೆ ಅವರು ಆ ಬಗ್ಗೆ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡಬೇಕಾಗುತ್ತದೆ

ಟೀಕೀಟುಗಳನ್ನು ಪರೀಕ್ಷಿಸುವ ಅಧಿಕಾರಿಗಳು ಪುಕ್ಕಟ ಪ್ರವಾಸಮಾಡುವವರು ಸಿಕ್ಕ ಕೂಡಲೇ ಅವರನ್ನು ಅಲ್ಲಿಯ ಸ್ಟೇಶನ್ ಮಾಸ್ತರರ ಕಡೆಗೆ ಅಥವಾ ಪೋಲೀಸರ ಕಡೆಗೆ ಕೊಡುವ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಅವರು ತಪ್ಪಿಸಿಕೊಳ್ಳುವರು.

ಭಿಕ್ಷೆಬೇಡುವ ಜನರನೊಂದು ತಂಡವು ಹೀಗೆ ಪುಕ್ಕಟೆ ಪ್ರವಾಸಮಾಡುವವರಲ್ಲಿ ಬರುತ್ತದೆ ಟಿಕೀಟು ನೋಡುವ ಅಧಿಕಾರಿಯು ಅವರನ್ನು ಕಂಡು ಗಾಡಿಯಿಂದ ಅವರನ್ನು ಇಳಿಸಿದ ಮೇಲೆ, ಅವನ ಕಣ್ಣು ತಪ್ಪಿಸಿ ಅವರು ಪುನಃ ಹತ್ತುತ್ತಾರೆ, ಹಿಡಿಯಲ್ಪಟ್ಟ ಅವರನ್ನು ಪೋಲೀಸರ ವಶದಲ್ಲಿರಿಸುವ ವ್ಯವಸ್ಥೆಯಾಗಬೇಕು. ಅಂದರೆ ಅವರ ಉಪದ್ರವು ಕಡಿಮೆಯಾಗುವುದು ಮತ್ತು ಈ ತಂಡದ ಮೇಲೆ ಮೊದಲಿನಿಂದಲೂ ರೇಲ್ವೆ ಅಧಿಕಾರಿಗಳು ಕಣ್ಣಿಡುವುದು ಅವಶ್ಯವಾಗಿದೆ

ಈ ಅಪರಾಧವನ್ನು ಮಾಡಿದವರಿಗೆ ಇಂದು ಆಗುವ ಶಿಕ್ಷೆಯು ಅದವಾ ದಂಡವು ಸೌಮ್ಯಸ್ವರೂಪದ್ದು ಇದೆ ಎಂದು ಹೇಳಬಹುದು ಅದನ್ನು ಇನ್ನಿಷ್ಟು ಉಗ್ರಗೊಳಿಸುವುದು ಅವಶ್ಯವಿದೆ ಅದರಿಂದ ಈ ವೃತ್ತಿಯವರಿಗೆ ಹೆಚ್ಚಿನ ತಡೆಯನ್ನುಂಟು ಮಾಡಿದಂತಾದೀತು

ಇಷ್ಟೆಲ್ಲ ಆದಮೇಲೆ ಅಪರಾಧಿಗಳು ಸಿಕ್ಕಮೇಲೂ, ಹೆಚ್ಚಿನ ಹಾನಿ ಅಥವಾ ಮಾನನಷ್ಟಗಳಾಗದೆ ಅವರು ಅದರಿಂದ ಪಾರಾಗುವ ಪರಿಸ್ಥಿತಿಯು ರೇಲ್ವೆ ವಿಭಾಗದಲ್ಲಿ ಇದೆ ಎಂಬುದನ್ನು ಸರಕಾರದವರು ಮರೆಯಬಾರದು. ಅದೆಂದರೆ 'ಲಂಚಗುಳಿತನ' ಎಲ್ಲ ಕಡೆಗೆ ಇರುವ ಈ ಪಿಂಪಾಪವು ರೇಲ್ವೆ ವಿಭಾಗದಲ್ಲಿ ಇನ್ನೂ ಹೆಚ್ಚಿನ ಆಳದಲ್ಲಿ ಸ್ಥಾಪಿತವಾಗಿದೆಯೆಂಬುದನ್ನು ಹೊಸದಾಗಿ ಸಿದ್ಧಮಾಡುವ ಪ್ರಸಂಗವೇನೂ ಇಲ್ಲ.

ಅದನ್ನು ನಿರ್ಮೂಲಮಾಡಲು ಸರ್ಕಾರದವರು ಉಗ್ರ ಉಪಾಯಗಳನ್ನು ತೆಗೆದುಕೊಂಡರೆ, ಪುಕ್ಕಟೆ ಪ್ರವಾಸಮಾಡುವ ಜನರ ಸಂಖ್ಯೆಯು ತನ್ನಷ್ಟಕ್ಕೆ ತಾನೇ ಕಡಿಮೆಯಾಗುವುದು ಮತ್ತು ರೇಲ್ವೆ ಕಂಪನಿಯ ಉತ್ಪನ್ನವು ಸದ್ದಿಲ್ಲದೆ ಬೆಳೆಯ ಹತ್ತುವುದು

ನಿರ್ಬಂಧಕ ಮತ್ತು ನಿವಾರಕ ಉಪಾಯಗಳನ್ನು ಈ ರೀತಿಯಾಗಿ ಕೈಕೊಳ್ಳಬೇಕಾದ ಸರಕಾರಕ್ಕೆ ಹೆಚ್ಚಿನ ವೆಚ್ಚವು ಬರುವುದರಲ್ಲಿ ಸಂಶಯವಿಲ್ಲ ಆದರೆ ಅವರ ಈ ವೆಚ್ಚವು ವ್ಯರ್ಥ ಮಾತ್ರ ಹೋಗಲಾರದು ಇಂದ ಅ... ಕಾಣಾ ಕಾಣಿ । ಕೋಟಿ ರೂಪಾಯಿಗಳನ್ನು ... ದುಕೊ... ತ್ತಿದ್ದಾರೆ ಮೊದಮೊದಲು ಅವರು ಈ ಕಾರ್ಯದ ಪರಿಣಾಮದಿಂದ ಬೆಳೆಯುವ ಉತ್ಪನ್ನದ ಹಣವನ್ನೆಲ್ಲ ಅದರ ವೆಚ್ಚಕ್ಕಾಗಿಯೇ ವೆಚ್ಚಮಾಡಿದರೂ ಅದು ಹಾನಿಯಾಗಲಾರದ ಪುಕ್ಕಟೆ ಪ್ರವಾಸಿಗರ ಸಂಖ್ಯೆಯು ಕ್ರಮೇಣ ಕಡಿಮೆಯಾಗುವುದರಿಂದ ಅವರ ಉತ್ಪನ್ನವು ತನ್ನಷ್ಟಕ್ಕೆ ಬೆಳೆ... ತ್ತ ನಡ ಆ ಮೇಲೆ, ಹಿಂದೆ ... ತ್ತಿಯ ಕಮಿಮೆಯಾಯಿತೆಂದರೆ ಅದನ್ನು ಪುನಃ ತಲೆಯೆತ್ತಗೊಡದಿರುವದಕ್ಕಾಗಿ ಹೆಚ್ಚಿನ ವೆಚ್ಚವನ್ನು ಮಾಡಬೇಕಾಗಲಿಕ್ಕಿಲ್ಲ ಮತ್ತು ಆ ಬಗ್ಗೆ ಇಪ್ಪ ವ್ಯವಸ್ಥೆಯನ್ನು ಕೂಡ ಬರಬರುತ್ತ ಕಡಿಮೆ ಮಾಡಲು ಸಾಧ್ಯವಾಗುವದು

ಸರಕಾರವು ಜನತೆಯು ಸಹಕಾರಕ್ಕಾಗಿ ಮಾಡಿಕೊಂಡ ಬಿನ್ನಹವು ಯೋಗ್ಯವೇನೋ ಅಹುದು ಆದರೆ ಅದರಿಂದ ಏನೂ ಪ್ರಯೋಜನವಾಗಲಾರದು ಜನತೆಯು ಇಂತಹ ಕಾರ್ಯಕ್ಕೆ ಮುಂದೆ ಬರುವುದು ಕಠಿಣವಾಗುವದು ಆಹಾರ ಮತ್ತು ಇತರ ವಸ್ತುಗಳ ಬಗ್ಗೆ ಅವ್ಯವಸ್ಥೆ ಮಾಡುತ್ತಿರುವವರನ್ನು ಹಿಡಿಯುವ ವಿಷಯದಲ್ಲಿ ಕೂಡ ಸರಕಾರದವರು ಇದೇ ಮಾತನ್ನು ಹೇಳುತ್ತಾರೆ ಮತ್ತು ಜನತೆಯು ತಮ್ಮೊಡನೆ ಸಹಕರಿಸುವದಿಲ್ಲವೆಂದು ಆ ಮಾತಿನಲ್ಲಿ ಅರ್ಥವಿಲ್ಲ. ಕಳ್ಳ ಸಂಗ್ರಹಕಾರರನ್ನು ತೋರಿಸಿರಿ, ನಾವು ಅವರನ್ನು ಹಿಡಿಯುತ್ತೇವೆ ಎಂದು ಕೆಲ ಅಧಿಕಾರಿಗಳು ಹೇಳುವಂತೆ ಕಳ್ಳನನ್ನು ತೋರಿಸಿರಿ, ನಿಮ್ಮ ಕಳೆದ ವಸ್ತುಗಳನ್ನು ತಿರುಗಿ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ, ಎಂದ ಪೋಲೀಸ ಅಧಿಕಾರಿಯು ಹೇಳಿದ ಹಾಗೆಯೇ ಈ ಮಾತೂ ಇದೆ

ಜನತೆಯ ಪರಿಸ್ಥಿತಿಯೂ ಸೂಕ್ಷ್ಮವಿದೆ. ಹತ್ತರ ಕುಳಿತಿರುವ ಓರ್ವ ಗೃಹಸ್ಥನು ತಿಕೀಟು ಇಲ್ಲದೆ ಪ್ರವಾಸ ಮಾಡುತ್ತಿರುವುದು ಗೊತ್ತಾದರೂ ಅದನ್ನು ರೇಲ್ವೆ ಅಧಿಕಾರಿಗಳಿಗೆ ತಿಳಿಸುವುದು ಕಠಿಣವಾದ ಮಾತಾಗುತ್ತದೆ ಅವನಿಂದ ತೊಂದರೆ

18ನೇ ಪುಟವನ್ನು ನೋಡಿರಿ

## ಹರಿಜನ ಅಗ್ರಲೇಖ

# ನನ್ನ ಹಿಮಾಲಯ ಇಲ್ಲಿದೆ

(ದಿಲ್ಲಿ ದಿನಚರಿಯು ಆಂಗ್ಲಪ್ರತಿಯಲ್ಲಿ ಗಾಂಧಿಯವರ ಪ್ರಾರ್ಥನೋತ್ತರ ಭಾಷಣಗಳು ಹಿಂದುಸ್ತಾನಿಯಲ್ಲಿರುವುದಕ್ಕಿಂತ ಇಂಗ್ಲೀಷಿನಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ ಆದ್ದರಿಂದ ನಾನು ಅವರು ಸಾವ ಹಿಂದಿನ ದಿನ, ಅಂದರೆ ತಾ|| 29, ಜನವರಿ 1948ರಲ್ಲಿ ಮಾಡಿದ, ಪ್ರಾರ್ಥನೋತ್ತರ ಭಾಷಣದ ಒಂದು ಭಾಗದ ಸರಿಯಾದ ಭಾಷಾಂತರವನ್ನು ಕೊಡುವ ಭಾಷ್ಯ[?]ವನ್ನು ಇಲ್ಲಿ ತೋರಿದ್ದೇನೆ ಏಕೆಂದರೆ ಅದು ಜೀವನ, ಮರಣ ಮತ್ತು ಜಾಗತಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುದರಿಂದ ಬಹು ಮುಖ್ಯವಾದುದೆನಿಸಿದೆ ಭಾಷಣದಲ್ಲಿ ಗಾಂಧಿಯವರು ತಮಗೂ ಬನ್ನುವಿನಿಂದ ಅವರಿಗಾಗಿ ಕಾದಿದ್ದ ನಿರಾಶ್ರಿತ ಪ್ರತಿನಿಧಿಗಳಿಗೂ ನಡುವೆ ನಡೆದ ವಾಗ್ವಾದವನ್ನು ಸಭಿಕರಿಗೆ ಹೇಳುತ್ತಿದ್ದಾರೆ.

-ಕಿ ಘ ಮ)

ಅವರೆಲ್ಲರೂ ಒಳ್ಳೆಯ ಜನರು. ಅವರು ಕ್ರೋಧ ಪೂರ್ಣರಾಗಿದ್ದುದು ಸ್ವಾಭಾವಿಕ. ಆದರೆ ಕಡೆಯಲ್ಲಿ ಅವರು ನನ್ನ ಬುದ್ಧಿವಾದವನ್ನು ಸ್ವೀಕರಿಸಿದರು, ಅವರಲ್ಲೊಬ್ಬ ಅವನು ನಿರಾಶ್ರಿತನೋ ಅಥವಾ ಅವರ ಗೆಳೆಯನೋ ನಾನರಿಯೆ-ಹೇಳಿದ, "ನೀವು ಆಗಲೇ ಬೇಕಾದಷ್ಟು ಹಾನಿಯನ್ನು ಮಾಡಿದ್ದೀರಿ. ನೀವು ಮತ್ತೆ ಮತ್ತೆ ಹೆಚ್ಚು ಹಾನಿಯನ್ನು ಮಾಡಬೇಕೆನ್ನುವಿರೋ? ಅದಕ್ಕಿಂತ ನೀವು ಹೊರಟು ಹೋದರೆ ಲೇಸು. ನೀವು ಮಹಾತ್ಮರಾದರೇನು, ದೇವರಾದರೇನು - ನೀವು ನಮಗೆ ಕೇವಲ ತೊಂದರೆಯನ್ನೇ ಕೊಡುತ್ತ ಹೋದರೆ ಹೇಗೆ? ನೀವು ನಮ್ಮನ್ನು ಬಿಟ್ಟುಬಿಡಿರಿ, ಮರೆತು ಬಿಡಿರಿ, ಓಡಿಹೋಗಿರಿ" ನಾನು ಎಲ್ಲಿ ಹೋಗಬೇಕೆಂದು ಅವನನ್ನು ಕೇಳಿದೆ. ಅವನೆಂದ "ಹಿಮಾಲಯಕ್ಕೆ ಹೋಗಿರಿ" ಎಂದು ಆಗ ನಾ ಅವನಿಗೆ ಛೀಗುಟ್ಟಿದೆ, ನಿನಗೆ ನನ್ನಷ್ಟು ವಯಸ್ಸಾಗಿಲ್ಲ. ನೀನೂ ಮುದುಕನಾಗಿರುವುದೇನೋ ನಿಜ, ದೇಹದಲ್ಲಿ ಸಬಲನಾಗಿರುವುದು ಹೌದು, ನನ್ನಂಥ ಆರೇಳು ಜನರನ್ನು ನೀನು ಸುಲಭವಾಗಿ ಉರುಳಿಸಿಬಿಡಬಲ್ಲೆ ನಾನು ಬರಿಯ ಒಬ್ಬ ಮಹಾತ್ಮ ದುರ್ಬಲ ಶರೀರ ನನಗೆ ಹೆದರಿಕೆಯಾದರೆ ನಾನೆಲ್ಲಿರಲಿ?" ಅನಂತರ ಮುಗುಳ್ನಗೆಯಿಂದ ಹೇಳಿದೆ- "ಯಾರ ಹೇಳಿಕೆಯ ಮೇಲೆ ನಾನು ಹೋಗಲಿ? ನಾವು ಯಾರ ಮಾತನ್ನು ಕೇಳಬೇಕು? ಕೆಲವರು ನಾನೀ ಸ್ಥಳದಿಂದ ಕದಲಬಾರದೆನ್ನುತ್ತಾರೆ. ಏಕೆನ್ನುವರೆನ್ನುತ್ತಾರೆ. ನಾನಿಲ್ಲಿಂದ ತೊಲಗಬೇಕೆಂದು ಕೆಲವರು ನನಗೆ ಹೆದರಿಸುತ್ತಾರೆ, ಕೆಲವರು ಬೈಯುತ್ತಾರೆ, ಇತರರು ನನ್ನನ್ನು ಹೊಗಳುತ್ತಾರೆ ನನಗೆ ದಿಗ್ದರ್ಶಕವೆಂದು ಯಾರ ಅಭಿಪ್ರಾಯವನ್ನು ನಾನು ತೆಗೆದುಕೊಳ್ಳಲಿ? ಆದ್ದರಿಂದ ದೇವರನ್ನೇ ಮಾರ್ಗದರ್ಶಕನೆಂದು ನಾನು ಸ್ವೀಕರಿಸಿದೆ ಅವನು ಹೇಳಿದಂತೆ ನಡೆಯಬೇಕೆಂದು ಮಾಡಿಕೊಂಡೆ. ದೇವರಲ್ಲಿ ನಂಬಿಕೆಯೇ ನನಗಿಲ್ಲ ಎಂದು ನೀನು ಹೇಳಬಹುದು. ಹಾಗಿದ್ದಲ್ಲಿ ನೀನು ಕಡೆಯ ಪಕ್ಷ ನನಗೆ ವಿಚಾರ ಸ್ವಾತಂತ್ರ್ಯವನ್ನಾದರೂ ಬಿಡಬೇಕು. ನೀನು ಕೂಡ ಹೇಳಬಹುದು 'ನಾವೇ ದೇವರು" ಎಂದು ಅಂದರೆ ಸಮಾಜದ ಇಚ್ಛೆಯೇ ದೇವರು ಎಂದು. ಆದರೆ ಇದು ಸಂಯುಕ್ತ ಇಚ್ಛೆಗೆ ಸಂಬಂಧಿಸಿದ ಪ್ರಶ್ನೆಯಲ್ಲ, ದೇವರೇ ಇಲ್ಲಿ ಸ್ವತಃ ನರಳುವವನಲ್ಲ, ದುಃಖಸಾಗರ ಮಗ್ನನಾಗಿಲ್ಲ. ಆದರವನು ದುಃಖಿಗಳ ಸಹಾಯಕನೂ ಸ್ನೇಹಿತನೂ ಎನಿಸಿದ್ದಾನೆ.

ಪ್ರತಿಯೊಬ್ಬ ಹೆಂಗಸೂ ಸ್ವತಃ ನನ್ನ ತಂಗಿ ಅಥವಾ ಮಗಳು ಎಂದು ನಾನು ಹೇಳಿದಾಗ ಅವಳ ದುಃಖ ನನ್ನದಾಗಿಬಿಡುತ್ತದೆ. ನಿನ್ನ ಎಡರುಗಳನ್ನು ನಾನು ಅರಿತುಕೊಳ್ಳಲಿಲ್ಲವೆಂದೂ ಅದರಲ್ಲಿಯ ನನ್ನ ಭಾಗವನ್ನು ನಾನು ಅನುಭವಿಸುತ್ತಿಲ್ಲವೆಂದೂ ನೀನೇಕೆ ಭಾವಿಸುವೆ? ನಾನು ಹಿಂದು ಮತ್ತು ಸಿಖರ ಶತ್ರುವೆಂದೂ ಕೇವಲ ಮುಸಲ್ಮಾನರ ಮಿತ್ರನೆಂದೂ ನೀನೇಕೆ ಆಲೋಚಿಸುವೆ?"

ನನ್ನೊಡನೆ ಸ್ಪಷ್ಟವಾಗಿ ಮಾತಾಡಿ ಈ ನನ್ನ ಗೆಳೆಯ ಬಹಳ ಒಳ್ಳೆಯದನ್ನು ಮಾಡಿದ್ದಾನೆ. ಕೆಲವರು ನನಗೆ ಬೈದು ಬರೆಯುತ್ತಾರೆ. ಮತ್ತುಳಿದವರು ತಾವು ನರಕದಲ್ಲಿದ್ದರೂ ಸರಿಯೆ, ತಮ್ಮನ್ನು ಬಿಟ್ಟು ದೂರ ಹೋಗಿರೆಂದು ವಿನಯ ಪೂರ್ವಕವಾಗಿ ಬರೆಯುತ್ತಾರೆ. ಅವರ ನಡುವಿನಿಂದ ನಾನು ಹೊರಟು ಹೋಗುವುದು ಅವರಿಗೆ ಬೇಕಾಗಿದೆ. ಆದರೆ ನಾನು ಯಾರದಾದರೂ ಮಾತನ್ನು ಕೇಳಿ ಹೇಗೆ ಹೊರಟು ಹೋಗಲಿ? ನಾನು ಯಾರದಾದರೂ ಅಪ್ಪಣೆಯ ಮೇರೆಗೆ ಮಾನವ ಸೇವೆಯನ್ನು ಕೈಕೊಂಡಿಲ್ಲ ನಾನು ದೇವರು ಇಚ್ಛಿಸಿದಂತಿದ್ದೇನೆ, ಅವನು ನಿರ್ದೇಶಿಸಿದಂತೆ ಕೆಲಸ ಮಾಡುತ್ತೇನೆ. ಅವನಿಗೆ ಇಷ್ಟಬಂದದ್ದನ್ನು ನನ್ನಿಂದ ಮಾಡಿಸಲಿ ಅವನಿಗೆ ಬೇಕಾದರೆ ನನ್ನನ್ನವನು ಕೊಲ್ಲಬಲ್ಲ ದೇವರ ಆದೇಶದ ಮೇರೆಗೆ ನಾನು ನಡೆದುಕೊಳ್ಳುತ್ತಿರುವೆನೆಂದು ನನ್ನ ನಂಬಿಗೆ.


**Vattam Narayanapah Chetty & Sons,**

*Iron, Hardware, & Cement, Merchants,*

**Bangalore Road, BELLARY.**

*Stockists*:-**The Cement Marketing Co. India Ltd.**

**(for Bellary & Anantapur)**

**THE ASBESTOS CEMENT LIMITED.**

Best steel crow bars and jumpers of all sizes & lengths Mangalore Tiles and other building materials A. C. Pipes & fittings are available in large quantity.

**ವಟ್ಟಂ ನಾರಾಯಣಪ್ಪ ಚೆಟ್ಟಿ ಅಂಡ್ ಸನ್ಸ್,**

ಐರನ್ ಹಾರ್ಡ್‌ವೇರ್ ಮತ್ತು ಸಿಮೆಂಟ್ ವ್ಯಾಪಾರಿಗಳು,

**ಬೆಂಗಳೂರ್ ರೋಡ್, ಬಳ್ಳಾರಿ**

ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿಯ ಸಿಮೆಂಟ್ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಿಗೆ ಹಂಚಲಧಿಕಾರ ಹೊಂದಿದವರು.

ಅಸ್ಬೆಸ್ಟಾಸ್ ಸಿಮೆಂಟ್ ಲಿಮಿಟೆಡ್‌ದ ನಾಳಗಳು ಮತ್ತು ಇದಕ್ಕೆ ಸಂಬಂಧಿಸಿದ ಚಿಲ್ಲರೆ ಸಾಮಗ್ರಿ, ಉಕ್ಕಿನ ಆರೆ, ಉಕ್ಕಿನ ಜಂಪರ್, ಎಲ್ಲಾ ಸೈಜಿನ ಮಂಗಳೂರು ಹೆಂಚು, ಕಟ್ಟಡದ ಸಾಮಗ್ರಿ, ನಟ್, ಬೋಲ್ಟು ವಗೈರೆ ಸರಿಯಾದ ಬೆಲೆಗೆ ದೊರೆಯುತ್ತವೆ.

# ಗಾಂಧಿ

(ಯಾತನೆಯೆಂಬುದು ಮಾನವ ಜಾತಿಯ ಗುರುತು. ಅದೊಂದು ಕಾಲಾತೀತ ನಿಯಮ. ತನ್ನ ಮಗು ಹುಟ್ಟಲೆಂದು ತಾಯಿ ಯಾತನೆಯನ್ನು ಸಹಿಸುವಳು. ಸಾವಿನಿಂದ ಜೀವದ ಉದಯವಾಗುವದು. ಗೋಧಿ ಬೆಳೆಯಬೇಕಾದರೆ ಬೀಜ ನಾಶ ಹೊಂದುವದು ವಿಧಿ. ಯಾತನೆಯ ಅಗ್ನಿಕುಂಡದಲ್ಲಿ ಪರಿಶುದ್ಧವಾಗದೆ ಯಾವ ದೇಶವೂ ಎಂದೂ ಏಳಿಗೆಹೊಂದಿಲ್ಲ. ಕೆಡುಕಿನ ಅಸ್ತಿತ್ವಕ್ಕೆ ಯಾವ ತರ್ಕಶುದ್ಧ ಕಾರಣವನ್ನೂ ನಾನು ಕೊಡಲಾರೆ. ಹಾಗೆ ಕೊಡಲೆಳಸಿದರೆ ಪರಮಾತ್ಮನಿಗೆ ಸಮಾನನೆನಿಸಲು ಹವಣಿಸಿದಂತೆ. ಆದುದರಿಂದ ಕೆಡುಕನ್ನು ಕೆಡುಕೆಂದು ಗುರುತಿಸುವದೊಂದೇ ನನಗೆ ಸಾಕು. ಜಗತ್ತಿನಲ್ಲಿ ಕೆಡುಕಿಗೆ ಆಸ್ಪದ ಕೊಟ್ಟದ್ದರಿಂದಲೆ ಭಗವಂತನು ದೀರ್ಘ ಕಾಲದಿಂದ ಯಾತನೆ ಪಡುತ್ತಿದ್ದಾನೆ, ಅದನ್ನು ಸಹಿಸುತ್ತಿದ್ದಾನೆ ಎಂದು ನಾನು ಬಗೆಯುವೆ ...ಮಕ್ಕಳಾಗಲಿ ಯುವಕರಾಗಲಿ ವೃದ್ಧರಾಗಲಿ ಸತ್ತರೆ ನಾವೇಕೆ ಗಾಬರಿಯಾಗಬೇಕು? ಆತ್ಮದ ಅಸ್ತಿತ್ವದಲ್ಲಿ ವಿಶ್ವಾಸವುಳ್ಳವರೆಲ್ಲ—ಹಿಂದುವಿರಲಿ ಮುಸ್ಲಿಮ ಅಥವಾ ಪಾರ್ಸಿಯಿರಲಿ ಯಾರಿಗೆ ಅದರಲ್ಲಿ ವಿಶ್ವಾಸವಿಲ್ಲ? ಆತ್ಮಕ್ಕೆ ಮರಣವಿಲ್ಲೆಂದು ಬಲ್ಲರು. —ಗಾಂಧೀಜಿ)

ಹಿಂದೂ ಘಾತಕಿಯೊಬ್ಬನ ಕೈಯಿಂದ ಮಹಾತ್ಮಾ ಗಾಂಧಿಗೊದಗಿದ ಮೃತ್ಯುವಿನಿಂದ ಕೆಡುಕಿನ ಸಾಮರ್ಥ್ಯ ನೆನಪಿಗೆ ಬಂದು ಹೃದಯ ಹೌಹಾರುತ್ತದೆ. ಈ ಶತಕದ ಮತ್ತಾವ ಮನುಷ್ಯನಿಗಿಂತಲೂ ಹೆಚ್ಚಾಗಿ ಗಾಂಧಿಯವರು ಕೇಡು ಬಗೆದವರಿಗೆ ಒಳಿತು ಬಗೆದರು, ಶಪಿಸಿದವರನ್ನು ಹರಸಿದರು. ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ತೋರಿದರು. ನಿಂದಿಸಿದವರನ್ನು ಅವರು ತಿರುಗಿ ನಿಂದಿಸಲಿಲ್ಲ. ತಮ್ಮನ್ನು ಪೀಡಿಸಿದವರಿಗಾಗಿ ಅವರು ದೇವರಲ್ಲಿ ಪ್ರಾರ್ಥಿಸಿಕೊಂಡರು. ಒಂದು ಕೆನ್ನೆಗೆ ಹೊಡೆದವರಿಗೆ ಅವರು ಪುನಃಪುನಃ ಮತ್ತೊಂದು ಕೆನ್ನೆಯನ್ನು ಒಡ್ಡಿದರು. ಸಾಮಾನ್ಯವಾಗಿ ದೊಡ್ಡವರು ತಮಗೆ ಅವಶ್ಯವೆಂದು ಬಗೆಯುವ ಸಂರಕ್ಷಣೆಗಳನ್ನು ಸುತ್ತಲೂ ಇಟ್ಟುಕೊಂಡು ತಮ್ಮ ಜೀವ ಉಳಿಸಿಕೊಳ್ಳಲು ಅವರು ಪ್ರಯತ್ನಿಸಲಿಲ್ಲ. ತಮಗಿರುವ ಪ್ರಾಣಾಪಾಯ ಅವರಿಗೆ ತಿಳಿದಿತ್ತು. ಏಕೆಂದರೆ ಒಂದೆಷ್ಟೋ ಸಲ ಅವರನ್ನು ಕೊಲ್ಲುವ ಪ್ರಯತ್ನಗಳು ನಡೆದಿದ್ದವು. ಆದರೂ ಅವರು ಭಯವಿಲ್ಲದೆ ಹೋಗಿ ಜನರಲ್ಲಿ ಬೆರೆಯುತ್ತಿದ್ದರು. ತಮ್ಮನ್ನು ಕಾಣಬೇಕೆಂಬುವರೆಲ್ಲರಿಗೂ ಕಾಣಿಸಿಕೊಳ್ಳುತ್ತಿದ್ದರು, ಮತ್ತು ಕೊನೆಗೊಮ್ಮೆ ದಿನವೂ ಜರಗುತ್ತಿದ್ದ ಸಾರ್ವಜನಿಕ ಪ್ರಾರ್ಥನೆಯ ಸಭೆಯಲ್ಲಿ ಗುಂಡಿಗಾಹುತಿಯಾದರು.

ಕೆಡುಕನ್ನು ಒಳಿತಿನಿಂದ ಸೋಲಿಸಲು ಯಾರಾದರೂ ಪ್ರಯತ್ನಿಸಿದ್ದರೆ ಗಾಂಧಿ ಆ ಪ್ರಯತ್ನ ಮಾಡಿದ್ದರೆನ್ನಬೇಕು. ಆದರೆ ಅವರು ಮರಣ ಹೊಂದಿದರು. ಒಳಿತೇ ಸೋತಿತು. ಗಾಂಧಿ ತಮ್ಮ ಪ್ರಾಣವನ್ನುಳಿಸಿಕೊಳ್ಳಲು ಹವಣಿಸಲಿಲ್ಲ; ಉಳಿಸಿಕೊಳ್ಳಲಿಲ್ಲ. ಅಹಿಂಸೆಯ ಪ್ರವರ್ತಕನು ಸತ್ತನು ಹಿಂಸೆಗೆ ಬಲಿಯಾಗಿ, ಸತ್ಯದ ಪ್ರತಿಪಾದಕನು ದ್ರೋಹಕ್ಕೆ ಆಹುತಿಯಾಗಿ ನಾಶವಾದನು, ಹಗೆಗಳನ್ನೂ ಪ್ರೀತಿಸಿದವನು ಹಗೆಯ ಕೈಯಲ್ಲಿ ಸತ್ತನು. ಕೆಡುಕು ತನ್ನ ಕೈಲಾದುದನ್ನೆಲ್ಲ ಮಾಡಿತು. ಆದರೆ ಅದು ಒಳಿತನ್ನು ಗೆದ್ದಿತೆ?

ಗಾಂಧಿ ನಮ್ಮ ಜಗತ್ತಿನಲ್ಲಿ ನಿಕ್ರೀಯರಾಗಿದ್ದರು, ಅವರ ಪಕ್ಕದಲ್ಲಿ ನಿಲ್ಲಿಸಿದರೆ ಅವರ ಸಮಕಾಲೀನರಾದ ರೂಜವೆಲ್ಟ್, ಸ್ಟಾಲಿನ್, ಹಿಟ್ಲರ್, ಚರ್ಚಿಲ್ಲರು — ಏಕೆ, ವಿಲ್ಸನ್, ಸನ್—ಯತ್ ಸೇನ್ ಮತ್ತು ಲೆನಿನ್ನರು ಕೂಡ ಕನಿಷ್ಠರಾಗಿ ಕಾಣುತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಗಳಿಸಿದ ಕೀರ್ತಿ ಮತ್ತಾರಿಗಿಂತಲೂ ಹೆಚ್ಚಾಗಿ ಅವರಿಗೇ ಸಲ್ಲಬೇಕೆಂಬುದರಲ್ಲಿದ್ದಿಲ್ಲ ಅವರ ಶ್ರೇಷ್ಠತೆ. ಭಾರತದ ಹೋರುತಿದ್ದ ಜಾತಿಗಳಲ್ಲಿ ಸತ್ಯಾಗ್ರಹದ ಬಲದಿಂದ ಸಂಧಿಯನ್ನು ಸಾಧಿಸಿದವರ ಅದ್ಭುತ ಸಾಹಸದಲ್ಲಿಯೂ ಆ ಶ್ರೇಷ್ಠತೆಯಿದ್ದಿಲ್ಲ. ಬದಲಿಗೆ, ಇಂದಿನ ಜಗತ್ತಿನ ಹೋರಾಟ ರಾಜಕಾರಣದಲ್ಲಿಲ್ಲವೆಂದೂ ಅದು ಮನುಷ್ಯನ ಆತ್ಮದಲ್ಲಿರುವ ಸದಸತ್ ಪ್ರವೃತ್ತಿಗಳ ಕದನದಲ್ಲಿದೆಯೆಂದೂ ಕಂಡುಕೊಂಡದ್ದರಲ್ಲಿ ಅವರ ಹಿರಿಮೆ ಅಡಕವಾಗಿದೆ. ಗಾಂಧಿಯಲ್ಲಿದ್ದ ಈ ಜ್ಞಾನದೃಷ್ಟಿ ಅವರ ರಾಜಕೀಯ ಸಂಗಾತಿಗಳಿಗೆ ಎಷ್ಟೋ ವೇಳೆ ಗಲಿಬಿಲಿಯನ್ನೂ ಗಾಬರಿಯನ್ನೂ ಉಂಟು ಮಾಡುತಿತ್ತು. ನೆಹರೂ ಅವರು ತಮ್ಮ ಪುಸ್ತಕಗಳಲ್ಲಿ, ಈ ಋಷಿಯ ಅಂತರಂಗವನ್ನು ಅರಿತುಕೊಳ್ಳುವದು ತಮ್ಮಿಂದಾಗಿಲ್ಲವೆಂದು ಎಷ್ಟೋಕಡೆ ಒಪ್ಪಿಕೊಂಡಿದ್ದಾರೆ. ಆದರೂ ಅವರನ್ನು ಇವರು ಪ್ರೀತಿಸುತಿದ್ದರು.

ಗಾಂಧಿಯ ವಿಚಾರವೇ ಸರಿಯಾಗಿತ್ತು. ಅವರ ಮರಣವೇ ಅದಕ್ಕೆ ಸಾಕ್ಷಿ. ಎಲ್ಲ ರಾಜಕೀಯ ವ್ಯವಸ್ಥೆಗಳ ಪರಿಣಾಮವೂ ಕಟ್ಟಕಡೆಗೆ ಅಂತರಂಗಮಥನದ ಫಲವನ್ನೇ ಅವಲಂಬಿಸಿದೆ. ಆತ್ಮದ ಒಳ ಮೇರೆಯೆ ಮನುಷ್ಯನ ಕೊನೆಯ ಗಡಿ. ಆಧುನಿಕ ಮನುಷ್ಯ ಆ ಕೊನೆಯ ಸೀಮೆಯ ಬಳಿಗೆ ತಳ್ಳಲ್ಪಡುತಿದ್ದಾನೆ. ತಮ್ಮ ಹಿಂದೂ ಬಾಂಧವರನ್ನು ಅವರು ಅಂತರಂಗದ ಗರ್ಭಗುಡಿಯತ್ತ ನಿಷ್ಠುರವಾಗಿ ಅಟ್ಟಲು ತೊಡಗಿದರೆಂದೇ ಗಾಂಧಿಯ ಕೊಲೆಯಾಯಿತು. ಜಾತೀಯ ಹೋರಾಟದಿಂದ ಹಿಂದುಸ್ತಾನ ತನ್ನ ಸರ್ವನಾಶ ಮಾಡಿಕೊಳ್ಳುತಿರುವದನ್ನು ಕಂಡು ತಾಳಲಾರದೆ ಅವರು ತಮ್ಮ ಕೊನೆಯ ಉಪವಾಸವನ್ನು ಕೈಕೊಂಡರು. ಎಲ್ಲ ಪಕ್ಷಗಳ ಜನರೂ ಅವರ ಬಳಿಗೆ ಬಂದು ಈ ಸ್ವಯಂಕಲ್ಪಿತ ಯಾತನೆಯನ್ನು ಕೊನೆಗಾಣಿಸಲು ನಿಮ್ಮ ಕರಾರುಗಳೇನೆಂದು ಕೇಳಲಾಗಿ ಅವರು ಕರಾರುಗಳನ್ನು ಹೆಸರಿಸಿದ್ದು ತಮ್ಮ ಜಾತಿಯ ಮೇಲೆಯೇ. ಅವರು ಮುಸ್ಲಿಮರಿಂದಾಗಲಿ ಸಿಖರಿಂದಾಗಲಿ ಯಾವ ವಾಗ್ದಾನವನ್ನೂ ಅಪೇಕ್ಷಿಸಲಿಲ್ಲ. ಹಿಂದುಗಳಿಂದಲೇ ಬಹಳ ಬೇಡಿದರು.

ಒಟ್ಟಿನಲ್ಲಿ, ಯಾತನೆಯ ಅಗ್ನಿಕುಂಡವನ್ನು ಹೊಕ್ಕು ಹೊರಡುವ ಅವಮಾನಕರ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಹಿಂದೂ ಬಾಂಧವರನ್ನು ಅವರು ಒಪ್ಪಿಸಿದರು. ಪಾಕಿಸ್ತಾನಕ್ಕೆ ವಲಸೆ ಹೋದ ಲಕ್ಷಾಂತರ ಮುಸ್ಲಿಮರನ್ನು ತಿರುಗಿ ತಮ್ಮ ಮನೆಗಳಿಗೆ ಬರುವಂತೆ ಹಿಂದುಗಳು ಆಮಂತ್ರಣವೀಯಬೇಕಾಯಿತು. ಸ್ವತಃ ಮುಸ್ಲಿಮರ ಕೈಯಲ್ಲಿ ಘೋರ ಅತ್ಯಾಚಾರಗಳನ್ನು ಅನುಭೋಗಿಸಿದ್ದ ಹಿಂದುಗಳು ಹಿಂದೆ ಬರಲೊಪ್ಪಿದ ಮುಸ್ಲಿಮರನ್ನು ಸುರಕ್ಷಿತವಾಗಿ ಕರೆತರಲು ಒಪ್ಪಿದರು. ಮುಸ್ಲಿಮರ ಮಸೀದೆಗಳನ್ನು ಪುನಃ ತೆರೆದು ಅವುಗಳನ್ನು ಅವುಗಳ ಅಧಿಕಾರಿಗಳಿಗೆ ಒಪ್ಪಿಸಬೇಕು. ಎಲ್ಲ ಬಗೆಯ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರವನ್ನು ನಿಲ್ಲಿಸಬೇಕು. ಇದಕ್ಕೆ ಪ್ರಮಾಣವೆಂಬಂತೆ ಪ್ರಾಯಶ್ಚಿತ್ತಸ್ವರೂಪವೆಂದೂ ನೂರು ವರ್ಷ ಹಿಂದೆ ಜಾತೀಯ ತಿಕ್ಕಾಟ ತಲೆದೋರುವ ಮೊದಲು ಮಾಡುತ್ತಿದ್ದಂತೆ ಮುಸ್ಲಿಮರ ಹಬ್ಬದದಿನ ಅವರಲ್ಲಿ ಹೋಗಿ ಉಡುಗೊರೆಗಳನ್ನು ಕೊಡಲು ಹಿಂದುಗಳು ಒಪ್ಪಿಕೊಂಡರು. ಸಾಲದ್ದಕ್ಕೆ, ಕಾಶ್ಮೀರದ ಮೇಲಿನ ದಾಳಿಗೆ ಧನಸಹಾಯ ಮಾಡಲು ಉಪಯೋಗಿಸಲ್ಪಟ್ಟೀತೆಂಬ ಸಂಶಯದಿಂದ ಪಾಕಿಸ್ತಾನಕ್ಕೆ ಸಲ್ಲಬೇಕಾದ ೫೦ ಕೋಟಿ ರೂಪಾಯಿಗೆ ಹಾಕಿದ ಮುಟ್ಟುಗೋಲನ್ನು

---

ಹಿಮಾಲಯದಲ್ಲಿದ್ದರೆ ನನಗ ಬಹಳ ಆನಂದವಾಗುತ್ತಿತ್ತು. ಅಲ್ಲಿ ಆಹಾರ ಪಾನೀಯ ಇಲ್ಲವೆ ಬಟ್ಟೆ ಯಾವುದೂ ಯಾವುದೂ ಬೇಕಾಗುತ್ತಿದ್ದಿಲ್ಲ. ಆದರೆ ನಾನು ಮಾರ್ಮಿಕ ವೇದನೆಯ ಮೂಲಕವೇ ಶಾಂತಿಯನ್ನು ಮುಟ್ಟಬೇಕೆಂದಿದ್ದೇನೆ. ನನ್ನ ಹಿಮಾಲಯ ಇಲ್ಲಿಯೇ ಇದೆ. ನೀವೆಲ್ಲರೂ ಹಿಮಾಲಯಕ್ಕೆ ಹೋಗಹತ್ತಿದ್ದರೆ ನಿಮ್ಮೊಡನೆ ನನ್ನನ್ನೂ ಕರೆದುಕೊಂಡು ಹೋಗಬಹುದು.

(ದಿಲ್ಲಿ ದಿನಚರಿಯ ಹಿಂದುಸ್ತಾನಿ ಪ್ರತಿಯಿಂದ ಭಾಷಾಂತರಿಸಿದುದು.)

ಹಿಂದುಸ್ತಾನ ಸರಕಾರ ತಿರುಗಿ ತೆಗೆದುಕೊಳ್ಳಬೇಕೆಂದು ಗಾಂಧಿ ಹಟಹಿಡಿದರು. ಹಣ ಪಾಕಿಸ್ತಾನಕ್ಕೆ ದೊರಕಿತು.

ಇದರ ಅರ್ಥವೇನೆಂದು ಅಮೇರಿಕನ್ನರು ಅಷ್ಟು ಸ್ವಲ್ಪವಾದರೂ ಗ್ರಹಿಸಿಕೊಳ್ಳಬಲ್ಲರೇ? (ಯುದ್ಧ ಕಾಲದಲ್ಲಿ ಜಪಾನಿ ಪಕ್ಷಪಾತಿಗಳಾಗಿದ್ದರೆಂದು) ಭೂಮಿಗಳಿಗೆ ಎರವಾದ ಜಪಾನ ಕುಲದ ಅಮೇರಿಕನ್ ನಾಗರಿಕರಿಂದ ಕೆಲಿಫೋರ್ನಿಯಾದ (ಬಿಳಿ) ಭೂಮಿಯೊಡೆಯರು ಕ್ಷಮಾಯಾಚನೆ ಮಾಡುವದು ಸಂಭವವಿದೆಯೆ? ಸೆರೆಯಲ್ಲಿರುವ ಯುದ್ಧ ವಿರೋಧಿಗಳ ಬಿಡುಗಡೆಯಾಗಬೇಕೆಂದೂ ಅವರಿಗೆ ಪರಿಹಾರ ದೊರೆಯಬೇಕೆಂದೂ ಅಮೇರಿಕನ್ ಸೈನ್ಯ ಎಂದಾದರೂ ಪ್ರಯತ್ನಿಸೀತೆ? ಬಿಳಿಯರ ಇಗರ್ಜಿಗಳಲ್ಲಿ ನೀಗ್ರೋಗಳಿಗೆ ಪ್ರವೇಶ ದೊರಕುವದಾಗಲಿ ರೋಮನ್ ಕೆಥೋಲಿಕರು ಕಮ್ಯೂನಿಸ್ಟರೊಡನೆ ಕೈಕುಲುಕುವದಾಗಲಿ ಎಷ್ಟು ಸಂಭವನೀಯವೆಂದು ವಿಚಾರಿಸಿರಿ. ಮೊನ್ನಿನ ಯುದ್ಧದಲ್ಲಿ ನಾವು ನಿಜವಾಗಿ ಕಳೆದುಕೊಂಡದ್ದಕ್ಕಿಂತ ಇಮ್ಮಡಿ ಅಮೇರಿಕನ್ನರನ್ನು ಜರ್ಮನರು ಕೊಂದಿದ್ದರೆ, ಮತ್ತು ಆ ವೇಳೆಯೂ ನಾವು ಮನೆಮಾರಿಲ್ಲದ ಜರ್ಮನರೆಲ್ಲರಿಗೂ ಅಮೇರಿಕೆಯಲ್ಲಿ ಸ್ವಾಗತವಿದೆಯೆಂದು ಸಾರಿದ್ದರೆ ಆಗ ಅದು ಗಾಂಧಿಯನ್ನುಳಿಸುವ ಸಲುವಾಗಿ ಹಿಂದುಗಳು ಮಾಡಲೊಪ್ಪಿದ ಕೃತಿಗಳಿಗೆ ಸಮಾನವಾದ ತ್ಯಾಗವೆನಿಸಬಹುದು. ಆದುದರಿಂದ ಗಾಂಧಿಯ ಕೊಲೆಗಡುಕನಂತೆ ಇಂಥ ಪ್ರಸಂಗದಲ್ಲಿ ಇಷ್ಟು ಕ್ಷಮೆ ಕೋರುವದು ಶುದ್ಧ ಹುಚ್ಚೆಂದು ಅನೇಕ ಭಾರತೀಯರು ಭಾವಿಸಿದ್ದರೆ ಅದರಲ್ಲೇನು ಆಶ್ಚರ್ಯ?

ಅದು ಕಾರಣ ಗಾಂಧಿ ಸತ್ತರು. ಇತರ ಹಿಂದುಗಳು ಪಶ್ಚಾತ್ತಾಪಪಟ್ಟು ತಮ್ಮ ಶತ್ರುಗಳನ್ನು ಕ್ಷಮಿಸುವಂತೆ ಮಾಡಿದ ಗಾಂಧಿಯನ್ನು ಒಬ್ಬ ಹಿಂದು ಕೊಂದನು. ಆದರೆ ಗಾಂಧಿ ಸತ್ತೂ ಮಾತಾಡುತ್ತಿದ್ದಾರೆ. ತಮಗೂ ಹಿಂದೂ ಮುಂದಾಳುಗಳಿಗೂ ಆದ ಒಪ್ಪಂದಕ್ಕೆ ಅವರು ತಮ್ಮ ಪ್ರಾಣಗಳಿಂದಲೇ ಮುದ್ರೆಯೊತ್ತಿದರು. ಆದರಿಂದ ಅವರು ಜೀವಂತರಾಗಿದ್ದಾಗ ಕೊಟ್ಟ ಮಾತನ್ನು ಪೂರೈಸಲು ಹಿಂದುಗಳು ಇನ್ನಷ್ಟು ಬದ್ಧರಾದರು. ಹಿಂದೂ ಭಾರತದ ಬಗ್ಗೆ ಮುಸ್ಲಿಮರ ಮನಸ್ಸು ಮಿದುವಾಗುವದಕ್ಕೆ ಅವರ ಬಲಿದಾನವೆ ಎಲ್ಲಕ್ಕಿಂತ ಪ್ರಬಲ ಕಾರಣವಾದೀತು. ಗಾಂಧಿಯನ್ನು ಕೊಂದವನು ಮುಸ್ಲಿಮನಾಗಿದ್ದರೆ ಏನಾಗುತ್ತಿತ್ತೆಂಬುದು ಕಲ್ಪನಾತೀತ. ಆದರೆ ಗಾಂಧಿಯನ್ನು ಅವರ ಜಾತಿಯವನೇ ಕೊಂದದ್ದರಿಂದ ಭಾರತದ ಸಮಸ್ಯೆಯ ಆಧ್ಯಾತ್ಮಿಕ ಸ್ವರೂಪ ಕಣ್ಣಿಗೆ ಕಟ್ಟುವಂತಾಗಿ ಎಲ್ಲ ಜಾತಿಯವರ ಹೃದಯಗಳಲ್ಲಿಯೂ ಅದು ಅಚ್ಚೊತ್ತಿದಂತೆ ಉಳಿಯುವದು.

ಗಾಂಧಿಯವರು ಸತ್ತಿದ್ದಾರೆ, ಆದರೂ ವಿರೋಧಾಭಾಸವಾಗಿ ಎಂದಿಗಿಂತಲೂ ಅವರೀಗ ಸಶಕ್ತರಾಗಿ ಬಾಳುತ್ತಿದ್ದಾರೆ. ಅವರು ಭಾರತದ ಸಾಮಾನ್ಯ ಜನತೆಯಲ್ಲಿ ಬದುಕಿದ್ದಾರೆ ಅವರನ್ನು ಗಾಂಧಿಯವರು ಆಧುನಿಕ ಇತಿಹಾಸದಲ್ಲಿ ಮೊದಲಸಲ ಆತ್ಮಗೌರವಕ್ಕೆ ಎತ್ತಿದ್ದಾರೆ. ಅವರು ಭಾರತದ ನೆಹ್ರು ಮತ್ತು ಇತರ ಮುಖಂಡರಲ್ಲಿ ಬದುಕಿದ್ದಾರೆ: ಕೇಡಿಗೆ ಬದಲಾಗಿ ಒಳ್ಳೆಯದನ್ನು ಮಾಡುವೆವೆಂದು ಬದ್ಧಪ್ರತಿಜ್ಞರಾದ ಹಿಂದು, ಮುಸಲ್ಮಾನರೆಲ್ಲರಲ್ಲೂ ಒಂದೇ ಸಮವಾಗಿ ಅವರು ಬದುಕಿದ್ದಾರೆ. ಜಗತ್ತಿನ ಸುತ್ತಲಿರುವ ಕ್ರೈಸ್ತ ಧರ್ಮದಲ್ಲಿ ಅವರು ಬದುಕಿದ್ದಾರೆ. ಅದು ತನ್ನ ಅನುಯಾಯಿಗಳಲ್ಲಿ ಪಡೆಯಲಾರದೆ, ರಾಜಕೀಯ ಸಂಬಂಧಗಳಲ್ಲಿ ಕ್ರೈಸ್ತಾಚಾರದ ಉತ್ಕಟತೇಜದ ಜೀವಂತ ಮೂರ್ತಿಯನ್ನು ಅವರಲ್ಲಿ ಕಾಣಬೇಕಾಯಿತು. ನಮ್ಮ ಒಳಹೊರಗಣ ಜಗತ್ತುಗಳ ಘರ್ಷಣಗಳಾದ ಆಧ್ಯಾತ್ಮಿಕ ಮತ್ತು ರಾಜಕೀಯ ಹೋರಾಟಗಳು ನಿಜವಾಗಿಯೂ ಒಂದೇ, ಅವನ್ನು ಒಟ್ಟಿಗೆ ಇತ್ಯರ್ಥ ಪಡಿಸಬೇಕು ಎಂಬುದಕ್ಕೆ ಅವರ ಇತಿಹಾಸದಲ್ಲಿ ಒಂದು ಹೆಚ್ಚಿನ ಪ್ರಮಾಣವಾಗಿ ನಿಂತಿದ್ದಾರೆ

ಇಷ್ಟೆಲ್ಲ ಹೇಳಿದ ಬಳಿಕ, ಇದಕ್ಕಿಂತ ಏನಾದರೂ ಹೆಚ್ಚಿನದಿದೆಎಂದು ಹೇಳಬರುವವರೆಗೆ ಗಾಂಧಿಯವರ ಜೀವನ ಸೋಲಿನಲ್ಲಿ ಕೊನೆಗಂಡಿತೆಂದೇ ಹೇಳಬೇಕಾಗುತ್ತದೆ ಅವರ ೭೮ ವರ್ಷಗಳನ್ನು ಎಣಿಸಿದರೆ. ಕೇಡನ್ನು ಗೆಲ್ಲಲು ಅವರು ಮಾಡಿದ ಪ್ರಯತ್ನವನ್ನು ಕೊಲೆಗಡುಕನ ಒಂದು ಗುಂಡು ಮೀರಿಸಿ ಮುಂಜಿಗಿದಿತು ಇದರ ಮುಂದೊಂದು ಬಾಳಿದೆ ಎಂದು ಹೇಳಲಾಗದಿದ್ದರೆ, ಅಗನ್ಯಾಯ. ದ್ವೇಷ ಮತ್ತು ಹಿಂಸೆಗಳು ಈ ಶತಕ ಕಂಡ ಅತ್ಯಂತ ಹೆಚ್ಚಿನ ಕ್ರೈಸ್ತ ಜೀವನ ಪದ್ಧತಿಯನ್ನು ಸೋಲಿಸಿಬಿಟ್ಟಿವೆ ಎಂದು ಹೇಳಬೇಕಾಗುತ್ತದೆ. ಒಬ್ಬ ಮನುಷ್ಯನ ಪ್ರಭಾವದ ಶಾಶ್ವತತ್ವ, ಗಾಂಧಿಯವರ ಶೀತಲ ಸ್ಪರ್ಶದ ಪ್ರಭಾವ ಕೂಡ, ಈ ಸಜ್ಜನನ ಕೊಲೆಯಲ್ಲಿ ಮೂರ್ತೀಭವಿಸಿದ ಕೇಡಿಗೆ ಯೋಗ್ಯವಾದ ಉತ್ತರವಾಗಲಾರದು, ಔಷಧವಾಗಲಾರದು.

ಕ್ರೈಸ್ತ ಚರ್ಚಿನ ಶ್ರದ್ಧೆಯಂತೆ ಒಳ್ಳೆಯಬಾಳಿಗೆ ಸಾವೇ ಕೊನೆಯಲ್ಲ, ಆತ್ಮ ಬದುಕಿಯೇ ಉಳಿಯುವುದು ಎಂದು ಗಾಂಧಿಯವರು ನಂಬಿದರು. ಬಹಳ ಕಾಲದ ಹಿಂದೆ ಅವರು ಹೇಳಿದ ಕೆಲವು ಮಾತುಗಳು ಈಗ ನೆನಪು ಮಾಡಿಕೊಳ್ಳಲು ಯೋಗ್ಯವಾಗಿವೆ.

For All Requirements
VISIT
Dwarakanath Medical Stores,
Bangalore Road, BELLARY.
I. C. I. Pharma Distributors
Use Always
PALUDRINE for
Best Anti-malarial effect.

ನಿಮ್ಮ ಎಲ್ಲಾ ಔಷಧಗಳ ಬೇಡಿಕೆಗಾಗಿ
ನಮ್ಮಲ್ಲಿಗೆ ತಪ್ಪದೆ ಬನ್ನಿ.
ಸರಿಯಾದ ದರಗಳು
ದ್ವಾರಕನಾಥ ಮೆಡಿಕಲ್ ಸ್ಟೋರ್ಸ್
ಬೆಂಗಳೂರು ರೋಡ್, ಬಳ್ಳಾರಿ.
ಮಲೇರಿಯಾ ಜ್ವರನಿವಾರಣೆಗೆ
ರಾಮಬಾಣದಂತಿರುವ
'ಪಾಲುಡ್ರೈನ್' ಉಪಯೋಗಿಸಿರಿ.

# ಯಾವಾಗಲೂ ಇರುವ ಮಹಾತ್ಮ ★

ತಿರುವಣ್ಣಾಮಲೈಯಲ್ಲಿಯ ರಮಣ ಮಹರ್ಷಿಯ ಸನ್ನಿಹಕ್ಕೆ ಒಂದು ಸಂಜೆ ತೆಲುಗು ಜಿಲ್ಲೆಯೊಂದರಿಂದ ಒಬ್ಬ ಬಂದು ಮಹಾತ್ಮರ ಸಾವು ಇಡೀ ಜಗತ್ತಿನ ಮೇಲೆ ಖಿನ್ನತೆಯನ್ನು ಹರಡಿದೆಯೆಂದು ಅವರ ಸಾವಿನ ಬಗ್ಗೆ ಅವರಿಗೆ ಒಂದು ಪ್ರಶ್ನೆ ಹಾಕಿದನು. ಆಗ ಗಾಂಧಿಯವರು ಸತ್ತಿಲ್ಲ ಎಂದು ಅರುಣಾಚಲದ ಋಷಿಗಳು ಧೈರ್ಯವಾಗಿ ಉತ್ತರ ಕೊಟ್ಟು ಬಿಟ್ಟರು.

ಭಾರತದ ಆ ದೊಡ್ಡ ಮುನಿಯ ಮಾತುಗಳು ನನ್ನೆದೆಯಲ್ಲಿ ಹೊಕ್ಕು ಎಂದಿನಿಂದಲೂ ಇದ್ದ ಜೀವನ ಮರಣಗಳ ಸಮಸ್ಯೆ ಮತ್ತು ನಮ್ಮ ಭಾರತ ರಾಷ್ಟ್ರಕ್ಕೆ ಉಂಟಾದ ಮಹಾ ದುಃಖ ಇವುಗಳ ಮೇಲೆ ಗಂಭೀರವಾಗಿ ನಾನು ವಿಚಾರ ಮಾಡುವಂತೆ ಮಾಡಿದವು. ಎಂದಿನಂತೆ ಈಗಲೂ ಮಹಾತ್ಮರು ಬದುಕಿದ್ದಾರೆಂದೂ ಅವರು ಬದುಕಿದ್ದಾಗಿನ ಕಾಲಕ್ಕಿಂತ ಹೆಚ್ಚಾಗಿ ನಮಗೆ ಈಗ ಅವರು ಸುಲಭ ಸಾಧ್ಯರೆಂದೂ ಹೇಳುವ ಗಂಭೀರ ವಿಚಾರಗಳು ನನ್ನಲ್ಲಿ ನಂಬಿಗೆ ಹುಟ್ಟಿಸಿದವು. ಹಳೆಯ ಕಾಲದ ಆರ್ಯರು ಸತ್ತನೆಂದು ಯಾವ ಮನುಷ್ಯನಿಗೂ ಅನ್ನುತ್ತಿದ್ದಿಲ್ಲ. ಅವನ ಶರೀರ ಕೊನೆಗಂಡಿತು ಎಂದು ಅವರು ಹೇಳುತ್ತಿದ್ದರು. 'ದೇಹಾಂತ' ಎಂಬ ಪದವನ್ನು ಈಗಲೂ ಹಿಂದಿಯಲ್ಲಿ ಎಲ್ಲರೂ ಬಳಸುತ್ತಾರೆ. ಒಡಲು ಕರಗಿದರೆ ಅದರಿಂದ ಮಾನವನ ನಿಜಜೀವನ ಮತ್ತು ಜಾಗ್ರದಾತ್ಮನಿಗೆ ಏನೂ ನಷ್ಟ ಸಂಭವಿಸುವದಿಲ್ಲ ಎಂದು ಬೋಧಿಸುವ ಹಿಂದು ಶ್ರದ್ಧೆಯಲ್ಲಿದು ಸರಿಯಾದ ಪ್ರಕಾಶದ ಮಾನವನ ಆತ್ಮವು ಭೌತಿಕ ಶರೀರದ ನಾಶವನ್ನು ಮೀರಿ ಯಾವಾಗಲೂ ಬದುಕಿರುತ್ತದೆ. ಅದು ಅವಿನಾಶಿ ಮತ್ತು ಅಮರ ಎಂದು ಅನೇಕ ಹಿಂದು ಧರ್ಮಗ್ರಂಥಗಳು ಖಂಡಿತೋಕ್ತಿಯಿಂದ ಒತ್ತಿ ಹೇಳುತ್ತವೆ.

"ಅದು ಅಜಾತ ನಿತ್ಯ ಶಾಶ್ವತ ಮತ್ತು ಸನಾತನವಾದುದು ದೇಹವನ್ನು ಕೊಲೆ ಮಾಡಿದಾಗ ಅದು ಕೊಲೆ ಹೊಂದುವದಿಲ್ಲ ಆಯುಧಗಳು ಅದನ್ನು ತುಂಡಿಸಲಾರವು ಬೆಂಕಿ ಅದನ್ನು ಸುಡಲಾರದು. ನೀರು ಒದ್ದೆ ಮಾಡಲಾರದು, ಗಾಳಿ ಒಣಗಿಸಲಾರದು. ಅದು ಅಚ್ಛೇದ್ಯ, ಅದಾಹ್ಯ ಅಕ್ಲೇದ್ಯ, ಅಶೋಷ್ಯ, ಅದು ನಿತ್ಯ ಸರ್ವಗತ, ಸ್ಥಾಣು, ಅಚಲ ಸನಾತನ" (ಭಗವದ್ಗೀತೆ- ಅಧ್ಯಾಯ 2, 23 ಮತ್ತು 25 ನೆಯ ಶ್ಲೋಕಗಳು).

## ಇಸ್ಲಾಮಿನ ಮತ

ಇದೇ ಪ್ರಕಾರ ಮಾನವನ ಆತ್ಮವು ಅಮರವೆಂದು ಇಸ್ಲಾಂ ಧರ್ಮವೂ ಕಲಿಸಿದೆ. ಮಾನವನ ಮೂಗಿನೊಳಗೆ ದೇವರು ತನ್ನದೇ ಶ್ವಾಸವನ್ನು ಊದಿದನು ಎನ್ನುತ್ತದೆ ಕುರಾನು. ನಿಜವಾದ ಮನುಷ್ಯನು ಯಾವಾಗಲೂ ಅವನ ದೇಹ ನಾಶವಾದ ಮೇಲೂ ಬದುಕುತ್ತಾನೆ. "ಇಂತಿಕಲ್" ಮತ್ತು 'ರಿಹ್ಲತ್' ಅಂದರೆ ಅನಸ್ಥಾಂತರ ಎಂಬ ಅರ್ಥದ ಶಬ್ದಗಳು, ಇವನ್ನು ಅರಬ್ಬಿಯಲ್ಲಿ ಸಾವಿಗೆ ಸಾಮಾನ್ಯವಾಗಿ ಬಳಸುತ್ತಾರೆ, ಋಷಿ ಮುನಿಗಳ ಸಾವನ್ನು ಹೇಳಲು "ವಾಸಿ" ಇಲ್ಲವೆ 'ವಿಸಲ್' ಅಂದರೆ ದೇವರೊಡನೆ ಸಾಯುಜ್ಯ ಎಂಬ ಅರ್ಥದ ಪದಗಳನ್ನು ಬಳಸಲಾಗುತ್ತದೆ.

ಒಬ್ಬ ಉರ್ದು ಕವಿ ಹೇಳುತ್ತಾನೆ — 'ಮೌತ್ ಏಕ್ ಮಂಜ್ಹಿಲಾ ವಕ್ಫಾ ಹೈ ಯಾನೆ ಆಗೇ ಬಢೇಂಗೆ ದಮ್ ಲೇಕರ್ (ಜೀವಕ್ಕೆ) ದಣಿವಾರಿಸಿಕೊಳ್ಳಲು ಸಾವೊಂದು ವಿಶ್ರಾಮ ಧಾಮ, ಸ್ವಲ್ಪ ವಿಶ್ರಮಿಸಿದ ನಂತರ ನಾವು ಮುಂದೆ ಹೋಗುವೆವು.'

ಹಾಫೀಜ್ ಶಿರಾಜಿ ಎಂಬ ಪರ್ಶಿಯದ ದೊಡ್ಡ ಅನುಭಾವಿ ಕವಿಯು ಭಕ್ತನ ನಿಜ ಅಮರತ್ವದಲ್ಲಿ ತನಗೆ ಶ್ರದ್ಧೆಯಿದೆ ಎಂದು ಸಾರಿದ್ದಾನೆ 'ಹರ್ಗೀಜ್ ನಮೀರದ್ ಆನ್ ಕೇ ದಿಲಾಶ್ ಜಿಂದಾಶುದ್ ಬಾ ಇಶ್ಕ್ ಅಸ್ತ ಬರ್ ಜಾರಿದಾಯ್-ಆಲಂ ದವಾಂ ಮಾ- ಭಕ್ತಿಯಿಂದ ಹೃಷ್ಟವಾದ ಹೃದಯವುಳ್ಳವನು ಎಂದೂ ಸಾಯುವುದಿಲ್ಲ ಜಗತ್ತಿನ ಹೊತ್ತಗೆಯಲ್ಲಿ ನನ್ನ ಶಾಶ್ವತತ್ವವನ್ನು ಬರೆದಿಡಲಾಗಿದೆ.

ಶ್ರೀ ಪ್ಯಾರೇಲಾಲರು (ಹರಿಜನದ 1948 ರ ಫೆಬ್ರುವರಿ 22ನೆಯ ಸಂಚಿಕೆಯಲ್ಲಿ) ಹೇಳುತ್ತಾರೆ 'ಮಹಾತ್ಮರು ಎಂದೋ ತಮ್ಮ ಕುಟುಂಬದ ಆಸ್ತಿಯಲ್ಲವಾಗಿ ಹೋಗಿದ್ದಾರೆ ಅವರಿಗೆ ಇಡೀ ಜಗತ್ತೇ ಮನೆಯಾಗಿತ್ತೆಂದೂ ಮಾನವ ಕುಲವೇ ಅವರ ಕುಟುಂಬವಾಗಿತ್ತೆಂದೂ ಯಾರಾದರೂ ಹೇಳಬಹುದು" ಹೀಗೆ ಅವರು ತಮ್ಮನ್ನು ವಿಶ್ವಚೇತನದೊಡನೆ ಒಂದೆಂದು ತಿಳಿಯಲು ಕಲಿತರು, ಅವರು ಎಲ್ಲರ ಜೀವನದಲ್ಲೂ ಬದುಕಿದರು. ಅವರ ದೃಷ್ಟಿಕೋನ ವಿಶ್ವವ್ಯಾಪಿಯಾಗಿತ್ತು "ಅವರು ಎಲ್ಲ ಮಾನವ ಹೃದಯಗಳಲ್ಲೂ ಒಂದೇ ಆತ್ಮ ಬದುಕಿರುವದನ್ನು" ಕಂಡರು. ಇದು ಅವರಿಗೆ ಪ್ರಿಯವೂ ಪವಿತ್ರವೂ ಆದ ಗೀತೆಯ ವಾಕ್ಯ.

## ಸಾವು ನಿಜವಾದ ಗೆಳೆಯ

ನಾವು ನಿತ್ಯವೂ, ಅಮರವೂ ಆದ ಆತ್ಮ ನಶಿಸುವ ಮತ್ತು ಪರಿವರ್ತಿಸುವ ಭೌತಿಕ ಶರೀರವಲ್ಲ ಎಂಬುವದನ್ನು ತಿಳಿದ ಮೇಲೆ "ಜೀವವಿದ್ದಾಗಲೆ ನಶ್ವರ ಶರೀರವನ್ನು ಆರಾಧ್ಯ ಪ್ರತಿಮೆಯನ್ನಾಗಿ ಮಾಡಿಕೊಳ್ಳುವುದನ್ನು ಅವರು ದ್ವೇಷಿಸಿದರು.

ಶ್ರೀ ಶಂಕರನ್ನರಿಗೆ ತಾ. ೨೯ ಜನವರಿ [illegible]ಳಲರಲ್ಲಿ "ಸಾವು ಒಬ್ಬ ಜೀವದ ಗೆಳೆಯ

---

"ನನ್ನ ಸುತ್ತಲಿನ ಎಲ್ಲವೂ ನಿತ್ಯಪರಿವರ್ತನ ಶೀಲವುಳ್ಳವೆಂದೂ, ಸದಾ ಸಾಯುವಂಥವೆಂದೂ ನನಗೆ ಅನುಭವವಿದ್ದರೂ ಆ ಎಲ್ಲ ಬದಲಾವಣೆಗೆ ಆಧಾರವಾಗಿ ಅಪರಿವರ್ತನೀಯವೂ, ಸರ್ವಧಾರಿಯೂ, ಸೃಷ್ಟಿಶಕ್ತಿಯುಳ್ಳದ್ದೂ, ಲಯಕಾರಕವೂ, ಪುನಃ ಸೃಷ್ಟಿಮಾಡಬಲ್ಲದೂ ಆದ ಒಂದು ಚೈತನ್ಯಶಕ್ತಿ ಇದೆ ಆ ಚಿಚ್ಛಕ್ತಿ, ಆ ಆತ್ಮ ಅವೇ ದೇವರು. ಅವನು ಕೇವಲ ದಯಾಮಯನೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಸಾವಿನ ನಡುವೆ ಜೀವದ ಅಮರತ್ವವನ್ನು ನಾನು ನೋಡಬಲ್ಲೆ: ಅಸತ್ಯದ ಮಧ್ಯ ಸತ್ಯ ಮುನ್ನುಗ್ಗಿ ಸಾಗಿದೆ, ಕತ್ತಲ ನಡುವೆ ಬೆಳಕು ಪ್ರಜ್ವಲಿಸುತ್ತಿದೆ ಆದುದರಿಂದ ದೇವರೆಂದರೆ ಜೀವ (ಜೀವನ), ಸತ್ಯ ಮತ್ತು ಬೆಳಕು ಅವನೇ ಪ್ರೇಮ, ಅವನೇ ಸರ್ವೋತ್ತಮ ಸಾತ್ವಿಕತೆ." (ಕೊಲಂಬಿಯಾ ಗ್ರಾಮೋಫೋನ್ ಕಂಪನಿಯ ರಿಕಾರ್ಡಿನಿಂದ.)

ಆ ಶ್ರದ್ಧೆಯಲ್ಲಿ ಗಾಂಧಿ ಬದುಕಿ, ಉಳಿಯುವರು ಆ ನಂಬಿಗೆಯಲ್ಲಿ, ಕೇವಲ ಅವರಲ್ಲೇ ಇಂದಿಗೂ ಮತ್ತು ಎಂದೆಂದಿಗೂ ಕ್ರೈಸ್ತನ ತಿಳುವಳಿಕೆಗೆ ಅರ್ಥವಿದೆ ಇರುವುದು

---

ಕೇವಲ ನಮ್ಮ ಅಜ್ಞಾನ ನಮಗೆ ದುಃಖವನ್ನುಂಟುಮಾಡುತ್ತದೆ, ಸುಲೋಚನೆಯ ಆತ್ಮವು ನಿನ್ನೆ ಇತ್ತು, ಇಂದಿದೆ. ನಾಳೆ ಇರಬಹುದು. ದೇಹವಾದರೋ ಸಾಯಲೇ ಬೇಕು.

ಅಂಥ ಮಾನವನು ಸತ್ತನೆನ್ನುವುದು ಪಾಖಂಡಿಯ ಮಾತು. ಅವರ ಶಾಶ್ವತ ಸತ್ವ ಎಂದಿಗೂ ನಮ್ಮನ್ನು ಹೊಂದಿಕೊಂಡೇ ಇರುತ್ತದೆ. ಅವರ ನಿರ್ಭಯ, ಅತಿ ಸರಳತೆ ಪಾರದರ್ಶಕವಾದ ಪ್ರಾಮಾಣಿಕತೆ, ಸತ್ಯಸಂಧತೆ, ಅವರ ಪ್ರಶಂಸನೀಯವಾದ ಕರ್ಮ ಕೌಶಲ್ಯ, ಅವರ ಆದರ್ಶ ದೇಶ ಪ್ರೇಮ ಮತ್ತು ಜನಪ್ರೇಮ ಇವನ್ನು ನಮ್ಮ ಬಾಳಿನಲ್ಲಿ ನೇಯ್ದುಕೊಂಡು ತನ್ಮೂಲಕ ಒಬ್ಬರಾದ ಆ ಲೋಕಮಾನ್ಯರಿಗೆ ಅವಿನಾಶಿಯಾದ ಸ್ಮಾರಕವನ್ನು ಕಟ್ಟೋಣ.

ವಲ್ಲಭಭಾಯಿ ಪಟೇಲರ ಮಾತಿನಲ್ಲಿ ಹೇಳುವುದಾದರೆ, ಅವರ ಅಂತ್ಯೋಪದೇಶದ ಅನುಸರಣ ಅವರು ಉಪದೇಶಿಸಿದ ಮತ್ತು ಆಚರಿಸಿದ ರಚನಾತ್ಮಕ ವಿಚಾರಗಳಿಗಾಗಿ ನಾವು ನಮ್ಮ ಜೀವನವನ್ನು ಮುಡಿಪುಗಟ್ಟುವುದ ಗಾಂಧಿಯವರಿಗೆ ಅತ್ಯಂತ ಸಂತೋಷ ಪ್ರದವಾದ ಮತ್ತು ನಿಶ್ಚಿತವಾದ ಸ್ಮಾರಕ ಹೀಗೆ ನಾವು ಅವರನ್ನು ನಮ್ಮ ಹೃದಯ ಮಂದಿರದಲ್ಲಿ ಇಟ್ಟುಕೊಳ್ಳಬಹು-ದು ಮತ್ತು ಕೊನೆಗೆ ಹೇಳುವದೇನು ಅವರು ಯಾವಾಗಲೂ ಇರಬೇಕೆಂದು ನಾವು ಬಯಸುವ ಸ್ಥಳವಾದರೂ ಅದೇ.

ಸರದಾರ ಪಟೇಲರು ತಮ್ಮ ನಾಯಕನ ಬಗ್ಗೆ ಹೇಳಿದ್ದಕ್ಕೂ ಬಹಳ ಕಾಲದ ಹಿಂದೆ ಒಂದ್ದು ಪಾರಶೀಪದ್ಯದಲ್ಲಿ ಹೇಳಿದ್ದಕ್ಕೂ ಹಿತಕರವಾದ ಹೊಂದಿಕೆಯಿದೆ. "ಬಾದ್ ಅಜ್ ವಫಾತ್ ತುರ್ಬತೇ ಮಾದರ್ ಜಮೀನ್‌ಮಾಜು ದರ್ ಸಿನಾಹ್ಯೆ-ಈ-ಮರ್ದುಮೇ-ಈ ಆರಿಫ್ ಮಜಾರೆ-ಮಸ್ತ್-ನನ್ನ ಮರಣಾನಂತರ ಭೂಮಿಯಲ್ಲಿ ನನ್ನ ಗೋರಿಗಾಗಿ ಬಯಸಬೇಡ. ಜ್ಞಾನಿಗಳ ಹೃದಯದಲ್ಲಿ ನನ್ನ ವಿಶ್ರಾಮಧಾಮವಿದೆ."

**ನಿರಾಕಾರ ಸ್ಫೂರ್ತಿ**

ಮಹಾತ್ಮರ ಭಕ್ತಿಭರ ಬಂಟರೆನಿಸಿದ ಪಂಡಿತ ಜವಾಹರಲಾಲರು ಮತ್ತು ಇತರರಿಗೆ ಸ್ವಾಭಾವಿಕವಾಗಿ ಆಳವಾದ ದುಃಖವುಂಟಾಗಿ ತಾವು ಅನಾಥರೂ ಪರಿತ್ಯಕ್ತರೂ ಆಗಿದ್ದೇವೆ ಎಂದು ಅನಿಸಿಬಿಟ್ಟಿದೆ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ಹೋಗಲು ಮತ್ತಾರೂ ಇಲ್ಲವೆಂದು ಅವರು ಎಣಿಸುತ್ತಾರೆ. ಅವರ ಹೃದಯವನ್ನು ಬೆಳಗಿದ ಜ್ಯೋತಿಯು ಎಂದಿಗೂ ಇಲ್ಲದಂತೆ ಹೊರಟುಹೋಗಿದೆ ಆದರೆ ಮಹರ್ಷಿಗಳು ನಮ್ಮನ್ನೆಂದೂ ಬಿಟ್ಟು ದೂರಹೋಗರು. ನಿರಾಕಾರವಾದ ಸ್ಫೂರ್ತಿ ಉಳಿಯಿತು. ಇದನ್ನು ನಾವು ನೆನಪಿಡೋಣ.

ಕೆಲವು ಇಸ್ಲಾಮೀ ಸಾಧು ಸಂತರು ಸದಾ ಇರುವರೆಂದೂ ಭಕ್ತರ ಹಿತವನ್ನೇ ನೋಡುತ್ತಿರುವರೆಂದೂ ತಿಳಿಯಲಾಗುತ್ತದೆ ೬೦೦ ಕ್ಕಿಂತ ಹೆಚ್ಚು ವರ್ಷಗಳು ಕಳೆದರೂ ಅಜ್ಮೀರದ ಹಜರತ್ ಮೊಯಿದ್ದೀನ್ ಚಿಸಿ ಮತ್ತು ದಿಲ್ಲಿಯ ನಿಜಾಮುದ್ದಿನ್ ಔಲಿಯಾ ಇವರ ಗೋರಿಗಳ ಸುತ್ತಲೂ ಭಾರತದ ನಾನಾ ಕಡೆಗಳಿಂದ ಜನರು ಬಂದು ಮುತ್ತುವರು. ಆ ಪುಣ್ಯಸ್ಥಳಗಳಲ್ಲಿ ಪ್ರಾರ್ಥಿಸಿದರೆ ತಮಗೆ ಆ ಸಾಧುಗಳು (ಫಕೀರರು) ಇಷ್ಟಾರ್ಥವನ್ನು ಕೊಡುವರೆಂದು ಅವರ ನಂಬಿಗೆ. ಹಾಗೆಯೇ ನಮ್ಮ ಪ್ರಿಯತಮರೂ ಪೂಜ್ಯರೂ ಆದ ಬಾಪು ಹಿಂದಿಗಿಂತಲೂ ಇಂದು ನಮಗೆ ಹೆಚ್ಚು ಹತ್ತಿರವಾಗಿದ್ದಾರೆ ಅವರಿಗೆ ಈಗ ಭೌತಿಕವಾದ ಕಾಲದೇಶಗಳ ಬಂಧನವಿಲ್ಲ. ನಿರಾಕಾರ ಸ್ಥಿತಿಯಲ್ಲಿ ಅವರು ದೇಹತ್ಯಾಗ ಮಾಡುವದಕ್ಕೆ ಹಿಂದೆ ಮಾಡುತ್ತಿದ್ದುದಕ್ಕಿಂತ ಹೆಚ್ಚು ಸಹಾಯ ಮಾಡಲು ಸಮರ್ಥರಾಗಿದ್ದಾರೆ ಅವರನ್ನು ತೀವ್ರವಾಗಿ ಧ್ಯಾನಿಸಿ ಮನಸಾರೆ ಪ್ರಾರ್ಥಿಸಿದಲ್ಲಿ ಅವರು ಇಲ್ಲಿ ಈಗ ಸದಾ ಇರುವರು ಎಂಬುದನ್ನು ನಾವು ಸ್ಥಿರವಾಗಿ ಲಕ್ಷ್ಯದಲ್ಲಿಡಬೇಕು. ವಿಶೇಷತಃ ನಾವು ಮಲಗಲು ಹೋಗುವಾಗ ಬೆಳಕು ಮತ್ತು ಉತ್ತರ ಬೇಕಾದ ನಮ್ಮ ಸಮಸ್ಯೆಗಳನ್ನು ವಿಮರ್ಶಿಸಿದರೆ, ಬೆಳಗ್ಗೆ ಏಳುವಷ್ಟರಲ್ಲಿ ನಮ್ಮ ವೈಯಕ್ತಿಕ ಸಮಸ್ಯೆ ಬಗೆಹರಿದು ನಮ್ಮಲ್ಲಿ ಮಾರ್ಗದರ್ಶನ ಮಾಡಲು ಸಾಕಷ್ಟು ಬೇಕು ಸಿಕ್ಕಿದ್ದನ್ನು ಕಂಡು ನಾವು ಸಂತಸಬಡುವಂತಾಗುವದು

— ಎಂ. ಹಾಫೀಜ್ ಸಯ್ಯದ್


# G. E. C.

BATTERY RADIO

**The finest set yet made for all world. All way Listening.**

ಜಿ. ಇ. ಸಿ. ಬ್ಯಾಟರಿ ರೇಡಿಯೋ

(ಆಕಾಶವಾಣಿ ಯಂತ್ರ ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟದು)

**ನೀವು ಮನೆಯಲ್ಲಿ ಕೂತು**

- ಪ್ರಪಂಚದ ಸುದ್ದಿಗಳೆಲ್ಲಾ ಕೇಳುವಿರಿ
- ಮುಂಬೈ, ಮದ್ರಾಸು ಬಜಾರ ಧಾರಣೆಗಳನ್ನು ,,
- ಸುಪ್ರಸಿದ್ಧ ಗವಾಯಿಗಳ ವಾದ್ಯಗಳನ್ನು ,,
- ಪ್ರಪಂಚದ ಬಿಸಿ ಬಿಸಿ ವಾರ್ತೆಗಳನ್ನು ,,
- ಶ್ರೇಷ್ಠವಾದ ಉಪನ್ಯಾಸಗಳನ್ನು ,,
- ಹರಿಕಥಾ, ಭಜನೆ, ಪೂಜಾವಿಧಾನಗಳನ್ನು ,,
- ಹಾಸ್ಯರಸ ಪ್ರಧಾನವಾದ ನಾಟಕ ಭಾಗಗಳನ್ನು ,,

ಬ್ಯಾಟರಿಯಿಂದ ನಡೆಸಬಹುದು ಮಿತ ಖರ್ಚು;
ರೇಡಿಯೋ ಬೆಲೆ ಸುಲಭ, ಹೆಚ್ಚಿನ ವಿವರಗಳಿಗೆ ಬರೆಯಿರಿ.

ಏಜಂಟ್ಸ್:—

**ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.**

# ಕಾಶ್ಮೀರು ಅರಕ್

(ಮನೆಯ ವೈದ್ಯ)

**ಎಲ್ಲರ ಮನೆಯಲ್ಲೂ ಇರಬೇಕಾದ ಅವಶ್ಯಕ ಔಷಧ**

COUGH & COLD

ಅಂಗಾಂಗಗಳ ನೋವುಗಳಲ್ಲಾ ರಾಮಬಾಣ, ತಲೆಶೂಲೆ, ಗೆ ಕೆಮ್ಮು, ನೆಗಡಿ, ಉಬ್ಬಸ, ಅಜೀರ್ಣ ಶೀತಭೇದಿ, ಕ್ರಿಮಿಕೀಟಗಳ ಕಡಿತಕ್ಕೆ ಶೀಘ್ರ ಗುಣಕಾರಿ, ಹೊರಗೂ ಹಚ್ಚಬಹುದು ಮತ್ತು ಒಳಗೂ ತೆಗೆದುಕೊಳ್ಳಬಹುದು ಅನುಪಾನ ಔಷಧದ ಜೊತೆಯಲ್ಲಿ ಇರುವುದು.

**ಎಲ್ಲಾ ಷಾಪುಗಳಲ್ಲೂ ದೊರೆಯುತ್ತದೆ.**

**ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.**

—ಭಾರತದ ರಾಜ್ಯಘಟನೆ—

# ಘಟನೆಯಲ್ಲಿ ಸರ್ವಾಧಿಕಾರದ ಬೀಜಗಳು

## ಅಧ್ಯಕ್ಷನಿಗೂ ಮಂತ್ರಿಮಂಡಲಕ್ಕೂ ತಿಕ್ಕಾಟದ ಸಂಭವ

ಸ್ವತಂತ್ರ ಭಾರತದ ರಾಜ್ಯಘಟನೆಯ ಕರಡಿನ ಬಗ್ಗೆ ಪ್ರೊ. ವೆಂಕಟರಂಗಯ್ಯನವರು ತಮ್ಮ ಪುಸ್ತಕದಲ್ಲಿ ವ್ಯಕ್ತಗೊಳಿಸಿದ ವಿಚಾರಗಳ ಪೂರ್ವಾರ್ಧವನ್ನು ಸಾರರೂಪವಾಗಿ ತಾ.2 ರ ಸಂಚಿಕೆಯಲ್ಲಿ ಕೊಡಲಾಗಿದ್ದು, ಎರಡನೆಯ ಮತ್ತು ಕೊನೆಯ ಅರ್ಧ ಇಲ್ಲಿ ಕೊಡಲ್ಪಟ್ಟಿದೆ (ಕರ್ಮವೀರದಿಂದ)

**ಲೌಕಿಕ ರಾಜ್ಯ**

ಘಟನೆಯು ಕರಡಿನ ಮೂಲಕ ಸಂಕಲ್ಪಿಸಿದ ರಾಜ್ಯ ಜಾತ್ಯತೀತ ಲೌಕಿಕ ರಾಜ್ಯವಾಗಿರುವದು. ಇದು ವರ್ಣನಿಷ್ಠವಾದ ಪ್ರಾಚೀನ ಭಾರತೀಯ ಪದ್ಧತಿಯನ್ನೂ ಧರ್ಮನಿಷ್ಠವಾದ ಮುಸ್ಲಿಂ ಪದ್ಧತಿಯನ್ನೂ ಜಾತಿನಿಷ್ಠವಾದ ಬ್ರಿಟಿಷರು ಈ ದೇಶದಲ್ಲಿ ಹುಟ್ಟಿಸಿದ ಪದ್ಧತಿಯನ್ನೂ ತ್ಯಜಿಸಿ ಹೊಸ ಮಾರ್ಗವನ್ನವಲಂಬಿಸಿದೆ. ಮನುಷ್ಯರ ಜೀವನದ ವರ್ಣ ಜಾತಿ ಧರ್ಮಗಳನ್ನು ಮೀರಿ ಅವರ ಪರಸ್ಪರ ಸಂಪರ್ಕಗಳು ಅವಶ್ಯವೆಂಬ ವಿಶಾಲ ಮಾನವೀದೃಷ್ಟಿಯೇ ಈ ಹೊಸ ಹೆಜ್ಜೆಗೆ ಕಾರಣವಾಗಿದೆ. ಜಾತೀಯತೆಯ ವಿರುದ್ಧ ಮೊದಲಿನಿಂದಲೂ ಹೋರಾಡುತ್ತ ಬಂದಿದ್ದ ಕಾಂಗ್ರೆಸಿನ ನೇತೃತ್ವದಲ್ಲಿ ರೂಪಿಸಲ್ಪಟ್ಟ ಘಟನೆ ಸ್ವಾಭಾವಿಕವಾಗಿಯೆ ಜಾತ್ಯತೀತ ಲೌಕಿಕ ರಾಜ್ಯದ್ದಾಗಿದೆ.

ಇದು ಸಾಧ್ಯವಾಗುವಂತೆ ಮೂರನೆ ಮತ್ತು ನಾಲ್ಕನೆ ಭಾಗಗಳಲ್ಲಿ ನಾಗರಿಕನ ಮೂಲಭೂತ ಹಕ್ಕುಗಳನ್ನೂ ರಾಜ್ಯನೀತಿಯ ತತ್ವನಿರ್ದೇಶವನ್ನೂ ವಿಶದಗೊಳಿಸಲಾಗಿದೆ. ಧರ್ಮ, ವರ್ಣ, ಜಾತಿ, ಲಿಂಗಾದಿಗಳ ಕಾರಣದಿಂದ, ಯಾರ ವಿರುದ್ಧವೂ ಪಕ್ಷಪಾತ ಮಾಡಕೂಡದು. ಸರಕಾರಿ ನೌಕರಿಯಲ್ಲಿ ಎಲ್ಲರಿಗೂ ಸಮಾನ ಅವಕಾಶವಿರಬೇಕು. ಅಸ್ಪೃಶ್ಯತೆಯನ್ನು ರದ್ದುಗೊಳಿಸಲಾಗಿದೆ. ಕಾಯದೆಯ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಬೇಕಾದ ಧರ್ಮವನ್ನು ಅವಲಂಬಿಸಲು, ಪ್ರಚಾರಮಾಡಲು ಎಲ್ಲರಿಗೂ ಹಕ್ಕುಂಟು ಎಂದು ಘೋಷಿಸಲಾಗಿದೆಯಲ್ಲದೆ ಅಲ್ಪಸಂಖ್ಯಾಕರಿಗೆ ತಮ್ಮ ಧರ್ಮ ಸಂಸ್ಕೃತಿ ಭಾಷೆಗಳ ರಕ್ಷಣೆಗಾಗಿ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ಅವಕಾಶ ಕೊಡಲಾಗಿದೆ. ಈ ಮೂಲಕ ಜಾತಿ ವರ್ಣ-ಧರ್ಮ-ನಿಷ್ಠವಾದ ಭೇದಭಾವಗಳನ್ನು ಕಿತ್ತೊಗೆದು ಹಾಕಲ್ಪಟ್ಟಿವೆ. ರಾಜ್ಯನೀತಿ ನಿರ್ದೇಶದಲ್ಲಿಯೂ ಎಲ್ಲ ನಾಗರಿಕರಿಗೂ ಜೀವಿಕವನ್ನು ಗಳಿಸಲು ಸಮಾನಾವಕಾಶ, ಪುಕ್ಕಟೆಯಾದ ಪ್ರಾಥಮಿಕ ಶಿಕ್ಷಣ, ದುರ್ಬಲ ಅಲ್ಪಸಂಖ್ಯಾಕರ ಹಿತರಕ್ಷಣೆ ಮೊದಲಾದ್ದಕ್ಕೆ ಸರಕಾರ ವಿಶೇಷ ಗಮನವೀಯಬೇಕೆಂದು ಸೂಚಿಸಲಾಗಿದೆ.

ಆದರೆ ಜಾತೀಯತೆ ಪೂರ್ತಿಯಾಗಿ ಇನ್ನೂ ಘಟನಾ ಲೇಖಕರ ಮನಸಿನಿಂದ ತೊಳೆದು ಹೋಗಿಲ್ಲವೆಂದು ತೋರುತ್ತದೆ. ಸರಕಾರಿ ನೌಕರಿಗಳಲ್ಲಿ ಯಾವುದೊಂದು ಸಂಗಹಕ್ಕೆ ಸರಿಯಾದ ಪ್ರಾತಿನಿಧ್ಯವಿಲ್ಲೆಂದು ಸರಕಾರಕ್ಕೆ ಅನಿಸಿದರೆ ಅಂಥವರಿಗೆ ನೌಕರಿಗಳನ್ನು ಕಾದಿಡಬಹುದೆಂದು 10 ನೇ ಕಲಮಿನಲ್ಲಿ ಹೇಳಿದೆ. ನೌಕರಿಯಲ್ಲಿ ಪ್ರಾತಿನಿಧ್ಯವಿಲ್ಲದಾಕ್ಷಣ ಆ ಸಂಗದ ಹಿಂದುಳಿದೆಯೆಂದಾಗಲಿ ಅದನ್ನು ಕೊಟ್ಟಾಕ್ಷಣ ಅದು ಮುಂದೆ ಬರುವದೆಂದಾಗಲಿ ಹೇಳಲಾಗಲ್ಲ. ಇದರಿಂದ ಅತ್ಯಂತ ಅರ್ಹರನ್ನೆ ಸೇರಿಸಿಕೊಳ್ಳುವ ಬದಲು ಜಾತಿ- ಸಂಗದ ನೋಡಿ ಅನರ್ಹರನ್ನೂ ಸೇರಿಸಿಕೊಳ್ಳುವ ಅಯೋಗ್ಯ ಪರಂಪರೆ ಬರುವದು, ಅಲ್ಲದೆ ಒಕ್ಕೂಟ ಪಾರ್ಲಿಮೆಂಟಿನ ಕೆಳಮನೆಯಲ್ಲಿ ಯುರೋ ಮುಸ್ಲಿಮರಿಗೂ ಹರಿಜನರಿಗೂ ಹಾಗೆಯೆ ಮುಂಬಯಿ ಮದ್ರಾಸುಗಳಲ್ಲಿ ಕ್ರಿಶ್ಚನ್ನರಿಗೂ ಸ್ಥಾನಗಳನ್ನು ಕಾದಿರಿಸಿದ್ದು ಜಾತೀಯತೆಯ ಇನ್ನೊಂದ ಅವಶೇಷವೇ ಸರಿ. ಒಕ್ಕೂಟ ಕೆಳಮನೆಯ 500 ಸ್ಥಾನಗಳಲ್ಲಿ 137 ಹೀಗೆ ಕಾದಿಡಲ್ಪಟ್ಟ ಸ್ಥಳಗಳಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ಇವೂ ಇಂಥ ಇತರ ಕಲಮುಗಳೂ ಈಗಾಗಲೆ ಇರುವ ಜಾತೀಯ ರಾಜಕಾರಣವನ್ನು ಶಾಶ್ವತಗೊಳಿಸುವದು ಖಂಡಿತ.

ಇನ್ನು ಸಮತೆ, ಸ್ವಾತಂತ್ರ್ಯ ಸೊತ್ತಿನ ಒಡೆತನಗಳ ಹಕ್ಕುಗಳಲ್ಲದೆ ಧಾರ್ಮಿಕ ಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯಗಳೂ ಕೊಡಲ್ಪಟ್ಟಿವೆ. ಆದರೆ ಧರ್ಮಪ್ರಚಾರದ ಸ್ವಾತಂತ್ರ್ಯ ಕೊಟ್ಟಿದ್ದು ಅಕಾರಣ ದ್ವೇಷಾಸೂಯೆಗಳಿಗೆ ಕಾರಣವಾಗಬಹುದು. ಅದಿಲ್ಲದಿರುವದೇ ಲೇಸು.

ಈ ಎಲ್ಲ ಹಕ್ಕುಗಳು ನ್ಯಾಯಸ್ಥಾನದಲ್ಲಿ ಸ್ಥಾಪಿಸಲ್ಪಡಬಹುದಾದವು. ಅಂದರೆ ಅವಕ್ಕೆ ಧಕ್ಕೆಯು ಬಂದರೆ ನ್ಯಾಯಸ್ಥಾನಕ್ಕೆ ಹೋಗಿ ನಾಗರಿಕನು ಅವನ್ನು ಮಂಡಿಸಿ ಪಡೆಯಬಲ್ಲನು. ಇವಲ್ಲದೆ ಇನ್ನು ಕೆಲವು ನ್ಯಾಯಸ್ಥಾನದಲ್ಲಿ ಪಡೆಯಲಾರದ ಹಕ್ಕುಗಳೂ ಇವೆ. ಎಲ್ಲ ನಾಗರಿಕರಿಗೆ ಉದ್ಯೋಗ ಕೊಡುವದು, ನಿರುದ್ಯೋಗ ಕಾಲದಲ್ಲಿ ಸಹಾಯ ಮಾಡುವದು, ವೃದ್ಧಾಪ್ಯ, ಜಡ್ಡು, ಅಶಕ್ತಿ ಮೊದಲಾದ ಅವಸ್ಥೆಗಳಲ್ಲಿ ಸಹಾಯ ಕೊಡುವದೇ ಮೊದಲಾದ ಕರ್ತವ್ಯಗಳನ್ನು ಸರಕಾರಕ್ಕೆ ಕೊಡಲಾಗಿದೆ. ಆದರೆ ಇವು ಕೊನೆಯ ಧ್ಯೇಯಗಳು. ಒಡನೆ ಸಾಧಿಸಬರುವಂಥವಲ್ಲ. ಅವಕ್ಕೆ ವ್ಯವಧಾನ ಬೇಕಾಗುವದರಿಂದ ಅವನ್ನು ನ್ಯಾಯಸ್ಥಾನದ ಕಕ್ಷೆಯಿಂದ ಹೊರಗಿರಿಸಲಾಗಿದೆ.

**ಒಕ್ಕೂಟ ಆಡಳಿತ**

ಈ ವರೆಗೆ ಘಟನೆಯ ಕರಡಿಗೆ ಆಧಾರವಾಗಿರುವ ಮೂಲ ತತ್ವಗಳನ್ನು ಚರ್ಚಿಸಿದ್ದಾಯಿತು. ಈಗ ಅದು ಸಂಕಲ್ಪಿಸಿದ ಸರಕಾರದ ಯಂತ್ರವನ್ನು ಪರಾಮರ್ಶಿಸಬೇಕು. ಮೇಲೆ ಹೇಳಿದ ಮೂಲ ತತ್ವಗಳನ್ನು ಕೃತಿಗಿಳಿಸಲು ಅದು ಎಷ್ಟು ಮಟ್ಟಿಗೆ ಸಮರ್ಥವಿದೆಯೆಂದು ಆಗ ತಿಳಿಯುವದು.

ಮೊದಲು ಕೇಂದ್ರದ ಅಥವಾ ಒಕ್ಕೂಟದ ರಾಜ್ಯ ಪದ್ಧತಿಯನ್ನು ತೆಗೆದುಕೊಳ್ಳೋಣ.

ಪ್ರತಿಯೊಂದು ಆಧುನಿಕ ಸರಕಾರದಲ್ಲೂ ಕಾರ್ಯನಿರ್ವಹಣ ಶಾಖೆ, ಶಾಸನ ಸಭೆ ನ್ಯಾಯ ಶಾಖೆ ಮತ್ತು ನೌಕರವರ್ಗ ಎಂಬ ನಾಲ್ಕು ಅಂಗಗಳಿವೆ. ಒಕ್ಕೂಟ ಸರ್ಕಾರದ ಕಾರ್ಯನಿರ್ವಾಹಣ ಶಾಖೆ ಸರಕಾರದ ಮುಖ್ಯಸ್ಥನಾದ ಅಧ್ಯಕ್ಷ ಮತ್ತು ಅವನ ಮಂತ್ರಿ ಮಂಡಲದಿಂದೊಡಗೂಡಿದೆ. ಕೇಂದ್ರ ಪಾರ್ಲಿಮೆಂಟಿನ ಮೇಲ್ಮನೆ ಮತ್ತು ಕೆಳಮನೆಯ ಎಲ್ಲ ಸದಸ್ಯರೂ ಸಂಸ್ಥಾನಗಳ (ಘಟಕ) ಶಾಸನ ಸಭೆಗಳ ಚುನಾಯಿತ ಸದಸ್ಯರೂ ಸೇರಿ ಅಧ್ಯಕ್ಷನನ್ನು ಆರಿಸುತ್ತಾರೆ. ಹೀಗೆ ಅಧ್ಯಕ್ಷನು ಬರಿ ಕೇಂದ್ರದಿಂದ ಆರಿಸಲ್ಪಡದೆ ಘಟಕಗಳ ಪ್ರತಿನಿಧಿಯೂ ಆಗಿರುತ್ತಾನೆ. ಅವನು ಭಾರತದ ನಾಗರಿಕನಾಗಿರಬೇಕು 35 ವಯಸ್ಸು ಮಿಕ್ಕಿದವನಾಗಿರಬೇಕು ಮತ್ತು

# National Employment Service.

—●—

## I. Introduction.

With the unexpectedly sudden cessation of war in 1945, the great Nation of India was confronted with many problems of which, one of the most complex and certainly the most pressing was the demobilization, on an unprecedented scale of a very large number of the trained and disciplined members of the defence services and their prompt orderly absorption in Civil life with a view to provide them higher levels of employment and better standards of living. India comparatively has more potentilities and resources if properly and fully exploited for her industrial devolopment and economic advancement.

The men returning from services constituted fine human material and a national asset of a great value since they learnt new methods of organisation, new skilled and new techniques of production, and acquired a sense of responsibility, initative, enterprise resourcefulness and who through their contacts abroad with different peoples and different cultures acquired new ideas, new modes of thinking and new values. It was the duty of the Government to make the best use of this fine human material in the building of a better and more prosperous India.

## 2. Resettlement and Employment Organisation

In order to tackle the problem of resettlement on sound and scientific lines and as a result of the Government of India's decission to transfer the responsibility for the resettlement of exservice personnel from the Defence to the Labour department, the latter set up in July 1945 as an integrated Employment Service under a Directorate-General of Resettlement and Employment.

The establishment of such an organisation of great value marks the beginning of an important chapter in India's economic advancement. The new plan of the Resettlement and Employment organisation had with it the organism of self development and expansion so that it might be possible to develop it in course of time in to a full pledge national agency for prompting full employment and higher living and working standards.

## 4. Objects and functions of the Employment Exchanges

The Offices assist in (1) Collecting and making available information concerning labour supply and Employment opportunities and other information of value in prompting full Employment (2) Assisting employers to secure the most suitable workers and workers to find the most suitable employment and to ensure that the available workers and jobs are brought together as promptly and satisfactorily as possible (3) Devoloping methods to facilitate the necessary mobility of labour both occupational and Geographical (4) Assisting in devoloping and determining the scope of training and retraining courses. (5) Helping to achieve the best possible distribution of man power with in each industry and area

## Scope of Employment Exchanges:

Of late the Employment Exchanges and District Employment Offices which were previously restricted to cater to Ex-servicement, Discharged War Workers and other war service candidates have now been thrown open to all categories of employment seekers

## 6. How the Exchanges and District Employment Offices function

The offices are being manned by the Officers who have specialised training (in the art of interviewing, categorising candidates according to their apptitude and suitability and selecting right man for right jobs). The Exchanges District Employment Offices are run on a modern and scientific business like method in dealing with applicants. To balance the supply and demand in the labour market by transferring mobile labour from the surplus to the deficit area through its labour clearing machinery with its headquarters known as the Central Clearing House at Delhi and 8 Regional Clearing Houses attached to the Regional Exchanges one in each region.

Every exchange has a Publicity Section attached to it under a responsible trained Assistant Public Relations Officer to carry out Publicity on up-to-date lines

The Exchanges and District Employment Offices have seperate sections to meet the needs of women candidates and men applicants who seek higher posts of an administrative, managerial professional, scientific or technical charater. A Training Section exists where uneligible Ex-servicemen are interviewed, advised and arrangement made to post them to Technical and Vocational training centres situated in various places in the province for training in different trades with the usual concessions of a stipend of Rs 15 plus free boarding and lodging and disabled Ex-servicemen are explained the existance of the special training scheme and arrangement is made post them to suitable training according to the degree of the disability to enable to them to earn their living just as succesfully as others.

### 7. Advantages to the Employers:

The Employment Exchanges and D. E. Os. are inspired by one supreme ideal-free, prompt, efficient, impartial and voluntary service. They offer the employers a wider field of selection in recruitment than is possible by other means They save employer from incurring advertisement expenses and also the precious time so frequently spent in sorting out the suitable persons from the large heterogeneous mass of applicants. The offices offer the employers the skill they need and the Technique they seek while leaving their discretion unfettered for final employment and its terms and conditions, which is a matter of mutual arrangement between the employer and the employment seeker

### 8. Utility during emergency.

These offices just after partition, in a period of emergency, pulled their entire weight and proved their worth in a short span of time by placing in large numbers the displaced personnel from Pakistan in appointment so efficiently. The Exchanges and D. E. Os under the able guidance of the Regional Directorate R & E Madras rose up to the level beyond expectation in assisting to rise the Special Armed Police Units succesfully This is not a mean acheivement.

### 9. Growth of the District Employment Office, Bellary:

During the end of 1946 the Government of Madras felt that there was a need for employment office in each District taking into consideration the size of the Province Accordingly during the comencement of the year of 1947 District Employment Offices were established to **discharge the full functions of Employment Exchanges** in each Revenue District where an employment exchange was not set up These offices function as out houses of Employment Exchange covering the Revenue District. As a result of the decission of the Government a D. E O. was also opened on 1st January 47 under the charge of a gazetted officer trained for the purpose. There existed three offices with three different officers Now after retrenchment the D E O looks after the works of S A & D S S & A in addition to the Work previously entrusted to him.

From Jan. 1947 to July 1948, 1638 applications were received and 774 applicants were employed in the different branches through our exchange .

PRABHAKAR (Regd)
AMLA
HAIR OIL
Cooling and Refreshing
Promotes hair growth
ಪ್ರಭಾಕರ ಆಮ್ಲ
ಈ ತೈಲ ಲೇಪನೆಯಿಂದ ಕೂದಲು ಬೆಳವಣಿಗೆಗೆ ಸಹಾಯವಾಗುವುದು.
ತಂಪು - ಆಹ್ಲಾದಕರ.

K. V. & Sons Bellary.

SARADA INK
(Regd.)
Superfine Ink for Fountain Pens.
ಶಾರದ ಇಂಕು
(ರಿಜಿಸ್ಟರ್ಡ್)
ಫೌಂಟನ್ ಪೆನ್‌ಗಳಿಗೆ ಶ್ರೇಷ್ಠವಾದ ಮಸಿ ಅದ್ವಿತೀಯವಾದುದು.

ಕೆ. ವೀರಭದ್ರಪ್ಪ & ಸನ್ಸ್, ಬಳ್ಳಾರಿ.

# ಬಳ್ಳಾರಿ ಜಿಲ್ಲಾ ಗ್ರಾಮೋದ್ಯೋಗಿಗಳ ಸಭೆ

ಈ ಸಭೆಯು 6-8-48 ಶುಕ್ರವಾರ ಸಾಯಂಕಾಲ N.G.O. ಭವನದಲ್ಲಿ ಜಿಲ್ಲಾ ಕಲೆಕ್ಟರ್ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿತ್ತು. ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಪ್ರಾರಂಭಮಾಡುತ್ತಾ ಹೆಚ್ಚು ಬೆಳೆಯಲು ಯತ್ನಿಸಬೇಕೆಂದರು. ಸರಕಾರದವರೂ ವಿದ್ಯಾಭ್ಯಾಸಕ್ಕಾಗಿ 5 ಕೋಟಿ ರೂ. ಖರ್ಚುಮಾಡುತ್ತಿರುವದರಿಂದಲೂ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ವ ಹಕ್ಕವನ್ನು ಕೊಟ್ಟಿರುವದರಿಂದಲೂ ಗ್ರಾಮೋದ್ಯೋಗಿಗಳು ಈ ಕಡೆ ಧ್ಯಾನವೀಯಬೇಕೆಂದರು. ಎಲ್ಲಾ ಊರುಗಳಲ್ಲಿ ಶಾಲಾ ಕಟ್ಟಡ ಕೇಳುತ್ತಾರೆ. ಜಿಲ್ಲೆಯ 938 ಹಳ್ಳಿಗಳಲ್ಲಿ ಕಟ್ಟಡಗಳಿಗಾಗಿ 20-30 ಲಕ್ಷವೂ ಬೇಕಾದೀತು. ಇನ್ನು ಬಳ್ಳಾರಿಜಿಲ್ಲೆಯ ಪರ ಮೇರೆ ಮುಖ ಗವಾಕ್ಷಿಯೊಂದಿದೆ. ಹೈದರಾಬಾದುಗಡಿಯಲ್ಲಿ ಅಶಾಂತಿ ಇದೆ. ಆತ್ಮರಕ್ಷಣೆ, ಆಸ್ತಿಪಾಸ್ತಿ ಸ್ತ್ರೀಯರ ಮಾನಸಂರಕ್ಷಣೆ ಮಾಡಬೇಕೆಂದರು.

ಶ್ರೀ ಸಂಜೀವರಾಯರು ಸದ್ಯದಪರಿಸ್ಥಿತಿಯನ್ನೂ ಗ್ರಾಮೋದ್ಯೋಗಿಗಳ ಕರ್ತವ್ಯವನ್ನೂ ಹೇಳಿದರು.

ಶ್ರೀ ಎ. ಎಸ್. ಪಿ. ಅಯ್ಯರ್, ಜಿಲ್ಲಾ ಜಡ್ಜರೂ "ಸ್ವಾತಂತ್ರ್ಯಪ್ರದಾನದ ನಂತರ ನಮ್ಮ ನಮ್ಮಲ್ಲಿನ ದುರ್ಬಲತೆಯಿಂದ ಅನೈಕ್ಯವು ಹೆಚ್ಚಿ ಪರಿಸ್ಥಿತಿಯು ಕೆಡುತ್ತಲಿದೆಯೆಂದರು. ಹಳ್ಳಿಗಳ ಉದ್ಧಾರವು ಭಾಷಣಗಳಿಂದ ಸಾಧ್ಯವಿಲ್ಲ. ಪಂಚಾಯತಿ ರಾಜ್ಯದಿಂದಲ್ಲ. ಇಂದಿಗೂ ಪಂಚಾಯ್ತಿ ಪದ್ಧತಿಯು ಯಶಸ್ವಿಯಾಗಿಲ್ಲ. ಹಳ್ಳಿಗಳನ್ನು ಕೂಡಿಸಿ ಒಂದು ಕೇಂದ್ರ ಮಾಡಿ ಆಡಳಿತನಡೆಸುವುದೊಳ್ಳೆಯದು. ಗ್ರಾಮೋದ್ಯೋಗಿಗಳು ಈದಿಶೆಯಲ್ಲಿ ದುಡಿಯಬೇಕು" ಎಂದರು.

ಶ್ರೀ ಬೆಲ್ಲೋಣ ಭೀಮರಾಯರು M. L. C. ಗ್ರಾಮೋದ್ಯೋಗಿಗಳ ಕರ್ತವ್ಯ ಹಳ್ಳಿಗಳ ಕುಂದುಕೊರತೆಗಳನ್ನು ವಿವೇಚಿಸಿ ಶಾಸನಸಭೆಯಿಂದ ಅವರ ಪರಿಸ್ಥಿತಿ ಸುಧಾರಿಸುವೆವೆಂದರು.

ಶ್ರೀ ನಿಟ್ಟೂರ ಸಣ್ಣನಗೌಡರು ಗ್ರಾಮೋದ್ಯೋಗಿಗಳ ಪರವಾಗಿ ಮಾತಾಡುತ್ತ ಹೀಗೆ ಹೇಳಿದರು "ನಮ್ಮನ್ನು ಪೂರ್ಣಸರಕಾರಿ ನೌಕರರೆಂದರೆ ಪೂರ್ಣಸಂಬಳ ಕೊಡುವುದಿಲ್ಲ. ಸ್ವಲ್ಪಸಂಬಳ ಅತಿಹೆಚ್ಚು ಕೆಲಸ. ಎಷ್ಟೋ ಗ್ರಾಮೋದ್ಯೋಗಿಗಳು ವಿದ್ಯಾವಂತರೂ, ಅತ್ಯಂತ ಧನಿಕರೂ ಇರುವರು. ಗ್ರಾಮಗೌರವ ಹಿತಗಳಿಗಾಗಿ ದುಡಿಯುತ್ತಲಿರುವರು. ಅಂಥಹವರನ್ನು ಹೀನವಾಗಿ ಸರಕಾರದಧಿಕಾರಿಗಳು ನೋಡಿಕೊಳ್ಳುತ್ತಿರುವುದು ವಿಷಾದಕರವಾಗಿದೆ. ಜಮಾಬಂದಿ ಬಂದಿತೆಂದರೆ ಕೈಕಟ್ಟಿಕೊಂಡು ಗಂಟೆಗಟ್ಟಲೆ ನಿಂತುಕೊಳ್ಳಬೇಕು. ಅಪರಾಧಿ ಇದ್ದಂತೆ ಇರಬೇಕು. ಈ ಪದ್ಧತಿಯಾದರೂ ಏಕೆ ಇರಬೇಕು? ತೊಲಗಿಸಲು ಸಾಧ್ಯವಾಗಿದೆ.

ಇನ್ನು ಹಳ್ಳಿಗಳ ಹಣವೆಲ್ಲಾ ಪಟ್ಟಣಗಳ ಅಭಿವೃದ್ಧಿಗಾಗಿ ವೆಚ್ಚವಾಗುತ್ತಲಿದೆ. ಹಳ್ಳಿಗಳನ್ನು ಪೂರ್ಣವಾಗಿ ಉಪೇಕ್ಷಿಸುತ್ತಿರುವರು. ಟಾರ್ ಸಿಮೆಂಟ ರಸ್ತೆ, ಝಗಝಗದ ವಿದ್ಯುದ್ದೀಪಗಳು, ಆಸ್ಪತ್ರೆ, ಶಾಲೆ, ಎಲ್ಲಾ ಸೌಕರ್ಯಗಳೂ ಪಟ್ಟಣಗಳಲ್ಲೇ. ಪಟ್ಟಣಗಳು ಬೇಡವೆಂದಲ್ಲ, ಮದ್ರಾಸಿನಂಥ ಶೋಭಾಯಮಾನವಾದ ಪಟ್ಟಣಗಳಿರಬೇಕು ಸಹಜ. ಆದರೆ ಮುಕ್ಕಾಲುಪಾಲು ಹಣ ಉಪಯೋಗಿಸಿಕೊಂಡು ಕಾಲು ಪಾಲು ಆದರೂ ಈ ಹಳ್ಳಿಗಳಿಗೆ ಬೇಡವೇ? ಗ ಹಳ್ಳಿಗಳನ್ನು ಪಟ್ಟಣಗಳು ನುಂಗುತ್ತಲಿವೆ. ಈ ಪದ್ಧತಿಯು ಹೋಗಬೇಕು"

ಚರ್ಚೆಯನಂತರ ಈ ಕೆಳಕಿನ ನಿರ್ಣಯಗಳಾದವು.

೧) ಭಾರತದ ತಂದೆಯಾದ ಮಹಾತ್ಮ ಗಾಂಧಿಯವರ ನಿಧನಕ್ಕೆ ಈ ಸಭೆಯು ತನ್ನ ಹಾರ್ದಿಕ ಸಂತಾಪವನ್ನು ಸೂಚಿಸುತ್ತದೆ.

೨) ಆದವಾನಿಯ ರೆಡ್ಡಿ ಶ್ರೀ ಎ. ಪ್ರಹ್ಲಾದರಾಯರ ಅಕಾಲಿಕ ಮತ್ತು ಆಕಸ್ಮಿಕ ನಿಧನಕ್ಕೆ ಈ ಸಭೆಯು ತನ್ನ ವಿಷಾದವನ್ನು ಸೂಚಿಸಿ ಕುಟುಂಬಕ್ಕೆ ಸಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಪ್ರಹ್ಲಾದರಾಯರು ಸಂಘದ ಉತ್ಸಾಹೀ ಕಾರ್ಯಕರ್ತರಾಗಿದ್ದರು.

೩) ಗಾಂಧಿಸ್ಮಾರಕಕ್ಕೆ ಪ್ರತಿಗ್ರಾಮೋದ್ಯೋಗಿಯೂ 5 ಗಳಂತೆ ಕೊಡಲು ಈ ಸಭೆಯು ನಿಶ್ಚಯಿಸಿ ಆ ಹಣವನ್ನು ಸಂಗ್ರಹಿಸಲು ಕೇಳುತ್ತದೆ.

೪) ಸ್ವಾತಂತ್ರ್ಯ ಉತ್ಸವವನ್ನು ವೈಭವವಾಗಿ ನೆರವೇರಿಸಲು ಎಲ್ಲಾ ಗ್ರಾಮೋದ್ಯೋಗಿಗಳಿಗೆ ಈ ಸಭೆಯು ಕೇಳಿಕೊಳ್ಳುತ್ತದೆ.

# *Is he really dead?*

*( G. M. Ganganna, Yemmiganur. )*

1. Is he really dead ?
No, certainly not, for once he said,
"Truth will never die".
And Truth he was certainly was, none can deny

2. Poorer were we, one day,
Poor we became by his death to-day.
Rich to us his advice,
Richer we must be by his demise

3. Taller than the taller,
Smaller than the smaller was he ever.
Big were his ideas,
Bigger still were his ideals pious.

4. Should ever one such die ? -
We ask God if ever a God there lie.
"Whom do You punish ?
And whom to spare from death, Your wish?".

5. If to chide the unjust,
Why did you kill Gandhiji, the just.
"I'm impartial," if Thou sayeth,
What wrong did he to deserve this cruel death?".

6. For reply we waited in vain.
We no more declare You God again.
But make Gandhiji God
Our Bapu, our father and our lord.

7. He plunged India into chaos by defying
Authority but raised it free and glorifying.
Now again he in chaos drowned
Us for Hindu - Muslim Unity, being frowned.

8. Will we rise victorious again ?
Or shall we sink into hell and slavery again ?
Follow, follow, Gandhiji again.
To raise India glorified, follow not Satan even in pain

ಒಕ್ಕೂಟ ಪಾರ್ಲಿಮೆಂಟಿನ ಕೆಳಮನೆಗೆ ಆರಿಸಲ್ಪಡಲು ಅರ್ಹನಾಗಿರಬೇಕು. ಅವನ ಅಧಿಕಾರಾವಧಿ 5 ವರ್ಷ. ಆದರೆ ಪಾರ್ಲಮೆಂಟು (ಎರಡೂ ಮನೆ ಸೇರಿ) ೨/೩ ಅಂಶ ಬಹುಮತದಿಂದ ಅವನ ಮೇಲೆ ಘಟನೆಯನ್ನು ಉಲ್ಲಂಘಿಸಿದ ಆರೋಪ ಸ್ಥಾಪಿಸಿ ಅವನನ್ನು ಕಿತ್ತುಹಾಕಬಹುದು. ಒಬ್ಬನು ಎರಡು ಸಲಕ್ಕಿಂತ ಹೆಚ್ಚು ಅಧ್ಯಕ್ಷ ಪದಕ್ಕೆ ಆರಿಸಲ್ಪಡಲಾರನು. ಅವನಲ್ಲಿ ಔಪಚಾರಿಕವಾಗಿ ಒಕ್ಕೂಟದ ಸಮಸ್ತ ಕಾರ್ಯಾಧಿಕಾರವೂ ಸೈನ್ಯದ ದಂಡನಾಯಕತ್ವವೂ ನಿಹಿತವಾಗಿದೆ. ಇವನಲ್ಲದೆ ಉಪಾಧ್ಯಕ್ಷನೂ ಇದ್ದು ಅವನು ಮೇಲ್ಮನೆಯ ಶಾಶ್ವತ ಅಧ್ಯಕ್ಷನಾಗಿರುವನಲ್ಲದೆ ಅಧ್ಯಕ್ಷರ ಗೈರಹಾಜರಿಯಲ್ಲಿ ಅವನ ಅಧಿಕಾರಗಳನ್ನು ನಡೆಸುವನು. ಅವನನ್ನು ಪಾರ್ಲಮೆಂಟು ಆರಿಸುವದು.

ನಿಜವಾದ ಅಧಿಕಾರ ಮಂತ್ರಿಮಂಡಲದಲ್ಲಿರುವದು. ಅದು ಬ್ರಿಟಿಶ ಮಂತ್ರಿಮಂಡಲದಂತೆ ಪಾರ್ಲಿಮೆಂಟಿನ ಕೆಳಮನೆಗೆ ಹೊಣೆಗಾರವಾಗಿರುವದರಿಂದ ಬಹುಮತದ ಬೆಂಬಲವುಳ್ಳವನನ್ನೇ, ಬೆಂಬಲವಿದ್ದಷ್ಟು ಕಾಲ ಮಾತ್ರ, ಮುಖ್ಯಮಂತ್ರಿಯಾಗಿ ಅಧ್ಯಕ್ಷನು ನೇಮಿಸಬೇಕು. ಮತ್ತು ಅವನ ಮಂತ್ರಿಮಂಡಲದ ಸಲಹೆಯಂತೆ ನಡೆದುಕೊಳ್ಳಬೇಕು.

ಹೀಗೆ ಹೊಣೆಗಾರ ಮಂತ್ರಿಮಂಡಲವೇ ನಿಜವಾದ ರಾಜ್ಯಭಾರ ಮಾಡುವದು. ಈ ಪಾರ್ಲಿಮೆಂಟರಿ ಪದ್ಧತಿಯನ್ನು ಅಂಗೀಕರಿಸಲಾಗಿದ್ದರೂ ಯಾವುದೊಂದು ಮಸೂದೆಯ ವಿಷಯಕ್ಕೆ ಅಧ್ಯಕ್ಷನಿಗೆ ಅಸಮಾಧಾನವಿದ್ದರೆ ಆ ಬಗ್ಗೆ ಅವನು ನೇರವಾಗಿ ಪಾರ್ಲಿಮೆಂಟಿಗೆ ಸಂದೇಶ ಕಳಿಸಬಹುದೆಂದು ವಿಧಿಸಲ್ಪಟ್ಟಿರುವದರಿಂದ ಮಂತ್ರಿಮಂಡಲಕ್ಕೂ ಅಧ್ಯಕ್ಷನಿಗೂ ತಿಕ್ಕಾಟವುಂಟಾಗದಿರದು. ಅಮೇರಿಕೆಯಲ್ಲಿ ಈ ಪದ್ಧತಿಯಿರುವದು ನಿಜ. ಆದರೆ ಅಲ್ಲಿ ಅಧ್ಯಕ್ಷನ ಮಂತ್ರಿಮಂಡಲ ಶಾಸನ ಸಭೆಗೆ ಹೊಣೆಗಾರವೂ ಅಲ್ಲ. ಶಾಸನ ಸಭೆಯ ಕಾರ್ಯಕಲಾಪಗಳ ಲಗಾಮೂ ಮಂತ್ರಿಮಂಡಲದ ಕೈಯಲ್ಲಿಲ್ಲ. ಆದ್ದರಿಂದ ಶಾಸನ ಸಭೆ ದಾರಿ ತಪ್ಪಿದಾಗ ಅಧ್ಯಕ್ಷನು ಸಂದೇಶ ಕಳಿಸುವದು ವಿಹಿತ. ಆದರೆ ಭಾರತದ ಮಂತ್ರಿಮಂಡಲ ಹೊಣೆಗಾರವಿದೆ. ಅದು ಸ್ವಾಭಾವಿಕವಾಗಿಯೆ ಪಾರ್ಲಿಮೆಂಟಿನ ಎಲ್ಲ ಕಾರ್ಯಕಲಾಪಗಳ ನೇತೃತ್ವ ವಹಿಸುವದು. ಹೀಗಿರುವಾಗ ಪಾರ್ಲಿಮೆಂಟಿಗೆ ಅಧ್ಯಕ್ಷನು ಸಂದೇಶ ಕಳಿಸುವದೆಂದರೆ ಮಂತ್ರಿಮಂಡಲಕ್ಕೂ ಅಧ್ಯಕ್ಷನಿಗೂ ತಿಕ್ಕಾಟ ಬರುವದಲ್ಲದೆ ಇವರಿಬ್ಬರಲ್ಲಿ ಯಾರಿಗೆ ಮನ್ನಣೆ ಕೊಡಬೇಕೆಂದು ಪಾರ್ಲಿಮೆಂಟಿಗೆ ಸಮಸ್ಯೆಯುಂಟಾಗುವದು. ಹೀಗಾದರೆ ಆಡಳಿತ ಸುಸೂತ್ರವಾಗಿ ಸಾಗಲಾರದು. ಅಲ್ಲದೆ ಪಾರ್ಲಿಮೆಂಟು ಪಾಸುಮಾಡಿ ಕಳಿಸಿದ ಮಸೂದೆಯನ್ನು ಪುನರ್ವಿಚಾರಿಸಬೇಕೆಂದು ಅಧ್ಯಕ್ಷನು ತಿರುಗಿ ಪಾರ್ಲಿಮೆಂಟಿಗೆ ಕಳಿಸಬಹುದೆಂದು ಹೇಳಲಾಗಿದೆ


# THE VYSYA BANK LIMITED.

(Incorporated In Mysore. Liability of Members Limited

**A SCHEDULED BANK**

**Head Office:–BANGALORE City.**

*Madras Branch: 1,217 Govindappa Naik Street*

| CAPITAL. | |
|---|---|
| Authorised | Rs. 20,00,000 |
| Issued & Subscribed | Rs. 20,00,000 |
| Called & Paid up | Rs 11,83,000 |
| Reserve fund | Rs. 1,55,500 |

**BRANCHES:**
Chitaldrug, Davangere, Hindupur, Kadiri, Markapur, Chintamani, Bowringpet, Mysore, Kollegal, Kadur, Mulbagal, (Sub-branch) Bellary, Chickballapur (Sub-branch), Madras & Shevapet (Salem).

Banking business of every description transacted.

Fixed deposits are received and interest allowed from 2 to 3½ P. A.

On terms which can be had from any office of the Bank.

**J. Suryanarayana Chetty, B. A.,**
*Secretary.*

# ದಿ ವೈಶ್ಯ ಬ್ಯಾಂಕ್ ಲಿಮಿಟೆಡ್.

(ಶೆಡ್ಯೂಲ್ಡ ಬ್ಯಾಂಕ್.)

(ಮೈಸೂರಲ್ಲಿ ಸ್ಥಾಪಿತ - ಸದಸ್ಯರ ಹೊಣೆಗಾರಿಕೆ ಸೀಮಿತವಾಗಿದೆ).

ಮುಖ್ಯ ಕಾರ್ಯಾಲಯ:- **ಬೆಂಗಳೂರ ನಗರ.**

ಮದ್ರಾಸ್ ಶಾಖೆ:–1/217 ಗೋವಿಂದಪ್ಪನಾಯಕ ಬೀದಿ

| | |
|---|---|
| ಅಧಿಕೃತ ಭಂಡವಲ | ರೂ.೨೦,೦೦,೦೦೦ |
| ಸಾರ್ವಜನಿಕರಿಗೆ ತೆಗೆದಿಟ್ಟದ್ದು ಮತ್ತು ಚಂದಾ | ,, ೨೦,೦೦,೦೦೦ |
| ಬೇಡಿದ ಮತ್ತು ಬಂದ ಮೊತ್ತ | ,, ೧೧ ೮೩,೦೦೦ |
| ಆಪದ್ಧನ | ,, ೧,೫೫,೫೦೦ |

**ಇತರ ಶಾಖೆಗಳು.**
ಚಿತ್ರದುರ್ಗ, ದಾವಣಗೆರೆ, ಹಿಂದೂಪುರ, ಕದಿರಿ, ಮಾರ್ಕಾಪುರ, ಚಿಂತಾಮಣಿ, ಬೌರಿಂಗ್‌ಪೇಟೆ, ಮೈಸೂರು, ಕೊಳ್ಳೆಗಾಲ, ಕಡೂರು, ಮುಳಬಾಗಲು, (ಸಬ್-ಬ್ರಾಂಚ್) ಬಳ್ಳಾರಿ, ಚಿಕ್ಕಬಳ್ಳಾಪುರ (ಸಬ್ ಬ್ರಾಂಚ್) ಮದ್ರಾಸ್ ಮತ್ತು ಶಿವಾಪೇಟೆ (ಸೇಲಂ).

ಎಲ್ಲಾ ವಿಧವಾದ ಬ್ಯಾಂಕಿನ ವ್ಯವಹಾರವು ಇಲ್ಲಿ ನಡೆಯುತ್ತದೆ. ಶೇಕಡ ವರ್ಷಕ್ಕೆ 2 ರೂ. ರಿಂದ 3½% ವರೆಗೆ ಬಡ್ಡಿಯನ್ನು ಕೊಟ್ಟು ಸ್ಥಾಯೀ ಠೇವಣಿಗಳನ್ನು ಸ್ವೀಕರಿಸುತ್ತೇವೆ. ಬ್ಯಾಂಕಿನ ಯಾವ ಕಛೇರಿಯಿಂದಾದರೂ ನಮ್ಮ ನಿಯಮ ನಿಬಂಧನೆಗಳನ್ನರಿಯಬಹುದು.

**ಜೆ. ಸೂರ್ಯನಾರಾಯಣ ಶೆಟ್ಟಿ**, ಬಿ. ಎ.,
ಕಾರ್ಯದರ್ಶಿ.

ಆದರೆ ಪಾರ್ಲಿಮೆಂಟು ತಿರುಗಿ ಅದನ್ನು ಅದಕ್ಕಿದ್ದಂತೆಯೇ ಪಾಸುಮಾಡಿದರೆ ಅಧ್ಯಕ್ಷನು ಅದನ್ನೊಪ್ಪಲೇಬೇಕೆಂಬ ಸ್ಪಷ್ಟ ನಿರ್ದೇಶವಿಲ್ಲ ಆದ್ದರಿಂದ ದೊಡ್ಡ ಗಂಡಾಂತರವುಂಟು. ಇಂಥ ನಿರ್ದೇಶವಿರಲೆ ಬೇಕು. ಇಲ್ಲದಿದ್ದರೆ ಅಧ್ಯಕ್ಷನು ಪಾರ್ಲಿಮೆಂಟನ್ನು ಧಿಕ್ಕರಿಸಿ ಮನಬಂದಂತೆ ನಡೆಯಬಹುದು ಇದು ಸರ್ವಾಧಿಕಾರವಲ್ಲದೆ ಮತ್ತೇನು?

ಒಕ್ಕೂಟದ ಶಾಸನ ಸಭೆಗೆ ಪಾರ್ಲಿಮೆಂಟೆಂದು ಹೆಸರಿಡಲಾಗಿದೆ. ಅದರಲ್ಲಿ ಎರಡು ಭವನಗಳು. ಮೇಲ್ಮನೆ ಅಥವಾ ಸಂಸ್ಥಾನ ಮಂಡಲ ಮತ್ತು ಕೆಳಮನೆ ಅಥವಾ ಜನತಾ ಸಭೆ

ಮೇಲ್ಮನೆಯಲ್ಲಿ 250 ಸದಸ್ಯರು. ಅವರಲ್ಲಿ 15 ಜನರನ್ನು ಅವರ ತಜ್ಞತೆಯನ್ನು ನೋಡಿ ಅಧ್ಯಕ್ಷನೇ ನೇಮಿಸುವನು. ಉಳಿದ 235ರಲ್ಲಿ ನೂರಕ್ಕೆ 40 ಕ್ಕಿಂತ ಹೆಚ್ಚಾಗದಂತೆ ಸಂಸ್ಥಾನಗಳಿಂದಲೂ (ಉಳಿದ ಈಗಿನ ಪ್ರಾಂತಗಳು) ಆರಿಸಲಾಗುವದು. ಸಂಸ್ಥಾನ ಶಾಸನ ಸಭೆಗಳ ಚುನಾಯಿತ ಸದಸ್ಯರು ಇವರನ್ನು ಆರಿಸುವರು. ಹೀಗೆ ಮೇಲ್ಮನೆಯೊಂದು ಸಂಸ್ಥಾನಗಳ ಪ್ರತಿನಿಧಿಯಾಗಿರುವದು. ಅದು ಶಾಶ್ವತ ಸಂಸ್ಥೆ ಅಮೇರಿಕನ್ ಸಿನೇಟಿನಂತೆ ಇದರಲ್ಲಿಯೂ ಎರಡು ವರ್ಷಕ್ಕೊಮ್ಮೆ ಇದರಲ್ಲಿ ಒಂದಂಶ ಸದಸ್ಯರು ನಿವೃತ್ತರಾಗಿ ಅವರ ಸ್ಥಾನಕ್ಕೆ ಹೊಸ ಚುನಾವಣೆ ಆಗುವದು.

ಜನತಾ ಸಭೆ ಅಥವಾ ಕೆಳಮನೆಯಲ್ಲಿ 500ಕ್ಕಿಂತ ಹೆಚ್ಚು ಸದಸ್ಯರಿರದಂತೆ, ಇಡೀ ಭಾರತದಲ್ಲಿ 21 ವಯಸ್ಸಿಗಿಂತ ಹೆಚ್ಚಾದ ಎಲ್ಲ ಪ್ರೌಢರಿಂದೊಡಗೂಡಿದ ಪ್ರಾದೇಶಿಕ ಮತದಾರ ಸಂಘಗಳಿಂದ ಆಯ್ಕೆಗಳು ರದ್ದಾಗುವವು. ಜನತಾ ಸಭೆಯ ಅವಧಿ 5 ವರ್ಷ. ಅವಶ್ಯಬಿದ್ದಲ್ಲಿ ಇದರ ಅವಧಿಯನ್ನು ಹೆಚ್ಚಿಸಬಹುದು. ಇಲ್ಲವೆ ಪ್ರಸಂಗ ಬಂದಲ್ಲಿ ಅದನ್ನು 5 ವರ್ಷಕ್ಕಿಂತ ಮೊದಲೇ ವಿಸರ್ಜಿಸಬಹುದು ಮಂತ್ರಿಗಳ ಮೇಲೆ ಅವಿಶ್ವಾಸ ಗೊತ್ತುವಳಿ ಮೊದಲಾದವುಗಳಿಗೆ ಸಂಬಂಧಿಸಿದ ಕಲಮುಗಳೆಲ್ಲ ಸ್ಪಷ್ಟವಾಗಿವೆ

ಹಣಕಾಸಿನ ಮಸೂದೆಗಳನ್ನು ಹೊರತು ಉಳಿದ ಮಸೂದೆಗಳಿಗೆ ಎರಡೂ ಸಭೆಗಳ ಸಮ್ಮತಿ ಬೇಕು. ಹಣಕಾಸಿನ ಮಸೂದೆ ಮಾತ್ರ ಕೆಳಮನೆಯ ಸಮ್ಮತಿ ದೊರೆಯದಿದ್ದರೂ ಕಾಯದೆಯಾಗುವದು ಪಾರ್ಲಿಮೆಂಟಿನ ಅಧಿವೇಶನ ನಡೆಯುತ್ತ ಇಲ್ಲದ ಸಮಯದಲ್ಲಿ ಅಧ್ಯಕ್ಷನು ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು. ಆದರೆ 6 ತಿಂಗಳಿಗೊಮ್ಮೆಯಾದರೂ ಪಾರ್ಲಿಮೆಂಟನ್ನು ಕೂಡಿಸಲೇಬೇಕಾಗುವದು. ಮತ್ತು ಪಾರ್ಲಿಮೆಂಟು ಕೂಡಿ 6 ವಾರದೊಳಗೆ ಸುಗ್ರೀವಾಜ್ಞೆಗೆ ಅದರ ಸಮ್ಮತಿ ದೊರೆಯದಿದ್ದರೆ ಅದು ತಾನಾಗಿಯೆ ರದ್ದಾಗುವದು.

ನ್ಯಾಯದಾನವನ್ನು ಘನತೆ, ಸ್ವಾತಂತ್ರ್ಯ ನಿಷ್ಪಕ್ಷಪಾತಗಳಿಂದ ಮಾಡಬಲ್ಲ ನ್ಯಾಯಸ್ಥಾನಗಳು ಘಟನೆಯ ಪ್ರಕಾರ ನಿರ್ಮಿಸಲ್ಪಡುವವೆಂಬಲ್ಲಿ ಸಂಶಯವಿಲ್ಲ. ಎಲ್ಲಕ್ಕಿಂತ ಉಚ್ಚನ್ಯಾಯಸ್ಥಾನ ವರಿಷ್ಠ ನ್ಯಾಯಾಲಯ. ಅದರಲ್ಲಿ ಮುಖ್ಯ ನ್ಯಾಯಾಧೀಶ ಹಾಗು ಕಡಿಮೆಯೆಂದರೆ ಇನ್ನೇಳು ನ್ಯಾಯಾಧೀಶರಿರುವರು ಇವರನ್ನೆಲ್ಲ ಅಧ್ಯಕ್ಷನೇ ವರಿಷ್ಠ ಹಾಗೂ ಸಂಸ್ಥಾನಗಳ ಹೈಕೋರ್ಟಿನ ನ್ಯಾಯಾಧೀಶರ ಅಭಿಪ್ರಾಯ ಕೇಳಿ ನೇಮಿಸುವನು. ಪಾರ್ಲಿಮೆಂಟಿನಲ್ಲಿ ⅔ ಅಂಶ ಸದಸ್ಯರು ಮತವಿತ್ತು ಹೀಗೆ ನಿರ್ಣಯಿಸಿದರೆ ನ್ಯಾಯಾಧೀಶರನ್ನು ಕಿತ್ತುಹಾಕಬಹುದು. ವರಿಷ್ಠ ನ್ಯಾಯಸ್ಥಾನಕ್ಕೆ ಅಪೀಲುಗಳ ತೀರ್ಮಾನವಲ್ಲದೆ ಕೇಂದ್ರಕ್ಕೂ ಘಟಕಗಳಿಗೂ ಹಾಗೆಯೇ ಘಟಕಕ್ಕೂ ಘಟಕಕ್ಕೂ ಬರುವ ವಿವಾದಗಳಲ್ಲಿ ತೀರ್ಮಾನ ಹೇಳುವ ಅಧಿಕಾರವಿದೆ.

ಸರಕಾರಿ ನೌಕರಿಗಳಲ್ಲಿ ರಾಜಕೀಯ ಪ್ರಭಾವ, ವೈಯಕ್ತಿಕ ಲಹರಿಗಳ ಕೈವಾಡ ಬರಕೂಡದು, ಇಲ್ಲದಿದ್ದರೆ ನೌಕರಶಾಹಿಯ ಕಾರ್ಯಕ್ಷಮತೆಗೆ ಆತಂಕ ಬಾರದಿರದು. ಆ ದೃಷ್ಟಿಯಿಂದ ನೌಕರಿಗಳಿಗೆ ಭರ್ತಿಮಾಡುವ ಅಧಿಕಾರ ಪದೇ ಪದೇ ಬದಲಾಗುವ ಮಂತ್ರಿಮಂಡಲಗಳಿಗಿರತಕ್ಕದ್ದಲ್ಲವೆಂದು ಕೇಂದ್ರದಲ್ಲಿ ಅಧ್ಯಕ್ಷನಿಂದಲೂ ಪ್ರಾಂತಗಳಲ್ಲಿ ಗವರ್ನರನಿಂದಲೂ ನೇಮಿಸಲ್ಪಡುವ ಪಬ್ಲಿಕ್ ಸರ್ವಿಸ್ ಕಮಿಶನ್ ಇಲ್ಲವೆ ನೌಕರಿ ಭರ್ತಿಮಂಡಲಗಳ ವ್ಯವಸ್ಥೆ ಮಾಡಲಾಗಿದೆ. ಆದರೆ ನೌಕರಿಗಳನ್ನು ಜಾತೀಯ ತಳಹದಿಯ ಮೇಲೆ ಹಂಚುವ ತತ್ವವನ್ನು ಹೊಸ ಘಟನೆ ಇನ್ನೂ ಪೂರ್ತಿಯಾಗಿ ತ್ಯಜಿಸದೆ ಇರುವದರಿಂದ ಇಂಥ ಕಮಿಶನ್‌ಗಳ ಕಾರ್ಯ ಆಗಬೇಕಾದಷ್ಟು ಯೋಗ್ಯವಾಗಿ ಆಗಲಾರದು. ಜಾತೀಯ ತಳಹದಿಯ ಮೇಲೆ ನೌಕರಿ ಸಂಪಾದಿಸಿದವರು ಸ್ವಜಾತಿಯ ಹಿತಸಂಬಂಧಗಳಿಗೇ ಮೇಲ್ಪಂಕ್ತಿ ಕೊಡುವದು ಸ್ವಾಭಾವಿಕ.

"ಗಂಡಾಂತರ ಕಾಲದ ವ್ಯವಸ್ಥೆಗಳ" ಒಂದು ದೊಡ್ಡ ಭಾಗವೇ ಘಟನೆಯ ಕರಡಿನಲ್ಲಿ ಇದೆ. ಯುದ್ಧದಿಂದಾಗಲಿ ಅಂತರಿಕ ಹಿಂಸಾಚಾರದಿಂದಾಗಲಿ ಭಾರತದ ಸುರಕ್ಷಿತತೆಗೆ ಗಂಡಾಂತರವುಂಟಾದರೆ ಆಗ "ಗಂಡಾಂತರ ಬಂದಿದೆ" ಎಂದು ಸಾರಿ ಅಧ್ಯಕ್ಷನು ಸರ್ವಾಧಿಕಾರ ಪ್ರಾಯವಾದ

---

## ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S. C 170/48.

ವಾದಿ:—

I S. ಗುರುಲಿಂಗಪ್ಪ ತಂದೆ ಶಿವರುದ್ರಪ್ಪ, ಮೇಜರ್, ವೀರಶೈವ, ವ್ಯಾಪಾರ, ಕೊಟ್ಟೂರು.

ಪ್ರತಿವಾದಿ:—

ಮೊರಗೇರಿ ಬಣಜಿಗರ ಕೊಟ್ರಬಸಪ್ಪ, ತಂದೆ ವೀರಭದ್ರಪ್ಪ, ಮೇಜರ್, ವೀರಶೈವ ಜರಾಯ್ತಿ, ಕೊಟ್ಟೂರು

19—9-47ನೇ ತೇದಿ ಪ್ರತಿವಾದಿ ಪೆಸರ್ಲ್ಲಿ ರೂ. 100ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು, ಬಡ್ಡಿ ಮತ್ತು ಲಾಯರ ನೋಟೀಸು ಖರ್ಚುಗಾಗಿ ರೂ 109—5—6ಗೆ ದಾವಾ ಮಾಡಿರುತ್ತದೆ 20—8 48 ಕ್ಕೆ ವಾಯಿದಾ ಇರುತ್ತದೆ. ಪ್ರತಿವಾದಿ ಆ ದಿನ್ನ ಮುಂಜಾನೆ 11 ಗಂಟೆಗೆ ಖುದ್ದಾಗಲಿ ವಕೀಲರ ದ್ವಾರಾಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಆಗುತ್ತದೆ

ಹೊಸಪೇಟೆ 2—8—48 | ಎ. ಆರ್. ಕೃಷ್ಣರಾವ್ರು, ವಾದಿಯ ಅಡ್ವೋಕೇಟ್

---

## ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S. C 259/48

ವಾದಿ:—

ಪುರಾಣದ ಶ್ರೀನಿವಾಸಾಚಾರು. ತಂದೆ ಕೃಷ್ಣಾಚಾರು 40, ಬ್ರಾಹ್ಮಣ ಪೆನ್‌ಶನರ್ ಹೊಸಪೇಟೆ.

ಪ್ರತಿವಾದಿ:—

ಕರಣಂ ಲಕ್ಷ್ಮಣರಾವ್ರು alias L. R. ಕುಲಕರ್ಣಿ, ತಂದೆ ಹೆಸರು ತಿಳಿಯದು 40 ಬ್ರಾಹ್ಮಣ, ಹೊಸೂರು ಕರಣಂ. ಹೊಸಪೇಟೆ

23-7-47ನೇ ತೇದಿ ಪ್ರತಿವಾದಿ ವಾದಿ ಪೆಸರ್ಲ್ಲಿ ರೂ. 200ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು ಬಡ್ಡಿಗಾಗಿ ರೂ. 222—1—0ಗೆ ದಾವಾ ಮಾಡಿರುತ್ತದೆ. 18—8—48 ಕ್ಕೆ ವಾಯಿದಾ ಇರುತ್ತದೆ. ಆ ದಿನ್ನ ಪ್ರತಿವಾದಿ ಮುಂಜಾನೆ 11 ಗಂಟೆಗೆ ಖುದ್ದಾಗಲಿ ವಕೀಲರ ದ್ವಾರ ಆಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಆಗುತ್ತದೆ

ಹೊಸಪೇಟೆ. 3-8-48 | ಎ. ಆರ್. ಕೃಷ್ಣರಾವ್ರು, ವಾದಿಯ ಅಡ್ವೋಕೇಟರು

# B. V. BUDUR.

**Photographers, Watch Dealers, Repairers & Photo Goods Dealers,**

**Head Office:-BELLARY.** **Branch:-HOSPET.**

**ಬಿ. ವಿ. ಬೂದೂರ,**

ಫೋಟೋಗ್ರಾಫರ್ಸ್, ಫೋಟೋಸಾಮುಗ್ರಿಗಳ ವ್ಯಾಪಾರಗಾರರು, ವಾಚ್ ಡೀಲರ್ಸ ಮತ್ತು ರಿಪೇರರ್ಸ,

ಹೆಡ್ ಆಫೀಸ - **ಬಳ್ಳಾರಿ.** ಬ್ರಾಂಚ - **ಹೊಸಪೇಟೆ.**

Electric Studio a speciality
Excellent Workmanship
Executed promptly
Expeditiously delivered
Enlargement of photos undertaken

We deal in the watches West End, Favre Leuba, Zenith & other famous Swiss Watch Companies & our service a speciality. We have a separate department of experts to repair any Watch, Time Piece or Clock.

**Reasonable Charges**

Hitherto Scarce
Roll Films are available now for sale

ಇಲ್ಲಿಯವರೆಗೆ ಅಪರೂಪವಾಗಿದ್ದ ರೋಲ್ ಫಿಲಿಂಗಳು ಈಗ ನಮ್ಮಲ್ಲಿ ದೊರೆಯುತ್ತವೆ. ವಿದ್ಯುದ್ದೀಪಗಳ ಸಹಾಯದಿಂದ ಕರೆಂಟ್ ಇರುವ ಸಮಯದಲ್ಲೆಲ್ಲಾ ನಮ್ಮ ಸ್ಟುಡಿಯೋದಲ್ಲಿ ಫೋಟೋ ತೆಗೆಯಲಾಗುವುದು. ಹೊರಗಿನ ಕಾರ್ಯವನ್ನು ನಾವು ತೆಗೆದುಕೊಳ್ಳುವೆವು. ಫೋಟೋಗಳನ್ನು ದೊಡ್ಡ [illegible] ಮಾಡಲಾಗುವುದು. ವಾಚ್ ರಿಪೇರಿ ನಡೆಯುವುದು.

ನಮ್ಮಲ್ಲಿ ವೆಸ್ಟ ಎಂಡ್, ಫೇವ್ರಲ್ಯೂಬ, ಜೆನಿತ್ ಮೊದಲಾದ ಎಲ್ಲಾ ಸುಪ್ರಸಿದ್ಧ ಕಂಪನಿಗಳ ವಾಚುಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ನಾವು ನಿಶ್ಚಿತ ಗ್ಯಾರಂಟಿ ಕೊಡುವೆವಲ್ಲದೆ ನಿಮ್ಮ ವಾಚು, ಟೈಂಪೀಸ್ ಕ್ಲಾಕ್‌ಗಳನ್ನು ನಮ್ಮ ಅನುಭವಿ ನೌಕರರಿಂದ ರಿಪೇರಿ ಮಾಡಿಸಿಕೊಡುತ್ತೇವೆ. ಒಂದು ಸಲ ಪರೀಕ್ಷಿಸಿರಿ.

ಒಂದು ಸಲ ಬಂದರೆ ಯಾವಾಗಲೂ ಬರುವಿರಿ


ಅಧಿಕಾರವನ್ನು ಪಡೆಯುವನು. ಇಂಥ ನಿಯಮಗಳನ್ನು ಗಂಡಾಂತರಗಳನ್ನು ಎದುರಿಸಲು ಅವಶ್ಯವಾದರೂ ಕರಡಿನಲ್ಲಿ ಸೂಚಿಸಲ್ಪಟ್ಟಂತೆಯೆ ಆ ಕಲಮುಗಳು ಉಳಿದರೆ ಸರ್ವಾಧಿಕಾರಿ ರಾಜಪ್ರಭುತ್ವಕ್ಕೆ ದಾರಿಮಾಡಿಕೊಟ್ಟಂತಾಗುವದು. ಗಂಡಾಂತರ ಕಾಲದಲ್ಲಿ ಘಟಕಗಳು ಹೀಗೆ ಹೀಗೆಯೆ ಆಚರಿಸಬೇಕೆಂದು ಅಧ್ಯಕ್ಷನು ಆಜ್ಞಾಪಿಸಬಹುದು, ಘಟಕಗಳು ಕೊಡಬೇಕಾದ ಧನಸಹಾಯವನ್ನು ನಿರ್ಧರಿಸಬಹುದು, ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಎಲ್ಲ ಮೂಲಭೂತ ಹಕ್ಕುಗಳನ್ನು ರದ್ದುಗೊಳಿಸಬಹುದು. ಹೀಗಾದಾಗ ಘಟಕಗಳ ಹಕ್ಕುಗಳೆಲ್ಲ ಹೋಗಿ ಕೇಂದ್ರವೇ ಸರ್ವಶಕ್ತವಾಗುವದೆಂದು ಅರ್ಥ. ಗಂಡಾಂತರ ಸ್ಥಿತಿ ನಿಜವಾಗಿ ತಲೆದೋರುವ ಮೊದಲೇ ಬೇಕಾದರೆ ಅಧ್ಯಕ್ಷನು ಇಂಥ ಕ್ರಮ ಕೈಕೊಳ್ಳಬಹುದು. ಆಗ ಅವನೂ ಅವನ ಪಾರ್ಲಮೆಂಟೂ ಸರ್ವಾಧಿಕಾರಿಗಳಾಗುವರು. ಅಷ್ಟೇಕೆ ಪಾರ್ಲಮೆಂಟನ್ನು ಕೂಡ ಕೇಳದೆ ಅವನು ಗಂಡಾಂತರವನ್ನು ಸಾರಲು ಅಧಿಕೃತನಾಗಿರುವದರಿಂದ ಅಧ್ಯಕ್ಷನೇ ಸರ್ವಾಧಿಕಾರಿಯಾಗುವನೆನ್ನಬಹುದು. 1919 ರ ಜರ್ಮನ್ ಘಟನೆಯಲ್ಲಿ ಇಂಥ ನಿಯಮಗಳಿದ್ದುದರಿಂದಲೇ ಅದು ಕೊನೆಗೆ ಸರ್ವಾಧಿಕಾರದಲ್ಲಿ ಪರಿಣಮಿಸಿ ಹಿಟ್ಲರನ ಉಚ್ಛ್ರಾಯಕ್ಕೆ ಕಾರಣವಾಯಿತು. 1919 ರಿಂದ 1931 ರ ವರೆಗೆ ಜರ್ಮನ್ ಅಧ್ಯಕ್ಷನು 150 ಗಂಡಾಂತರದ ಸುಗ್ರೀವಾಜ್ಞೆಗಳನ್ನು ಹೊರಡಿಸಿದನು. ಕೊನೆಗೆ ಹಣಕಾಸಿನ ಮಸೂದೆ ಕೂಡ ಪಾರ್ಲಮೆಂಟನ್ನು ಧಿಕ್ಕರಿಸಿ ಮಾಡಲ್ಪಟ್ಟಿತು. ಆದುದರಿಂದ ಗಂಡಾಂತರ ಪರಿಸ್ಥಿತಿಯನ್ನು ಸಾರಿದೊಡನೆ ಅಧ್ಯಕ್ಷನು ಪಾರ್ಲಮೆಂಟನ್ನು ಕೂಡಿಸಿ ಅದಕ್ಕೆ ಅದರ ಅನುಮತಿ ಪಡೆಯಬೇಕೆಂದು ನಿಯಮವನ್ನು ಸೇರಿಸುವದು ಅತ್ಯವಶ್ಯ. ಇಲ್ಲವಿದ್ದರೆ ಅಧ್ಯಕ್ಷನು ಸರ್ವಾಧಿಕಾರಿಯಾಗಲು ಹವಣಿಸಬಹುದು.

## ಘಟಕಗಳ ಅವಕಾಶ

ಘಟಕಗಳನ್ನು ಎರಡು ಬಗೆಯಾಗಿ ವಿಂಗಡಿಸಲಾಗಿದೆ. ಮೊದಲನೆಯದರಲ್ಲಿ ಗವರ್ನರ ಸಂಸ್ಥಾನಗಳು ಅಥವಾ ಮದ್ರಾಸ್, ಮುಂಬಯಿ ಮೊದಲಾದ ಸಧ್ಯದ ಪ್ರಾಂತಗಳು ಬಂದರೆ ಎರಡನೆಯದರಲ್ಲಿ ನರೇಂದ್ರರ ಸಂಸ್ಥಾನಗಳು ಬರುತ್ತವೆ. ಭಾಷಾನ್ವಯ ಪ್ರಾಂತರಚನೆಯ ಸೂತ್ರಕ್ಕೆ ಮನ್ನಣೆದೊರೆತುದರಿಂದ ಹೀಗೆ ಪ್ರಾಂತಗಳಾದ ಮೇಲೆ ಗವರ್ನರ ಸಂಸ್ಥಾನಗಳ ಸಂಖ್ಯೆ ಹೆಚ್ಚಾಗುವದು. ಘಟಕಗಳ ಆಡಳಿತದ ಬಗ್ಗೆ ಮಾಡಲ್ಪಟ್ಟ ನಿಯಮಗಳು ಗವರ್ನರ ಸಂಸ್ಥಾನಗಳಿಗೆ ಮಾತ್ರ ಅನ್ವಯಿಸುವವು. ನರೇಂದ್ರ ಸಂಸ್ಥಾನಗಳು ಕೇಂದ್ರಕ್ಕೆ ಬಿಟ್ಟುಕೊಟ್ಟ ಅಧಿಕಾರಗಳಲ್ಲದೆ ಉಳಿದವುಗಳ ಬಗ್ಗೆ ತಾವೇ ಕಾಯದೆಗಳನ್ನು ಮಾಡಿಕೊಳ್ಳುವವು.

ಒಕ್ಕೂಟ ಕೇಂದ್ರದಲ್ಲಿ ಅಧ್ಯಕ್ಷನಿದ್ದಂತೆ ಸಂಸ್ಥಾನಗಳಲ್ಲಿ ಗವರ್ನರನು ಸರ್ಕಾರದ ಮುಖ್ಯ. ಅವನ ಅಧಿಕಾರಾವಧಿ 5 ವರ್ಷ. ಅವನ ನೇಮಕದ ವಿಷಯದಲ್ಲಿ ಎರಡು ರೀತಿಗಳನ್ನು ಸೂಚಿಸಲಾಗಿದ್ದು ಇವರಲ್ಲಿ ಯಾವುದು ಕಡೆಗೆ ಸ್ವೀಕರಿಸಲ್ಪಡುವದೋ ಗೊತ್ತಿಲ್ಲ. ಸಂಸ್ಥಾನದ ಎಲ್ಲ ಮತದಾರರು ಸೇರಿ ಅವನನ್ನು ನೇರವಾಗಿ ಆರಿಸುವದೊಂದು; ಆ ಸಂಸ್ಥಾನ ಶಾಸನಸಭೆ ನಾಲ್ಕು ಹೆಸರುಗಳನ್ನು ಸೂಚಿಸಿ, ಅವರಲ್ಲೊಬ್ಬನನ್ನು ಒಕ್ಕೂಟ ಅಧ್ಯಕ್ಷನು ನೇಮಿಸುವದೊಂದು. ಮೊದಲನೆಯ ಪ್ರಸಂಗದಲ್ಲಿ ಅಧ್ಯಕ್ಷನೂ ಮಂತ್ರಿಮಂಡಲವೂ ಇಬ್ಬರೂ ಜನರಿಂದ ಆರಿಸಲ್ಪಡುವುದರಿಂದ ಅವರೊಳಗೆ ತಿಕ್ಕಾಟ ಬಂದಾಗ ಇಬ್ಬರೂ

ಜನತೆಯ ಬೆಂಬಲ ವುಂಟೆಂದು ಸಾಧಿಸಿ ಅನವಶ್ಯಕ ತೊಂದರೆಯಾಗಬಹುದು. ಆದುದರಿಂದ ಎಲ್ಲಡೆಯು ಹಾದಿಯೆ ಸುಖ ಅವರಲ್ಲಿಯೂ ಅಧ್ಯಕ್ಷ ತನ್ನಿಚ್ಛೆಯಂತೆ ನೇಮಿಸುವದೊಳಿತು ನಿಜವಾದ ಅಧಿಕಾರವೆಲ್ಲ ಸಂಸ್ಥಾನದ ಮಂತ್ರಿಮಂಡಲದಲ್ಲಿರುವಾಗ ಗವರ್ನರರ ಆಯ್ಕೆಯಲ್ಲಿ ಶಾಸನಸಭೆಗೆ ಕೈಯ ಇರುವದು ಅವಶ್ಯವಿಲ್ಲ.

ಒಕ್ಕೂಟದಲ್ಲಿರುವಂತೆ ಗವರ್ನರರ ಸಂಸ್ಥಾನದಲ್ಲಿಯೂ ನಿಜವಾದ ಆಡಳಿತಾಧಿಕಾರ ಮಂತ್ರಿಮಂಡಲದಲ್ಲಿರುವದು ಆದರೆ ಮಂತ್ರಿಗಳನ್ನು ನೇಮಿಸಿಕೊಳ್ಳುವಲ್ಲಿ ಗವರ್ನರನಿಗೆ ಒಕ್ಕೂಟ ಅಧ್ಯಕ್ಷನಿಗಿಂತ ಕೆಲ ವಿಷಯಗಳಲ್ಲಿ ಹೆಚ್ಚು ಅಧಿಕಾರ ಕೊಡಲಾಗಿದೆ ಮುಖ್ಯವಾಗಿ ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾಕ ಜಾತಿಗಳಿಗೆ ಪ್ರಾತಿನಿಧ್ಯ ದೊರಕುವಂತೆ ನೋಡಿಕೊಳ್ಳಬೇಕೆಂದು ಅವನಿಗೆ ಆದೇಶ ಕೊಡಲಾಗಿದೆ. ಇದು ಆಗಾಗ ತಜಾತೀಯತೆಯನ್ನು ಇದು ಶಾಶ್ವತವಾಗಿ ಮಾಡುವದು. ಮಂತ್ರಿಮಂಡಲದಲ್ಲಿ ಅನೈಕ್ಯಕ್ಕೂ ಕಾರಣವಾಗುವದು. ಅದೇ ಪ್ರಕಾರ ಕೇಂದ್ರದ ಅಧ್ಯಕ್ಷನಿಗಿರುವಂತೆ ಶಾಸನ ಸಭೆಗೆ 'ಸಂದೇಶ' ಕಳಿಸಲು ಗವರ್ನರನಿಗಿರುವ ಅಧಿಕಾರವೂ ಆಡಳಿತಕ್ಕೆ ತೊಡಕೇ ಸರಿ. ಶಾಸನಸಭೆ ಮತ್ತು ಮಂತ್ರಿಮಂಡಲಗಳನ್ನು ವಿಸರ್ಜಿಸುವ ಅವನ ಅಧಿಕಾರವೂ ಅಪೇಕ್ಷಣೀಯವಲ್ಲ.

ಸಂಸ್ಥಾನ ಶಾಸನ ಸಭೆಗಳಲ್ಲಿ ೬೦ ಕ್ಕಿಂತ ಕಡಿಮೆ ೫೦೦ ಕ್ಕಿಂತ ಹೆಚ್ಚಾಗದಷ್ಟು ಸದಸ್ಯರು ವಯಸ್ಕಮತದಾನ ಪದ್ಧತಿಯಿಂದ ಆರಿಸಿ ಬರುವರು ಮುಸ್ಲಿಮರಿಗೂ ಹರಿಜನರಿಗೂ ಎಲ್ಲೆಡೆ ಸ್ಥಾನಗಳು ಕಾದಿರಿಸಲ್ಪಟ್ಟಿದ್ದರೂ ಮತದಾರ ಸಂಘಗಳು ಮಾತ್ರ ಬೇರೆ ಬೇರೆ ಇಲ್ಲ ಶಾಸನ ಸಭೆಯ ಅವಧಿ ೫ ವರ್ಷ. ಸಂಸ್ಥಾನಗಳು ಇಷ್ಟಸಿದ್ದರೆ ವಿವಿಧ ಕ್ಷೇತ್ರಗಳಲ್ಲಿ ತಜ್ಞರಾದವರಿಗೆ ಪ್ರಾತಿನಿಧ್ಯ ಕೊಟ್ಟು ಮೇಲ್ಮನೆಯನ್ನೂ ರಚಿಸಿಕೊಳ್ಳಬಹುದು. ಇಂಥ ಮೇಲ್ಮನೆ ಅನವಶ್ಯವೆಂದು ಕಾಣುತ್ತದೆ. ಶಾಸನ ಸಭೆಗಳ ಅಧ್ಯಕ್ಷನು ಸಭೆಯಿಂದಲೆ ಆರಿಸಲ್ಪಡುವನು ಸಂಸ್ಥಾನ ಶಾಸನ ಸಭಾಸದಸ್ಯತ್ವಕ್ಕೆ ೨೫ ವರ್ಷಕ್ಕಿಂತ ಕಡಿಮೆ ವಯಸ್ಸಿನವನು ಅನರ್ಹ. ಕೇಂದ್ರದಲ್ಲಿ ಇಂಥ ನಿಯಮ ಇಲ್ಲದಿರುವಾಗ ಘಟಕದಲ್ಲಿ ಮಾತ್ರ ಏಕೆ?

ಘಟಕಗಳಲ್ಲಿ ಹೈಕೋರ್ಟುಗಳಿರುವವು ಅವುಗಳ ನ್ಯಾಯಾಧೀಶರ ಸಂಬಳವನ್ನು ನಿರ್ಧರಿಸುವದು. ಮೊದಲಾದ ಅಧಿಕಾರಗಳು ಆಯಾ ಸಂಸ್ಥಾನದ ಶಾಸನ ಸಭೆಗಿದ್ದರೂ ಅವರನ್ನು ನೇಮಿಸುವ ಅಧಿಕಾರ ಒಕ್ಕೂಟ ಅಧ್ಯಕ್ಷನಿಗೇ ಇರುವದರಿಂದ ಪಾಕ್ಷೀಯತೆಯ ಪ್ರಭಾವದಿಂದ ಅವರು ಮುಕ್ತರಾಗಿರುವರು. ಸಂಸ್ಥಾನಗಳಲ್ಲಿಯೂ

.... ನಿಮ್ಮ ಮಕ್ಕಳಿಗೆ ....
**ಸ್ವಾತಂತ್ರೋತ್ಸವ—ಶುಭಕಾರ್ಯ—ಹಬ್ಬಗಳಲ್ಲಿ**
ಇನಾಂ ಕೊಡಬೇಕಾದರೆ
ಅಲ್ಪಬೆಲೆಯಲ್ಲಿ ಶ್ರೇಷ್ಠ ಮಿಠಾಯಿ
R.C.W. ಪೆಪ್ಪರಮೆಂಟು ಗುಣದಲ್ಲಿ ಯಾವುದಕ್ಕೂ ಎರಡನೆಯದಲ್ಲ
**ರಾಯಲಸೀಮೆಯ ಏಕಮಾತ್ರ ಸಂಸ್ಥೆ ಇದೇ.**

| | | |
|---|---|---|
| ಆರಂಜು, ಲೆಮನ್ ವಗೈರೆ ಶ್ರೇಷ್ಠ ತರಗತಿ | ರೂ. 32/-, 32 ಪೌಂಡಿನ ಟಿನ್ | |
| ,, ,, ಸಾಮಾನ್ಯ | ರೂ. 19 - 28 | ,, ,, |
| ಚಾಕೊಲೆಟ್ ಮತ್ತು ಟೋಫೀ ಶ್ರೇಷ್ಠ | 1 - 8 - 0 | ಪೌಂಡಿಗೆ |
| ,, ಸಾಮಾನ್ಯ | 1—0 0 | ,, |
| ಪತ್ರಾವೃತ್ತ ಮಿಠಾಯಿ | 1— 4—0 | ,, |

The Rayalaseema Confectionery Works
BELLARY.
ದಿ ರಾಯಲಸೀಮಾ ಕನ್ಫೆಕ್ಷನರಿ ವರ್ಕ್ಸ್, ಬಳ್ಳಾರಿ

We are second to none in quality & variety. Ours is the only concern in Rayalaseema of its kind to help the economic betterment of these backward tracts.

Once you try means, your children will never leave you.

| | | |
|---|---|---|
| Orange & Lemon | | Rs. 32/- 32 lbs tin. |
| ,, ,, | ordinary | Rs, 19/- 28 lbs tin. |
| Chacolates & Toffees | | Rs. 1—8—0 lb. |
| ,, ,, | ordinary | Rs. 1—0—0 lb. |
| Wrapped Sweets | | Rs. 1—4—0 lb. |

Sole Agents ಸೋಲ್ ಏಜಂಟರು
The General Distributors, ದಿ ಜನರಲ್ ಡಿಸ್ಟ್ರಿಬ್ಯೂಟರ್ಸ್
Bangalore Road, Bellary. ಬೆಂಗಳೂರ್ ರೋಡು ಬಳ್ಳಾರಿ

ನವಭಾರತಕ್ಕೆ
ಜಾಹೀರಾತುಗಳನ್ನು ಕೊಟ್ಟು
ಹೆಚ್ಚು ಲಾಭವನ್ನು ಪಡೆಯಿರಿ.

**The Rayalaseema Bank Ltd., H. O. Bellary.**

**ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,** ಸ್ಥಾಪಿತ—193[illegible]

ಮುಖ್ಯ ಕಾರ್ಯಾಲಯ—ಬಳ್ಳಾರಿ.

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

| | | | |
|---|---|---|---|
| 3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ | | ರೂ. 3% | ವರ್ಷಕ್ಕೆ ಶೇಕಡ |
| ಒಂದು ವರ್ಷ | ,, | ರೂ 3½% | ,, |
| ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ | ,, | ರೂ 4% | ,, |

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟುಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ-ಬಳ್ಳಾರಿ

ಬಿ. ವಿ. ಶೇಷಗಿರಿರಾವು ಬಿ ಕಾಂ.,
ಕಾರ್ಯದರ್ಶಿ.

ನ್ಯಾಯದಾನದ ಸ್ವಾತಂತ್ರ್ಯಕ್ಕೆ ಭಂಗ ಬಾರದಂತೆ ಎಲ್ಲ ವ್ಯವಸ್ಥೆಗಳಿವೆ.

ಪ್ರಾಂತಿಕ ನೌಕರಶಾಹಿಯ ವ್ಯವಸ್ಥೆಯ ಉಲ್ಲೇಖಾರ್ಹವೇನೂ ಇಲ್ಲ.

ಗವರ್ನರನಿಗೆ ತನ್ನ ಸಂಸ್ಥಾನದಲ್ಲಿ ಗಂಡಾಂತರ ಪ್ರಸಂಗವುಂಟೆಂದು ಕಂಡು ಬಂದರೆ ಮಂತ್ರಿಮಂಡಲ, ಶಾಸನಸಭೆ ಮೊದಲಾದವುಗಳನ್ನೆಲ್ಲ ವಿಸರ್ಜಿಸಿ ತಾನೇ ಸರ್ವಾಧಿಕಾರ ವಹಿಸುವ ಮಹಾ ಅಧಿಕಾರವಿದೆ. ಆದರೆ ಹೀಗೆ ಮಾಡಿದೊಡನೆ ಅವನು ಒಕ್ಕೂಟದಲ್ಲಿರುವ ಅಧ್ಯಕ್ಷನಿಗೆ ಈ ಸಮಾಚಾರವನ್ನು ತಿಳಿಸಬೇಕು. ಆ ಮೇಲೆ ಎಲ್ಲ ಅಧಿಕಾರ ಅಧ್ಯಕ್ಷನಿಗೆ ಸೇರುವದು. ಅವನು ಆಜ್ಞಾಪಿಸಿದಂತೆ ಗವರ್ನರನು ನಡೆದುಕೊಳ್ಳಬೇಕು. ಹೀಗೆ ಮಂತ್ರಿಮಂಡಲವನ್ನು ಲಕ್ಷಿಸದೆ ಸಾಗುವ ಸರ್ವಾಧಿಕಾರ ಅವನಿಗಿದ್ದರೂ ಅವನು ಸರ್ವಾಧಿಕಾರವನ್ನು ತನಗೇ ಉಳಿಸಿಕೊಳ್ಳಲಾರ. ಆದರಿಂದ ಈ ಕಲಮು ಅಷ್ಟು ಗಂಡಾಂತರದಿಲ್ಲ ಆದರೂ ಇಂಥ ಅಧಿಕಾರವನ್ನು ಕೇಂದ್ರಕ್ಕೆ ಮೀಸಲಿಡುವದು ಒಳಿತು.

ಶ್ರೀ ವೆಂಕಟರಂಗಯ್ಯನವರು ತಮ್ಮ ಪುಸ್ತಕದಲ್ಲಿ ಘಟನೆಯ ಗುಣ ದೋಷಗಳನ್ನು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಅವರು ಸಂಯುಕ್ತ ರಾಜ್ಯ ಪದ್ಧತಿಯ ಪಕ್ಷಪಾತಿ. ಅವರ ಅಭಿಪ್ರಾಯಗಳನ್ನು ಆ ಪಂಗಡದವರೆಲ್ಲರೂ ಒಪ್ಪದಿರಲಾರರು. ಆದರೆ ಇಂದು ಹಲವು ಒಡಕಿನ ತತ್ವಗಳು ರಾಜಕಾರಣದಲ್ಲಿ ಮೆರೆದಾಡುತಿರುವದನ್ನು ಕಂಡು ಪ್ರಾಂತಗಳನ್ನೇ ಅಥವಾ ಹೊಸ ಶಬ್ದದಲ್ಲಿ, ಸಂಸ್ಥಾನಗಳನ್ನೇ ರದ್ದು ಪಡಿಸಿ ಒಂದೇ ಕೇಂದ್ರ ಆಡಳಿತ ಇಡಿ ದೇಶವನ್ನಾಳುವಂತಾಗಬೇಕೆಂಬ ಒಂದು ವಿಚಾರ ಧಾರೆಯಿದ್ದು ಅದರ ಪ್ರತಿಪಾದಕರು ಲೇಖಕರ ಅಭಿಪ್ರಾಯಗಳನ್ನು ವಿರೋಧಿಸುವದು ನಿಶ್ಚಯ. ಆದರೆ ಆ ಮಾತು ಇಲ್ಲಿ ಅಪ್ರಸ್ತುತ. ಆಂಧ್ರದ ಬಗ್ಗೆ ಲೇಖಕರು ಕೆಲವಡೆ ತೋರಿಸುವ ಅಕಾರಣ ಪಕ್ಷಪಾತವನ್ನು ಒತ್ತಟ್ಟಿಗಿರಿಸಿದರೆ ಅವರು ವಿಷಯವನ್ನು ತುಂಬ ಸ್ಪಷ್ಟವಾಗಿಯೂ ನಿರ್ಲಿಪ್ತತೆಯಿಂದ ವಿವೇಚಿಸಿದ್ದಾರೆಂದು ಒಪ್ಪಲೇಬೇಕು.

ಲೇಖಕರು ಪುಸ್ತಕದ ಕೊನೆಯಲ್ಲಿ ಹೇಳಿದ ಮಾತುಗಳು ಅತ್ಯಂತ ಗಮನಾರ್ಹವಾಗಿವೆ. ಈ ಘಟನೆಯಿಂದ ನಮಗೆ ಬೇಕಾದ ಸುಖ ಶಾಂತಿಯ ರಾಜ್ಯ ಲಭಿಸೀತೆ? ಇದಕ್ಕೆ ಹೌದು, ಇಲ್ಲವೆಂದು ಹೇಳುವ ಕಾಲ ಮುಂದೆ ಇದೆ. ನಾವು ಜಾತ್ಯತೀತ ಲೌಕಿಕ ರಾಜ್ಯವನ್ನು ಸ್ಥಾಪಿಸಹೊರಟಿದ್ದರ ದೇಶದಲ್ಲಿ ಹಿಂದು ಮುಸ್ಲಿಂ, ಉಚ್ಚ-ನೀಚ ಜಾತಿಗಳೆಂಬ ವೈಷಮ್ಯ ಇನ್ನೂ ಬಹಳ ಇದೆ. ರಾಜಕಾರಣದಲ್ಲಿ ಜಾತೀಯತೆಯ ಗಂಡಾಂತರವನ್ನು ಬದಿಗಿರಿಸಿದರೂ ಬಹಿರಂಗವಾಗಿ ಪ್ರಜಾತಂತ್ರವನ್ನು ಕೊಂಡಾಡಿ ಒಳಗೆ ಸರ್ವಾಧಿಕಾರಕ್ಕೆ ಮನಸೋತ ಪಂಗಡಗಳ ಭೀತಿಯೂ ಇಲ್ಲದಿಲ್ಲ. ವರ್ಗ-ವರ್ಗಗಳ ವೈಷಮ್ಯವೂ ಕಡಿಮೆಯಿಲ್ಲ. ಈ ಕಾರಣದಿಂದ ಯಾವ ಸಮಯದಲ್ಲಿಯು ಕ್ರಾಂತಿಕಾರಿ ಸ್ಥಿತಿ ತಲೆಯೆತ್ತಬಹುದು. ಘಟನೆ ಎಷ್ಟೇ ನಿರ್ದುಷ್ಟವಾಗಿದ್ದರೂ ಅದನ್ನು ಆಚರಣೆಗೆ ತರುವವರು ಯೋಗ್ಯರಾಗಿರದಿದ್ದರೆ ಕೆಟ್ಟರಸ್ತೆಯಲ್ಲಿ ಪರಿವೆಯಿಲ್ಲದ ಡ್ರೈವರನ ಕೈಯಲ್ಲಿ ಒಳ್ಳೆಯ ಮೋಟಾರು ಕೊಟ್ಟರೂ ಅದು ನಿಂತುಹೋಗುವಂತೆ ಇದರ ಗತಿಯೂ ಆಗಬಹುದು. ಹಾಗಾಗದಂತೆ ನೋಡುವದು ಜನತೆಯ ವಿವೇಕಕ್ಕೆ ಸೇರಿದ ಮಾತು.

---

# ವಾಸುವಾಂಬಾ ರಿಸ್ಟೊರೆಂಟ್

ಕಾಫಿಕ್ಲಬ್ ಮತ್ತು ಊಟದ ಹೋಟೆಲ್,

**ಬೆಂಗಳೂರು ರೋಡ್, ಬಳ್ಳಾರಿ.**

- ಸುಂದರ ವಸತಿಸ್ಥಾನ
- ಗಾಳಿ ಬೆಳಕುಗಳ ಸ್ವಚ್ಛರೂಂಗಳು
- ತಣ್ಣೀರು, ಬಿಸಿನೀರಿನ ಸ್ನಾನ
- ವ್ಯಾಪಾರ, ಉದ್ಯಮಗಳಿಗೆ ಮಧ್ಯಸ್ಥಳ
- ರುಚಿ, ಆರೋಗ್ಯಕರ ಭೋಜನ ಮತ್ತು ಫಲಹಾರ.
- ವಿನಯಶೀಲ ನೌಕರವರ್ಗ.

ಪರ್ಮಿಟ್ ಕೊಟ್ಟಲ್ಲಿ ಸಂತೋಷ ಕೂಟಗಳಿಗೂ ಅಲ್ಪೋಪಹಾರಗಳಿಗೂ ಬೇಕಾದಂಥ ಪಕ್ವಾನ್ನ ಫಲಾಹಾರಗಳನ್ನು ಸರಿಯಾದ ದರಗಳಿಂದ ಒದಗಿಸುತ್ತೇವೆ.

**ಬಳ್ಳಾರಿಗೆ ಬಂದರೆ ಇಲ್ಲಿಯೇ ವಸತಿಮಾಡಲು ಮರೆಯಬೇಡಿರಿ.**

**While at Bellary, Forget not to stay at**

**The Best Boarding & Lodging House**

**Vasuvamba Restaurant, BANGALORE ROAD. BELLARY.**


## ಗಾಂಧೀ - ಟಾಗೂರರು ವಿಶ್ವವ್ಯಕ್ತಿಗಳು

### ವೀರಶೈವ ಕಾಲೇಜಿನಲ್ಲಿ ಡಾ- ಗುರುಮೂರ್ತಿಯವರ ಭಾಷಣ

"ಗಾಂಧಿಯವರು ನೈತಿಕ ದೃಷ್ಟಿಯಿಂದಲೂ, ಟಾಗೂರರು ಕಲಾ ಸಂಸ್ಕೃತಿ ಸಾಹಿತ್ಯಗಳ ದೃಷ್ಟಿಯಿಂದಲೂ ಭಾರತಕ್ಕೆ ವಿಶ್ವದಲ್ಲಿ ಉನ್ನತಸ್ಥಾನವನ್ನು ಕೊಟ್ಟರು. ಅವರಿಬ್ಬರೂ ವಿಶ್ವಮಾನವರು. ಧರ್ಮ-ಜಾತಿ ದೇಶಗಳ ಭೇದವನ್ನೆಣಿಸದೆ ಮಾನವ ಸೇವೆಯನ್ನೆಸಗಿದರು. ಭಾರತ ಸಂಸ್ಕೃತಿಯ ಉಜ್ವಲತೆಯನ್ನು ಸ್ವಾಮಿ ವಿವೇಕಾನಂದರು ಅಜ್ಞಾನರೂಪದಲ್ಲಿದ್ದ ಹಣವೇ ದೇವರೆಂದು ಭಾವಿಸಿದ ವಿದೇಶೀಯರಿಗೆ ಪ್ರದರ್ಶಿಸಿದ ನಂತರ- ಟಾಗೋರರು ಆ ನಂದಾದೀವಿಗೆಗೆ ಎಣ್ಣೆ ಹಾಕಿದರು. ಈ ಯುಗಪುರುಷರು ತಮ್ಮ ಕೃತಿಗಳಲ್ಲಿ ಸದಾ ಜೀವಿತರಿರುವರು. ಸ್ವಾರ್ಥಿಗಳಾಗಿ, ಅಧಿಕಾರ ಲೋಲುಪ್ತರಾಗಿ ಸಣ್ಣಪುಟ್ಟ ವಿಷಯಗಳಿಗೆ ಕಚ್ಚಾಡುತ್ತಿರುವ ಜಾತೀಯತೆ ಪ್ರಾಂತೀಯತೆ ಭಾವನೆಗಳಿಂದ ತುಂಬಿರುವ ನಮ್ಮ ಸೋದರರು ಕಾರ್ಯತಃ ಇವರನ್ನು ಅನುಸರಿಸಿದರೆ ನಮ್ಮ ಸ್ವಾತಂತ್ರ್ಯವು ಉಳಿದೀತು." ಎಂದು ವೀರಶೈವಕಾಲೇಜಿನಲ್ಲಿ 7-8-48 ನೆಯ ಶನಿವಾರ ಸಾಯಂಕಾಲ ಶ್ರೀ ಡಿ ವೇಣುಗೋಪಾಲಾಚಾರ್ಯರವರಧ್ಯಕ್ಷತೆಯಲ್ಲಿ ಸಮಾವೇಶವಾದ ಟಾಗೋರ ದಿನಾಚರಣೆಯ ಮಹೋತ್ಸವದಲ್ಲಿ ಕಲಾಶಾಲೆಯ ಪ್ರಧಾನ ಆಚಾರ್ಯರಾದ ಡಾಕ್ಟರ್ ಗುರುಮೂರ್ತಿಯವರು ಉಜ್ವಲಭಾಷಣ ವಿತ್ತರು. ವಿದ್ಯಾರ್ಥಿಗಳಿಂದ ಟಾಗೋರ ಪದ್ಯಪಠನೆಗಳೂ ಕನ್ನಡ ತೆಲುಗು ಇಂಗ್ಲೀಷಿನಲ್ಲಾದವು. ಅಧ್ಯಕ್ಷರೂ ಪ್ರೊ. ನಾರಾಯಣರಾವ್ ನಟರಾಜನ್ ಶರ್ಮರವರು ಟಾಗೋರರ ಕೃತಿಗಳಿಂದ ಓದಿ ವಿಶ್ವ ಕವಿಗಳ ಮಹತ್ವವನ್ನರುಹಿದರು. "ಜನಗಣಮನ" ರಾಷ್ಟ್ರಗೀತೆಯ ನಂತರ ಸಮಾವೇಶವು ಕೊನೆಗಂಡಿತು.

---

## ದಿ ರಾಯಲಸೀಮ ಕರ್ಚೀಫ್ಸನರಿ ವರ್ಕ್ಸ್ ಬಳ್ಳಾರಿ.

ಹಿಂದುಳಿದ ದತ್ತಮಂಡಲದ ಜಿಲ್ಲೆಗಳ ಆರ್ಥಿಕಾಭಿವೃದ್ಧಿಗಾಗಿ ಇಲ್ಲಿಯ ಜನತೆಯು ಈಚೀಚೆಗೆ ಉದ್ಯೋಗ ಪ್ರಪಂಚದಲ್ಲಿ ಮುಂದುವರಿಯುತ್ತಿರುವುದು ಶುಭದಾಯಕವಾಗಿದೆ. ನೂಲಿನ ಮತ್ತು ನೆಯ್ಗೆಯ ಗಿರಣಿಗಳ ಬ್ಯಾಂಕುಗಳ ಸ್ಥಾಪನೆಯ ಜೊತೆಗೆ ವೈವಿಧ್ಯದಲ್ಲಿ ಗುಣದಲ್ಲಿ ಯಾವುದಕ್ಕೂ ಕಡಮೆಯಿಲ್ಲದ ಪೆಪ್ಪರ್ ಮೆಂಟುಗಳ ಕಾರ್ಖಾನೆಯು ಬಳ್ಳಾರಿಯಲ್ಲಿ ಸ್ಥಾಪಿತವಾಗಿ ಬರುವ ವಿಜಯದಶಮಿಗೆ ಎರಡುವರ್ಷಗಳಾಯಿತು. ಇಷ್ಟುಕಾಲ ಪರದೇಶೀಯರಿಂದ ಸ್ಥಾಪಿತವಾದ ಪ್ಯಾರೀ ಕಂಪನಿಯ ಮೇಲೆಯೆ ನಾವು ಆಧಾರಪಟ್ಟಿರಬೇಕಾಗಿದ್ದಿತು. ಬಳ್ಳಾರಿಯ ಕೆಲಮಿತ್ರರು ಈ ಕಾರ್ಖಾನೆಯನ್ನಾರಂಭಿಸಿ ಆರಂಭದದಿನಗಳಲ್ಲೇ ಶ್ರೇಷ್ಠವಾದ ಮಾಲನ್ನು ಹೊರತಂದರು. ಹೆಚ್ಚಿನ ಪ್ರೋತ್ಸಾಹವಿದ್ದರೆ ಕಾರ್ಖಾನೆಯು ಹೆಚ್ಚು ಸೇವೆ ಮಾಡಲು ಅವಕಾಶದೊರೆಯುತ್ತದೆ. ಈಗಾಗಲೇ ಮದ್ರಾಸು ತಮಿಳುಪ್ರಾಂತ ಆಂಧ್ರದಲ್ಲಿ ಗುಂಟೂರು ತೆನಾಲಿ ಕರ್ನೂಲು ಡೋಣ,ಕಡಪ ರಾಜಂಪೇಟೆ ಪ್ರೊದಟೂರು ಕರ್ನಾಟಕದಲ್ಲಿ ಗದಗ ಹುಬ್ಬಿ ಬಾಗಲಕೋಟೆ ಬಿಜಾಪುರ ಸೋಲಾಪುರ ಮಹಾರಾಷ್ಟ್ರದಲ್ಲಿ ಪಂಡರಪೂರ್ ಮಿರ್ಜ ಸಾಂಗ್ಲಿ ಅಹಮದ್‌ನಗರ ವಗೈರೆ ಅನೇಕ ಶಹರುಗಳಲ್ಲಿ ಈ ಮಾಲು ಜನಪ್ರಿಯವಾಗಿದೆ.

ಸುಮಾರು 50ತರಹೆವಾರಿ ಮಿಠಾಯಿಗಳು ತಯಾರಾಗುತ್ತಲಿವೆ. ಕಂಟ್ರೋಲ್‌ದಿನಗಳಲ್ಲಿ ದತ್ತಮಂಡಲದ ಆರ್ಥಿಕಾಭಿವೃದ್ಧಿ ಸಮಿತಿಯು (Ceded Djstricts Economic Devolopment Board) ಕಾರ್ಯದರ್ಶಿಗಳೂ ಈಗಿನ ಕಲೆಕ್ಟರವರೂ ಈ ಉದ್ಯೋಗಾಭಿವೃದ್ಧಿಗೆ ಸಹಾಯ ಮಾಡಿದರು ಇದನ್ನು ಎಲ್ಲರೂ ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

## ಜಗತ್ತಿನ ರಕ್ಷಣೆ ಮಾಡಲು

# ಹೊಸ ಪ್ರಯತ್ನ ಬೇಕು

ಇಂದಿನ ಜಾಗತಿಕ ಅವ್ಯವಸ್ಥೆ, ಅಶಾಂತತೆ, ಭಯಗ್ರಸ್ತ ವಾತಾವರಣ ಇವುಗಳನ್ನು ಕಂಡು ಅನೇಕ ವಿಚಾರಗಳು ಮನಸ್ಸಿನಲ್ಲಿಯೇ ಮಿಡುಕುತ್ತಿದ್ದಾರೆ. ತಮ್ಮ ವಿಚಾರಗಳನ್ನು ಮುಂದಿಡುತ್ತಿದ್ದಾರೆ. ಅವುಗಳ ಕಡೆಗೆ ಇಂದಿನ ಜಾಗತಿಕ ರಾಜಕಾರಣದ ಸೂತ್ರಚಾಲಕರ ಲಕ್ಷ್ಯವು ಹೋಗದಿರುವುದನ್ನು ಕಂಡು "ಉಪಾಯವಿಲ್ಲ" ಎನ್ನುತ್ತ ಕೈಮುಚ್ಚಿಕೊಂಡು ಕೂಡುತ್ತಿದ್ದಾರೆ.

ವಿಜ್ಞಾನಿ ಐನ್‌ಸ್ಟೀನರು ಯುಕ್ತರಾಷ್ಟ್ರ ಸಂಘದವರಿಗೆ ಇಂಥ ಒಂದು ಸೂಚನೆಯನ್ನು ಮಾಡಿದ ವಿಷಯವು ಇತ್ತೀಚೆಗೆ ಪ್ರಕಟವಾಗಿದೆ. ಆ ಸೂಚನೆಯಲ್ಲಿ ಅವರು "ಜಗತ್ತಿನ ಸಂರಕ್ಷಣೆ ಮಾಡಲು ಇಂದಿನ ಕಾಲದಲ್ಲಿ ಆದ ಅನೇಕ ಕ್ಷೇತ್ರಗಳಲ್ಲಿಯ ಪ್ರಗತಿಯನ್ನು ಉಳಿಸಲು ಮಾನವರ ಮಾನ ವಿತ್ತ ಪ್ರಾಣಹಾನಿಗಳನ್ನು ತಡೆಯಲು ಮತ್ತು ಸರ್ವರೂ ನಿಶ್ಚಿಂತರಾಗಿ ಬಾಳುವ ವಾತಾವರಣವನ್ನು ಹುಟ್ಟಿಸಲು ಒಂದು ಜಾಗತಿಕ ಸರ್ಕಾರವನ್ನು ಸ್ಥಾಪಿಸಬೇಕು. ಅದು ಅಧಿಕಾರ ಮತ್ತು ಶಕ್ತಿ ಸಂಪನ್ನವಾಗಿರಬೇಕು. ಅದರ ನಿರ್ಣಯಗಳನ್ನು ಅಲ್ಲಗಳೆಯುವ ದೇಶಗಳನ್ನು ದಾರಿಗೆ ತರುವ ಸಾಮರ್ಥ್ಯವು ಅದರಲ್ಲಿ ಇರಬೇಕು" ಇವೇ ಮೊದಲಾದ ಸಂಗತಿಗಳನ್ನು ಹೇಳಿದ್ದಾರೆ.

ಈ ಸೂಚನೆಯು ಬಹು ಯೋಗ್ಯವಾಗಿದೆ. ಮತ್ತು ಈ ಸಮಯದಲ್ಲಿ ಜಗತ್ತಿಗೆ ಒಂದು ಸುರಕ್ಷಿತ ಸ್ಥಿತಿಯನ್ನು ಹುಟ್ಟಿಸಿಕೊಡುವುದಕ್ಕಾಗಿ ಇಂತಹದೇ ಪ್ರಯತ್ನದ ಆವಶ್ಯಕತೆ ಇದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮತ್ತು ಈ ತರಹದ ಸೂಚನೆಗಳು ಈ ಮೊದಲು ಮುತ್ಸದ್ದಿಗಳಿಂದ ಮತ್ತು ರಾಜಕಾರಣಿಗಳಿಂದ ಮುಂದೆ ಬಂದಿದೆ. ಆದರೆ ಈ ಸೂಚನೆಗಳ ಪರಿಣಾಮವು, ಡಬ್ಬುಕೊಡದ ಮೇಲೆ ನೀರು ಸುರುವಿದಂತೆ ಏಕೆ ಆಗುತ್ತಿದೆಯೆಂಬುದನ್ನು ತಿಳಿದರೆ, ಇಂದಿನ ಜಾಗತಿಕ ಅಸಹಾಯತೆಯ ಚಿತ್ರವು ಸ್ಪಷ್ಟವಾಗಿ ಕಾಣುವುದು.

ಸರ್ವ ರಾಷ್ಟ್ರಗಳು ಇಂದು ಪರಸ್ಪರ ಅವಿಶ್ವಾಸ, ಸಂಶಯಗಳಲ್ಲಿ ತೊಡಗಿಕೊಂಡಿವೆ. ತಮ್ಮ ತಮ್ಮ ಬಲದಮೇಲೆ ತಮ್ಮ ಕುದುರೆಗಳನ್ನು ಮುಂದೆ ಓಡಿಸಲು ಯತ್ನಿಸುತ್ತಿವೆ. ಅದರ ಪರಿಣಾಮದಿಂದ ತಮ್ಮನ್ನೇ ತಾವು ಚಿಂತಾಸಾಗರದಲ್ಲಿ ನೂಕಿಕೊಂಡಿವೆ.

ತಮ್ಮಿಂದಲೇ ಉಂಟಾದ ಈ ಪರಿಸ್ಥಿತಿಯಿಂದ ಅವುಗಳಿಗೆ ಹೆದರಿಕೆ ಮತ್ತು ಪಶ್ಚಾತ್ತಾಪಗಳು ಉಂಟಾಗಿಲ್ಲವೆಂದಿಲ್ಲ. ಆದರೆ ಅವು ಈ ದ್ವೇಷಾಗ್ನಿಯಲ್ಲಿ ಬಹು ಆಳವಾಗಿ ಇಳಿದು ಬಿಟ್ಟಿವೆ. ಮೇಲಕ್ಕೆ ಹತ್ತಲು ಬರದಷ್ಟು ಇಳಿದುಬಿಟ್ಟಿವೆ.

ಸಾರ್ವತ್ರಿಕವಾಗಿ ಈಗ ಬೇಕಾದುದು ನೈತಿಕಬಲ. ಅದರ ಅಭಾವವು ಎಲ್ಲೆಡೆಗೆ ಕಾಣುತ್ತಿದೆ. ಒಬ್ಬರೂ ನಿಜವಾದುದನ್ನು ಹೇಳುತ್ತಿಲ್ಲ. ಎಲ್ಲ ಮಾತುಗಳನ್ನು ಪೂರ್ವಗ್ರಹಗಳಿಂದ ಯುಕ್ತವಾಗಿ ಮತ್ತು ಸಂಶಯದ ದೃಷ್ಟಿಯಿಂದ, ಅಲ್ಲದೆ ತಮ್ಮದೇ ಆದ ಉದ್ದೇಶಕ್ಕೆ ವಿಸಂಗತವಾದ ರೀತಿಯಲ್ಲಿ ಇಡಲ್ಪಡುತ್ತ. ಒಬ್ಬರು ಮಾತಾಡುತ್ತಾರೆಂದು, ಎರಡನೆಯವರೂ ಹಾಗೆಯೇ ಮಾತಾಡುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಅನ್ವಯಿಸುವಂತಹ ಮತ್ತು ಎಲ್ಲರ ಹಿತಸಂರಕ್ಷಣೆಗಳನ್ನು ಅಪೇಕ್ಷಿಸುವಂತಹ ವಿಚಾರಗಳು ಯಾರಿಂದಲೂ ಮುಂದೆ ಬಾರದಂತಹ ಪರಿಸ್ಥಿತಿಯು ಇಂದು ಹುಟ್ಟಿಹೋಗಿದೆ.

ಹೀಗೆಳುವವರ ಮಾತುಗಳಿಗೆ ಮುತ್ಸದ್ದಿತನದ ಹೊದಿಕೆಯನ್ನು ಹೊದಿಸಲಾಗುತ್ತಿದೆ. ಆದಷ್ಟು ಎರಡನೆಯವರಿಗೆ ಟೊಪ್ಪಿಗೆಹಾಕಿ, ಅವರಿಗೆ ಗೊತ್ತಾಗದಂತೆ ಅವರ ಅಹಿತವನ್ನು ಮಾಡಿ ತನ್ನ ಹಿತವನ್ನು ಸಾಧಿಸಿಕೊಂಡು ಬರುವವನಿಗೆ ಇಂದು ಮಹಾಮುತ್ಸದ್ದಿ ಎಂದು ಕರೆಯಲಾಗುತ್ತಿದೆ. ಈ ಕಲೆಯು ಬರದೆ ಕೇವಲ ಸರಳತನದಿಂದ ಮಾತಾಡುವವನಿಗೆ ಇಂದು ದಿವಸಗಳಿಲ್ಲ. ಅವನಿಗೆ ವ್ಯವಹಾರದ ಜ್ಞಾನವಿಲ್ಲವೆಂದು ಹೇಳಲಾಗುತ್ತದೆ. ಅವನು ಮೂಗುಹಿಡಿದುಕೊಂಡು ಹಿಮಾಲಯದಲ್ಲಿ ಕೂಡಲು ಯೋಗ್ಯನಾಗಿದ್ದಾನೆಂದು ಮಾತಾಡಿ ನಗುತ್ತಾರೆ.

ಮುತ್ಸದ್ದಿತನದ ಫಲವು ಎಂಬುದು ಸ್ವಾಭಾವಿಕವಾಗಿದೆ. ಮುತ್ಸದ್ದಿಗಳನ್ನು ಎದುರಿಸಲು ಸರ್ವ ದೇಶಗಳು ತಮ್ಮ ತಮ್ಮ ರಾಜಕಾರಣಿಗಳನ್ನು ಈ ಮೋಸದ ವ್ಯವಸಾಯದಲ್ಲಿ ಶಿಕ್ಷಣ ಕೊಟ್ಟು ಸಿದ್ಧಮಾಡಿ ಬಿಟ್ಟಿದ್ದಾರೆ. ಒಟ್ಟಿನಲ್ಲಿ ಒಬ್ಬರನ್ನು ಒಬ್ಬರು ಬೆಟ್ಟಿಯಾದರೆ ಇಬ್ಬರೂ ತಮ್ಮ ತಲೆಯ ಮೇಲೆ ಟೊಪ್ಪಿಗೆಯು ಬೀಳಬಾರದೆಂದು ಗಟ್ಟಿಯಾಗಿ ತಮ್ಮ ತಮ್ಮ ತಲೆಗಳನ್ನು ಹಿಡಿದುಕೊಳ್ಳುವ ಕಾಲವು ಈಗ ಬಂದಿದೆ. ಹೀಗಾಗಿ ಇಂದು ಜಗತ್ತಿನ ತುಂಬ ಮೋಸ ವಿದ್ಯಾಪಾರಂಗತರಾದ ಮುತ್ಸದ್ದಿಗಳ ಹಾವಳಿಯು ಹೆಚ್ಚಾಗಿ ಹೋಗಿದೆ. ಈ ಹಾವಳಿಯೇ ಇಂದಿನ ಕಾಲದಲ್ಲಿ ಸರ್ವಕಡೆಗೆ ಬೆಂಕಿ ಹಚ್ಚನಗುತ್ತಿದೆ.

ನೈತಿಕಬಲದ ಸ್ಥಳದಲ್ಲಿ ಇಂದು ಸಾರ್ವತ್ರಿಕವಾಗಿ ಕಾಣುವುದು ದೈಹಿಕಬಲ, ಸೈನಿಕಬಲ ಅಥವಾ ಪಾಶವಿಶಕ್ತಿ. ಇದರಿಂದ ದ್ವೇಷವು ಮಾತ್ರ ಹುಟ್ಟುವದಲ್ಲದೆ ಪರಸ್ಪರ ಸ್ನೇಹ ಪ್ರೇಮಗಳು ಉದ್ಭವಿಸುವುದು ಸಾಧ್ಯವಿಲ್ಲ ಎಂಬ ಮಾತು ಅನೇಕ ಶತಮಾನಗಳ ಅನುಭವದಿಂದ ಸ್ಪಷ್ಟವಾಗಿದೆ.

ಹಿಂದುಸ್ಥಾನದಲ್ಲಿ ಹುಟ್ಟಿ ಜಗತ್ತಿಗೇ ನೈತಿಕ ಬಲದ ಅರ್ಥಾತ್ ಅಹಿಂಸೆ ಮತ್ತು ಸತ್ಯಗಳ ಪ್ರಭಾವವನ್ನು ತೋರಿಸಿದ ಮಹಾತ್ಮಾ ಗಾಂಧೀಯವರ ಗುಣಗಾನವನ್ನು ಇಂದು ಜಗತ್ತನ್ನೇ ದಾರಿಗೆ ತರಬಲ್ಲ ಸಾಮರ್ಥ್ಯಪೂರ್ಣವಾಗಿವೆ ಎಂದು ಹೇಳುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಇನ್ನೂ ಕೆಲವು ಕಾಲ ಜೀವಂತವಿದ್ದರೆ ಈ ಜಾಗತಿಕ ಮುತ್ಸದ್ದಿಗಳು ಈ ಪರಿಸ್ಥಿತಿಯ ದಾರಿಯಲ್ಲಿ ಹೋಗಿ ಹೋಗಿ ಕೊನೆಗೆ ಒಂದು ಗವಿಯಲ್ಲಿ ಹೋಗಿನಿಂತು, ಆಗ ಮಹಾತ್ಮಾಜಿಯವರನ್ನು ತಮ್ಮನ್ನು ಉದ್ಧರಿಸಲು ಕರೆಯುತ್ತಿದ್ದರೊ ಏನೋ!

ಐನ್‌ಸ್ಟೀನರು ಹೇಳುವ ಜಾಗತಿಕ ರಾಜ್ಯವ್ಯವಸ್ಥೆಯ ಕಲ್ಪನೆಯು ಆ ನೈತಿಕ ಬಲದ ತಳಹದಿಯ ಮೇಲೆ ನಿಂತಿದೆ. ಜಗತ್ತಿನಲ್ಲಿ ಯಾವ ರಾಷ್ಟ್ರವೂ ಇನ್ನೊಬ್ಬರ ದುಡ್ಡು, ರಾಜ್ಯ, ಅಧಿಕಾರಗಳಿಗೆ ಆಶೆ ಮಾಡಬಾರದು. ಆ ತರಹದಿಂದ ವರ್ತಿಸಿ ಪರಸ್ಪರರಲ್ಲಿ ಇಂದು ಬೇರುಬಿಟ್ಟಿದ್ದ ದ್ವೇಷ ಅಸೂಯೆ, ಸಂಶಯವೃತ್ತಿಗಳನ್ನು ದೂರ ಮಾಡಿಕೊಳ್ಳಬೇಕು. ಎಲ್ಲರೂ ಕೂಡಿ ಜಗತ್ತನ್ನು ನಿಯಂತ್ರಿಸಬಲ್ಲ ಒಂದು ಶಕ್ತಿಯನ್ನು ಹುಟ್ಟಿಸಿಡಬೇಕು. ಆ ಮೇಲೂ ಯಾವುದೇ ರಾಷ್ಟ್ರವು ಅನ್ಯಾಯವಾಗಿ ವರ್ತಿಸಲು ಮುಂದೆ ಬಂದರೆ ಅದರ ಮುಗ್ಗಲನ್ನು, ಆ ಜಾಗತಿಕ ಶಕ್ತಿಯ ಸಹಾಯದಿಂದ ಮುರಿಯಲು ಸರ್ವರಾಷ್ಟ್ರಗಳು ಮುಂದೆ ಬರಬೇಕು. ಈ ತರಹದ ವ್ಯವಸ್ಥೆಯಾದರೆ ಇಂದಿನ ಈ ಅನಿಶ್ಚಿತ ವಾತಾವರಣವು ಹಾ ಹಾ ಅನ್ನುವುದರೊಳಗೆ ಮಾಯವಾಗುವುದೆಂದು ಅವರ ಅಂಬೋಣವಿದೆ.

ರಶಿಯಾ ದೇಶದ ಬಗ್ಗೆ ಇಂದು ಇತರ ರಾಷ್ಟ್ರಗಳು ಆಕ್ಷೇಪಿಸುತ್ತವೆ. ಆ ರಶಿಯಾ ದೇಶವು ಕೂಡ, ಮೇಲೆ ಹೇಳಿದಂತಹ

ವ್ಯವಸ್ಥೆಯಾದಲ್ಲಿ ಏನೂ ಹಿಂದು ಮುಂದೆ ನೋಡದೆ ಆ ವ್ಯವಸ್ಥೆಯಲ್ಲಿ ಸಹಕರಿಸದೆ ಇರಲಾರರೆಂದು ಈನ್‌ಸ್ಟೀನರು ಹೇಳಿದ್ದಾರೆ. ಒಂದು ವೇಳೆ ಅದು ಅತ್ತ ಹೊಡೆದರೂ ಅದನ್ನು ದಾರಿಗೆ ತರುವುದು ಆ ಜಾಗತಿಕ ಶಕ್ತಿಗೆ ಕಷ್ಟವಾಗಲಾರದು ಎಂಬುದು ಅವರ ಮತ.

ಸದ್ಯಕ್ಕೆ ಈ ವಿಚಾರಕ್ಕೆ ಚಾಲನೆ ಸಿಗಬೇಕಾದರೆ ಅಂತಹ ಸಂಬಂಧವನ್ನು ಹುಟ್ಟಿಸಲು, ಕೆಲವು ನಿಃಪಕ್ಷಪಾತ ಸ್ವಭಾವದ ಮುತ್ಸದ್ದಿಗಳು ಮುಂದೆ ಬರಬೇಕಾಗುವುದು ಅಂಥವರು ಜಗತ್ತಿನಲ್ಲಿ ಇದ್ದೇ ಇದ್ದಾರೆ, ಅವರು ಈ ವಿಚಾರವನ್ನು ಕಟ್ಟಿಕೊಂಡು, ಕೊಡಹಿಕೊಂಡು ಏಳುವುದು ಅವಶ್ಯವಿದೆ.

ಪರಿಸ್ಥಿತಿಯು ಇಷ್ಟೊಂದು ಕೆಟ್ಟಿರುವಾಗ ಅದರೊಳಗಿಂದ ಒಂದು ಸುರಕ್ಷಿತತೆಯ ಮಾರ್ಗವು ದೊರಕಲೇ ಬೇಕು. ಅದು ಹೂಡುವ ಕಾರ್ಯವು ಈಗ ನಿಃಸಂಶಯವಾಗಿ ಬಂದಿದೆ ಅದಕ್ಕಾಗಿ ಒಂದು ಹೊಸ ಪ್ರಯತ್ನವು ನಡೆದು ಆ ನಿಶ್ಚಿತ ಕಾರ್ಯವು ಯಶಸ್ವಿಯಾಗಿ ಸಾಗಲಿ ಎಂದು ಹಾರೈಸೋಣ

## ರೇಲ್ವೆಗಳಲ್ಲಿಯ ಪುಕ್ಕಟೆ ಪ್ರವಾಸ

(4ನೇ ಪುಟದಿಂದ)

ಯುಂಟಾದರೆ ಅದರ ಪರಿಣಾಮದಿಂದ ಆ ವಿಷಯವನ್ನು ರೇಲ್ವೆ ಅಧಿಕಾರಿಗಳಿಗೆ ತಿಳಿಸುವ ಪ್ರಸಂಗಗಳು ಆಗಾಗ ಬರುತ್ತಿರುತ್ತವೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಹಾಗಾಗಲಾರದು

ಆ ಕಾರ್ಯಕ್ಕಾಗಿ ಇದ್ದ ಅಧಿಕಾರಿಗಳು ಅಂಥವರನ್ನು ಕಂಡು ಹಿಡಿಯುವ ಕಾರ್ಯವನ್ನು ತಾವೇ ಮಾಡಬೇಕಾಗುವುದು, ಅದನ್ನು ಸಿದ್ಧಮಾಡಬೇಕಾದ ಪ್ರಸಂಗದಲ್ಲಿ ಜನತೆಯ ಸಹಾಯವನ್ನು ನ್ಯಾಯವಾದ ಮಾರ್ಗದಿಂದ ದೊರಕಿಸಲು ಹೋದರೆ, ಅದು ಸಿಗುವ ಸಂಭವವು ಇದೆ. ತಾವಾಗಿಯೇ ಕೆಲವು ಜನರು ಸರಕಾರದವರಿಗೆ ಇಂತಹ ಸಹಾಯವನ್ನು ಮಾಡಲು ಸಿದ್ಧರಿರುತ್ತಾರೆ. ಅಂಥವರ ಸಂಖ್ಯೆಯು ಸಣ್ಣದಿರುತ್ತದೆ

ಕಾರಣ ಸರಕಾರದವರು ತಮ್ಮ ಕಾಯಿದೆ, ಅಧಿಕಾರಿಗಳ ಸಹಾಯದಿಂದಲೇ, ದೇಶದಲ್ಲಿಯ ಇಂತಹ ಅಪರಾಧಗಳನ್ನು ಕಂಡು ಅವುಗಳನ್ನು ಕಡಿಮೆ ಮಾಡಲು ಯತ್ನಿಸುವುದು ಸಮಂಜಸವಾದ ಕಾರ್ಯವಾಗಿದೆ. ಆದರೂ ಇಂತಹ ಅಪರಾಧಗಳು ಜಗತ್ತು ಇರುವವರೆಗೆ ಇರತಕ್ಕವೇ. ಮನುಷ್ಯನ ಸ್ವಾಭಾವಿಕ ಪ್ರವೃತ್ತಿಯನ್ನು ಲಕ್ಷಿಸಿ ಈ ಅಪರಾಧಗಳನ್ನು ನಿರ್ನಾಮ ಮಾಡಲು ಮೇಲಿಂದ ಮೇಲೆ ಅನೇಕ ತರಹದ ಪ್ರಯತ್ನಗಳು ನಡೆಯಬೇಕಾಗುವುದು. ಅಂತಹ ಪ್ರಯತ್ನಗಳಿಂದಲೇ ಈ ರೇಲ್ವೆ ಪುಕ್ಕಟೆ ಪ್ರವಾಸಿಕರ ಸಂಖ್ಯೆಯು ಕಡಿಮೆಯಾಗಬೇಕಾಗಿದೆ.

## ಆಡಳಿತದಲ್ಲಿ ಕಾಂಗ್ರೆಸ್ಸಿಗರು ಕೈಹಾಕಕೂಡದು

### ರಾಷ್ಟ್ರಪತಿಗೆ ಆದೇಶ

ದೈನಂದಿನ ಆಡಳಿತದಲ್ಲಿ ಕಾಂಗ್ರೆಸ್ಸಿಗರು ಕೈಹಾಕುತ್ತಿರುವದರಿಂದ ತೊಂದರೆಯಾಗುತ್ತಿದೆಯೆಂದು ಅನೇಕ ಪ್ರಾಂತಗಳ ಅಧಿಕಾರಿಗಳಿಂದ ದೂರು ಬಂದದ್ದರಿಂದ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದರು ಎಲ್ಲ ಪ್ರಾಂತಿಕ ಕಾಂಗ್ರೆಸ ಸಮಿತಿಗಳಿಗೆ ಒಂದು ಆದೇಶ ಕಳಿಸಿ ಕಾಂಗ್ರೆಸ್ಸಿಗರು ತಮ್ಮ ಪ್ರಾಂತದ ಆಡಳಿತದಲ್ಲಿ ಕೈಹಾಕಕೂಡದೆಂದು ಹೇಳಿದ್ದಾರೆ. ರಚನಾತ್ಮಕವಾದ ಸೂಚನೆಗಳೇನಾದರೂ ಇದ್ದರೆ ಅ. ಭಾ. ಕಾಂಗ್ರೆಸ ಸಮಿತಿಯು ಅದನ್ನು ಸ್ವೀಕರಿಸಿ ಯೋಗ್ಯ ಅಧಿಕಾರಿಗಳ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸುವದೆಂದು ಹೇಳಲಾಗಿದೆ.

## ಮಹಾತ್ಮರ ವಿಚಾರ ತರಂಗ

ಸತ್ಯದ ಸಾಕ್ಷಾತ್ಕಾರ ಹೊಂದಬೇಕಾದ ಜಗತ್ತಿನಲ್ಲಿಯ ಸಕಲ ಪ್ರಾಣಿಗಳಲ್ಲಿ ಅತ್ಯಂತ ಹೀನವಾದ ಜೀವಿಗಳನ್ನು ನಾವು ನಮ್ಮಂತೆಯೇ ಬಗೆಯಬೇಕು. ಇದನ್ನು ಹೊಂದಲಿಚ್ಛಿಸುವ ಯಾವನಾದರೂ ತನ್ನ ಜೀವಮಾನದೊಳಗಿನ ಯಾವ ಚಟುವಟಿಕೆಯಿಂದಲೂ ಅಲಿಪ್ತನಾಗಿರಲಾರನು. ಈ ನನ್ನ ಸತ್ಯದ ಆರಾಧನೆಯಿಂದಲೇ ನಾನು ರಾಜಕಾರಣದಲ್ಲಿ ಸೆಳೆಯಲ್ಪಟ್ಟಿರುವೆನು. ರಾಜಕಾರಣಕ್ಕೂ ಧರ್ಮಕ್ಕೂ ಯಾವ ಸಂಬಂಧವಿಲ್ಲೆಂದು ಹಲವರು ಪ್ರತಿಪಾದಿಸುವರು. ಇಂಥವರಿಗೆ ಧರ್ಮದ ಗಂಧವೇ ಇಲ್ಲ. ಈ ಮಾತನ್ನು ನಾನು ನಿಸ್ಸಂದೇಹವಾಗಿಯೂ ಅತ್ಯಂತ ನಮ್ರತೆಯಿಂದಲೂ ಹೇಳುತ್ತೇನೆ. ಈ ಭೂಮಿಯ ಮೇಲಿನ ನಶ್ವರ ರಾಜ್ಯದ ತೃಷ್ಣೆ ನನಗಿಲ್ಲ. ರಾಮರಾಜ್ಯವನ್ನು ಪ್ರಸ್ಥಾಪಿಸಲು ನಾನು ಹೆಣಗುತ್ತಿದ್ದೇನೆ. ಸಕಲ ಜೀವಧಾರಿಗಳೊಡನೆ ನಾನು ಸಮರಸನಾಗಬೇಕೆಂಬುದೇ ನನ್ನ ಹಂಬಲ ಭಗವದ್ಗೀತೆಯ ಭಾಷೆಯಲ್ಲಿ ಹೇಳುವದಾದರೆ, ನಾನು ಶತ್ರುಮಿತ್ರರೆಂದು ಯಾರನ್ನೂ ಭಾವಿಸುವದಿಲ್ಲ. ಎಲ್ಲರೊಡನೆ ಸುಖಶಾಂತಿಯಿಂದ ಬಾಳಬಯಸುತ್ತೇನೆ. ಧರ್ಮವಿರಹಿತವಾದ ರಾಜಕಾರಣವನ್ನು ನಾನರಿಯೆ. ಅವು ಒಂದನ್ನೊಂದು ಆಶ್ರಯಿಸಿವೆ. ಧರ್ಮವಿರಹಿತವಾದ ರಾಜಕಾರಣವು ಮರಣದ ಉರುಲು, ಯಾಕಂದರೆ ಅದರಿಂದ ಅಂತರಾತ್ಮನ ನಾಶವಾಗುವದು.

## ಹಿಂದುಸ್ಥಾನೀ

“ಇದು ಹಿಂದುಸ್ಥಾನದ ಭಾಷೆಯಾಗಿದೆ ಇದ ಎಲ್ಲಾ ಪ್ರಾಂತಗಳ ಭಾಷೆಯಾಗಬೇಕಾಗಿದೆ ಅಂದರೆ ತಮಿಳು ನಾಡಿನಲ್ಲಿ ತಮಿಳಿಗಾಗಲಿ, ಆಂಧ್ರದಲ್ಲಿ ತೆಲುಗಿಗಾಗಲಿ, ಅಥವಾ ಕನ್ನಡ ನಾಡಿನಲ್ಲಿ ಕನ್ನಡಕ್ಕಾಗಲಿ, ಮಲಬಾರಿನಲ್ಲಿ ಮಲೆಯಾಳಕ್ಕಾಗಲೀ ಯಾವ ಸ್ಥಾನವೂ ಇಲ್ಲವೆಂದಲ್ಲ ಪ್ರತಿಪ್ರಾಂತಕ್ಕೆ ತನ್ನದಾದ ಒಂದು ಭಾಷೆ ಇದೆಯಲ್ಲದೆ ಇದ್ದೇ ತೀರಬೇಕು. ಆದರೆ ನಾವು ಇನ್ನೊಂದ ಪ್ರಾಂತಕ್ಕೆ ಹೋಗುವಾಗ ನಮಗೆ ಹಿಂದಿಯಂತಹ ಸಾರ್ವಜನಿಕ ಭಾಷೆಯೊಂದು ಬೇಕೇ ಬೇಕು”

ಮಹಾತ್ಮಾ ಗಾಂಧಿ

## ಸ್ತ್ರೀಯರಿಗೆ ಸೂಚನೆಗಳು

1) ಹಣ್ಣು ಮತ್ತು ಪಲ್ಲೆಕಾಯಿಯನ್ನು ಪೇಟೆಯಿಂದ ತಂದ ಕೂಡಲೆ ಉಪಯೋಗಿಸಬೇಕು ಇಲ್ಲವಾದರೆ ಅವುಗಳನ್ನು ಮುಚ್ಚಿ ತಂಪಾದ ಸ್ಥಳದಲ್ಲಿ ಇಡಬೇಕು.

2) ಪೇಟೆಯಿಂದ ತಂದ ಪಲ್ಲೆ ಕಾಯಿಯನ್ನು ಎರಡು ಮೂರು ಸಲ ಸ್ವಚ್ಛವಾಗಿ ತೊಳೆಯಬೇಕು

3. ಸಾಧ್ಯವಿದ್ದಷ್ಟು ಕಡಿಮೆ ನೀರಿನಲ್ಲಿ ಪಲ್ಲೆಕಾಯಿಯನ್ನು ಮೆತ್ತಗಾಗುವವರೆಗೆ ಬೇಯಿಸಬೇಕು ಹೆಚ್ಚು ಬೇಯಿಸಬಾರದು.

4) ಕಾಯಿಪಲ್ಲೆಯನ್ನು ಬೇಯಿಸುವಾಗ ಉಗಿಯು ಹೊರ ಹೋಗದಂತೆ ಮುಚ್ಚಳವನ್ನು ಬಿಗಿಯಾಗಿ ಮುಚ್ಚಬೇಕು.

5) ಪಲ್ಲೆ ಬೇಯಿಸಿದ ನೀರನ್ನು ಹಾಗೆ ಇಲ್ಲವೆ ರಸಬಿಟ್ಟು ಪಲ್ಲೆ ಮಾಡುವದ ವರೆ ಅದರಲ್ಲಿಯೆ ಹಾಕಬೇಕು

6) ಗಡ್ಡೆಗಳನ್ನು ಸೊಪ್ಪು ಸಹಿತವಾಗಿ ಬೇಯಿಸಬೇಕು. ಇದರಿಂದ ಜೀವಸತ್ವಗಳು ವ್ಯರ್ಥ ಹೋಗುವದಿಲ್ಲ.

7) ಪಲ್ಲೆಕಾಯಿ ಬೇಯಿಸುವಾಗ ಎಂದಿಗೂ ಸೋಡಾ ಉಪಯೋಗಿಸಬಾರದು ಇದರ ಉಪಯೋಗದಿಂದ ಜೀವನಸತ್ವಗಳು ನಾಶ ಹೊಂದುತ್ತವೆ.

8) ಪಚಡಿ ಮುಂತಾದ ಹಸಿ ಪಲ್ಲೆಯನ್ನು ತಿನ್ನುವ ಸ್ವಲ್ಪ ಮೊದಲು ತಯಾರಿಸಬೇಕು.

*iVsit Once! And Get Satisfaction!*

**MAGAL BROTHERS,**

(*Sub Agents*:-Madura Truthful Mfg., Co., Ltd.,)
BANGLORE ROAD,
**BELLARY.**

*Ready made clothes and Hostery goods Available at cheap and reasonable rates*

ಒಂದು ಬಾರಿ ಬನ್ನಿರಿ ಮತ್ತು ತೃಪ್ತಿ ಹೊಂದಿರಿ,

**ಮಾಗಲ್ ಬ್ರದರ್ಸ್**

(ಸಬ್ ಏಜಂಟ್ಸ್:-
ಮಧುರ ಟ್ರುತ್‌ಫುಲ್ ಮ್ಯಾನುಫ್ಯಾಕ್ಚರಿಂಗ್ ಕಂ. ಲಿ.)
ಬೆಂಗಳೂರು ರಸ್ತೆ,
ಬಳ್ಳಾರಿ.

ಹೊಲಿದ ಸಿದ್ಧಪಡಿಸಿದ ಉಡುಪುಗಳು ಮತ್ತು ಸೀರೆ ಮುಂತಾದ ಇನ್ನೂ ಅನೇಕ ತರಹ ಬಟ್ಟೆಗಳು ನಮ್ಮಲ್ಲಿ ಅತಿ ಸುಲಭ ಮತ್ತು ನ್ಯಾಯವಾದ ಬೆಲೆಗೆ ದೊರೆಯುತ್ತವೆ

*RECEIVED*
**1948**
**MODEL MURPHY**
(5 to 6 Valves)
WITH
**SPREAD BAND PERFORMANCE**

**RADIO-LECTRIC HOUSE**
BELLARY.

ಬಂದಿದೆ ಬಂದಿದೆ
ಅಪೂರ್ವ ಸುಸಂಧಿ
ನೀವು ಇಷ್ಟು ದಿನ ಅಪೇಕ್ಷೆಯಿಂದ ಕೇಳುತ್ತಿದ್ದ
**1948**
**ಮಾಡಲ್ ಮರ್ಫಿ**
(ಆಕಾಶವಾಣಿ ಯಂತ್ರ) (5 ರಿಂದ 6 ವಾಲ್ವ್ಸ್)
ಎಲ್ಲ ಆಧುನಿಕ ಪರಿಕರ – ಧ್ವನಿಗ್ರಾಹಕಗಳಿವೆ.

**ರೇಡಿಯೋ-ಲೆಕ್ಟ್ರಿಕ್ ಹೌಸ್, ಬಳ್ಳಾರಿ.**

ಶುದ್ಧ ಮತ್ತು ಸ್ವಚ್ಛ
**ಎಳ್ಳೆಣ್ಣೆ**




**Ambati Subbanna & Co.,**
SAMALKOT.

ಅಂಬಾಟಿ ಸುಬ್ಬಣ್ಣ & ಕೊ.,
ಸಾಮಲಕೋಟೆ.

**100% Pure Gingelly Oil**

*Can be used for*
1. **Head for cooling effect.**
2. **Food for taste.**
3. **Pickles for long duration.**

*Guaranteed against all adultertion*
See the Seal and Purchase
*Sold retail and in our bottles*

**ಶುದ್ಧತೆ - ಗುಣದಲ್ಲಿ ಅದ್ವಿತೀಯ.**

ಅಭ್ಯಂಗನದಲ್ಲಿ ಉಪಯೋಗಿಸಿರಿ
ಕಣ್ಣಿಗೆ - ಮೆದುಳಿಗೆ ತಂಪು.
ಆಹಾರದಲ್ಲಿ ರುಚಿ.
ಉಪ್ಪಿನಕಾಯಿಗೆ ಉಪಯೋಗಿಸಿದರೆ
ವರ್ಷಗಳಲ್ಲಿ ಕೆಡುವುದಿಲ್ಲ.

ಗ್ಯಾರಂಟಿ ಕೊಡುತ್ತೇವೆ. ನಮ್ಮ ಸೀಲು ನೋಡಿಕೊಂಡು
ಚಿಲ್ಲರೆಯಾಗಿಯೂ ನಮ್ಮ ಬಾಟಲುಗಳಲ್ಲೂ ಮಾರಲಾಗುತ್ತೆ

*Our Bellary Agents*
M/s M. Hussainjee Rao & M. Venkoji Rao,
M/s V. M. Giri & Sons, Car Street.

ನಮ್ಮ ಬಳ್ಳಾರಿ ಏಜಂಟರು:
ಮೆಸರ್ಸ್ ಎಂ. ಹುಸೇನ್‌ಜೀರಾವ್, ಎಂ. ವೆಂಕೋಜೀರಾವ್,
.. ವಿ. ಎಂ. ಗಿರಿ ಅಂಡ್ ಸನ್ಸ್, ತೇರು ಬೀದಿ.

Do you want to see and hear
Our first Popular Prime Minister of India
Pandit Jawaharlal Nehru.

ನಮ್ಮ ಜನಪ್ರಿಯ, ಆದರ್ಶ
ಪ್ರಥಮ ಪ್ರಧಾನ ಮಂತ್ರಿಗಳಾದ
ಪಂಡಿತ ಜವಹರಲಾಲ ನೆಹರು
ಅವರನ್ನು
ನೋಡ ಕೇಳ ಬಯಸುವಿರಾ?

His visit to Ooty E.A.C.F.E.
Sessions
Garden Party by Sir C.P.
His Public speeches
In
Ooty & Coimbatore
This Topical Reel
shown free in

PRABHAT

ಊಟಿಯ ಆರ್ಥಿಕ ಪರಿಷತ್ತಿನ
ಸಮಾವೇಶಗಳು.
ಸರ್. ಸಿ. ಪಿ. ಯವರ ಔತಣ
ನೆಹರೂರವರ ಊಟಿ ಮತ್ತು
ಕೊಯಂಬತೂರುಗಳಲ್ಲಿನ
ಭಾಷಣಗಳು.
೧೫-೮-೪೮ ರಿಂದ

ಪ್ರಭಾತದಲ್ಲಿ

ALONG WITH
Balaraju
Now its 12th Week

ಈಗ ೧೨ನೇ ವಾರದಲ್ಲಿ ನಡೆಯುತ್ತಿರುವ
ಬಾಲರಾಜು
ಚಿತ್ರದೊಂದಿಗೆ ಉಚಿತವಾಗಿ
ತೋರಿಸಲಾಗುವುದು



NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ.

(Nationalist Weekly)

| ಚಂದಾದರಗಳು. | Subscription Rates |
| --- | --- |
| ವರ್ಷಕ್ಕೆ 5—0—0<br>6 ತಿಂಗಳಿಗೆ 3—0—0<br>ಆರು ತಿಂಗಳ ಕಡಿಮೆ<br>ಚಂದಾ ಸ್ವೀಕರಿಸುವುದಿಲ್ಲ | One Year 5—0—0<br>Six months 3—0—0<br>Subscription will no be accepted for less than 6 months. |

To

Sri ............................................

............................................

............................................

Printed at Vittal Press, Edited & Published by T. B. Keshava Rao.

# ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ವರ್ಷ ೧೧
ಸಂಚಿಕೆ ೩೦

ಸೋಮವಾರ ೨೩ ಆಗಸ್ಟ ೧೯೪೮.

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್

## ರಾಷ್ಟ್ರಗೀತೆ

(ಕೇಂದ್ರ ಸರಕಾರದ ನಿರ್ಣಯದಂತೆ ನಡೆಯಲು 'ಹರಿಜನ' ಪತ್ರಿಕೆಯಲ್ಲಿ ಶ್ರೀ ಕೆ. ಮಶ್ರೂವಾಲ ಬರೆದಿರುವದು)

ಈಚೆಗೆ ನಡೆಯುತ್ತಿರುವಂತೆ ಕಾಣುವ "ವಂದೇ ಮಾತರಂ" ಮತ್ತು "ಜನಗಣ ಮನ" ಹಾಡುಗಳ ನಡುವಿನ ವಾದವಿವಾದಗಳಲ್ಲಿ ಪ್ರವೇಶಿಸಲು ಅಪೇಕ್ಷಿಸಿರಲಿಲ್ಲ. ಒಬ್ಬ ಪತ್ರಲೇಖಿಕೆ ನನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಬೇಕೆಂದು ಅಪೇಕ್ಷಿಸಿದ್ದಾಳೆ. ಸ್ವತಃ ಅವಳು ಎರಡನೆಯದರ ಪಕ್ಷಪಾತಿ. ಅದರ ಪರವಾಗಿ ಅವಳು ಹಲವು ಕಾರಣಗಳನ್ನು ಮುಂದೆ ಮಾಡಿದ್ದಾಳೆ.

ಸತ್ಯ ಹೇಳಬೇಕಾದರೆ ಇಂಥ ವಿಷಯಗಳಲ್ಲಿ ಮೊದಲು ಅಭಿಪ್ರಾಯಗಳನ್ನು ಮಾಡಿಕೊಂಡೇ ಮತ್ತೆ ಕಾರಣಗಳನ್ನು ಹುಡುಕಲಾಗುವದು. ಅಭಿಪ್ರಾಯಗಳನ್ನು ಕಾರಣಗಳ ಆಧಾರದಿಂದ ಮಾಡಿಕೊಳ್ಳವೆ ನಮ್ಮ ಕಿವಿಗೂ ಅಂತರಂಗಕ್ಕೂ ಅವೆಷ್ಟು ಮೆಚ್ಚುವದೆಂಬುದನ್ನನುಸರಿಸಿ ಮಾಡಿಕೊಳ್ಳುತ್ತೇವೆ. ಆದುದರಿಂದ ನಾನು ಕಾರಣಗಳನ್ನು ಕೊಡುವ ಗೋಜಿಗೆ ಹೋಗುವದಿಲ್ಲ.

"ವಂದೇಮಾತರಂ" ನನಗೆ ಪ್ರಿಯವಾಗಿದ್ದರೂ 'ಜನಗಣ ಮನ'ವು ಪ್ರಿಯಕರವಾಗಿದೆ. ಆದರೂ ನಾನು ಈ ವಿಷಯದಲ್ಲಿ ಕೇಂದ್ರ ಸರಕಾರ ಮಾಡಬಹುದಾದ ನಿರ್ಣಯಕ್ಕೆ ಅದು ಏನೇ ಇರಲಿ ತಲೆಬಾಗಲು ಸಿದ್ಧನಿದ್ದೇನೆ.

ಮಶ್ರೂವಾಲ.

## ಝೂಂಡ ಹಾರುತ್ತಿದೆ ನೋಡಿದಿರಾ?

ಜಗತ್ತಿ ಮಲಗಿದ ಹೊತ್ತಿನ ಒಳಗೆ
ನಮ್ಮದು ದೇಶದ ಭಾರತದೊಳಗೆ
ಒಂದೇಗಂಟೆಯ ಹೊತ್ತಿನ ಒಳಗೆ
ಎಲ್ಲೆಡೆಯಲ್ಲಿಯು ಕತ್ತಲೆಯೊಳಗೆ
ಝೂಂಡ ಹಾರುತಿದೆ ನೋಡಿದಿರಾ?

ಕೆಂಪ್ಬಿಳಿ ಬಣ್ಣದ ಪಟ್ಟೆಗಳುಂಟು
ಅಶೋಕ ಚಕ್ರವು ಮಧ್ಯದೊಳುಂಟು
ಅಂದದ ಚಂದದ ಬಾಳೆಯ ಎಲೆಯು
ಬಣ್ಣದ ಪಟ್ಟೆ ಅತಿಕೆಳಗುಂಟು
ಝೂಂಡ... ...........?

ವಿದೇಶಿಕಿಂತಲು ಚಂದಿಮ ಧ್ವಜವು
ಪಟಪಟ ಶಬ್ದದಿ ಮೇಲಕೆ ಕೆಳಗು
ಅದು ಮೇಲಕೆ ಕೆಳಗು ಹಾಗು ಹೀಗು
ಚಂದದಿ ಉದ್ದನ ಕೋಲಿನ ಕೊನೆಗು
ಝೂಂಡಾ...............?

ರಾಜ್ಯದಿ ರೈತಗುಗಳ ಮೇಲಿಕ್ಕಿ
ಧನಿಕರುಗಳ ಹೆಸರನು ತಾವುಕ್ಕಿ
ಒಡಿಸಿ ಪರದೇಶಿಜನ ಹಿಂಡುಗಳ
ಸೊಕ್ಕಿದ ಆಂಗ್ಲರ ನೆತ್ತಿಯಕುಕ್ಕಿ,
ಝೂಂಡ....... .......?

ದೇಶದಿ ಆಂಗ್ಲರ ಬುಡವನು ಒಂಸಿ
ಹಿಂದೂ - ಮುಸ್ಲಿಂ ಐಕ್ಯದಿ ಕೂಡಿಸಿ
ನಮ್ಮಯ ದೇಶದಿ ಎಲ್ಲೆಲ್ಲಿಯು
ತಾ ಅಹಿಂಸದ ತತ್ವವ ಸಾರಿಸಿ
ಝೂಂಡ ......... ...?

ಕಾ. ನ. ಮೂರ್ತಿ,
ಹರಪನಹಳ್ಳಿ.

(ಕವಿವರ ಬೇಂದ್ರೆಗಳವರ ಕೃಪೆಯಿಂದ, ಅವರ "ಹಕ್ಕಿ ಹಾರುತ್ತಿದೆ ನೋಡಿದಿರಾ?" ಎಂಬ ಪದ್ಯದಂತೆ ಬರೆದಿದೆ).

## ಪತ್ರವ್ಯವಹಾರ

## ರೈಲ್ವೆ ವಾಗೀನುಗಳ ಕೊರತೆಯೋ?

ನವಭಾರತದ ಸಂಪಾದಕರಿಗೆ —

ದೇಶದ ಎಲ್ಲಾ ಕಡೆಗಳಲ್ಲೂ ಆಹಾರ ಧಾನ್ಯಗಳ ಕೊರತೆಯಿದ್ದು ಧಾರಣೆವಾಸಿಗಳು ಅಧಿಕವಾಗಿರುವಾಗ ಹೆಚ್ಚು ಬೆಳೆದ ಪ್ರದೇಶಗಳಿಂದ ಆಹಾರಧಾನ್ಯಗಳನ್ನು ತರಿಸಲು ಸರ್ಕಾರದವರು ಸೌಲಭ್ಯಗಳನ್ನೊದಗಿಸದಿರುವುದು ಶೋಚನೀಯವಾಗಿದೆ. ನಾವು ಕೊಂಡ ಮಾಲು ಸ್ಟೇಷನ ಅಂಗಳದಲ್ಲಿ ಬಿದ್ದು ಮಳೆ, ಗಾಳಿ, ಸ್ಟೇಷನ್ ಕಳ್ಳರಿಗೆ ಗುರಿಯಾಗಿ ಮಾಲು ಕಳೆದು ಹೋದ ಮಾಲು ಕಡಮೆಯಾಗುತ್ತೆ. ಸ್ಟೇಷನ್ ದೇವತೆಯು ತನ್ನ ಮಾಮೂಲಿಲ್ಲದೆ (ವಾಗೀನಿಗೆ 100 ರೂ.?) ವಾಗೀನನ್ನೊದಗಿಸುವುದಿಲ್ಲ. ಇಷ್ಟೆಲ್ಲಾ ಕೊಟ್ಟು ನಾವು ಯಾವ ಧಾರಣೆಯಿಂದ ಮಾರಬೇಕು? ನಮ್ಮ ಖರ್ಚು ಲಾಭಗಳನ್ನು ಕೊಳ್ಳುತ್ತವರ ಮೇಲೆ ಹೇರಿದರೆ ಅವರು ಹೇಗೆ ಕೊಳ್ಳ ಬೇಕು? ಇವನ್ನೆಲ್ಲಾ ಆಲೋಚಿಸಿ ನಮ್ಮ ಮದ್ರಾಸ್ ಸರ್ಕಾರದ ಆಹಾರ ಶಾಖೆಯವರು ಸರಿಯಾದ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಿ, ಕೊಂಡ ಮಾಲು ತಡವಿಲ್ಲದೆ ಊರು ಮುಟ್ಟುವಂತೆ ಅನುಕೂಲಗಳನ್ನೊದಗಿಸಬೇಕೆಂದು ಕೋರುತ್ತೇನೆ.

# ಜಿಲ್ಲಾ ವಾರ್ತೆಗಳು ★

## ಬಳ್ಳಾರಿಯಲ್ಲಿ ಔದ್ಯೋಗಿಕ ಶಾಲೆ.

### ಶ್ರೀ ರೆಡ್ಡಿಯವರಿಂದ ಪ್ರಾರಂಭೋತ್ಸವ

ಬಳ್ಳಾರಿ ನಗರದ ಇಂಡಸ್ಟ್ರಿಯಲ್ ಸ್ಕೂಲ ಕಾಂಪೌಂಡದ ಆವರಣದಲ್ಲಿ ಈ ವರ್ಷ 'ದಿ ರಾಯಲಸೀಮ ಪಾಲಿಟೆಕ್ನಿಕ್' ಎಂಬ ಔದ್ಯೋಗಿಕ ಶಾಲೆಯ ಪ್ರಾರಂಭೋತ್ಸವವು ಔದ್ಯೋಗಿಕ ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರಿಂದ 15 ನೆಯ ದಿನಾಂಕ ಮಧ್ಯಾಹ್ನಾತ್ಪರ ನೆರವೇರಿಸಲಾಯಿತು. ದಕ್ಷಮಂಡಲದ ಜಿಲ್ಲೆಗಳಲ್ಲಿ ಇಂಥಾ ಔದ್ಯೋಗಿಕ ಶಾಲೆಯು ಪ್ರಥಮವಾಗಿದ್ದು ಇದರ ಸರ್ವ ಭಾರವನ್ನು ಮದ್ರಾಸ್ ಸರ್ಕಾರವೇ ವಹಿಸುವುದು ಮದ್ರಾಸ್ ಸರ್ಕಾರದವರು ಬಡವಿದ್ಯಾರ್ಥಿಗಳಿಗೆ 15 ವೇತನಗಳನ್ನು ಕೊಟ್ಟಿರುವರು ಈ ಕೆಳಗೆ ಕಾಣಿಸಿದ ಬಳ್ಳಾರಿ ಮಹನೀಯರು 3 ವರ್ಷಗಳವರೆಗೆ ಒಬ್ಬೊಬ್ಬ ಬಡ ವಿದ್ಯಾರ್ಥಿಗೆ ವೇತನ ಕೊಡಲೊಪ್ಪಿರುವರು

| | |
|---|---|
| ರಾಯಲಸೀಮ ಮಹಾಸಭೆ | 1 |
| ರಾ. ಬ. ವೈ. ಮಹಾಬಲೇಶ್ವರಪ್ಪ | 1 |
| ಬೆಲ್ಲದ ಚನ್ನಪ್ಪನವರು | 1 |
| ಮುಂಡ್ಲೂರು ಗಂಗಪ್ಪನವರು | 1 |
| ಮೊಲಗವೇಲಿ ಲಕ್ಷ್ಮಿರೆಡ್ಡಿ | 1 |
| ವೀರಶೈವ ವಿದ್ಯಾವರ್ಧಕ ಸಂಘ | 1 |
| ಅಗಡಿ ಲಕ್ಷ್ಮೀನಾರಾಯಣ | 1 |
| ಗುಡುದೂರ್ ಬ್ರದರ್ಸ್ | 1 |
| ಜಯಂತಿ ರಾಮಚಂದ್ರಪ್ಪ, ರಾಯದುರ್ಗ | 1 |
| ಎನ್. ವೆಂಬೂ ಅಯ್ಯರ್, ಆದವಾನಿ | 1 |
| ಟಿ. ಜಿ. ಸತ್ಯನಾರಾಯಣ | 1 |

ಶ್ರೀ ಬಿ ಭೀಮರಾಯರ ಸಂದೇಶವಾಚನದ ನಂತರ ಶ್ರೀ ರೆಡ್ಡಿಯವರು ಮಾತಾಡುತ್ತ ಇಲ್ಲಿರುವ ಕಟ್ಟಡ ಮತ್ತು ಇತರ ಅನುಕೂಲತೆಗಳನ್ನು ಹೇಳಿ ಇಲ್ಲಿ ಶಾಲೆಯನ್ನಾರಂಭಿಸಲು ಸರ್ಕಾರಕ್ಕೆ ಅನುಕೂಲವಾಯಿತೆಂದರು. ಹಿಂದುಳಿದ ಜಿಲ್ಲೆಗಳವರು ಇದರ ಅನುಕೂಲತೆ ಮಾಡಿಕೊಳ್ಳಲು ಸೂಚಿಸಿ ಶ್ರೀಮಂತರು ಇದರ ಸಹಾಯಕ್ಕೆ ಬರಬೇಕೆಂದರು. ಸಭೆಯಲ್ಲೇ ಕೆಲ ಮಹನೀಯರು ವಾಗ್ದಾನಮಾಡಿದರು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಮಣಿಯವರು ವಂದನಾರ್ಪಣೆ ಮಾಡಿದರು.

## ಬಳ್ಳಾರಿಯಲ್ಲಿ ಸ್ವಾತಂತ್ರ್ಯದಿನೋತ್ಸವ

ಬಳ್ಳಾರಿ ನಗರದಲ್ಲಿ ಸ್ವಾತಂತ್ರ್ಯ ಪ್ರದಾನದ ಪ್ರಥಮ ವಾರ್ಷಿಕೋತ್ಸವವು ಎಲ್ಲಾ ಕಡೆಗಳಲ್ಲೂ ವಿಜೃಂಭಣೆಯಿಂದ ನೆರವೇರಿತು. ಕಾಂಗ್ರೆಸ್ ಸಮಿತಿ, ಸಮಾಜವಾದಿ ಪಕ್ಷ ಬಾಲ ಬಾಲಿಕೆಯರ ಶಾಲೆಗಳು ವೀರಶೈವ ಪ್ರಾಥಮಿಕ ಶಾಲೆ, ಮಲ್ಲಸಜ್ಜ ವ್ಯಾಯಾಮಶಾಲೆ, ಇಲ್ಲಿ ಧ್ವಜಾರೋಹಣ ಸಭೆಗಳೇರ್ಪಟ್ಟಿದ್ದವು. ಮದ್ರಾಸ್ ಸರ್ಕಾರದ ಔದ್ಯೋಗಿಕ ಶಾಖಾ ಮಂತ್ರಿಗಳಾದ ಶ್ರೀ ಹಾಲರ್ವಿ ಸೀತಾರಾಮರೆಡ್ಡಿಯವರು ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ಬಂದಿದ್ದರು.

15ನೆಯ ದಿನಾಂಕ ಪ್ರಾತಃಕಾಲ ಪ್ರಭಾತಫೇರಿಯಾದ ನಂತರ ಕಾಂಗ್ರೆಸ್ ನೇತೃತ್ವದಲ್ಲಿ ಕೂಡಿದ ಸಭೆಗೆ ಶ್ರೀ ಟಿ. ಸುಬ್ರಹ್ಮಣ್ಯಂರವರು ಅಧ್ಯಕ್ಷರಾಗಿದ್ದರು. ಮಂತ್ರಿಗಳಾದ ಸೀತಾರಾಮರೆಡ್ಡಿಯವರು ಸ್ವಾತಂತ್ರ ಮಹೋತ್ಸವದ ಮಹತ್ವವನ್ನರುಹಿ ಹೈದರಾಬಾದ್ ಆಪತ್ತಿನಿಂದ ಪಾರಾಗಲು ಜನತೆಯು ಸಿದ್ಧವಾಗಬೇಕೆಂದೂ ನವಪ್ರಾಪ್ತ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ಪಕ್ಷ ಪಂಗಡಗಳ ಭೇದವಿರಬಾರದೆಂದೂ ಹೇಳಿದರು. ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ಸೇರಿದ ಸಭೆಗೆ ಶ್ರೀ ಭೀಮಸೇನಾಚಾರ್ಯರ ಅಧ್ಯಕ್ಷತೆವಹಿಸಿದ್ದರು. ಅವರಲ್ಲಿ ಶ್ರೀ ಸತ್ಯವಂತರಾವ್, ಕೇಶವರಾವ್, ಶೇಷಗಿರಿಚಾರ್ ವಗೈರೆ ಮಾತಾಡಿ ಕೂಲಿಕಾರರು, ಹರಿಜನರು ವಗೈರೆ ಬಡವರು ಸಂಘಟಿತರಾಗಬೇಕೆಂದರು. ಸ್ತ್ರೀಯರ. ಸಮಾಜದ ಪರವಾಗಿ, ಹರಿಜನಕಾಲೊನಿಗಳಲ್ಲಿ ಮಿಠಾಯಿ ಹಂಚಲಾಯಿತು.

## ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದ

### ೧೬ನೆಯ ವಾರ್ಷಿಕೋತ್ಸವ

ಹ. ಸ. ಸೇ. ಸಂಘದ ವಾರ್ಷಿಕೋತ್ಸವಕ್ಕೆ 16-8-48ನೆಯ ಸೋಮವಾರ ಸಾಯಂಕಾಲ ಶ್ರೀ ಪಾರ್ಥಸಾರಥಿ ಅಯ್ಯಂಗಾರ್ (ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್) ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಇದು ಕೋಟೆ ಹಿಂದೂ ವಿದ್ಯಾರ್ಥಿ ನಿಲಯದಲ್ಲಿ ಸಮಾವೇಶವಾಗಿ ನಗರ ಮಹನೀಯರು ಹರಿಜನ ಬಾಲ ಬಾಲೆಯರಿಂದ ಹರಿಜನ ಭಜನ ಸಂಘದವರಿಂದ ತುಂಬಿದ್ದಿತು. ಭಜನ ಸಂಘದ 'ರಾಮಧುನ್' ಆದನಂತರ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು ತಮ್ಮ ವರದಿಯನ್ನೋದಿದರು. ವರದಿಯ ಮುಖ್ಯಾಂಶಗಳು ಇಂತಿವೆ

"1932ನೆಯ ಸಂವತ್ಸರ ಸಂಘವು ಸ್ಥಾಪಿತವಾಗಿ ಗಾಂಧೀಜೀಯವರ ನೇತೃತ್ವದಲ್ಲಿ ಸ್ಥಾಪಿತವಾದ ಅಖಿಲ ಭಾರತ ಹರಿಜನ ಸೇವಕ ಸಂಘಕ್ಕೆ ಹೊಂದಿಕೊಂಡು ಹಿಂದೂ ಸಮಾಜದಲ್ಲಿ ಅಸ್ಪೃಶ್ಯತಾಕಳಂಕವನ್ನು ನಿರ್ಮೂಲಮಾಡಿ, ಹರಿಜನರ ಆರ್ಥಿಕ, ನೈತಿಕ, ಸಾಮಾಜಿಕ ಅಭಿವೃದ್ಧಿಗಾಗಿ ಸಂಘವು ಯತ್ನಿಸುತ್ತಲಿದೆ. ಈ 16 ವರ್ಷಗಳಲ್ಲಿ ಸಂಘವು ಮಾಡಿದ ಕೆಲಸವು ಸಾರ್ವಜನಿಕರ ಮುಂದಿದೆ.

ಜಿಲ್ಲೆಯ ಶಾಲೆಗಳಲ್ಲಿ 2800 ಹುಡುಗರು, 425 ಬಾಲೆಯರು ಶಿಕ್ಷಣ ಹೊಂದುತ್ತಿರುವರು. ಮಾಧ್ಯಮಿಕ ಶಾಲೆಗಳಲ್ಲಿ 300 ಹುಡುಗರು, 65 ಹುಡುಗಿಯರಿದ್ದಾರೆ ಶಿಕ್ಷಣವು ಹರಿಜನರಿಗೆ ಉಚಿತವಿದ್ದು ಸಂಘದ ಮೂಲಕ ರೂ 1000 ಪುಸ್ತಕ, ಬಟ್ಟೆಗಳಿಗಾಗಿ ವಿದ್ಯಾರ್ಥಿಗಳಿಗೆ ವಿನಿಯೋಗವಾಯಿತು. ಬಳ್ಳಾರಿಯ 3, ಆಲೂರು ಆದವಾನಿ, ರಾಯದುರ್ಗ, ಹೊಸಪೇಟೆ ವಿದ್ಯಾರ್ಥಿ ನಿಲಯಗಳಲ್ಲಿ 160 ವಿದ್ಯಾರ್ಥಿಗಳಿದ್ದಾರೆ. 18 ಬಾಲಿಕೆಯರಿದ್ದಾರೆ. ಇವರಿಗೆ ಉಚಿತ ಊಟ, ವಸತಿ, ಬಟ್ಟೆ, ಪುಸ್ತಕ ಸೌಕರ್ಯ ಒದಗಿಸಲಾಗಿದೆ. ಹಾಸ್ಟಲ್‌ಗಳಿಗೆಲ್ಲಾ ಲೆಕ್ಕವು ಪ್ರತ್ಯೇಕವಿದ್ದು. ಸರ್ಕಾರದ ಮತ್ತು ಖಾಸಗಿ ಲೆಕ್ಕಪರಿಶೋಧಕರಿಂದ ವಿಮರ್ಶಿತವಾಗುತ್ತಲಿವೆ. ನಮ್ಮ ವಿದ್ಯಾರ್ಥಿ ನಿಲಯದ ಸಂಸ್ಥೆಗಳಿಗೆ ಸರ್ಕಾರವು ಪ್ರತಿವರ್ಷವೂ ಗ್ರಾಂಟು ಕೊಡುತ್ತಲಿದೆ. ಈ ವರ್ಷ ಶ್ರೀ ಮಾಚಾನಿ ಸೋಮಪ್ಪನವರು ಬಟ್ಟೆಯನ್ನೂ ವಿಠಲ ಶೇಷಪ್ಪ ಶೆಟ್ಟಿಯವರು ಪಾತ್ರೆಗಳನ್ನೂ ಒದಗಿಸಿಕೊಟ್ಟರು. ಕಲೆಕ್ಟರ್ ಅನಂತರಾಮನ್‌ರು ರೂ. 800 ವರೆಗೆ ಸಹಾಯಮಾಡಿದರು. ಹರಿಜನ ಬಾಲಕರಿಗೆ ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಊಟ ವ್ಯವಸ್ಥೆಗಾಗಿ ಇನ್ನೂ ಹೆಚ್ಚು ಹಣಕೊಡಬೇಕು.

ಸಂಘವು ಗುಂಟೂರು ಕ್ರಿಶ್ಚಾಶ್ರಮದ ಔದ್ಯೋಗಿಕ ಮಂದಿರಕ್ಕೆ ಇಬ್ಬರು. ಗವರ್ನಮೆಂಟ್ ಸ್ಕೂಲ್ ಆಫ್ ಲೆದರ್ ಟೆಕ್ನಾಲಜಿಗೆ ಒಬ್ಬನು ಸೂಲಗಿತ್ತಿ ಶಿಕ್ಷಣಕ್ಕೆ ಒಬ್ಬಳನ್ನು ಕಳುಹಿಸಿತು. ರಾಯದುರ್ಗದ ಫುಲಕುರ್ತಿ, ಗಬಗಲ. ಕೂಪನಸಮುದ್ರ, ಆದವಾನಿ ತಾಲೂಕಿನ ಹಾಲ್ವಿ, ಕಂದಕೂರು ಮತ್ತು ಇತರ ಹಳ್ಳಿಗಳಲ್ಲಿ ಹರಿಜನರಿಗೆ

300 ಎಕರೆಗಳಿಗಿಂತ ಹೆಚ್ಚು ಸರ್ಕಾರದ ಭೂಮಿ, ಜಿಲ್ಲೆಯ 125 ಹರಿಜನ ರೈತರಿಗೆ ಬಾವಿಗಳ ಗ್ರಾಂಟು ಕೊಡಿಸಲಾಯಿತು ಸರ್ಕಾರದವರು ಈ ವಿಷಯದಲ್ಲಿ ನಿಯಮ ನಿಬಂಧನೆಗಳನ್ನು ಸಡಲಿಸಬೇಕು ಬಟ್ಟೆಯ ನಿಯಂತ್ರಣದ ಕಾಲಕ್ಕೆ 42 ಹರಿಜನರಿಗೆ ಲೈಸೆನ್ಸ್ ದೊರಕಿಸಲಾಯಿತು. 23 ಹಳ್ಳಿಗಳಲ್ಲಿ ಈ ವರ್ಷ ಹರಿಜನರ ಸಾಲವನ್ನು ಬಗೆಹರಿಸಲಾಯಿತು. ಸ್ಪೆಷಲ್ ಆರ್ಮ್ಡ್ ಪೋಲೀಸ್‌ಗೆ 17 ಜನ, ರೆವಿನ್ಯೂ ಡಿಪಾರ್ಟ್‌ಮೆಂಟಿಗೆ 3, ರೈಲ್ವೆ ಡಿಪಾರ್ಟ್‌ಮೆಂಟಿಗೆ 1, ಒಡಗಿಯ ಕೆಲಸ 1, ನರ್ಸಿಂಗ್ ಆರ್ಡರ್ಲಿ 1, ಮಿಡ್‌ವೈಫ್ ಕೆಲಸ 1 ಇಷ್ಟು ಜನರಿಗೆ ಕೆಲಸಕ್ಕೆ ಸಂಘವು ಸಹಾಯಮಾಡಿತು.

ಕುಂಪದೇವನಹಳ್ಳಿ, ಮಲಪನಗುಡಿಗಳಲ್ಲಿ ಬೇಕೆಯ ಅನಾಹುತವಾಗಿದ್ದ ಕಾರಣ ಹರಿಜನರಿಗೆ ಪರಿಹಾರ ಒದಗಿಸಲಾಯಿತು. ದುರಾಕ್ರಮಣದ ಭೂಮಿಗಳನ್ನು ಬಿಡಿಸಿಕೊಡುವುದು, ತಕಾವಿ ಸಾಲ ಕೊಡಿಸುವುದು, ಹರಿಜನ ರೈತರಿಗೆ ವ್ಯವಸಾಯ ಇಲಾಖೆಯಿಂದ ಉಪಕರಣ ಕೊಡಿಸುವುದು, ಅನೇಕ ಹಳ್ಳಿಗಳಲ್ಲಾಯಿತು. ಸಾಮಾಜಿಕ ಹಕ್ಕುಗಳನ್ನು ಸ್ಥಾಪಿಸಲು ಸರ್ಕಾರದವರ ನಿಯಮಗಳು ಸಹಾಯಕವಾದವು. ಎಮ್ಮಿಗನೂರು, ಹಾಲಹರ್ವಿಗಳಲ್ಲಿ ತೊಂದರೆಯಾದರೂ ಕೆಲಕಾಲದ ನಂತರ ಶಾಂತಿಯಾಯಿತು. 13 ಹಳ್ಳಿಗಳಲ್ಲಿ ಹರಿಜನರ ಸಂಚಕಲಶ ಮೆರವಣಿಗೆಗೆ ತೊಂದರೆಯಾಗಲಿಲ್ಲ. ಅನೇಕ ಹಳ್ಳಿಗಳಲ್ಲಿ ಭಜನೆ ಮಂದಿರಗಳಾಗುತ್ತಲಿವೆ. ದೇವದಾಸಿ ಪದ್ಧತಿಯ ನಿರ್ಮೂಲನಕ್ಕೆ ಸಂಘವು ಕೃಷಿ ಮಾಡುತ್ತಲಿವೆ" ವಗೈರೆ.... ವಗೈರೆ .. ...

ಜಿಲ್ಲಾ ಜಡ್ಜರಾದ ಶ್ರೀ ಯಸ್ ಪಿ. ಅಯ್ಯರ್‌ರವರು 'ಉದ್ಧರೇದಾತ್ಮನಾತ್ಮಾನಂ" ಎಂಬಂತೆ ನಿಮ್ಮ ಉದ್ಧಾರ ನೀವೇ ಮಾಡಿಕೊಳ್ಳಬೇಕು. ಪರಾವಲಂಬಿಯಾಗಬಾರದು ಎಂದು ಹೇಳಿ ಅವರ ಅಭಿವೃದ್ಧಿಗೆ ಕೆಲ ಸೂಚನೆಗಳನ್ನು ಕೊಟ್ಟರು. ಅಧ್ಯಕ್ಷರಾದ ಪಾರ್ಥಸಾರಥಿಯವರು ಹರಿಜನ ಸಂಘದವರು ಮಾಡುತ್ತಿರುವ ಕಾರ್ಯವನ್ನು ಪ್ರಶಂಸಿಸಿ ಅಖಿಲ ಭಾರತ ಸಂಘದ ಕಾರ್ಯದರ್ಶಿಗಳಾದ ಠಕ್ಕರ ಬಾಪಾರವರು ಸರಿಯಾದ ಮಾರ್ಗದರ್ಶಿಗಳೆಂದರು. ಶ್ರೀ ದುರುಗಪ್ಪನವರು (ಹರಿಜನ) ಎಲ್ಲಾ ಹಿಂದುಗಳೂ ಸಂಘಕ್ಕೆ ಸಹಾಯಮಾಡಲು ಬೇಡಿದರು. ಶ್ರೀ ನಾಗಭೂಷಣಂರವರು ವಂದನಾರ್ಪಣೆ ಮಾಡಿದ ನಂತರ ಸಭೆಯು ಮುಗಿಯಿತು

16-8-48ರಲ್ಲಿ ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದ ಸಾಮಾನ್ಯ ಸಭೆಯಲ್ಲಿ 1948-49 ಕ್ಕಾಗಿ ಈ ಕೆಳಗಿನ ಅಧಿಕಾರೀ ವರ್ಗವು ಆರಿಸಲಾಯಿತು.

ಅಧ್ಯಕ್ಷ—ಶ್ರೀ ಟಿ ಜಿ ಸತ್ಯನಾರಾಯಣ
ಉಪಾಧ್ಯಕ್ಷ-ಶ್ರೀ ಹೆಚ್. ರಾಮಲಿಂಗರೆಡ್ಡಿ
ಕಾರ್ಯದರ್ಶಿಗಳ—ಜಿ. ನಾಗಭೂಷಣಂ
ಟಿ. ಬಿ. ಕೇಶವರಾವು

ಕಾರ್ಯಕಾರೀ ಸಮಿತಿಯಲ್ಲಿ 15 ಸದಸ್ಯರಿರುವರು "ಹರಿಜನೋದ್ಧಮುಕ್ಯ, ನಾಡಿಗೂ ತಂದೆಯವರಾದ ಗಾಂಧೀಜಿಯ ಕೊಲೆಗೆ ಸಂಘವು ತನ್ನ ಹಾರ್ದಿಕ ಸಂತಾಪವನ್ನು ಸೂಚಿಸಿ ಅವರು ಹಾಕಿಕೊಟ್ಟ ಮಾರ್ಗದಲ್ಲೇ ಅನುಸರಿಸಲು ಪ್ರತಿಜ್ಞೆ ಮಾಡುತ್ತದೆ." ಈ ತೀರ್ಮಾನವನ್ನು ಎಲ್ಲರೂ ನಿಂತು ಪಾಸುಮಾಡಿದರು.

ಸಂಶೋಧಿತವಾದ ಲೆಕ್ಕಗಳು ವರದಿಯು ಪರಿಶೀಲನೆಯಾಗಿ ಬರುವ ವರ್ಷದ ಕಾರ್ಯ ಪ್ರಣಾಲಿಯಾಯಿತು.

## ಪುರಸಭೆಯ
## ಆರೋಗ್ಯಾಧಿಕಾರಿಗಳಲ್ಲಿ ಅವಿಶ್ವಾಸ

ಬಳ್ಳಾರಿ ಪುರಸಭೆಯ ಆರೋಗ್ಯಾಧಿಕಾರಿಗಳಲ್ಲಿ ವಿಶ್ವಾಸವಿಲ್ಲೆಂಬ ತೀರ್ಮಾನಕ್ಕೆ 30 ಸದಸ್ಯರ ಬೆಂಬಲ ದೊರೆತಿದ್ದಿತು. 16-8-48 ನೆಯ ತಾ॥ ಸಾಯಂಕಾಲ ನಡೆದ ಸಭೆಯಲ್ಲಿ ಶ್ರೀ ಪೂರ್ಣಾಚಾರ್ಯರಿಂದ ತೀರ್ಮಾನವು ಮಂಡಿಸಲ್ಪಟ್ಟು ಜಿ. ಅಬ್ದುಲ್ ಜಲೀಲರಿಂದ ಪುಷ್ಟವಾಗಿ ಸರ್ವಾನುಮತದಿಂದ ಒಪ್ಪಲಾಯಿತು.

---

## ಹಂಪಾಪಟ್ಟಣ

ಸ್ವಾತಂತ್ರ್ಯ ದಿನೋತ್ಸವವು ಧ್ವಜವಂದನೆ, ಹುತಾತ್ಮರ ಭಾವಚಿತ್ರ ಮೆರವಣಿಗೆ ದೇವಾಲಯಗಳಲ್ಲಿ ದೀಪೋತ್ಸವ, ಶಾಲಾ ಬಾಲ ಬಾಲಿಕೆಯರಿಗೆ ಮಿಠಾಯಿ ಹಂಚಿದ ನಂತರ ಸಾರ್ವಜನಿಕ ಸಭೆ ಜರುಗಿ ಮುಖಂಡರ ಭಾಷಣಗಳಿಂದ ಸಾಂಗವಾಯಿತು

—●—

## ಕುಡತನಿ ಗ್ರಾಮದಲ್ಲಿ

ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರು ಇಲ್ಲಿ 14ನೆಯ ದಿನಾಂಕ ಬಾಪೂಜಿ ತೋಟ ವನ್ನಾರಂಭಿಸಿ ಆಕಾಶವಾಣಿ ಆಲಯದ ಉದ್ಘಾಟನೆ ಮಾಡಿದರು. ಗ್ರಾಮಸ್ಥರು ಮಾನಪತ್ರದ ಮೂಲಕ ತಮ್ಮ ಬೇಡಿಕೆಗಳನ್ನು ಮುಂಡಿಸಿದ್ದಕ್ಕೆ ಮಂತ್ರಿಗಳು ಸೂಕ್ತ ಉತ್ತರಕೊಟ್ಟರು. ಶಾಲೆಯಲ್ಲಿ ಚಹಾ, ಪಾನದ ನಂತರ ಗ್ರಾಮರಕ್ಷಕ ದಳವನ್ನೀಕ್ಷಿಸಿ ಮಂತ್ರಿಗಳು ಬಳ್ಳಾರಿಗೆ ತೆರಳಿದರು.

—●—

## ಆಲೂರು [ಕೂಡ್ಲಿಗಿ.]

ಜನಾಬ್ ಅಬ್ದುಲ ಖಾದರ ಸಾಹೇಬರ ಧ್ಯಕ್ಷತೆಯಲ್ಲಿ ಏಳು ಹಳ್ಳಿಗಳ ಹಿಂದೂ

## ನೋಟೀಸು.

### ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ.

S. C. 211/48

ವಾದಿ.—

ಮುದಗಲ್ ಭೀಮಸೇನಪ್ಪ ಅಂಡ್ ಸನ್ಸ್ ಬೈ ಪಾರ್ಟನರ್ ಮುದಗಲ್ ಕ್ರಿಷ್ಣಪ್ಪ ಸಾ॥ ಹರಪನಹಳ್ಳಿ ತಾಲೂಕು ಹರಪನಹಳ್ಳಿ.

ಪ್ರತಿವಾದಿಗಳು:—

೧) ಬಾಗಳಿ ರಾಮಣ್ಣನ ಅಚ್ಚಪ್ಪ.

೨) ಅಂಬ್ಲಿ ದೂಪದಳ್ಳಿ ಶಾಂತಪ್ಪ ಸಾ॥ ನಂದಿಬೇವೂರು, ತಾ॥ ಹರಪನಹಳ್ಳಿ.

ವಾದಿ ಫರ್ಮಿನವರು ಪ್ರತಿವಾದಿಗಳ ಮೇಲೆ ಪ್ರಾಮಿಸರಿ ನೋಟಿನ ಸಂಬಂಧದ ಬಾಕಿ 189—2—0 ಗೆ ದಾವಾ ಮಾಡಿರುತ್ತಾರೆ. ಒಂದನೇ ಪ್ರತಿವಾದಿಯು 14—7—48 ಕ್ಕೆ ಎಕ್ಸಪಾರ್ಟ ಆಗಿರುತ್ತಾನೆ. ಎರಡನೇ ಪ್ರತಿವಾದಿಗೆ ಸಮನು ಜಾರಿ ಆಗದೆ ಇದ್ದುದಕ್ಕೆ ಈ ಪೇಪರಿನಲ್ಲಿ ಪ್ರಕಟಿಸೋಣವಾಗಿದೆ. ವಾಯಿದೆಯು 26—8—48ಕ್ಕೆ ಇರುತ್ತದೆ. ತಕರಾರು ಏನಾದರು ಇದ್ದಲ್ಲಿ ಸದ್ರಿ ವಾಯ್ದೆಗೆ 2ನೇ ಪ್ರತಿವಾದಿ ಹಾಜರಾಗಿ ತಿಳಿಸಬೇಕು. ವಾಯ್ದೆಗೆ ಹಾಜರಾಗಲು ತಪ್ಪಿದಲ್ಲಿ ಎಕ್ಸಪಾರ್ಟ ಡಿಕ್ರಿ ಆಗಲಿದೆಯೆಂದು ಈ ಮೂಲಕ ತಿಳಿಸೋಣವಾಗಿದೆ.

ಹೊಸಪೇಟೆ, ಎಂ ವೆಂಕೋಬಶೆಟ್ಟಿ,
10-8-48 ಅಡ್ವೋಕೇಟ್.

---

ಮುಸಲ್ಮಾನರು ಸಮಾವೇಶವಾಗಿ ಐಕ್ಯತೆ ಸರ್ಕಾರಕ್ಕೆ ಸಹಾಯ, ರಜಾಕಾರರ ವರ್ತನೆಯ ಖಂಡನೆ ಮತ್ತು ಅವರನ್ನು ಪ್ರತಿಭಟಿಸುವ ನಿಶ್ಚಯದ ಬಗ್ಗೆ ತೀರ್ಮಾನಿಸಿದರು. ಶ್ರೀಗಳಾದ ಚನ್ನಬಸಪ್ಪ ಪಾಲೂರು ಮಹಮ್ಮದ ಹುಸೇನ್ಸಾಹೇಬ ಇವರು ಮಾತಾಡಿದರು.

---

## The Rayalaseema College Vysya Students Home

ಅನಂತಪುರದಲ್ಲಿ ವೈಶ್ಯ ವಿದ್ಯಾರ್ಥಿಗಳ (ಕಾಲೇಜಿನಲ್ಲಿ ಓದುವ) ಅನುಕೂಲತೆಗಾಗಿ ದಿ ರಾಯಲಸೀಮ ಕಾಲೇಜ್ ವೈಶ್ಯ ವಿದ್ಯಾರ್ಥಿ ಗೃಹವನ್ನು ತೆರೆಯಲಿರುವರು ಇದರ ಪ್ರಾರಂಭೋತ್ಸವವು 22-8-48 ನೆಯ ದಿನಾಂಕ ಮಧ್ಯಾಹ್ನ 12-40 ಕ್ಕೆ ಶ್ರೀ ವಿರುಪಾಕ್ಷ ಶೆಟ್ಟಿ ಆ. ಕಮೀಶನರ್ ಸಿವಿಲ್ ಸಪ್ಲೈಸ್ ಇವರಿಂದ ನೆರವೇರಿಸಲಾಗುತ್ತೆ. ಮೈಸೂರು ಮಂತ್ರಿಗಳಾದ ಶ್ರೀ ಪಾಮಿಡಿ ಸುಬ್ಬರಾಮಶೆಟ್ಟರು ಅಧ್ಯಕ್ಷತೆ ವಹಿಸುವರು.

## ಇರುವ ಕಾಲೇಜನ್ನೇ ಅಭಿವೃದ್ಧಿಮಾಡಿರಿ

ಬಳ್ಳಾರಿ ಜಡ್ಜರ ಸಲಹೆ

ಬಳ್ಳಾರಿ ಛೇಂಬರ್ ಆಫ್ ಕಾಮರ್ಸ್‌ದ ಅಧ್ಯಕ್ಷರಾದ ಶ್ರೀ ಟಿ. ಜಿ. ಸತ್ಯನಾರಾಯಣರವರು 18ನೆಯ ದಿನಾಂಕ ಸಾಯಂಕಾಲ ಪುರಜನ ಮತ್ತು ವ್ಯಾಪಾರೀ ಸಂಸ್ಥೆಯ ಪರವಾಗಿ ಪುರಸಭಾಧ್ಯಕ್ಷರಾದ ಶ್ರೀ ಮುಂಡ್ಲೂರು ಗಂಗಪ್ಪನವರಿಗೆ ಮಾನಪತ್ರವನ್ನರ್ಪಿಸುತ್ತಾ "1860ನೆಯ ಸಂವತ್ಸರದ ನಂತರ ಈ 80 ವರ್ಷಗಳಲ್ಲಿ ವರ್ತಕರು ಅಧ್ಯಕ್ಷರಾಗಿದ್ದಿಲ್ಲವೆಂದೂ ಇದು ಶುಭ ಸೂಚನೆಯೆಂದೂ ಲಕ್ಷ ರೂ. ದಾನ ಮಾಡಿದವರು ಅತಿವಿರಳರೆಂದೂ" ಹೇಳಿದರು. ಶ್ರೀ ಮಹಾಬಲೇಶ್ವರಪ್ಪ, ವೇದಾಂತಂ, ಎಸ್. ಎಂ. ಶಾಸ್ತ್ರಿ ಇವರು ಮಾತಾಡಿ ಗಂಗಪ್ಪನವರ ಸಾದಾ ಜೀವನದ ಬಗ್ಗೆ ಗುಣಗಾನ ಮಾಡಿದರು. ಈ ಸಮಾರಂಭಕ್ಕೆ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ಜಡ್ಜರಾದ ಶ್ರೀ ಎ. ಎಸ್. ಪಿ. ಅಯ್ಯರ್‌ರವರು ಪ್ರಾಚೀನ ಭಾರತದ ಪಾಟಲೀಪುತ್ರ, ತಕ್ಷಶಿಲ, ಮೊಹೆಂಜೊದಾರೊ, ಕಪಿಲವಸ್ತು ಮತ್ತು ಉಜ್ಜಯಿನಿಗಳಲ್ಲಿ ಎಂಥಾ ವ್ಯವಸ್ಥೆ ಇದ್ದಿತು. 5 ಲಕ್ಷಗಳಿಗಿಂತಲೂ ಹೆಚ್ಚಿನ ಈ ಪಟ್ಟಣಗಳ ಆರೋಗ್ಯಶಾಖೆ ನೀರು, ದೀಪ, ಆಡಳಿತ ವಿಭಾಗಗಳ ವಿವರಗಳನ್ನು ತಿಳಿಯ ಹೇಳಿದರು. ಅಲ್ಲದೆ ವೀರಶೈವ ಕಾಲೇಜನ್ನು ಬಳ್ಳಾರಿ ಕಾಲೇಜೆಂದು ಮಾರ್ಪಡಿಸಿ, ಎಲ್ಲರ ಸಹಾಯ ಸಹಕಾರಗಳನ್ನು ಪಡೆಯಬೇಕೆಂದೂ, ಶ್ರೀ ಗಂಗಪ್ಪನವರು ಮತ್ತೊಂದು ಲಕ್ಷ ರೂ. ಕಾಲೇಜಿಗಾಗಿ ದಾನಮಾಡಬೇಕೆಂದೂ ಸೂಚಿಸಿದರು. ಇರುವ ಕಾಲೇಜನ್ನೇ ಅಭಿವೃದ್ಧಿಮಾಡಬೇಕಾಗಲಿ ಮತ್ತೊಂದನ್ನು ಪ್ರಾರಂಭಿಸ ಹೋಗುವುದು ಯೋಗ್ಯವಲ್ಲೆಂದೂ ಹೇಳಿದರು. ಶ್ರೀ ಸೊಂಡೂರಪ್ಪನವರು ವಂದನಾರ್ಪಣೆ ಮಾಡಿದ ನಂತರ ಸಭೆಯು ಮುಗಿಯಿತು ವರ್ತಕರ ಪರವಾಗಿ 'ಟೀಪಾರ್ಟಿ' ಏರ್ಪಡಿಸಲಾಗಿತ್ತು.

---

### ಸಿರಿಗುಪ್ಪೆ

ಸ್ವಾತಂತ್ರ್ಯ ದಿನೋತ್ಸವ ದಿನಾಂಕ 15 ಉದಯ 8 ಗಂಟೆಗೆ ನೇತಾಜಿ ವ್ಯಾಯಾಮಶಾಲೆಯ ತರುಣರಿಂದಲೂ, ಶಾಲೆಯ ಮಕ್ಕಳಿಂದಲೂ ನಗರ ಸಂಕೀರ್ತನೆಯಾಗಿ ಆಮೇಲೆ ಧ್ವಜಾರೋಹಣ ವಂದನೆಗಳಾದವು. ಮಧ್ಯಾಹ್ನ 4 ಗಂಟೆಗೆ "ಶ್ರೀ ಡಿ. ರಾಮಮೂರ್ತಿ (ಬಳ್ಳಾರಿ ನವಜೀವನ ವ್ಯಾಯಾಮಶಾಲೆಯ ಸಂಚಾಲಕರು") "ಶ್ರೀ ರಾ. ಕೃ. ಸರಾಫ (ಬಳ್ಳಾರಿ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಕಾರ್ಯದರ್ಶಿಗಳು") ಇವರ ನೇತೃತ್ವದಲ್ಲಿ ಬಹಿರಂಗ ಸಭೆ ನೆರೆಯಿತು. ಸರಕಾರಿ ಉದ್ಯೋಗಸ್ಥರೂ, ಪುರಪ್ರಮುಖರೂ, ವ್ಯಾಪಾರಸ್ಥರೂ, ಸ್ತ್ರೀಯರೂ ಸಕಲ ಜನಾಂಗದವರು ಸಭೆಗೆ ಆಗಮಿಸಿದ್ದರು. ವ್ಯಾಯಾಮ ಶಾಲೆಯವರು ಸರ್ವ ಸುವ್ಯವಸ್ಥೆಯನ್ನು ಮಾಡಿದ್ದರು. ವ್ಯಾಯಾಮ ಶಾಲೆಯ ಯುವಕರಿಂದ ಸೂರ್ಯನಮಸ್ಕಾರ ಆಸನಾದಿ ವಿವಿಧ ಪ್ರದರ್ಶನಗಳಾದವು. "ಶ್ರೀ ತಹಶಿಲ್ದಾರು ಯಸ್ ಭೀಮಸೇನರಾಯರೂ. "ಶ್ರೀ ಗೋವಿಂದರಾವ ಮಾಸ್ತರರೂ ಸ್ವತಂತ್ರದ ಮೇಲೂ, "ಅಧ್ಯಕ್ಷರು" ಸ್ವತಂತ್ರ ಮತ್ತು ವ್ಯಾಯಾಮಶಾಲೆಯ ಆವಶ್ಯಕತೆಯ ಮೇಲೂ ಭಾಷಣ ಮಾಡಿದರು. ಉನ್ನತ ಪಾಠಶಾಲೆಯ ವಿದ್ಯಾರ್ಥಿಗಳಿಂದ "ಶ್ರೀ ಬಿಜಿಯ ಪರ ಪರೀಕ್ಷಣ' ನಾಟಕವು ಪ್ರದರ್ಶಿಸಲ್ಪಟ್ಟಿತು. ಆ ಭಾರತಮಾತನ ಜಯವಾದ ಜೈ, "ವಂದೇ ಮಾತರಂ, ಗೀತೆಯೊಂದಿಗೆ ರಾತ್ರಿ 9 ಗಂಟೆಗೆ ಸಭೆಯು ಮುಕ್ತಾಯವಾಯಿತು.

---

### ಬಳ್ಳಾರಿಯಲ್ಲಿ ಹಿಂದುಸ್ಥಾನೀ ವಿದ್ಯಾಲಯ

ಮದ್ರಾಸ್ ಪ್ರಾಂತದ ಹೈಸ್ಕೂಲ್‌ಗಳಲ್ಲಿ ರಾಷ್ಟ್ರಭಾಷೆಯಾದ ಹಿಂದುಸ್ಥಾನಿಯನ್ನು ಕಲಿಸಲು ಸದ್ಯಕ್ಕೆ 2000 ಉಪಾಧ್ಯಾಯರ ಆವಶ್ಯಕತೆ ಇದೆ. ಉಪಾಧ್ಯಾಯರು ವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಚಾರಕ ಪರೀಕ್ಷೆಯ ಮೂಲಕ ಅಧ್ಯಾಪಕ ವೃತ್ತಿಯ ಶಿಕ್ಷಣವನ್ನು ಪಡೆದಿರಬೇಕು. ಮದ್ರಾಸ್ ಸರ್ಕಾರದ ಪ್ರೋತ್ಸಾಹದಿಂದ ಅವರ ಮಾನ್ಯತೆಯನ್ನು ಪಡೆದು ನಾವು ಶೀಘ್ರದಲ್ಲೇ ಬಳ್ಳಾರಿ ನಗರದಲ್ಲಿ ವಿದ್ಯಾಲಯವನ್ನು ತೆರೆಯಲಿದ್ದೇವೆ. ಈ ವಿದ್ಯಾಲಯದಲ್ಲಿ ವಿಶಾರದ ಪರೀಕ್ಷೆಗಳಿಗೆ ಶಿಕ್ಷಣ ಕೊಡಲಾಗುವದಲ್ಲದೆ ಉಪಾಧ್ಯಾಯರ ವೃತ್ತಿಶಿಕ್ಷಣದ ಅನುಕೂಲಕ್ಕಾಗಿ ಪ್ರಾಥಮಿಕವರ್ಗ ಒಂದು ತೆರೆಯಲಾಗುವುದು.

ನಮ್ಮ ಸಂಸ್ಥೆಯು ನಗರದಲ್ಲೂ ಜಿಲ್ಲೆಯಲ್ಲೂ ರಾಷ್ಟ್ರಭಾಷೆಯ ಪ್ರಚಾರಕ್ಕಾಗಿ 1931 ರಿಂದ ಶ್ರಮಿಸುತ್ತಿರುವುದು ಜನತೆಗೆ ತಿಳಿದಿರಲು ಸಾಕು. ನಮ್ಮ ಶಾಲೆಗಳಲ್ಲಿ ಉತ್ತೀರ್ಣಹೊಂದಿದವರನೇಕರು ಹೈಸ್ಕೂಲ್‌ಗಳಲ್ಲಿ ಹಿಂದುಸ್ಥಾನೀ ಅಧ್ಯಾಪಕರಾಗಿ ಕೆಲಸ ಮಾಡುತ್ತಿರುವರು.

ಬಳ್ಳಾರಿ ನಗರದಲ್ಲಿ ಕಾಲೇಜನ್ನು ನಡೆಸಬಲ್ಲ ಒಳ್ಳೇ ಯೋಗ್ಯತೆ ಅನುಭವವುಳ್ಳ ಅಧ್ಯಾಪಕರಿರುವಲ್ಲದೆ, ಇತರ ಸೌಕರ್ಯಗಳೂ ಇವೆ. ಸದ್ಯಕ್ಕೆ ಹೈಸ್ಕೂಲುಗಳಲ್ಲಿರುವ ಹಿಂದುಸ್ಥಾನೀ ಉಪಾಧ್ಯಾಯರು ಹೆಚ್ಚು ಖರ್ಚಿಟ್ಟುಕೊಂಡು ದೂರ ಸ್ಥಳಗಳಾದ ಮದ್ರಾಸ್, ಕೊಯಂಬತೂರುಗಳಿಗೆ ಹೋಗಬೇಕಿಲ್ಲ.

ಸ್ಥಳ, ಶುಲ್ಕ, ಪ್ರವೇಶ, ಶಿಕ್ಷಣಕ್ರಮ, ಕಾಲ ವಗೈರೆ ವಿವರಗಳನ್ನು ಶೀಘ್ರದಲ್ಲೇ ತಿಳಿಸುತ್ತೇವೆ.

**ಟಿ. ಬಿ. ಕೇಶವರಾವ್**, ಕಾರ್ಯದರ್ಶಿ,
ಜಿಲ್ಲಾ ಹಿಂದುಸ್ಥಾನೀ ಪ್ರೇಮೀ ಮಂಡಲ, ಬಳ್ಳಾರಿ.

### Hindusthani College in Bellary.

As there is great dearth of Hindusthani Teachers and as many as 2000 teachers are required to teach the **Lingua Franca of India** in the High Schools of Madras Presidency, the Madras Govt have decided to accord recognition to the private institutions training students for Visharad & Pracharak. The Public of Bellary know that with a view to spread the cause of Hindi we have been conducting institutions since 1931 & thousands have appeared & passed the preliminary & Higher Examinations Most of our students are now successful teachers in High Schools Now we are glad to inform you that we are opening the College in Bellary with in the course of a month to train students for Visharad & Pracharak. There is already an experienced & well qualified staff for the said institution. The present Hindusthani Teachers in High Schools need not have to go for training at much expense to the distant places like Madras & Coimbatore. A model class for practice for pracharaks will be attached to the College.

The place, fees, admission & other particulars will be notified later.

**T. B. KESHAVARAO**, Secretary,
Dt. Hindusthani Premi Mandal, Bellary

# ನಮ್ಮ ಆಹಾರ ಪರಿಸ್ಥಿತಿ

(ಮದ್ರಾಸ್ ಶಾಸನಸಭೆಯಲ್ಲಿ ಮಂತ್ರಿಗಳ ಭಾಷಣ)

ಕಳೆದ ವರ್ಷ ಹಿಂಗಾರು ಮಳೆ ಸಕಾಲಕ್ಕೆ ಬರಲಿಲ್ಲ. ಇದರಿಂದ ನಮ್ಮ ಪ್ರಾಂತದಲ್ಲಿ ಅಕ್ಕಿ ಹಾಗೂ, ಇತರ ಧಾನ್ಯಗಳ ಉತ್ಪತ್ತಿಯು ತುಂಬಾ ತಗ್ಗಿರುತ್ತದೆ ಆದರೆ ತಡವಾಗಿ ಮಳೆ ಬಂದುದರಿಂದ ಹೇಗೂ ಅಕ್ಕಿ ಬೆಳೆಯು ಸ್ವಲ್ಪ ಮಟ್ಟಿಗೆ ಸುಧಾರಿಸಿರುತ್ತದೆ. ಇತ್ತೀಚೆಗಿನ ಅಂದಾಜು 1947-48 ರಲ್ಲಿ 4.005, 000 ಟನ್ನುಗಳಷ್ಟು ಅಕ್ಕಿಯೂ 1,929,000 ಟನ್ನುಗಳಷ್ಟು ಇತರ ಧಾನ್ಯಗಳೂ ಉತ್ಪತ್ತಿಯಾದವು. ಆದರೆ ಸಾಧಾರಣ ಉತ್ಪತ್ತಿ 4 9 ಮಿಲಿಯ ಟನ್ನುಗಳಷ್ಟು ಅಕ್ಕಿ ಮತ್ತು 2.7 ಮಿಲಿಯ ಟನ್ನುಗಳಷ್ಟು ಇತರ ಧಾನ್ಯಗಳು. 1946-47 ರಲ್ಲಿ ನಮ್ಮ ಪ್ರಾಂತದ ಅಕ್ಕಿ ಉತ್ಪತ್ತಿಯು 4 9 ಮಿಲಿಯ ಟನ್ನುಗಳಷ್ಟೂ, ಇತರ ಧಾನ್ಯಗಳ ಉತ್ಪತ್ತಿಯು 2.1 ಮಿಲಿಯ ಟನ್ನುಗಳಷ್ಟೂ ಇದ್ದುವು.

### ನಮಗೆ ದೊರೆಯಲು ಬಾಕಿ ಇದೆ

1947 ನೇ ಜುಲೈ 3 ನೇ ತಾರೀಕಿನಂದು ಸರಕಾರದವರೊಡನೆ ಅಥವಾ ಅವರ ಏಜಂಟರೊಡನೆ ಒಟ್ಟು ದಾಸ್ತಾನು ಇದ್ದ ಆಹಾರ ಧಾನ್ಯಗಳ ಪ್ರಮಾಣ 463,641 ಟನ್ನು. ಇದರಲ್ಲಿ 384, 635 ಟನ್ನು ಅಕ್ಕಿ, 17,503 ಟನ್ನು ಗೋಧಿ ಮತ್ತು ಗೋಧಿ ಉತ್ಪನ್ನಗಳು, 13 703 ಟನ್ನು ಇತರ ಧಾನ್ಯಗಳು ಮತ್ತು 43,770 ಟನ್ನು ಜೋಳ. ಹಿಂದುಸ್ಥಾನ ಸರಕಾರವು 1948 ನೇ ವರ್ಷ ಕ್ಯೋಸ್ಕರ 5 ಲಕ್ಷ ಟನ್ನುಗಳಷ್ಟು ಆಮದು ಮಾಡಿದ ಆಹಾರ ಧಾನ್ಯಗಳನ್ನು ನಮ್ಮ ಪ್ರಾಂತಕ್ಕೆ ಹಂಚಿ ಹಾಕಿರುತ್ತದೆ. ಇದರಲ್ಲಿ 244,000 ಟನ್ನು ಅಕ್ಕಿ 57,000 ಟನ್ನು ಗೋಧಿ ಮತ್ತು ಗೋಧಿ ಉತ್ಪನ್ನಗಳು, 133,000 ಟನ್ನು ಜೋಳ, 76,000 ಟನ್ನು ಮಿಲೊ ಮತ್ತು ಇತರ ಧಾನ್ಯಗಳು ಈ ಪ್ರಮಾಣದಲ್ಲಿ ಜುಲೈ 1 ನೇ ತಾರೀಕಿನ ದಿನ 127,705 ಟನ್ನುಗಳಷ್ಟು ಆಹಾರ ಧಾನ್ಯಗಳು ನಮಗೆ ದೊರೆಯಲು ಬಾಕಿ ಇತ್ತು. ಇದರಲ್ಲಿ 48,514 ಟನ್ನು ಅಕ್ಕಿ, 31,408 ಟನ್ನು ಗೋಧಿ, ಗೋಧಿ ಉತ್ಪನ್ನಗಳು, 1,133 ಟನ್ನು ಜೋಳ, 46,648 ಟನ್ನು ಮಿಲೊ ಮತ್ತು ಇತರ ಧಾನ್ಯಗಳಾಗಿವೆ

### ಸಂಗ್ರಹಣಕ್ಕೆ ಅಡಚಣೆ:—

ಪ್ರಾಂತದೊಳಗೆ ಆಹಾರ ಧಾನ್ಯ ಸಂಗ್ರಹಿಸುವ ಹಾಗೂ ಮೆಲ್ಲಮೆಲ್ಲನೇ ನಿಯಂತ್ರಣ ತೆಗೆದು ಹಾಕುವ ಹಿಂದುಸ್ಥಾನ ಸರಕಾರದ ಧೋರಣೆಯ ಮಟ್ಟಿಗೆ ಹೆಚ್ಚೆಂದರೆ 1,786,300 ಟನ್ನುಗಳಷ್ಟು ಅಕ್ಕಿಯೂ 176,340 ಟನ್ನುಗಳಷ್ಟು ಇತರ ಧಾನ್ಯಗಳೂ ಈ ಪ್ರಾಂತದಲ್ಲಿ ಸಂಗ್ರಹಿಸಲ್ಪಡಬೇಕೆಂದು ಹಾಲಿ ಖಾರಿಫ್ ವರ್ಷದ ಶುರುವಿನಲ್ಲಿ ನಿಶ್ಚಯಿಸಲಾಗಿತ್ತು. ಅಂದಿಗಿದ್ದ ಧೋರಣೆಯನ್ನು 1947-48 ರಲ್ಲಿಯೂ ಮುಂದುವರಿಸಲಾಗುವುದೆಂಬ ಅಭಿಪ್ರಾಯದಿಂದ ಈ ಪ್ರಮಾಣಗಳನ್ನು ಗೊತ್ತುಪಡಿಸಿದ್ದಾಗಿದೆ. ಆದರೆ ವಿನಿಯಂತ್ರಣದ ಧೋರಣೆಯನ್ನು ಅನುಸರಿಸಲು ಆರಂಭಿಸಿದುದರಿಂದ ಆ ಪ್ರಮಾಣಗಳನ್ನು ಇಂದು ಎಣಿಸಿಕೊಳ್ಳಲು ಸಾಧ್ಯವಿಲ್ಲ. 1947 ನೇ ದಸಂಬ್ರ 28 ನೇ ತಾರೀಕಿನಿಂದ ಲಾಗಾಯಿತು ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣಾ, ಗುಂಟೂರು, ನೆಲ್ಲೂರು, ತಂಜಾವೂರುಗಳೆಂಬ ಉಳಿಕೆ ಜಿಲ್ಲೆಗಳು ಮತ್ತು ತಿರುಚಿರಪಳ್ಳಿ, ದಕ್ಷಿಣ ಆರ್ಕಾಟು, ಮಲಬಾರು, ನೀಲಗಿರಿ ಜಿಲ್ಲೆಗಳು ಹೊರತು ಇತರ ಎಲ್ಲಾ ಕಡೆಗಳಲ್ಲಿಯೂ ತೀವ್ರ ಸಂಗ್ರಹಣ ಪದ್ಧತಿಯನ್ನು ತೆಗೆದು ಹಾಕಲಾಗಿದೆ. 1948 ನೇ ಮಾರ್ಚ 14 ರಂದು ದಕ್ಷಿಣ ಆರ್ಕಾಟು, ತಿರುಚಿರಪಳ್ಳಿ ಜಿಲ್ಲೆಗಳಲ್ಲಿಯೂ ತೀವ್ರ ಸಂಗ್ರಹಣವು ರದ್ದಾಗಿರುತ್ತದೆ. ತೀವ್ರ ಸಂಗ್ರಹಣ ಪದ್ಧತಿಯು ತೆಗೆದು ಹಾಕಲ್ಪಟ್ಟ ಜಿಲ್ಲೆಗಳಲ್ಲಿ ಧನಿಕರು ಹಾಗೂ ಮಧ್ಯಮ ವರ್ಗದ ಬೇಸಾಯಗಾರರೊಡನೆ ಹೆಚ್ಚುಳಿಯುವ ಆಹಾರ ಧಾನ್ಯಗಳನ್ನು ಎಕ್ರೆಗೆ ಗೊತ್ತುಪಡಿಸಿದ ಪ್ರಮಾಣದಲ್ಲಿ "ಲೆವಿ" ಪದ್ಧತಿಯ ಮೂಲಕ ಸಂಗ್ರಹಿಸಬೇಕೆಂದು ಮೊದಲು ಅಪ್ಪಣೆ ಕೊಡಲಾಗಿತ್ತು. ಆದರೆ ಹಿಂಗಾರು ಮಳೆಯು ಬಾರದೆ ಈ ಜಿಲ್ಲೆಗಳಲ್ಲಿ ಸಂಗ್ರಹಣಕ್ಕೆ ಸಾಕಷ್ಟು ಆಹಾರ ಧಾನ್ಯಗಳಿಲ್ಲದಿದ್ದುದರಿಂದಲೂ ಅನೇಕ ಜಿಲ್ಲೆಗಳಿಂದ ದೂರು, ವಿನಂತಿಗಳು ಬಂದುದರಿಂದಲೂ ಈ "ಲೆವಿ" ಪದ್ಧತಿಯನ್ನು ಸಹ 1948 ನೇ ಜೂನ್ 1 ನೇ ತಾರೀಕಿನ ದಿನ ತೆಗೆದು ಹಾಕಬೇಕಾಯಿತು. ಈ ಕಾರಣಗಳಿಂದ ಖಾರಿಫ್ ವರ್ಷದ ಶುರುವಿನಲ್ಲಿ ಗೊತ್ತುಪಡಿಸಿದ ಸಂಗ್ರಹಣ ಪ್ರಮಾಣವನ್ನು ತಗ್ಗಿಸಬೇಕಾಯಿತು. 1948 ನೇ ಜುಲೈ 3 ನೇ ತಾರೀಕಿನವರೆಗೆ 757,184 ಟನ್ನುಗಳಷ್ಟು ಅಕ್ಕಿಯೂ 25,520 ಟನ್ನುಗಳಷ್ಟು ಇತರ ಧಾನ್ಯಗಳೂ ಸಂಗ್ರಹಿಸಲ್ಪಟ್ಟಿವೆ. ವರ್ಷದ ಉಳಿದ ಅಂಶದಲ್ಲಿ ಅಂದರೆ ಜುಲೈಯಿಂದ ಅಕ್ಟೋಬರದವರೆಗೆ ಸುಮಾರು 60,000 ಟನ್ನುಗಳಷ್ಟು ಮಾತ್ರ ಸಂಗ್ರಹಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ. ಹೀಗೆ ಮುಂಬರುವ ತಿಂಗಳುಗಳ ಮಟ್ಟಿಗೆ ನಮ್ಮ ಆಹಾರ ಧಾನ್ಯಗಳ ಪರಿಸ್ಥಿತಿ ಈ ಕೆಳಗಿನಂತಿದೆ

| | ಟನ್ನು. |
|---|---|
| 3 7-48 ರಂದು ದಾಸ್ತಾನು | 463,641 |
| ನಿರೀಕ್ಷಿಸಿದ ಆಮದು .... | 127,705 |
| ನಿರೀಕ್ಷಿಸಿದ ಸಂಗ್ರಹಣ .... | 60,000 |
| ಒಟ್ಟು | 651,346 |

### ನಮ್ಮಲ್ಲಿದ್ದುದು ನಮಗೆ ಸಾಕಾಗದು

ಕಾನೂನು ಬದ್ಧ ರೇಶನ್ ಕ್ರಮವಿರುವ ಹಾಗೂ ಹಳ್ಳಿಗಳಲ್ಲಿ ರೇಶನ್ ಕ್ರಮವಿರುವ ಪ್ರದೇಶಗಳಲ್ಲಿಯೂ ರೇಶನ್ ಕ್ರಮವು ರದ್ದುಪಡಿಸಲ್ಪಟ್ಟ ಪ್ರದೇಶಗಳಲ್ಲಿಯೂ ಸೇರಿ 3-7-48 ಕ್ಕೆ ಅಂತ್ಯವಾದ ವಾರದಲ್ಲಿ 36,011 ಟನ್ನುಗಳಷ್ಟು ಆಹಾರ ಧಾನ್ಯಗಳು ವಿತರಣೆಗಾಗಿ ತೆಗೆಯಲ್ಪಟ್ಟಿತ್ತು. ಮುಂದಿನ ವಾರಗಳಲ್ಲಿಯೂ ವೆಚ್ಚವು ಹೆಚ್ಚು ಕಡಮೆ ಇದೇ ಪ್ರಮಾಣದಲ್ಲಿರುವುದೆಂದು ನಾವು ಎಣಿಸಿದರೆ, ಈಗ ನಮ್ಮಲ್ಲಿರುವ ದಾಸ್ತಾನು 18 ವಾರಗಳ ವರೆಗೆ ಅಥವಾ ಸುಮಾರು ನವಂಬರದ ಶುರುವಿನವರೆಗೆ ಬರಬಹುದು. ವೆಚ್ಚವು ಸೆಪ್ಟಂಬರ ತಿಂಗಳ ಮಧ್ಯದವರೆಗೆ ಹೇಗೂ ಬೇಕು. ಸೆಪ್ಟಂಬರದಲ್ಲಿ ಕೆಲವು ಜಿಲ್ಲೆಗಳಲ್ಲಿ ಶುರುವಿನ ಬೆಳೆಗಳು ಕೊಯ್ಯಲ್ಪಡಬಹುದು. ರೇಶನ್ ಪ್ರಮಾಣವನ್ನು ಏರಿಸುವುದರಿಂದಲೂ ಈ ವೆಚ್ಚವು ಏರುತ್ತದೆ. ಈಗ ಇಡೀ ಪ್ರಾಂತದಲ್ಲಿ ಒಟ್ಟು 8,500 ರಿಲೀಫ್ ಶಾಪುಗಳಿವೆ. ಈ ಸಂಖ್ಯೆಯು ಹೆಚ್ಚುವ ಸಂಭವವಲ್ಲದೆ ಕಡಮೆಯಾಗುವುದಿಲ್ಲ. ಹೀಗಿರುವುದರಿಂದ ವೆಚ್ಚವು ಏರಲೇ ಬೇಕು. ಈ ಎಲ್ಲ ಕಾರಣಗಳಿಂದ ನಮ್ಮಲ್ಲಿರುವ ದಾಸ್ತಾನು ಹೆಚ್ಚೆಂದರೆ ಅಕ್ಟೋಬರ ತಿಂಗಳ ಮಧ್ಯದವರೆಗೆ ಮಾತ್ರ ಉಳಿಯಬಹುದು. ಇನ್ನಷ್ಟು ಹೆಚ್ಚಿಗೆ ಸಹಾಯ ಕೊಡಬೇಕೆಂದು ನಾವು ಹಿಂದುಸ್ಥಾನ ಸರಕಾರವನ್ನು ವಿನಂತಿಸಿದ್ದೇವೆ.

### ಎರಡು ತಿಂಗಳು ಮಟ್ಟಿಗೆ ದಾಸ್ತಾನ

ಕಾನೂನುಬದ್ಧ ರೇಶನ್ ಪ್ರದೇಶಗಳಲ್ಲಿ ಅಕ್ಕಿ ತಿನ್ನುವವರಿಗೆ 8 ಔನ್ಸುಗಳಷ್ಟು,

ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳ ಹಳ್ಳಿಗಳಲ್ಲಿ 6 ಔನ್ಸುಗಳಷ್ಟೂ, ರೇಶನ್ ಕ್ರಮ ರದ್ದಾಗಿ ರಿಲೀಫ್ ಶಾಪುಗಳ ಮೂಲಕ 5 ಔನ್ಸುಗಳಷ್ಟೂ ಅಕ್ಕಿ ಹಂಚಲಾಗುತ್ತಿತ್ತು. 6 ಔನ್ಸು ಮತ್ತು 5 ಔನ್ಸು ಅಕ್ಕಿ ಹಂಚುವುದು ಸಾಕಾಗದೆಂದು ಹಲವಾರು ವಿನಂತಿಗಳಿದ್ದುದರಿಂದ 18-7-48 ರಿಂದ ಸರಕಾರವು 6 ಔನ್ಸನ್ನು 8 ಔನ್ಸಿಗೂ, 5 ಔನ್ಸನ್ನು 6 ಔನ್ಸಿಗೂ ಏರಿಸಿರುತ್ತದೆ. ಕಾನೂನುಬದ್ಧ ರೇಶನ್ ಪ್ರದೇಶಗಳಲ್ಲಿ ಅಕ್ಕಿಯ ರೇಶನ್ ಪ್ರಮಾಣವು ಸದ್ಯ ಈಗಿರುವ 8 ಔನ್ಸುಗಳಷ್ಟು ಇರುವುದು. ರೇಶನ್ ಪ್ರಮಾಣವು ಸಹ ಕಾನೂನುಬದ್ಧ ಮತ್ತು ಹಳ್ಳಿ ಪ್ರದೇಶಗಳಲ್ಲಿ 10 ಔನ್ಸುಗಳಷ್ಟೂ ರಿಲೀಫ್ ಶಾಪುಗಳ ಮೂಲಕ 8 ಔನ್ಸುಗಳಷ್ಟೂ ಕೊಡಲಾಗುವುದು. ಕೆಲವೆ ಜಿಲ್ಲೆಗಳಲ್ಲಿ ಹೊರತು ಇತರ ಕಡೆಗಳಲ್ಲೆಲ್ಲಾ ಮುಂಗಾರು ಮಳೆಯು ಈ ವರೆಗೆ ಹೆಚ್ಚು ಕಡಮೆ ಎಂದಿನಂತಿವೆ. ಆದರೆ ಕೊನೆಗೆ ಹೇಗೆ ನಿಲ್ಲುವುದೆಂದು ಈಗ ಹೇಳಲು ಸಾಧ್ಯವಿಲ್ಲ. ಜುಲೈ 14 ರಂದು ನಾನು ಸೂಚಿಸಿದಂತೆ ನಮ್ಮ ಪ್ರಾಂತದಲ್ಲಿ ಸಾಮಾನ್ಯ ಆಹಾರ ಪರಿಸ್ಥಿತಿ ಒಟ್ಟಾರೆ ತೃಪ್ತಿಕರವಾಗಿದ್ದಿರಬಹುದು. ಆದರೆ ಹಿಂಗಾರು ಮಳೆಯು ತೃಪ್ತಿಕರವೆಂದು ಖಂಡಿತವಾಗುವವರೆಗೆ ನಾವು ಆಸಡ್ಡೆ ತೋರಿಸಲಾರೆವು. ಬರುವ ಅಕ್ಟೋಬರ ತಿಂಗಳ ಅಖೈರಿ ಒಳಗೆ ನಾವು ಕಡಮೆಯೆಂದರೆ ಎರಡು ತಿಂಗಳುಗಳ ಮಟ್ಟಿಗೆ ಬೇಕಾದಷ್ಟು ಪ್ರಮಾಣವನ್ನಾದರೂ ದಾಸ್ತಾನ ವಿರಿಸಿಕೊಳ್ಳಬೇಕಾಗಿದೆ

## ವಿನಿಯಂತ್ರಣದ ಪರಿಣಾಮ

ವಿನಿಯಂತ್ರಣ ಘೋರಣೆಯನ್ನು ಅನುಸರಿಸುವಾಗ ನಿರೀಕ್ಷಿಸಿದಂತೆ ಹೆಚ್ಚು ಕಡಮೆ ಎಲ್ಲಾ ಜಿಲ್ಲೆಗಳಲ್ಲಿಯೂ ವಿನಿಯಂತ್ರಣದ ಫಲವಾಗಿ ಬೆಲೆಗಳು ಹೆಚ್ಚಿರುತ್ತವೆ. ಕೆಲವು ಕಡೆಗಳಲ್ಲಿ ಅವುಗಳು ವಿನಿಯಂತ್ರಣಕ್ಕಿಂತ ಮುಂಚಿನ ಬೆಲೆಗಳ ಇಮ್ಮಡಿಯಷ್ಟಾಗಿವೆ ಆದರೆ ಇಂತಹ ಅಸಾಧಾರಣ ಬೆಲೆಗಳು ಕೊರತೆ ಜಿಲ್ಲೆಗಳಲ್ಲಿ ಮಾತ್ರ ಇವೆಯನ್ನಬಹುದು. ಉಳಿಕೆ ಜಿಲ್ಲೆಗಳಲ್ಲಿ ಕೂಡ ಬೆಲೆಗಳು ಏರಿವೆಯಾದರೂ, ಅವು ಕೊರತೆ ಜಿಲ್ಲೆಗಳಲ್ಲಿರುವಷ್ಟು ಏರಲಿಲ್ಲ. ವಿನಿಯಂತ್ರಣದಿಂದ ಬೆಲೆಯು ಏರಿದುದು ನಮ್ಮ ಪ್ರಾಂತದ ಒಂದು ಅಪೂರ್ವ ಪರಿಸ್ಥಿತಿಯಲ್ಲ ಇತರ ಪ್ರಾಂತಗಳಲ್ಲಿಯೂ ಇದೇ ರೀತಿ ಬೆಲೆ ಏರಿರುತ್ತವೆ. ಕೆಲವು ಪ್ರಾಂತಗಳಲ್ಲಿ ಬೆಲೆಯು ನಮ್ಮ ಪ್ರಾಂತಕ್ಕಿಂತಲೂ ಹೆಚ್ಚಿಗೆ ಏರಿವೆ ನಮ್ಮ ಪ್ರಾಂತದ ಮಟ್ಟಿಗೆ ಹೋಗಾ ಕಳೆದ ಹಿಂಗಾರು ಮಳೆಯು ಬಾರದ ಕಾರಣವಿದೆ

## ಉದ್ದೇಶಕ್ಕೆ ಭಂಗ ತರಬಾರದು

ಆಹಾರ ಧಾನ್ಯಗಳ ಬೆಲೆಗಳು ಅತ್ಯಧಿಕ ಏರಿರುವುದನ್ನು ಸರಕಾರವು ಶಾಂತ ಚಿತ್ತದಿಂದ ನೋಡುತ್ತಿದೆಯೆಂಬ ಅರ್ಥವಲ್ಲ. ಈ ಏರುವಿಕೆಯನ್ನು ಎದುರಿಸಲು ಸರಕಾರವು ಸಾಧ್ಯವಾದ ಎಲ್ಲಾ ಏರ್ಪಾಡುಗಳನ್ನು ಕೈಗೊಳ್ಳುತ್ತಿದೆ. ಪ್ರತಿ ಜಿಲ್ಲೆಯಲ್ಲಿ ವ್ಯಾಪಾರಕ್ಕಾಗಿ ಬೆಲೆಗಳನ್ನು ಗೊತ್ತು ಪಡಿಸಿದೆ ಆದರೆ ತಾರತಮ್ಯವಿಲ್ಲದೆ ದಾವೆ ಹೂಡುವುದರಿಂದ ಅನಾವಶ್ಯಕ ಹಿಂಸಿಸಿದಂತಾಗುತ್ತದೆ ಮಾತ್ರವಲ್ಲ. ಅದರಿಂದಾಗಿ ದಾಸ್ತಾನುಗಳು ಕಾಣೆಯಾಗುವ ಸಂಭವವೂ ಹೆಚ್ಚು. ಅದರಿಂದ ಯಾವುದಕ್ಕಾಗಿ ಬೆಲೆಗಳನ್ನು ನಾವು ನಿಯಂತ್ರಿಸಿರುವೆವೋ ಆ ಉದ್ದೇಶವು ಕೆಟ್ಟು ಹೋಗುತ್ತದೆ. ಆದುದರಿಂದ ಬೆಲೆ ನಿಯಂತ್ರಣಾಜ್ಞೆಯನ್ನು ಅತಿ ಪ್ರಬಲವಾಗಿ ಉಲ್ಲಂಘಿಸುವ ವ್ಯಾಪಾರಿಗಳ ಮೇಲೆದಾವೆ ಹೂಡಬೇಕೆಂದು ಸರಕಾರವು ಎಲ್ಲ ಕಲೆಕ್ಟರರನ್ನು ಕೇಳುತ್ತದೆ. ಈ ಅಧಿಕಾರವನ್ನು ಅತಿ ವಿವೇಕದಿಂದಲೂ ಸ್ಥಳೀಕ ಸ್ಥಿತಿಗತಿಗಳಿಗನುಸಾರವಾಗಿಯೂ ಉಪಯೋಗಿಸಬೇಕಾಗಿದೆ ಮತ್ತು ಹಾಗೆ ಮಾಡಲಾಗುತ್ತಿದೆಯೆಂದು ನಾನು ನಂಬುತ್ತೇನೆ.

## ಬೆಲೆ ಏರಿದಂತೆ ತಡೆಯಲಾಗುವುದು

ಹೆಚ್ಚುವ ಬೆಲೆಗಳನ್ನು ಎದುರಿಸಲು ಕೈಗೊಂಡ ಇನ್ನೊಂದು ಉಪಾಯವೆಂದರೆ, ರಿಲೀಫ್ ಶಾಪುಗಳನ್ನು ತೆರೆದು ಜನರಿಗೆ ನಿಯಂತ್ರಿತ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದು. ಇದಕ್ಕೆ ಹಿಂದುಸ್ಥಾನ ಸರಕಾರದ ಪೂರ್ಣ ಅನುಮೋದನೆ ಇದೆ ರೇಶನ್ ಪದ್ಧತಿ ತೆಗೆದುಹಾಕಿದ ಸಮಯದಲ್ಲಿ ಕೆಲವೇ ರಿಲೀಫ್ ಶಾಪುಗಳನ್ನು ತೆರೆಯಲಾಗಿತ್ತು ಆದರೆ ಬೆಲೆಯು ಏರುತ್ತಿದೆಂದು ತಿಳಿದೊಡನೆಯೇ ಸರಕಾರವು ಆವಶ್ಯ ಅಧಿಕ ಶಾಪುಗಳನ್ನು ತೆರೆಯುವಂತೆ ಕಲೆಕ್ಟರರಿಗೆ ಅಪ್ಪಣೆ ಕೊಟ್ಟಿತು. ಈಗ ಇಂತಹ ಅಂಗಡಿಗಳ ಸಂಖ್ಯೆಯು 8,500 ರಷ್ಟು ಕ್ಕೇರಿದೆ. ಪ್ರತಿ ಅಂಗಡಿಯು ಮುಂಚಿನ ರೇಶನ್ ಅಂಗಡಿಗಳಂತೆ ಸರಾಸರಿ ಸುಮಾರು 500 ಕುಟುಂಬಗಳಿಗೆ ಆಹಾರ ಧಾನ್ಯ ಪೂರೈಸುತ್ತದೆ. ಹೀಗೆಂದರೆ ಒಟ್ಟು ಸುಮಾರು 4,20,000 ಕುಟುಂಬಗಳು ಈ ಅಂಗಡಿಗಳಿಂದ ಪ್ರಯೋಜನ ಪಡೆಯುತ್ತಿವೆಯೆಂದಾಯಿತು. ಒಂದು ಕುಟುಂಬದಲ್ಲಿ 5 ಜನರಿರುವರೆಂದು ಭಾವಿಸಿದರೂ ಕೂಡ ರಿಲೀಫ್ ಶಾಪುಗಳನ್ನು ಉಪಯೋಗಿಸುವ ಒಟ್ಟು ಜನಸಂಖ್ಯೆ ಸುಮಾರು 20 ಮಿಲಿಯವೆನ್ನಬಹುದು. ಅಂದರೆ ನಮ್ಮ ಪ್ರಾಂತದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡ 40 ರಷ್ಟು ಅಂದರೆ ಉತ್ಪಾದಕರಲ್ಲದ ಮತ್ತು ಸ್ವಲ್ಪ ಉತ್ಪಾದರೆ ಮಾಡುವವರ ಒಟ್ಟು ಸಂಖ್ಯೆಯಲ್ಲಿ ಶೇಕಡ ಸುಮಾರು 60 ರಷ್ಟಾಯಿತು. ಈ ವಿಷಯದಲ್ಲಿ ಒಂದು ವಿಷಯವನ್ನು ನಾವು ನೆನಸಿಕೊಳ್ಳಬೇಕು. ನಿಯಂತ್ರಣ ರದ್ದುಪಡಿಸುವ ಘೋರಣೆಯೆಂದರೆ ಪ್ರತಿಯೊಬ್ಬನಿಗೆ ಅಥವಾ ಪ್ರತಿ ಕುಟುಂಬಕ್ಕೆ ನಿಯಂತ್ರಿತ ದರಗಳಲ್ಲಿ ಆಹಾರ ಧಾನ್ಯಗಳನ್ನು ಪೂರೈಸುವ ತತ್ವವನ್ನು ಬಿಟ್ಟುಬಿಡುವುದಾಗಿದೆ. ಆದರೂ ನಮ್ಮ ಜನಸಂಖ್ಯೆಯಲ್ಲಿ ಹೆಚ್ಚಿನಾಂಶಕ್ಕೆ ನಿಯಂತ್ರಿತ ಬೆಲೆಗಳಲ್ಲಿ ಆಹಾರಧಾನ್ಯ ಹಂಚುವ ಏರ್ಪಾಡನ್ನು ಸರಕಾರವು ಮಾಡಿರುತ್ತದೆ. ಈ ರಿಲೀಫ್ ಶಾಪುಗಳ ಹೆಸರಿಗನುಸಾರವಾಗಿ ಹೆಚ್ಚಾಗಿ ಪೇಟೆಯಲ್ಲಿ ತಮಗೆ ಬೇಕಾದ ಆಹಾರ ವಸ್ತುಗಳನ್ನು ಕೊಳ್ಳಲು ಸಾಧ್ಯವಿಲ್ಲದಂಥವರ ಪ್ರಯೋಜನಕ್ಕಾಗಿ ಮಾತ್ರ ತೆರೆಯಲ್ಪಟ್ಟಿವೆ. ಇಂದು ಬೆಲೆಯು ಏರಿರುತ್ತದೆಂದರೆ ಹೆಚ್ಚಿಗೆ ಬೆಲೆ ತೆರಲು ಸಾಧ್ಯವಿದ್ದು, ರಿಲೀಫ್ ಶಾಪುಗಳನ್ನು ಉಪಯೋಗಿಸಿಕೊಳ್ಳದವರೇ ಅದಕ್ಕೆ ಹೊಣೆಗಾರರು. ಬಡವನು ಯಾವಾಗಲೂ ರಿಲೀಫ್ ಶಾಪುಗಳ ಮೇಲೆ ಹೊಂದಿಕೊಂಡು ತನ್ನ 6 ಔನ್ಸು ಅಕ್ಕಿ ಮತ್ತು 2 ಔನ್ಸು ಇತರ ಧಾನ್ಯ ಕೊಂಡುಕೊಳ್ಳಬಹುದು. ಮುಂಬರುವ ವಾರಗಳಲ್ಲಿ ಇಂತಹ ಪರಿಹಾರ ಅಂಗಡಿಗಳ ಸಂಖ್ಯೆಯು ಏರುವುದು. ಅದರಂತೆಯೇ ಅವುಗಳಿಂದ ಪ್ರಯೋಜನ ಪಡೆಯುವ ಕುಟುಂಬಗಳ ಸಂಖ್ಯೆಯೂ ಹೆಚ್ಚುತ್ತದೆ. ಈಗ ಸರಕಾರವು ಈ ಅಂಗಡಿಗಳ ಮೂಲಕ ಹಂಚುವ ಅಕ್ಕಿಯ ಪ್ರಮಾಣವನ್ನು 5 ರಿಂದ 6 ಔನ್ಸಿಗೆ ಏರಿಸಿರುವುದರಿಂದ ಅವುಗಳ ಮೂಲಕ ವೆಚ್ಚವಾಗುವ ಪ್ರಮಾಣವು ಹೆಚ್ಚಿ ಅಷ್ಟರ ಮಟ್ಟಿಗೆ ಸ್ಥಳೀಕ ಪೇಟೆಗಳಲ್ಲಿ ಒತ್ತಡವು ಕಡಮೆಯಾಗುವುದು. ಇದರಿಂದ ಭತ್ತದ ಬೆಲೆಯು ಕಡಮೆಯಾಗಬಹುದು. ನಾವು ಕೊಯಿಲಿನ ವರ್ಷದ ಕೊನೆಗೆ ಸಾಗುತ್ತಿದ್ದೇವೆ ಈ ಸಮಯದಲ್ಲಿ ಸಾಧಾರಣವಾಗಿ ಬೆಲೆ ಏರುವುದು ವಾಡಿಕೆ. ಈ ರಿಲೀಫ್ ಅಂಗಡಿಗಳು ಬೆಲೆಗಳು ಏರುವುದನ್ನು ತಡೆಯುತ್ತವೆಂಬುದರಲ್ಲಿ ಸಂಶಯವಿಲ್ಲ. ಮುಂಬರುವ ತಿಂಗಳುಗಳಲ್ಲಿ ಇದೇ ರೀತಿ ಬೆಲೆಯನ್ನು ಹತೋಟಿಯಲ್ಲಿಡಲಾಗುವುದು.

## ಜನರ ಸಹಕಾರ ಬೇಕು

ಒಂದು ಜಿಲ್ಲೆಯಿಂದ ಇನ್ನೊಂದಕ್ಕೆ ಕಳ್ಳತನದಲ್ಲಿ ಆಹಾರ ಧಾನ್ಯ ಸಾಗಿಸಲ್ಪಡುತ್ತದೆಯೆಂಬ ಅವಮಾನವಿದೆ. ಸ್ವಲ್ಪ ಮಟ್ಟಿಗೆ ಅದರಲ್ಲೂ ನದೀ ಮುಖಜ ಜಿಲ್ಲೆಗಳಿಂದ ಈ ರೀತಿ ಸಾಗಿಸಲ್ಪಡುವುದು ನಿಜ ಅಂಥ ಜಿಲ್ಲೆಗಳಲ್ಲಿ ಈ ದುರ್ವ್ಯವಹಾರವನ್ನು ತಡೆಯುವಂತೆ ಸರಕಾರವು ಸಿವಿಲ್ ಸಪ್ಲೈಸ್ ನೌಕರರನ್ನೂ ಪೋಲಿಸಿನವರ

ನ್ನೂ ನೇಮಿಸಿರುತ್ತದೆ. ಆದರೆ ಹೇರಳ ಪ್ರಮಾಣದಲ್ಲಿ ಕಳ್ಳತನದಿಂದ ಆಹಾರ ಧಾನ್ಯಗಳು ಸಾಗಿಸಲ್ಪಡುತ್ತಿರುವುದಾದರೆ, ಅದಕ್ಕಾಗಿ ನೇಮಿಸಲ್ಪಟ್ಟಿರುವ ನೌಕರರಿಗೆ ಅದನ್ನು ತಡೆಯಲು ಸುಲಭವಾಗಲಿಕ್ಕಿಲ್ಲ. ಹೇಗೂ ಪ್ರಕೃತ ಪರಿಸ್ಥಿತಿಯಲ್ಲಿ ಸಾಧ್ಯವಾದ ಎಲ್ಲಾ ಏರ್ಪಾಡುಗಳನ್ನು ಕೈಗೊಳ್ಳಬೇಕೆಂದು ಸರಕಾರವು ಅಪ್ಪಣೆ ಕೊಟ್ಟಿದೆ. ಈ ಯತ್ನವು ಜನತೆಯ ಅತ್ಯಧಿಕ ಸಹಕಾರದಿಂದಲೇ ಯಶಸ್ವಿಯಾಗುವುದೆಂಬುದನ್ನು ನಾವಿಲ್ಲಿ ಮರೆಯಕೂಡದು.

### ಜಿಲ್ಲೆಯಿಂದ ಜಿಲ್ಲೆಗೆ

ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳನ್ನು ಸಾಗಿಸುವುದರ ಮೇಲಿರುವ ನಿರ್ಬಂಧವನ್ನು ತೆಗೆದು ಹಾಕಿದರೆ, ಪ್ರಾಂತದಲ್ಲೆಲ್ಲಿಯೂ ತುಂಬ ಆಹಾರ ಧಾನ್ಯಗಳು ದೊರೆಯುವಂತಾಗುವುದೆಂದೂ ಬೆಲೆಗಳು ತಗ್ಗಬಹುದೆಂದೂ ಸೂಚಿಸಲಾಗಿದೆ. ಆದರೆ ಈ ಅಭಿಪ್ರಾಯ ಸರಿಯಲ್ಲವೆಂದು ನಾನು ತಿಳಿಸಬೇಕಾಗಿದೆ. ಉಳಿಕೆ ಜಿಲ್ಲೆಗಳಲ್ಲಿ ಉತ್ಪತ್ತಿಯಲ್ಲಿ ಹೆಚ್ಚುಳಿಯುವ ಆಹಾರ ಧಾನ್ಯಗಳು ಎಲ್ಲಾ ಕೊರತೆ ಜಿಲ್ಲೆಗಳಿಗೆ ಬೇಕಾದಷ್ಟಿದೆಯೆಂದಾದರೆ, ಆಗ ಈ ನಿಬಂಧವನ್ನು ತೆಗೆಯುವುದರಿಂದ ಕೊರತೆ ಜಿಲ್ಲೆಗಳಲ್ಲಿ ನ್ಯಾಯವಾದ ಬೆಲೆಗೆ ಆಹಾರ ಧಾನ್ಯ ದೊರೆಯುವಂತೆ ಮಾಡಿದಂತಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ನಿಜವಾದ ತಥ್ಯವೆಂದರೆ ಉಳಿಕೆ ಜಿಲ್ಲೆಗಳ ಉತ್ಪತ್ತಿಯಲ್ಲಿ ಹೆಚ್ಚುಳಿಯುವ ಪ್ರಮಾಣಕ್ಕೆ ಹಿಂದುಸ್ಥಾನ ಸರಕಾರವು ಕೊಟ್ಟ ಆಮದು ಪ್ರಮಾಣಗಳನ್ನು ಸೇರಿಸಿದರೂ ಕೂಡ ಕೊರತೆ ಪ್ರದೇಶಗಳಿಗೆ ಬೇಕಾದಷ್ಟಿಲ್ಲ. ಹೀಗೆ ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸುವುದರ ಮೇಲಿರುವ ನಿರ್ಬಂಧವನ್ನು ತೆಗೆದು ಹಾಕುವುದರಿಂದ ಪ್ರಾಂತದಲ್ಲಿ ಸಾಮಾನ್ಯ ಆಹಾರ ಪರಿಸ್ಥಿತಿಯು ಸುಧಾರಿಸಲು ಸಹಾಯವಾಗುವುದಿಲ್ಲ. ಬದಲಿಗೆ, ದಾಸ್ತಾನುಗಳನ್ನು ಅಡಗಿಸಿಡಲು ನೀತಿಗೆಟ್ಟ ಆಮದುದಾರರಿಗೆ ಅನುಕೂಲಿಸಿದಂತಾಗುವುದು ಮಾತ್ರವಲ್ಲ, ಉಳಿಕೆ ಜಿಲ್ಲೆಗಳು ಕೊರತೆ ಪ್ರದೇಶಗಳಾಗಿ ಮಾರ್ಪಟ್ಟು ಈಗ ಕೊರತೆ ಜಿಲ್ಲೆಗಳ ಪಾಡನ್ನು ಅನುಭವಿಸಬೇಕಾಗುವುದು. ಇಷ್ಟು ಮಾತ್ರವಲ್ಲದೆ ಸಂಗ್ರಹಣ ಪದ್ಧತಿಯು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಹೆಚ್ಚುಳಿಯುವ ಪ್ರಮಾಣವನ್ನು ಸಂಗ್ರಹಿಸುವುದಕ್ಕೆ ಈ ನಿರ್ಬಂಧವು ಅವಶ್ಯ. ಸಂಗ್ರಹಣವು ಪೂರ್ತಿಯಾದನಂತರ ಹಾಗೂ ಹವಾಮಾನವು ತೃಪ್ತಿಕರವೆಂದಾದರೆ ವಿನಿಯಂತ್ರಣದ ಇತರ ಏರ್ಪಾಡುಗಳನ್ನು ಕೈಗೊಳ್ಳುವಾಗ ಸರಕಾರವು ಈ ನಿರ್ಬಂಧಗಳನ್ನು ತೆಗೆಯಬೇಕಾಗುವುದು. ನಿಜಾಂಶವೆಂದರೆ, ದತ್ತಮಂಡಲ ಜಿಲ್ಲೆಗಳಲ್ಲಿ ಧಾನ್ಯಗಳ ಪರಿಸ್ಥಿತಿಯು ತೃಪ್ತಿಕರವಾಗಿದ್ದುದರಿಂದ ಧಾನ್ಯಗಳ ಮಟ್ಟಿಗೆ ಈ ನಿರ್ಬಂಧವನ್ನು ಬಳ್ಳಾರಿ, ಅನಂತಪುರ, ಕರ್ನೂಲು, ಕಡಪ, ಚಿತ್ತೂರು, ಉತ್ತರ ಅರ್ಕಾಟು, ನೆಲ್ಲೂರು, ಗುಂಟೂರು ಜಿಲ್ಲೆಗಳಲ್ಲಿ ತೆಗೆದು ಹಾಕಲಾಗಿದೆ. ಸಂಗ್ರಹಣದ ಬಗ್ಗೆ ಅತ್ಯಾವಶ್ಯಕವೆಂದಿರುವ ಪ್ರದೇಶಗಳಲ್ಲಿ ಹೊರತು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ಗ್ರಾಮದಿಂದ ತಾಲೂಕಿಗೆ ಸಾಗಿಸುವುದರ ಮೇಲಿದ್ದ ನಿರ್ಬಂಧಗಳನ್ನು ಸರ್ಕಾರವು ರದ್ದುಪಡಿಸಿದೆ. ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ನದೀ ಮುಖಜ ಭೂಮಿಗಳಿಂದ ಒಳಪ್ರದೇಶಗಳ ಆಹಾರ ಧಾನ್ಯಗಳನ್ನು ಸಾಗಿಸುವುದರ ಮೇಲೆ ಈ ನಿರ್ಬಂಧವು ಇನ್ನೂ ಇದೆ. ಈ ಎರಡು ಜಿಲ್ಲೆಗಳಲ್ಲಿ ಕೂಡ ಸಾಕಷ್ಟು ಆಹಾರ ಧಾನ್ಯಗಳು ಸಂಗ್ರಹಿಸಲ್ಪಟ್ಟ ಕೂಡಲೇ ನಿರ್ಬಂಧವನ್ನು ತೆಗೆಯಲಾಗುವುದು.

### ಮುಂದೇನು

ಮದ್ರಾಸು ಸರಕಾರವು ವಿನಿಯಂತ್ರಣ ಘೋಷಣೆಯಲ್ಲಿ ಕೈಗೊಳ್ಳಬೇಕಾದ ಮುಂದಿನ ಏರ್ಪಾಡುಗಳಾವುವು ಎಂಬುದನ್ನು ನಾವಿಲ್ಲಿ ಆಲೋಚಿಸಬೇಕಾಗಿದೆ. ನಿಯಂತ್ರಣ ಏರ್ಪಾಡುಗಳಲ್ಲಿ ಮುಖ್ಯವಾಗಿದ್ದು ಈಗ ಜಾರಿಯಲ್ಲಿರುವವುಗಳೆಂದರೆ ಮದ್ರಾಸು ನಗರವೂ ಸೇರಿ ಪ್ರಾಂತದ 18 ಪಟ್ಟಣಗಳಲ್ಲಿ ಕಾನೂನು ಬದ್ಧ ರೇಶನ್ ಕ್ರಮವಿರುವುದು, ಮೇಲೆ ಹೇಳಿದ ಪ್ರಾಂತಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ ಮತ್ತು ತಾಲೂಕಿನಿಂದ ತಾಲೂಕಿಗೆ ಸಾಗಿಸುವುದರ ಮೇಲಿರುವ ನಿರ್ಬಂಧಗಳು, ಬೆಲೆ ನಿಯಂತ್ರಣಾಜ್ಞೆ, ಉಳಿಕೆ ಜಿಲ್ಲೆಗಳಲ್ಲಿಯೂ ಮಲಬಾರು, ನೀಲಗಿರಿ ಜಿಲ್ಲೆಗಳಲ್ಲಿಯೂ ಇರುವ ಸಂಗ್ರಹಣ ನಿಯಮಗಳು ಇವೇ ಆಗಿವೆ. ಪ್ರಾಂತದಿಂದ ಪ್ರಾಂತಕ್ಕೆ ಕಳುಹಿಸುವುದರ ಮೇಲಿರುವ ನಿರ್ಬಂಧದ ಮಟ್ಟಿಗೆ, ಆ ವಿಷಯವನ್ನು ಹಿಂದುಸ್ಥಾನ ಸರಕಾರವೇ ನಿಶ್ಚಯಿಸಬೇಕಾಗಿದೆ. ಜಿಲ್ಲೆಯಿಂದ ಜಿಲ್ಲೆಗಿರುವ ಹಾಗೂ ತಾಲೂಕಿನಿಂದ ತಾಲೂಕಿಗಿರುವ ನಿರ್ಬಂಧವನ್ನು ಮೇಲೆ ಹೇಳಿದಂತೆ ಉಳಿದ ಪ್ರದೇಶಗಳಿಂದ ಸಂಗ್ರಹಿಸಲು ಇನ್ನೂ ಬಾಕಿ ಉಳಿದಿರುವ ಆಹಾರ ಧಾನ್ಯಗಳು ಸಂಗ್ರಹಿಸಲ್ಪಟ್ಟೊಡನೆಯೇ ಹಾಗೂ ಬರುವ ಹವಾಮಾನವು ಸರಿಯಾಗಿದೆಯೆಂದು ತಿಳಿದೊಡನೆಯೇ ತೆಗೆಯಲಾಗುವುದು. ಬೆಲೆ ನಿಯಂತ್ರಣಾಜ್ಞೆ, ಆಹಾರ ಧಾನ್ಯಗಳ ನಿಯಂತ್ರಣಾಜ್ಞೆ, ಸಂಗ್ರಹಣ ನಿಯಮಗಳು ಇದನ್ನು ಸರ್ಕಾರಕ್ಕೆ ಬೆಲೆಗಳನ್ನು ಕ್ರಮವಾಗಿರಿಸುವುದಕ್ಕೂ ಕೂಡಿಡುವುದನ್ನು ತಡೆಯುವುದಕ್ಕೂ ಅನುಕೂಲವಾಗುವಂತೆ ಮುಂದುವರಿಸಬೇಕಾಗಿದೆ. ಪರಿಸ್ಥಿತಿಯನ್ನು ಸರ್ಕಾರವು ಎಚ್ಚರದಿಂದ ನೋಡುತ್ತಿದೆ. ನಿಯಂತ್ರಣವು ಸಂಪೂರ್ಣ ರದ್ದಾಗುವವರೆಗೆ ಯಾವ ಏರ್ಪಾಡುಗಳೆಲ್ಲಾ ಅವಶ್ಯವೋ ಅವನ್ನು ಸರ್ಕಾರವು ಕೈಗೊಳ್ಳುವುದು.

### ಕೇಂದ್ರ ಸರ್ಕಾರದ ಸಹಾಯ ಬೇಕು

ಹಾಲಿ ವರ್ಷದಲ್ಲಿ ಹಿಂದುಸ್ಥಾನ ಸರ್ಕಾರದಿಂದ ನಮಗೆ ದೊರೆತ ಸಹಾಯಕ್ಕಾಗಿ ನಾವು ಅದನ್ನು ಅಭಿವಂದಿಸದಿದ್ದರೆ ನಾನು ನನ್ನ ಕರ್ತವ್ಯವನ್ನು ನೆರವೇರಿಸಲಿಲ್ಲವೆಂದಾಗುವುದು. ಆಹಾರ ಧಾನ್ಯ ಘೋರಣಾ ಸಮಿತಿಯು ನಮ್ಮ ಪ್ರಾಂತಕ್ಕೆ ಹೆಚ್ಚೆಂದರೆ 150,000 ಟನ್ನುಗಳಷ್ಟು ಆಮದು ಮಾಡಿದ ಆಹಾರ ಧಾನ್ಯ ಹಂಚಿ ಹಾಕಿತ್ತು. ನನ್ನ ಆಕ್ಷೇಪ ಸೂಚನೆಯಿಂದ ಹಿಂದುಸ್ಥಾನ ಸರ್ಕಾರವು ಈ ಪ್ರಮಾಣವನ್ನು ಪ್ರಥಮದಲ್ಲಿ 200,000 ಟನ್ನುಗಳಷ್ಟಕ್ಕೇರಿಸಬೇಕು, ಅನಂತರ ಈ ಆಮದು ಪ್ರಮಾಣವು ಸಾಕಷ್ಟಿಲ್ಲವೆಂದು ನಮ್ಮ ಸರ್ಕಾರವು ಪುನಹ ವಿನಂತಿಸಿಕೊಂಡಾಗ ಹಿಂದುಸ್ಥಾನ ಸರ್ಕಾರವು ಈ ಪಾಲನ್ನು ಇಮ್ಮಡಿ ಮಾಡಿ 400,000 ಟನ್ನಿಗೇರಿಸಿತು. ಹಿಂಗಾರು ಮಳೆಯು ಬೀಳದಿದ್ದುದರಿಂದ ಹಿಂದುಸ್ಥಾನ ಸರ್ಕಾರವನ್ನು ಪುನಹ ಕೇಳಲಾಯಿತು. ಈ ವಿನಂತಿಯ ಫಲವಾಗಿಯೂ ಹಿಂದುಸ್ಥಾನ ಸರ್ಕಾರದ ಆಹಾರ ಮಂತ್ರಿಯವರು ಕಳೆದ ಮೇ ತಿಂಗಳಲ್ಲಿ ನಮ್ಮ ಪ್ರಾಂತವನ್ನು ಸಂದರ್ಶಿಸಿ ಸಂಚಾರ ಮಾಡಿದುದರ ಫಲವಾಗಿಯೂ, ನಮ್ಮ ಪಾಲನ್ನು ಒಂದು ಲಕ್ಷ ಟನ್ನಿನಷ್ಟು ಹೆಚ್ಚಿಸಿ, ಒಟ್ಟು ಪ್ರಮಾಣವನ್ನು 5 ಲಕ್ಷ ಟನ್ನುಗಳಷ್ಟಕ್ಕೆ ತರಲಾಯಿತು. ಮೊದಲೇ ಹೇಳಿದಂತೆ ಈ ಲಕ್ಷ ಟನ್ನುಗಳಲ್ಲಿ 2,34,000 ಟನ್ನು ಅಕ್ಕಿ, 57000 ಟನ್ನು ಗೋಧಿ, 133000 ಟನ್ನು ಜೋಳ 76,000 ಟನ್ನು ಮಿಲೊ ಮತ್ತು ಇತರ ಧಾನ್ಯಗಳು. ಈಗಿರುವ ದಸ್ತಾನು ಬರುವ ಅಕ್ಟೋಬರ ತಿಂಗಳವರೆಗೆ ಮಾತ್ರ ಇರಬಹುದೆಂದೂ, ಅನಂತರ ಉಂಟಾಗಬಹುದಾದ ಸನ್ನಿವೇಶಗಳಿಗಾಗಿ ಎರಡು ತಿಂಗಳ ಮಟ್ಟಿನ ದಾಸ್ತಾನನ್ನಾದರೂ ಸರ್ಕಾರವು ಇಟ್ಟುಕೊಳ್ಳುವುದು ಅವಶ್ಯವೆಂದೂ ಸೂಚಿಸಿ ಹಿಂದುಸ್ಥಾನ ಸರ್ಕಾರವನ್ನು ಪುನಃ ನಮ್ಮ ಪ್ರಾಂತದ ಆಮದಿನ ಪಾಲನ್ನು ಹೆಚ್ಚಿಸುವಂತೆ ಕೇಳಲಾಗಿದೆ. ಹಿಂದುಸ್ಥಾನ ಸರಕಾರವು ಈ ವರೆಗೆ ತೋರಿಸಿದ ಔದಾರ್ಯದಂತೆ ಈ ಸಂದರ್ಭದಲ್ಲಿಯೂ ಉದಾರ ಸಹಾಯ ನೀಡುವುದೆಂದು ಈ ಸರಕಾರವು ಆಶಿಸುತ್ತದೆ.

(ಮದ್ರಾಸ್ ಶಾಸನ ಸಭೆಯಲ್ಲಿ)

ಒಂದು ತಿಂಗಳ

# ರಾಶಿ ಭವಿಷ್ಯ

1948 ನೇ ಅಗಸ್ಟ ತಾ॥ 16 ರಿಂದ ಸೆಪ್ಟಂಬರ ತಾ॥ 15 ರ ವರೆಗೆ

ಬರೆದವರು: 'ಭಾರದ್ವಾಜ'

## ಮೇಷ

ತಮ್ಮ ಪರಿಸ್ಥಿತಿಯು ಕಳೆದ ತಿಂಗಳಿನಂತೆಯೇ ಇರಬಹುದಲ್ಲದೆ ಹೆಚ್ಚಿನ ವ್ಯತ್ಯಾಸಗಳೇನೂ ಉಂಟಾಗುವಂತಿಲ್ಲ. ವ್ಯಾಪಾರಸ್ಥರಿಗೂ, ಸ್ತ್ರೀಯರಿಗೂ ಸ್ವಲ್ಪ ಮಟ್ಟಿಗೆ ಅನುಕೂಲ, ಆದರೂ ನಿರಾಶರಾಗಲು ಕಾರಣವಿಲ್ಲ. ಖರ್ಚಿಗೆ ಬೇಕಾದಷ್ಟು ಹಣ ಕೈಲಿ ಓಡಾಡುವುದು. ಆರೋಗ್ಯದ ಕಡೆ ಹೆಚ್ಚು ಗಮನ ವಿರಲಿ. ಕುಟುಂಬ ಸೌಖ್ಯ ಉತ್ತಮ.

## ವೃಷಭ

ತಮಗೆ ಶುಭಗ್ರಹಗಳ ಬೆಂಬಲವಿದೆ. ವ್ಯಾಪಾರ ಉದ್ಯೋಗಗಳಲ್ಲಿ ಲಾಭ, ಸಮಾಜದಲ್ಲಿ ಗೌರವ, ಉತ್ತಮ ಆರೋಗ್ಯ ಇವುಗಳಿಂದ ನೀವು ಸಂತುಷ್ಟರಾಗಬಹುದು. ಆದರೆ ನೀವು ಶ್ರಮಪಟ್ಟು ದುಡಿಯದೆ ಇವುಗಳು ಸಾಧಿಸುವಂತಿಲ್ಲ. ಡಾಕ್ಟರ, ವೈದ್ಯ, ಸ್ತ್ರೀಯರಿಗೆ ಹೆಚ್ಚು ಅನುಕೂಲ. ಕುಟುಂಬ ಸೌಖ್ಯವೂ ಉತ್ತಮವಿದೆ.

## ಮಿಥುನ

ಬಹುಕಾಲದಿಂದ ನಿಧಾನವಾಗಿ ಯಶಸ್ಸನ್ನು ಸಂಪಾದಿಸುತ್ತಿದ್ದ ನಿಮಗೀಗ ಉತ್ತಮ ಯೋಗವು ಉದಯಿಸಿದೆ. ನಿಮ್ಮ ಇಷ್ಟಾರ್ಥಗಳನ್ನು ಪೂರೈಸಲು ಇದಕ್ಕಿಂತಲೂ ಉತ್ತಮ ಕಾಲವು ಬೇಗನೆ ಬರಲಾರದು ಆದುದರಿಂದ ದೈವಬಲವುಳ್ಳ ನೀವು ಆಲಸ್ಯದಿಂದ ಕಾಲಕಳೆಯದೆ ಯಶಸ್ಸನ್ನು ಸಂಪಾದಿಸಿರಿ ಆರೋಗ್ಯ, ಕುಟುಂಬ ಸೌಖ್ಯ ಉತ್ತಮ ಪ್ರವಾಸದಿಂದ ಜಯಲಾಭವಿದೆ.

## ಕರ್ಕಾಟಕ

ನಿಮ್ಮ ಮನಸ್ಸಿನಲ್ಲಿರುವ ಮಹತ್ವಾಕಾಂಕ್ಷೆಗಳು ಫಲಿಸಲು ಇನ್ನೂ ಅವಕಾಶವಿದೆ. ಸದ್ಯಕ್ಕೆ ನೀವು ಸನ್ಮಾರ್ಗದಿಂದಲೂ, ಸತ್ಯದ ಬಲದಿಂದಲೂ ಜಯಶೀಲರಾಗಬೇಕು. ವಿರೋಧಿಗಳು ನಿಮ್ಮನ್ನು ಪೀಡಿಸಬಯಸಿದರೂ ನೀವು ಕಷ್ಟನಷ್ಟಗಳಿಗೆ ಗುರಿಯಾಗದೆ ಸಮಾನದಿಂದ ಕಾಲಕಳೆಯಲು ಸಮರ್ಥರಾಗುವಿರಿ. ಆರೋಗ್ಯ ಕುಟುಂಬ ಸೌಖ್ಯ ಮಧ್ಯಮ.

## ಸಿಂಹ

ದ್ವಾದಶ ಶನಿಯು ಜನ್ಮಕ್ಕೆ ಬಂದಿರುವನಾದರೂ, ನೀವು ಗಾಬರಿಪಡಬೇಕಾಗಿಲ್ಲ. ವ್ಯಾಪಾರ, ಉದ್ಯೋಗದಲ್ಲಿ ನಷ್ಟ ಸಂಭವಿಸದೆ ತಕ್ಕಷ್ಟು ಲಾಭ ಸಂಭವಿಸುವುದು ಆದರೆ ಮನಸ್ಸಿಗೆ ಸಮಾಧಾನವಿರಲಾರದು ವಿರೋಧಿಗಳ ಆಟ ಸಾಗದು. ಸಮಾಜದಲ್ಲಿ ಜಯಸಂಪಾದಿಸುವಿರಿ. ಕುಟುಂಬ ಸೌಖ್ಯ ಉತ್ತಮ, ಆರೋಗ್ಯ ಮಧ್ಯಮ.

## ಕನ್ಯಾ

ನಿಮಗಿದು ಸತ್ವ ಪರೀಕ್ಷೆಯ ಕಾಲ ಸರ್ವವಿಧದಿಂದಲೂ ನೀವು ಜಾಗರೂಕರಾಗಿರಬೇಕು. ವಿರೋಧಿಗಳು ನಿಮ್ಮನ್ನು ಸಂಧಿಸಾಧಿಸಿ ಅಪಾತಕ್ಕೆಳೆಯಬಯಸುವರು. ಆದರೆ ಜನ್ಮತಃ ದೂರದರ್ಶಿಗಳಾದ ನೀವು ವಿವೇಕ ಬಲದಿಂದಲೇ ಇವನ್ನು ಜಯಿಸುವಿರಿ. ಹಣದ ವ್ಯವಹಾರದಲ್ಲಿ ಹೆಚ್ಚಿನ ದಕ್ಷತೆ ಇರಲಿ ಕುಟುಂಬ ಸೌಖ್ಯ ಮಧ್ಯಮ ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ

## ತುಲಾ

ನಿಮಗೆ ಲಾಭ ಸ್ಥಾನದಲ್ಲಿ ಶನಿ ಬಂದಿರುವನು. ರವಿಯ ಅನುಗ್ರಹವೂ ಇದೆ ಇದರಿಂದಾಗಿ ನೀವು ಜಯಶೀಲರಾಗಿ ಮೆರೆಯಲು ಅವಕಾಶದೊರೆವುದು ವ್ಯಾಪಾರಸ್ಥರು ಸರಕಾರಿ ನೌಕರರು ತಮ್ಮ ಕೆಲಸಗಳಲ್ಲಿ ದಕ್ಷರಾಗಿರಬೇಕು. ಕುಟುಂಬ ಸೌಖ್ಯ ಆರೋಗ್ಯ ಉತ್ತಮ. ಇಷ್ಟಮಿತ್ರರ ಸಹಕಾರ ಚೆನ್ನಾಗಿದೊರೆಯುವುದು

## ವೃಶ್ಚಿಕ

ನಿಮ್ಮ ಪಾಲಿಗೆ ಲಾಭ ನಷ್ಟ, ಸುಖ ದುಃಖ ಇವುಗಳು ಸರಿದೂಗುವುವು. ಆರ್ಥಿಕ ಸ್ಥಿತಿಯು ಕೆಡುವ ಸಂಭವವಿದೆ. ಸಾಲಕೊಟ್ಟರೆ ತಿರುಗಿ ಸಿಗಲಾರದು. ಪ್ರವಾಸ ಕಾಲದಲ್ಲಿ ಹೆಚ್ಚಿನ ಜಾಗರೂಕತೆ ಅಗತ್ಯ. ಕುಟುಂಬ ಸೌಖ್ಯ ಉತ್ತಮ. ಆರೋಗ್ಯ ಮಧ್ಯಮ

## ಧನು

ನಿಮ್ಮ ಪಾಲಿಗೆ ಹೆಚ್ಚಿನ ತೊಂದರೆಗಳು ಬರಲಾರವು. ಧಾರ್ಮಿಕ ವಿಚಾರಗಳಿಂದ ತುಂಬಾ ಸಂತುಷ್ಟರಾಗುವಿರಿ. ಧನ ಸಂಗ್ರಹ ಮಾಡಲು ಸಾಧ್ಯವಾಗಲಾರದಾದರೂ ಖರ್ಚಿಗೆ ಬೇಕಾದಷ್ಟು ಹಣ ದೊರೆವುದು. ವ್ಯಾಪಾರಸ್ಥರಿಗೆ ವೈದ್ಯರಿಗೆ, ಸರಕಾರೀ ನೌಕರರಿಗೆ ಹೆಚ್ಚು ಅನುಕೂಲ. ಕುಟುಂಬ ಸೌಖ್ಯ ಮಧ್ಯಮ. ಆರೋಗ್ಯ ಉತ್ತಮ.

## ಮಕರ

ನೀವು ಎಚ್ಚರದಿಂದಿರಬೇಕು. ನಾಲ್ಕು ಕಡೆಗಳಿಂದ ಅನಿರೀಕ್ಷಿತ ತೊಂದರೆಗಳು ತಲೆದೋರಬಹುದು. ವಿರೋಧಿಗಳು ನಿಮ್ಮನ್ನು ಪೀಡಿಸಲು ಮುಂದಾಗುವರು. ಆದರೆ ನಿಮಗೆ ಗುರುವಿನ ಬಲವಿರುವುದರಿಂದ ಎಲ್ಲವನ್ನೂ ಧೈರ್ಯದಿಂದ ಎದುರಿಸಲು ಸಮರ್ಥರಾಗುವಿರಿ. ಅವಿಚಾರಕ್ಕೆ ಮನಸ್ಸು ಕೊಟ್ಟರೆ ಅನರ್ಥ ಸಂಭವಿಸೀತು. ಆರೋಗ್ಯ, ಕುಟುಂಬ ಸೌಖ್ಯ ಮಧ್ಯಮ.

## ಕುಂಭ

ನೀವು ಹೆಚ್ಚು ಲಾಭ ಪಡೆವ ಆತೆ ಮಾಡಬೇಕಾಗಿಲ್ಲ. ಖರ್ಚಿಗೆ ತೊಂದರೆಯಾಗದು, ಸಮಾಜದಲ್ಲಿ ಇಷ್ಟಮಿತ್ರರಲ್ಲಿ ಕುಟುಂಬದವರೊಡನೆ ಸೌಜನ್ಯದಿಂದ ವರ್ತಿಸಿರಿ. ಕುಟುಂಬ ಸೌಖ್ಯ ಉತ್ತಮ, ಆರೋಗ್ಯ ಮಧ್ಯಮ.

## ಮೀನ

ನೀವು ಸಂತೋಷದಿಂದ ಮೆರೆವಿರಿ, ಸಮಾಜದಲ್ಲಿ ಗೌರವ, ವ್ಯಾಪಾರದಲ್ಲಿ ಲಾಭ, ಇಷ್ಟಮಿತ್ರರ ಸಹಕಾರ, ಉತ್ತಮ ಆರೋಗ್ಯ, ಕುಟುಂಬ ಸೌಖ್ಯ ಎಲ್ಲವೂ ದೊರೆವುದು ವಿರೋಧಿಗಳು ನಿಮ್ಮನ್ನು ಸುಲಿಗೆಮಾಡಬಯಸಿದರೂ ನಿರಾಶರಾಗುವರು.

—●—

## ಬಟ್ಟೆಯ ನಿಯಂತ್ರಣ

ಈ ಹಿಂದೆ ರಿಜಿಸ್ಟರಾದ ಸಟ್ಟಾ ವ್ಯಾಪಾರಿಗಳು ರು 5000 ಡಿಪಾಜಿಟ್ ಕಟ್ಟಬೇಕು, ಚಿಲ್ಲರೆ ವ್ಯಾಪಾರಿಗಳು 250 ರೂ. ಕಟ್ಟಬೇಕು. ಕಳ್ಳ ಸಂತೆಯ ವ್ಯಾಪಾರ ಹೆಚ್ಚುದರಗಳಿಂದ ಮಾರುವದು ತಿಳಿದು ಬಂದರೆ ಡಿಪಾಜಿಟಿನ ಕೆಲಭಾಗವಾಗಲಿ ಪೂರ್ಣಭಾಗವಾಗಲಿ ಜಪ್ತು ಆಗುವುದು ಆಯಾ ಜಿಲ್ಲೆಗಳಲ್ಲಿ ಲೈಸನ್ಸು ಕೊಡುವಧಿಕಾರ ಕಲೆಕ್ಟರರಿಗುಂಟು, ಮದ್ರಾಸ್ ಸರ್ಕಾರದವರು ಸಹಕಾರೀ ಸಂಸ್ಥೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ನಂತರ ಹಿಂದೆ ವ್ಯಾಪಾರ ಮಾಡಿದವರಿಗೆ ಲೈಸನ್ಸ್ ಕೊಡುವರು.

—

ಗುಲ್ಬರ್ಗಾದ 75 ಹಳ್ಳಿಗಳು ಸ್ವಾತಂತ್ರ್ಯವನ್ನು ಸಾರಿ ಭಾರತಕ್ಕೆ ಸೇರುವವೆಂದು ಘೋಷಿಸಲಾಗಿದೆ.

# ಗ್ರಾಮ ರಾಜ್ಯವೇ ನಿಜವಾದ ಸ್ವರಾಜ್ಯ

## ಜನರ ಅನ್ನ - ಬಟ್ಟೆ - ಮನೆಗಳ ಸಮಸ್ಯೆ ತೀರಿದ ಮೇಲೆಯೇ ಇತರ ವಿಚಾರಗಳು.

ಭಾರತವು ಅತಿ ಪುರಾತನ ದೇಶವಾಗಿದೆಯಲ್ಲದೆ ಇದರ ಸಂಸ್ಕೃತಿಯೂ ಅತಿ ಪ್ರಾಚೀನವಾಗಿದೆ. ಇಲ್ಲಿ ಭೇದದಲ್ಲೂ ಅಭೇದವನ್ನು ಕಾಣಬಹುದು. ಇತರ ದೇಶಗಳಂತೆಯೇ ಇದಕ್ಕೂ ಒಂದು ಅದ್ವಿತೀಯವಾದ ಅಂತರಾತ್ಮವಿದೆ. ಇದನ್ನು ರಕ್ಷಿಸಿ ಉಳಿಸಿಕೊಳ್ಳಲೇಬೇಕು ಕೆಲವು ದಶಕಗಳಿಂದ ಹಳ್ಳಿಗರು ಪಟ್ಟಣಗಳನ್ನು ಸೇರುತ್ತಿದ್ದರೂ ಇತರ ಜನರೆಲ್ಲಾ ಹಳ್ಳಿಗರೇ ಆಗಿದ್ದಾರೆ ಇನ್ನೂ ಹಳ್ಳಿಗರೇ ಆಗಿ ಬಾಳಿ ಬದುಕಬೇಕಾಗಿದೆ. ಏಕೆಂದರೆ ಕೃಷಿಯೇ ಭಾರತದ ಪ್ರಾಮುಖ್ಯ ಜೀವನೋಪಾಯ ನಾವೆಷ್ಟು ಕೈಗಾರಿಕೆಗಳನ್ನು ಬೆಳಕಿಗೆ ತಂದರೂ, ಅದೆಷ್ಟು ಆಧುನಿಕ ಯಂತ್ರ ಸಾಮಗ್ರಿಗಳನ್ನು ತಂದರೂ ಭಾರತವು ಕೃಷಿಪ್ರಧಾನ ದೇಶವಾಗಿಯೇ ಉಳಿಯುವುದು.

ಭಾರತದ ಅಂತರಾತ್ಮವು ಹಳ್ಳಿಗಳಲ್ಲೇ ಇರುವುದರಿಂದ ಎಲ್ಲಾ ಚಟುವಟಿಕೆಗಳ ಕೇಂದ್ರವೆಂದರೆ ಹೊಲ[illegible]ಗೂ ಒಕ್ಕಲಿಗನೆನ್ನಬೇಕು. ಭಾರತದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಿ ಒಕ್ಕಲಿಗನ ಸ್ಥಿತಿಗತಿಗಳನ್ನು ಸುಧಾರಿಸುತ್ತದೇ ಪ್ರಾಮುಖ್ಯವಾದುದು ಭಾರತದ ಯಾವ ವ್ಯವಸ್ಥೆಯ ವಿಚಾರ ತೆಕ್ಕೊಂಡರೂ ನಮ್ಮನ್ನು ಕಳವಳಗೊಳಿಸುತ್ತಿರುವುದು. ರಸ್ತೆ, ನೀರಾವರಿ, ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ, ವೈದ್ಯಕೀಯ ಇವನ್ನೆಲ್ಲಾ ದೂರವಿರಿಸಿ ನಮ್ಮ ಪ್ರಾಂತದಲ್ಲಿರುವ ಕುಟುಂಬಗಳಿಗೆ ಮನೆಯೊದಗಿಸುವ ಸಮಸ್ಯೆಯೊಂದೇ ಸಾವಿರ ಕೋಟಿ ರೂಪಾಯಿಗಳ ವೆಚ್ಚವುಳ್ಳದಾಗಿದೆ. ಈ ಸಂದರ್ಭದಲ್ಲಿ ನಮ್ಮ ಪ್ರಯತ್ನಗಳ ಮುಖ್ಯಗುರಿಯು ಸಾದಾ ಜೀವನವಾರಬೇಕು ಹಳ್ಳಿಗನಿಗೆ ಪಟ್ಟಣದ ಸೌಕರ್ಯಗಳನ್ನು ಒದಗಿಸಿ ಅವನ ಅವಶ್ಯಕತೆಗಳನ್ನು ಹೆಚ್ಚಿಸುವ ಬದಲು ಅವನಿಗೆ ಬೇಕೇಬೇಕಾದ ಅನ್ನ-ಬಟ್ಟೆ ಮನೆ ಇಷ್ಟನ್ನಾದರೂ ಮೊದಲು ಒದಗಿಸೋಣ ದಕ್ಷಿಣ ಭಾರತದ ಹವೆಯು ಬಟ್ಟೆ. ಮನೆಗಳ ವಿಷಯದಲ್ಲಿ ಅವಶ್ಯಕತೆಯನ್ನು ಹೆಚ್ಚಿಸುವಂತಿಲ್ಲದಿರುವುದು ನಮ್ಮ ಭಾಗ್ಯವೆನ್ನಬೇಕು. ಯಾವಾಗಲೂ ನನ್ನನ್ನು ಹಿಂಪ ಸಾಗುವವನೆಂದು ಹೇಳುವುದುಂಟು. ಸಾಧ್ಯವಿದ್ದರೆ ಮುಂದುವರಿಯಲು ನನಗೂ ಸಂತೋಷವಿದೆ. ಮಾತಾಡುವವರಿಗಿಂತಲೂ ಕೈಲಾದಷ್ಟರ ಮಟ್ಟಿಗೆ ಕೃತಿಯಿಂದ ತೋರಿಸಬೇಕೆಂಬುದೇ ನನ್ನ ಇಚ್ಛೆ. ಅನೇಕ ಸುಧಾರಣೆ ಬದಲಾವಣೆಗಳಿಗೆ ಕೈಹಾಕಿ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯರ್ಥಮಾಡುವುದರಿಂದಲೂ ಹಳ್ಳಿಗನ ಅನ್ನ, ಬಟ್ಟೆ ಮನೆ ಎಂದು ಈ 3 ವಿಷಯಗಳನ್ನು ಪೂರೈಸಿಕೊಳ್ಳೋಣ ಹೆಚ್ಚು ಹಣವೂ ಕೆಲಸಗಾರರೂ ದೊರೆತಾಗ ಇತರ ಸಮಸ್ಯೆಗಳನ್ನು ಬಗೆಹರಿಸೋಣ. ಹಾಗೆಂದು ನಮ್ಮ ಆರ್ಥಿಕ ಪರಿಸ್ಥಿತಿಯು ಕಡದಂತೆ ಹಳ್ಳಿಗಳಲ್ಲಿ ದೊರೆಯುವ ಅನುಕೂಲತೆಗಳಿಂದಲೇ ಈ ಸೌಕರ್ಯವನ್ನು ಹಳ್ಳಿಗನಿಗೆ ಒದಗಿಸೋಣ. ಆಗಲೇ ಸ್ವಾವಲಂಬನದ ಪ್ರಶ್ನೆಯೂ ಬರುತ್ತದೆ.

ಸಾರ್ವಜನಿಕ ಸ್ಥಳ, ಹುಲ್ಲುಗಾವಲು ಇತ್ಯಾದಿಗಳನ್ನು ಬಿಟ್ಟು, ದೊರಕುವ ಎಲ್ಲಾ ಜಮೀನುಗಳನ್ನೂ ಬೇಸಾಯಕ್ಕೆ ತರಬೇಕು ಬೇಸಾಯ ಮಾಡುವಾಗ ಜಮೀನುಗಳ ಸಾರವನ್ನು ಉಳಿಸಲೇಬೇಕು. ನೈರ್ಮಲ್ಯ, ಗೊಬ್ಬರ, ಉತ್ತಮ ಜಾನುವಾರು, ಒಳ್ಳೆಯ ಕ್ಷೇತ್ರ, ಪೌಷ್ಟಿಕವಾದ ಆಹಾರ ಸಂಗ್ರಹಣಾನುಕೂಲತೆ, ಸರಿಯಾದ ಮನೆ, ನೀರಾವರಿ, ಜಾನುವಾರು ಅಭಿವೃದ್ಧಿ, ಇವೆಲ್ಲಾ ಹಳ್ಳಿಯ ಆರ್ಥಿಕ ಪರಿಸ್ಥಿತಿಯನ್ನು ಸುತ್ತಿಕೊಂಡಿರುವುವುಗಳಲ್ಲಿ ಯಾವುದಕ್ಕೆ ತೊಂದರೆ ಬಂದರೂ ಇಡೀ ವಾತಾವರಣವೇ ಹಾಳಾಗುವುದು

ಎರಡನೆಯದೇ ಬಟ್ಟೆಯೊದಗಿಸುವ ಸಮಸ್ಯೆ. ಖಾದಿಯೇ ಇದಕ್ಕೆ ಸಿದ್ಧೌಷಧ ಅನ್ನ ಬಟ್ಟೆಗಳನ್ನೊದಗಿಸಿದ ಮೇಲೆ ವಸತಿಯ ಸಮಸ್ಯೆಯನ್ನು ಬಗೆಹರಿಸಬೇಕು. ಅನಂತರ ಶುಚಿತ್ವ, ಆರೋಗ್ಯ, ಗೊಬ್ಬರದ ಹೊಂಡ, ದನದ ಹಟ್ಟಿ, ಉಗ್ರಾಣ ಇತ್ಯಾದಿಗಳ ವಿಚಾರ, ಇವೆಲ್ಲಾ ತೀರಿದ ಮೇಲೆ ಸಾರಿಗೆ, ಮಾರುವ ಕಟ್ಟೆ, ಸಹಕಾರ, ವಿದ್ಯೆ, ವೈದ್ಯಕೀಯ ಇತ್ಯಾದಿಗಳ ವ್ಯವಸ್ಥೆಯಾಗಬೇಕು. ಇವಕ್ಕೆಲ್ಲಾ ಪಂಚಾಯತಿ ಪದ್ಧತಿಯನ್ನೇ ಅನುಸರಿಸಬೇಕಾಗಿದೆ ಹೀಗೆ ಹಳ್ಳಿಗಳು ಸ್ವಯಂಪೂರ್ಣವಾದರೆ ಪಟ್ಟಣಗಳ ಕಡೆಗೆ ಬಾಯ್ಬಿಡುವ ಅವಶ್ಯಕತೆಯೇ ಇರುವುದಿಲ್ಲ ಪಟ್ಟಣಗಳೇ ಹಳ್ಳಿಯ ಕಡೆಗೆ ನೋಡುವ ಸ್ಥಿತಿಯೊದಗೀತು ಅದನ್ನೇ "ಗ್ರಾಮರಾಜ್ಯ" ಎಂದು ಕರೆಯಬಹುದು ಅದು ದೊರಕಿದ ಮೇಲೆಯೇ ನಿಜವಾದ "ಸ್ವರಾಜ್ಯ" ಬಂದಿದೆಯೆಂದು ನಮ್ಮ ದೇಶವು ಹೇಳಿಕೊಳ್ಳಬಹುದು.

—ಮಾನ್ಯ ಶ್ರೀ. ಎಸ್. ಗುರುಪಾದಂ,
ಗ್ರಾಮಾಭಿವೃದ್ಧಿ ಮಂತ್ರಿ

## ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ:—

ಬಳ್ಳಾರಿ ತಾಲೂಕು ಸಿಂದಿಗೆ ಗ್ರಾಮದ ಈಡಿಗ ತಿಮ್ಮಪ್ಪನ ಮಕ್ಕಳು ಶೇಷಪ್ಪ ಮತ್ತು ಡಾಕಪ್ಪ ಈ ಉಭಯರು ಸ್ವಗ್ರಾಮವನ್ನು ಬಿಟ್ಟು ತಮ್ಮ ಕುಟುಂಬಗಳ ಸಂರಕ್ಷಣೆಯ ಭಾರವನ್ನು ವಹಿಸದೆ ಪರಗ್ರಾಮಗಳಿಗೆ ಹೋಗಿರುತ್ತಾರೆ. ಶೇಷಪ್ಪನ ಹೆಂಡತಿ ನರಸಮ್ಮ, ಡಾಕಪ್ಪನ ಹೆಂಡತಿ ಶಿದ್ದಮ್ಮ ಇವರು ತಮ್ಮ ಗಂಡು ಹೆಣ್ಣು ಮಕ್ಕಳನ್ನು ಸಂರಕ್ಷಣೆ ಮಾಡುತ್ತ ಇದ್ದಾರೆ. ಪೂರ್ವಿಕರು ಸಂಪಾದಿಸಿದ ಬಳ್ಳಾರಿ ತಾಲೂಕು ದಮ್ಮೂರು ಗ್ರಾಮದಲ್ಲಿರುವ ಸರ್ವೆ ನಂಬರ್ 213, 9 ಎಕರೆ. 74 ಸೆಂಟು ಇದನ್ನು ಮೇಲ್ಕಂಡ ಶೇಷಪ್ಪ ಮತ್ತು ಡಾಕಪ್ಪ ಇವರು ಯಾವ ವಿಧವಾದ ಅನ್ಯಾಕ್ರಾಂತ ಮಾಡಲು ಪ್ರಯತ್ನಪಟ್ಟಲ್ಲಿ ಯಾರೂ ಅವುಗಳನ್ನು ತೆಗೆದುಕೊಳ್ಳಬಾರದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ
20-8-48

ಮೈನರ್ ರಾಮಚಂದ್ರಪ್ಪ
ನಿಗೇವಾನಿ ತಾಯಿ
ನರಸಮ್ಮ ಮೈನರ್ ಕಾಳಪ್ಪ
ನಿಗೇವಾನಿ ತಾಯಿ ಶಿದ್ದಮ್ಮ

## ನೌಕರಿ ದೊರಕಿಸಲು ಸಹಾಯ.

ಜುಲೈ 48ನೆಯ ತಿಂಗಳಲ್ಲಿ ಡಿಸ್ಟ್ರಿಕ್ಟ್ ಎಂಪ್ಲಾಯ್ಮೆಂಟ್ ಆಫೀಸಿನಲ್ಲಿ 184 ಜನ [illegible]ಣ 10 ವಿದ್ಯಾವಂತರ, ಕಲಾಭಿಜ್ಞರ, 1 ಸ್ತ್ರೀಯರ ಅರ್ಜಿಗಳು ಬಂದು ರಿಜಿಸ್ಟರಾದವು ಹಿಂದೆ ಸೈನ್ಯ ಖಾತೆಯಲ್ಲಿ ದುಡಿದವರೂ ಹೊಸಬರೂ ಸೇರಿ 51 ಜನರಿಗೆ ಉದ್ಯೋಗ ಕೊಡಿಸಲಾಯಿತು. ಇದೇ ತಿಂಗಳಲ್ಲಿ ಈ ಹಿಂದೆ ಸಂರಕ್ಷಣ ಖಾತೆಯಲ್ಲಿ ದುಡಿದ 4 ಜನರಿಗೆ ಜನರಲ್ ಮೆಕ್ಯಾನಿಕ್ಸ್ ಆಗಿ ಬಳ್ಳಾರಿ ಶಿಕ್ಷಣ ಖಾತೆಯಲ್ಲಿ ಉಚಿತ ಊಟ, ವಸತಿ ಏರ್ಪಡಿಸಿ ಮೇಲೆ ಖರ್ಚಿಗೆ ತಿಂಗಳಿಗೆ 15 ಕೊಡಲಾಯಿತು. ಪ್ರಾರಂಭದಿಂದ (1—1—47) 1638 ಅರ್ಜಿಗಳು ಬಂದು 774 ಜನರಿಗೆ ನೌಕರಿ ದೊರೆಯಿತು.

ಹೈದರಾಬಾದ ಸಮಸ್ಯೆಯನ್ನು ಯುಕ್ತ ರಾಷ್ಟ್ರ ಸಂಘಕ್ಕೆ ಒಯ್ಯಲಾಗುವದೆಂದೂ ಹಿಂದೂಸ್ತಾನದೊಡನೆ ಶಾಶ್ವತವಾದ ಸೌಹಾರ್ದ ಒಪ್ಪಂದಮಾಡಿಕೊಳ್ಳಲು ಅವರ ಸಹಾಯ ತೆಗೆದುಕೊಳ್ಳಲಾಗುವದೆಂದೂ ಹೈದರಾಬಾದ ಪ್ರಧಾನರು ಪಂ. ನೆಹರೂರವರಿಗೆ ಹೀಗೆ ಬರೆದಿರುವರೆಂದು ನಿಜಾಮು [illegible]